
ಡಿ.ಎಸ್. ನಾಗಭೂಷಣ

ಕನ್ನಡ-ಕರ್ನಾಟಕ ಸಂಕಥನಗಳು



ವಿಸ್ಮಯ : ೨೫

ಕನ್ನಡ–ಕರ್ನಾಟಕ

ಸಂಕಥನಗಳು

ಡಿ.ಎಸ್. ನಾಗಭೂಷಣ

ವಿಸ್ಮಯ ಪ್ರಕಾಶನ
'ಮೌನ', ೩೬೬, ನವಿಲು ರಸ್ತೆ, ಎ–ಬಿ ಬ್ಲಾಕ್
ಕುವೆಂಪುನಗರ, ಮೈಸೂರು–೫೭೦೦೨೩

KANNADA-KARNATAKA SANKATHANAGALU

(Discourses Kannada-Karnataka)

by

D.S.NAGHABHUSHANA

HIG - 5 'Nudi' Kallahalli Extn, Vinoba Nagara,

SHIMOGA-577204, Tel: 9449242284

Publised by : **VISMAYA PRAKASHANA**

'Mouna', 366, Navilu road, A-B black, Kuvempunagar

Mysore-570023. Mob: 9008798406

e-mail: vismayapakashana@gmail.com

DTP : VISMAYA PRAKASHANA

COVER DESIGN : MANJUNATHA LATHA

First edition : 2009 Pages : viii + 216 = 224

ಮೊದಲ ಮುದ್ರಣ: ೨೦೦೯ ಪುಟಗಳು: viii + ೨೧೬ = ೨೨೪

Price : Rs. 160/- ಬೆಲೆ : ರೂ. ೧೬೦/-

ಪ್ರಕಾಶಕರು :

ವಿಸ್ಮಯ ಪ್ರಕಾಶನ

VISMAYA PRAKASHANA

'ಮೌನ', 366, ನವಿಲು ರಸ್ತೆ, ಎ & ಬಿ.ಬ್ಲಾಕ್

ಕುವೆಂಪುನಗರ, ಮೈಸೂರು - 23

0821 - 2543244

ಮುದ್ರಣ

ವಿಶ್ವಾಸ್ ಪ್ರಿಂಟ್ಸ್

VISHWAS PRINTS

23, 3ನೇ ಅಡ್ಡರಸ್ತೆ, ನಂಜಾಂಬ ಅಗ್ರಹಾರ

ಚಾಮರಾಜಪೇಟೆ, ಬೆಂಗಳೂರು - 18

ದೂರವಾಣಿ : 26604835

ಅರ್ಪಣೆ :

ಸಾರ್ಥಕ ಬದುಕಿನ ಎಪ್ಪತ್ತೈದನೇ ವರ್ಷಕ್ಕೆ ಕಾಲಿಡುತ್ತಿರುವ
ಕವಿ, ನಾಟಕಕಾರ, ವಿಚಾರವಾದಿ
ಗೆಳೆಯ **ಸತ್ಯನಾರಾಯಣ ರಾವ್ ಅಣತಿ**
ಅವರಿಗೆ

ಪ್ರೀತಿ ಪೂರ್ವಕವಾಗಿ

ಲೇಖಕನ ಮಾತುಗಳು

ಜಾಗತೀಕರಣದ ಈ ದಿನಗಳಲ್ಲಿ ಸ್ಥಳೀಯ ರಾಜಕಾರಣ ಹಾಗೂ ಸಂಸ್ಕೃತಿಗಳೆರಡೂ ಹಿಂದೆಂದೂ ಅನುಭವಿಸದಿದ್ದಂತಹ ಒತ್ತಡಗಳಿಗೆ ಸಿಕ್ಕಿವೆ. (ಈಚಿನ ಜಾಗತಿಕ ಆರ್ಥಿಕ ಹಿಂಜರಿತದಿಂದಾಗಿ ಈ ಒತ್ತಡಗಳು ಸ್ವಲ್ಪ ಹಿನ್ನೆಲೆಗೆ ಸರಿದಂತೆ ತೋರುತ್ತಿದೆಯಾದರೂ) ಈ ಸಂದರ್ಭದಲ್ಲಿ ಕನ್ನಡ-ಕರ್ನಾಟಕಕ್ಕೆ ಸಂಬಂಧಿಸಿದಂತೆ ನಾನು ಬರೆದ ಲೇಖನಗಳು ಇಲ್ಲಿ ಒಟ್ಟಿಗೆ ಸಂಗ್ರಹವಾಗಿ ಪ್ರಕಟವಾಗುತ್ತಿವೆ. ಇವುಗಳಲ್ಲಿ ಹಲವು ಈಗಾಗಲೇ ನನ್ನ ಈ ಹಿಂದಿನ ಎರಡು ಮೂರು ಪುಸ್ತಕಗಳಲ್ಲಿ(ಸಮಾಜವಾದಿ ಸಂಕಥನಗಳ ಸಂಪುಟಗಳಲ್ಲಿ) ಪ್ರಕಟವಾಗಿವೆ. ಇವುಗಳ ಜೊತೆ ಈಗ ಇಲ್ಲಿ ಇತ್ತೀಚೆಗೆ ಬರೆದ ಇನ್ನೂ ಕೆಲವು ಲೇಖನಗಳು ಸೇರಿಕೊಂಡು, ಕನ್ನಡ-ಕರ್ನಾಟಕ ಸದ್ಯಕ್ಕೆ ಎದುರಿಸುತ್ತಿರುವ ಸಮಸ್ಯೆ, ಸವಾಲು, ದ್ವಂದ್ವ ಹಾಗೂ ಬಿಕ್ಕಟ್ಟುಗಳ ಮೇಲೆ ವಿಶೇಷ ಬೆಳಕು ಚೆಲ್ಲುವ ಪ್ರಯತ್ನ ಮಾಡಿವೆ. ಇದು ಸಾಧ್ಯವಾಗುತ್ತಿರುವುದು ಈ ಪುಸ್ತಕವನ್ನು ಪ್ರಕಟಿಸುತ್ತಿರುವ ಹಾಲತಿ ಸೋಮಶೇಖರ್ ಅವರ ಒತ್ತಾಯ, ಆಸಕ್ತಿ ಮತ್ತು ಪ್ರೀತಿಗಳಿಂದ.

ಇಲ್ಲಿನ ಬಹಳಷ್ಟು ಲೇಖನಗಳನ್ನು ನಾನು ಬರೆದದ್ದು, ಈಗ್ಗೆ ಎರಡು-ಮೂರು ವರ್ಷಗಳ ಹಿಂದೆ ಕರ್ನಾಟಕ ಸರ್ಕಾರ ಹಲವು ನೆಲೆಗಳ ಒತ್ತಡಕ್ಕೆ ಸಿಕ್ಕಿ ನಮ್ಮ ಎಲ್ಲ ಶಾಲೆಗಳಲ್ಲಿ ನಮ್ಮ ಮಕ್ಕಳಿಗೆ ಒಂದನೇ ತರಗತಿಯಿಂದಲೇ ಇಂಗ್ಲಿಷ್ ಕಲಿಸುವ ಆಜ್ಞೆ ಹೊರಡಿಸಿದ ಸಂದರ್ಭದಲ್ಲಿ. ಸುಮ್ಮನೆ ನೋಡಿದರೆ ಸರ್ಕಾರದ ಈ ಕ್ರಮ ಸಾಮಾಜಿಕ ಹಿತದ ಸರಳ ತೀರ್ಮಾನದಂತೆ ಕಂಡರೂ, ಅದರ ಹಿಂದಿರುವ ದೀರ್ಘಕಾಲಿಕ ರಾಜಕಾರಣವನ್ನು ಅರಿಯಬಲ್ಲವರಿಗೆ, ಅದು ನಮ್ಮ ಭಾಷೆ, ಸಂಸ್ಕೃತಿ ಮತ್ತು ರಾಜಕಾರಣಗಳ ಮೇಲೆ ಎಂತಹ ಘಾತುಕ ಪರಿಣಾಮ ಬೀರಬಲ್ಲುದು ಎಂಬುದು ಗೊತ್ತಾದೀತು. ಹಾಗಾಗಿಯೇ ಇಲ್ಲಿನ ಹೆಚ್ಚಿನ ಲೇಖನಗಳಲ್ಲಿ ಈ ಬಗ್ಗೆ ಪ್ರಸ್ತಾಪ, ಟೀಕೆ ಪದೇ ಪದೇ ಬರುತ್ತದೆ. ಈ ಲೇಖನಗಳನ್ನು ಬೇರೆ ಬೇರೆ ವೇದಿಕೆಗಳಿಗಾಗಿ, ಬೇರೆ ಬೇರೆ ನೆಲೆಯ ಚರ್ಚೆಗಳಿಗಾಗಿ ಬರೆದುವಾದುದರಿಂದ, ಇದು ಸಹಜವೂ ಆಗಿದೆ ಎಂಬುದನ್ನು ಓದುಗರು ಗಮನಿಸಿ ಮನ್ನಿಸುತ್ತಾರೆಂದೂ ಭಾವಿಸುತ್ತೇನೆ.

ಈಗಾಗಲೇ ಸೂಚಿಸಿದಂತೆ, ಜಾಗತೀಕರಣವು ನಮ್ಮ ಭಾಷೆಯ ಮೇಲೆ ಒತ್ತಡ ಹೇರುವ ಮೂಲಕ ನಮ್ಮ ರಾಜಕಾರಣವನ್ನೂ ದಿಗ್ದರ್ಶಿಸಲು ಯತ್ನಿಸುತ್ತಿರುವ ಹಿನ್ನೆಲೆಯಲ್ಲಿ, ಇಲ್ಲಿನ ಲೇಖನಗಳಲ್ಲಿ ಕರ್ನಾಟಕದ ಇತಿಹಾಸ, ಸಂಸ್ಕೃತಿ ಮತ್ತು ರಾಜಕಾರಣಗಳನ್ನೂ, ಅವುಗಳ ಸ್ಫೂರ್ತಿ ಕೇಂದ್ರಗಳನ್ನೂ, ಪ್ರತೀಕಗಳನ್ನೂ ಚರ್ಚಿಸುವುದು ಅನಿವಾರ್ಯವಾಗಿದೆ. ಹಾಗಾಗಿಯೇ ಇವು ಕನ್ನಡ-ಕರ್ನಾಟಕ ಸಂಕಥನಗಳು. ಇವನ್ನು ಪರಸ್ಪರ ಸಂಬಂಧದಲ್ಲಿ ಒಂದು ಒಟ್ಟು ಮೊತ್ತವಾಗಿ ಓದಿದರೇನೇ, ಕನ್ನಡ-ಕರ್ನಾಟಕಗಳ ಬಗ್ಗೆ ಈ ಲೇಖನಗಳಲ್ಲಿ ನಾನು

ವ್ಯಕ್ತಪಡಿಸಿರುವ ಆತಂಕಗಳು ಎಷ್ಟು ನಿಜವಾದವು ಎಂಬುದು ಅರ್ಥವಾದೀತು ಎಂದೂ ಇಲ್ಲಿ ಹೇಳಬಯಸುವೆ. ಏಕೆಂದರೆ, ಕನ್ನಡ ಒಂದು ಭಾಷೆಯಾಗಿ, ಸಂಸ್ಕೃತಿಯಾಗಿ ಮತ್ತು ರಾಜಕಾರಣವಾಗಿ ಅಂತಹ ಯಾವ ಆತಂಕವನ್ನೂ ಎದುರಿಸುತ್ತಿಲ್ಲ;ಬದಲಿಗೆ ಹೊಸ ಕಾಲ-ಸಂದರ್ಭಕ್ಕೆ ಹೊಂದಿಕೊಳ್ಳುವ ಪ್ರಯತ್ನವನ್ನಷ್ಟೇ ಮಾಡುತ್ತಿದೆ ಎಂದು ಹೇಳುವವರ ಸಂಖ್ಯೆಯೇನೂ ಇಂದು ಕಡಿಮೆ ಇಲ್ಲ. ಹಾಗೆ ನೋಡಿದರೆ ಕನ್ನಡ ತನ್ನ ಇತಿಹಾಸದಲ್ಲಿ ಹೊಸ ಸಂದರ್ಭವನ್ನು ಎದುರಿಸುತ್ತಿರುವುದು ಇದೇ ಮೊದಲ ಸಲವೇನಲ್ಲ. ಆದರೆ ಹೊಸ ಸಂದರ್ಭಕ್ಕೆ ಹೊಂದಿಕೊಳ್ಳುವುದೆಂದರೆ, ತನ್ನ ಮೂಲ ಜಾಯಮಾನವನ್ನೇ, ಸಾಂಸ್ಕೃತಿಕ ಚಹರೆಗಳನ್ನೇ ಕಳೆದುಕೊಳ್ಳುವುದು ಎಂದಾಗಬಾರದಲ್ಲ? ಇದರಿಂದಾಗಿ, ನಮ್ಮ ಭಾಷಾ ಮಾತೃಕೆಗಳ ಮೂಲಕ ನಾವು ಕಟ್ಟಿಕೊಂಡು ಬಂದಿರುವ ನಮ್ಮ ಬದುಕು, ತನ್ನ ಲಂಗರುಗಳನ್ನೇ ಕಳೆದುಕೊಂಡು ಬೇವಾರ್ಸಿಯಾಗಬಾರದಲ್ಲ? ಈ ವಿಶಿಷ್ಟ ಎಚ್ಚರದೊಂದಿಗೆ ಓದುಗರು ಈ ಲೇಖನಗಳನ್ನು ಪರಾಂಬರಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

ಕನ್ನಡ ಎಂದರೆ ಅದೊಂದು ವಿಶಿಷ್ಟ ಬದುಕು. ಇಂತಹ ಬದುಕಿನ ವಿಶಿಷ್ಟತೆಯನ್ನು ತಮ್ಮ ಪಾರದರ್ಶಕ ನಡೆ-ನುಡಿಗಳ ಮೂಲಕ ಕಳೆದ ಇಪ್ಪತ್ತೈದು ವರ್ಷಗಳಿಂದ ನನಗೆ ಪರಿಚಯ ಮಾಡಿಕೊಡುತ್ತಿರುವ ಗೆಳೆಯ ಬಿ.ಪಿ.ವೀರೇಂದ್ರ ಕುಮಾರ್ ಈ ಪುಸ್ತಕಕ್ಕೆ ಪ್ರೀತಿಯಿಂದ ಬೆನ್ನುಡಿಯ ಮಾತುಗಳನ್ನು ಬರೆದುಕೊಟ್ಟಿದ್ದಾರೆ. ಅವರಿಗೆ ನನ್ನ ಕೃತಜ್ಞತೆಗಳು. ಹಾಗೇ ಈ ಪುಸ್ತಕವನ್ನು, ನನ್ನ ಇನ್ನೋರ್ವ ನಿಡುಗಾಲದ ಗೆಳೆಯ(ಹಿರಿಯ ಗೆಳೆಯ ಎನ್ನಲು ಅವರು ಬಿಡುವುದಿಲ್ಲವಾದ್ದರಿಂದ ಹೀಗೆ ಕರೆಯುತ್ತಿರುವೆ!), ಕವಿ ಹಾಗೂ ನಾಟಕಕಾರ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ನಾವೆಲ್ಲ ಬಹು ಹಿಂದೆ ಒಟ್ಟಾಗಿ ಗೌರವಿಸಿ ಹಂಚಿಕೊಂಡ ನಂಬಿಕೆಗಳಂತೆಯೇ ಈಗಲೂ ಬದುಕಲು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತಿರುವ ಸತ್ಯನಾರಾಯಣ ರಾವ್ ಅಣತಿ ಅವರು, ತಮ್ಮ ಬದುಕಿನ ಎಪ್ಪತ್ತೈದನೇ ವರ್ಷವನ್ನು ಪ್ರವೇಶಿಸುತ್ತಿರುವ ಶುಭ ಸಂದರ್ಭದಲ್ಲಿ ಅವರಿಗೆ ಅರ್ಪಿಸುತ್ತಿದ್ದೇನೆ. ಅವರಿಗೆ ಮತ್ತು ಅವರ ಶ್ರೀಮತಿ ಪ್ರಭಾವತಿಯವರಿಗೆ, ನನ್ನ ಮತ್ತು ನನ್ನೆಲ್ಲ ಉಪದ್ವ್ಯಾಪಗಳೊಂದಿಗೆ ಕಳೆದ ಇಪ್ಪತ್ತೈದು ವರ್ಷಗಳಿಂದ ನನ್ನನ್ನು ಯಶಸ್ವಿಯಾಗಿ ಸಹಿಸಿಕೊಂಡು ಬರುತ್ತಿರುವ ನನ್ನ ಪತ್ನಿ ಸವಿತಾಳ ಪರವಾದ ಶುಭಾಶಯಗಳು.

ಇನ್ನು ಈಗಾಗಾಲೇ ಸೂಚಿಸಿದಂತೆ, ಈ ಪುಸ್ತಕಕ್ಕೆ ಕಾರಣರಾದವರು ಮೈಸೂರಿನ ವಿಸ್ಮಯ ಪ್ರಕಾಶನದ ಮಾಲೀಕರಾದ ಶ್ರೀಯುತರಾದ ಹಾಲತಿ ಲೋಕೇಶ್ ಮತ್ತು ಹಾಲತಿ ಸೋಮಶೇಖರ್. ಅವರಿಗೆ, ಅರ್ಥಪೂರ್ಣ ಮುಖಪುಟ ವಿನ್ಯಾಸ ಮಾಡಿ ಈ ಪುಸ್ತಕದ ಚೆಂದ ಹೆಚ್ಚಿಸಿರುವ ಮಂಜುನಾಥ ಲತಾ ಅವರಿಗೆ, ಪುಸ್ತಕದ ಹಿಂಬದಿಯಲ್ಲಿರುವ ನನ್ನ ಭಾವಚಿತ್ರ ತೆಗೆದ ಶಿವಮೊಗ್ಗದ ರಾಜು ಅವರಿಗೆ ಮತ್ತು ಪುಸ್ತಕವನ್ನು ಅಂದವಾಗಿ ಮುದ್ರಿಸಿಕೊಟ್ಟಿರುವ ಬೆಂಗಳೂರಿನ ವಿಶ್ವಾಸ್ ಪ್ರಿಂಟ್ಸ್‌ನವರಿಗೆ ಈ ಸಂದರ್ಭದಲ್ಲಿ ನನ್ನ ಕೃತಜ್ಞತೆಗಳು ಸಲ್ಲುತ್ತವೆ.

ಶಿವಮೊಗ್ಗ

ಡಿ.ಎಸ್.ನಾಗಭೂಷಣ

೭.೧೦.೨೦೦೯

ಪರಿವಿಡಿ

೧. ಆ ಗಣರಾಜ್ಯ – ಈ ಕರ್ನಾಟಕ

– ೧ –

ಕರ್ನಾಟಕ ರಾಜ್ಯವು ತನ್ನ ಉದಯದ ಸುವರ್ಣೋತ್ಸವವನ್ನು ಆಚರಿಸಿಕೊಳ್ಳುತ್ತಿರುವಾಗಲೇ, ಯಾವ ಆಶೋತ್ತರಗಳೊಂದಿಗೆ ಈ ರಾಜ್ಯೋದಯವಾಯಿತೋ ಆ ಆಶೋತ್ತರಗಳೇ ಪರಿಹಾಸ್ಯಕ್ಕೊಳಗಾಗುವಂತಹ ವಿದ್ಯಮಾನಗಳು ನಡೆದುಹೋಗುತ್ತಿವೆ. ಆದರೂ ರಾಜ್ಯದ ಜನ–ಅದು ಕನ್ನಡದ ಜನವೂ ಹೌದು–ಏನೂ ಆಗದಂತೆ, ಈ ಉತ್ಸವ–ಸಮ್ಮೇಳನ–ಜಾತ್ರೆ–ಹಬ್ಬಗಳ ಸಂಭ್ರಮದಲ್ಲಿ ಮುಳುಗಿದ್ದಾರೆ. ಪ್ರತಿಭಟನೆಯನ್ನೇ ವೃತ್ತಿಮಾಡಿಕೊಂಡು ಅದನ್ನು ಒಂದು ಅತಿಲಾಭ ತರುವಂತಹ ಉದ್ಯಮವನ್ನಾಗಿ ಪರಿವರ್ತಿಸಿಕೊಂಡಿರುವ ಒಂದೆರಡು ಸಣ್ಣ ಗುಂಪುಗಳು ಹಾಗೂ ಹಳೆಯ ಕಾಲದ ನೆನಪುಗಳ ಭಾರ ಹೊತ್ತ ನಾಲ್ಕಾರು ವಯೋವೃದ್ಧರ ಹೊರತಾಗಿ, ಮಿಕ್ಕವರಾರೂ ಈ ವಿದ್ಯಮಾನಗಳ ಬಗ್ಗೆ ತಲೆ ಕೆಡಿಸಿಕೊಂಡಂತೆ ಕಾಣುತ್ತಿಲ್ಲ. ಕಳೆದ ಐವತ್ತು ವರ್ಷಗಳಿಂದ ಭಾರತ ಜನನಿಯ ತನುಜಾತೆಯಾದ ಕರ್ನಾಟಕ ಮಾತೆಗೆ 'ಜಯಹೇ' ಹೇಳುತ್ತಿರುವ ಸಮಯದಲ್ಲೇ, ಈ ಭಾರತವೆಂಬುದು ಒಂದು ಗಣರಾಜ್ಯವಾಗಿ ವಿಕಾಸಗೊಳ್ಳುತ್ತಿರುವ ರೀತಿ ನೀತಿ ಮತ್ತು ಅದರಿಂದಾಗಿ ಅದರ ತನುಜಾತೆಯಾದ ಕರ್ನಾಟಕಕ್ಕೆ 'ಜಯಹೇ' ಹೇಳುವುದರ ಅರ್ಥವಂತಿಕೆ ಕಡಿಮೆಯಾಗುತ್ತಾ, ಕ್ರಮೇಣ ಯಾಂತ್ರಿಕವಾಗುತ್ತಿರುವುದನ್ನು; ಈ ಕೋಟ್ಯಾಂತರ ರೂಪಾಯಿಗಳ ವೆಚ್ಚದ ಸುವರ್ಣ ಕರ್ನಾಟಕದ ಉತ್ಸವಗಳ ಸಂಭ್ರಮ ಸಡಗರಗಳಲ್ಲಿ ಗಮನಿಸುವ ವ್ಯವಧಾನವೂ ಕನ್ನಡಿಗರಾದ ನಮಗಿಲ್ಲದಾಗಿದೆ.

ಇತ್ತೀಚೆಗಷ್ಟೇ ಶಿವಮೊಗ್ಗದಲ್ಲಿ 'ಯಶಸ್ವಿ'ಯಾಗಿ ನಡೆದ (ಅಂದರೆ ಊಟ ಮತ್ತು ವಸತಿ ವ್ಯವಸ್ಥೆ ಚೆನ್ನಾಗಿತ್ತು ಎಂದಷ್ಟೇ ಅರ್ಥ!) ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ನಾಡಗೀತೆಯನ್ನು ಪ್ರಸ್ತುತಪಡಿಸಿದ ರೀತಿ ಕರ್ನಾಟಕಕ್ಕೆ ಏನಾಗುತ್ತಿದೆ ಎಂಬುದನ್ನು ಸಾಂಕೇತಿಕವಾಗಿ ಸೂಚಿಸುವಂತಿತ್ತು. ಗಾಯನ ಪ್ರತಿಭೆಯ ಹೊರತಾಗಿ ಮಿಕ್ಕೆಲ್ಲ ಪ್ರತಿಭೆಗಳನ್ನೂ ಪರಿಗಣಿಸಿ ಆಯ್ಕೆ ಮಾಡಿದಂತಿದ್ದ ಆ ತಂಡ ನಾಡಗೀತೆಯನ್ನು ಎಷ್ಟು ಶೃತಿಗೆಟ್ಟು, ಸ್ವರಗೆಟ್ಟು ಅಸಮಂಜಸವಾಗಿ ಹಾಡಿತೆಂದರೆ, ಇಂದು ಕರ್ನಾಟಕದ ಆತ್ಮಕ್ಕೆ ಏನಾಗಿದೆ ಮತ್ತು ಅದಕ್ಕೆ ಹತ್ತಿರುವ ಸೋಂಕುಗಳು ಯಾವುವು ಎಂಬುದನ್ನು ಅದು ಪರೋಕ್ಷವಾಗಿ ಪರಿಚಯ ಮಾಡಿಕೊಳ್ಳುವ ಪ್ರಯತ್ನದಂತಿತ್ತು. ಯಾವ ಘನೋದ್ದೇಶಗಳನ್ನು ಇಟ್ಟುಕೊಂಡು ನಮ್ಮ ಹಿರಿಯರು ಕನ್ನಡ ಭಾಷೆಯನ್ನಾಡುವ ಜನರನ್ನು ಭೌಗೋಳಿಕವಾಗಿ ಒಂದುಗೂಡಿಸಿ ಭಾರತದ ಒಂದು ಸಂವಿಧಾನಾತ್ಮಕ ಘಟಕವನ್ನಾಗಿ ರೂಪಿಸಿದರೋ, ಆ ಘನೋದ್ದೇಶಗಳೆಲ್ಲ ಇಂದು

ಅಪ್ರಸ್ತುತವಾಗಿ ಕಾಣುವಷ್ಟು ಕನ್ನಡಿಗರು ತಮ್ಮ ನೆಲ, ಭಾಷೆ, ಸಂಸ್ಕೃತಿಗಳನ್ನು ಕುರಿತಂತೆ ಮೈಮರೆವಿಗೆ ಒಳಗಾಗಿದ್ದಾರೆ; ತಮ್ಮ ಬದುಕಿನ ಗುರಿ ಹಾಗೂ ಮಾಧ್ಯಮಗಳನ್ನು ಬದಲಿಸಿಕೊಂಡಿದ್ದಾರೆ.

ಇವರಲ್ಲಿ ಕೆಲವರು ಜಾತಿ–ವರ್ಗ, ಧರ್ಮ–ಹಣದ ರಾಜಕಾರಣಗಳ ಹುದಲಲ್ಲಿ ಸಿಕ್ಕಿಹಾಕಿಕೊಂಡು, ತಮಗೆ ಕನ್ನಡ ಮೂಲವಾದ ಒಂದು ಸಾಮಾನ್ಯ ಅಸ್ಮಿತೆಯಿದೆ; ಅದರ ಆಧಾರದ ಮೇಲೆ ರಾಜಕಾರಣ ಮಾಡಿದರೆ ಮಾತ್ರ ನಾಡಿಗೂ ತಮಗೂ ಒಳ್ಳೆಯದಾಗಬಲ್ಲದು ಎಂಬ ವಾರಸುದಾರಿಕೆಯನ್ನೇ ಮರೆತಿದ್ದಾರೆ. ಇನ್ನು ಕೆಲವರು ಜಾಗತೀಕರಣದ ಈ ದಿನಗಳಲ್ಲಿ ಎಲ್ಲ ಪ್ರತ್ಯೇಕತೆಗಳ ಗೋಡೆಗಳೂ ಬಿದ್ದು ಹೋಗುತ್ತಾ ಜಗತ್ತೇ ಒಂದಾಗುತ್ತಿರುವಾಗ, ಕನ್ನಡ–ಕರ್ನಾಟಕ ಎಂದು ಮಾತಾಡುವುದೇ ಅಸಂಗತವೆಂದು ತಮ್ಮ 'ಜಾಗತಿಕ ಪ್ರಜ್ಞೆ'ಯನ್ನು ಮರೆಯುತ್ತಾ 'ಪ್ರಜ್ಞಾವಲಸೆ'ಗೆ ಸಿಕ್ಕಿ ಕೊಚ್ಚಿ ಹೋಗುತ್ತಿದ್ದಾರೆ. ಆದರೆ ಇವರಿಗೆ, ಹಳೆಯ ಗೋಡೆಗಳು ಬೀಳುತ್ತಿದ್ದಂತೆ ಹೊಸ ಗೋಡೆಗಳು ಏಳುತ್ತಿವೆ ಹಾಗೂ ಈ ಹೊಸ ಗೋಡೆಗಳು ಆ ಹಳೆಯ ಗೋಡೆಗಳಂತೆ ನಮ್ಮ ಅಳತೆಗಳ ಪ್ರಕಾರ ಏಳುತ್ತಿಲ್ಲ; ಬದಲಾಗಿ ಇನ್ನಾರದೋ ಲೆಕ್ಕಾಚಾರದ ಪ್ರಕಾರ ಸದಾ ಅಳತೆಗಳನ್ನು ಬದಲಿಸಿಕೊಳ್ಳುವ ಗೋಡೆಗಳಾಗಿ, ನಮ್ಮನ್ನು 'ಮಾಯಾ ಪ್ರಪಂಚ'ವೊಂದರ ಪ್ರಜೆಗಳನ್ನಾಗಿ ಮಾಡುತ್ತಿವೆ ಎಂಬುದರ ಪರಿವೆ ಇದ್ದಂತಿಲ್ಲ.

ಸದ್ಯದ ಇಂತಹ ಮೈಮರೆವಿನಲ್ಲಿ, ಕಳೆದ ಐವತ್ತು ವರ್ಷಗಳಲ್ಲಿ ಭಾರತದ ಗಣರಾಜ್ಯ ಕ್ರಮೇಣ ತನ್ನ ಒಕ್ಕೂಟ ಸ್ವರೂಪವನ್ನು ಕಳೆದುಕೊಳ್ಳುತ್ತಾ ಏಕಘಟಕ ರಾಷ್ಟ್ರದಂತೆ ಒಡಮೂಡಿ, ಇಂದು ಕರ್ನಾಟಕವೆಂಬುದನ್ನು ಕೇವಲ ತನ್ನ ಒಂದು ಉಪ ಆಡಳಿತ ಘಟಕದ ಮಟ್ಟಕ್ಕೆ ಇಳಿಸುತ್ತಿರುವುದನ್ನು ಯಾರೂ ಗಮನಿಸದೇ ಹೋಗಿರುವುದು ಕನ್ನಡಿಗರ ನಿಜವಾದ ದುರಂತವಾಗಿದೆ. ಹಾಗಾಗಿಯೇ ೫೦ ವರ್ಷಗಳ ಸಂಭ್ರಮಾಚರಣೆಯಲ್ಲಿರುವ ಕರ್ನಾಟಕದ ಜನತೆ, ಈ ಆಚರಣೆಗೆ ನಿಜವಾದ ಕಾರಣಗಳಿವೆಯೇ ಎಂಬುದನ್ನು ಪರಿಶೀಲಿಸಿಕೊಳ್ಳುವ ವಿವೇಚನಾ ಶಕ್ತಿಯನ್ನೇ ಕಳೆದುಕೊಂಡಂತಿದೆ: ಈ ಸಂಭ್ರಮಾಚರಣೆಗಾಗಿ ಎಗ್ಗಿಲ್ಲದೇ ಹರಿದುಬರುತ್ತಿರುವ ಹಣದ ಹೊಳೆಯಲ್ಲಿ ಕುಣಿದು ಕುಪ್ಪಳಿಸುವ, ಹಾಡಿ ನಲಿಯುವ, ತಿಂದು ತೇಗುವ ಹಾಗೂ ಪರಸ್ಪರ ಹಾಡಿ ಹೊಗಳಿಕೊಳ್ಳುವ ಒಂದು ಉದ್ಯಮವೇ ಸೃಷ್ಟಿಯಾಗಿ, ಈ ರಾಜಕೀಯ ದೊಂಬರಾಟವನ್ನು ಅಮಾಯಕ ಜನಸ್ತೋಮ ಸುಮ್ಮನೆ ನಿಂತು ನೋಡುತ್ತಿದೆ. ವಿಶ್ವ ಕನ್ನಡ ಸಮ್ಮೇಳನಕ್ಕೆ ೧೫ಕೋಟಿ ರೂಪಾಯಿಗಳ ವೆಚ್ಚವಂತೆ. ಇತ್ತ ಕನ್ನಡಕ್ಕೆ, ಕರ್ನಾಟಕವೆಂಬ ಕನ್ನಡ ರಾಜ್ಯದ ಸಾಂವಿಧಾನಿಕ ಅಧಿಪತಿಯೆನಿಸಿರುವ ರಾಜ್ಯಪಾಲರ ಕಾರ್ಯಾಲಯದಲ್ಲೇ ಅರ್ಧಚಂದ್ರವಾಗುತ್ತಿದೆ. ದೆಹಲಿಯಲ್ಲಿ ಕೂತ ಅನಾಮಿಕ ಅಧಿಕಾರಿಯೊಬ್ಬ ಕರ್ನಾಟಕದಲ್ಲಿ ಓಡಾಡುವ ರೈಲುಗಳಲ್ಲಿನ ಕನ್ನಡದ ಸ್ಥಾನಮಾನವನ್ನು ನಿರ್ಧರಿಸಿ ಫರ್ಮಾನು ಹೊರಡಿಸುತ್ತಾನೆ. ನಮ್ಮದೇ ರಾಜಕೀಯ ಪಕ್ಷಗಳು ಅನ್ಯ ರಾಜ್ಯಗಳ ಹಾಗೂ ಅನ್ಯಭಾಷಿಕ ಉದ್ಯಮಿಗಳನ್ನು ನಮ್ಮ ರಾಜ್ಯದ ಹಿತ ಕಾಯಲು ರಾಜ್ಯಸಭೆಗೆ ಕಳಿಸಿಕೊಡುತ್ತವೆ.

ಕರ್ನಾಟಕದಲ್ಲೇ ಕನ್ನಡದಿಂದ ಅನ್ನ ಹುಟ್ಟುವುದಿಲ್ಲ ಎಂಬ ವಾತಾವರಣ ನಿರ್ಮಿಸಲು ಅವಕಾಶ ಮಾಡಿಕೊಡುತ್ತಿರುವ ನಮ್ಮದೇ ಸರ್ಕಾರ, 'ವ್ಯಾವಹಾರಿಕ ನೀತಿ'ಯಾಗಿ ಕನ್ನಡವನ್ನು ಎರಡನೇ ದರ್ಜೆಯ ಭಾಷೆಯಾಗಿ ಪರಿವರ್ತಿಸಲು ನಿರ್ಧರಿಸುತ್ತಿದೆ. ಕರ್ನಾಟಕದಲ್ಲಿನ

ಉದ್ಯಮಗಳಲ್ಲಿ ಕರ್ನಾಟಕದವರಿಗೆ ಉದ್ಯೋಗದಲ್ಲಿ ಆದ್ಯತೆ ಒದಗಿಸುವ ಪ್ರಯತ್ನವಾಗಿರುವ ಸರೋಜಿನಿ ಮಹಿಷಿ ವರದಿ ಜಾರಿಗೆ ಇವೆಯೆಂದು ಹೇಳಲಾದ ಕಾನೂನು ತೊಡಕುಗಳನ್ನು ಪರಿಹರಿಸಿಕೊಳ್ಳಲು ಹತ್ತಾರು ವರ್ಷಗಳಾದರೂ ಕರ್ನಾಟಕ ಸರ್ಕಾರಕ್ಕೆ ಸಾಧ್ಯವಾಗುವುದಿಲ್ಲ. ಹಾಗೇ ಪ್ರಾಥಮಿಕ ಶಿಕ್ಷಣ ಮಾತೃಭಾಷೆಯಲ್ಲಿ ಎಂಬ ಸರ್ವೋಚ್ಚ ನ್ಯಾಯಾಲಯದ ತೀರ್ಪಿಗೆ ಖಾಸಗಿ ಶಿಕ್ಷಣ ಸಂಸ್ಥೆಗಳವರು ೧೩ ವರ್ಷಗಳಿಂದ ರಾಜ್ಯ ಉಚ್ಚ ನ್ಯಾಯಾಲಯದಿಂದ ಪಡೆದ ತಡೆಯಾಜ್ಞೆಯನ್ನು (ಇದು ಕರ್ನಾಟಕದಲ್ಲಿ ಮಾತ್ರ ಸಾಧ್ಯವೇನೋ) ತೆರವುಗೊಳಿಸುವ ತುರ್ತು ಇತ್ತೀಚಿನವರೆಗೆ–ಒಂದನೇ ತರಗತಿಯಿಂದಲೇ ಶಾಲೆಗಳಲ್ಲಿ ಇಂಗ್ಲಿಷ್ ಕಲಿಸುವ ತನ್ನ ಆಜ್ಞೆಗೆ ವಿರೋಧ ವ್ಯಕ್ತವಾಗುವವರೆಗೆ–ಕನ್ನಡಿಗರ ಸರ್ಕಾರಕ್ಕೆ ಉಂಟಾಗಲಿಲ್ಲ! ಆದರೇನು, ಒಂದಷ್ಟು ಬಾಡಿಗೆ ಬಂಟರೂ, ವಯೋವೃದ್ಧರೂ ಕೂಗಾಡುವುದನ್ನು ಬಿಟ್ಟರೆ, ಕನ್ನಡದ ಜನ ಏನೂ ಆಗದಂತೆ ಭಾರತಾಂಬೆಯ ಮಡಿಲ ಮುಗ್ಧ ಮಕ್ಕಳಂತೆ ನಿರಾಳವಾಗಿಯೇ ಇರಬಲ್ಲವರಾಗಿದ್ದಾರೆ!

ಹಾಗೆ ನೋಡಿದರೆ ಕನ್ನಡಿಗರೇನೂ ಉದಾಸಿಗಳಲ್ಲ. ನೀರಿಗೆ ಸಂಬಂಧಿಸಿದಂತೆಯೋ, ಗಡಿಗೆ ಸಂಬಂಧಿಸಿದಂತೆಯೋ, ಉದ್ಯೋಗಕ್ಕೆ ಸಂಬಂಧಿಸಿದಂತೆಯೋ ಅನ್ಯಾಯವಾಗುತ್ತಿದೆ ಎಂದು ರಾಜಕೀಯ ಮಾಡಲು ಸದಾ ವಿಷಯ ಹುಡುಕುತ್ತಿರುವ ಪುಢಾರಿಗಳೋ ಅಥವಾ ಈಚಿನ ದಿನಗಳಲ್ಲಿ ವರದಿ ಮಾಡುವುದಕ್ಕಿಂತ ಸುದ್ದಿ ನಿರ್ಮಿಸುವುದರಲ್ಲೇ ನಿರತರಾಗಿರುವ ಮಾಧ್ಯಮಗಳೋ ಹುಯಿಲೆಬ್ಬಿಸಿದಾಗ, ಕನ್ನಡದ ಜನ ವೀರಾವೇಶದಿಂದ ಎದ್ದೇಳುತ್ತಾರೆ; ಬೀದಿಗಿಳಿಯುತ್ತಾರೆ, ಘೋಷಣೆ ಕೂಗುತ್ತಾರೆ. ಕೇಂದ್ರದ ಮಲತಾಯಿ ಧೋರಣೆಯನ್ನು ಖಂಡಿಸಿ ಮೆರವಣಿಗೆ ನಡೆಸಿ, ಮನವಿ ಕೊಟ್ಟು ನಾಯಕಮಣಿಗಳಿಂದ ಸಂತೈಸಿಕೊಂಡು ಮತ್ತೆ ಭಾರತಾಂಬೆಯ ಮಡಿಲು ಸೇರುತ್ತಾರೆ! ಹೀಗಾಗಿಯೇ ಇಂದು ದೆಹಲಿಯಲ್ಲಿ ಕರ್ನಾಟಕವು ಅಭಿವೃದ್ಧಿ ಹಾಗೂ ಭ್ರಷ್ಟಾಚಾರಗಳ ವಿಷಯದಲ್ಲಿ ದಕ್ಷಿಣದ ಬಿಹಾರವೆಂದೂ, ಕನ್ನಡಿಗರನ್ನು 'ತಲೆಹೋಕರಾದ ಜಗಳಗಂಟ'ರೆಂದೂ ಗುರುತಿಸಿಲಾಗುತ್ತಿದ್ದರೆ, ಅದಕ್ಕೆ ಕರ್ನಾಟಕದ ರಾಜಕಾರಣಿಗಳೇ, ಕರ್ನಾಟಕದ ಜನರೇ ಕಾರಣರಾಗಿದ್ದಾರೆ. ಇದಕ್ಕೆ ಮತ್ತೆ ಮುಖ್ಯ ಕಾರಣವೆಂದರೆ ರಾಜಕಾರಣಿಗಳೂ ಸೇರಿದಂತೆ ಕನ್ನಡದ ಜನ, ಕನ್ನಡತ್ವ–ಕರ್ನಾಟಕತ್ವಗಳ ಮೂಲಸೆಲೆಗಳನ್ನೇ ಮರೆತು ಬದುಕು ನಡೆಸುತ್ತಿರುವುದೇ ಆಗಿದೆ. ಇದರಿಂದಾಗಿಯೇ ನೆರೆಹೊರೆಯ ದ್ರಾವಿಡ ರಾಜ್ಯಗಳ ರಾಜಕಾರಣಕ್ಕೆ ಹೋಲಿಸಿದರೆ, ಕರ್ನಾಟಕದ ಜನರ ರಾಜಕಾರಣ ಕರ್ನಾಟಕದ ರಾಜಕಾರಣವಾಗಿರದೇ; ಭಾರತದ ರಾಜಕಾರಣದ ಮತ್ತು ಅದರಿಂದಾಗಿ ಈಗ ಜಾಗತಿಕ ರಾಜಕಾರಣದ ವಿಧೇಯ ರಾಜಕಾರಣವಾಗಿ ಅವನತಿಗೊಂಡಿದೆ. ಇದರಿಂದಾಗಿ ಕನ್ನಡನಾಡು–ನುಡಿ–ಸಂಸ್ಕೃತಿಗಳ ಮತ್ತು ಆ ಮೂಲಕ ಒಟ್ಟಾರೆ ಕರ್ನಾಟಕದ ಜನತೆಯ ಲೌಕಿಕಾಭ್ಯುದಯದ ಅವನತಿಯ ಹೆಬ್ಬಾಗಿಲು ತೆರೆದಂತಾಗಿದೆ.

ತಮಿಳರಿಗೆ, ತಮ್ಮ ಸಂಸ್ಕೃತಿಯನ್ನು ಕಾದಿಟ್ಟುಕೊಳ್ಳಲು ಕೈಗೊಂಡ ಯಾವ ಕ್ರಮವೂ ಸಂಕುಚಿತತೆ ಎನ್ನಿಸಲಿಲ್ಲ. ಬದಲಿಗೆ ತನ್ನ ಕುಲದ ಬೇರನ್ನು ಭದ್ರಮಾಡಿಕೊಂಡು ಬೆಳೆಯಲು ಅವಕಾಶ ಕಲ್ಪಿಸಿಕೊಳ್ಳುವುದನ್ನು, ಅದು ಬುಡಕಟ್ಟಿನ ವಿವೇಕವಾಗಿ ರೂಢಿಸಿಕೊಂಡಿತು. ಆ ವಿವೇಕವೇ ಇಂದಿಗೂ ತಮಿಳು ಭಾಷಾ ಸಮುದಾಯವನ್ನು–ಆಧುನಿಕತೆಯ ಪ್ರಭಾವದಿಂದಾಗಿ

ಅದು ಎಷ್ಟೇ ಸಾಮಾಜಿಕ ಬಿರುಕುಗಳನ್ನು ಕಂಡಿದ್ದರೂ–ಅಖಿಲ ಭಾರತ ರಾಷ್ಟ್ರೀಯತೆಯಲ್ಲಿ ಲೀನಗೊಳಿಸದೆ ಒಂದು ಪುರಾತನ ರಾಷ್ಟ್ರೀಯತೆಯ ಪ್ರತಿನಿಧಿಯಾಗಿ ತನ್ನ ಅಸ್ಮಿತೆಯನ್ನು ಉಳಿಸಿಕೊಳ್ಳಲು ಕಾರಣವಾಗಿರುವುದು. ಹಾಗಾಗಿಯೇ ರೈಲ್ವೇ ಇಲಾಖೆ ತಮಿಳರ ಕೈಯಲ್ಲಿಲ್ಲದಿದ್ದರೂ, ಅದರ ಅಧಿಕಾರಿಗೆ ಹಿಂದಿ–ಇಂಗ್ಲಿಷ್ ಹೊರತಾಗಿ ಇನ್ನೆಲ್ಲ ಭಾರತಿಯ ಭಾಷೆಗಳನ್ನು ಅಖಿಲಭಾರತ ಮಟ್ಟದಲ್ಲಿ ತನ್ನ ಇಲಾಖೆಯಲ್ಲಿ ಒರೆಸಿ ಹಾಕುವ ಆಜ್ಞೆ ಹೊರಡಿಸುವ ಸಮಯದಲ್ಲಿ ತಮಿಳಿಗೆ ಮಾತ್ರ ವಿನಾಯ್ತಿ ಕೊಡಬೇಕಾದ ಎಚ್ಚರ ಮೂಡಿತು! ಇಂತಹ ಎಚ್ಚರವನ್ನು ಅಖಿಲಭಾರತ ಮಟ್ಟದಲ್ಲಿ ಮೂಡಿಸಲಾಗದ ಕನ್ನಡ ರಾಷ್ಟ್ರೀಯತೆ ತನ್ನ ಅಸ್ಮಿತೆಯನ್ನು ಪೂರಾ ಭಾರತದ ರಾಷ್ಟ್ರೀಯತೆಯಲ್ಲಿ ಲೀನಗೊಳಿಸಿಕೊಳ್ಳುವಲ್ಲಿ ತನ್ನ ಧನ್ಯತೆಯನ್ನು ಕಂಡುಕೊಳ್ಳುತ್ತಾ ಬಂದಿದೆ. ಹಾಗಾಗಿಯೇ ಕರ್ನಾಟಕದ ರಾಜ್ಯಪಾಲರು ತಮ್ಮ ಕಾರ್ಯಾಲಯದ ಸಿಬ್ಬಂದಿಗೆ ಕನ್ನಡ ಪರೀಕ್ಷೆಯಿಂದ ವಿನಾಯಿತಿ ಕೊಡಬೇಕೆಂದು ಸೂಚಿಸುವ ಸ್ವಾತಂತ್ರ್ಯ ವಹಿಸುತ್ತಾರೆ; ಅದನ್ನು ಕನ್ನಡದ ಮುಖ್ಯಮಂತ್ರಿಗಳು 'ಅದು ರಾಜ್ಯಪಾಲರ ಸೂಚನೆ, ನಾವೇನೂ ಮಾಡುವಂತಿಲ್ಲ' ಎಂಬ ಅಸಹಾಯಕತೆ ವ್ಯಕ್ತಪಡಿಸುವ ದುಃಸ್ಥಿತಿಗೆ ಈಡಾಗುತ್ತಾರೆ! ಕರ್ನಾಟಕದಲ್ಲಿ ಓಡಾಡುವ ರೈಲುಗಳಲ್ಲಿ ಹಾಗೂ ಕರ್ನಾಟಕದ ರಾಜ್ಯಪಾಲರ ಕಾರ್ಯಾಲಯದಲ್ಲಿ ಕನ್ನಡದ ಸ್ಥಾನಮಾನಗಳನ್ನು ತೀರ್ಮಾನಿಸುವ ಅಧಿಕಾರ ಕನ್ನಡ ಜನತೆಯ ಪ್ರತಿನಿಧಿಗಳ ಕೈಯಲ್ಲಿಲ್ಲ ಎಂದರೆ, ಭಾರತದ ಒಕ್ಕೂಟವೆಂಬುದು ಒಂದು ಪ್ರಜಾಪ್ರಭುತ್ವವಾದಿ ರಾಷ್ಟ್ರವೋ ಅಥವಾ ಹಳೆಯ ವಸಾಹತುಶಾಹಿ ಪಳೆಯುಳಿಕೆಗಳ ಮೇಲೆ ಕಟ್ಟಿದ ಒಂದು ಆಧುನಿಕ ಸಾಮ್ರಾಜ್ಯವೋ ಎಂದು ಆಶ್ಚರ್ಯಪಡುವಷ್ಟು; ನಮ್ಮ ಸಂವಿಧಾನದ ಆಶಯಗಳು ಬುಡಮೇಲುಗೊಂಡಿವೆ.

–೨–

ಭಾರತ ಒಂದು ಗಣರಾಜ್ಯವಾಗಿ ಉದಯವಾದಾಗ, ಅದು ಮುಂದೆ ಜನತೆಯ ಆಶೋತ್ತರಗಳ ಪ್ರತಿಬಿಂಬವಾಗಿ ಭಾಷಾವಾರು ವಿಂಗಡಣೆಯ ಆಧಾರದ ಮೇಲೆ ರೂಪಿತವಾದ ರಾಜ್ಯಗಳೆಲ್ಲ ಸೇರಿದ ಒಂದು ಒಕ್ಕೂಟವಾಗಿ, ಭಾರತವೆಂಬ ರಾಷ್ಟ್ರವಾಗಿ ಒಡಮೂಡುತ್ತದೆ ಎಂಬ ಕಲ್ಪನೆ ಇತ್ತು. ಹಾಗೇ ನಮ್ಮ ಸಂವಿಧಾನ ಕರ್ತೃಗಳು ಕೂಡಾ ಭಾರತವನ್ನು ರಾಜ್ಯಗಳ ಒಕ್ಕೂಟವೆಂದೇ ಘೋಷಿಸಿದರು. ಅಲ್ಲದೆ, ಸಂವಿಧಾನದಲ್ಲೇ ಕೇಂದ್ರ ಮತ್ತು ರಾಜ್ಯಗಳ ಹಕ್ಕು, ಅಧಿಕಾರ–ಕರ್ತವ್ಯಗಳನ್ನು ಕೇಂದ್ರ, ರಾಜ್ಯ ಹಾಗೂ ಸಹಚರಿ (concurrent) ಎಂಬ ಮೂರು ಪಟ್ಟಿಗಳಾಗಿ ವಿಂಗಡಿಸಿ, ಕೇಂದ್ರ–ರಾಜ್ಯಗಳ ಸಂಬಂಧವನ್ನು ನಿರೂಪಿಸಿದರು. ವಿಶೇಷವಾಗಿ ರಾಜ್ಯಗಳ ಹಿತ ಕಾಯಲೆಂದೇ ಲೋಕಸಭೆಯ ಜೊತೆಗೆ ರಾಜ್ಯಸಭೆಯ ರಚನೆಗೂ ಸಂವಿಧಾನದಲ್ಲಿ ಅವಕಾಶ ಕಲ್ಪಿಸಲಾಯಿತು. ಹಾಗಾಗಿಯೇ ನಮ್ಮ ಸಂವಿಧಾನ ಕರ್ತೃಗಳು ಸಂಬಂಧಪಟ್ಟ ರಾಜ್ಯಗಳ ವಿಧಾನಸಭೆಗಳಿಂದ ರಾಜ್ಯಸಭೆಗೆ ಆಯ್ಕೆಯಾಗುವ ಅಭ್ಯರ್ಥಿಗಳು ಆಯಾ ರಾಜ್ಯಗಳ ನಿವಾಸಿಗಳೇ ಆಗಿರಬೇಕೆಂಬ ನಿಬಂಧನೆಯನ್ನೂ ಹಾಕಿದ್ದರು. ಆಯಾ ರಾಜ್ಯಗಳಲ್ಲಿ ಹುಟ್ಟಿ ಬೆಳೆದವರಿಗೆ ಆಯಾ ರಾಜ್ಯದ ಜನ–ನಾಡು–ನುಡಿ–ಸಂಸ್ಕೃತಿ–ಆಡಳಿತ–ಅಭ್ಯುದಯಗಳ ಬಗೆಗೆ ಅಭಿಮಾನಾಸ್ಪದವಾದ ಕಲ್ಪನೆ ಇರುತ್ತದೆ ಎಂಬುದು ಈ ನಿಬಂಧನೆಯ ಹಿಂದಿನ ತಿಳುವಳಿಕೆ.

ಆದರೆ ಕಳೆದ ೫೫ ವರ್ಷಗಳಲ್ಲಿ ರಾಷ್ಟ್ರ ರಾಜಕಾರಣವು ಸಂವಿಧಾನದ ಆಶಯಕ್ಕೆ ವಿರುದ್ಧವಾಗಿ ಎಷ್ಟು ಕೇಂದ್ರೀಕೃತಗೊಳ್ಳುತ್ತಾ ಹೋಗಿದೆ ಎಂದರೆ, ರಾಜ್ಯಗಳ ಸ್ವಾಯತ್ತತೆಯನ್ನು ದುರ್ಬಲಗೊಳಿಸುತ್ತಾ ಹೋದ ಅನೇಕ ಸಂವಿಧಾನ ತಿದ್ದುಪಡಿಗಳಿಗೆ ಕಿರೀಟವಿಟ್ಟಂತೆ ಮೂರು ವರ್ಷಗಳ ಹಿಂದೆ ರಾಷ್ಟ್ರೀಯ ಪ್ರಜಾಸತ್ತಾತ್ಮಕ ರಂಗ (ಎನ್.ಡಿ.ಎ) ಸರ್ಕಾರ ಸಂವಿಧಾನಕ್ಕೆ ತಿದ್ದುಪಡಿ ತಂದು, ರಾಜ್ಯಸಭಾ ಚುನಾವಣೆಗಿದ್ದ ರಾಜ್ಯ ನಿವಾಸಿ ನಿಬಂಧನೆಯನ್ನೇ ತೆಗೆದುಹಾಕಿತು! ಈ ಮುನ್ನ ಈಗಿನ ಪ್ರಧಾನಮಂತ್ರಿಯೂ ಸೇರಿದಂತೆ, ವಿವಿಧ ಪಕ್ಷಗಳಿಗೆ ಸೇರಿದ ಅನೇಕರು ಸುಳ್ಳು ಅಥವಾ ಹೊಸದಾಗಿ ಸೃಷ್ಟಿಸಿಕೊಂಡ ಮನೆ ವಿಳಾಸಗಳನ್ನು ನೀಡಿ ತಮ್ಮದಲ್ಲದ ರಾಜ್ಯಗಳಿಂದ ರಾಜ್ಯಸಭೆಗೆ ಆಯ್ಕೆಯಾಗಿದ್ದರು. ಅಂದರೆ ಪಕ್ಷಭೇದವಿಲ್ಲದೇ ನಮ್ಮ ರಾಜಕಾರಣದ–ನಮ್ಮ ರಾಜ್ಯದ ರಾಜಕಾರಣವೂ ಸೇರಿದಂತೆ–ರೀತಿ ನೀತಿಗಳೇ ಸಂವಿಧಾನದ ಆಶಯಕ್ಕೆ ವಿರುದ್ಧವಾಗಿ ರಾಜ್ಯಗಳ ಸ್ವಾಯತ್ತತೆಯನ್ನೂ ನಾಶ ಮಾಡಹೊರಟಿವೆ. ಇದಕ್ಕೆ ಮುಖ್ಯ ಕಾರಣ, ಈಗ ಪಕ್ಷಗಳಿಗಿಂತ ನಾಯಕರು ಮುಖ್ಯವಾಗಿ; ಅವರ ವರ್ಚಸ್ಸು ಹಾಗೂ ಅವರ ಹಣವಿಲ್ಲದೇ ಚುನಾವಣೆಗಳನ್ನು ಎದುರಿಸಲಾಗದಷ್ಟು ನಮ್ಮ ರಾಜಕಾರಣವು ಉದ್ಯಮೀಕರಣಗೊಂಡಿರುವುದು. ಕರ್ನಾಟಕದಲ್ಲಂತೂ ಈ ಪ್ರವೃತ್ತಿ ಎಲ್ಲ ರಾಜಕೀಯ ಮರ್ಯಾದೆಯನ್ನೂ ಮೀರಿ ಬೆಳೆದಿದೆ. ಇಂದು ರಾಜ್ಯಸಭೆಯಲ್ಲಿ ನಮ್ಮ ರಾಜ್ಯವನ್ನು ಪ್ರತಿನಿಧಿಸುತ್ತಿರುವ ಹನ್ನೆರಡು ಜನರಲ್ಲಿ ಮೂವ್ವರು ಹೊರ ರಾಜ್ಯದವರಾಗಿದ್ದಾರೆ. ಅನ್ಯಭಾಷಿಕರಾದ ಈ ಮೂವ್ವರೂ ಈಗ ಆಡಳಿತ ನಡೆಸುತ್ತಿರುವ ಪಕ್ಷಗಳ ಬೆಂಬಲದಿಂದಲೇ ಆಯ್ಕೆಯಾಗಿ ಹೋದವರು. ಇವರಲ್ಲೊಬ್ಬರು ಈವರೆಗೆ ರಾಜ್ಯದ ಹಿತ ಕಾಯ್ದ ಯಾವುದೇ ದಾಖಲೆಗಳಿಲ್ಲ. ಇನ್ನು ಉಳಿದವರು ತಮ್ಮ ಪಕ್ಷಗಳ ಪ್ರತಿನಿಧಿಗಳಂತೆ ವರ್ತಿಸುತ್ತಿದ್ದಾರೆಯೇ ಹೊರತು, ರಾಜ್ಯದ ಪ್ರತಿನಿಧಿಗಳಂತಲ್ಲ. ಇವರು ರಾಜ್ಯದ ಹಿತಕ್ಕೆ ಧಕ್ಕೆಯಾದಾಗ ರಾಜ್ಯಸಭೆಯಲ್ಲಿ ಕರ್ನಾಟಕದ ಗುಂಪಿನಂತೆ ಒಟ್ಟಾಗಿ ಎದ್ದು ನಿಂತು ಮಾತನಾಡಿದ ಅಥವಾ ರಾಜಕಾರಣ ಮಾಡಿದ ಉದಾಹರಣೆ, ಇಲ್ಲವೇ ಇಲ್ಲವೆನಿಸುವಷ್ಟು ಅಪರೂಪ.

ಈಚೆಗೆ–ಕಳೆದ ವರ್ಷ–ರಾಜ್ಯದಿಂದ ನಡೆದ ರಾಜ್ಯಸಭಾ ಚುನಾವಣೆಯನ್ನು ಗಮನಿಸಿದರೆ ಕನ್ನಡಿಗರು ತಮ್ಮ ರಾಜಕಾರಣವನ್ನು ಎಷ್ಟು ಆತ್ಮಘಾತುಕವಾಗಿ ನಡೆಸಿಕೊಂಡು ಹೋಗುತ್ತಾರೆ ಎಂಬುದು ಗೊತ್ತಾಗುತ್ತದೆ. (ಈ ಹಿಂದಿನ) ಸಮ್ಮಿಶ್ರ ಸರ್ಕಾರದ ಪಾಲುದಾರ ಪಕ್ಷಗಳು, ಯಾರೂ ಹೆಸರೇ ಕೇಳಿರದ ಅನ್ಯಭಾಷಿಕ ಉದ್ಯಮಿಯೊಬ್ಬನನ್ನು ಬೆಂಬಲಿಸಿ ನಾಮಪತ್ರ ಸಲ್ಲಿಸಿದಾಗ, ಕನ್ನಡದ ಪ್ರತಿಭಾವಂತ ಹಿರಿಯ ಸಾಹಿತಿಯೊಬ್ಬರು ಕನ್ನಡ–ಕರ್ನಾಟಕದ ಆತ್ಮಗೌರವದ ಆಧಾರದ ಮೇಲೆ (ಅವರಿಗೆ ರಾಜಕೀಯ ಆಕಾಂಕ್ಷೆಯೂ ಇದ್ದಿರಬಹುದು, ಅದು ಅಪರಾಧವೇನಲ್ಲ!) ಕೆಲವು ಪಕ್ಷೇತರ ಶಾಸಕರ ಬೆಂಬಲದೊಂದಿಗೆ ತಮ್ಮ ನಾಮಪತ್ರ ಸಲ್ಲಿಸಿದರು. ನಮ್ಮ ಮುಖ್ಯಮಂತ್ರಿಗಳು ಕನಲಿ ಕೆಂಡವಾಗಿ 'ಯಾರೀತ? ನಮ್ಮನ್ನು ಒಂದು ಮಾತು ಕೇಳದೆ ನಾಮಪತ್ರ ಸಲ್ಲಿಸುವುದೆಂದರೇನು?' ಎಂದು ತಮ್ಮ ಸಾಂಸ್ಕೃತಿಕ ಅಮಾಯಕತ್ವವನ್ನು, ರಾಜಕೀಯ ಅಪ್ರಬುದ್ಧತೆಯನ್ನೂ ಪ್ರದರ್ಶಿಸಿದರು. ಇನ್ನು 'ಕನ್ನಡ ಕನ್ನಡ' ಎಂದು ಕೂಗಾಡುವ ಸಾಹಿತಿ–ಸಂಶೋಧಕ–ಹೋರಾಟಗರರ ಗುಂಪೊಂದು ಮುಖ್ಯಮಂತ್ರಿಯವರ ಕನಲಿಕೆಗೆ ಬೆಂಬಲ ಸೂಚಿಸುವಂತೆ, ಆ ಹಿರಿಯ ಪ್ರತಿಭಾವಂತ ಸಾಹಿತಿಯನ್ನು 'ಕನ್ನಡ ದ್ರೋಹಿ' ಎಂದು ಕರೆಯಿತು. ಈ ಗುಂಪಿನ ಅನೇಕರು ಆ

ಅನ್ಯಭಾಷಿಕ ಅನಾಮಿಕ ಉದ್ಯಮಿಯನ್ನು, ಆತ ಕರ್ನಾಟಕದ ನಿವಾಸಿ ಎಂದು ಸಮರ್ಥಿಸಿ, ಪರೋಕ್ಷವಾಗಿ ಆತನನ್ನು ಬೆಂಬಲಿಸಿದರು. ಇಲ್ಲಿ ಎದ್ದು ಕಂಡದ್ದು, ಇವರೆಲ್ಲರಿಗೆ ಕನ್ನಡದ ರಾಜಕಾರಣಕ್ಕಿಂತ ತಮ್ಮ ವೈಯಕ್ತಿಕ ಹಿತಾಸಕ್ತಿಯ ಅಧಿಕಾರ ರಾಜಕಾರಣವೇ ದೊಡ್ಡದಾಗಿದ್ದು. ಇದರಿಂದಾಗಿಯೇ, ಕನ್ನಡ ರಾಜಕಾರಣದ ಅಭ್ಯರ್ಥಿಯಾಗಿದ್ದ ಹಿರಿಯ ಸಾಹಿತಿ–ಅವರ ವೈಯಕ್ತಿಕ ದೌರ್ಬಲ್ಯಗಳು ಏನೇ ಇದ್ದರೂ–ಆ ಅನ್ಯಭಾಷಿಕ ಉದ್ಯಮಿಗಿಂತ ಹೆಚ್ಚು ಸಮರ್ಥವಾಗಿ ಪ್ರಾಮಾಣಿಕವಾಗಿ ಹಾಗೂ ಜವಾಬ್ದಾರಿಯಿಂದ ಕರ್ನಾಟಕ–ಕನ್ನಡವನ್ನು ರಾಷ್ಟ್ರ ರಾಜಕಾರಣದಲ್ಲಿ ಪ್ರತಿನಿಧಿಸಬಲ್ಲವನಾಗಿದ್ದರು ಎಂಬುದೇ ಅವರ ಅರಿವಿಗೆ ಬಾರದೇ ಹೋಯಿತು. ಹೀಗೆ ಸೃಷ್ಟಿಸಲಾದ ಗೊಂದಲದಲ್ಲಿ ಕನ್ನಡದ ಸಾಮಾನ್ಯ ಜನ, ಕನ್ನಡಿಗರಾದರೇನು–ಅನ್ಯರಾದರೇನು, ಅವರು ನಮ್ಮ ಹಿತ ಕಾಯುವುದು ಅಷ್ಟರಲ್ಲೇ ಇದೆ ಎಂದು ಸಿನಿಕರಾಗಿ ಸುಮ್ಮನಾದರು. ಇನ್ನೂ ಕೆಲವು ಕನ್ನಡ ಬುದ್ಧಿಜೀವಿಗಳಂತೂ ಈ ನೆಲದ ಮೇಲೇ ಇಲ್ಲದವರಂತೆ, ಸ್ವ ಮತ್ತು ಅನ್ಯವೆಂಬುದೇ ಸಂಕುಚಿತ ಪರಿಕಲ್ಪನೆಗಳು ಎಂದೆನ್ನುತ್ತಾ ತಮ್ಮ ಅನುಭಾವಿಕ ಎತ್ತರಗಳನ್ನು ಮೆರೆದರು!

ಇದು ಕನ್ನಡದ ಅಸ್ಮಿತೆಯ ಬಿಕ್ಕಟ್ಟಿನ ಮೂಲಗಳನ್ನು ಗುರುತಿಸಬಹುದಾದ ಒಂದು 'ಪರೀಕ್ಷಾ ಪ್ರಕರಣ'ದಂತೆ ಕಂಡರೆ ಆಶ್ಚರ್ಯವಿಲ್ಲ. ಕನ್ನಡಿಗರೇಕೆ ಹೀಗೆ ಕುಲಾಭಿಮಾನವಿಲ್ಲದವರಂತೆ ವರ್ತಿಸುತ್ತಿದ್ದಾರೆ? ಇವರು ಕುಲಾಭಿಮಾನದಲ್ಲಿ ನಂಬಿಕೆ ಇಲ್ಲದ ಜಾಗತಿಕ ಪ್ರಜಾವರ್ಗವಾಗಿ ಪರಿವರ್ತಿತವಾಗಿದ್ದಾರೆಂದರೇನೂ ಅಲ್ಲ. ತಮಿಳು ಕುಲಾಭಿಮಾನ ಕೆರಳಿದೊಡನೆ ತಡವಿಲ್ಲದೆ ಇವರ ಕುಲಾಭಿಮಾನವೂ ಕೆರಳಬಲ್ಲಷ್ಟು ಅದು ತೀವ್ರವಾಗಿದೆ! ಇತ್ತೀಚಿನ ಉದಾಹರಣೆ ಎಂದರೆ, ಈಗ ದೊಡ್ಡ ವಿವಾದವಾಗಿ ಮಾರ್ಪಾಡಾಗಿರುವ ಶಾಸ್ತ್ರೀಯ ಭಾಷಾ ಸ್ಥಾನಮಾನಕ್ಕಾಗಿ ನಡೆದಿರುವ ಚಳವಳಿ. ತಮಿಳರು ತಮ್ಮ ಭಾಷೆಗೆ ಆ ಸ್ಥಾನಮಾನವನ್ನು ದೊರಕಿಸಿಕೊಂಡಾಗಲಷ್ಟೇ ಎಚ್ಚೆತ್ತುಗೊಂಡ ಕನ್ನಡ ಕುಲವೀರರು, ಅವಮಾನಿತರಂತೆ ಈಗ ತಮ್ಮ ಭಾಷೆಗೂ ಆ ಸ್ಥಾನಮಾನ ಬೇಕು ಎಂದು ಅನೇಕ 'ಒಂದು ದಿನದ ಆಮರಣಾಂತ ಉಪವಾಸ'ಗಳನ್ನು ಕೈಗೆತ್ತಿಕೊಳ್ಳುತ್ತಿದ್ದಾರೆ; ಧರಣಿಗಳನ್ನು ನಡೆಸುತ್ತಾ, ಮೆರವಣಿಗೆ ತೆಗೆಯುತ್ತ ಕೇಂದ್ರ ಸರ್ಕಾರದ ಮೇಲೆ ಗುಟುರು ಹಾಕುತ್ತಿದ್ದಾರೆ! ಆದರೆ ತಮಿಳರು ತಮ್ಮ ಭಾಷೆಗೆ ಈ 'ಪ್ರತಿಷ್ಠಿತ' ಸ್ಥಾನಮಾನ ಗಳಿಸಿಕೊಳ್ಳಲು ನಡೆಸಿದ ಅಧ್ಯಯನ, ಪಟ್ಟ ಪರಿಶ್ರಮ, ಪ್ರದರ್ಶಿಸಿದ ಐಕ್ಯತೆ ಹಾಗೂ ಪಕ್ಷ ಭೇದವಿಲ್ಲದೆ ಸಂಘಟಿಸಿಕೊಂಡ ರಾಜಕೀಯ ಇಚ್ಛಾಶಕ್ತಿ ಎಂತಹುದು ಮತ್ತು ಇವೆಲ್ಲ ಯಾವ ಮೂಲದಿಂದ ಹೊಮ್ಮಿದವು ಎಂಬುದರ ಕಡೆಗೆ ಮಾತ್ರ ಇವರ ಗಮನ ಹೋದಂತಿಲ್ಲ. ತಮಿಳರಿಗೆ ಹೋಲಿಸಿದಂತೆ ಕೀಳರಿಮೆಯಿಂದ ನರಳುವಂತೆ ತೋರುವ ಕನ್ನಡ ಚಳವಳಿಕಾರರು, ತಮಿಳರಿಂದ ಕಲಿಯಬೇಕಾದುದು ಅಮೂಲ್ಯವೂ ಅಪಾರವೂ ಆಗಿದೆ.

ಅವರು ತಮಿಳಿಗೆ ಶಾಸ್ತ್ರೀಯ ಭಾಷಾ ಸ್ಥಾನಮಾನವನ್ನು ಒತ್ತಾಯಿಸುವ ಮುನ್ನ ಮಾಡಿಕೊಂಡ ಪೂರ್ವಸಿದ್ಧತೆಗಳ ಪರಿಯನ್ನೇ ನೋಡಿ. ನಮ್ಮ ಇತಿಹಾಸ ತಜ್ಞರೊಬ್ಬರು ಇತ್ತೀಚೆಗೆ ಸ್ವಲ್ಪ ಉತ್ಪ್ರೇಕ್ಷಿಸಿ ಹೇಳಿದಂತೆ, ಪ್ರತಿವರ್ಷ ತಮಿಳರ ಇತಿಹಾಸ ಹತ್ತು ವರ್ಷ ಹೆಚ್ಚುತ್ತಿದೆ! ಅದಕ್ಕಾಗಿ ಅವರು ಅಗತ್ಯ ಪೂರಕ ಮಾಹಿತಿ ಹಾಗೂ ಆಕರಗಳನ್ನು ಸಂಗ್ರಹಿಸುತ್ತಿದ್ದಾರೆ. ಹಾಗೇ ಅವರ ಹತ್ತು ವರ್ಷದ ಇತಿಹಾಸಕ್ಕೆ ಸಾವಿರ ಪುಟಗಳಷ್ಟು ದಾಖಲೆ ಒದಗಿಸುವ

ಕೆಲಸ ಮಾಡುತ್ತಿದ್ದಾರೆ. ಶಾಸ್ತ್ರೀಯ ಭಾಷೆ ಎಂಬುದು ಅಂತಾರಾಷ್ಟ್ರೀಯ ಮಟ್ಟದ ಭಾಷಾಶಾಸ್ತ್ರೀಯ ಪರಿಕಲ್ಪನೆಯಾದ್ದರಿಂದ, ಅವರು ಮೊದಲು ತಮಿಳನ್ನು ಶಾಸ್ತ್ರೀಯ ಭಾಷೆಯಾಗಿ ಪ್ರಚುರಪಡಿಸಿದ್ದು, ಒಬ್ಬ ಅಂತರಾಷ್ಟ್ರೀಯ ಭಾಷಾಕುಲತಜ್ಞನ ಮೂಲಕ. ನಂತರ ಅದನ್ನು ಪಡೆದುಕೊಂಡದ್ದು ತಮಿಳು ಅಸ್ಮಿತೆಯನ್ನು ಆಧರಿಸಿದ ರಾಜಕೀಯ ಇಚ್ಛಾಶಕ್ತಿಯ ಮೂಲಕ. ತಮಿಳರು ತಮ್ಮ ರಾಜಕಾರಣವನ್ನು ಹೇಗೆ ಕಟ್ಟಿಕೊಂಡಿದ್ದಾರೆಂದರೆ, ಅವರು ಯಾವ ಪಕ್ಷಕ್ಕೇ–ಅದು ರಾಷ್ಟ್ರೀಯ ಪಕ್ಷವಾದರೂ ಸರಿಯೇ–ಸೇರಿರಲಿ, ಅದರ ದಾಕ್ಷಿಣ್ಯವಿಲ್ಲದೆ ರಾಷ್ಟ್ರ ರಾಜಕಾರಣ ನಡೆಯದು! ಆದರೆ ಕನ್ನಡಿಗರ ರಾಜಕಾರಣ ಅನ್ಯರ 'ಮೋರೆ'ಗೆ ಮಸಿ ಬಳಿಯುವುದರಲ್ಲೇ ತನ್ನ ಸಾರ್ಥಕತೆಯನ್ನು ಕಂಡುಕೊಳ್ಳುತ್ತಿದೆ!

ಕಳೆದ ೫೦–೫೫ ವರ್ಷಗಳಲ್ಲಿ ನಡೆದ ಅನೇಕ ಸಂವಿಧಾನ ಹಾಗೂ ಕಾನೂನು ತಿದ್ದುಪಡಿಗಳ ಮೂಲಕ ರಾಜ್ಯಗಳ ಸ್ವಾಯತ್ತತೆ ಒತ್ತರಿಸಲ್ಪಟ್ಟಿದೆ. ಆದರೆ ತನ್ನ ಭಾಷಾಕುಲ ಸಂಸ್ಕೃತಿಯನ್ನು ಗುರುತಿಸಿಕೊಂಡು, ಸಹಜವೆಂಬಂತೆ ಪೋಷಿಸಿಕೊಂಡು ಬಂದ ರಾಜ್ಯಗಳು ಈ ಒತ್ತುವರಿಯನ್ನು ತಮ್ಮ ರಾಜಕೀಯ ಶಕ್ತಿ ಸಂಘಟನೆಯ ಮೂಲಕ ನಿಷ್ಕ್ರಿಯಗೊಳಿಸಿವೆ. ಆದರೆ ಕರ್ನಾಟಕ ಮಾತ್ರ ತನ್ನ ಅಭ್ಯುದಯಕ್ಕೂ ಕನ್ನಡ ಕುಲಪ್ರಜ್ಞೆಗೂ ಸಂಬಂಧವೇ ಇಲ್ಲದಂತೆ, ರಾಷ್ಟ್ರ ರಾಜಕಾರಣದ ತಾಳಕ್ಕೆ ತಕ್ಕ ಹೆಜ್ಜೆ ಹಾಕುವುದೇ ತನ್ನ ಧರ್ಮವೆಂದು ನಂಬಿಕೊಂಡು ನಡೆಯುತ್ತಾ, ತನ್ನ ಗುರುತನ್ನೇ ಅಳಿಸಿಕೊಳ್ಳುತ್ತಿದೆ. ಇದರಿಂದಾಗಿ ಕನ್ನಡ ಭಾಷಾ ಸಮುದಾಯದ ಅಂತಃಸತ್ವವೇ ಬತ್ತಿಹೋಗಿ, ಅದು ಆಧುನೀಕರಣದ ಒತ್ತಡಗಳನ್ನು ತಾಳಿಕೊಳ್ಳಲಾರದೆ ಕ್ರಮೇಣ ಕುಸಿಯುತ್ತಿದೆ; ಅನ್ಯಾಕ್ರಮಣಕ್ಕೆ ಈಡಾಗುತ್ತಿದೆ.

ಇದಕ್ಕೊಂದು ಮಾದರಿ ಉದಾಹರಣೆಯಂತಿದೆ, ಕರ್ನಾಟಕದ ರಾಜಧಾನಿ ಬೆಂಗಳೂರು. ಈ ನಗರ ತನಗಿಂತ ದೊಡ್ಡ ನಗರಗಳಾದ ಕೊಲ್ಕತ್ತಾ ಅಥವಾ ಚೆನ್ನೈ ನಗರಗಳು ಉಳಿಸಿಕೊಳ್ಳಲು ಸಾಧ್ಯವಾಗಿರುವ ಸ್ಥಳೀಯ ಸಾಂಸ್ಕೃತಿಕ ನೆಲೆಗಟ್ಟುಗಳನ್ನು ಉಳಿಸಿಕೊಳ್ಳಲಾಗದೆ ಕ್ರಮೇಣ ಚಹರೆಯೇ ಇಲ್ಲದ ಭೂತನಗರಿಯಾಗುತ್ತಿದೆ. ಈ Bangaloreನ್ನು Greater Bengaluru ಎಂದು ಪುನರ್ ನಾಮಕರಣ ಮಾಡುವ ಉದ್ಘೋಷಣೆಯ ಮೂಲಕ ನಮ್ಮ ರಾಜ್ಯಸರ್ಕಾರ ಸಂಸ್ಕೃತಿಯ ಪ್ರಶ್ನೆಯನ್ನು ಸಾಂಕೇತಿಕತೆಯ ಮಟ್ಟಕ್ಕೆ ಇಳಿಸಿದೆ. ಆದರೆ ಜೊತೆಯಲ್ಲೇ Greater Bangalore ಎಂಬ ಯೋಜನೆಯನ್ನೂ ಘೋಷಿಸಿ, ಈ ಸಾಂಕೇತಿಕತೆಯನ್ನೂ ಟೊಳ್ಳುಗೊಳಿಸಿದೆ! ಈ ಬಗ್ಗೆಯೆಲ್ಲಾ ತಲೆಯನ್ನು ಕೆಡಿಸಿಕೊಳ್ಳದಿರುವಂತೆ ತೋರುತ್ತಿರುವ ಕನ್ನಡ ಸಮುದಾಯ ತಾನೂ ಟೊಳ್ಳುಗೊಳ್ಳುತ್ತಿದೆ. ಇಂಗ್ಲಿಷ್‌ಗೆ ಮುಗಿಬಿದ್ದು, ತನ್ನ ಭಾಷೆಗೂ ತನಗೂ ಇರುವ ಕಳ್ಳುಬಳ್ಳಿ ಸಂಬಂಧವನ್ನೇ ನಿರಾಕರಿಸ ಹೊರಟಿರುವ ಈ ಸಮುದಾಯ, ಎದುರು ನೋಡುತ್ತಿರುವ ಭವಿಷ್ಯವಾದರೂ ಎಂತಹುದು?

ಇಂತಹ ಪ್ರಶ್ನೆಯನ್ನು ಕೇಳಿಕೊಳ್ಳುವ ಸಂದಿಗ್ಧ ಕನ್ನಡ ಸಂಸ್ಕೃತಿಗೆ ಏಕೆ ಒದಗಿ ಬಂದಿವೆ? ತನ್ನ ನೆರೆಹೊರೆಯ ಭಾಷಾ ಸಮುದಾಯಗಳಂತೆ ಕನ್ನಡ ಭಾಷಾ ಸಮುದಾಯವೂ ಏಕೆ ಒಂದು ವಿಶಿಷ್ಟ ಸಾಂಸ್ಕೃತಿಕ ಸಮುದಾಯವಾಗಿ ತನ್ನನ್ನು ಸಂಘಟಿಸಿಕೊಳ್ಳಲಾಗುತ್ತಿಲ್ಲ? ತನ್ನ ಪಾರಂಪರಿಕ ಅಸ್ಮಿತೆಯ ಆಧಾರದ ಮೇಲೆ ತನ್ನ ಬದುಕಿನ ಅನನ್ಯತೆ–ಘನತೆಗಳನ್ನು ಕಾಪಾಡಿಕೊಳ್ಳುವ ಪ್ರಯತ್ನದಲ್ಲಿ ಈಚಿನ ವರ್ಷಗಳಲ್ಲಿ ಅದೇಕೆ ಮತ್ತೆ ಮತ್ತೆ ಸೋಲತೊಡಗಿದೆ?

ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಲು, ಕರ್ನಾಟಕದ ಇತಿಹಾಸದಲ್ಲಿ ಕನ್ನಡ ರಾಷ್ಟ್ರೀಯತೆ ಎಂಬ ಪರಿಕಲ್ಪನೆ ವಿಕಾಸಗೊಂಡ ರೀತಿ ಮತ್ತು ಅದು ಎದುರಿಸಿದ ಬಿಕ್ಕಟ್ಟುಗಳನ್ನು ಪರಿಶೀಲಿಸ ಬೇಕಾಗುತ್ತದೆ.

–೩–

ಈಗ ರಾಷ್ಟ್ರೀಯತೆ ಎಂದೊಡನೆ ಅದು ಭಾರತದ ರಾಷ್ಟ್ರೀಯತೆ ಎಂದೇ ಭಾವಿಸಲಾಗುತ್ತದೆ. ಆದರೆ ಭಾರತದ ರಾಷ್ಟ್ರೀಯತೆ ಎಂಬುದೇ ಕಳೆದೊಂದು ಶತಮಾನದಲ್ಲಿ ನಾವು ಕಟ್ಟಿಕೊಂಡ ಒಂದು ಆಧುನಿಕ ಪರಿಕಲ್ಪನೆಯಾಗಿದೆ. ಏಕೆಂದರೆ ಭಾರತವೆಂಬುದು ಇತಿಹಾಸದಲ್ಲಿ ಒಂದು ರಾಜಕೀಯ ಶಕ್ತಿಯಾಗಿ ಈಗಿನ ರಾಷ್ಟ್ರ ರೂಪದಲ್ಲಿ ಇದ್ದುದೇ ಇಲ್ಲ. ಇತಿಹಾಸದಲ್ಲಿ ಅದು ಈ ರೂಪಕ್ಕೆ ಅತಿ ಸಮೀಪ ಬಂದಿದ್ದು ಸಾಮ್ರಾಟ್ ಅಶೋಕ ಹಾಗೂ ಅಕ್ಬರರ ಸಾಮ್ರಾಜ್ಯ ವಿಸ್ತರಣೆಯ ಕಾಲದಲ್ಲಿ ಮಾತ್ರ. ಹೀಗಾಗಿ ನಾವು ಈಗ ಅರ್ಥೈಸಿಕೊಳ್ಳುತ್ತಿರುವಂತೆ ಭಾರತದ ರಾಷ್ಟ್ರೀಯತೆ ಎಂಬುದು ರೂಪುಗೊಂಡುದುದೇ, ಎರಡು ಶತಮಾನಗಳಿಂದೀಚೆಗೆ ಬ್ರಿಟಿಷರು ಭಾರತೀಯ ಉಪಖಂಡದಲ್ಲಿ ಕ್ರಮೇಣ ವಶಪಡಿಸಿಕೊಳ್ಳುತ್ತಾ ಹೋದ ಪ್ರಾಂತ್ಯಗಳು ಒಟ್ಟುಗೂಡಿ ಕಲ್ಪಿತವಾದ ಒಂದು ಭೂಭಾಗದ ಜನರ ರಾಜಕೀಯ ಆಶೋತ್ತರಗಳ ಆಧಾರದ ಮೇಲೆ. ಅವು, ಅವರು ೧೯ನೇ ಶತಮಾನದ ರಾಜಕೀಯ ಆವಿಷ್ಕಾರಗಳಲ್ಲಿ ಒಂದಾದ ಆಧುನಿಕ ರಾಷ್ಟ್ರವೊಂದರ ಕಲ್ಪನೆ ಇಟ್ಟುಕೊಂಡು ಸಂಘಟಿತಗೊಂಡ ಸ್ವಾತಂತ್ರ್ಯ ಹೋರಾಟದ ಪ್ರಕ್ರಿಯೆಯಲ್ಲಿ ಬಿಡುಗಡೆಯಾದ ಪ್ರಜಾಸತ್ತಾತ್ಮಕ ರಾಜಕೀಯ ಆಶೋತ್ತರಗಳಾಗಿದ್ದವು ಎಂಬುದಿಲ್ಲಿ ಗಮನಾರ್ಹ. ಇದಕ್ಕೆ ಮುನ್ನ ರಾಷ್ಟ್ರೀಯತೆಗಳೆಂಬುವೇನಾದರೂ ವ್ಯಕ್ತಗೊಂಡಿದ್ದರೆ, ಅವು ಭಾಷಾ ರಾಷ್ಟ್ರೀಯತೆಗಳೇ.

ರಾಷ್ಟ್ರೀಯತೆ ಎಂದರೆ ಸ್ಥೂಲವಾಗಿ, ಒಂದು ಸಮುದಾಯ ಉನ್ನತಿಯ ಒಂದು ಸಾಮಾನ್ಯ ಆಶಯದೊಂದಿಗೆ ಮುನ್ನಡೆಯಲು ತನ್ನನ್ನು ತಾನು ಸಂಘಟಿಸಿಕೊಳ್ಳುವುದಕ್ಕೆ ಕಂಡುಕೊಂಡ ಒಂದು ಭಾವ ಸಂಬಂಧ. ಭರತ ಖಂಡದಲ್ಲಿ ಇಂತಹ ಭಾವ ಸಂಬಂಧಗಳು ಧಾರ್ಮಿಕ ನಂಬಿಕೆಗಳ ಆಧಾರದ ಮೇಲೆ ವ್ಯಕ್ತವಾಗುತ್ತಿದ್ದವು. ಆದರೆ ಈ ಧಾರ್ಮಿಕ ಭಾವ ಧಾರೆ ಇತಿಹಾಸದುದ್ದಕ್ಕೂ ಅನೇಕ ರೂಪಾಂತರಗಳನ್ನು ಹೊಂದುತ್ತಿದ್ದುದರಿಂದಲೂ ಮತ್ತು ಭೌಗೋಳಿಕವಾಗಿ ಅದನ್ನು ಸುಸ್ಥಿರವಾಗಿ ಸಂಘಟಿಸುವ ರಾಜಕೀಯ ಶಕ್ತಿ ಮೂಡದಿದ್ದುದರಿಂದಲೂ, ಭರತ ಖಂಡ ಬಹುಧರ್ಮೀಯ ಸಂಸ್ಕೃತಿಯನ್ನು ರೂಢಿಸಿಕೊಳ್ಳುತ್ತಾ ಬಂತು. ಇದರಿಂದಾಗಿ ಇಲ್ಲಿ ಧರ್ಮಾಧಾರಿತ ರಾಷ್ಟ್ರೀಯತೆ ತನ್ನ ಕ್ರಿಯಾಶೀಲ ರೂಪಗಳಲ್ಲಿ ಕಾಣಿಸಿಕೊಳ್ಳಲಿಲ್ಲ. ಬದಲಾಗಿ ಒಂದು ಸಾಮಾನ್ಯ ಭಾಷೆಯ ಮೂಲಕ ಬಂಧಿಸಲ್ಪಟ್ಟ ಒಂದು ಜನಸಮುದಾಯ; ಆ ಭಾಷೆಯ ಮೂಲಕ ವ್ಯಕ್ತಪಡಿಸಿದ ಸಾಮುದಾಯಿಕ ವಿಕಾಸಗ ಆಶಯಗಳು ಒಂದು ರಾಜಕೀಯ ಘಟಕದ ನಿರ್ಮಾಣಕ್ಕೆ ಕಾರಣವಾಗಿ, ರಾಷ್ಟ್ರೀಯತೆಯಾಗಿ ಬೆಳೆದುಬಂದ ಅನೇಕ ಉದಾಹರಣೆಗಳನ್ನು ನಾವು ಇತಿಹಾಸದಲ್ಲಿ ಗಮನಿಸಬಹುದು. ಇಲ್ಲಿ ಮಾತ್ರವಲ್ಲ, ಜಗತ್ತಿನ ಇತರ ಭಾಗಗಳಲ್ಲೂ ಭಾಷಾ ಸಮುದಾಯಗಳು ರಾಜಕೀಯ ಘಟಕಗಳಾಗಿ ಸಂಘಟಿತಗೊಂಡು, ತಮ್ಮದೇ ರಾಷ್ಟ್ರೀಯತೆಗಳನ್ನು ಬೆಳೆಸಿಕೊಂಡದ್ದನ್ನು ನಾವು ಗಮನಿಸಬಹುದು.

ಭಾರತದ ಜನಸಮುದಾಯದ ಮಾನಸಿಕತೆಯಲ್ಲಿ ಈ ಭಾಷಾ ರಾಷ್ಟ್ರೀಯತೆಗಳು ಅಂತರ್ಗತವಾಗಿದ್ದುದರಿಂದಲೇ, ವಸಾಹತುಶಾಹಿ ಸಂದರ್ಭದಲ್ಲಿ ಸ್ವಾತಂತ್ರ್ಯದ ಆಶಯವೂ ಭಾಷಾ ರಾಷ್ಟ್ರೀಯತೆಗಳೂ ಒಟ್ಟೊಟ್ಟಿಗೇ ವ್ಯಕ್ತವಾಗತೊಡಗಿದ್ದು. ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ, ಭಾರತದ ಭಾಷಾ ರಾಷ್ಟ್ರೀಯತೆಗಳೇ ಭಾರತದ ರಾಷ್ಟ್ರೀಯ ಆಂದೋಲನವನ್ನು ರೂಪಿಸಿದ್ದು ಎಂದರೆ ತಪ್ಪಾಗಲಾರದು. ೧೯ನೇ ಶತಮಾನದ ಕೊನೆಯ ದಶಕಗಳಲ್ಲಿ ಬರೀ ಚರ್ಚೆ, ಮನವಿ, ಬೇಡಿಕೆ ಮಂಡನೆ ಇತ್ಯಾದಿ ರೂಪಗಳಲ್ಲಿ ಮಾತ್ರ ವ್ಯಕ್ತವಾಗುತ್ತಿದ್ದ ಸ್ವಾತಂತ್ರ್ಯದ ಅಭೀಪ್ಸೆ, ನಿಜವಾಗಿ ಹೋರಾಟದ ಆವೇಗ ಪಡೆದುಕೊಂಡದ್ದು ೧೯೦೫ರ ಬಂಗ್ಲಾ ವಿಭಜನೆಯ ಪ್ರಸ್ತಾಪದ ಸಂದರ್ಭದಲ್ಲೇ ಎಂಬುದನ್ನು ನಾವು ಗಮನಿಸಬೇಕು. ಬಂಗಾಳಿ ರಾಷ್ಟ್ರೀಯತೆಗೆ ಒದಗಿದ ಈ ಬಿಕ್ಕಟ್ಟು, ಬೇರೆ ಬೇರೆ ಪ್ರಾಂತ್ಯಗಳಲ್ಲಿ (ಅಂದರೆ ಭಾಷಾ ರಾಷ್ಟ್ರೀಯತೆಗಳಲ್ಲಿ) ವಿವಿಧ ಮನೋಭೂಮಿಕೆಗಳ ಸ್ವಾತಂತ್ರ್ಯ ಹೋರಾಟಗರರನ್ನು ರೂಪಿಸಿ, ದೇಶದಾದ್ಯಂತ ಒಂದು ರಾಜಕೀಯ ಸಂಚಲನವನ್ನು ಉಂಟುಮಾಡಿತು. ಅಲ್ಲಿಂದಲೇ ನಿಜವಾದ ರಾಷ್ಟ್ರೀಯ ಹೋರಾಟ ಆರಂಭವಾಯಿತೆಂಬುದನ್ನೂ ನಾವು ಗಮನಿಸಬೇಕು.

ಹಾಗೆ ನೋಡಿದರೆ, ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ಎಂದು ವರ್ಣಿಸಲಾಗುವ ೧೮೫೭ರ ಸಿಪಾಯಿ ದಂಗೆಯ ಪರಿಣಾಮವಾಗಿ ಬ್ರಿಟನ್ ಭಾರತಕ್ಕೆ ಒಂದು ಮಟ್ಟದ ಸ್ವಾಯತ್ತತೆ ನೀಡುವ ಒತ್ತಡಕ್ಕೆ ಒಳಗಾದ ಹೊತ್ತಿಗೇ, ಭಾರತದ ಭಾಷಾ ರಾಷ್ಟ್ರೀಯತೆಗಳೇ ಅದರ ಮುಖ್ಯ ಆಡಳಿತ ಘಟಕಗಳೆಂದು ಮಾನ್ಯ ಮಾಡಲ್ಪಟ್ಟದ್ದವು. ಆ ಸ್ವಾಯತ್ತತೆಯ ಸ್ವರೂಪದ ಬಗ್ಗೆ ಬ್ರಿಟಿಷ್ ಪಾರ್ಲಿಮೆಂಟ್‌ನಲ್ಲಿ ಚರ್ಚೆ ನಡೆದ ಸಂದರ್ಭದಲ್ಲಿ, ಭಾರತದ ರಾಜಕೀಯ ಕುರಿತಂತೆ ಪರಿಣತಿ ಹೊಂದಿದ್ದ ಪಾರ್ಲಿಮೆಂಟ್ ಸದಸ್ಯ ಜಾನ್ ಬ್ರೈಟ್, ಬ್ರಿಟಿಷ್–ಭಾರತವನ್ನು ಭಾಷೆಗಳ ಆಧಾರದ ಮೇಲೆ ಐದು ಪ್ರಮುಖ ಪ್ರಾಂತ್ಯಗಳನ್ನಾಗಿ ವಿಂಗಡಿಸಿ ಅಧಿಕಾರವನ್ನು ಹಂಚಬಹುದೆಂದು ಸಲಹೆ ನೀಡಿದ್ದರು. ಅಂದರೆ, ವಸಾಹತುದಾರರೇ ಅರಿತುಕೊಂಡಂತೆ, ಭಾರತ ಒಂದು ಆಧುನಿಕ ರಾಷ್ಟ್ರವಾಗಲು ಸಿದ್ಧಗೊಳ್ಳುತ್ತಿದ್ದುದು, ತನ್ನ ಭಾಷಾ ರಾಷ್ಟ್ರೀಯತೆಗಳ ಆಧಾರದ ಮೇಲೆ!

ಏಕೆಂದರೆ, ಭಾರತದ ರಾಷ್ಟ್ರೀಯತೆ ಎಂಬ ಕಲ್ಪನೆಯೇ ಆಗಿನ್ನೂ ಮೂಡಿರಲಿಲ್ಲ. ಅದೇನಿದ್ದರೂ ಬ್ರಿಟಿಷ್ ಭಾರತದಲ್ಲಿ ಲೀನಗೊಂಡಿದ್ದ ಭಾಷಾ ರಾಷ್ಟ್ರೀಯತೆಗಳನ್ನು ಅಥವಾ ಅವುಗಳ ಆಧಾರದ ಪ್ರಾದೇಶಿಕ ಸಂಸ್ಕೃತಿಗಳನ್ನು ಪ್ರತಿನಿಧಿಸುತ್ತಿದ್ದ ಪ್ರಾಂತ್ಯಗಳ ಜನ, ಒಂದಲ್ಲ ಒಂದು ಕಾರಣದ ಮೇಲೆ ವ್ಯಕ್ತಗೊಳಿಸುತ್ತಿದ್ದ ಬ್ರಿಟಿಷ್ ಅಧಿಪತ್ಯ ವಿರೋಧಿ ಭಾವನೆಗಳ ರೂಪದಲ್ಲಿರುತ್ತಿತ್ತು. ಇದರ ಪರಿಣಾಮವಾಗಿಯೇ ಮುಂದೆ ಸಿಂಧ್, ಬಿಹಾರ ಹಾಗೂ ಒರಿಸ್ಸಾ ಪ್ರಾಂತ್ಯಗಳು ಭಾಷಾ ರಾಷ್ಟ್ರೀಯತೆಗಳ ಆಧಾರದ ಮೇಲ ರೂಪುಗೊಂಡವು. ಅದರ ಆ ಹೊತ್ತಿಗೆ ಇಪ್ಪತ್ತಕ್ಕೂ ಹೆಚ್ಚು ಆಡಳಿತ ಘಟಕಗಳಾಗಿ ಹಂಚಿ ಹೋಗಿ, ಛಿದ್ರ ಛಿದ್ರವಾಗಿದ್ದ ಕನ್ನಡ ರಾಷ್ಟ್ರೀಯತೆ ಮತ್ತೆ ತನ್ನ ಏಕತೆಯನ್ನು, ಭಾರತದ ರಾಷ್ಟ್ರೀಯ ಆಂದೋಲನದ ಭಾಗವಾಗಿಯೇ ಕಂಡುಕೊಳ್ಳುವ ಚಾರಿತ್ರಿಕ ಅನಿವಾರ್ಯತೆಗೆ ಈಡಾಯಿತು. ಅವರೆಗಿನ ಭಾರತದ ಇನ್ನಾವ ಭಾಷಾ ರಾಷ್ಟ್ರೀಯತೆಯೂ ಈ ಪ್ರಮಾಣದ ರಾಜಕೀಯ ಛಿದ್ರತೆಗೆ ಒಳಗಾಗಿರಲಿಲ್ಲ ಎಂಬುದೂ ಗಮನಾರ್ಹ.

– ೪ –

ಕನ್ನಡ ರಾಷ್ಟ್ರೀಯತೆ ಎಂಬುದು ಸಾವಿರ ವರ್ಷಗಳಿಗೂ ಮೇಲ್ಪಟ್ಟ ಇತಿಹಾಸವುಳ್ಳ ಒಂದು ಕಲ್ಪಿತ ರಾಜಕೀಯ ಸಮುದಾಯವಾಗಿ, ತನ್ನದೇ ವಿಶಿಷ್ಟ ಸಂಸ್ಕೃತಿಯ–ಅಂದರೆ ಸ್ಥೂಲವಾಗಿ ಒಂದು ಸಾಮಾನ್ಯ ಬದುಕಿನ ರೀತಿ ನೀತಿಗಳನ್ನು ರೂಢಿಸಿಕೊಂಡು, ನೆರೆಹೊರೆಯ ಇತರ ಜನಸಮುದಾಯಗಳಿಂದ ಭಿನ್ನವಾಗಿ ಕಾಣುವಂತಹುದು– ಮೂಲಕ ತನ್ನ ಅಸ್ಮಿತೆಯನ್ನು ಕಾಪಾಡಿಕೊಂಡು ಬಂದಿದೆ. ಈ ಪ್ರಯತ್ನದಲ್ಲಿ ಅದು ಅನೇಕ ರಾಜಕೀಯ ಸ್ಥಿತ್ಯಂತರಗಳಿಗೂ, ಭೌಗೋಳಿಕ ಮಾರ್ಪಾಡುಗಳಿಗೂ, ಸಾಂಸ್ಕೃತಿಕ ಸಮೀಕರಣಗಳಿಗೂ ಒಡ್ಡಿಕೊಂಡು, ಕಾಲದ ಪರೀಕ್ಷೆಯಲ್ಲಿ ಗೆದ್ದು ಬಂದಿದೆ. ಆದುದರಿಂದಲೇ ಅದು, ಸ್ವಾತಂತ್ರ್ಯ ಆಂದೋಲನ ಸೃಷ್ಟಿಸಿದ ಅವಕಾಶದಲ್ಲಿ ಮತ್ತೆ ಪ್ರಕಟಗೊಂಡು, ಭಾರತದ ಒಕ್ಕೂಟದಲ್ಲಿ ತನ್ನದೇ ವಿಶಿಷ್ಟತೆಯನ್ನು ಕಾಪಾಡಿಕೊಳ್ಳುವ ರಾಜಕೀಯ ಇಚ್ಛಾಶಕ್ತಿಯನ್ನು ಕರ್ನಾಟಕ ಏಕೀಕರಣ ಚಳುವಳಿಯ ರೂಪದಲ್ಲಿ ಸಂಘಟಿಸಿಕೊಳ್ಳಲು ಸಾಧ್ಯವಾದದ್ದು.

ಕರ್ನಾಟಕವೆಂಬುದಕ್ಕೆ ಭೌಗೋಳಿಕವಾಗಿ ಮಹಾಭಾರತದಷ್ಟು ಪುರಾತನ ಇತಿಹಾಸವಿದ್ದರೂ, ಅದು ಕನ್ನಡದ ಅಸ್ತಿತ್ವವೆಂಬಂತೆ ಇತಿಹಾಸದಲ್ಲಿ ನಮ್ಮ ಗಮನಕ್ಕೆ ಬರುವುದು ಬಾದಾಮಿ ಚಾಲುಕ್ಯರ ಕಾಲದಲ್ಲಿ. ಅಂದರೆ ಕ್ರಿ.ಶ. ೬ನೇ ಶತಮಾನದ ಕೊನೆಯ ಹೊತ್ತಿಗೆ. ಈ ಹಿಂದಿನ ಶಾತವಾಹನರೂ, ಪೂರ್ವ ಗಂಗರೂ, ಕದಂಬರೂ ಈ ಭೂಭಾಗದಲ್ಲಿ ಆಳ್ವಿಕೆ ನಡೆಸಲಾರಂಭಿಸಿದ್ದರಾದರೂ, ಆ ಆಳ್ವಿಕೆಗಳು ಕನ್ನಡ ಭಾಷಾ ಸಂಸ್ಕೃತಿಯೊಂದನ್ನು ರೂಪಿಸಿಕೊಂಡು ಕನ್ನಡದ್ದೆಂದು ಹೇಳಬಹುದಾದ ಅಸ್ಮಿತೆಯೊಂದನ್ನು ಸಾಧಿಸಿಕೊಂಡಿದ್ದ ಯಾವ ಐತಿಹಾಸಿಕ ಸೂಚನೆಗಳು ನಮಗೆ ಸಿಗುವುದಿಲ್ಲ. ಆ ಆಳ್ವಿಕೆಗಳ ಐತಿಹಾಸಿಕ ಅವಶೇಷಗಳು ನಮಗೆ ಬಹುಪಾಲು ಸಿಗುವುದು ಪ್ರಾಕೃತ ಮತ್ತು ಸಂಸ್ಕೃತ ಭಾಷೆಗಳಲ್ಲೇ. ಅಲ್ಲೊಂದು ಇಲ್ಲೊಂದು ಮಾತ್ರ ಕನ್ನಡದಲ್ಲಿ. ಉದಾ: ಕನ್ನಡದ ಮೊದಲ ಲಭ್ಯ ಶಾಸನವೆಂದು ಹೇಳಲಾಗುವ ಹಲ್ಮಿಡಿ ಶಾಸನ. ಇಲ್ಲಿ ಅಸ್ಮಿತೆ ಎಂದರೇನು ಎಂದು ಹೇಳುವುದು ಒಳಿತೇನೋ. ಅಸ್ಮಿತೆ ಎಂದರೆ, ಜನಸಮುದಾಯವೊಂದು ತನ್ನ ಚರಿತ್ರೆಯ ಮೂಲಕ ಸಾಮಾಜಿಕ–ಆರ್ಥಿಕ–ಸಾಂಸ್ಕೃತಿಕ ಹಾಗೂ ರಾಜಕೀಯ ನೆಲೆಗಳಲ್ಲಿ ಸಂಘಟಿಸಿಕೊಂಡ ಹಾಗೂ ತನ್ನ ಮುನ್ನಡೆಗಾಗಿ ಕಾಪಿಟ್ಟುಕೊಂಡ ಶಕ್ತಿ ಸಂಚಯದ ಸ್ವರೂಪ. ಅಂದರೆ ಸ್ಥೂಲವಾಗಿ ಆ ಜನಸಮುದಾಯದ ಒಟ್ಟಾರೆ ವ್ಯಕ್ತಿತ್ವ ಅಥವಾ ಶೀಲ ಎನ್ನಬಹುದು.

ಮೂಲತಃ ಕೃಷಿಕುಲಕ್ಕೆ ಸೇರಿದವರೆಂದು ಹೇಳಲಾದ (ಸಲಿಕೆ–>ಚಲುಕೆ–>ಚಾಲುಕ್ಯ) ಬಾದಾಮಿ ಚಾಲುಕ್ಯರು (ಅಥವಾ ಚಲುಕ್ಯರು), ಆ ಹೊತ್ತಿಗೆ ಎಲ್ಲ ಭಾಷಾ ಲಕ್ಷಣಗಳನ್ನು ಮೈಗೂಡಿಸಿಕೊಂಡಿದ್ದಿರಬಹುದಾದ ಕನ್ನಡ ನುಡಿಯನ್ನು ಆಡಳಿತ ಭಾಷೆಯಾಗಿ ಅಳವಡಿಸಿಕೊಂಡು ಅದನ್ನು ಪೋಷಿಸುವುದನ್ನು ತಮ್ಮ ರಾಜಧರ್ಮವನ್ನಾಗಿ ಮಾಡಿಕೊಂಡಿದ್ದ ಎಲ್ಲ ಸೂಚನೆಗಳು ಇವರ ಆಳ್ವಿಕೆಯ ಕಾಲದ ಶಾಸನಗಳಲ್ಲಿ ಸಿಗುತ್ತವೆ. ೭ನೇ ಶತಮಾನದ ಬಾದಾಮಿ ಶಾಸನವಂತೂ–*'ಸಾಧುಂಗೆ ಸಾಧು! ಮಾಧುರ್ಯಂಗೆ ಮಾಧುರ್ಯಂ। ಬಾದಿಪ್ಪ ಕಲಿಗೆ ಕಲಿಯುಗ ವಿಪರೀತನ್'*–ಕನ್ನಡಿಗ ಮತ್ತು ಕನ್ನಡ ಭಾಷೆಯ ಅಸ್ಮಿತೆಯ ಅಸ್ತಿತ್ವವನ್ನು, ತನ್ನ ಭಾವ–ಭಾಷೆಗಳ ವಿದ್ಯುದಾಲಿಂಗನದ ಮೂಲಕ ನಿರ್ವಿವಾದಾತ್ಮಕವಾಗಿ ಮಂಡಿಸುತ್ತದೆ.

ಆದರೆ ಈ ಕಾಲಘಟ್ಟದಲ್ಲಿ ಕನ್ನಡ ಸಂಸ್ಕೃತಿ ಅಭಿವ್ಯಕ್ತಿಯನ್ನು ಕಂಡುಕೊಂಡಿದ್ದು ಹೆಚ್ಚಾಗಿ ಶಿಲಾಶಿಲ್ಪದ ಮೂಲಕ. ಶಬ್ದಶಿಲ್ಪ ಎದ್ದು ಕಾಣುವಂತಾದ್ದು ಏನಿದ್ದರೂ, ೮ನೇ ಶತಮಾನದಿಂದೀಚೆಗೆ ಪ್ರವರ್ಧಮಾನಕ್ಕೆ ಬಂದ ರಾಷ್ಟ್ರಕೂಟರ ಕಾಲದಲ್ಲಿ. ೯ನೇ ಶತಮಾನದ ನೃಪತುಂಗನ ಕಾಲದ ಕವಿರಾಜಮಾರ್ಗ ಕನ್ನಡದ ಲಭ್ಯ ಮೊದಲ ಗ್ರಂಥವೆಂದು ಪ್ರಸಿದ್ಧವಾಗಿದ್ದು, ಅದು ಕನ್ನಡವು ರಾಷ್ಟ್ರೀಯತೆಯ ಎಲ್ಲ ಲಕ್ಷಣಗಳನ್ನು ತನ್ನಲ್ಲಿ ಸುಸ್ಥಿರಗೊಳಿಸಿಕೊಂಡಿತೆಂಬುದನ್ನು ಸಾಬೀತುಪಡಿಸುತ್ತದೆ. ಅಲ್ಲಿನ 'ಆ ಕನ್ನಡದೊಳ್ ಭಾವಿಸಿದ ಜನಪದಂ ವಸುಧಾಲಯ ವಿಲೀನ ವಿಶದ ವಿಶೇಷಂ' ಎಂಬ ಪದ್ಯಭಾಗವು ಸಂಕ್ಷಿಪ್ತ ರೂಪದಲ್ಲಿ, ಆ ಹೊತ್ತಿಗೆ ಕನ್ನಡವು ಭಾಷಾ, ರಾಜ ಮತ್ತು ಜನಶಕ್ತಿಯ ರೂಪಗಳಲ್ಲಿ ಪರಸ್ಪರ ಹಾಸುಹೊಕ್ಕಾಗಿ ಹೇಗೆ ಒಂದು ರಾಷ್ಟ್ರೀಯತೆಯಾಗಿ ಒಡಮೂಡಿತ್ತು ಎಂಬುದನ್ನು ನಿರೂಪಿಸುತ್ತದೆ. ನಂತರದ ಒಂದೆರಡು ಶತಮಾನಗಳಲ್ಲಿ ಪಂಪ, ಪೊನ್ನ, ರನ್ನರು ವಿವಿಧ ರಾಜಾಶ್ರಯಗಳಲ್ಲಿ ಅದಕ್ಕೊಂದು ಸಾಹಿತ್ಯಿಕ ಚೌಕಟ್ಟನ್ನು ಒದಗಿಸಿಕೊಟ್ಟರು.

ಕನ್ನಡ ರಾಷ್ಟ್ರೀಯತೆ ಒಂದು ಹೊಸ ಮಜಲು ತಲುಪುವುದು ಕಲ್ಯಾಣದ ಚಾಲುಕ್ಯರ ಕಾಲದಲ್ಲಿ, ೧೨ನೇ ಶತಮಾನದಲ್ಲಿ. ಬಸವಣ್ಣನ ಶರಣ ಚಳುವಳಿಯ ಮೂಲಕ ಒಂದು ಕ್ರಾಂತಿಕಾರಕ ಪ್ರಯೋಗಕ್ಕೆ ಒಳಗಾದ ಈ ರಾಷ್ಟ್ರೀಯತೆ, ತನ್ನೊಳಗಿನ ಸಾಮಾಜಿಕ–ಆರ್ಥಿಕ ನೆಲೆಗಳ ವಿರೋಧಾಭಾಸಗಳನ್ನು ಮುಖಾಮುಖಿಯಾಗಿಸಿಕೊಳ್ಳುವ ಧೈರ್ಯ ತೋರಿ, ಸಾಂಸ್ಕೃತಿಕವಾಗಿ ತನ್ನನ್ನು ಗಟ್ಟಿಗೊಳಿಸಿಕೊಂಡಿತು. ದುಡಿಯುವ ವರ್ಗವೇ ವ್ಯಾಪಾರೀ ವರ್ಗವಾಗಿಯೂ ಸಮಾಜದ ಮಧ್ಯರಂಗಕ್ಕೆ ಬಂದು, ಸಮಾಜದ ಪಟ್ಟಭದ್ರರಾಗಿದ್ದ ಮಧ್ಯವರ್ತಿ ವರ್ಗಗಳನ್ನು ನಿವಾರಿಸಿಕೊಳ್ಳುವ ಮೂಲಕ ಸಾಮಾಜಿಕ ಪುನಾರಚನೆಗೆ ಪ್ರಯತ್ನಿಸಿದ ಈ ಐತಿಹಾಸಿಕ ಸಾಹಸ, ಜಾತಿ ಶ್ರೇಣೀಕರಣವನ್ನು ಪ್ರಶ್ನಿಸುವುದರಲ್ಲಿ ಕೊನೆಗೊಂಡದ್ದು ಕನ್ನಡ ಅಸ್ಮಿತೆಗೆ ವಿಶಿಷ್ಟ ಆಯಾಮವನ್ನು ನೀಡಿತು. ಇಲ್ಲಿಂದಾಚೆಗೆ ಕನ್ನಡ ರಾಷ್ಟ್ರೀಯತೆ ಎಂದರೆ ಕೇವಲ ಒಂದು ಸಾಂಸ್ಕೃತಿಕ ಪರಿಕಲ್ಪನೆ ಮಾತ್ರವಾಗುಳಿಯದೆ, ಜನಾಂದೋಲನ ಶಕ್ತಿಯನ್ನೂ ತನ್ನೊಳಗೆ ಅಂತರ್ಗತಗೊಳಿಸಿಕೊಂಡಿತು. ನಂತರ ಹೊಯ್ಸಳರ ಕಾಲದ ಬಹುಧರ್ಮೀಯತೆ ರೂಢಿಸಿದ ಬಹುತ್ವದ ಜನ ಸಂಸ್ಕೃತಿ, ವಿಜಯನಗರ ಕಾಲದ ಲೌಕಿಕ ವೈಭವ ಹಾಗೂ ಉದಾರ ಜೀವನದೃಷ್ಟಿ ಮತ್ತು ಅದರ ಅಧಃಪತನ ಸೃಷ್ಟಿಸಿದ ರಾಜಕೀಯ ಕಂಪನಗಳ ಮಧ್ಯೆ ಬಿಜಾಪುರ ಆದಿಲ್‌ಷಾಹೀ ಕಾಲದಲ್ಲಿ ಕಂಡುಬಂದ ಹಿಂದೂ–ಮುಸ್ಲಿಂ ಧರ್ಮಗಳ ಅನುಸಂಧಾನ; ಮತ್ತು ಅದರ ಪ್ರಭಾವದಿಂದಾಗಿ–ವಿಶೇಷವಾಗಿ ಕೆಳವರ್ಗಗಳಲ್ಲಿ–ಮೂಡಿಗಿಂತ ಜಾತ್ಯತೀತತೆಯ ಅನುಭಾವಿ ತತ್ವಪರಂಪರೆ ಹಾಗೂ ಶ್ರೀರಂಗಪಟ್ಟಣದ ಚಿಕ್ಕದೇವರಾಜನ ಕಾಲದಲ್ಲಿ ಕಂಡುಕೊಂಡ ಪುನರುತ್ಥಾನ–ಹೀಗೆ ಐದು ಶತಮಾನಗಳ ಅಂತರದಲ್ಲಿ ಕನ್ನಡ ರಾಷ್ಟ್ರೀಯತೆ ಅನೇಕ ಏಳು ಬೀಳುಗಳನ್ನು ಕಂಡಿತು. ಇವುಗಳಿಂದಾಗಿಯೇ ಒಂದು ವಿಶಿಷ್ಟ ಸಾಮಾಜಿಕ–ಆರ್ಥಿಕ–ಸಾಂಸ್ಕೃತಿಕ ಚಹರೆಗಳನ್ನು ರೂಢಿಸಿಕೊಂಡಿದ್ದ ಅದು, ೧೮ನೇ ಶತಮಾನದ ಟಿಪ್ಪುವಿನ ಕಾಲಕ್ಕೆ ಒಂದು ಪ್ರಬಲ ರಾಜಕೀಯ ಶಕ್ತಿಯಾಗಿ ಬೆಳೆದು, ದೇಶಿ ಮತ್ತು ವಿದೇಶಿ–ಈ ಎರಡೂ ಶಕ್ತಿಗಳೊಂದಿಗೆ ಹೋರಾಡುತ್ತ, ಕಾಲಕ್ಕೆ ತಕ್ಕ ಒಂದು ಆಧುನಿಕ ರಾಷ್ಟ್ರವಾಗಿ ಹೊರಹೊಮ್ಮಿತು. ಆದರೆ, ದುರದೃಷ್ಟವಶಾತ್ ಇದೇ ಅದಕ್ಕೆ ಮುಳುವಾಯಿತು.

ಟಿಪ್ಪುವಿನ ಮೈಸೂರು ಸಂಸ್ಥಾನ, ತನ್ನ ಸಂಸ್ಥಾನದ ಮಾರುಕಟ್ಟೆಗೆ ಬ್ರಿಟಿಷ್–ಭಾರತದ

ಉತ್ಪನ್ನಗಳಿಗೆ ಪ್ರವೇಶ ನಿರಾಕರಿಸುವ ಮೂಲಕ ಬ್ರಿಟಿಷ್ ಬಂಡವಾಳಶಾಹಿ ವಿಸ್ತರಣೆಗೆ ಅವಕಾಶ ಕೊಡದೆ ಬಹುಕಾಲ ಸೆಡ್ಡು ಹೊಡೆದು ನಿಂತಿತ್ತು. ಅದನ್ನು ಬ್ರಿಟಿಷರು, ದೇಶೀಯರ ಸಹಯೋಗದೊಂದಿಗೇ ಮತ್ತು ಟಿಪ್ಪುವಿನ ಸಹಧರ್ಮೀಯರ ಬೆಂಬಲದೊಂದಿಗೇ ದೀರ್ಘ ಹೋರಾಟದ ಮೂಲಕ ಮಣಿಸಿದರು. ನಂತರವೂ ಕಿತ್ತೂರು ಚೆನ್ನಮ್ಮ ಹಾಗೂ ಸಂಗೊಳ್ಳಿ ರಾಯಣ್ಣನ ರೂಪದಲ್ಲಿ ಕನ್ನಡ ರಾಷ್ಟ್ರೀಯತೆ, ವಸಾಹತುಶಾಹಿಗೆ ತನ್ನ ಸಣ್ಣ ಪುಟ್ಟ ಪ್ರತಿರೋಧಗಳನ್ನು ತೋರಿತಾದರೂ; ಟಿಪ್ಪುವಿನ ಪ್ರತಿರೋಧ ಬ್ರಿಟಿಷರನ್ನು ಎಷ್ಟು ರೊಚ್ಚಿಗೆಬ್ಬಿಸಿತ್ತೆಂದರೆ, ಭೌಗೋಳಿಕವಾಗಿ ಈಗಿನ ಕರ್ನಾಟಕವನ್ನೂ ಮೀರಿ ಹರಡಿದ್ದ ಕನ್ನಡದ ಆ ವಿಶಾಲ ಸಂಸ್ಥಾನವನ್ನು ಹರಿದು ಚೂರು ಮಾಡಿ, ಅದರ ಅಸ್ಮಿತೆಯನ್ನೇ ಛಿದ್ರಗೊಳಿದರು. ಯಾರ ಸೋಲಿನವರೆಗೆ ಭಾರತ ಪೂರ್ಣವಾಗಿ ತನ್ನ ಕೈವಶವಾಗಿರಲಿಲ್ಲವೋ, ಅಂತಹ ಟಿಪ್ಪುವಿನ ಸಾಮ್ರಾಜ್ಯ ವಿಸ್ತರಣೆಗೆ ಸಮುದ್ರ ವ್ಯಾಪಾರ–ವ್ಯವಹಾರಗಳ ಮೂಲಕ ಅನುಕೂಲ ಒದಗಿಸಿದ್ದ ಕರಾವಳಿ ಪ್ರದೇಶವನ್ನು, ಬ್ರಿಟಿಷ್ ಸರ್ಕಾರ ತನ್ನ ಅಧೀನದಲ್ಲಿದ್ದ ಮದ್ರಾಸ್ ಪ್ರಾಂತ್ಯಕ್ಕೆ ಸೇರಿಸಿಕೊಳ್ಳುವ ಜಾಣತನ ತೋರಿತು. ಮಿಕ್ಕದ್ದರಲ್ಲಿ ಕೆಲವು ಭಾಗಗಳನ್ನು ಮರಾಠರ ಹಾಗೂ ತೆಲುಗು–ತಮಿಳರ ಭಾಷಾ ಆಧಿಪತ್ಯಗಳಿಗೆ ಹಂಚಿ; ತನ್ನ ರಾಜಕೀಯ ನೈತಿಕತೆಯ ಪ್ರದರ್ಶನಕ್ಕೆಂಬಂತೆ, ಕೊನೆಗೆ ಉಳಿದಿದ್ದನ್ನು ಮೈಸೂರು ಒಡೆಯರಿಗೆ ಅಧೀನ ಅಧಿಕಾರ ರೂಪದಲ್ಲಿ ಒಪ್ಪಿಸಿತು. ಅಷ್ಟೇ ಅಲ್ಲ, ಈ ರಾಷ್ಟ್ರೀಯತೆ ಮತ್ತೆ ತಲೆ ಎತ್ತದಂತೆ ಮಾಡಲು, ಅನ್ಯಭಾಷಾ ರಾಷ್ಟ್ರೀಯತೆಗಳಿಂದ–ವಿಶೇಷವಾಗಿ ತೆಲುಗು ಮತ್ತು ತಮಿಳು ಪ್ರದೇಶಗಳಿಂದ–ಆಡಳಿತ ಹಾಗೂ ಕಾರ್ಮಿಕ ವರ್ಗವನ್ನು ತಂದು ಇಲ್ಲಿ ನೆಲೆಗೊಳಿಸಿತು. ಪಶ್ಚಿಮ ಕರಾವಳಿಯಲ್ಲಿ ಬ್ರಿಟಿಷ್ ಬಂಡವಾಳಶಾಹಿಯೊಂದಿಗೆ ಶಾಮೀಲಾಗಿ ಅಖಿಲ ಭಾರತ ವ್ಯಾಪಾರಿ ಸಮುದಾಯವಾಗಿ ತನ್ನ ಹಿತಾಸಕ್ತಿಯನ್ನು ಬೆಳೆಸಿಕೊಂಡಿದ್ದ ವಣಿಜ ವರ್ಗವನ್ನು ಇಲ್ಲಿ ತನ್ನ ದಲ್ಲಾಳಿ ವರ್ಗವಾಗಿ ನೆಲೆಗೊಳಿಸಿತು. ಹೀಗೆ ಭೌಗೋಳಿಕವಾಗಲ್ಲದೆ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ರಾಜಕೀಯ– ಈ ಎಲ್ಲ ನೆಲೆಗಳಲ್ಲೂ ಛಿದ್ರ ವಿಚ್ಛಿದ್ರವಾದ ಕನ್ನಡ ರಾಷ್ಟ್ರೀಯತೆ, ಕರ್ನಾಟಕ ಏಕೀಕರಣವಾದ ಈ ೫೦ ವರ್ಷಗಳ ನಂತರವೂ ತನ್ನ ಪ್ರಜ್ಞೆಯನ್ನು ಪೂರ್ಣವಾಗಿ ಪಡೆದುಕೊಂಡಿಲ್ಲವೆಂದರೆ, ಈ ಕಾಲಾಂತರದಲ್ಲಿ ಅದು ಅನುಭವಿಸಿದ ಆಘಾತಗಳು ಎಷ್ಟು ತೀವ್ರತರವಾಗಿತ್ತೆಂಬುದನ್ನು ಊಹಿಸಬಹುದಾಗಿದೆ.

–೫–

ಭಾರತದ ರಾಷ್ಟ್ರೀಯ ಆಂದೋಲನದ ಜೊತೆಯಲ್ಲೇ ಮೂಡಿ ನಿಂತ ಕರ್ನಾಟಕ ಏಕೀಕರಣ ಚಳವಳಿಯ ಮೂಲಕ ಕನ್ನಡ ರಾಷ್ಟ್ರೀಯತೆ ಮತ್ತೆ ಒಂದು ಹೊಸ ಭೌತಿಕ ರೂಪವನ್ನೇನೋ ಕಂಡುಕೊಂಡಂತಾಗಿದೆ. ಆದರೆ, ಅದಕ್ಕೊಂದು ಕನ್ನಡದ ಆತ್ಮ ಇನ್ನೂ ಮೂಡಿದಂತಿಲ್ಲ. ಇದಕ್ಕೆ ಟಿಪ್ಪು–ಬ್ರಿಟಿಷರ ಮುಖಾಮುಖಿಯಿಂದಾಗಿ ಕನ್ನಡ ರಾಷ್ಟ್ರೀಯತೆ ಹಲವಾರು ವರ್ಷಗಳ ಕಾಲ ಮುಕ್ಕಾಗಿದ್ದುದು ಎಷ್ಟು ಕಾರಣವೋ; ಅಷ್ಟೇ ಕಾರಣವಾದದ್ದು, ಕರ್ನಾಟಕ ಏಕೀಕರಣ ಚಳವಳಿಯು ಭಾರತದ ರಾಷ್ಟ್ರೀಯ ಆಂದೋಲನದ ಭಾವನಾತ್ಮಕ ಒತ್ತಡಗಳಿಗೆ ಸಿಕ್ಕಿ, ತನ್ನ ಆಶೋತ್ತರಗಳ ವಿಷಯದಲ್ಲಿ ಒಂದು ಸ್ಪಷ್ಟ ಹಾಗೂ [illegible]

ತಾತ್ವಿಕತೆಯನ್ನು ಸಂಘಟಿಸಿಕೊಳ್ಳದೇ ಹೋದದ್ದು. ಇದು ಭಾಷಾ ಆಧಾರದ ಮೇಲೆ ರಚಿತವಾದ ಎಲ್ಲ ರಾಜ್ಯಗಳ ಪೂರ್ವ ರಾಷ್ಟ್ರೀಯತೆಗಳ ಬಗೆಗೂ ಹೇಳಬಹುದಾದರೂ, ಇವುಗಳಿಗೆ ಹೋಲಿಸಿದಂತೆ ಕನ್ನಡದ ಅಸ್ಮಿತೆಯು ಛಿದ್ರವಿಚ್ಛಿದ್ರವಾಗಿ ಹೋಗಿದ್ದ ಹಿನ್ನೆಲೆಯಲ್ಲಿ, ಕರ್ನಾಟಕ ಏಕೀಕರಣ ಚಳುವಳಿ ವಿಶೇಷ ಜಾಗ್ರತೆ ವಹಿಸಬೇಕಾಗಿತ್ತು ಎನ್ನಿಸದಿರದು. ತಾನು ಪೂರ್ಣ ಪ್ರಮಾಣದಲ್ಲಿ ಬೆಳೆಯಲು ಮೂಲ ಸ್ಫೂರ್ತಿಯಾಗಿದ್ದವರೆಗೆ ಭಾಷಾ ರಾಷ್ಟ್ರೀಯತೆಗಳನ್ನು ಮಾನ್ಯ ಮಾಡುತ್ತ ಬಂದ ಭಾರತದ ರಾಷ್ಟ್ರೀಯ ಆಂದೋಲನ, ತನ್ನ ಗುರಿ ಸಮೀಪಿಸುತ್ತಿದ್ದಂತೆ–ಬ್ರಿಟಿಷರು ಅಧಿಕಾರ ಹಸ್ತಾಂತರ ಮಾಡಲು ಸಿದ್ಧರಾಗುತ್ತಿದ್ದಂತೆ–ಅವನ್ನು ಸಂಕುಚಿತ ಆಂದೋಲನಗಳೆಂದು ತಿರಸ್ಕರಿಸತೊಡಗಿದಾಗ, ಮುಂದಿನ ಭಾರತ ಎಂತಹದ್ದಿರಬಹುದೆಂಬುದರ ಸೂಚನೆ ದೊರಕತೊಡಗಿತು.

ಭಾರತದ ರಾಷ್ಟ್ರೀಯ ಆಂದೋಲನಕ್ಕೆ ಒಂದು ತಾತ್ವಿಕತೆ ಒದಗಿಸಿ ಮುನ್ನಡೆಸಿದ ಗಾಂಧೀಜಿ ನೇತೃತ್ವವು, ಭಾರತದ ವಿಭಜನೆಯ ಪ್ರಸ್ತಾಪದಿಂದಾಗಿ ಈ ಆಂದೋಲನ ಎದುರಿಸಿದ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ರಾಜಕೀಯೇತರ ನೆಲೆಗಳಿಗೆ ಸರಿಯುವಂತಾದಾಗ, ಬಹುಭಾಷಾ ರಾಷ್ಟ್ರೀಯತೆಗಳು ಹತ್ತಿಕಲ್ಪಟ್ಟವು. ಅಲ್ಲದೆ, ಆ ಹೊತ್ತಿಗಾಗಲೇ ಬ್ರಿಟಿಷ್ ಬಂಡವಾಳಶಾಹಿಯೊಂದಿಗೆ ಶಾಮೀಲಾಗಿ ಪ್ರವರ್ಧಮಾನಕ್ಕೆ ಬಂದಿದ್ದ ಒಂದು ಅಖಿಲ ಭಾರತ ವ್ಯಾಪಾರಿ ವರ್ಗ, ರಾಷ್ಟ್ರೀಯ ಆಂದೋಲನದ ಮೇಲೆ ಪ್ರಭಾವ ಬೀರುವಷ್ಟು ಪ್ರಬಲಗೊಂಡಿತ್ತು. ಅದು, ಬಹುಭಾಷಾ ರಾಷ್ಟ್ರೀಯತೆಗಳನ್ನಾಧರಿಸಿದ ಆಡಳಿತ ವಿಕೇಂದ್ರೀಕರಣ ನೀತಿಯು ನವಭಾರತ ನಿರ್ಮಾಣಕ್ಕೆ ಮಾರಕ ಎಂಬ ಅಭಿಪ್ರಾಯವನ್ನು ರಾಷ್ಟ್ರೀಯ ನಾಯಕತ್ವದಲ್ಲಿ ಮೂಡಿಸುವಲ್ಲಿ ಯಶಸ್ವಿಯಾಗಿತ್ತು. ಹಾಗಾಗಿಯೇ, ರಾಷ್ಟ್ರೀಯ ಆಂದೋಲನದ ನೇತೃತ್ವ ವಹಿಸಿದ್ದ ಕಾಂಗ್ರೆಸ್ಸನ್ನು ಭಾಷಾ ಪ್ರಾಂತೀಯತೆಗಳ ಆಧಾರದ ಮೇಲೆ ಸಂಘಟಿಸಲು ೧೯೨೦ರಷ್ಟು ಹಿಂದೆಯೇ ನೆಹರೂ ನೇತೃತ್ವದ ಸಮಿತಿ ಮಾಡಿದ್ದ ಶಿಫಾರಸ್ಸನ್ನು ಒಪ್ಪಿ ಪಾಲಿಸಿದ್ದ ಕಾಂಗ್ರೆಸ್, ೧೯೪೦ರ ಹೊತ್ತಿಗೆ ನೆಹರೂ ನೇತೃತ್ವದಲ್ಲೇ ಭಾಷಾವಾರು ಪ್ರಾಂತ್ಯಗಳ ರಚನೆಗೆ ಪ್ರಬಲ ವಿರೋಧ ವ್ಯಕ್ತಪಡಿಸಿತು. ಇದರ ಹಿಂದೆ ಧರ್ಮಾಧಾರಿತವಾಗಿ ನಡೆದಿದ್ದ ರಾಷ್ಟ್ರವಿಭಜನೆ ಹುಟ್ಟಿಸಿದ್ದ ಆತಂಕವೂ ಇದ್ದೀತು. ಅದೇನೇ ಇರಲಿ, ಇಂತಹ ಬಿಕ್ಕಟ್ಟಿನ ಸಮಯದಲ್ಲಿ ಕರ್ನಾಟಕ ಏಕೀಕರಣ ಚಳವಳಿಯು ಭಾರತದ ರಾಷ್ಟ್ರೀಯ ಆಂದೋಲನದೊಂದಿಗೆ ಅನುಸಂಧಾನ ನಡೆಸಿದ ರೀತಿ ನೀತಿಗಳು, ಅದು ಕಟ್ಟಲು ಹೊರಟಿದ್ದ ನವ ಕರ್ನಾಟಕತ್ವದ ಶಿಥಿಲತೆಗೆ ಕಾರಣವಾಯಿತೆನ್ನಬಹುದು.

೧೮೫೦ರಷ್ಟು ಹಿಂದೆಯೇ ಧಾರವಾಡ ಸೀಮೆಯಲ್ಲಿ ಡೆಪ್ಯೂಟಿ ಚೆನ್ನಬಸಪ್ಪ ಅವರಿಂದ ಸಣ್ಣ ಪ್ರಮಾಣದಲ್ಲಿ ಆರಂಭಗೊಂಡ ಕನ್ನಡ ಸ್ವಾಭಿಮಾನ ಚಳುವಳಿ, ೧೮೮೫ರಲ್ಲಿ ಬೆಂಗಳೂರಿನಲ್ಲಿ ಕರ್ನಾಟಕ ಭಾಷಾ ಉಜ್ಜೀವಿನಿ ಸಭಾ; ೧೮೯೦ರಲ್ಲಿ ಧಾರವಾಡದಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘ; ೧೯೧೫ರಲ್ಲಿ ಬೆಂಗಳೂರಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತು; ೧೯೨೦ರಲ್ಲಿ ಧಾರವಾಡದಲ್ಲಿ ಅಖಿಲ ಕರ್ನಾಟಕ ಮಹಾಸಮ್ಮೇಳನ ಮುಂತಾದ ಸಂಸ್ಥೆ–ಸಂಘಟನೆಗಳ ಸ್ಥಾಪನೆಯ ಮೂಲಕ ಕನ್ನಡ ಭಾಷೆ ಮಾತನಾಡುವ ಪ್ರದೇಶಗಳಾದ್ಯಂತ ಸುಪ್ತವಾಗಿದ್ದ ಕನ್ನಡ ರಾಷ್ಟ್ರೀಯತೆಯನ್ನು ಜಾಗೃತಗೊಳಿಸುತ್ತಾ, ಕ್ರಮೇಣ ಕರ್ನಾಟಕ ಏಕೀಕರಣ

ಚಳವಳಿಯಾಗಿ ಬೆಳೆದು ನಿಂತಿತು. ಆದರ ಅದು, ಅಖಿಲ ಭಾರತ ರಾಷ್ಟ್ರೀಯತೆಯ ಚೌಕಟ್ಟಿನಲ್ಲಿ ಕನ್ನಡ ರಾಷ್ಟ್ರೀಯತೆ ಪಡೆದುಕೊಳ್ಳಬಹುದಾದ ರಾಜಕೀಯ ಸ್ವರೂಪದ ಬಗೆಗೆ ಒಂದು ನೀಲ ನಕ್ಷೆ ತಯಾರಿಸುವ ಸಂಘಟಿತ ಪ್ರಯತ್ನವನ್ನು ಮಾಡಲಾಗದ ಸಂದಿಗ್ಧಕ್ಕೆ ಸಿಕ್ಕಿಕೊಂಡಿತು.

ಈ ಬಗ್ಗೆ ಸ್ಪಷ್ಟ ಕಲ್ಪನೆ ಇದ್ದಂತೆ ತೋರಿದ ಕರ್ನಾಟಕ ಕುಲ ಪುರೋಹಿತರೆಂದೇ ಪ್ರಸಿದ್ಧರಾದ ಆಲೂರು ವೆಂಕಟರಾಯರು. ಭಾರತದ ರಾಷ್ಟ್ರೀಯತೆ ಹೊಮ್ಮಿದ ಹೊಸ ಸಂದರ್ಭದಲ್ಲಿ ಕನ್ನಡ ರಾಷ್ಟ್ರೀಯತೆಯನ್ನು 'ಕರ್ನಾಟಕತ್ವ' ಎಂಬ ಪರಿಕಲ್ಪನೆಯ ಮೂಲಕ ಹೊಸದಾಗಿ ನಿರ್ವಚಿಸಿ, ಆ ಬಗೆಗೆ ವ್ಯಾಪಕ ಚಟುವಟಿಕೆಗಳನ್ನು ಕೈಗೊಂಡರು. ಆದರೆ ಅವರು, ಗಾಂಧೀಜಿಯ ಅಸ್ಪೃಶ್ಯತಾ ನಿವಾರಣೆ ಸೇರಿದಂತೆ ಅವರ ರಚನಾತ್ಮಕ ಕಾರ್ಯಕ್ರಮಗಳ ಬಗೆಗೆ ತೀವ್ರ ಭಿನ್ನಾಭಿಪ್ರಾಯ ಹೊಂದಿ ಸಾವರ್ಕರೊಂದಿಗೆ ಗುರುತಿಸಿಕೊಂಡು, 'ಕರ್ನಾಟಕತ್ವ'ವನ್ನು 'ಹಿಂದುತ್ವ'ದ ಮಾದರಿ ಮೇಲೆ ನಿರೂಪಿಸ ಹೊರಟರು. ಇದರಿಂದಾಗಿ ಅವರು ಏಕೀಕರಣ ಚಳವಳಿಯಲ್ಲಿ ಒಂಟಿಯಾಗಿ ಹೋದರು. ಹೀಗಾಗಿ 'ಕರ್ನಾಟಕತ್ವ'ದ ರಾಜಕೀಯ ಸ್ವರೂಪ ನಿರ್ಧಾರಿತವಾಗಬೇಕಿದ್ದ ಸಂವಿಧಾನ ರಚನಾ ಸಭೆಯಲ್ಲಿ 'ಕರ್ನಾಟಕ'ವನ್ನು ಪ್ರತಿನಿಧಿಸಿದವರೆಂದರೆ, ನವಭಾರತದ ಏಕತೆ ಹಾಗೂ ಸಮಗ್ರತೆಯ ಹೆಸರಿನಲ್ಲಿ ಭಾರತದ ಭಾಷಾ ರಾಷ್ಟ್ರೀಯತೆಗಳನ್ನು ಹತ್ತಿಕ್ಕಲು ನಿರ್ಧರಿಸಿದ್ದ ರಾಷ್ಟ್ರೀಯ ಆಂದೋಲನದ ನಾಯಕರ ಪ್ರಭಾವಕ್ಕೆ ಸಿಕ್ಕಿ, 'ಕರ್ನಾಟಕತ್ವ'ದ ಕೆಚ್ಚನ್ನೇ ಕಳೆದುಕೊಂಡಿದ್ದ ಕರ್ನಾಟಕ ಏಕೀಕರಣ ಚಳವಳಿಯ ರಾಜಕೀಯ ನಾಯಕರು. ಉದಾ: ಎಸ್. ನಿಜಲಿಂಗಪ್ಪನವರಂತಹವರು. ಭಾಷಾ ರಾಷ್ಟ್ರೀಯತೆಗಳನ್ನು ಅವುಗಳ ರಾಜಕೀಯ ಹಾಗೂ ಸಾಂಸ್ಕೃತಿಕ ನೆಲೆಗಳಲ್ಲಿ ಅರ್ಥ ಮಾಡಿಕೊಳ್ಳಬಲ್ಲರಾಗಿದ್ದ ಸಮಾಜವಾದಿಗಳು, ಕಾಂಗ್ರೆಸ್ ರಾಜಕಾರಣವನ್ನು ವಿರೋಧಿಸಿ ಸಂವಿಧಾನ ರಚನಾ ಸಭೆಯನ್ನು ಬಹಿಷ್ಕರಿಸಿದ್ದೂ, ಬಹುಭಾಷಾ ರಾಷ್ಟ್ರೀಯತೆಗಳಿಗೆ ಮುಳುವಾಯಿತು. ಇನ್ನು ಸಂವಿಧಾನ ಕರಡು ಸಿದ್ಧ ಪಡಿಸಿದ ಡಾ॥ ಅಂಬೇಡ್ಕರಂತೂ, ದಲಿತರ ಹಿತ ಅಖಿಲ ಭಾರತ ರಾಷ್ಟ್ರೀಯತೆಯಲ್ಲೇ ಅಡಗಿದೆ ಎಂದು ನಂಬಿದವರಾಗಿದ್ದರು.

ಕೆಲವು 'ಮೈಸೂರಿಗ'ರ ವಿರೋಧದ ನಡುವೆಯೂ, ಎ.ಜೆ. ದೊಡ್ಡಮೇಟಿಯವರ ನೇತೃತ್ವದ 'ಕರ್ನಾಟಕ ನಿರ್ಮಾಣ ಶಿಬಿರ' ಹಾಗೂ ಶಂಕರಗೌಡ ಅಳವಂಡಿಯವರ ಅಮರಣಾಂತ ಉಪವಾಸದಂತಹ ಉಪಕ್ರಮಗಳಿಂದಾಗಿ ೧೯೫೪ರ ಹೊತ್ತಿಗೆ, ಮೈಸೂರು ಕಾಂಗ್ರೆಸ್ಸಿಗರೂ ಒಮ್ಮತದಿಂದ ಕರ್ನಾಟಕ ಏಕೀಕರಣವನ್ನು ಒತ್ತಾಯಿಸುವ ಸಂದರ್ಭ ಸೃಷ್ಟಿಯಾಯಿತು. ಅವರು ಏಕೀಕೃತ ಕನ್ನಡ ರಾಜ್ಯಕ್ಕಾಗಿ ಒತ್ತಾಯಿಸಿ ಕಾಂಗ್ರೆಸ್ ಸದಸ್ಯತ್ವ ಹಾಗೂ ತಂತಮ್ಮ ರಾಜಕೀಯ ಸ್ಥಾನಗಳಿಗೆ ಸಾಮೂಹಿಕ ರಾಜೀನಾಮೆ ನೀಡುವ ನಿರ್ಧಾರ ಕೈಗೊಂಡಾಗ, ಕರ್ನಾಟಕ ರಾಜ್ಯೋದಯಕ್ಕೆ ಅಧಿಕೃತ ಚಾಲನೆ ಸಿಕ್ಕಿತು. ಆದರೆ ಆ ಹೊತ್ತಿಗೆ ಅಖಿಲ ಭಾರತ ರಾಷ್ಟ್ರೀಯತೆಯ ಎರಕದಲ್ಲಿ ಹಾಗೂ ಬ್ರಿಟಿಷ್ ಸರ್ಕಾರ ರೂಪಿಸಿದ್ದ ೧೯೩೫ರ ಭಾರತ ಸರ್ಕಾರದ ಕಾಯಿದೆಯ ಮೂಲ ಸ್ಫೂರ್ತಿಯೊಂದಿಗೆ ನಮ್ಮ ಸಂವಿಧಾನ ರೂಪುಗೊಂಡಿತ್ತು. ಅದರ ಅಡಿಯಲ್ಲಿ ಬ್ರಿಟಿಷರ ಕಾಲದ ಪ್ರಾಂತ್ಯಗಳು ಭಾರತದ ಒಕ್ಕೂಟದ ರಾಜ್ಯಗಳಾಗಿ ತಮ್ಮೆಲ್ಲ ಪೂರ್ವಭಾಷಾ ರಾಷ್ಟ್ರೀಯತೆಗಳ ಸ್ವಾಯತ್ತತೆಯನ್ನೂ ಕಳೆದುಕೊಂಡಿದ್ದವು. ಅವೀಗ ಉಪರಾಷ್ಟ್ರೀಯತೆಗಳೆಂಬ ಅಭಿದಾನಕ್ಕೆ ಪಾತ್ರವಾಗಿ, ತಾವೇ ರೂಪಿಸಿದ ರಾಷ್ಟ್ರೀಯ

ಆಂದೋಲನ ಕಟ್ಟಿ ಕೊಟ್ಟ ಸಂವಿಧಾನ ನಿರೂಪಿಸಿದ ಭವ್ಯ ಭಾರತದ ಕಲ್ಪನೆಯ ಭಾರಕ್ಕೆ ಸಿಕ್ಕಿ, ತಮ್ಮ ಅಸ್ಮಿತೆಗಳ ಮೂಲಾಧಾರಗಳನ್ನೇ ಕಳೆದುಕೊಂಡವು.

ಕೇಂದ್ರದ ಪ್ರತಿನಿಧಿಗಳಾದ ರಾಜ್ಯಪಾಲರು ಹಾಗೂ ಕೇಂದ್ರದ ಅಧೀನದಲ್ಲಿರುವ ಅಖಿಲ ಭಾರತ ಸೇವಾ ಸಿಬ್ಬಂದಿಯ (ಐ.ಎ.ಎಸ್) ಕಣ್ಗಾವಲಿನಲ್ಲಿ, ಸಂವಿಧಾನದಿಂದ ಪರಿಮಿತವಾದ ಸಾಮಾಜಿಕ–ಆರ್ಥಿಕ–ಸಾಂಸ್ಕೃತಿಕ ಎಲ್ಲೆಗಳಲ್ಲಷ್ಟೇ ಈ ರಾಜ್ಯಗಳು ಈಗ ಜೀವ ಆಡಿಸಿಕೊಳ್ಳಬಲ್ಲವಾಗಿವೆ. ಇಂತಹ ಒತ್ತಡಗಳಿಂದಾಗಿಯೇ, ೭೦ರ ದಶಕದಿಂದೀಚೆಗೆ ದೇಶದ ಅನೇಕ ಕಡೆ ಪ್ರತ್ಯೇಕತಾ ಚಳುವಳಿಗಳು ತಲೆ ಎತ್ತಿ, ಕೇಂದ್ರ ಬಲದಿಂದ ಅವು ದಮನಕ್ಕೀಡಾಗಿ; ಈಗ ಸುಪ್ತ ಸ್ಥಿತಿಯಲ್ಲಿವೆ. ಸದ್ಯದ ಕಾಶ್ಮೀರ ಸಮಸ್ಯೆ ಕೂಡಾ ಈ ಅದಮ್ಯ ಪ್ರವೃತ್ತಿಯ ಜಟಿಲ ರೂಪವೇ ಆಗಿದೆ. ಈ ಎಲ್ಲದರ ಹಿನ್ನೆಲೆಯಲ್ಲಿ ರಾಜ್ಯಗಳ ಅಧಿಕಾರಗಳನ್ನು ಪುನರ್ ರೂಪಿಸಲು ೮೦ರ ದಶಕದಲ್ಲಿ ರಚಿತವಾದ ಸರ್ಕಾರಿಯ ಆಯೋಗ ಈ ಸಂಬಂಧ ಅನೇಕ ಶಿಫಾರಸ್ಸುಗಳನ್ನು ಮಾಡಿತಾದರೂ–ಅವುಗಳಲ್ಲಿ ಕೆಲವು ತೇಪೆ ತೇಪೆಯಾಗಿ ಜಾರಿಯಾದರೂ– ಒಟ್ಟಾರೆ ಅವು, ಇಂದಿನ ಹೊಸ ಸಂದರ್ಭದಲ್ಲಿ ಅಪ್ರಸ್ತುತಗೊಂಡಿವೆ.

– ೬ –

ಹೀಗೆ ಮೂಡಿ ನಿಂತಿರುವ ಹೊಸ–ಜಾಗತೀಕರಣದ–ಪರಿಸ್ಥಿತಿಯಲ್ಲಿ, ತಮಿಳ್ನಾಡಿನಂತಹ ರಾಜ್ಯಗಳೇನೋ ಮುಕ್ಕಾಗದಂತೆ ಉಳಿದುಕೊಂಡು ಬಂದಿದ್ದ ತಮ್ಮ ಕುಲಪ್ರಜ್ಞೆಯ ಸ್ಫೂರ್ತಿಯೊಂದಿಗೆ; ಈ ಮೊದಲು ವಿವರಿಸಿದಂತೆ, ತಮ್ಮ ಕುಲ ಸ್ವಾಯತ್ತತೆಯನ್ನು ಒತ್ತುವರಿ ಮಾಡಿಕೊಳ್ಳುವ ಈ ಹೊಸ ರಾಷ್ಟ್ರೀಯತೆಯ ಈವರೆಗಿನ ಅನೇಕ ತೆರನ ಪ್ರಯತ್ನಗಳನ್ನು ಸಮರ್ಥವಾಗಿ ಎದುರಿಸುತ್ತ ಬಂದಿವೆ. ತಮಿಳ್ನಾಡಂತೂ, ಕಳೆದ ವಿಧಾನಸಭಾ ಅಧಿವೇಶನದಲ್ಲಿ ತನ್ನ ಕುಲ ರಾಜಕಾರಣದ ಅಗತ್ಯಕ್ಕೆ ತಕ್ಕಂತೆ, ಸಂವಿಧಾನವನ್ನೇ ಪರಿಷ್ಕರಿಸುವ ಹಕ್ಕೊತ್ತಾಯವನ್ನು ರಾಜ್ಯಪಾಲರ ಭಾಷಣದ ಮೂಲಕವೇ ಮಂಡಿಸುವ ರಾಜಕೀಯ ಇಚ್ಛಾಶಕ್ತಿಯನ್ನು ಪ್ರದರ್ಶಿಸಿದೆ. ಆದರೆ ಕರ್ನಾಟಕ ಏಕೀಕರಣ ಸಮಯದಲ್ಲದಾದರೂ ಕುಲಪ್ರಜ್ಞೆಯ ಆಧಾರದ ಮೇಲೆ ಕರ್ನಾಟಕತ್ವದ ಸಮರ್ಥ ಮಾದರಿ ಕಟ್ಟಿಕೊಳ್ಳಲಾಗದೇ ಹೋದ ಕನ್ನಡ ಸಮುದಾಯ, ಸಹಜವಾಗಿಯೇ ಇಂದು ಭಾರತವೆಂಬ ಒಕ್ಕೂಟದಲ್ಲಿ ಸದಾ ಅನುಭವಿಸುತ್ತಿರುವ ಎಲ್ಲ ರೀತಿಯ–ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಹಾಗೂ ರಾಜಕೀಯ–ಒತ್ತುವರಿಗಳಿಗೆ ಸಮರ್ಥ ಪ್ರತಿರೋಧ ವ್ಯಕ್ತಪಡಿಸುವ ಅಸ್ಮಿತೆಯ ಅಂತಃಶಕ್ತಿಯನ್ನೇ ಕಳೆದುಕೊಂಡಿದೆ. ಹಾಗಾಗಿಯೇ ಇಂದು ಕನ್ನಡ ಚಳುವಳಿ ಬೀದಿ ಜಗಳದ ಮಟ್ಟಕ್ಕೆ ಇಳಿದಿದೆ.

ಇದರ ಒಟ್ಟಾರೆ ಪರಿಣಾಮವೆಂದರೆ ಕರ್ನಾಟಕದ ರಾಜಕಾರಣ ತನ್ನ ಕೇಂದ್ರವನ್ನೇ ಕಳೆದುಕೊಂಡು, ಜಾಗತೀಕರಣವೆಂಬ ನವವಸಾಹತುಶಾಹಿಯ ದಲ್ಲಾಳಿಗಳ ಕೈವಶವಾಗಿ, ಕರ್ನಾಟಕದ ಸಾಮಾನ್ಯ ರೈತ ಪ್ರತಿನಿಧಿಸುವ ಸಾಮಾನ್ಯ ಕನ್ನಡಿಗ ತನ್ನ ನಾಡಿನಲ್ಲೇ ಘನತೆಯಿಂದ ಅನ್ನ ಸಂಪಾದಿಸಿಕೊಂಡು ಬದುಕುವ ನೆಲೆಗಳನ್ನು ಕಳೆದುಕೊಳ್ಳುತ್ತಿದ್ದಾನೆ. ಅಭಿವೃದ್ಧಿ ಸೂಚ್ಯಂಕದಲ್ಲಿ ೨೫ ವರ್ಷಗಳ ಹಿಂದೆ ಭಾರತದಲ್ಲಿ ೪–೫ನೇ ಸ್ಥಾನದಲ್ಲಿರುತ್ತಿದ್ದ ಕರ್ನಾಟಕ, ತನ್ನ ಹೆಮ್ಮೆಯ ಮಾಹಿತಿ ತಂತ್ರಜ್ಞಾನ ಕೈಗಾರಿಕೆ ಉತ್ಪತ್ತಿ ಮಾಡುತ್ತಿರುವ ಅಪಾರ ಸಂಪತ್ತಿನ ದ್ವೀಪಗಳ ನಡುವೆಯೂ, ಈಗ ೭–೮ನೇ ಸ್ಥಾನಕ್ಕೆ ಜಾರಿದೆ. ನೆರೆಯ

ಕೇರಳ ಹಾಗೂ ತಮಿಳ್ನಾಡು ಕರ್ನಾಟಕವನ್ನು ದಾಟಿ ಹೋಗಿವೆ. ಆಂಧ್ರ ಆ ಹಾದಿಯಲ್ಲಿದೆ. ಇದನ್ನು ಸಂಕೇತಿಸುವಂತೆ ರಾಜ್ಯದ ಪೂರ್ವ ಗಡಿ, ತೆಲುಗು ರಾಜಕಾರಣದ ಒತ್ತುವರಿಗೆ ಈಡಾಗುತ್ತಿದೆ. ಕಾವೇರಿ ನೀರು ಹಂಚಿಕೆ ವಿಷಯದಲ್ಲಿ ತನ್ನ ವಾದವನ್ನು ಸಮರ್ಥವಾಗಿ ಮಂಡಿಸುವಲ್ಲಿ ರಾಜ್ಯ ಸೋತಿರುವುದು ಈಗ ಸ್ಪಷ್ಟವಾಗಿದೆ. ಇದನ್ನೆಲ್ಲ ಬೀದಿ ಕಾಳಗದ ಮೂಲಕ ಪರಿಹರಿಸಿಕೊಳ್ಳಲು ಸಾಧ್ಯವೇ?

ಹಾಗಾದರೆ, ಇದಕ್ಕೆ ಪರಿಹಾರವೇನು? ಇದಕ್ಕಾಗಿ ಇಂದು ಅಗತ್ಯವಿರುವುದು ನವಭಾರತ ತನ್ನ 'ಪ್ರಗತಿ'ಯ ಹಾದಿಯಲ್ಲಿ ಸೃಷ್ಟಿಸಿಕೊಟ್ಟಿರುವ ಹೊಸ ಸವಾಲುಗಳನ್ನು, ಕರ್ನಾಟಕದ ಮಟ್ಟಿಗೆ ಸಮರ್ಥವಾಗಿ ಎದುರಿಸಬಲ್ಲ ಹೊಸ 'ಕರ್ನಾಟಕತ್ವ'. ನವೋದಿತ ರಾಷ್ಟ್ರೀಯತೆಯ ಸಂಭ್ರಮದಲ್ಲಿ ಕರ್ನಾಟಕ ಏಕೀಕರಣ ಚಳವಳಿ ರೂಪಿಸಿಕೊಂಡ ಕರ್ನಾಟಕತ್ವ ಸಾಂಸ್ಕೃತಿಕ ಪ್ರಾಧಾನ್ಯತೆ ಹೊಂದಿದ್ದು, ಸಾಮಾಜಿಕ–ಆರ್ಥಿಕ ಆಯಾಮಗಳು ಅದರಲ್ಲಿ ಕಾಣೆಯಾಗಿದ್ದವು. ಈ ಮಾದರಿಗೆ ಸ್ಫೂರ್ತಿ ನೀಡಿದ್ದ ಆಲೂರು ವೆಂಕಟರಾಯರ ಗತ ವೈಭವಧಾರಿತ ಶಿಷ್ಟ ಸಾಂಸ್ಕೃತಿಕ ಮಾದರಿ, ಬಿ.ಎಂ. ಶ್ರೀಯವರ *'ಇವಳ ಸೊಬಗನವಳು ತೊಟ್ಟು, ನೋಡ ಬಯಸಿದೆ; ಅವಳ ತೊಡುಗೆ ಇವಳಿಗಿಟ್ಟು ಹಾಡ ಬಯಸಿದೆ'* ರೀತಿಯ ಇಂಗ್ಲಿಷ್–ಕನ್ನಡ ಸಂಸ್ಕೃತಿಗಳ ಸಮನ್ವಯದ ಆಧುನೀಕರಣದ ಮಾದರಿ ಹಾಗೂ ಕುವೆಂಪು ಅವರ *'ನೃಪತುಂಗ ಚಕ್ರವರ್ತಿ; ಪಂಪ ಅದರ ಮುಖ್ಯಮಂತ್ರಿ'* ಎಂದು ಭಾವಿಸಿಕೊಂಡು *'ನೀನೆಲ್ಲಿದ್ದರೆಯೇನ್, ಅದೆ ಕರ್ನಾಟಕ'* ಎಂದು ಹೇಳುವ ಭಾವನಾತ್ಮಕ ಮಾದರಿ– ಇವು ಈ ೫೦ ವರ್ಷಗಳಲ್ಲಿ ಪ್ರಕಟಪಡಿಸಿರುವ ಮಿತಿಗಳನ್ನು ಮನಗಂಡು, ಇಂದು ಸಾಮಾಜಿಕ–ಆರ್ಥಿಕ–ರಾಜಕೀಯ ಆಯಾಮಗಳನ್ನೊಳಗೊಂಡ ಹೊಸ ಮಾದರಿಯೊಂದನ್ನು ರೂಪಿಸಿಕೊಳ್ಳುವ ತುರ್ತು ಅಗತ್ಯವಿದೆ.

ಇದರ ಬೀಜ ಮಾದರಿ ಈ ಮೊದಲೇ ನಿರೂಪಿಸಿದಂತೆ ಕರ್ನಾಟಕದ ಪರಂಪರೆಯಲ್ಲೇ ಇದೆ. ಅದೇ ಬಸವಣ್ಣನ ಮಾದರಿ. ಈ ಮಾದರಿಯನ್ನು, ಬಸವಣ್ಣನನ್ನು ಒಂದು ನಿರ್ದಿಷ್ಟ ಜಾತಿಯ ನಾಯಕತ್ವದಿಂದ ಬಿಡಿಸಿಕೊಂಡು ಕರ್ನಾಟಕದ ಕುಲ ನಾಯಕನನ್ನಾಗಿ ಮಾಡಿಕೊಳ್ಳುವ ಆಂದೋಲನದ ಕುಲುಮೆಯಲ್ಲಿ ರೂಪಿಸಬೇಕಿದೆ. ಇಂತಹ ಆಂದೋಲನ ಮಾತ್ರ ನಿಜವಾದ ಕನ್ನಡ ಚಳವಳಿಯಾಗಿ ಬೆಳೆದು, ಭಾರತದ ಏಕತೆ, ಸಮಗ್ರತೆ ಹಾಗೂ ಅಭ್ಯುದಯದ ಜೊತೆ ಜೊತೆಗೆ ಕರ್ನಾಟಕದ, ಅಂದರೆ ಕನ್ನಡಿಗನ ವ್ಯಕ್ತಿತ್ವದ ಏಕತೆ, ಸಮಗ್ರತೆ ಹಾಗೂ ಅಭ್ಯುದಯವನ್ನು ಸಾಧಿಸಬಲ್ಲದು.

ಇಂತಹ ಆಂದೋಲನವೊಂದಕ್ಕಾಗಿ ಕರ್ನಾಟಕ ಕಾಯುತ್ತಿದೆ.

(ವಿಕ್ರಾಂತ ಕರ್ನಾಟಕ, ೧೬ ಫೆಬ್ರುವರಿ ೨೦೦೭)

೨. ಕನ್ನಡ ಕಟ್ಟುವ ಕಾಯಕ

ಕನ್ನಡವನ್ನು ಕೆಡವುವ ಕಾರ್ಯಕ್ರಮ ಆರಂಭವಾಗಿರುವ ಈ ಹೊತ್ತಿನಲ್ಲಿ ಕನ್ನಡವನ್ನು ಕಟ್ಟುವ ಕಾಯಕದ ಬಗ್ಗೆ ಬರೆಯುವುದು ಮುಜುಗರದ ಕೆಲಸವಷ್ಟೇ ಅಲ್ಲ, ಅಸಂಬದ್ಧ ಕೆಲಸವೂ ಅನಿಸುತ್ತದೆ. ಆದರೆ ಕನ್ನಡ ಸಂಸ್ಕೃತಿ ಚರಿತ್ರೆ ಇಂತಹ ಹಲವಾರು ಕಾಲಘಟ್ಟಗಳನ್ನು ಹಾದು ಬಂದಿರುವುದರಿಂದ ಕನ್ನಡಕ್ಕೆ ಇಂದು ಒದಗಿರುವ ಬಿಕ್ಕಟ್ಟನ್ನು ಆತ್ಯಂತಿಕವೆಂದೇನೂ ತಿಳಿಯದೆ, ಅದನ್ನು ಎದುರಿಸುವ ಹಾಗೂ ಪರಿಹರಿಸುವ ಬಗೆಗಳ ಬಗ್ಗೆ ಯೋಚಿಸುವುದರ ಮೂಲಕ ಈ ಮುಜುಗರ ಹಾಗೂ ಅಸಂಬದ್ಧತೆಯ ಅನಿಸಿಕೆಗಳನ್ನು ಮೀರಬೇಕಾಗಿದೆ. ಕನ್ನಡಕ್ಕೆ ಇಂದು ಒದಗಿರುವ ಬಿಕ್ಕಟ್ಟನ್ನು ವಿವರಿಸುವ ಅಗತ್ಯವಿಲ್ಲದಷ್ಟು, ಅದು ಎದ್ದು ಕಾಣುವಂತಿದೆ. ಜಾಗತೀಕರಣದ ಭರಾಟೆಯಲ್ಲಿ ಸ್ಥಳೀಯವಾದದ್ದೆಲ್ಲವೂ ಬೆಲೆ ಕಳೆದುಕೊಳ್ಳುತ್ತಿದ್ದಂತೆ, ಕನ್ನಡವೂ ಒಂದು ನಿರುಪಯೋಗಿಯಾದ ಗ್ರಾಹಕ ವಸ್ತುವಿನಂತೆ, ಸಾರ್ವಜನಿಕ ಜೀವನವೆಂಬ ಇಂದಿನ ಮಾರುಕಟ್ಟೆಯಿಂದ ಅದನ್ನು ಹೊರ ಹಾಕಲ್ಪಡುವ ಪ್ರಕ್ರಿಯೆ ಆರಂಭವಾಗಿದೆ. ಜಾಗತೀಕರಣದ ಪ್ರಕ್ರಿಯೆಯ ಒಂದು ಪ್ರಾತಿನಿಧಿಕ ಸಾಧನದಂತಿರುವ ಕಂಪ್ಯೂಟರ್‌ನ ಕಾರ್ಯನಿರ್ವಹಣಾ ಭಾಷೆಯನ್ನು ಕನ್ನಡೀಕರಿಸುವ ಎಲ್ಲ ಪ್ರಯತ್ನಗಳನ್ನೂ ವಿಫಲಗೊಳಿಸುತ್ತಿರುವ ಮೈಕ್ರೋಸಾಫ್ಟ್ ಎಂಬ ಅಂತಾರಾಷ್ಟ್ರೀಯ ಕಂಪನಿಯಿಂದ ಹಿಡಿದು, ಕರ್ನಾಟಕದಲ್ಲಿ ಕನ್ನಡ ಶಾಲೆಗಳಲ್ಲಿ ಇಂಗ್ಲಿಷನ್ನು ಒಂದನೇ ತರಗತಿಯಿಂದಲೇ ಕಡ್ಡಾಯವಾಗಿ ಕಲಿಸಬೇಕೆಂದು ಇದ್ದಕ್ಕಿದ್ದಂತೆ ಜ್ಞಾನೋದಯವಾದಂತೆ ಚಳುವಳಿ ಹೂಡಿದ ಕನ್ನಡದ ಕೆಲವು ಚಿಂತಕವರೇಣ್ಯರವರೆಗೆ ಆವರಿಸಿಕೊಂಡಿರುವ ಅಂತಾರಾಷ್ಟ್ರೀಯ ರಾಜಕಾರಣಕ್ಕೆ ಬಲಿಯಾಗಿ; ಕನ್ನಡವು ಕ್ರಮೇಣ ಇತಿಹಾಸದ ಬುಟ್ಟಿಗೆ ಸೇರಲು ಸಿದ್ಧವಾಗುತ್ತಿರುವ ವಸ್ತುವಾಗಿ ಕಾಣತೊಡಗಿದೆ.

ಈ ಕುರಿತು ನಮ್ಮ ಕನ್ನಡ ಚಳುವಳಿಕಾರರೂ ಸೇರಿದಂತೆ, ಸ್ವಾತಂತ್ರ್ಯೋದಯದ ಹುಮ್ಮಸ್ಸಿನೊಂದಿಗೆ ಆರಂಭವಾದ ಕನ್ನಡದ ನವೋದಯದ ಕಾಲದಿಂದ ಕನ್ನಡದ ಪರವಾಗಿ ಕೆಲಸ ಮಾಡಿಕೊಂಡು ಬಂದ ಯಾವ ಶಕ್ತಿಗಳೂ– ಔಪಚಾರಿಕವೆಂಬಂತೆ ಎತ್ತಿದ ಆಕ್ಷೇಪಣೆಗಳ ಹೊರತಾಗಿ– ನಿರ್ಣಾಯಕ ಧ್ವನಿ ಎತ್ತದೆ, ಜಾಗತೀಕರಣದ ಒತ್ತಡಗಳಿಗೆ ಮಣಿಯುತ್ತಿರುವುದು ನಿಜವಾಗಿಯೂ ಆತಂಕಕಾರಿ ಬೆಳವಣಿಗೆಯಾಗಿದೆ. ಈಗ ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡರ ಆಡಳಿತ ನೀತಿಗಳೂ ಅಧಿಕೃತವಾಗಿ ಜಾಗತೀಕರಣದ ಪರವಾಗಿರುವುದರಿಂದ, ಈ ವಿಷಯದಲ್ಲಿ ಸರ್ಕಾರದಿಂದ ಪ್ರತಿರೋಧವಿರಲಿ, ಸಹಾನುಭೂತಿಯನ್ನೂ ನಿರೀಕ್ಷಿಸಲಸಾಧ್ಯವಾಗಿದೆ. ಸ್ವತಂತ್ರ ಭಾರತದ ಇತಿಹಾಸದಲ್ಲಿ ಮೊದಲ ಬಾರಿಗೆ ಕರ್ನಾಟಕದಲ್ಲಿ ಇಂಗ್ಲಿಷ್ ಪರ ಚಳುವಳಿಯೊಂದು

ಮೆಲುದನಿಯಲ್ಲಿ ಆರಂಭವಾಗಿ, ತನ್ನನ್ನು ಸಮರ್ಥಿಸಿಕೊಳ್ಳಲು ನೀಡಿದ ಕಾರಣಗಳ ಮೂಲಕ ಪರೋಕ್ಷವಾಗಿ ಕನ್ನಡವನ್ನು ಸಾಮಾಜಿಕವಾಗಿ ಅಪ್ರಸ್ತುತಗೊಳಿಸುವ ಚಳುವಳಿಯಾಗಿ ಬೆಳೆದು ತನ್ನ ಉದ್ದೇಶವನ್ನೇ– ಮೇಲ್ನೋಟಕ್ಕೆ ಅದೆಷ್ಟೇ ವ್ಯಾವಹಾರಿಕ ಸಾಧುತ್ವ ತೋರಿದರೂ– ಅನುಮಾನಾಸ್ಪದಗೊಳಿಸಿಕೊಂಡ ವಿಚಿತ್ರ ಘಟನೆ ನಡೆದಿದೆ.

ಕಂಪ್ಯೂಟರ್ ತಂತ್ರಜ್ಞಾನವನ್ನು ದೇಶೀಯಗೊಳಿಸಿಕೊಳ್ಳುವ ವಿಫುಲ ಸಾಧ್ಯತೆಗಳಿರುವ ತಂತ್ರಾಂಶವುಳ್ಳದ್ದೆಂದು ಮತ್ತು ಬಹುತೇಕ ಇಂಗ್ಲಿಷೇತರ ದೇಶಗಳು ಅಳವಡಿಸಿಕೊಂಡಿವೆಯೆಂದು ಹೇಳಲಾದ ಲ್ಯೂನಾಕ್ಸ್ ಕಂಪನಿಯ ಉತ್ಪನ್ನಗಳಿಗೆ ಬದಲಾಗಿ; ದೇಶೀ ಭಾಷೆಗಳನ್ನು ಇಂಗ್ಲಿಷೀಕರಿಸಿಯೇ ಕೃತಕವಾದ ದೇಶಿ ತಂತ್ರಾಂಶವನ್ನು ಮಾತ್ರ ಅಭಿವೃದ್ಧಿಪಡಿಸಲು– ಅದೂ ಒಲ್ಲದ ಮನಸ್ಸಿನಿಂದಲೇ–ಸಾಧ್ಯವಿರುವ ತಂತ್ರಜ್ಞಾನವನ್ನು ಕೊಡ ಮಾಡುವ ಮೈಕ್ರೋಸಾಫ್ಟ್ ಕಂಪನಿಯೊಂದಿಗೇ ಭಾರತದ ಸರ್ಕಾರಗಳು ಶಾಮೀಲಾಗಿರುವಂತೆ ಮಾಡಿರುವ ಶಕ್ತಿಗಳೇ, ಕನ್ನಡವನ್ನು ಇಂದು ಸಾಮಾಜಿಕವಾಗಿ ಅಪ್ರಸ್ತುತಗೊಳಿಸುವಂತಹ ಚಳುವಳಿಯ ಹಿಂದೆ ಇರುವುದು ಕೂಡಾ. ಇದನ್ನು ಅರ್ಥ ಮಾಡಿಕೊಳ್ಳದ ಹೊರತು ಇಂದು ಕನ್ನಡ ಎದುರಿಸುತ್ತಿರುವ ಬಿಕ್ಕಟ್ಟನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಿಲ್ಲ. ಹಾಗೇ ಅದಕ್ಕೆ ಪರಿಹಾರ ಮಾರ್ಗಗಳೂ ಕಾಣುವುದಿಲ್ಲ. ನಮ್ಮ ಎಫ್.ಎಂ. ಖಾಸಗಿ ರೇಡಿಯೋ ಹಾಗೂ ವಾಹಿನಿಗಳಲ್ಲಿ ಚಾಲ್ತಿಗೆ ಬಂದಿರುವ ಚಪಲ ಚಿತ್ತ ಕಂಗ್ಲಿಷನ್ನು ಮತ್ತು ಕೆಲವು ಟಿ.ವಿ.ವಾಹಿನಿಗಳಲ್ಲಿ ಕನ್ನಡ ವಾರ್ತೆಗಳ ಪ್ರಸಾರದ ಜೊತೆಗೇ ಕೆಳಗೆ ಇಂಗ್ಲಿಷ್‌ನಲ್ಲಿ ವಾರ್ತೆಗಳನ್ನು ಪ್ರಕಟಿಸುವ ಮತ್ತು ಕನ್ನಡ ಚಲನಚಿತ್ರಗಳ ಜಾಹೀರಾತುಗಳಲ್ಲಿ ಅವುಗಳಿಗೆ ಇಂಗ್ಲಿಷ್ ಉಪಶೀರ್ಷಿಕೆಗಳನ್ನು ನೀಡುವ ಹೊಸ ಮಾರುಕಟ್ಟೆ ಪ್ರವೃತ್ತಿಯನ್ನು; ಹೊಸ ವರ್ಗ ಹಿತಾಸಕ್ತಿಗಳ 'ಆಟ'ವೆಂದು ನೋಡದೆ, ಅವನ್ನು ಹೊಸ ಕಾಲದ ಸಹಜ ಬೆಳವಣಿಗೆಗಳೆಂಬಂತೆ ಸಾಂಸ್ಕೃತಿಕ ಅಧ್ಯಯನದ ಮನ್ನಣೆ ನೀಡಿ ಕನ್ನಡ ಉಳಿಯುವುದೇ ಹೀಗೆ ಎಂದು ಪವಿತ್ರೀಕರಿಸಲು ಇದೇ ಶಕ್ತಿಗಳು ನಡೆಸಿರುವ ಪ್ರಯತ್ನಗಳನ್ನು, ಕೆಲಸವಿಲ್ಲದ ಬಡಗಿಯ ಕೆಲಸಗಳೆಂದು ಉಪೇಕ್ಷಿಸಲಾಗದು.

ಮೊದಲೇ ಹೇಳಿದಂತೆ, ಇತಿಹಾಸದುದ್ದಕ್ಕೂ ಕನ್ನಡ ಇಂತಹ ಬಿಕ್ಕಟ್ಟುಗಳನ್ನು ಎದುರಿಸುತ್ತಲೇ ಬಂದಿದೆ. ಬಹುಶಃ ಭಾರತದ ಎಲ್ಲ ಪ್ರಾದೇಶಿಕ ಭಾಷೆಗಳೂ. ಆದರೆ ಕನ್ನಡದ ಸಮಸ್ಯೆ ಬೇರೆ ತೆರನದ್ದೇ ಆಗಿದೆ ಎಂದು ತೋರುತ್ತದೆ. ಅದರ ಇತಿಹಾಸವನ್ನು ಅದರ ಸೋದರ ಭಾಷೆಗಳ ಇತಿಹಾಸದೊಂದಿಗೆ ನೋಡಿದಾಗ; ವಿಶೇಷವಾಗಿ ತಮಿಳಿನ ಇತಿಹಾಸದ ಜೊತೆ ಹೋಲಿಸಿದಾಗ. ತಮಿಳು ಬಿಟ್ಟರೆ ಕನ್ನಡವೇ ತಾನೆ ಭಾರತದ ಅತಿ ಪ್ರಾಚೀನ ಸಂಸ್ಕೃತೇತರ ಭಾಷೆ? ತಮಿಳು ಮೂಲ ದ್ರಾವಿಡದ ಕೂಸಾಗಿ, ಹೊರಗಿನ ಸಾಂಸ್ಕೃತಿಕ ಪ್ರಭಾವವನ್ನು ಆರಂಭದಲ್ಲೇ ತನ್ನ ರಾಜಕೀಯ ಅಸ್ಮಿತೆಯ ಪ್ರಶ್ನೆಯನ್ನಾಗಿ ನೋಡಿ; ಅದರ ವಿರುದ್ಧ ಮುನ್ನೆಚ್ಚರಿಕೆ ವಹಿಸಿತು. ಆದರೆ ಕನ್ನಡ ಭೌಗೋಳಿಕವಾಗಿ ಒಂದು ಸಾಂಸ್ಕೃತಿಕ ಗಡಿ ಪ್ರದೇಶದಲ್ಲಿದ್ದುದರ ಕಾರಣದಿಂದಾಗಿ ಹೊರಗಿನ ಪ್ರಭಾವಕ್ಕೆ ಅನಿವಾರ್ಯವಾಗಿ ಸಿಕ್ಕಿ, ಎಚ್ಚರದ ಮಾರ್ಗದ ಬದಲಾಗಿ ಅನುಸಂಧಾನ ಮಾರ್ಗ ಹಿಡಿಯಿತು. ಈ ಎರಡು ಭಾಷೆಗಳು ಲಿಪಿಯನ್ನು ಪಡೆದುಕೊಂಡ ರೀತಿ ನೀತಿಗಳು ಇದನ್ನು ಇನ್ನಷ್ಟು ಸ್ಪಷ್ಟಗೊಳಿಸುತ್ತದೆ.

ಬ್ರಾಹ್ಮಿಲಿಪಿಯ ಎಲ್ಲ ೫೭ ಅಕ್ಷರಗಳನ್ನು 'ಅಶೋಕ ಬ್ರಾಹ್ಮಿ' ರೂಪದಲ್ಲಿ ಸ್ವೀಕರಿಸಿದ

ಕನ್ನಡ, ಬ್ರಾಹ್ಮಿ ಲಿಪಿಯ ಹಿಂದಿನ ಎಲ್ಲ ಸಾಂಸ್ಕೃತಿಕ ಪ್ರಭಾವಗಳಿಗೂ ಉದಾರವಾಗಿ ತನ್ನೊಳಕ್ಕೆ ಪ್ರವೇಶ ಮಾಡಲು ಅವಕಾಶ ಮಾಡಿಕೊಟ್ಟರೆ; ತಮಿಳು ಈ ಕಾರಣಕ್ಕಾಗಿಯೇ ಲಿಪಿಯನ್ನೇ ನಿರಾಕರಿಸಿ ಬಹುಕಾಲ ಬದುಕಿ, ಲಿಪಿ ಬೇಕೆನ್ನಿಸಿದಾಗ, ತನ್ನ ಸಂಸ್ಕೃತಿ ವಿಶಿಷ್ಟ 'ಅಭಿವ್ಯಕ್ತಿ'ಗಷ್ಟೇ ಬೇಕಾದ ೨೬ ಅಕ್ಷರಗಳನ್ನು 'ತಮಿಳು ಬ್ರಾಹ್ಮಿ' ರೂಪದಲ್ಲಿ ಸ್ವೀಕರಿಸಿತು. ಇದನ್ನು ತಮಿಳು ಸಂಸ್ಕೃತಿಯ ಸಂಕುಚಿತತೆ ಎನ್ನುವವರೂ ಉಂಟು. ಆದರೆ ಆ ಉದಾರತೆಯಿಂದ ಕನ್ನಡ ಸಂಸ್ಕೃತಿ ಪಡೆದಿದ್ದೇನು, ತಮಿಳು ಸಂಸ್ಕೃತಿ ಈ ತನ್ನ ಸಂಕುಚಿತತೆಯಿಂದಾಗಿ ಕಳೆದುಕೊಂಡಿದ್ದೇನು ಎಂದು ಇಂದು ನಿಂತು ಯೋಚಿಸಿದಾಗ, ಈ ಉದಾರತೆ ಮತ್ತು ಸಂಕುಚಿತತೆಗಳೆಂಬ ಭಾವನೆಗಳೇ ಬ್ರಾಹ್ಮಿ ಲಿಪಿ ಮೂಲಕ ಕನ್ನಡ ಸಂಸ್ಕೃತಿಯೊಳಕ್ಕೆ ನುಸುಳಿಬಂದ ಅಪಕಲ್ಪನೆಗಳೇನೋ ಎಂದೆನ್ನಿಸದಿರದು! ಒಂದೇ ತಾಯಿಯ ಮಕ್ಕಳಾದರೂ ತಮಿಳು ಮತ್ತು ಕನ್ನಡ ಸಂಸ್ಕೃತಿಗಳ ನಡುವೆ ಎದ್ದು ಕಾಣುವ ಭಿನ್ನತೆಗಳ ಮೂಲ, ಇಲ್ಲೇ ಇದೆಯೆಂದು ಕೆಲವು ಭಾಷಾ ಸಂಸ್ಕೃತಿ ತಜ್ಞರು ಗುರುತಿಸುತ್ತಾರೆ. ಮುಖ್ಯವಾಗಿ ತಮಿಳರಲ್ಲಿ ಒಂದು ಆಳವಾದ ಕುಲಪ್ರಜ್ಞೆ ಇದ್ದರೆ, ಕನ್ನಡಿಗರಲ್ಲಿ ಅದು ಶಿಥಿಲವಾಗಿದೆ. ಕಾವೇರಿಯಿಂದ (ವಾಸ್ತವವಾಗಿ ಅದರಾಚೆಯಿಂದಲೂ) ಗೋದಾವರಿ (ಬಹುಶಃ ಅದರಾಚೆಗೂ)ವರೆಗಿದ್ದ ಕನ್ನಡ ಇಂದು ಇಷ್ಟು ಕುಗ್ಗಿ ಹೋಗಿರುವುದಕ್ಕೆ ಐತಿಹಾಸಿಕವಾಗಿ ಕನ್ನಡ ಒಂದು ಸಂಸ್ಕೃತಿಯಾಗಿ ಬೆಳೆಯುವಲ್ಲೇ, ಹೀಗೆ ಅದರ ಆಂತರಿಕ ಪ್ರತಿರೋಧ ಶಕ್ತಿ ದುರ್ಬಲವಾಗಿದ್ದುದು ಕಾರಣವೆಂದೂ ಹೇಳಲಾಗುತ್ತದೆ. ಇದನ್ನೀಗ ನಾವು ಉದಾರತೆ, ಸರ್ವ ಭಾಷಾ ಸಹಿಷ್ಣುತೆ, ಸಹೃದಯ ಆತಿಥೇಯತೆ ಎಂದೆಲ್ಲ ಕರೆದುಕೊಂಡು ಪೆಚ್ಚು ಪೆಚ್ಚಾಗಿ ಹೆಮ್ಮೆ ಪಡುತ್ತಿದ್ದೇವೆ.

ಕನ್ನಡಿಗರ ಈ ತರಹ 'ಸದ್ಗುಣ'ಗಳೇ ಕನ್ನಡವೆಂಬುದು ಸಂಸ್ಕೃತ ಪರಂಪರೆಯೆದುರು ಒಂದು ಸಂಪೂರ್ಣ ದೇಶಿ ಪರಂಪರೆಯಾಗಿ ಬೆಳೆಯದಿರಲು ಹಾಗೂ ಆ ಪರಂಪರೆಯೊಂದಿಗೆ ತನ್ನ ಮೂಲ ಸಂಸ್ಕೃತಿಗೆ ಅನಾನುಕೂಲಕರವಾದ ರೀತಿಯಲ್ಲೇ ಅನುಸಂಧಾನ ಮಾಡಿಕೊಂಡು ಬಂದು, ತನ್ನ ಸಾಮಾಜಿಕ ಹಾಗೂ ಸಾಂಸ್ಕೃತಿಕ ವ್ಯಕ್ತಿತ್ವವನ್ನು ಇಕ್ಕಟ್ಟಿಗೆ ಸಿಲುಕಿಸಿಕೊಳ್ಳಲು ಕಾರಣಗಳಾಗಿವೆ ಎಂದು ಕೆಲವು ಸಂಸ್ಕೃತಿ ಚಿಂತಕರು ಅಭಿಪ್ರಾಯಪಡುತ್ತಾರೆ. (ನೋಡಿ: 'ಕರ್ನಾಟಕ ಸಂಸ್ಕೃತಿ ಸಮೀಕ್ಷೆ': ಕೆ.ಪಿ. ಪೂರ್ಣಚಂದ್ರ ತೇಜಸ್ವಿ: ಸಂಕ್ರಮಣ: ೬೦) ಈ ದೃಷ್ಟಿಯಿಂದ ಇತಿಹಾಸದಲ್ಲಿ ಆಂಡಯ್ಯ ಮಾಡಿದ ಸಾಹಿತ್ಯಿಕ ಪ್ರಯೋಗದ ಹಿಂದಿನ ಕೆಚ್ಚು ಕೇವಲ ಕನ್ನಡಾಭಿಮಾನದಿಂದ ಮೂಡಿದ್ದು ಎಂದು ಯಾರಾದರೂ ಹೇಳಿದರೆ ಅದಕ್ಕಿಂತ ಪೆದ್ದು ಪೆದ್ದಾದ ಚರಿತ್ರೆಯ ಓದು ಮತ್ತೊಂದಿರಲಾರದು! ಸಂಸ್ಕೃತದೊಂದಿಗೆ ಮಾತ್ರವಲ್ಲ, ತನ್ನ ಸಂಪರ್ಕಕ್ಕೆ ಬಂದ ಎಲ್ಲ ಭಾಷಾ ಸಂಸ್ಕೃತಿಗಳೊಂದಿಗೂ ಇದೇ ತರಹ ಅನುಸಂಧಾನ ನಡೆಸುವ ಕನ್ನಡದ ಹುಟ್ಟು ದೌರ್ಬಲ್ಯದಿಂದಾಗಿಯೇ, ಇಂದು ಕನ್ನಡ ಭಾಷಾ ಪ್ರದೇಶವೆಂದು ಅಧಿಕೃತವಾಗಿ ಗುರುತಿಸಲಾಗಿರುವ ಕರ್ನಾಟಕದಲ್ಲಿ ಕನ್ನಡ ಭಾಷಾ ಜನರ ಸಾಂದ್ರತೆ, ಇತರ ರಾಜ್ಯಗಳಲ್ಲಿನ ಸಂಬಂಧಿತ ಪ್ರಧಾನ ಭಾಷಾ ಜನರ ಸಾಂದ್ರತೆಗಿಂತ ಬಹಳ ಕಡಿಮೆ ಇರುವುದು. (ಇತರ ರಾಜ್ಯಗಳಲ್ಲಿ ಶೇಕಡಾ ೮೦ರಿಂದ ೯೦ರಷ್ಟಿದ್ದರೆ, ಕರ್ನಾಟಕದಲ್ಲಿ ಶೇಕಡಾ ೬೦ ರಿಂದ ೭೦ರ ಮಧ್ಯೆ ಇದೆ!)

ಬಹುಶಃ ಇಂತಹ 'ಉದಾರವಾದಿ' ಭಾಷಾ ವಾತಾವರಣದಿಂದಾಗಿಯೇ, ಕರ್ನಾಟಕದಲ್ಲಿ

ಸ್ವತಃ ಕನ್ನಡದ ಮಕ್ಕಳು ಯಾವುದೇ ಮಟ್ಟದ ಒಂದು ಭಾಷೆಯಾಗಿಯೂ ಕನ್ನಡದ ಒಂದಕ್ಷರವನ್ನೂ ಕಲಿಯದೇ ಶಾಲಾ ಶಿಕ್ಷಣವನ್ನು ಮುಗಿಸುವಂತೆ ಇದ್ದ ಪರಿಸ್ಥಿತಿ ೧೯೮೦ರ ಹೊತ್ತಿಗೆ ಸ್ಫೋಟಗೊಂಡು, ಗೋಕಾಕ್ ವರದಿ ಹಾಗೂ ಅದರ ಅನುಷ್ಠಾನಕ್ಕಾಗಿ ದೊಡ್ಡ ಭಾಷಾ ಆಂದೋಲನ ಸೃಷ್ಟಿಯಾದದ್ದು. ಹಾಗೇ, ಈಗ ಜಗತ್ತಿನ ಯಾವ ಸರ್ಕಾರದ ಅಧಿಪತಿಗೂ ಇಲ್ಲದಿರುವ ಭಾಷಾ ಕೀಳರಿಮೆ ನಮ್ಮ ರಾಜ್ಯದ ಸದ್ಯದ ಮುಖ್ಯಮಂತ್ರಿಗೆ ಉಂಟಾಗಿ, 'ಮುಖ್ಯಮಂತ್ರಿಯಾಗಿ ನನಗೇ ಇಂಗ್ಲಿಷ್ ಸರಿಯಾಗಿ ಮಾತನಾಡಲಾಗದೆ ಅವಮಾನ ಉಂಟಾಗುತ್ತಿರುವಾಗ, ಗ್ರಾಮಾಂತರ ಪ್ರದೇಶದ ಜನಸಾಮಾನ್ಯರ ಗತಿಯೇನು!' ಎಂದು ಕರುಣಾಜನಕವಾಗಿ ಅಲವತ್ತುಕೊಳ್ಳುತ್ತಾ, ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಸುವ ತಮ್ಮ ಸರ್ಕಾರದ ತೀರ್ಮಾನವನ್ನು ಸಮರ್ಥಿಸಿಕೊಳ್ಳುವ ದುಃಸ್ಥಿತಿ ಉಂಟಾದುದು!

ಹೀಗೆ ಕರ್ನಾಟಕದಲ್ಲಿ ಕನ್ನಡದ ಬಿಕ್ಕಟ್ಟಿನ ಪ್ರಶ್ನೆ ಸಾಂಸ್ಕೃತಿಕ ಪ್ರಶ್ನೆ ಮಾತ್ರವಾಗಿರದೆ; ಮೂಲತಃ ಒಂದು ಐತಿಹಾಸಿಕ ಪ್ರಶ್ನೆಯಾಗಿ ಆರಂಭವಾಗಿ, ಒಂದು ಜನಾಂಗೀಯ ದೌರ್ಬಲ್ಯದ ಪ್ರಶ್ನೆಯಾಗಿ ಬೆಳೆದಿದೆ! ಈ ಹಿನ್ನೆಲೆಯಲ್ಲೇ, ಇತರ ರಾಜ್ಯಗಳಲ್ಲಿ ಈಗ ಇಂಗ್ಲಿಷ್ ಕುರಿತಂತೆ ಕರ್ನಾಟಕದಲ್ಲಿ ಕಂಡು ಬರುವ ಅಧಿಕೃತ ನಿಲುವೇ ವ್ಯಕ್ತವಾಗುತ್ತಿದ್ದರೂ, ಕರ್ನಾಟಕದಲ್ಲಿ ಕನ್ನಡ ಭಾಷೆಯನ್ನು ಅವಕಾಶ ಸಿಕ್ಕರೆ ಸಾಕು ಅಧಿಕೃತವಾಗಿಯೇ ಗಡಿಪಾರು ಮಾಡಲು ಸಿದ್ಧವಿರುವ ಪಟ್ಟಭದ್ರ ಹಿತಾಸಕ್ತಿಗಳನ್ನು ಪೋಷಿಸುವ ಮತ್ತು ಕೆಲವರು ನಿರಾಂತಕವಾಗಿ ಅವುಗಳ ದಲ್ಲಾಳಿಗಳಾಗಿ ಕೆಲಸ ಮಾಡುವ ವಾತಾವರಣ ಸದಾ ಇರುತ್ತ ಬಂದಿರುವುದರಿಂದ; ಬೇರೆ ರಾಜ್ಯಗಳಲ್ಲಿನ ಭಾಷಾ ನಿರಾಂತಕ ಇಲ್ಲಿ ಸಲ್ಲದು ಎಂಬ ಎಚ್ಚರಿಕೆಯಲ್ಲೇ ನಾವಿರುವ ಪರಿಸ್ಥಿತಿ ಇದೆ. ಹಾಗಾಗಿ ಕನ್ನಡ ಕಟ್ಟುವ ಕೆಲಸವನ್ನು ಸದಾ ಈ ಎಚ್ಚರದೊಂದಿಗೆ ಮಾಡಬೇಕಿದೆ. ಇಂತಹ ನಿರಂತರ ಎಚ್ಚರದ ಮೂಲಕವೇ, ಐತಿಹಾಸಿಕ ಆಕಸ್ಮಿಕಗಳಿಂದಾಗಿ ಕನ್ನಡದ ವಿರುದ್ಧ ಬೆಳೆದುಕೊಂಡು ಬಂದಿರುವ ವಾತಾವರಣವನ್ನು ಕ್ರಮೇಣ ನಿರ್ಮೂಲನ ಮಾಡಲು ಸಾಧ್ಯವಾಗಬಹುದು. ಹೀಗಾಗಿ ನಿಜವಾದ ಕನ್ನಡ ಕಟ್ಟುವ ಕೆಲಸ ಇಷ್ಟು ಮೂಲಭೂತ ಹಂತದಿಂದ ಆರಂಭವಾಗಬೇಕಿದೆ. ಅಂದರೆ, ಕರ್ನಾಟಕಕ್ಕೆ ಕನ್ನಡ ಏಕೆ ಅಗತ್ಯ ಎಂಬುದನ್ನು ಮತ್ತೆ ಮನವರಿಕೆ ಮಾಡಿಕೊಳ್ಳುವ, ಮಾಡಿಕೊಡುವ (ಬಹುಶಃ ವಿಪರ್ಯಾಸದ) ಪ್ರಯತ್ನಗಳ ಮೂಲಕವೇ ಕನ್ನಡವನ್ನು ಕಟ್ಟುವ ಕಾಯಕವನ್ನು ಕೈಗೊಳ್ಳಬೇಕಿದೆ. ಇದಕ್ಕೆ ಮೊದಲಾಗಿ, ಕರ್ನಾಟಕವೆಂಬುದೇನು ಎಂಬುದನ್ನು ಪುನರ್ ನಿರೂಪಿಸಲಾಗಿದೆ.

ಕರ್ನಾಟಕವೆಂಬುದು ಕನಿಷ್ಠ ೨ ಸಾವಿರ ವರ್ಷಗಳ ಇತಿಹಾಸವಿರುವ ಒಂದು ಭಾಷೆಯ ಮೂಲಕ ಕಟ್ಟಿಕೊಂಡ ಒಂದು ಬದುಕಿನ ವಿಕಾಸಯಾತ್ರೆ. ಕಾಲನ ಹೆದ್ದರೆಗಳಿಗೆ ಸಿಕ್ಕಿ ಛಿದ್ರ ವಿಚ್ಛಿದ್ರವಾದರೂ, ಅಳಿಯದ ಸ್ಮೃತಿಯೊಳಗೆ ಉಳಿದುಕೊಂಡು ಬಂದ ಭಾವಕೋಶವೊಂದರ ಮೂರ್ತರೂಪ. ಈ ಭಾವಕೋಶದ ಬೀಜ, ಭಾಷೆ. ಅದು ಕನ್ನಡ. ಹಾಗಾಗಿ, ನಮ್ಮ ಆಧುನಿಕ ಸಂವಿಧಾನದಡಿಯೂ ನಾವು ಅಖಂಡ ಕರ್ನಾಟಕದ ಕನಸು ಕಂಡಿದ್ದರೆ, ಅದರ ತಾಯಿ ಬೇರು ಕನ್ನಡವೇ ಆಗಿದೆ. ಅಂದರೆ ಈ ಜನಸಮುದಾಯ ತನ್ನ ಆಧುನಿಕ ಆಶಯಗಳ ಅಭಿವ್ಯಕ್ತಿಯನ್ನು ಬಯಸಿರುವುದೂ ಈ ಭಾಷೆಯಲ್ಲೇ. ಇದರರ್ಥ, ಕರ್ನಾಟಕ ಆಧುನಿಕವಾಗಬಯಸಿರುವುದೂ ಕನ್ನಡ ಸಂಸ್ಕೃತಿಯ ಮಾತೃಕೆಗಳ ಮೂಲಕವೇ ಎಂಬುದಾಗಿದೆ. ಹಾಗಾಗಿ ಕನ್ನಡವೆಂದರೆ ಕರ್ನಾಟಕದ ಪಾಲಿಗೆ ಒಂದು ಮೂಲ ಜೀವದ್ರವ್ಯವಿದ್ದಂತೆ.

ಕನ್ನಡ ನವೋದಯ ರೂಪುಗೊಂಡಿದ್ದೇ ಈ ಅರಿವಿನ ಮೇಲೆ; ಈ ನಂಬಿಕೆಯ ಮೇಲೆ. ಏಕೆಂದರೆ ಅದಕ್ಕೆ ಪಾರತಂತ್ರ್ಯದ ದಟ್ಟ ನೆನಪಿತ್ತು. ಪಾರತಂತ್ರ್ಯ ಹೇಗೆ ಆರಂಭವಾಯಿತು, ಯಾವ ಮತ್ತು ಎಂತಹ ಪರಿಕರಗಳ ಮೂಲಕ ಅದು ಸಂಘಟಿತಗೊಂಡು ಸದೃಢವಾಗಿ, ಪಶ್ಚಾಳಿಕೆಗೆ ಇಳಿಯಿತು ಎಂಬುದರ ಪರಿವೆ ಅದಕ್ಕಿತ್ತು. ಹಾಗಾಗಿ ಆಗ ಕರ್ನಾಟಕವನ್ನು ಕಟ್ಟುವುದೆಂದರೆ, ಕೆಲವು ಆಶಯಗಳೊಂದಿಗೆ ಮಾತ್ರವಲ್ಲ; ಕೆಲವು ಎಚ್ಚರಗಳೊಂದಿಗೂ ಒಂದು ಜೀವನ ಕ್ರಮವನ್ನು ಕಟ್ಟುವ ಕೆಲಸವಾಗಿತ್ತು. ಹೀಗಾಗಿ, ಕನ್ನಡ ನವೋದಯದ ನಾಯಕರು ನಮಗೆ ಕನ್ನಡತ್ವದ ಮಾದರಿಗಳು ಮಾತ್ರವಲ್ಲದೆ; ಒಂದು ಜೀವನಕ್ರಮದ ಮಾದರಿಗಳೂ, ಆ ಮೂಲಕ ಕೆಲವು ನಿರ್ದಿಷ್ಟ ಮೌಲ್ಯಗಳ ಪ್ರತಿನಿಧಿಗಳೂ ಆಗಿದ್ದುದು ಆಕಸ್ಮಿಕವೇನಲ್ಲ.

ಆದರೆ ಕಳೆದ ೨೦–೨೫ ವರ್ಷಗಳಲ್ಲಿ ಎಲ್ಲ ಎಷ್ಟು ತಲೆ ಕೆಳಗಾಗಿದೆ ಎಂದರೆ, ಇಂಗ್ಲಿಷನ್ನು ಶಿಕ್ಷಣ ಕ್ರಮದಿಂದ ತೆಗೆಯದ ಹೊರತು ಗ್ರಾಮಾಂತರ ಹಾಗೂ ಹಿಂದುಳಿದ ವರ್ಗಗಳ ಮಕ್ಕಳಿಗೆ ಭವಿಷ್ಯವಿಲ್ಲ ಎಂದು ಹೇಳುತ್ತಿದ್ದವರೇ ಇಂದು ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಸದಿದ್ದರೆ ಅವರಿಗೆ ಭವಿಷ್ಯವಿಲ್ಲ ಎನ್ನುತ್ತಿದ್ದಾರೆ! ಈ ವಿಪರ್ಯಾಸಕ್ಕೆ ಕನ್ನಡ ನವೋದಯ ಕನ್ನಡದ ಜನಕ್ಕಾಗಿ ಮಾದರಿಯೆಂಬಂತೆ ಕಟ್ಟಿಕೊಟ್ಟ ಜೀವನಕ್ರಮ ಇಂದು ಅಪ್ರಸ್ತುತವಾಗಿರುವುದೇ ಕಾರಣವಾಗಿದೆ. ಇದಕ್ಕೆ ಮತ್ತೆ ಈ ಜೀವನಕ್ರಮದ ತಳಹದಿಯಲ್ಲಿದ್ದ ಮೌಲ್ಯಗಳನ್ನು ಪವಿತ್ರೀಕರಿಸಿದ್ದ ಸಾಂಸ್ಕೃತಿಕ ರಾಜಕಾರಣವನ್ನು, ಕಳೆದ ೨೦–೨೫ ವರ್ಷಗಳ ಸಾಮಾಜಿಕ–ಆರ್ಥಿಕ ರಾಜಕಾರಣವು ಪಲ್ಲಟಗೊಳಿಸಿರುವುದೇ ಕಾರಣವಾಗಿದೆ. ಇದು ಕನ್ನಡತ್ವವನ್ನು ಬುಡಮೇಲುಗೊಳಿಸಿರುವ ತಲೆ ಕೆಳಗಾದ ರಾಜಕಾರಣವೂ ಆಗಿರುವುದರಿಂದಲೇ, ಇಂದು ಕನ್ನಡ ಕಟ್ಟುವ ಕೆಲಸ ಇಂತಹ ರಾಜಕಾರಣದ ವಿರುದ್ಧದ ಹೋರಾಟದ ಒಂದು ಭಾಗವಾಗಿಯೇ ನಡೆಯಬೇಕಿದೆ. ಈ ರಾಜಕಾರಣದ ಸಮಕಾಲೀನ ರೂಪ ಜಾಗತೀಕರಣವೇ ಆಗಿರುವುದರಿಂದ, ಕನ್ನಡದ ಹೋರಾಟ ಜಾಗತೀಕರಣ ವಿರುದ್ಧದ ಹೋರಾಟದ ಒಂದು ಭಾಗವಾಗಿಯೇ ಹೊರ ಹೊಮ್ಮಬೇಕಿದೆ. ಈ ಪ್ರಜ್ಞೆ ಇಲ್ಲದಿರುವುದರಿಂದಲೇ ಇಂದಿನ ಕನ್ನಡ ಹೋರಾಟ ಅನ್ಯಭಾಷಿಕ ಫಲಕಗಳನ್ನು, ಅನ್ಯಭಾಷಿಕರ ನಾಯಕರ ಮುಖಗಳನ್ನು ಕೆಡಿಸುವ; ರೈಲ್ವೇ ಹಾಗೂ ಬಸ್ ಟಿಕೆಟ್‌ಗಳ ಮೇಲೆ ಕನ್ನಡ ಅಕ್ಷರಗಳನ್ನು ಪುನಃ ಸ್ಥಾಪಿಸುವ; ಕರ್ನಾಟಕದಲ್ಲಿನ ಉದ್ಯಮಗಳಲ್ಲಿ ಕನ್ನಡಿಗರಿಗೆ ಗುಮಾಸ್ತೆ–ಜವಾನರ ಹುದ್ದೆಗಳನ್ನು ಮೀಸಲಿರಿಸಲು ಧರಣಿ ನಡೆಸುವ; ಕನ್ನಡ ವಿರೋಧಿ ರಾಜಕಾರಣ ಮಾಡುವ ರಾಜಕಾರಣಿಗಳ ಕಛೇರಿ ಮೇಲೋ, ಮನೆ ಮೇಲೋ ಕಲ್ಲೆಸೆಯುವಂತಹ ಹತಾಶ, ಅಲ್ಪಕಾಲಿಕ ಹಾಗೂ ಕಾರ್ಯಕ್ರಮಗಳಲ್ಲಿ ತೃಪ್ತವಾಗಿರುವಂತಾಗಿರುವುದು.

ಕನ್ನಡ ಕಟ್ಟುವ ಕೆಲಸ ಮುಖ್ಯವಾಗಿ ತನ್ನ ಗಮನವನ್ನು ಕೇಂದ್ರೀಕರಿಸಬೇಕಾಗಿರುವುದು, ಕನ್ನಡ ನವೋದಯವು ಸ್ವಾತಂತ್ರ್ಯ ಹೋರಾಟದಿಂದ ಸ್ಫೂರ್ತಿ ಪಡೆದು ಪುನರ್‌ಸ್ಥಾಪಿಸಿದ್ದ ಸ್ಥಳೀಯ ಸೌಂದರ್ಯದ ಸೊಗಸಿನಲ್ಲಿನ ನಂಬಿಕೆಯನ್ನು ಹಾಗೂ ಅದು ನಮ್ಮ ಬದುಕಿನ ಸ್ವಾಯತ್ತತೆ ಹಾಗೂ ಅರ್ಥವಂತಿಕೆಗಳೊಂದಿಗೆ ಹೊಂದಿರುವ ಸಾವಯವ ಸಂಬಂಧವನ್ನು ಜನರಿಗೆ ಮತ್ತೆ ಮನದಟ್ಟು ಮಾಡುವ ಕಡೆಗೆ. ಇದನ್ನು, ಜಾಗತೀಕರಣ ಹೇಗೆ ತನ್ನ ಜಾಗತಿಕ ವ್ಯಾಪಾರ ಜಾಲದ ಮೂಲಕ ಸೃಷ್ಟಿಸುತ್ತಿರುವ ಬೆಡಗು ಬಿನ್ನಾಣಗಳೊಂದಿಗೆ

ಸ್ಥಳೀಯ ಸೌಂದರ್ಯದ ಪರಿಕಲ್ಪನೆಯನ್ನೇ ಅಪಮೌಲ್ಯಗೊಳಿಸುತ್ತಾ ಕನ್ನಡ ಕಟ್ಟುವ ಕೆಲಸವನ್ನು ನಾಶಮಾಡುತ್ತಿದೆ; ಮತ್ತು ಆ ಮೂಲಕ ಹೇಗೆ ನಮ್ಮ ಬದುಕಿನ ಸ್ವಾಯತ್ತತೆ ಹಾಗೂ ಅರ್ಥವಂತಿಕೆಗಳ ಅಡಿಗಲ್ಲುಗಳನ್ನು ಅಲ್ಲಾಡಿಸುತ್ತಿದೆ ಎಂಬುದನ್ನು ವಿವರಿಸುವಂತಹ ಸಾಂಸ್ಕೃತಿಕ ಚಳುವಳಿಯಾಗಿ ರೂಪಿಸುವ ಮೂಲಕ ಸಾಧಿಸಬಹುದಾಗಿದೆ. ಇದು ಇನ್ನೊಂದು ರೀತಿಯಲ್ಲಿ ಕನ್ನಡದ ಸ್ವಾತಂತ್ರ್ಯ ಹೋರಾಟವೇ ಆಗಿ ಮೂಡಿಬರಬೇಕಿದೆ. ಮೊದಲಾಗಿ ಇದು ರಾಜ್ಯಾದ್ಯಂತ ಎಲ್ಲ ಕನ್ನಡದ ಮಕ್ಕಳಿಗೆ ಕನ್ನಡದಲ್ಲೇ (ಕನ್ನಡೇತರ ಮಕ್ಕಳಿಗೆ ಕಾರ್ಯಸಾಧ್ಯವಿದ್ದೆಡೆಯಲ್ಲೆಲ್ಲಾ ಅವರ ಮಾತೃಭಾಷೆಯಲ್ಲಿ; ಆದರೆ ಕನ್ನಡವನ್ನು ಕಡ್ಡಾಯವಾಗಿ ಒಂದು ಭಾಷೆಯಾಗಿ ಕಲಿಸುವ) ಶಾಲಾ ಶಿಕ್ಷಣವನ್ನು ದೊರಕಿಸಿಕೊಡುವಂತಹ ಏಕರೂಪದ ಶಿಕ್ಷಣಕ್ಕಾಗಿ ಒತ್ತಾಯಿಸುವ ಚಳುವಳಿ ರೂಪದಲ್ಲಿ ಆರಂಭವಾಗಬೇಕಿದೆ. ಜೊತೆಗೆ ಹೊಸ ಕಾಲದ ಸವಾಲುಗಳನ್ನು ದೇಶೀಯ ವಿವೇಕದ ಮೂಲಕವೇ ಎದುರಿಸುವ ಛಾತಿಯನ್ನು ಮಕ್ಕಳಲ್ಲಿ ಬೆಳೆಸುವಂತಹ ದೇಶಿ ಶಿಕ್ಷಣ ಕ್ರಮವೊಂದನ್ನು ರೂಪಿಸುವ ಕಾರ್ಯಕ್ರಮಕ್ಕೆ ಚಾಲನೆ ನೀಡಬೇಕಿದೆ. ಇದರ ಅಂಗವಾಗಿಯೇ, ಶಾಲಾ ಶಿಕ್ಷಣ ಮುಗಿಸುವ ಹೊತ್ತಿಗೆ ಮಗು ಇಂಗ್ಲಿಷ್‌ನಲ್ಲೂ ವ್ಯಾವಹಾರಿಕ ಸಾಮರ್ಥ್ಯ ಸಾಧಿಸುವ ರೀತಿಯ, ಪೂರಕ ಸರಳ ಇಂಗ್ಲಿಷ್ ಭಾಷಾ ಕಲಿಕಾ ಕ್ರಮವೊಂದನ್ನು ರೂಪಿಸುವ ಕಡೆಯೂ ಗಮನ ಹರಿಸಬೇಕಿದೆ.

ಒಮ್ಮೆ ನಮ್ಮ ಮಕ್ಕಳನ್ನು ದೇಸಿ ಸೌಂದರ್ಯ ಹಾಗೂ ಆಶಯಗಳಲ್ಲಿ ಬೇರು ಬಿಡುವಂತೆ ಮಾಡಿದಲ್ಲಿ, ಜಾಗತಿಕರಣದ ಹಿಂದಿನ ರಾಜಕೀಯ ಹುನ್ನಾರಗಳನ್ನು ಅರಿಯುವ ಸಾಮರ್ಥ್ಯ ಅವರಲ್ಲೇ ಮೂಡಿ, ಜಾಗತೀಕರಣದ ವ್ಯಾವಹಾರಿಕ ಅನುಕೂಲಗಳನ್ನಷ್ಟೇ ನಮ್ಮ ಲೌಕಿಕ ಅಭಿವೃದ್ಧಿಗಾಗಿ ರೂಢಿಸಿಕೊಳ್ಳುವ ಔಚಿತ್ಯ ಪ್ರಜ್ಞೆ ಮತ್ತು ತಾರತಮ್ಯ ಜ್ಞಾನಗಳಿಂದ ಕೂಡಿದ 'ದೇಶೀ ಪ್ರತಿಭೆ' ಅವರಲ್ಲಿ ವಿಕಾಸಗೊಳ್ಳಲು ಸಹಾಯಕವಾಗುತ್ತದೆ. ಹೀಗೆ ಮುಖ್ಯವಾಗಿ ಕನ್ನಡ ಕಟ್ಟುವ ಕೆಲಸ, ಜಾಗತಿಕ ಆರ್ಥಿಕ ರಾಜಕಾರಣಕ್ಕೆ ಬಲಿಯಾಗಿ ನಮ್ಮ ಸಮಾಜಕ್ಕೆ ಅನ್ಯವಾಗುತ್ತ ಹೋಗುತ್ತಿರುವ ನಮ್ಮ ಶಿಕ್ಷಣ ಕ್ರಮವನ್ನು ಪುನರ್ರೂಪಿಸುವ ಕೆಲಸದಿಂದ ಆರಂಭಿಸಬೇಕಿದೆ. ಹಾಗೆ ನೋಡಿದರೆ ನಿಜವಾದ ಅರ್ಥದಲ್ಲಿ ಇದೊಂದು ರಾಜಕೀಯ ಕಾರ್ಯಕ್ರಮವೇ ಆಗಿದೆ. ಹಾಗೇ ಇದು, ಜಾಗತೀಕರಣದ (ಮತ್ತು ಇದಕ್ಕೆ ಕಾರಣವಾದ ವಿಶ್ವಾಸಾರ್ಹತೆ ಕಳೆದುಕೊಂಡ ನಮ್ಮ ಎಡಪಂಥೀಯ ರಾಜಕಾರಣದ) ಫಲವಾಗಿ ಸಮೃದ್ಧಿಯ ಅನೇಕ 'ರೋಗ'ಗಳಿಗೆ ತುತ್ತಾಗಿ ವಿಕ್ಷಿಪ್ತಗೊಂಡಿರುವ ಸಮಾಜದ ಒಂದು ಭಾಗವನ್ನು ಮತ್ತು ಇದರ ಫಲವಾಗಿಯೇ ಅತಿ ಬಡತನದ 'ರೋಗ'ಗಳಿಗೆ ತುತ್ತಾಗಿ ವ್ಯಗ್ರವಾಗಿರುವ ಇನ್ನೊಂದು ಭಾಗವನ್ನು ಹತ್ತಿರಕ್ಕೆ ತಂದು, ಇಂತಹ 'ಅತಿ'ಗಳ ರೋಗಗಳಿಗೆ ಸಿಕ್ಕಿದಂತೆ ಸಮಾಜವನ್ನು ರಕ್ಷಿಸುವ ಸಾಂಸ್ಕೃತಿಕ ವಿವೇಕದ ಅರಿವು ಮೂಡಿಸುವ ಕಾರ್ಯಕ್ರಮವೂ ಆಗಿದೆ. ಅಲ್ಲದೆ ಇದು ದುಡಿಮೆ ಏಕೆ, ಹೇಗೆ ಮತ್ತು ಎಷ್ಟು ಹಾಗೂ ಒಟ್ಟು ಬದುಕಿನಲ್ಲಿ ಇದರ ಪಾತ್ರವೇನು, ಅದರ ಅರ್ಥಪೂರ್ಣತೆಗೇನು ಮತ್ತು ಎಷ್ಟು ಅದರ ಕೊಡುಗೆ ಎಂಬುದನ್ನು ಮನವರಿಕೆ ಮಾಡಿಕೊಡುವ ಆಧ್ಯಾತ್ಮಿಕ ಕಾರ್ಯಕ್ರಮವೂ ಆಗಿದೆ. ಸಮುದಾಯದ ಅರಿವಿನ ತಳ ತಲುಪುವ ಈ ಕೆಲಸ, ಸಮುದಾಯದ 'ಮಾತೃ' ಭಾಷೆಯಲ್ಲಿ ನಡೆಯಬೇಕಿದೆ.

ಇದು ನಡೆಯದೆ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಪುಸ್ತಕ ಪ್ರಾಧಿಕಾರಗಳಂತಹ ಔಪಚಾರಿಕ ಸಂಸ್ಥೆಗಳ ಮೂಲಕ ನಡೆಯುವ 'ಕನ್ನಡ ಅಭಿವೃದ್ಧಿ' ಕೆಲಸಗಳು, ಕನ್ನಡ ಸಂಸ್ಕೃತಿ ಇಲಾಖೆ

ಆಶ್ರಯದ ವಿವಿಧ ಅಕಾಡೆಮಿಗಳು ನಡೆಸುವ ಜಾತ್ರೆಗಳು, ಹಬ್ಬಗಳು, ಸಮ್ಮೇಳನಗಳು, ವಿಚಾರ ಸಂಕಿರಣಗಳು, ನಾಟಕೋತ್ಸವಗಳು ಹಾಗೂ ಸಾಹಿತ್ಯ ಪರಿಷತ್ತು ವಿವಿಧ ಮಟ್ಟಗಳಲ್ಲಿ ನಡೆಸುವ ಸಾಹಿತ್ಯ ಸಮ್ಮೇಳನಗಳು; ಸರ್ಕಾರವೂ ಸೇರಿದಂತೆ ನಾವೆಲ್ಲರೂ ಲೌಕಿಕ ಅಭಿವೃದ್ಧಿಯ ಹೆಸರಲ್ಲಿ ನಡೆಸುತ್ತಿರುವ ಕನ್ನಡ ಅಪ್ರಸ್ತುತೀಕರಣ ಕಾರ್ಯಕ್ರಮದ ಬಗ್ಗೆ ನಮ್ಮಲ್ಲೇ ಮೂಡುತ್ತಿರುವ ಅಪರಾಧಿ ಮನೋಭಾವನೆಯನ್ನು ಹತ್ತಿಕ್ಕಲಷ್ಟೇ, ವಿಶೇಷ ಆಸ್ಥೆ ಹಾಗೂ ಸಂಭ್ರಮಗಳಿಂದ ಆಯೋಜಿಸುವ ಮಾನಸಿಕ ಪರಿಹಾರದ ಕಾರ್ಯಕ್ರಮಗಳಿಗಾಗಿ ಮಾತ್ರ ಕಾಣತೊಡಗುತ್ತವೆ. ಹಾಗಾಗಿ, ವೈಯಕ್ತಿಕ ನೆಲೆಯಲ್ಲಿ, ನಮ್ಮ ಮಕ್ಕಳನ್ನು ಕನ್ನಡ ಮಾಧ್ಯಮ ಶಾಲೆಗಳಿಗೆ ಕಳಿಸುವ ಮತ್ತು ಜ್ಞಾನವನ್ನು ಲಭ್ಯವಿರುವ ಮಟ್ಟದವರೆಗೆ ಕನ್ನಡದ ವಿವಿಧ ಮಾಧ್ಯಮಗಳ ಮೂಲಕವೇ ಪಡೆಯುವ ಹಾಗೂ ಸಾರ್ವಜನಿಕ ಜೀವನದಲ್ಲಿ ಸಾಧ್ಯವಿದ್ದಡೆಯಲ್ಲೆಲ್ಲಾ ಕನ್ನಡವನ್ನೇ ಬಳಸುವ ಅಗತ್ಯ ಮತ್ತು ಅನಿವಾರ್ಯತೆಗಳನ್ನು ಮನಗಾಣಿಸುವಂತಹ ಸಾಂಸ್ಕೃತಿಕ ಪುನರುಜ್ಜೀವನದ ಕಾರ್ಯಕ್ರಮಗಳು ಮಾತ್ರ ಇಂದು ನಿಜವಾಗಿ ಕನ್ನಡ ಕಟ್ಟುವ ಕೆಲಸಗಳಾಗಬಲ್ಲವು. ಸರ್ಕಾರೇತರ ಹಾಗೂ ಸಾರ್ವಜನಿಕರ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತು, ಇಂತಹ ಕೆಲಸಗಳ ಮೂಲಕವೇ ನಿಜವಾಗಿ ಜೀವಂತವಾಗಬಹುದಾದ ಸಾಧ್ಯತೆ ಇರುವ ಸಂದರ್ಭವಿದು. ಹೋಬಳಿ ಮಟ್ಟದವರೆಗೂ ಘಟಕಗಳನ್ನು ಹೊಂದಿರುವ ಏಕ ಮಾತ್ರ ಸಾಂಸ್ಕೃತಿಕ ಸಂಸ್ಥೆಯಾದ ಪರಿಷತ್ತು ಸ್ಥಾಪನೆಯಾದದ್ದು ಇಂತಹುದೇ ಬಿಕ್ಕಟ್ಟಿನ ಸಂದರ್ಭದಲ್ಲಿ ಹಾಗೂ ಇಂತಹುದೇ ಕೆಲಸಗಳಿಗಾಗಿ! ಸಾಹಿತ್ಯ ಸಮ್ಮೇಳನಗಳನ್ನು ಆಯೋಜಿಸಬೇಕಾದದ್ದು, ಇಂತಹ ಕೆಲಸಗಳ ಸಿದ್ಧಿಯನ್ನು ಆಚರಿಸಲು ಮಾತ್ರ. ಆದರೆ ಪರಿಷತ್ತು ಈಗ ಕೊನೆಯಲ್ಲಿ ಮಾಡಬೇಕಾದ ಕೆಲಸಗಳನ್ನು ಮೊದಲು ಮಾಡಲು ಹೊರಟಂತಿದೆ!

ಹೀಗೆ ಕನ್ನಡ ಕಟ್ಟುವ ಕೆಲಸವನ್ನು ಸರ್ವ ವ್ಯಾಪಕ ನೆಲೆಗಳಲ್ಲಿ, ಆದ್ಯತೆಯ ಆಧಾರದ ಮೇಲೆ ಕ್ರಮಾಗತವಾಗಿ ಪುನಃ ಆರಂಭಿಸುವ ಕಾಲ ಈಗ ಬಂದಿದೆ. ಈ ಹಿಂದೆ ನಾನೊಮ್ಮೆ ಕನ್ನಡದ ಅಸ್ಮಿತೆಯ ಬಗ್ಗೆ ಬರೆಯುತ್ತಾ (ನೋಡಿ, ಇದೇ ಪುಸ್ತಕದಲ್ಲಿನ 'ಆ ಗಣ ರಾಜ್ಯ – ಈ ಕರ್ನಾಟಕ') ಅದನ್ನು ಅಚ್ಚ ಕನ್ನಡದ ವ್ಯಕ್ತಿತ್ವವೆನಿಸುವ ಬಸವಣ್ಣನ ಆಂದೋಲನದ ಮಾದರಿಯ ಹೋರಾಟದ ಮೂಲಕವೇ ಪುರ್ನಸ್ಥಾಪಿಸಬೇಕಾಗಿದೆ ಎಂದಿದ್ದುದು ಈ ಅರ್ಥದಲ್ಲೇ. ಅಂದರೆ ಇಂಥಹ ಚೌಕಟ್ಟಿನಲ್ಲೇ ಆಧುನಿಕ ಕರ್ನಾಟಕದ ಜನಪರ ಹೋರಾಟಗಳೆನಿಸಿದ ರೈತ ಚಳುವಳಿ, ಹಿಂದುಳಿದ ವರ್ಗಗಳ ಚಳುವಳಿ, ಕನ್ನಡ ಚಳುವಳಿ, ಪರಿಸರ ಚಳುವಳಿ ಇತ್ಯಾದಿಗಳು ತಮ್ಮೆಲ್ಲ ವರ್ಗೀಯ ಹಿತಾಸಕ್ತಿಗಳನ್ನು ಮರು ಹೊಂದಾಣಿಕೆ ಮಾಡಿಕೊಳ್ಳುವ ಮೂಲಕ ಪರಸ್ಪರ ವ್ಯತ್ಯಾಸಗಳನ್ನು ಕರಗಿಸಿಕೊಂಡು, ಸಮಗ್ರ ಕನ್ನಡದ ಹೋರಾಟವಾಗಿ ಪುನರೂಪಿತವಾಗುತ್ತದೆ; ಆಗಲೇ ಕನ್ನಡ ಕಟ್ಟುವ ನಿಜವಾದ ಸಾಂಸ್ಕೃತಿಕ ಕೆಲಸ ಆರಂಭವಾಗುತ್ತದೆ ಎಂಬರ್ಥದಲ್ಲಿ.

(೭೪ನೇ ಅಖಿಲ ಭಾರತ ಸಾಹಿತ್ಯ ಸಮ್ಮೇಳನ, ಉಡುಪಿ–೨೦೦೭ರ ಸ್ಮರಣ ಸಂಚಿಕೆಗಾಗಿ ಬರೆದ ಲೇಖನ)

೩. ಕಾವೇರಿ ಚಳುವಳಿ ಹಾಗೂ ಕನ್ನಡ ಕುಲ ಪ್ರಜ್ಞೆ

ಕಾವೇರಿ ನ್ಯಾಯಾಧೀಕರಣದ ತೀರ್ಪು ಪ್ರಕಟವಾಗಿ ಹದಿನೈದು–ಇಪ್ಪತ್ತು ದಿನಗಳಾಗುತ್ತಾ ಬಂದಿದ್ದರೂ, ಅಂದು ರಾಜ್ಯಾದ್ಯಂತ, ವಿಶೇಷವಾಗಿ ರಾಜ್ಯದ ರಾಜಧಾನಿ ಬೆಂಗಳೂರಿನಲ್ಲಿ ಆರಂಭವಾದ ಪ್ರತಿಭಟನೆ–ಮುಷ್ಕರಗಳು ಇನ್ನೂ ನಿಂತಿಲ್ಲ. ಕಾರಣ, ಜನತೆಯ ಪ್ರತಿನಿಧಿಯಾದ ಸರ್ಕಾರ ತೀರ್ಪಿನ ಬಗ್ಗೆ ಬಾಯೇ ಬಿಟ್ಟಿಲ್ಲದಿರುವುದು! ಸಾವಿರ ಪುಟಗಳ ತೀರ್ಪು ಅದರ ಬಾಯನ್ನು ಕಟ್ಟಿ ಹಾಕಿಬಿಟ್ಟಿದೆ– ಸರ್ಕಾರದ ಹೊರತಾಗಿ ಮಿಕ್ಕೆಲ್ಲರೂ 'ಅನ್ಯಾಯ! ಅನ್ಯಾಯ!' ಎಂದು ಕೂಗುತ್ತಿದ್ದರೂ! ನ್ಯಾಯವೋ, ಅನ್ಯಾಯವೋ ವಿವರವಾಗಿ ನೋಡಿ ತೀರ್ಮಾನಿಸೋಣ; ಅನ್ಯಾಯವಾಗಿದ್ದರೆ ನ್ಯಾಯಕ್ಕಾಗಿ ಒಟ್ಟಿಗೆ ಹೋರಾಡೋಣ, ಅಲ್ಲಿಯವರೆಗೆ ವೃಥಾ ಪ್ರತಿಭಟನೆ ಬೇಡ ಎಂದು ಹೇಳುವ ಆತ್ಮವಿಶ್ವಾಸವೂ ಸರ್ಕಾರಕ್ಕಿಲ್ಲವಾಗಿದೆ. ಹೀಗಾಗಿ ವೃತ್ತಿಪರ ಚಳುವಳಿಗಾರರು ಮತ್ತು ಆತಂಕಕ್ಕೊಳಗಾಗಿರುವ ರೈತರ ಜೊತೆಗೆ ಹೆಂಗಸರು–ಮಕ್ಕಳು, ಸಾಹಿತಿಗಳು, ಮಠಾಧೀಶರು, ಸಿನಿಮಾದವರು, ವಿದ್ಯಾರ್ಥಿಗಳು, ವಕೀಲರು, ಐಟಿ ಉದ್ಯೋಗಿಗಳು, ಲೈಂಗಿಕ ಕಾರ್ಯಕರ್ತರು, ಹಿಜಡಾಗಳು ಹೀಗೆ ಎಲ್ಲರೂ ಪ್ರತ್ಯೇಕ ಪ್ರತ್ಯೇಕವಾಗಿ ಬೀದಿಗಳಲ್ಲಿ ಪ್ರತಿಭಟನೆಗಿಳಿದಿದ್ದಾರೆ!

ರಸ್ತೆ ತಡೆ, ತಮಿಳು ಟಿವಿ ವಾಹಿನಿಗಳ ತಡೆ, ತಮಿಳು ಪತ್ರಿಕೆಗಳ ದಹನ, ಕೇಂದ್ರ ಸರ್ಕಾರದ ಕಛೇರಿಗಳ ಮುತ್ತಿಗೆ ಮುಂತಾದ ಸಲ್ಲದ ಕ್ರಮಗಳಿಂದ ಹಿಡಿದು; ರಕ್ತತರ್ಪಣ, ರಕ್ತಪತ್ರ, ಉರುಳು ಸೇವೆ, ನಡುರಸ್ತೆಯಲ್ಲಿ ಅಡುಗೆ, ಆರ್ಕೆಸ್ಟ್ರಾ, ಸಚಿವ ಸ್ಥಾನಕ್ಕೆ ರಾಜೀನಾಮೆ, ಗೊಮ್ಮಟನಿಗೆ ಕಾವೇರಿ ಅಭಿಷೇಕ ಮುಂತಾದ ಒಲ್ಲದ ಕ್ರಮಗಳವರೆಗೆ ಹರಡಿದ ವೈವಿಧ್ಯಮಯ ಭಾವ ಭಂಗಿಗಳಲ್ಲಿ ವ್ಯಕ್ತವಾಗುತ್ತಿರುವ ಈ ಪ್ರತಿಭಟನೆ, ಕನ್ನಡ ಟಿವಿ ವಾಹಿನಿಗಳಲ್ಲಿ ಮತ್ತು ಕನ್ನಡ ಪತ್ರಿಕೆಗಳಲ್ಲಿ ಪ್ರತಿದಿನ ಪ್ರಮುಖ ಸುದ್ದಿಯಾಗಿ ರಾರಾಜಿಸುತ್ತಿದೆ. ಇದರಿಂದಾಗಿ ಇಡೀ ರಾಜ್ಯವೇ ಒಂದಾಗಿ, ತನಗಾಗಿರುವ ಅನ್ಯಾಯಕ್ಕೆ ಎಚ್ಚೆತ್ತುಕೊಂಡಿದೆ ಎಂಬ ಭಾವನೆ ಮೂಡುವಂತಾಗಿದೆ, ದಕ್ಷಿಣ ಕನ್ನಡ ಹಾಗೂ ಹೈದ್ರಾಬಾದ್ ಕರ್ನಾಟಕದಲ್ಲಿ ರಾಜ್ಯ ಬಂದ್ ವಿಫಲವಾಗಿದ್ದಾಗ್ಯೂ! ಆದರೆ ರಾಜ್ಯದಾಚೆ ಸುದ್ದಿಯೇ ಆಗದ ಈ ಪ್ರತಿಭಟನೆ ಯಾರ ವಿರುದ್ಧ ಮತ್ತು ಏಕೆ ಎಂಬ ಪ್ರಶ್ನೆಗಳಿಗೆ ಎಡೆಕೊಡದೆ, ಕೈಲಾಗದವ ಮೈಪರಚಿಕೊಂಡ ಎಂಬಂತಹ ಆಸ್ಫೋಟನಾಕಾರಿ ಅಸಹಾಯಕತೆಯ ಪರಿಸ್ಥಿತಿಗೆ ದಾರಿ ಮಾಡಿಕೊಡುತ್ತಿದೆ ಎಂಬುದನ್ನು ಯಾರೂ ಗಮನಿಸಿದಂತಿಲ್ಲ.

೧೯೯೧ರಲ್ಲಿ ಕಾವೇರಿ ನ್ಯಾಯಾಧಿಕರಣದ ಮಧ್ಯಂತರ ತೀರ್ಪು ಪ್ರಕಟವಾದಾಗಲೂ ಇದಕ್ಕಿಂತ ಭಯಂಕರ ಚಳುವಳಿ ನಡೆದಿತ್ತು. ಆಗಿನ ಮುಖ್ಯ ಮಂತ್ರಿ ಬಂಗಾರಪ್ಪನವರು

ತಾವು ಭಾರತವೆಂಬ ಒಕ್ಕೂಟದ ಅಂಗವಾಗಿರುವ ರಾಜ್ಯವೊಂದರ ಮುಖ್ಯಮಂತ್ರಿಯೆಂಬುದನ್ನು ಮರೆತು; ತೀರ್ಪನ್ನು ಧಿಕ್ಕರಿಸುವ ವೀರಾವೇಶದಲ್ಲಿ ತಮಿಳು ಜನರ ವಿರುದ್ಧ ಕಿಡಿಕಾರಿದ ಕಾರಣದಿಂದಾಗಿ ಹತ್ತಾರು ಜನ ಸತ್ತು, ಸಾರ್ವಜನಿಕರ, ವಿಶೇಷವಾಗಿ ತಮಿಳರ ಕೋಟ್ಯಂತರ ರೂಪಾಯಿಗಳ ಆಸ್ತಿಪಾಸ್ತಿ ನಷ್ಟವಾಗಿ, ಬೆಂಗಳೂರು ಸೇರಿದಂತೆ ಇಡೀ ಕಾವೇರಿ ಬಯಲು ರಣರಂಗವಾಗಿತ್ತು. ಈ ಅಪ್ರಬುದ್ಧ ನಿಲುವೇ ಪರೋಕ್ಷ ಕಾರಣವಾಗಿ, ಬಂಗಾರಪ್ಪ ಅಧಿಕಾರ ಕಳೆದುಕೊಂಡರು. ಪರಿಣಾಮವಾಗಿ, ಮಧ್ಯಂತರ ತೀರ್ಪಿನ ಪ್ರಕಾರ ತಮಿಳ್ನಾಡಿಗೆ ನೀರು ಬಿಡಲಾಯಿತು. ಚಳವಳಿ ತಣ್ಣಗಾಯಿತು!

ಇನ್ನು ರಾಜ್ಯ ನಾಯಕರಾಗಿರುವವರೆಗೆ ಪ್ರಾಣವನ್ನಾದರೂ ತೆತ್ತೇನು, ಕಾವೇರಿ ನೀರಿನ ಮೇಲಿನ ನ್ಯಾಯಬದ್ಧ ಹಕ್ಕನ್ನು ಬಿಟ್ಟುಕೊಡುವುದಿಲ್ಲ ಎಂದು ಘೋಷಿಸಿದ್ದ ದೇವೇಗೌಡರು, ಪ್ರಧಾನಮಂತ್ರಿಯಾದ ಕೂಡಲೇ ತಮಿಳು ನಾಡಿಗೆ ನೀರು ಬಿಡಲು ರಾತ್ರೋರಾತ್ರಿ ಆದೇಶಿಸಿದರು! ಆ ನೀರು ಹೇಮಾವತಿ ನೀರು ಎಂದು ಅವರು ಜನರನ್ನು ಯಾಮಾರಿಸಲು ಪ್ರಯತ್ನಿಸಿದ್ದುಂಟು. ೫ ವರ್ಷಗಳ ನಂತರ ಕಾವೇರಿ ಬಯಲಿನ ವರಪುತ್ರ ಎಸ್.ಎಂ. ಕೃಷ್ಣ ಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿ ಬರಗಾಲ ಬಂದಾಗ, ಅವರೂ ಬಂಗಾರಪ್ಪನವರಂತೆಯೇ ವೀರಾವೇಶ ತೋರಿ ನೀರು ಬಿಡಲು ನಿರಾಕರಿಸಿದಾಗ, ಈ ವಿವಾದ ಮತ್ತೆ ಭುಗಿಲೆದ್ದಿತು. ಆಗಲೂ ಈಗಿನಂತೆಯೇ ಇಡೀ ರಾಜ್ಯವೇ ಎದ್ದು ನಿಂತು ಕೃಷ್ಣರನ್ನು ಬೆಂಬಲಿಸಿತ್ತು. ಆದರೆ ಆವರೆಗೆ ಕಾವೇರಿ ರೈತ ಹಿತರಕ್ಷಣಾ ಸಮಿತಿಯ ನೇತೃತ್ವ ವಹಿಸಿ ಮಂಡ್ಯ ಜಿಲ್ಲೆಯ ರೈತರನ್ನು ದೀರ್ಘ ಹೋರಾಟಕ್ಕೆ ಅಣಿ ಮಾಡಿದ್ದ ನಿಷ್ಠುರವಾದಿ ನಾಯಕರೆಂದೇ ಹೆಸರಾಗಿದ್ದ ಜಿ.ಮಾದೇಗೌಡರು ದಾರಿ ತಪ್ಪಿದರು. ಅವರು ತನ್ನ ಒಕ್ಕೂಟ ವಿರೋಧಿ ನಿಲುವಿನಿಂದಾಗಿ ಸುಪ್ರಿಂ ಕೋರ್ಟ್‌ನಿಂದ ಛೀಮಾರಿ ಹಾಕಿಸಿಕೊಂಡ ಕೃಷ್ಣರ ಅಧಿಕಾರ ರಕ್ಷಣೆಯ ನಾಜೂಕಿನ ಆಮಿಷ ರಾಜಕಾರಣಕ್ಕೆ ಬಲಿಬಿದ್ದು, ವಿಷಾದ ಯೋಗಕ್ಕೆ ಸಿಕ್ಕವರಂತೆ ಹೋರಾಟಕ್ಕೆ ಕಡಿವಾಣ ಹಾಕಿದರು. ಅಲ್ಲಿಂದಾಚೆಗೆ ಕಾವೇರಿ ಹೋರಾಟ ಸ್ಥಗಿತಗೊಂಡತ್ತೆಂದೇ ಹೇಳಬೇಕು. ಆಗ ಮಲಗಿದ ಕನ್ನಡಿಗರು ಈಗ ಕಾವೇರಿಯ ಅಂತಿಮ ತೀರ್ಪು ಹೊಸ್ತಿಲ ಬಳಿ ಬಂದಾಗ ಎದ್ದು, ಮನೆಗೆ ಬೆಂಕಿ ಬಿದ್ದ ಆತಂಕದಲ್ಲಿ ಬಾಯಿ ಬಾಯಿ ಬಡಿದುಕೊಳ್ಳುತ್ತಿದ್ದಾರೆ. ಈ ಅಸಹಾಯಕತೆ-ಗೊಂದಲಗಳಲ್ಲಿ, ಕನ್ನಡಿಗರಿಗೆ ಬೆಂಕಿ ಆರಿಸುವ ನೀರು ಎಲ್ಲಿದೆ ಎಂಬುದರ ಕಡೆ ಗಮನವೇ ಇಲ್ಲದಾಗಿದೆ ಹಾಗೂ ಕನ್ನಡದ ಮನೆಗೆ ಏಕೆ ಹೀಗೆ ಪದೇ ಪದೇ ಬೆಂಕಿ ಬೀಳುತ್ತಿದೆ ಎಂಬುದರ ಬಗ್ಗೆ ಯೋಚಿಸುವ ಶಕ್ತಿಯನ್ನೇ ಅವರು ಕಳೆದುಕೊಂಡಂತೆ ತೋರುತ್ತದೆ.

ಬಂಗಾರಪ್ಪನವರ ಅಪ್ರಬುದ್ಧ ರಾಜಕಾರಣ, ದೇವೇಗೌಡರ ಆತ್ಮವಂಚನೆಯ ರಾಜಕಾರಣ ಹಾಗೂ ಕೃಷ್ಣ-ಮಾದೇಗೌಡರ ಸ್ವಾರ್ಥ ರಾಜಕಾರಣದ ಈ ಪ್ರಸಂಗಗಳು, ಕನ್ನಡಿಗರ ದೀರ್ಘ ಕರ್ಮಕಥೆಯ ಇತ್ತೀಚಿನ ದೃಷ್ಟಾಂತಗಳಾಗಿವೆಯಷ್ಟೆ. ಭಾರತವೆಂಬ ಒಕ್ಕೂಟದ ರಾಜಕಾರಣದಲ್ಲಿ ತನ್ನದೇ ಆದ ರಾಜಕಾರಣದ ಅವಕಾಶವನ್ನು ಕಲ್ಪಿಸಿಕೊಳ್ಳದೇ ಹೋಗಿರುವ ಕರ್ನಾಟಕದ ರಾಜಕಾರಣ; ಯಾವುದೇ ಪಕ್ಷ ಅಥವಾ ಪಕ್ಷಗಳ ಸರ್ಕಾರವಿದ್ದಾಗಲೂ, ಅಖಿಲ ಭಾರತ ರಾಜಕಾರಣದ ವಿಧೇಯ ಬಾಲಕನಂತೆ ವರ್ತಿಸುತ್ತಾ ಬರುತ್ತಿರುವುದನ್ನು ಕರ್ನಾಟಕದ ೫೦ ವರ್ಷಗಳ ಇತಿಹಾಸದುದ್ದಕ್ಕೂ ನಾವು ಕಾಣಬಹುದು. ಇದರ ಹಿಂದೆ

ಕನ್ನಡ ರಾಜ್ಯದ ರಾಜಕಾರಣವು ಟಿಪ್ಪು ಸುಲ್ತಾನ್–ಬ್ರಿಟಿಷ್ ಸರ್ಕಾರದ ಮುಖಾಮುಖಿಯಲ್ಲಿ ಛಿದ್ರ ವಿಚ್ಛಿದ್ರವಾಗಿ ಹೋದ ಐತಿಹಾಸಿಕ ದುರಂತವೂ ಇರಬಹುದು. ಅದರ ಜೊತೆಗೆ, ಕರ್ನಾಟಕದ ಏಕೀಕರಣ ಚಳುವಳಿಯು ಕನ್ನಡದ ಜನತೆಯನ್ನು ತನ್ನದೇ ಸಾಂಸ್ಕೃತಿಕ ಪ್ರಜ್ಞೆಯ ಹುರುಪಿನಲ್ಲಿ ಒಗ್ಗೂಡಿಸಿದಂತೆ, ತನ್ನದೇ ರಾಜಕೀಯ ಪ್ರಜ್ಞೆಯ ಎಚ್ಚರದಲ್ಲಿ ಒಗ್ಗೂಡಿಸುವಲ್ಲಿ ವಿಫಲವಾಗುತ್ತ ಬಂದಿರುವ ವರ್ತಮಾನದ ಕನ್ನಡ ಚಳವಳಿಯ ಬೇಜವಾಬ್ದಾರಿತನವೂ ಇದೆಯೆಂಬುದನ್ನೂ ನಾವು ಮರೆಯಬಾರದು.

ಇಂದು ನಾವು ಕಾವೇರಿ ಚಳುವಳಿಯನ್ನು ಯಾರ ವಿರುದ್ಧ, ಯಾರ ಗಮನ ಸೆಳೆಯಲು ಮಾಡುತ್ತಿದ್ದೇವೆ? ಕಾವೇರಿ ನ್ಯಾಯಾಧಿಕರಣವೇನೂ ಕೇಂದ್ರದ ಅಂಗ ಸಂಸ್ಥೆಯಲ್ಲ. ಅದೊಂದು ಸ್ವಾಯತ್ತ ಸ್ವತಂತ್ರ ನ್ಯಾಯ ಪ್ರಾಧಿಕಾರ. ಅದು ರಚಿತವಾದದ್ದೂ ಸಂಬಂಧಪಟ್ಟ ರಾಜ್ಯಗಳ ನಡುವೆ ಎಲ್ಲ ಸಂಧಾನ ಪ್ರಯತ್ನಗಳು ಮುರಿದು ಬಿದ್ದಾಗ. ಅಲ್ಲಿ, ಈ ಎಲ್ಲ ರಾಜ್ಯಗಳು ತಮ್ಮ ನ್ಯಾಯೋಚಿತ ಪಾಲನ್ನು ಪ್ರತಿಪಾದಿಸುವ ಎಲ್ಲ ಅವಕಾಶಗಳನ್ನು ಹೊಂದಿದ್ದವು. ೧೯೨೪ರಲ್ಲಿ, ಮೈಸೂರು ಸಂಸ್ಥಾನದ ಮೇಲೆ ಪರೋಕ್ಷ ಅಧಿಕಾರ ಹೊಂದಿದ್ದ ಬ್ರಿಟಿಷ್ ಸರ್ಕಾರ, ತಾನು ನೇರ ಅಧಿಕಾರ ಹೊಂದಿದ್ದ ಮದ್ರಾಸ್ ಪ್ರಾಂತ್ಯಕ್ಕೆ ಹೆಚ್ಚು ಕಾವೇರಿ ನೀರನ್ನು ಒದಗಿಸುವ ಒಪ್ಪಂದವನ್ನು ನಮ್ಮ ಮೇಲೆ ಹೇರಿದ್ದರಲ್ಲಿ ಆಶ್ಚರ್ಯವೇನೂ ಇಲ್ಲ. ಆದರೆ ಸ್ವಾತಂತ್ರ್ಯಪೂರ್ವದ ಆ ಒಪ್ಪಂದವನ್ನು ಭಾರತದ ಹೊಸ ಸಂವಿಧಾನದಡಿಯಲ್ಲಿಯೂ, ೧೯೭೪ರಲ್ಲಿ ತಮಿಳ್ನಾಡು ಸೃಷ್ಟಿಸಿದ ಇಕ್ಕಟ್ಟಿನ ಸಂದರ್ಭದವರೆಗೂ, ಅದನ್ನು ಪ್ರಶ್ನಿಸಲಾಗದ ಕರ್ನಾಟಕದ ರಾಜಕೀಯ ಇಚ್ಛಾಶಕ್ತಿಯ ದಟ್ಟ ದಾರಿದ್ರ್ಯದ ಬಗ್ಗೆ ಏನು ಹೇಳೋಣ? ಹೆಚ್ಚು ನೀರು ಕೇಳುವುದಕ್ಕೆ ಬೆಂಬಲವಾಗಿ ಅದಕ್ಕೆ ತಕ್ಕುನಾದ ಹೆಚ್ಚುವರಿ ನೀರಾವರಿ ಪ್ರದೇಶಗಳನ್ನು ಅಭಿವೃದ್ಧಿಪಡಿಸಲಾಗದೆ ಹೋದ ನಮ್ಮ ಸರ್ಕಾರಗಳ ದೂರದೃಷ್ಟಿಯ ಅಭಾವದ ಬಗ್ಗೆ ವೀರ ಕನ್ನಡಿಗರಾದ ನಾವೇಕೆ ಈವರೆಗೆ ಬಾಯಿ ಮುಚ್ಚಿ ಕುಳಿತಿದ್ದೆವು? ತುರ್ತಾಗಿ ಉತ್ತರಿಸಬೇಕಾದ ಪ್ರಶ್ನೆಗಳಿವು.

೧೯೯೧ರ ಮಧ್ಯಂತರ ತೀರ್ಪೇ, ನಾವು ನ್ಯಾಯೋಚಿತ ಪಾಲನ್ನು ಕೇಳುವಲ್ಲಿ ಹಲವಾರು ನೆಲೆಗಳಲ್ಲಿ–ತುಕ್ಕು ಹಿಡಿದು ಬದ್ಧತೆ ಕಳೆದುಕೊಂಡಿರುವ ಅಧಿಕಾರಶಾಹಿ, ಅದರ ಜೊತೆ ಶಾಮೀಲಾಗಿರುವ ಭ್ರಷ್ಟ ರಾಜಕೀಯ ವ್ಯವಸ್ಥೆ, ಇದನ್ನು ಸಹಿಸಿಕೊಳ್ಳುತ್ತಾ ಬಂದಿರುವ ಕನ್ನಡ ಜನತೆಯ ಅಭಿಮಾನ ಶೂನ್ಯತೆ–ಎಡವುತ್ತಿದ್ದೇವೆ ಎಂಬುದರ ಎಚ್ಚರಿಕೆಯ ಗಂಟೆಯಾಗಬೇಕಿತ್ತು. ಆದರೆ ಈಗ ಹೊರ ಬಿದ್ದಿರುವ ಅಂತಿಮ ತೀರ್ಪು, ಹೆಚ್ಚು ಕಡಿಮೆ ಆ ಮಧ್ಯಂತರ ತೀರ್ಪಿನ ಮುಂದುವರಿಕೆ ಹಾಗೂ ಅಧಿಕೃತ ಆವೃತ್ತಿಯಾಗಿದೆ ಎಂಬುದು ಏನನ್ನು ಸೂಚಿಸುತ್ತದೆ? ಕರ್ನಾಟಕ ಸರ್ಕಾರ ೧೫. ವರ್ಷಗಳ ಅವಧಿಯಲ್ಲಿ ನ್ಯಾಯಾಧೀಕರಣದ ಮುಂದೆ ತನ್ನ ನ್ಯಾಯೋಚಿತ ಪಾಲನ್ನು ನೀರಾವರಿ ಯೋಜನೆಗಳ ಕಾರ್ಯ ಸಾಧ್ಯತೆಯ ವರದಿಗಳ ಮೂಲಕ ಸಮರ್ಥವಾಗಿ ಪ್ರತಿಪಾದಿಸುವಲ್ಲಿ ಸೋತಿದೆ ಎಂದಷ್ಟೇ ಇದು ಸೂಚಿಸುತ್ತದೆ ಅಲ್ಲವೇ? ಇದಕ್ಕೆ ಈವರೆಗೆ ಯಾರನ್ನು ಹೊಣೆಗಾರರನ್ನಾಗಿ ಮಾಡಲಾಗಿದೆ? ಕರ್ನಾಟಕದ ಪರ ವಾದಿಸಲು ಕರ್ನಾಟಕದ ಒಬ್ಬ ವಕೀಲನೂ ಸಮರ್ಥನಿಲ್ಲ ಎಂದರೆ ನಾವು ಯಾವ ಸ್ಥಿತಿ ಮುಟ್ಟಿದ್ದೇವೆ! ನಮಗೆ ಉದ್ದೇಶಪೂರ್ವಕ ಅನ್ಯಾಯ ಮಾಡಲು.

ನ್ಯಾಯಾಧೀಕರಣದ ಸದಸ್ಯರೇನು ತಮಿಳ್ನಾಡಿನ ಅಳಿಯ- ಭಾವಂದಿರೇನೂ ಅಲ್ಲವಲ್ಲ? ತಮಿಳುನಾಡಿನ ರಾಜಕಾರಣಿಗಳು ಕಾವೇರಿ ನ್ಯಾಯಮಂಡಳಿ ಮೇಲೆ ಪ್ರಭಾವವನ್ನೋ, ಒತ್ತಡವನ್ನೋ ತಂದಿದ್ದಾರೆಂದು ಇಂದು ಜನ ಆಡಿಕೊಳ್ಳುತ್ತಿದ್ದಾರೆ. ಇದು ತಮಿಳುನಾಡಿನ ರಾಜಕಾರಣಿಗಳ ಬದ್ಧತೆಗಿಂತ ಹೆಚ್ಚಾಗಿ ಕರ್ನಾಟಕದ ರಾಜಕಾರಣಿಗಳ ಬೇಜವಾಬ್ದಾರಿತನವನ್ನು ಪ್ರತಿಬಿಂಬಿಸುತ್ತದೆ ಎಂಬ ಪರಿವೆಯಾದರೂ ನಮ್ಮ ರಾಜಕಾರಣಿಗಳಿಗೆ ಬೇಡವೇ? ಇದು ಮತ್ತೆ ಕರ್ನಾಟಕದ ಈವರೆಗಿನ ರಾಜಕೀಯ ನಾಯಕತ್ವದ ವೈಫಲ್ಯವಲ್ಲವೇ?

ಅಂದರೆ ಕರ್ನಾಟಕಕ್ಕೆ ಈವರೆಗೆ ತನ್ನದೆನ್ನಿಸುವ ರಾಜಕೀಯ ನಾಯಕತ್ವ ದೊರೆತೇ ಇಲ್ಲ ಎಂದರ್ಥ. ಅಂತಹ ನಾಯಕತ್ವ ಕಳೆದ ೫೦ ವರ್ಷಗಳಲ್ಲಿ ತಮಿಳ್ನಾಡಿಗೆ ದೊರಕಿರುವುದರಿಂದಲೇ ಅದು ಭಾರತದ ಒಕ್ಕೂಟದ ಚೌಕಟ್ಟಿನಲ್ಲೂ ಏನನ್ನೂ ಕಳೆದುಕೊಳ್ಳದೆ ತನ್ನ ಭಾಷೆ, ಸಂಸ್ಕೃತಿ, ಅಭಿವೃದ್ಧಿ ಈ ಮೂರು ವಿಷಯಗಳಲ್ಲಿ ಯಾವ ರಾಜಿಗೂ ಎಡೆಗೊಡದೆ ತನಗೆ ದಕ್ಕಬೇಕಾದ್ದನ್ನು ದಕ್ಕಿಸಿಕೊಂಡು, ತನ್ನ ಆತ್ಮಗೌರವವನ್ನು ಕಾಪಾಡಿಕೊಂಡು ಬಂದಿದೆ. ಕರ್ನಾಟಕದಲ್ಲಿಯಂತೆಯೇ ತಮಿಳ್ನಾಡಿನಲ್ಲಿಯೂ ಈ ೫೦ ವರ್ಷಗಳಲ್ಲಿ ಅನೇಕ ರಾಜಕೀಯ ಸ್ಥಿತ್ಯಂತರಗಳು ಆಗಿ ಹೋಗಿ ವಿವಿಧ ರಾಜಕೀಯ ದೃಷ್ಟಿಕೋನಗಳ ಪಕ್ಷಗಳು ಸರ್ಕಾರ ನಡೆಸಿವೆಯಾದರೂ, ಅವೆಲ್ಲವೂ ತಮಿಳರ ಸರ್ಕಾರಗಳೇ ಆಗಿದ್ದುದರಿಂದ ಇದು ಸಾಧ್ಯವಾಗಿದೆ ಎಂಬುದನ್ನು ನಾವು ಗಮನಿಸಬೇಕು. ಅಲ್ಲದೆ, ಈ ಸಾಧ್ಯತೆಯ ಹಿಂದೆ ತಮಿಳು ಕುಲ ಪ್ರಜ್ಞೆ ಮೂಲ ಸ್ಫೂರ್ತಿಯಾಗಿ ಕೆಲಸ ಮಾಡುತ್ತಿದೆ; ಅದೇ ತಮಿಳ್ನಾಡಿನ ಹಿತವನ್ನು ಎಲ್ಲ ರಂಗಗಳಲ್ಲೂ ಕಾಪಾಡುತ್ತಿರುವ ಶಕ್ತಿಯಾಗಿದೆ ಎಂಬುದೇ ಇಲ್ಲಿನ ಆಳದ ಸತ್ಯವಾಗಿದೆ. ಆದರೆ ಈವರೆಗಿನ ಕರ್ನಾಟಕ ಸರ್ಕಾರಗಳು ಕನ್ನಡಿಗರ ಸರ್ಕಾರಗಳಾಗಿರದೆ, ಭಾರತ ಒಕ್ಕೂಟದಡಿಯ ಒಂದು ಸಾಮಂತ ಸರ್ಕಾರದಂತೆ ವರ್ತಿಸುವುದರಲ್ಲೇ ತನ್ನ ಧನ್ಯತೆಯನ್ನು ಕಂಡುಕೊಳ್ಳುತ್ತಿರುವುದೇ, ಕರ್ನಾಟಕದ ಜನತೆಯ ಪಾಲಿಗೆ ಶಾಪವಾಗಿದೆ. ನಿಜಲಿಂಗಪ್ಪನವರಿಂದ ಹಿಡಿದು ದೇವೇಗೌಡರ ಕಾಲದವರೆಗೆ ಈ ಶಾಪ ವಿಸ್ತರಿಸುತ್ತ ಬಂದಿದೆ.

ತಮಿಳು ಸಮಾಜಕ್ಕೆ ಒಂದು ಸತತವಾದ ಹಾಗೂ ಸ್ಥಿರವಾದ ಸಾಂಸ್ಕೃತಿಕ ಸ್ಮೃತಿ ಇರುವುದು ಅದರ ಶಕ್ತಿಯಾಗಿದ್ದರೆ, ಕನ್ನಡ ಸಮಾಜ ಒಂದು ಶತಮಾನಕ್ಕೂ ಹಿಂದೆ ಅಂತಿಮ ಮೈಸೂರು ಯುದ್ಧದಲ್ಲಿ ಅದನ್ನು ಕಳೆದುಕೊಂಡದ್ದು ಅದರ ದೌರ್ಬಲ್ಯವಾಗಿ ಇಂದಿಗೂ ಕಾಡುತ್ತಿದೆ. ಆದರೆ ಕಳೆದು ಹೋಗಿರುವ ಈ ಕನ್ನಡ ಕುಲ ಪ್ರಜ್ಞೆಯನ್ನು ಪುನರ್ಸಂಘಟಿಸುವ ರೀತಿಯಲ್ಲಿ ಕರ್ನಾಟಕ ಏಕೀಕರಣ ಚಳುವಳಿ ನಂತರದ ವರ್ಷಗಳಲ್ಲಿ ಕನ್ನಡ ಚಳುವಳಿಯಾಗಿ ಬೆಳೆಯದೇ ಇರುವುದು, ಈ ದೌರ್ಬಲ್ಯ ಒಂದು ಮಾನಸಿಕ ರೋಗವಾಗಿ ಮಾರ್ಪಾಟಾಗಿ ಕನ್ನಡಿಗನ ಅಸಹಾಯಕತೆಗೆ ಕಾರಣವಾಗಿದೆ. ಬರೀ ಭಾವಾವೇಶದ, ಪ್ರದರ್ಶನ ವ್ಯಸನದಿಂದ ಕೂಡಿದ ಈ ಚಳುವಳಿ ಬೆಂಗಳೂರು ಕೇಂದ್ರಿತವಾಗಿ, ಅಲ್ಲಿನ ಕೆಲವರ ನೇತೃತ್ವದಲ್ಲಿ ಒಂದು ದಂಧೆಯಂತೆ ಕಾಣತೊಡಗಿ, ಜನಸಾಮಾನ್ಯರ ಗಂಭೀರ ಗಮನವನ್ನು ಸೆಳೆಯದೇ ಹೋಗಿದೆ. ಆದುದರಿಂದ ಕಳೆದುಹೋಗಿರುವ ಕನ್ನಡಿಗರ 'ಆತ್ಮ'ವನ್ನು ಪುನಃಸಂಸ್ಥಾಪಿಸಬಲ್ಲ ಚಳುವಳಿ ಮಾತ್ರ ಈ ಶಾಪವನ್ನು ಪರಿಹರಿಸಬಲ್ಲದು. ಇದು ಸಾಧ್ಯವಾಗುವುದು ಕರ್ನಾಟಕದ ರಾಜಕಾರಣ ತನ್ನ ಶಕ್ತಿ-ವಿಶಿಷ್ಟತೆಯನ್ನು ಒಕ್ಕೂಟದ ರಾಜಕಾರಣದಲ್ಲಿ ತೋರಿಸಬಲ್ಲದಾದಾಗ ಮಾತ್ರ. ಇಂತಹ

ಶಕ್ತಿ ಸಂಚಯ ಮಾಡಿಕೊಂಡ ತಮಿಳುನಾಡು, ಮಹಾರಾಷ್ಟ್ರ, ಪ.ಬಂಗಾಳ, ಗುಜರಾತ್ ಮುಂತಾದ ರಾಜ್ಯಗಳು ಮಾತ್ರ ಭಾರತದ ಒಕ್ಕೂಟದಲ್ಲಿ ಆತ್ಮವಿಶ್ವಾಸದಿಂದ ಮುನ್ನಡೆದಿವೆ.

ಕರ್ನಾಟಕದಂತಹ ವಿಧೇಯ ರಾಜ್ಯಗಳು ಅಳುಬರುಕನಂತೆ ಒಮ್ಮೆ ಯಾರಿಗೂ ಕೇಳದಂತೆ ಅಳುತ್ತ, ಮತ್ತೊಮ್ಮೆ ಎಲ್ಲರೂ ಕೇಳಿಸಿಕೊಂಡು ಸಹಾನುಭೂತಿ ತೋರಲೆಂಬಂತೆ ಚೀರುತ್ತಾ ಕಾಲ ತಳ್ಳುತ್ತಿವೆ. ಹೀಗಾಗಿಯೇ ನಮ್ಮ ಮುಖ್ಯಮಂತ್ರಿಗಳು ಕಾವೇರಿ ತೀರ್ಪಿನ ಬಗ್ಗೆ ಪ್ರಧಾನಿ ಬಳಿ ದೂರು ದುಮ್ಮಾನ ಹೇಳಿಕೊಳ್ಳಲು ಹೋಗಿ, ಕೊನೆಗೆ ಏನೂ ಹೇಳಲಾಗದೆ ಬೇರೇನೋ ಕಷ್ಟ ಸುಖ ಮಾತಾಡಿಕೊಂಡು ಬರುವಂತಾಗಿರುವುದು. ಜಾಗತಿಕ ರಾಜಕಾರಣದ ಉತ್ಪನ್ನದಂತಿರುವ ಆ ಪ್ರಧಾನಿಯೋ, ಕಾವೇರಿ ಗಲಾಟೆಯಿಂದ ಐ.ಟಿ. ಉದ್ಯಮಕ್ಕೆ ತೊಂದರೆಯಾಗಿಲ್ಲ ತಾನೇ ಎಂದು ಕೇಳುವ ಮೂಲಕ ಇಡೀ ರಾಜ್ಯದ ಕ್ಷೇಮ ಸಮಾಚಾರ ವಿಚಾರಿಸಿಕೊಂಡರಂತೆ! ಇದು ಕನ್ನಡಿಗರ ಕರ್ಮ ಕಥೆ...

ಕರ್ನಾಟಕದ ರಾಜಕಾರಣಿಗಳೆಲ್ಲರಿಗೂ ಭಾರತದ ರಾಜಕಾರಣದ ಭಯ! ಬುಡ ಭದ್ರವಿಲ್ಲದವರ ಭಯವಿದು. ಇಲ್ಲಿ ಸಂದರೆ ಅಲ್ಲಿಯೂ ಸಲ್ಲಬಲ್ಲೆವು ಎಂಬುದಕ್ಕೆ ಬದಲಾಗಿ, ಅಲ್ಲಿ ಸಂದರೆ ಮಾತ್ರ ಇಲ್ಲಿ ಸಲ್ಲುವುದು ಎಂಬ ತಲೆ ಕೆಳಗಾದ ರಾಜಕೀಯ ಗ್ರಹಿಕೆ ಇವರದು! ಕುಲಪ್ರಜ್ಞೆ ಇಲ್ಲದ ಜನ ತಮ್ಮ ಮತದಾರ ಕುಲದ ಬಗೆಗೂ ಗೌರವ ಇಟ್ಟುಕೊಳ್ಳಲಾರರೇನೋ... ಹಾಗಾಗಿಯೇ, ಪಕ್ಷ ಬೇಧವಿಲ್ಲದಂತೆ ಕರ್ನಾಟಕದ ಇಡೀ ರಾಜಕೀಯ ನಾಯಕತ್ವವು, ಕಾವೇರಿ ತೀರ್ಪಿನ ವಿವಾದವನ್ನು ಬೀದಿ ಕಾಳಗದ ನಾಯಕರಿಗೆ ಒಪ್ಪಿಸಿಬಿಟ್ಟು, ತಂತಮ್ಮ ಪಕ್ಷಗಳ ರಾಜಕೀಯ ಲಾಭ–ನಷ್ಟಗಳ ಲೆಕ್ಕಾಚಾರದಲ್ಲಿ ತೊಡಗಿ; ತಂತಮ್ಮ ನಿರ್ಣಾಯಕ ಅಭಿಪ್ರಾಯಗಳನ್ನು ಇನ್ನೂ ಕಾದಿರಿಸಿಕೊಂಡಿದ್ದಾರೆ! ನಮ್ಮ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ನೀರಾವರಿ ಮಂತ್ರಿ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಸರ್ಕಾರದ ಮಹಾಪೋಷಕರೂ, ನೀರಾವರಿ ರಾಜಕಾರಣದ ಅಧ್ವರ್ಯುಗಳೂ ಆದ ದೇವೇಗೌಡರೂ ಸೇರಿದಂತೆ, ಈ ತೀರ್ಪಿನ ಬಗ್ಗೆ ಹದಿನೈದು ದಿನ ಕಳೆದರೂ ತೀರ್ಪಿನ ಸಾವಿರ ಪುಟಗಳ ವಿಸ್ತಾರದ ನೆಪವೊಡ್ಡಿ ಸರ್ಕಾರದ ಪರವಾಗಿ ಯಾರೊಬ್ಬರೂ ಒಂದು ಅಭಿಪ್ರಾಯವನ್ನೋ, ಅನುಸರಿಸಬೇಕಾದ ದಾರಿಯ ದಿಕ್ಕನ್ನೋ ಸೂಚಿಸಲಾಗದಷ್ಟು ಗೊಂದಲದಲ್ಲಿದ್ದಾರೆಂದರೆ, ಈ ನಾಯಕತ್ವಕ್ಕೆ ರಾಜ್ಯದ ಜನತೆ ಕುರಿತ ಬದ್ಧತೆಗಿಂತ ಬೇರೇನೋ ಬದ್ಧತೆ ಇದೆಯೆಂದೇ ಅರ್ಥ. ಈ ಬೇರೇನೋ ಬದ್ಧತೆ ಇನ್ನೇನೂ ಆಗಿರದೆ, ಕುರ್ಚಿ ಭದ್ರತೆ ಮಾತ್ರವಾಗಿದೆ. ಇದು ಇಡೀ ಕರ್ನಾಟಕದ ರಾಜಕಾರಣವನ್ನು ಬಾಧಿಸುತ್ತಿರುವ ವಾಸಿಯಾಗದ ರೋಗವಾಗಿದೆ.

ಜನ ಹೀಗೆ ಏನೋ ಅಂದುಕೊಳ್ಳುತ್ತಾ, ಊಹಿಸಿಕೊಳ್ಳುತ್ತಾ, ಕೋಪಗೊಳ್ಳುತ್ತಾ, ಅವರಿವರ ಪ್ರತಿಕೃತಿಗಳನ್ನು ಸುಡುತ್ತಾ ಎಷ್ಟು ದಿನ ಕಾಲ ಕಳೆಯಬೇಕು? ಕೊನೆಗೆ ನಮ್ಮ ಸರ್ಕಾರವೇ ಈ ತೀರ್ಪನ್ನು ಒಕ್ಕೂಟ ವ್ಯವಸ್ಥೆಯ ನಿರ್ಬಂಧಗಳಿಂದಾಗಿ ಸಣ್ಣಪುಟ್ಟ ಹೊಂದಾಣಿಕೆಗಳೊಂದಿಗೆ ಒಪ್ಪಬೇಕಾದ ಸಂದರ್ಭ ಬಂದರೆ (ಅಂದರೆ ಕಾನ್ನಾಡರ ಅಭಿಪ್ರಾಯಕ್ಕೆ ಮನ್ನಣೆ ಸಿಗುವಂತಾದರೆ)* ವೀರಾವೇಶದಿಂದ ಚಳವಳಿ ನಡೆಸುತ್ತಿರುವ ರಾಜ್ಯದ ಜನತೆಗೆ ಆಗುವ ಮುಖ ಭಂಗಕ್ಕೆ ಯಾರು ಹೊಣೆ? ಕೃಷ್ಣ ಕಣಿವೆ ನೀರಿನ ವಿವಾದದ ತೀರ್ಪಿನ ಬಗ್ಗೆ ಮೇಲ್ಮನವಿ ಸಲ್ಲಿಸಿ ಈವರೆಗೂ ನಾವೇನೂ ಪಡೆಯಲಾಗಿಲ್ಲ ಎಂಬ ಅರಿವು ನಮಗಿದೆಯೇ?

ಸುಪ್ರಿಂ ಕೋರ್ಟ್ ಈಗಾಗಲೇ ನ್ಯಾಯಾಧೀಕರಣದ ಕಾರ್ಯಾಚರಣೆಗೆ ಸಂಬಂಧಿಸಿದಂತೆ ತಾನು ಹಸ್ತಕ್ಷೇಪ ಮಾಡಬಯಸುವುದಿಲ್ಲ ಎಂದು ಸ್ಪಷ್ಟಪಡಿಸಿರುವುದು ನಮಗೆ ಗೊತ್ತಿದೆಯಲ್ಲವೇ?

ಪರಿಸ್ಥಿತಿ ಇಷ್ಟು ಕಷ್ಟವಿರುವಾಗ, ಕರ್ನಾಟಕದ ಮುಂದೆ ಇರುವ ಸದ್ಯದ ಆಯ್ಕೆಗಳು ಇವು ಮಾತ್ರ:

೧. ಈ ತೀರ್ಪಿನ ದುರ್ಬಲ ಅಂಶಗಳನ್ನು ಗುರುತಿಸಿ, ಅವುಗಳ ಆಧಾರದ ಮೇಲೆ ಮೇಲ್ಮನವಿ ಸಲ್ಲಿಸುವುದು ಮತ್ತು ಇದಕ್ಕೆ ಸಂಬಂಧಪಟ್ಟ ಅಧಿಕಾರಶಾಹಿಯನ್ನು ಜವಾಬ್ದಾರರನ್ನಾಗಿ ಮಾಡಿ, ಹೊಸ ಮಾಹಿತಿ ಹಾಗೂ ಶ್ರದ್ಧೆಯೊಂದಿಗೆ ವಾದ ಮಂಡಿಸುವ ಛಾತಿ ತೋರುವುದು.

೨. ಅಂತಿಮ ತೀರ್ಪಿನಲ್ಲಿ ಅವಕಾಶ ಮಾಡಿಕೊಡಲಾಗಿರುವ ಹೆಚ್ಚಿನ ನೀರಿನ ಪಾಲು ಹಾಗೂ ಹೆಚ್ಚುವರಿ ನೀರಾವರಿ ಪ್ರದೇಶದ ಅಭಿವೃದ್ಧಿಯ ಪೂರ್ಣ ಪ್ರಯೋಜನವನ್ನು ಪಡೆದುಕೊಳ್ಳುವ ರೀತಿಯಲ್ಲಿ ನಮ್ಮ ನೀರಾವರಿ ಪದ್ಧತಿ ಹಾಗೂ ಬೆಳೆ ಪದ್ಧತಿಗಳನ್ನು ವ್ಯವಸ್ಥಿತವಾಗಿ ಪರಿಷ್ಕರಿಸುವುದು. ಉದಾ: ಸಾಧ್ಯವಿದ್ದೆಡೆಯಲ್ಲಿ ಹನಿ ನೀರಾವರಿಯನ್ನು ಸೂಕ್ತ ಸೌಲಭ್ಯಗಳ ಒದಗಿಸುವಿಕೆ ಮೂಲಕ ಕಡ್ಡಾಯಗೊಳಿಸುವುದು.

೩. ತಮಿಳುನಾಡನ್ನು ಪ್ರತಿಸ್ಪರ್ಧಿಯನ್ನಾಗಿ ನೋಡದೆ, ಪ್ರಾದೇಶಿಕ ರಾಜಕಾರಣದ ಯಶಸ್ವಿ ಮಾದರಿ ಎಂಬಂತೆ ಪರಿಗಣಿಸಿ, ಸೋದರ ಭಾವದಿಂದ ಎರಡೂ ರಾಜ್ಯಗಳ ರೈತ ಬಾಂಧವರ ಮಧ್ಯಸ್ಥಿಕೆಯಲ್ಲಿ ಸಂಧಾನ ಆರಂಭಿಸುವುದು.

ಇದು ಕಾವೇರಿ ಸಮಸ್ಯೆಗಷ್ಟೇ ಪರಿಹಾರ ದಾರಿ ತೆರೆಯಬಹುದು. ಆದರೆ ಕರ್ನಾಟಕವು ನೆಲ, ಜಲ, ಭಾಷೆ, ಸಂಸ್ಕೃತಿ ಮತ್ತು ಅಭಿವೃದ್ಧಿ ಆದ್ಯತೆಗಳಿಗೆ ಸಂಬಂಧಿಸಿದಂತೆ, ಇತ್ತೀಚಿನ ವರ್ಷಗಳಲ್ಲಿ ಪದೇ ಪದೇ ಇಂತಹ ಸಂದಿಗ್ಧಗಳಿಗೆ ಸಿಕ್ಕಿ ಹಾಕಿಕೊಳ್ಳುತ್ತಿರುವುದನ್ನು ನಾವು ಗಮನಿಸದೇ ಇರಲಾಗದು. ಇದಕ್ಕೇನು ಕಾರಣವೆಂದು ಕನ್ನಡ ಜನತೆ ಆಳವಾಗಿ ಯೋಚಿಸಿ ಪರಿಹಾರದ ಕಡೆ ಕ್ಷಿಪ್ರ ಗಮನ ಹರಿಸಬೇಕಾಗಿದೆ. ಇಲ್ಲದೇ ಹೋದಲ್ಲಿ ಈಗಾಗಲೇ ಅನ್ಯ ಸಂಸ್ಕೃತಿಗಳ ದುರಾಕ್ರಮಣಕ್ಕೆ ಈಡಾಗಿ ಆತ್ಮದ ಜೊತೆಗೆ ತನ್ನ ಭೌತಿಕ ಚಹರೆಯನ್ನು ಕಳೆದುಕೊಳ್ಳುತ್ತಿರುವ ಕರ್ನಾಟಕ, ತನ್ನ ರಾಜಕಾರಣವನ್ನು ಇತರರಿಗೊಪ್ಪಿಸುವ ಕಾಲ ದೂರವಿಲ್ಲ. ಎಲ್ಲವೂ ಮಾರುಕಟ್ಟೆಯಾಗಿರುವ ಈ ದಿನಗಳಲ್ಲಿ ಕುಲಪ್ರಜ್ಞೆ ಇಲ್ಲದ ರಾಜಕಾರಣಿಗಳನ್ನು *ಖರೀದಿಸುವುದು ಅತಿ ಸುಲಭ. ಇದನ್ನರಿತ ಐ.ಟಿ., ಬಿ.ಟಿ.ಯೂ ಸೇರಿದಂತೆ ರಿಯಲ್ ಎಸ್ಟೇಟ್, ಗಣಿ ಉದ್ಯಮ ಇತ್ಯಾದಿ ವಿವಿಧ ರಂಗಗಳ ಮಾಫಿಯಾಗಳು ಈಗಾಗಲೇ ಬೆಂಗಳೂರಿನಲ್ಲಿ ನೆಲೆಯೂರಿ, ರಾಜ್ಯ ರಾಜಕಾರಣವನನ್ನು ನಿಯಂತ್ರಿಸುವ ನಿರಂತರ ಪ್ರಯತ್ನ ಮಾಡುತ್ತಿವೆ. ಹೀಗಿರುವಾಗ ಕನ್ನಡ-ಕರ್ನಾಟಕವನ್ನು ಉಳಿಸಿಕೊಳ್ಳುವ, ಅಂದರೆ ಕನ್ನಡ

---

* ಖ್ಯಾತ ನಾಟಕಕಾರ ಗಿರೀಶ್ ಕಾರ್ನಾಡರು ಕಾವೇರಿ ನ್ಯಾಯಾಧಿಕರಣದ ಅಂತಿಮ ತೀರ್ಪನ್ನು ಎಲ್ಲ ರಾಜ್ಯಗಳೂ ಗೌರವಿಸಿ ಒಪ್ಪಿಕೊಳ್ಳಬೇಕೆಂದು ಹೇಳಿ ಕನ್ನಡ ಚಳುವಳಿಕಾರರ ಕೆಂಗಣ್ಣಿಗೆ ಗುರಿಯಾಗಿದ್ದರು!

ಜನರ ಹಿತ ಕಾಪಾಡುವ ಏಕೈಕ ದಾರಿಯೆಂದರೆ, ಕನ್ನಡ ಕುಲ ಪ್ರಜ್ಞೆಯನ್ನಾಧರಿಸಿದ ರಾಜಕಾರಣವನ್ನು ರೂಪಿಸುವುದೇ ಆಗಿದೆ. ಇದು ಮಾತ್ರ ಸದ್ಯದ ನರಸತ್ತ ಕನ್ನಡದ ಈಗಿನ ರಾಜಕೀಯ ನಾಯಕತ್ವವನ್ನು ಬುಡಮೇಲುಗೊಳಿಸಬಲ್ಲುದು. ಇದು ಮಾತ್ರ ಅಂತರಾಷ್ಟ್ರೀಯ ಮಾಫಿಯಾಗಳ ಹುನ್ನಾರಗಳ ಜೊತೆ ಜೊತೆಗೆ ಭಾರತದ ಒಕ್ಕೂಟ ವ್ಯವಸ್ಥೆಯ ಒತ್ತಡಗಳನ್ನು ನಿವಾರಿಸಿಕೊಳ್ಳುವ ಆಂತರಿಕ ಶಕ್ತಿ ಹೊಂದಿರಬಲ್ಲದು–ತಮಿಳುನಾಡಿನ ರಾಜಕಾರಣದ ಹಾಗೆ. ಕನ್ನಡಿಗರು ಯೋಚಿಸಬೇಕಾದ ಕಾಲವೀಗ ಬಂದಿದೆ. ಇದು ಸುಲಭದ ಕೆಲಸವಲ್ಲ. ಆದರೆ ಈ ಕೆಲಸಕ್ಕೆ ಕೈ ಹಾಕದೆ ಕನ್ನಡಿಗರಿಗೆ ಉಳಿಗಾಲವಿಲ್ಲ.

(ನಮ್ಮ ನಾಡು, ಫೆಬ್ರವರಿ ೨೦, ೨೦೦೭)

೪. ಕನ್ನಡ ವಿರೋಧಿಯಾಗುತ್ತಿರುವ ಕನ್ನಡ ಚಳುವಳಿ

ಚಳವಳಿ ಎಂದರೆ ಮೂಲತಃ ತಳಮಳ. ಇದೀಗ ಅದು ಬಹಿರಂಗ ಆಂದೋಲನ ಎಂಬರ್ಥದಲ್ಲೂ ಚಾಲ್ತಿಯಲ್ಲಿರುವುದರಿಂದ, ಕನ್ನಡ ಚಳುವಳಿ ಎಂದಾಕ್ಷಣ ನಾವು ಸಾರ್ವಜನಿಕವಾಗಿ ಕನ್ನಡಕ್ಕಾಗುತ್ತಿರುವ ಅನ್ಯಾಯಗಳೆಂದು ಹೇಳಲಾದ ವಿಷಯಗಳ ಬಗ್ಗೆ ಬೀದಿಯಲ್ಲಿ ನಡೆಯುವ ಪ್ರತಿಭಟನೆ–ಧರಣಿ–ಪ್ರದರ್ಶನಗಳನ್ನೇ ಕನ್ನಡ ಚಳುವಳಿ ಎಂದು ಭಾವಿಸತೊಡಗಿದ್ದೇವೆ. ಕಳೆದ ಹತ್ತಾರು ವರ್ಷಗಳಿಂದ ಕನ್ನಡದ ಹೆಸರಿನಲ್ಲಿ ನಡೆಯುತ್ತಿರುವ ಚಳುವಳಿಗಳು ಇದೇ ರೂಪದಲ್ಲಿ ವ್ಯಕ್ತವಾಗುತ್ತಿರುವುದರಿಂದ, ಜನ ಹಾಗೆ ಭಾವಿಸಿರುವುದೂ ಸಹಜವಾಗಿದೆ. ಆದರೆ ಈ ರೂಪದ ಚಳುವಳಿಗಳು ಇಷ್ಟು ವರ್ಷ ಬೀದಿ ಬೀದಿ ಸುತ್ತಿದರೂ, ಕನ್ನಡಿಗರೆಲ್ಲರಿಗೂ ಕನ್ನಡದಲ್ಲೇ ಮೂಲಶಿಕ್ಷಣ ದೊರಕಿಸುವ ಮೂಲಕ ಕನ್ನಡಕ್ಕಾಗುವ ಎಲ್ಲ ರೀತಿಯ ಅಪಾಯಗಳನ್ನು ತಡೆಯಬಹುದೆಂಬ ಮೂಲ ಅರಿವನ್ನೇ ಕಳೆದುಕೊಂಡಿವೆ. ಹಾಗಾಗಿ ಕನ್ನಡ ಶಾಲೆಗಳಲ್ಲಿ ಒಂದನೇ ತರಗತಿಯಿಂದಲೇ ಇಂಗ್ಲಿಷ್ ಕಲಿಸುವ ಸರ್ಕಾರಿ ಆಜ್ಞೆಗೆ ದಾರಿ ಮಾಡಿಕೊಟ್ಟು; ಈಗ ಬೀದಿ ಬದಿಯ ಫಲಕಗಳಿಗೆ ಹಾಗೂ ಅನ್ಯ ಭಾಷಿಕರ ನಾಯಕರ ಮುಖಗಳಿಗೆ ಮಸಿಯನ್ನೋ, ಮೊಟ್ಟೆಸಾರವನ್ನೋ ಬಳಿಯುವ ಕಾರ್ಯಕ್ರಮಗಳ ಮೂಲಕ ತನ್ನ ಹತಾಶೆಯನ್ನು ವ್ಯಕ್ತಪಡಿಸುವಂತಹ ಅಧೋಗತಿಗೆ ತಲುಪಿದೆ. ದುರಂತವೆಂದರೆ, ಈ ಹತಾಶೆಯನ್ನೇ ವೀರಾವೇಶವೆಂದು ಈ ಚಳವಳಿಯ ಸದ್ಯದ ನಾಯಕರು ಬಗೆದಿರುವುದು ಮತ್ತು ಅದಕ್ಕೆ ಚಳುವಳಿಯ ಹಿರಿಯರೆನಿಸಿಕೊಂಡವರು ಮಾನ್ಯತೆ ನೀಡುತ್ತಿರುವುದು!

ಈ ಬೆಳವಣಿಗೆ ಕನ್ನಡ ಚಳುವಳಿಗೆ ಏನಾಗಿದೆ ಎಂಬುದರ ಎಲ್ಲ ಕಥೆಯನ್ನೂ ಹೇಳುತ್ತದೆ: ಯಾವ ಮಹದಾಶೆಯೊಡನೆ ಈ ಚಳುವಳಿ ಮೂಡಿತೋ ಅದನ್ನು ಮರತು ಇಂದು ಚಿಲ್ಲರೆ ಭಾಷಾ ವೈಷಮ್ಯದ ರಾಜಕಾರಣಕ್ಕೆ ತನ್ನನ್ನು ಸೀಮಿತಗೊಳಿಸಿಕೊಂಡು, ಕಾಲಧರ್ಮಕ್ಕನು ಸಾರವಾಗಿ ಒಂದು ದಂಧೆಯಾಗಿ ಮಾರ್ಪಟ್ಟಿದೆ. ಈ ಚಳುವಳಿಯ ಸದ್ಯದ ನಾಯಕರು ಹಾಗೂ ಅವರಿಗೆ ಬೆಂಬಲವಾಗಿ ನಿಂತಿರುವ ಹಿರಿಯ ನಾಯಕರ ವೈವಿಧ್ಯಮಯ ದಂಧೆಗಳನ್ನು ಸುಮ್ಮನೆ ನೋಡಿದರೆ ಸಾಕು, ಇದು ಸ್ಪಷ್ಟವಾಗುತ್ತದೆ. ಇದು ಹೀಗೇಕಾಯಿತು? ಕನ್ನಡ ಚಳುವಳಿ ರೂಪುಗೊಂಡ ರೀತಿನೀತಿಗಳಲ್ಲೇ ಏನಾದರೂ ದೋಷವಿದ್ದವೇ? ಅದನ್ನು ಮುನ್ನಡೆಸಿದ ನಾಯಕರೇ ಎನಾದರೂ ತಪ್ಪು ಮಾಡಿದರೆ? ಜಾಗತೀಕರಣದ ಭರಾಟೆಯ ಇಂದಿನ ದಿನಗಳಲ್ಲಿ ಕನ್ನಡ ಚಳುವಳಿ ಎಂಬುದೇ ಬೆಲೆ ಕಳೆದುಕೊಂಡು ಅಪ್ರಸ್ತುತವೆನ್ನಿಸಿದೆಯೇ? ದಂಧೆಯೇ ಕಾಲಧರ್ಮ ಪ್ರತೀಕವಾಗಿ ತೊಡಗಿರುವಾಗ, ಚಳುವಳಿಗಳೂ ದಂಧೆಗಳಾಗಿ ಮಾರ್ಪಾಟಾಗುವುದು ಅನಿವಾರ್ಯವೆ?– ಈ ಎಲ್ಲ ಪ್ರಶ್ನೆಗಳನ್ನು ಪರಿಶೀಲಿಸಲು ಕನ್ನಡ ಚಳುವಳಿ ಎಂಬುದು ಹುಟ್ಟಿದ ಹಾಗೂ ವಿಕಾಸಗೊಳ್ಳುತ್ತಾ ಬಂದ ರಾಜಕೀಯ ಸಂದರ್ಭಗಳನ್ನು

ವಿಶ್ಲೇಷಿಸಬೇಕಾಗುತ್ತದೆ. ಏಕೆಂದರೆ, ಭಾಷೆ ಎಂಬುದು ಕೇವಲ ಸಂಪರ್ಕ ಸಾಧನವಾಗಿರದೆ, ಒಂದು ಸಂಸ್ಕೃತಿ ಮಾಧ್ಯಮವೂ ಆಗಿದ್ದು; ರಾಜಕಾರಣವೆಂಬುದು ತನ್ನ ಚೇತನವನ್ನು ಪಡೆದುಕೊಳ್ಳುವುದು ಸಾಂಸ್ಕೃತಿಕ ಬಲಸಂವರ್ಧನೆಯ ರೂಪದಲ್ಲೇ (ಇಂದಿನ ಜಾಗತೀಕರಣ ತನ್ನ ಬೆಂಬಲಿಗರನ್ನು ಸೃಷ್ಟಿಸಿಕೊಳ್ಳುತ್ತಿರುವ ರೀತಿ ನೀತಿಗಳನ್ನೇ ನೋಡಿ) ಎಂಬುದನ್ನು ನಾವು ಮರೆಯುವಂತಿಲ್ಲ.

ಸಂಸ್ಕೃತ ಪರಂಪರೆಯೊಂದಿಗಿನ ಸೆಣೆಸಾಟದಲ್ಲೇ ರೂಪುಗೊಂಡ ಕನ್ನಡ ಸಂಸ್ಕೃತಿಯ ಚರಿತ್ರೆಯಲ್ಲಿ ಸಹಜವಾಗಿಯೇ, ಕನ್ನಡದ ಮೊದಲ ಶಾಸನಕ್ಕೆ – ಅದು ಹಲ್ಮಿಡಿಯೇ ಆಗಿರಲಿ, ಮತ್ತೊಂದೇ ಆಗಿರಲಿ– ಕಾರಣನಾದವನೇ ಮೊದಲ ಕನ್ನಡ ಚಳುವಳಿಗಾರ ಎನ್ನಬಹುದು. ಹೀಗೆ ಕನ್ನಡ ಚಳುವಳಿಗೆ ಕನಿಷ್ಠ ೧೫೦೦ ವರ್ಷಗಳ ಇತಿಹಾಸವಿದೆ ಎಂದು ಹೇಳಬಹುದು. ನೃಪತುಂಗ, ಪಂಪರಾದಿಯಾಗಿ ಕುವೆಂಪು–ತೇಜಸ್ವಿಯವರಿಗೆ ಈ ಕನ್ನಡ ಚಳುವಳಿ ಕನ್ನಡ ಜನರ ಬದುಕಿನ ಹಲವು ನೆಲೆಗಳಲ್ಲಿ ರೂಪುಗೊಳ್ಳುತ್ತಾ ಬಂದಿದೆ. ಇಲ್ಲಿ ನಾನು ಕುವೆಂಪು–ತೇಜಸ್ವಿಯವರಿಗೆ ಎಂದು ನಿರ್ದಿಷ್ಟವಾಗಿ ಹೇಳಲು ಕಾರಣವಿದೆ. ಕುವೆಂಪು ಕನ್ನಡ ಚಳುವಳಿ ಈ ಮೇಲೆ ಸೂಚಿಸಿದಂತಹ ಹತಾಶ ರೂಪ ತಳೆಯುವ ಮುನ್ನ ಹೊಂದಿದ್ದ ತಾತ್ತ್ವಿಕ ಘನತೆಗೆ ಒಂದು ರಾಜಕೀಯ ಅರ್ಥಕೊಟ್ಟು, ಮೊದಲ ಬಾರಿಗೆ ಆಧುನಿಕ ಕನ್ನಡ ಚಳುವಳಿಯ ಆಂತರಿಕ ದೌರ್ಬಲ್ಯಗಳ ಬಗ್ಗೆ ಒಳನೋಟವುಳ್ಳ ಒಂದು ವ್ಯಾಖ್ಯಾನ ಮಂಡಿಸಿದವರು: "ಕರ್ನಾಟಕದ ಈಚಿನ ಕನ್ನಡ ಚಳುವಳಿಗಳೂ ಕೂಡಾ ವ್ಯಾಪಕ ಹಾಗೂ ವಿಸ್ತೃತ ರೂಪ ತಾಳದೆ, ರಾಜಕೀಯ, ಸಾಮಾಜಿಕ ಹಾಗೂ ಧಾರ್ಮಿಕ ಆಂದೋಲನಗಳ ಸ್ವರೂಪಕ್ಕೆ ತಿರುಗದೆ ಹೋದುದಕ್ಕೆ ಕಾರಣವೇನು? ಇದಕ್ಕೆ ನನಗೆ ಹೊಳೆಯುವ ಮುಖ್ಯ ಕಾರಣ– ಬಿ.ಎಂ.ಶ್ರೀ, ಅ.ನ.ಕೃ., ರಾಮಮೂರ್ತಿ ಮುಂತಾದ ಬ್ರಾಹ್ಮಣರು ಇದರ ನೇತೃತ್ವ ವಹಿಸಿದ್ದು. ಏಕೆಂದರೆ ಬ್ರಾಹ್ಮಣನಿಂದ ಸ್ಫೂರ್ತಿಗೊಳ್ಳುವ ದೇಶಭಾಷಾ ಚಳುವಳಿಗಳು ಕೇವಲ ಅವನ ಆಲೋಚನೆಗೆ ಅಬಿವ್ಯಕ್ತಿ ಸಿದ್ಧಿಯನ್ನು ಒದಗಿಸುವ ಸಾಹಿತ್ಯಕ್ರಾಂತಿಗೆ ಮಾತ್ರ ಸೀಮಿತವಾಗಿರುತ್ತದೆ. ಇದಕ್ಕೆ ಸಾಹಿತ್ಯದಲ್ಲಿ ಕ್ರಾಂತಿಕಾರಿಯಾಗಬೇಕೆಂದು ಹಾತೊರೆದ ಅಡಿಗರು ಸಾಮಾಜಿಕವಾಗಿ ಸಂಪ್ರದಾಯನಿಷ್ಠರಾಗಿ, ವರ್ಣಾಶ್ರಮ ಧರ್ಮ ಪ್ರತಿಪಾದಿಸಿದ್ದು; ಆಡುಭಾಷೆಯಲ್ಲೇ ಕಾವ್ಯಬರೆಯಬೇಕೆಂದ ಅವರು ದೇಶಭಾಷಾ ಮಾಧ್ಯಮದಲ್ಲಿ ಪಾಠ ಹೇಳುವುದನ್ನು ವಿರೋಧಿಸಿದ್ದು–ಇತ್ಯಾದಿಗಳನ್ನು ಉದಾಹರಿಸಬಹುದು. ಕನ್ನಡ ಚಳುವಳಿ ತಮಿಳು ಚಳುವಳಿಯಂತೆ ಶೂದ್ರ ಆಂದೋಲನದ ಸ್ವರೂಪ ತಳೆಯದೆ ಹೋಯಿತು...." ('ಕರ್ನಾಟಕ ಸಂಸ್ಕೃತಿ ವಿಶ್ಲೇಷಣೆ': ಕರ್ನಾಟಕ ಕಲಾವಿದರ ಹಾಗೂ ಬರಹಗಾರ ಒಕ್ಕೂಟದ ಭಾಷಣ: ಸಂಕ್ರಮಣ–೬೦).

ಮೇಲ್ನೋಟಕ್ಕೆ ಇದು ಕನ್ನಡ ಚಳುವಳಿ ಕುರಿತಂತೆ ಒಂದು ಬಿಡುಬೀಸಾದ, ಒರಟೊರಟಾಗಿ ಬ್ರಾಹ್ಮಣ ವಿರೋಧಿಯಾದ ಹಾಗೂ ಅನೇಕ ರೀತಿಯಲ್ಲಿ ಶೂದ್ರರೇ ಕನ್ನಡ ಚಳುವಳಿಯ 'ಕ್ರಿಯಾಶೀಲ' ನಾಯಕರಾಗಿರುವ ಇಂದಿನ ಸಂದರ್ಭದಲ್ಲಿ ಅಸಂಗತವಾದ ಹೇಳಿಕೆಯಂತೆ ಕಂಡರೂ, ಅದು ಕನ್ನಡ ಚಳುವಳಿಯ 'ಚರಿತ್ರೆ' ಕುರಿತಂತೆ ಒಂದು ಆಳವಾದ ತಾತ್ತ್ವಿಕ ಒಳನೋಟ ನೀಡುವುದಂತೂ ನಿಜ. ಬಹುಶಃ ಈ ಮೂಲಕ ತೇಜಸ್ವಿ, ಸಂಸ್ಕೃತ ಪರಂಪರೆಯ ವಿರುದ್ಧದ ಸಾಂಸ್ಕೃತಿಕ ಚಳುವಳಿಯಾಗಿ ಆರಂಭವಾದ ಕನ್ನಡ ಚಳುವಳಿ, ಇತ್ತೀಚಿನ ಚರಿತ್ರೆಯಲ್ಲಿ ತನ್ನ ಅಸ್ಮಿತೆಯನ್ನು ಸಾಧಿಸಿಕೊಳ್ಳುವ ಅನಿವಾರ್ಯತೆಯಲ್ಲಿ ಮರಾಠಿ, ತೆಲುಗು, ಉರ್ದು,

ತಮಿಳು ಮುಂತಾದ ಅನ್ಯಭಾಷಿಕ ಸೋದರ ಸಮುದಾಯಗಳ ಸಾಮಾಜಿಕ ಒತ್ತಡಗಳನ್ನು ಹಾಗೂ ಹಿಂದಿ-ಇಂಗ್ಲಿಷ್‌ಗಳ ಪ್ರಭುತ್ವವಾದಿ ರಾಜಕೀಯ ಒತ್ತಡಗಳನ್ನು ನಿವಾರಿಸಿಕೊಳ್ಳುವ ಹೋರಾಟದಲ್ಲಿ ಮತ್ತೆ ಸಂಸ್ಕೃತ ಪರಂಪರೆಯ ಸಾಮಾಜಿಕ-ಸಾಂಸ್ಕೃತಿಕ ಆಶಯಗಳನ್ನೇ ಒಪ್ಪಿಕೊಳ್ಳತೊಡಗಿರುವಂತಾಗಿರುವ ವಿಪರ್ಯಾಸವನ್ನು ಸೂಚಿಸುತ್ತಿದ್ದಾರೆಂದು ಕಾಣುತ್ತದೆ. ಭಾಷೆಯೆಂಬುದು ಜನರ ಮತ್ತು ಸಮಾಜದ ಶಕ್ತಿಯೂ ಆಗಿರುವುದರಿಂದ, ಅದು ಕೇವಲ ಆತ್ಮಾಭಿಮಾನದ ಅಮೂರ್ತ ಸಂಕೇತವಾಗದೆ, ಸಾಮಾಜಿಕ ಪುನಾರಚನೆಯನ್ನು ಪ್ರಚೋದಿಸುವಂತಹ ಆಲೋಚನೆಗಳ ಮೂರ್ತ ರಾಜಕೀಯ ಸಾಧನವೂ ಆಗಬೇಕೆಂಬ ಆಗ್ರಹ ಇದರಲ್ಲಿ ಕಾಣುತ್ತದೆ. ಆದರೆ ಕನ್ನಡ ಸಾಹಿತ್ಯ ಮತ್ತು ಆ ಮೂಲಕ ಸಂಸ್ಕೃತಿ ಚರಿತ್ರೆಯೆಂಬುದು ತಮಿಳು ಸಾಹಿತ್ಯ-ಸಂಸ್ಕೃತಿ ಚರಿತ್ರೆಯಂತೆ ಸಂಸ್ಕೃತ ಪರಂಪರೆಯ ವಿರುದ್ಧದ ಪ್ರತಿರೋಧಗಳ ಚರಿತ್ರೆಯಾಗಿ ಕಟ್ಟಲ್ಪಟ್ಟಿತೋ ಎಂಬುದು ಇನ್ನೂ ಆಳವಾದ ಸಂಶೋಧನೆಗೆ ಒಳಪಡಬೇಕಾದ ವಿಷಯವಾಗಿದ್ದು, ಇದೇ ಕುವೆಂಪು ತಾತ್ವಿಕತೆ ಮತ್ತು ತೇಜಸ್ವಿ ತಾತ್ವಿಕತೆ ನಡುವೆ ಕಾಣುವ 'ಜಗಿತ'ಕ್ಕೂ ಕಾರಣವಾಗಿದ್ದಂತೆ ತೋರುತ್ತದೆ. ಆದರೆ ಈ ಜಗಿತವೇ ಸಮಕಾಲೀನ ಕನ್ನಡ ಚಳುವಳಿಯನ್ನು ಅವಲೋಕಿಸಿಲು ಒಂದು ಸಮರ್ಥ ತಾತ್ವಿಕ ಪರಿಕರವಾಗಿ ಉಳಿದುಕೊಂಡಿರುವುದುದಂತೂ ನಿಜ.

ಅದೇನೇ ಇರಲಿ, ಆಧುನಿಕ ಕನ್ನಡ ಚಳುವಳಿಯ ಬೀಜ ಬಿತ್ತಿದ ಡೆಪ್ಯೂಟಿ ಚೆನ್ನಬಸಪ್ಪ ಅವರು ೧೮೫೬ರಷ್ಟು ಹಿಂದೆಯೇ ಮರಾಠಿ ಪ್ರಭುತ್ವದ ನಡುವೆ ಕನ್ನಡದ ಮಕ್ಕಳಿಗೆ ಕನ್ನಡದಲ್ಲಿ ಶಿಕ್ಷಣಕ್ಕಾಗಿ ಆರಂಭಿಸಿದ ಹೋರಾಟ ಸರಿಯಾಗಿ ಒಂದು ಶತಮಾನದ ನಂತರ ಕನ್ನಡ ರಾಜ್ಯೋದಯದಲ್ಲಿ ಮೂರ್ತಗೊಂಡಿದ್ದರ ಹಿಂದೆ; ಒಂದು ಭಾಷೆಯನ್ನಾಡುವ ಜನ ಒಟ್ಟಿಗೆ ಬದುಕುವ ಸಾಂಸ್ಕೃತಿಕ ಆಶಯದ ಜೊತೆಗೇ, ಒಂದು ಪ್ರತ್ಯೇಕ ಆಡಳಿತ ಘಟಕವಾಗಿ ಅಭಿವೃದ್ಧಿ ಸಾಧಿಸುವ ರಾಜಕೀಯ ಆಶಯವೂ ಕೆಲಸ ಮಾಡಿದೆ ಎಂಬುದನ್ನು ನಾವು ಮರೆಯಬಾರದು. ಒಂದು ಭಾಷೆಯನ್ನಾಡುವ ಜನರನ್ನು ಎರಡು ಆಡಳಿತ ಘಟಕಗಳನ್ನಾಗಿ ಒಡೆದ ಬ್ರಿಟಿಷರ ಬಂಗಾಳ ವಿಭಜನೆಯ ರಾಜಕೀಯ ಕ್ರಮವೇ ಒಂದು ನೆಪವಾಗಿ ಸ್ಫೋಟಗೊಂಡ ಭಾರತದ ಸ್ವಾತಂತ್ರ್ಯ ಹೋರಾಟ, ನಂತರದ ದಿನಗಳಲ್ಲಿ ಸಂಘಟನೆಗೊಂಡ ರೀತಿ ನೀತಿಗಳಿಂದಾಗಿ; ಸ್ವಾತಂತ್ರ್ಯ ಸಾಧನೆಯ ಹೊತ್ತಿಗೆ, ಭಾಷಾ ಪ್ರಾದೇಶಿಕತೆಗಳು ರಾಷ್ಟ್ರೀಯತೆಯೆಂಬ ರಾಜಕೀಯ ಒಕ್ಕೂಟದ ಪರಿಕಲ್ಪನೆಗೆ ವಿಧೇಯತೆಯನ್ನು ಸಾರುವಂತಹ ದುಃಸ್ಥಿತಿ ಉಂಟಾಯಿತು. ಇದರ ಪರಿಣಾಮವಾಗಿ ಅಖಿಲ ಭಾರತೀಯತೆಯ ಮಾರುವೇಷದಲ್ಲಿ ಸಂಸ್ಕೃತ ಪರಂಪರೆಯೇ ಮತ್ತೆ ಆಧುನಿಕ ಭಾರತದ ಆಳುವ ಸಂಸ್ಕೃತಿಯಾಗಿ ಮೇಲುಗೈ ಪಡೆಯುವಂತಹ ಪರಿಸ್ಥಿತಿ ಉಂಟಾಯಿತು. ಆದರೆ ಒಂದೂವರೆ ಶತಮಾನದಷ್ಟು ಹಿಂದೆಯೇ ಟಿಪ್ಪುಸುಲ್ತಾನನ ಅಂತಿಮ ಸೋಲಿನೊಂದಿಗೆ ತನ್ನ ಅಳಿದುಳಿದಿದ್ದ ಭೌಗೋಳಿಕ ಹಾಗೂ ರಾಜಕೀಯ ಐಕ್ಯತೆಗಳನ್ನು ಕಳೆದುಕೊಂಡು ಸಾಂಸ್ಕೃತಿಕ ವಿಘಟನೆಗೆ ಈಡಾಗಿದ್ದ ಕನ್ನಡಕ್ಕೆ, ತಮಿಳು ತೆಲುಗುಗಳಂತೆ ಇದನ್ನು ಧಿಕ್ಕರಿಸುವ ಶಕ್ತಿಯಾಗಲಿ, ತನ್ನ ಮೂಲ ಅಸ್ಮಿತೆಯನ್ನು ಮತ್ತೆ ಕ್ರೋಢೀಕರಿಸಿಕೊಳ್ಳುವ ಛಾತಿಯಾಗಲಿ ಇಲ್ಲದೆ ಹೋಯಿತು.

ಹೀಗಾಗಿ ಸ್ವಾತಂತ್ರ್ಯ ಸಾಧನೆಯ ಹೊತ್ತಿಗೆ; ಅದರ ಜೊತೆಜೊತೆಗೇ ಮೂಡಲಾರಂಭಿಸಿದ್ದ ಕನ್ನಡ ರಾಜ್ಯೋದಯದ ಕನಸಿಗೆ ತಾತ್ವಿಕತೆ ಒದಗಿ ಬಂದದ್ದು, ಕನ್ನಡ ಕುಲಪುರೋಹಿತರೆಂದು ಪ್ರಸಿದ್ಧರಾದ ಆಲೂರು ವೆಂಕಟರಾಯರೆಂಬ ಅಪ್ಪಟ ಸಂಸ್ಕೃತ ಪರಂಪರೆಯ ವೈದಿಕ

ನಾಯಕರಿಂದ. ಜಾತಿ ಹಾಗೂ ಅಸ್ಪೃಶ್ಯತಾ ನಿವಾರಣೆಯ ಗಾಂಧೀಜಿಯ ಕಾರ್ಯಕ್ರಮಗಳನ್ನು ತಾತ್ವಿಕ ಹಾಗೂ ವ್ಯಾವಹಾರಿಕ–ಈ ಎರಡೂ ನೆಲೆಗಳಲ್ಲಿ ವಿರೋಧಿಸಿ ಸ್ವಾತಂತ್ರ್ಯಾಂದೋಲನದಿಂದ ದೂರ ಸರಿದಿದ್ದ ಇವರು, 'ಕರ್ನಾಟಕದ ಗತ ವೈಭವ'ದ ಆಧಾರದ ಮೇಲೆ ಹೊಸ ಕರ್ನಾಟಕತ್ವದ ಒಂದು ಭವ್ಯ ಲೌಕಿಕ ರೂಪವನ್ನು ಮಂಡಿಸಿದರು. ಆದರೆ ಅದನ್ನು 'ಭರತ ಭೂಮಿಯೆಂಬ ಧರ್ಮಕ್ಷೇತ್ರ'ದಲ್ಲಿ ತಮ್ಮ ಆರಾಧ್ಯ ದೈವ ವೀರ ಸಾವರ್ಕರರ 'ಹಿಂದುತ್ವ'ದ ಮಾದರಿಯ ಸ್ಫೂರ್ತಿಯಲ್ಲಿ ಅನುಷ್ಠಾನಗೊಳಿಸುವ ಆಶಯವನ್ನು ವ್ಯಕ್ತಪಡಿಸಿದ್ದರು ಅವರು! ಅಲ್ಲದೆ ಇದರ ಜೊತೆಗೇ ದಕ್ಷಿಣದಲ್ಲಿ ಕನ್ನಡ ಚಳವಳಿಯನ್ನು ಮುನ್ನಡೆಸುತ್ತಿದ್ದ; ಜೀವನದೃಷ್ಟಿಯಲ್ಲಿ ಆಧುನಿಕರೂ, ಉದಾರವಾದಿಗಳೂ ಆಗಿದ್ದ ಬಿ.ಎಂ.ಶ್ರೀ ಮತ್ತವರ ಸ್ನೇಹಿತರಿಗೆ, ಕನ್ನಡದ ಜನಸಾಮಾನ್ಯರನ್ನು ಕೂಡಾ ಸಂಸ್ಕಾರವಂತರನ್ನಾಗಿ ಮಾಡುವ ರೀತಿಯಲ್ಲಿ 'ಕನ್ನಡದ ಭಾಷೆ ಕಲೆ ಎತ್ತುವ ಬಗೆ'ಯನ್ನು ಪ್ರಚಾರ ಮಾಡಲು ಮುಂದಾದರು. ಅದಕ್ಕಾಗಿ ಅವರಿಗೆ ಒದಗಿಬಂದ ಮಾದರಿಯೆಂದರೆ, ಆಧುನಿಕ ಇಂಗ್ಲಿಷ್ ಸಾಹಿತ್ಯ ಸಂಸ್ಕೃತಿ ಮಾದರಿ: 'ಆಧುನಿಕ ಕನ್ನಡ ಕಾವ್ಯಮಾಲೆ'ಯೊಂದನ್ನು ಸೃಷ್ಟಿಸಿದರೆ ಸಾಕು, ಕನ್ನಡ ಪುನರುಜ್ಜೀವನಗೊಳ್ಳುವುದು ಎಂಬುದು ಅವರ ಮುಗ್ಧ ನಂಬಿಕೆಯಾಗಿತ್ತು! ಅದಕ್ಕಾಗಿ ವ್ಯಾಪಕವಾದ ಕೆಲಸ ಮಾಡಿದರು ಕೂಡಾ.

ಹೀಗೆ ಕನ್ನಡ ರಾಜ್ಯೋದಯದ ಕನಸಿನೊಂದಿಗೇ ಮೂಡಿದ ಕನ್ನಡ ಚಳುವಳಿಯ ಎರಡು ಧಾರೆಗಳೂ ತಮ್ಮ ಮೂಲಸ್ಫೂರ್ತಿಯನ್ನು ಕನ್ನಡದ ಮೂಲ ಜಾಯಮಾನದ ಹೊರಗಿನ ತಾತ್ವಿಕ ಚೌಕಟ್ಟುಗಳಿಂದಲೇ ಪಡೆದುಕೊಂಡಿದ್ದವು. ಹೀಗಾಗಿ ಡೆಪ್ಯೂಟಿ ಚೆನ್ನಬಸಪ್ಪನವರ ಕನ್ನಡ ಶಿಕ್ಷಣದ ಕಾರ್ಯಕ್ರಮದ ಹಿಂದಿದ್ದ ಕನ್ನಡ ಸಾಮಾಜಿಕತೆಯ ಆಶಯವೇ ಕನ್ನಡ ರಾಜ್ಯೋದಯದ ಹೊತ್ತಿಗೆ ಕಾಣೆಯಾಗಿದ್ದುದರ ವಿಪರ್ಯಾಸವನ್ನಷ್ಟೇ ತೇಜಸ್ವಿ ತಮ್ಮ ಸಂಸ್ಕೃತಿ ಮೀಮಾಂಸೆಯ ಭಾಗವಾಗಿ ಹೇಳುತ್ತಿದ್ದಾರೆಯೇ ಹೊರತು, ಈ ಮೇಲೆ ಪ್ರಸ್ತಾಪಿಸಿದ ಹಿರಿಯರೂ ಸೇರಿದಂತೆ ನಂತರದ ದಿನಗಳಲ್ಲಿ ಕನ್ನಡ ಚಳವಳಿಯನ್ನು ತಮ್ಮದೇ ರೀತಿನೀತಿಗಳಲ್ಲಿ ಮುನ್ನಡೆಸಿದ ಮಾಸ್ತಿ, ಬೇಂದ್ರೆ, ಕಾರಂತ, ಆನಂದಕಂದ, ಅನಕೃ, ತರಾಸು, ಬೀಚಿ, ಮ.ರಾಮಮೂರ್ತಿ ಮುಂತಾದವರ ಕೊಡುಗೆಗಳನ್ನು ನಿರಾಕರಿಸುತ್ತಿಲ್ಲ ಎಂಬುದನ್ನು ನಾವು ಗಮನಿಸಬೇಕು. ಆದರೆ ಇವರೆಲ್ಲರೂ ಕನ್ನಡ ಚಳುವಳಿಯನ್ನು ತಮಿಳು ಚಳುವಳಿಯಂತೆ ಒಂದು ಸಾಮಾಜಿಕ ಕ್ರಾಂತಿಯ ಚಳುವಳಿಯನ್ನಾಗಿ ವಿಸ್ತರಿಸದೇ ಹೋದದ್ದರ ಬಗ್ಗೆ ಅವರಿಗೆ ಸಿಟ್ಟಿದೆ.

ಕನ್ನಡ ಚಳುವಳಿ ಮುಟ್ಟಿರುವ ಇಂದಿನ ಸ್ಥಿತಿ ನೋಡಿದರೆ, ಅವರ ಸಿಟ್ಟು ಸಮರ್ಥನೀಯವೇ ಅನ್ನಿಸದಿರಲಾರದು. ಏಕೆಂದರೆ ಅನಕೃ, ತರಾಸು, ಮ.ರಾಮಮೂರ್ತಿ, ದೇಜಗೌ ಅವರ ಕಾಲಕ್ಕೆ ಕನ್ನಡಿಗರ ಉದ್ಯೋಗ, ವ್ಯಾಪಾರ, ಸಿನಿಮಾ ಇತ್ಯಾದಿ ಕ್ಷೇತ್ರಗಳಿಗೂ ವ್ಯಾಪಿಸಿಕೊಂಡ ಕನ್ನಡ ಚಳುವಳಿ; ವಾಟಾಳ್, ನಾರಾಯಣಕುಮಾರ್‌ರವರಂತಹ ಕಾಲದ ಹೊತ್ತಿಗೆ ಬೆಂಗಳೂರು ಕೇಂದ್ರಿಕೃತವಾಗಿ ಅನ್ಯಭಾಷಾ–ವಿಶೇಷವಾಗಿ ತಮಿಳು–ವಿರೋಧಿ ವಾರೆಗಣ್ಣಿನಲ್ಲೇ ನಡೆಯತೊಡಗಿ, ವಸೂಲಿ–ದುಂಡಾವರ್ತಿ ರಾಜಕಾರಣವಾಗಿ ಮಾರ್ಪಾಡಾಯಿತು. ಇದಕ್ಕೆ ಮತ್ತು ಚಳುವಳಿಯ ನೇತೃತ್ವ ಅಂತಿಮವಾಗಿ ಇಂತಹವರ ಕೈಗೆ ಸಿಗುವಂತಾಗಲು, ಕರ್ನಾಟಕದ ಎಲ್ಲ ವರ್ಗಗಳ ಜನ ಇದರಲ್ಲಿ ಭಾವನಾತ್ಮಕವಾಗಿಯಾದರೂ ಭಾಗವಹಿಸುವಂತೆ ಅದನ್ನು ವಿಸ್ತರಿಸಲಾಗದ ಅದರ ದೌರ್ಬಲ್ಯವೇ ಕಾರಣವೆಂದು ಹೇಳಿದರೆ ತಪ್ಪಾಗಲಾರದು. ತಮ್ಮ ಬದುಕಿನ ಮೂಲಭೂತ

ಸಂಗತಿಗಳಾದ ಹುಟ್ಟು, ನಾಮಕರಣ, ಮದುವೆ, ಶ್ರಾದ್ಧಾದಿ ಕರ್ಮಗಳಲ್ಲದೆ ತಮ್ಮ ಪೂಜೆ-ಪುನಸ್ಕಾರ-ಪ್ರಾರ್ಥನೆ ಇತ್ಯಾದಿಗಳನ್ನು ಅನ್ಯಭಾಷೆಯಲ್ಲೇ ಉಳಿಸಿಕೊಳ್ಳುವಂತಹ ವಿಧಿ-ನಿಷೇಧಗಳಿಗೆ ಮನಸ್ಸನ್ನು ಒಪ್ಪಿಸಿಬಿಟ್ಟ ಸಂಸ್ಕೃತಿಯೊಂದು, ಇವಕ್ಕೆಲ್ಲ ಅನರ್ಹವಾಗಿ ಕಂಡಿರುವ ಕನ್ನಡವನ್ನಾದರೂ ಬದುಕಿನ ಯಾವ ಎಲ್ಲೆಯವರೆಗೆ, ಎಷ್ಟು ದಿನ ತಾನೆ ಬಿಟ್ಟುಕೊಂಡೀತು?

ಚಳುವಳಿಯ ಈ ಆಂತರಿಕ ದೌರ್ಬಲ್ಯವೇ ಗೋಕಾಕ್ ವರದಿ ಮತ್ತು ಅದರ ಅನುಷ್ಠಾನಕ್ಕಾಗಿ ನಡೆದ ಚಳುವಳಿಗಳಿಗೆ ಕಾರಣವಾಯಿತು. ರಾಜ್ಯದಲ್ಲಿ ಕನ್ನಡಿಗರೂ ಕನ್ನಡ ಕಲಿಯದೆಯೇ ತಮ್ಮ ಪ್ರೌಢಶಿಕ್ಷಣವನ್ನು ಮುಗಿಸಬಲ್ಲಂತಹ ಪರಿಸ್ಥಿತಿ ನಿರ್ಮಾಣವಾಗಿತ್ತೆಂದರೆ, ಆವರೆಗಿನ ಕನ್ನಡ ಚಳುವಳಿ ಕನ್ನಡಕ್ಕೆ ನಿಜವಾಗಿ ಏನು ಮಾಡುತ್ತಾ ಬಂದಿತ್ತು, ಯಾವ ರೀತಿಯ ಬೆಂಬಲ-ರಕ್ಷಣೆಯನ್ನು ಒದಗಿಸುತ್ತಾ ಬಂದಿತ್ತು ಮತ್ತು ಅದರ ಕಟ್ಟಡ ಹೇಗೆ ಮರಳೇ ತುಂಬಿಕೊಂಡ ಅಡಿಪಾಯದ ಮೇಲೆ ಕಟ್ಟಲ್ಪಡುತ್ತಿತ್ತು ಎಂಬುದು ವೇದ್ಯವಾಗುತ್ತದೆ. ಈ ಹಿನ್ನೆಲೆಯಲ್ಲಿ ಗೋಕಾಕ್ ಚಳುವಳಿ, ಸಾಮಾನ್ಯ ಕನ್ನಡಿಗನ ತಪ್ತಿತಸ್ಥ ಮನೋಭಾವನೆಯ ಆಸ್ಫೋಟನೆಯೆಂಬಂತೆ ರಾಜ್ಯಾದ್ಯಂತ ಬೆಂಕಿಯಂತೆ ಹರಡಿ (ಬಹುಶಃ ರಾಜ್‌ಕುಮಾರ್‌ನ ಪ್ರವೇಶದಿಂದಾಗಿ?) ರಾಜ್ಯ ಶಾಲಾ ಶಿಕ್ಷಣಕ್ರಮದಲ್ಲಿ ಕರ್ನಾಟಕದ ಪ್ರತಿಯೊಬ್ಬರೂ ಒಂದಲ್ಲ ಒಂದು ಹಂತದಲ್ಲಿ ಕನ್ನಡವನ್ನು ಕಡ್ಡಾಯವಾಗಿ ಕಲಿಯುವಂತಹ ಪರಿಸ್ಥಿತಿ ಉಂಟಾಯಿತಾದರೂ, ಕರ್ನಾಟಕದಲ್ಲಿ ಕನ್ನಡವನ್ನು ತನ್ನೆಲ್ಲ ಕ್ರಿಯಾಶೀಲತೆಯೊಂದಿಗೆ ಜೀವಂತವಾಗಿಡಬಲ್ಲ ಕನ್ನಡ ಮಾಧ್ಯಮವನ್ನು ಕಡ್ಡಾಯ ಮಾಡುವಂತಹ ವಾತಾವರಣ ಸೃಷ್ಟಿಯಾಗಲೇ ಇಲ್ಲ. ಇಂದು ಎಲ್ಲರಿಗೂ ಇಂಗ್ಲಿಷನ್ನು ಒಂದನೇ ತರಗತಿಯಿಂದ ಕಡ್ಡಾಯವಾಗಿ ಕಲಿಸುವಂತೆ ಮಾಡಿರುವ ಶಕ್ತಿಗಳೇ, ಅಂದು ಕನ್ನಡ ಮಾಧ್ಯಮ ಕಡ್ಡಾಯದ ಮೂಲಕ ರಾಜ್ಯಾದ್ಯಂತವಾದರೂ ಏಕರೂಪದ ಶಿಕ್ಷಣ ಜಾರಿಗೆ ತರಲು ಅಡ್ಡಿಯಾಗಿದ್ದ ಶಕ್ತಿಗಳಾಗಿದ್ದವು ಎಂದರೆ ತಪ್ಪಾಗಲಾರದು. ಏಕೆಂದರೆ, ಕನ್ನಡ ಮಾಧ್ಯಮ ಕಡ್ಡಾಯವಾಗದೆ ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಕೆಯನ್ನು ಜಾರಿಗೆ ತರುವ ಕ್ರಮದಿಂದಾಗಿ ಕನ್ನಡ ಶಿಕ್ಷಣ ಮಾಧ್ಯಮದ ಹಿಂದಿನ ತಾತ್ವಿಕತೆಯೇ ಘಾಸಿಗೊಳ್ಳುತ್ತದೆ. ಅಲ್ಲದೇ ಅದರ ಅಗತ್ಯ; ಹಾಗಾಗಿ ಅದಕ್ಕಾಗಿ ಕೆಲವು ನಿಷ್ಠಾವಂತ ಕನ್ನಡ ಗುಂಪುಗಳ ಆಗ್ರಹದ ಮೇರೆಗೆ ರಾಜ್ಯಸರ್ಕಾರ ಇಷ್ಟು ವರ್ಷಗಳಿಂದ ನಡೆಸಿಕೊಂಡು ಬಂದ ಹೋರಾಟಕ್ಕೆ ಸರ್ವೋಚ್ಚ ನ್ಯಾಯಾಲಯದಲ್ಲಿ ಸಿಕ್ಕ ಜಯ; ಆದರೆ ಕೆಲವು ಶಿಕ್ಷಣ ದಂಧೆಕೋರರು ಇದಕ್ಕೆ ಹಾಕಿರುವ ಅಡ್ಡಗಾಲನ್ನು ನಿವಾರಿಸಲು ಸರ್ಕಾರ ಹಾಗೂ ಕನ್ನಡಪರ ಸಂಘ-ಸಂಸ್ಥೆಗಳು ನಡೆಸಿರುವ ಪ್ರಯತ್ನಗಳು- ಈ ಎಲ್ಲವುಗಳ ಪ್ರಸ್ತುತತೆಯೇ ಅನುಮಾನಾಸ್ಪದವೆನ್ನಿಸಿಕೊಳ್ಳುತ್ತವೆ. ಆದರೆ ಈ ಪರಿವೆಯೇ ಇಲ್ಲದೆ ಈ ಶಕ್ತಿಗಳು ಸಮಕಾಲೀನ ಅಗತ್ಯ ಹಾಗೂ ಸಾಮಾಜಿಕ ನ್ಯಾಯವೆಂಬ ಅಸ್ತ್ರಗಳನ್ನು ಬಳಸಿಕೊಂಡು ಕನ್ನಡ ಮಾಧ್ಯಮ ವಿರೋಧಿ ಶಕ್ತಿಗಳೊಂದಿಗೆ ಕೈ ಜೋಡಿಸಿ ಅವಕ್ಕೆ ಈವರೆಗೆ ಇಲ್ಲದಿದ್ದ ತಾತ್ವಿಕ ಸಮಾಧಾನ ದೊರಕಿಸಿಕೊಟ್ಟಿವೆ.

೧೯೫೩ರ ಜೆ.ಬಿ. ಮಲ್ಲಾರಾಧ್ಯ ವರದಿಯಿಂದ ಹಿಡಿದು ಇತ್ತೀಚಿನ ಎಚ್. ನರಸಿಂಹಯ್ಯ-ಚಂಪಾ-ಬರಗೂರು ವರದಿಗಳವರೆಗೆ ಎಲ್ಲ ಶೈಕ್ಷಣಿಕ ಆಯೋಗಗಳೂ ಮತ್ತು ೧೯೮೯ರ ರಾಜ್ಯ ಉಚ್ಚನ್ಯಾಯಾಲಯದ ತೀರ್ಪಿನಿಂದ ಹಿಡಿದು ೧೯೯೩ರ ಸರ್ವೋಚ್ಚ ನ್ಯಾಯಾಲಯದ ತೀರ್ಪಿನವರೆಗೆ, ಪ್ರಾಥಮಿಕ ಶಾಲಾ ಶಿಕ್ಷಣವಾದರೂ ಕನ್ನಡ/ಮಾತೃಭಾಷೆಯಲ್ಲೇ ಇರಬೇಕೆಂದು ಹೇಳಿದ್ದರೂ, ಈ ಶಕ್ತಿಗಳಿಗೆ ಇದೆಲ್ಲ ಸಾಧ್ಯವಾಗಿರುವುದಾದರೂ ಹೇಗೆ ಎಂದು

ಯೋಚಿಸಬೇಕಾಗುತ್ತದೆ. ಅಷ್ಟೇ ಅಲ್ಲ, ೧೯೯೪ರ ರಾಜ್ಯ ಸರ್ಕಾರದ ಆಜ್ಞೆಯನ್ನು ಉಲ್ಲಂಘಿಸಿ ಇಂಗ್ಲಿಷ್ ಮಾಧ್ಯಮದಲ್ಲೇ ಶಿಕ್ಷಣ ನೀಡುತ್ತಿದ್ದ ಸಾವಿರಾರು ಶಾಲೆಗಳ ಅಧಿಪತಿಗಳು, ಇದರ ವಿರುದ್ಧ ಸರ್ಕಾರ ಕೈಗೊಂಡ ಕಾನೂನು ಕ್ರಮವನ್ನು ನ್ಯಾಯಾಲಯದಲ್ಲಿ ಪ್ರಶ್ನಿಸುವ ಮತ್ತು ಈ ಸಂಬಂಧ ನ್ಯಾಯಾಲಯದಲ್ಲಿ ಸೋತ ನಂತರವೂ ತಮ್ಮ ಅಕ್ರಮ ಶಾಲೆಗಳನ್ನು ಸಕ್ರಮಗೊಳಿಸುವುದು ಸಾರ್ವಜನಿಕ ಹಿತದೃಷ್ಟಿಯಿಂದ ಸರ್ಕಾರದ ಕರ್ತವ್ಯವೆಂದು ವಾದಿಸುತ್ತ, ಪದೇ ಪದೇ ಒಂದಲ್ಲ ಒಂದು ನೆಪದಲ್ಲಿ ನ್ಯಾಯಾಲಯದ ಮೆಟ್ಟಲೇರುವ ಅನೈತಿಕ ಧೈರ್ಯವನ್ನು ಪ್ರದರ್ಶಿಸುತ್ತಿವೆ. ಇಂತಹ ಪರಿಸ್ಥಿತಿಯಲ್ಲೂ ಕನ್ನಡ ಮಾಧ್ಯಮ ಶಾಲೆಗಳ ಉಳಿವಿಗೆಂದೇ ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಕೆ ಅಗತ್ಯವೆಂದು ವಾದಿಸುತ್ತಾ ಪ್ರಚಂಡ ಪ್ರಚಾರಾಂದೋಲನ ಆರಂಭಿಸಿದ ಈ ಶಕ್ತಿಗಳು, ತುಟಿಕ್ ಪಿಟಿಕ್ ಎನ್ನದೆ ಇರುವುದರ ಮರ್ಮವಾದರೂ ಏನು?

ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಕೆ ಒತ್ತಾಯಿಸಿ ಪ್ರಚಾರಾಂದೋಲನ ಆರಂಭಿಸಿದವರು ತಮ್ಮನ್ನು ಸಮರ್ಥಿಸಿಕೊಳ್ಳಲು ನೀಡಿದ ಮುಖ್ಯ ಕಾರಣವೆಂದರೆ, ಇಂದು ಇಂಗ್ಲಿಷ್ ಸಾರ್ವಜನಿಕ ಜೀವನದ ಅವಿಭಾಜ್ಯ ಅಂಗವಾಗಿದ್ದು (ನಿಜವಾಗಿ?), ಕನ್ನಡ ಮಾಧ್ಯಮ ಶಾಲೆಗಳಲ್ಲೇ ಓದುವ–ವಿಶೇಷವಾಗಿ ಹಿಂದುಳಿದ ವರ್ಗಗಳ–ಮಕ್ಕಳು ಉದ್ಯೋಗ ಸ್ಪರ್ಧೆಯಲ್ಲಿ ಹಿಂದುಳಿಯುತ್ತಾರೆ ಎಂಬುದು. ಆದರೆ ಇಂಗ್ಲಿಷ್ ಕೂಡಾ ನಮ್ಮ ಶಿಕ್ಷಣ ಕ್ರಮದ ಅವಿಭಾಜ್ಯ ಅಂಗವಾಗಿ ಹೋಗಿ ಬಹಳ ವರ್ಷಗಳೇ ಆಗಿವೆ ಎಂಬ ಸಂಗತಿಯನ್ನು ಯಾಮಾರಿಸಿಯೇ ವಾದ ಮಾಡುವ ಇವರು, ಇಂದು ಪರಿಸ್ಥಿತಿ ಇವರು ಹೇಳುವಷ್ಟು ಬಿಗಡಾಯಿಸಿದ್ದರೆ ಇಂತಹ ಪರಿಸ್ಥಿತಿ ಏಕುಂಟಾಯಿತು, ಅದಕ್ಕೇನು ಕಾರಣ ಎಂಬ ಪ್ರಶ್ನೆಯನ್ನು ಎದುರಿಸುವ ಸಾಮರ್ಥ್ಯವನ್ನೇ ಕಳೆದುಕೊಂಡಿದ್ದಾರೆ. ಏಕೆಂದರೆ, ಈ ಪ್ರಶ್ನೆ ಒಂದು ದೊಡ್ಡ ಹಾಗೂ ಸಂಕೀರ್ಣ ರಾಜಕೀಯ ಪ್ರಶ್ನೆಯಾಗಿದೆ. ಕನ್ನಡ ಚಳುವಳಿ ತನ್ನೆಲ್ಲ ಆಯಾಮಗಳಲ್ಲಿ ಕ್ರಿಯಾಶೀಲವಾಗದೆ, ಕೇವಲ ಭಾವಾವೇಶದ ಚಳುವಳಿಯಾಗಿ ಅವನತಿಗೊಂಡಿದ್ದರ ಹಿಂದಿನ, ತೇಜಸ್ವಿ ಎತ್ತಿದ ಚಳವಳಿಯ ಸಾಮಾಜಿಕ–ರಾಜಕೀಯ ಸ್ವರೂಪದ ಪ್ರಶ್ನೆಯಿದು.

ಕುವೆಂಪು 'ಕನ್ನಡವೇ ಸತ್ಯ; ಕನ್ನಡವೇ ನಿತ್ಯ; ಅನ್ಯವೆನಲದೆ ಮಿಥ್ಯಾ' ಎಂಬ ಸೊಲ್ಲಿನ ಮೂಲಕ ವೈಯಕ್ತಿಕ ಜೀವನದಲ್ಲಿ ಕನ್ನಡಕ್ಕೊಂದು ಆಧ್ಯಾತ್ಮಿಕ ಶಕ್ತಿ ಪ್ರದಾನ ಮಾಡಿದರು. ಜೊತೆಗೆ ಸಾರ್ವಜನಿಕ ಜೀವನದಲ್ಲೂ ಕನ್ನಡವನ್ನು ಎಲ್ಲ ನೆಲೆಗಳಲ್ಲಿ ಜೀವಂತಗೊಳಿಸಬೇಕಾದ ಸಹಜ ಅಗತ್ಯವನ್ನು ಮನಗಾಣಿಸುವ ರೀತಿಯಲ್ಲಿ, ಈ ಸಂಬಂಧದ ತಮ್ಮ ಕನಸಿನ 'ಮಾನಸ ಗಂಗೋತ್ರಿ'ಯ ಉದ್ಘಾಟನೆಯನ್ನು, 'ಕ್ಷಯಿಸೆ ಶಿವೇತರ ಕೃತಿ ಕೃತಿಯಲ್ಲಿ, ಮೂಡಲಿ ಮಂಗಳ ಮತಿಮತಿಯಲ್ಲಿ; ಕವಿಋಷಿ ಸಂತರ ಆದರ್ಶದಲಿ, ಸರ್ವೋದಯವಾಗಲಿ ಸರ್ವರಲಿ!' ಎಂಬ ಆಶಯದ 'ಕನ್ನಡ ಡಿಂಡಿಮ'ದೊಂದಿಗೇ ನೆರವೇರಿಸಿದರು. ಅಲ್ಲದೆ, ರಾಜ್ಯದ ಇನ್ನೊಂದು ವಿಶ್ವವಿದ್ಯಾಲಯವಾಗಿದ್ದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಕನ್ನಡ ಮಾಧ್ಯಮದ ತರಗತಿಗಳು ಆರಂಭವಾಗದ ಹೊರತು ಅಲ್ಲಿಗೆ ಕಾಲಿಡಲಾರೆ ಎಂಬ ದಿಟ್ಟ ಹಾಗೂ ನಿರ್ದಾಕ್ಷಿಣ್ಯ ನಿರ್ಧಾರ ಕೈಗೊಳ್ಳುವಷ್ಟು ಅವರ ಕನ್ನಡ ನಿಷ್ಠೆಯಲ್ಲಿ ವೈಯುಕ್ತಿಕ ಹಾಗೂ ಸಾರ್ವಜನಿಕ ಮತ್ತು ಬದ್ಧತೆಯಿತ್ತು. ಹಾಗೆ ನೋಡಿದರೆ, ಅವರ ಇಡೀ ಸಾಹಿತ್ಯವೇ ಒಂದು ಹೊಸ ಸಾಮಾಜಿಕ ಜಾಗೃತಿಯನ್ನು ಪ್ರಚೋದಿಸುವ ಆಂದೋಲನದ ರೂಪದಲ್ಲಿತ್ತು. ಆದರೆ ಇದು ಒಂದು ರಾಜಕೀಯ ಶಕ್ತಿಯ ರೂಪದಲ್ಲಿ ಹೊರಹೊಮ್ಮಲಾಗದಷ್ಟು ನಿರ್ಬಂಧಗಳನ್ನು

ಕುವೆಂಪು–ಬಹುಶಃ ತಮ್ಮ ಸಾಹಿತ್ಯ ವ್ಯಕ್ತಿತ್ವದ 'ಘನತೆ'ಯನ್ನು ಕಾಪಾಡಿಕೊಳ್ಳಲು ವಿಧಿಸಿಕೊಂಡಿದ್ದರು. ತೇಜಸ್ವಿ ಇದನ್ನು ತಮ್ಮ 'ಕರ್ನಾಟಕ ಸಂಸ್ಕೃತಿ ವಿಶ್ಲೇಷಣೆ'ಯ ಮೂಲಕ ಭೇದಿಸಲೆತ್ನಿಸಿದ್ದರು. ಆದರೆ, ಇದು 'ವ್ಯವಸ್ಥೆ'ಯನ್ನೇ ಬುಡಮೇಲುಗೊಳಿಸುವ ಅಪಾಯವಿದ್ದುದರಿಂದ ಪ್ರಭುತ್ವದ ಆಮಿಷ–ಆಕರ್ಷಣೆ–ಒತ್ತಡಗಳೆದುರು ಇದು ದುಸ್ಸಾಹಸದಂತೆ ಕಂಡು ತನ್ನ ಆವೇಗವನ್ನು ಕಳೆದುಕೊಂಡಿತು. ಇಲ್ಲಿ ಪ್ರಭುತ್ವವೆಂದರೆ ಸರ್ಕಾರ ಮಾತ್ರ ಆಗಿರದೆ, ಅದನ್ನು ನಿಯಂತ್ರಿಸುವ ಸಮಾಜದಲ್ಲಿನ ಪಟ್ಟಭದ್ರ–ಸಾಮಾಜಿಕ ಹಾಗೂ ಆರ್ಥಿಕ ಶಕ್ತಿಗಳೂ ಸೇರಿರುತ್ತವೆ ಎಂಬುದನ್ನು ನಾವು ಮರೆಯಬಾರದು.

ಇವೆರಡರ ಕೂಟಶಕ್ತಿಯಿಂದಾಗಿ ಕನ್ನಡ ಮಾಧ್ಯಮ ತನ್ನ ವಿಶ್ವಾಸಾರ್ಹತೆಯನ್ನು ಸಾಧಿಸಿಕೊಳ್ಳಲಾರದೆ; ಇಂದು ಕನ್ನಡವೆಂಬುದು ಪರಂಪರೆಯೊಂದರ ಅವಶೇಷದಂತೆ ಹೆಮ್ಮೆಯ ಪ್ರದರ್ಶನ ವಸ್ತುವಾಗಿ, ಸಂರಕ್ಷಿಸಿಡಬೇಕಾದ ಕನ್ನಡಿಗನ ಕರ್ತವ್ಯಭಾಗವಾಗಿ ಮಾತ್ರ ಉಳಿದುಕೊಳ್ಳುವ ಸ್ಥಿತಿ ತಲುಪಿದೆ. ಕನ್ನಡ ಭೂಮಿಗೆ ಭಾರವಾಗಿರುವ ಈ ವಸ್ತುವನ್ನು ಹಗುರಗೊಳಿಸಿ ಉಳಿಸಲು, ಇಂಗ್ಲಿಷ್ ಲಿಪಿಯಲ್ಲಿ ಬಳಸಲು ತೊಡಗಬೇಕೆನ್ನುವಂತಹ ಸಲಹೆ ನೀಡುವ ಸ್ಥಿತಿ ಕನ್ನಡ ಭಾಷಾಶಾಸ್ತ್ರಜ್ಞರಿಗೆ ಬಂದಿದೆ! ಈ ಸ್ಥಿತಿಯನ್ನು ನಾವು 'ಜಾಗತೀಕರಣ'ವೆಂದು ಕರೆದುಕೊಂಡು, ಅದಕ್ಕೆ ನಮ್ಮ ಮಕ್ಕಳನ್ನು ಸಿದ್ಧಮಾಡಲು ಸರ್ಕಾರಿ ಮತ್ತು ಕನ್ನಡ ಮಾಧ್ಯಮ ಶಾಲೆಗಳಲ್ಲಿ ಒಂದನೇ ತರಗತಿಯಿಂದಲೇ ಇಂಗ್ಲಿಷ್ ಕಲಿಸುವ ಸಾರ್ವಜನಿಕ ಜವಾಬ್ದಾರಿಯನ್ನು ನಿರ್ವಹಿಸಿದ್ದೇವೆ. ಈಗ ಈ ಮಕ್ಕಳು ಹೀಗೆ ಇಂಗ್ಲಿಷ್ ಕಲಿತು ಐದನೇ ತರಗತಿಗೆ ಬರುವ ಹೊತ್ತಿಗೆ ಕನ್ನಡ ಮಾಧ್ಯಮ ಶಾಲೆಗಳನ್ನು ಬಿಟ್ಟುಬಿಡುವಂತಾಗುವಷ್ಟು 'ಸಾಮಾಜಿಕ ವಿಮೋಚನೆ' ಸಾಧಿಸುವ ಎಲ್ಲ ಸಾಧ್ಯತೆಗಳೂ ಕಂಡುಬರುತ್ತಿರುವುದರಿಂದ, ಹಿಂದುಳಿದ ವರ್ಗಗಳ ಹಾಗೂ ಬಡಮಕ್ಕಳ ಶಾಲೆಗಳಾಗಿರುವ ಸರ್ಕಾರಿ ಹಾಗೂ ಕನ್ನಡಮಾಧ್ಯಮ ಶಾಲೆಗಳನ್ನು ಉಳಿಸುವ ಏಕೈಕ ಮಾರ್ಗವೆಂದರೆ ಅವನ್ನು ಐದನೇ ತರಗತಿಯಿಂದ ಸಂಪೂರ್ಣ ಇಂಗ್ಲಿಷ್ ಮಾಧ್ಯಮ ಶಾಲೆಗಳನ್ನಾಗಿ ಪರಿವರ್ತಿಸುವುದೇ ಆಗಿದೆ ಎಂಬ ಗುಸುಗುಸವನ್ನು ಆರಂಭಿಸಿದ್ದೇವೆ.... (ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಸುವ ಪ್ರಚಾರಾಂದೋಲನಕ್ಕೆ 'ಅಧಿಕೃತ ಮುಖವಾಣಿ'ಯಂತೆ ಕೆಲಸ ಮಾಡಿದ ಕನ್ನಡದ ಹೆಮ್ಮೆಯ ಪತ್ರಿಕೆ 'ಪ್ರಜಾವಾಣಿ'ಯಲ್ಲಿ ಇತ್ತೀಚೆಗೆ ಪ್ರಕಟವಾದ ಮಂಗಳೂರಿನ ಶುಭಶ್ರೀ ಎಂಬ ಉಪಾಧ್ಯಾಯಿನೀ ಬರೆದಿರುವ ದೀರ್ಘಪತ್ರವನ್ನು ಗಮನಿಸಿ.) ಈ ಮಧ್ಯೆ ಇಂಗ್ಲಿಷನ್ನು ಅಂಬೇಡ್ಕರರು ಶೂದ್ರ ಮತ್ತು ದಲಿತರ ಭಾಗ್ಯದೇವತೆ, ಸಿಂಹಣಿಯ ಹಾಲು ಎಂದು ವರ್ಣಿಸಿದ್ದಾರೆಂಬ ಹೊಸ ಸಂಶೋಧನೆಗಳೂ ಪ್ರಚಾರಕ್ಕೆ ಬರುತ್ತಿವೆ!

ಈ ಎಲ್ಲ ಬೆಳವಣಿಗೆಗಳೂ ಸಹಜವಾಗಿ ಆಗುತ್ತಿವೆ ಎಂದು ನಂಬಿದವರಿಗೆ; 'ಜಾಗತೀಕರಣ'ವೆಂಬುದು ಒಂದು ಸಹಜ ಆರ್ಥಿಕ ವಿದ್ಯಮಾನವಾಗಿರದೆ, ಅದರ ಹಿಂದೆ ಒಂದು ಅಂತರಾಷ್ಟ್ರೀಯ ರಾಜಕೀಯ ಷಡ್ಯಂತ್ರವೂ ಕೆಲಸ ಮಾಡುತ್ತಿದೆ–ಅದಕ್ಕಾಗಿ ಕೋಟ್ಯಾಂತರ ರೂಪಾಯಿಗಳ ಹಣ, ವಿವಿಧ ರೂಪದ 'ಸೇವಾಸಂಸ್ಥೆ'ಗಳ ಮೂಲಕ ವಿನಿಯೋಗವಾಗುತ್ತಿದೆ ಎಂಬ ತಿಳುವಳಿಕೆ ಇರಲಾರದು. ಹೀಗೆ ಜಾಗತೀಕರಣವೆಂಬುದು ವಿವಿಧ ಆಮಿಷ–ಆಕರ್ಷಣೆಗಳ ಮಾರುಕಟ್ಟೆ ರೂಪದಲ್ಲಿ ಆಗಮಿಸುತ್ತಿರುವ ಭವಿಷ್ಯದ ಸಾಮ್ರಾಜ್ಯಶಾಹಿಯೇ ಆಗಿದೆ ಎಂಬ ಮುನ್ನೋಟವೂ ಇವರಿಗೆ ಸಾಧ್ಯವಾಗಲಾರದು. ಇಂತಹ ತಿಳುವಳಿಕೆಯಾಗಲೀ, ಮುನ್ನೋಟವಾಗಲಿ ಸಾಧ್ಯವಾಗದಂತಹ ಮಾನಸಿಕತೆ ಸೃಷ್ಟಿಸುವುದೇ ಇಂಗ್ಲಿಷ್ ಕಲಿಕೆಯ

ಇತ್ತೀಚಿನ ವಿಶೇಷ ಕಾರ್ಯಾಚರಣೆಯ ಗುರಿಯಾಗಿದೆ. ಈ ಕಾರ್ಯಾಚರಣೆಯನ್ನು ಯೋಜಿಸಿರುವವರಿಗೆ ನಮ್ಮ ಹಿಂದಿನ ತಲೆಮಾರಿನ 'ಇಂಗ್ಲಿಷ್ ಪ್ರೇಮಾಂಧತೆ' ಸಾಲದೆನ್ನಿಸಿ, ಈ 'ಆಪರೇಷನ್ ಇಂಗ್ಲಿಷ್ ಕಾಮಾಂಧತೆ'ಯನ್ನು ಆರಂಭಿಸಿದೆ!

ಹೀಗಾಗಿಯೇ ರೈಲ್ವೇ ಟಿಕೆಟ್‌ನಲ್ಲಿದ್ದ ಕನ್ನಡ ಉಳಿಸಲು, ನಮ್ಮ ರಾಜ್ಯದ ರಾಜ್ಯಪಾಲರ ಕಛೇರಿಯಲ್ಲಿನ ಕನ್ನಡ ಉಳಿಸಲು, ನಮ್ಮದೇ ಸಾರಿಗೆ ಸಂಸ್ಥೆಯ ಬಸ್ ಟಿಕೆಟ್‌ನಲ್ಲಿ ಕನ್ನಡ ತರಲು ಮತ್ತು ಕಾವೇರಿ ನ್ಯಾಯಾಧೀಕರಣದ ತೀರ್ಪಿನ ವಿರುದ್ಧ ಚಿತ್ರ–ವಿಚಿತ್ರ ಶೈಲಿಗಳಲ್ಲಿ ಹೋರಾಡುವ ಕನ್ನಡ ಚಳವಳಿಯ ನಾಯಕರ್‍ಯಾರೂ ಕನ್ನಡ ಮಾಧ್ಯಮದ ಪರವಾಗಲಿ, ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಸುವುದರ ವಿರುದ್ಧವಾಗಲಿ ಸೊಲ್ಲೆತ್ತುವ ತಿಳುವಳಿಕೆಯನ್ನಾಗಲೀ ಪ್ರದರ್ಶಿಸಲಾಗಿಲ್ಲ. ಹೀಗೆ ಕನ್ನಡ ಚಳವಳಿಯೇ ಮೂಲತಃ ಕನ್ನಡ ವಿರೋಧಿಯಾಗುತ್ತಿರುವ ದುರಂತವನ್ನೆದುರಿಸುತ್ತಿದೆ. ಆದುದರಿಂದಲೇ ಅದಕ್ಕೆ ರೈಲ್ವೇ ಟಿಕೆಟ್‌ನಲ್ಲಾಗಲೀ, ರಾಜ್ಯಪಾಲರ ಕಛೇರಿಯಲ್ಲಾಗಲಿ ಕನ್ನಡವನ್ನು ಉಳಿಸಿಕೊಳ್ಳಲಾಗಲಿ, ರಾಜ್ಯ ಬಸ್ ಟಿಕೆಟ್ ಮೇಲೆ ಕನ್ನಡವನ್ನು ತರಲಾಗಲಿ ಸಾಧ್ಯವಾಗಿಲ್ಲ. ಆ ಗುರಿಗಳೆಡೆಗೆ ತನ್ನನ್ನು ಒಯ್ಯುವಷ್ಟು ತೀವ್ರತೆಯನ್ನಾಗಲಿ, ತ್ರಾಣವನ್ನಾಗಲಿ, ಬದ್ಧತೆಯನ್ನಾಗಲಿ ಸಂಘಟಿಸಿಕೊಳ್ಳಲು ಅನುವು ಮಾಡಿಕೊಡುವ ತಾತ್ವಿಕ ಮುನ್ನೋಟವೇ ಇರದೆ, ಪ್ರದರ್ಶಕ ಬಲದ ರೋಚಕತೆಯನ್ನಷ್ಟೇ ಅದು ಅವಲಂಬಿಸಿರುವುದು ಇದಕ್ಕೆ ಕಾರಣವಾಗಿದೆ. ಇನ್ನು ಕಾವೇರಿ ಜಲ ಪ್ರಕರಣದಲ್ಲಿ ರಾಜ್ಯ ತನ್ನ ನ್ಯಾಯೋಚಿತ ಪಾಲನ್ನು ದೊರಕಿಸಿಕೊಳ್ಳುವಂತಾಗಲು ಮೊದಲು ರಾಜ್ಯ, ಭಾರತದ ಒಕ್ಕೂಟದಲ್ಲಿ ತನ್ನ ರಾಜಕೀಯ ಅಸ್ಮಿತೆಯನ್ನು ದೃಢವಾಗಿ ಸ್ಥಾಪಿಸಿಕೊಳ್ಳುವಂತಾಗಬೇಕು ಹಾಗೂ ಅದು ಸಾಧ್ಯವಾಗುವುದು ತಾನೊಂದು ಭಾಷಾಕುಲವೆಂಬ ಆತ್ಮಪ್ರಜ್ಞೆಯ ಪುನರುಜ್ಜೀವನದ ಮೂಲಕ ಮಾತ್ರ ಎಂಬ ಅರಿವು ಜಾಗೃತವಾಗಬೇಕು. ಇದಕ್ಕಾಗಿ ಕನ್ನಡ ಚಳವಳಿ, ಕನ್ನಡವನ್ನು ಶಿಕ್ಷಣಕ್ರಮದ ಕೇಂದ್ರಕ್ಕೆ ಮರಳಿ ತಂದು, ಸಾರ್ವಜನಿಕ ಜೀವನದಲ್ಲಿ ಕನ್ನಡದಲ್ಲಿ ಪ್ರಸ್ತುತತೆ ಹಾಗೂ ಗೌರವವನ್ನು ಪುನಃಸ್ಥಾಪಿಸುವ ದಿಕ್ಕಿನಲ್ಲಿ ಸಕ್ರಿಯವಾಗಬೇಕಿದೆ. ಬೀದಿ ಹೋರಾಟ ಅದೆಷ್ಟೇ ವೀರಾವೇಶವನ್ನು ಪ್ರದರ್ಶಿಸಿ ರೋಚಕತೆಯನ್ನು ಪಡೆದುಕೊಂಡರೂ, ಅಖಿಲಭಾರತ ಮಟ್ಟದ ಯಾವುದೇ ವೇದಿಕೆಯಲ್ಲಿ ಅದು ಯಾವುದೇ ಪರಿಣಾಮಬೀರದು ಎಂಬ ಅರಿವು ಮೂಡಬೇಕಿದೆ. ಎಷ್ಟಾದರೂ ಕನ್ನಡ–ಕರ್ನಾಟಕ ಬೆಳೆಯಬೇಕಾಗಿರುವುದು, ಸದ್ಯಕಂತೂ ಭಾರತವೆಂಬ ಒಕ್ಕೂಟದಲ್ಲೇ.

ಆದರೆ ಕನ್ನಡಿಗನ ಅಂತರಂಗದಿಂದ ಹೊರದೂಡಲ್ಪಟ್ಟಿರುವ ಕನ್ನಡ, ಈ ಬೀದಿ ಹೋರಾಟದ ರೂಪದ ಚಳವಳಿಯಿಂದಲೇ ಬಹಿರಂಗದಲ್ಲಾದರೂ ಇನ್ನೂ ಉಳಿದಿದೆ ಎಂಬ ವಾಸ್ತವ ಸಂಗತಿಯನ್ನು ನಾವು ಒಪ್ಪಿಕೊಳ್ಳಬೇಕಿದೆ. ಈ ದೃಷ್ಟಿಯಿಂದ, ವಾಟಾಳ್ ನಾಗರಾಜ್‌ರಂತಹ ಹೋರಾಟಗಾರರ ಕೊಡುಗೆಯನ್ನು ಅವರ ಅನೇಕ ದೌರ್ಬಲ್ಯಗಳ ನಡುವೆಯೂ ನಾವು ಮಾನ್ಯ ಮಾಡಬೇಕಾಗಿದೆ.

(ಸಕಾಲ, ಆಗಸ್ಟ್ ೯, ೨೦೦೭)

೫. ಕನ್ನಡಕ್ಕಿದು ಕಷ್ಟ ಕಾಲ

ಅಂತೂ ಹೊಗೇನಕಲ್ ವಿವಾದ ತಾತ್ಕಾಲಿಕವಾಗಿಯಾದರೂ ಅಂತ್ಯ ಕಂಡಿದೆ. ಬಹುಶಃ ಸೋನಿಯಾ ಗಾಂಧಿ ಹಾಗೂ ಮನಮೋಹನ ಸಿಂಗರ ಮಧ್ಯಸ್ಥಿಕೆಯಿಂದಾಗಿ ಇದು ಸಾಧ್ಯವಾಗಿದೆ. ತಮ್ಮ ಪಕ್ಷ ಭಾಗವಹಿಸಿರುವ ಸಂಯುಕ್ತ ಪ್ರಗತಿ ರಂಗವೆಂಬ(ಯುಪಿಎ) ಮೈತ್ರಿಕೂಟದ ಧರ್ಮ ಪರಿಪಾಲಿಸುವ ಒತ್ತಡಕ್ಕೆ ಸಿಲುಕಿ ಕರುಣಾನಿಧಿಯವರು ಹೊಗೇನಕಲ್ ಕುಡಿಯುವ ನೀರಿನ ಯೋಜನೆಯನ್ನು ಕರ್ನಾಟಕದಲ್ಲಿ ಚುನಾಯಿತ ಸರ್ಕಾರ ಅಧಿಕಾರಕ್ಕೆ ಬರುವವರೆಗೆ ತಡೆ ಹಿಡಿದಿರುವುದಾಗಿ ಪ್ರಕಟಿಸಿದ್ದಾರೆ. ಇದನ್ನು ಈಗ ರಾಜಕೀಯ ಮುತ್ಸದ್ದಿತನದ ನಿರ್ಧಾರವೆಂದು ಕರೆಯಬಹುದಾದರೂ, ಈ ನಿರ್ಧಾರ ಪ್ರಕಟವಾಗುವ ಮುನ್ನ ಎರಡೂ ರಾಜ್ಯಗಳ ನಡುವೆ ಉಂಟಾದ ಉದ್ವಿಗ್ನತೆ, ಕಹಿ ಭಾವನೆಗಳು ಮತ್ತು ಇದರಿಂದ ಎರಡೂ ಕಡೆ ಸಂಭವಿಸಿದ ಪುಂಡಾಟಿಕೆಯ ಘಟನೆಗಳಿಗೆ ಯಾರು ಜವಾಬ್ದಾರರು ಎಂಬ ಪ್ರಶ್ನೆಯನ್ನೂ ಕೇಳಿಕೊಳ್ಳಬೇಕಾಗುತ್ತದೆ. ಹಾಗೇ, ತಮಿಳರು ಮತ್ತು ಕನ್ನಡಿಗರ ನಡುವೆ ಪದೇ ಪದೇ ಈ ತರಹದ ಘರ್ಷಣೆಗಳು ಏಕೆ ತಲೆದೋರುತ್ತವೆ ಮತ್ತು ಕರ್ನಾಟಕ ಏಕೀಕರಣದ ನಂತರ ಕಟ್ಟಿಕೊಂಡ ಕನ್ನಡ ಚಳುವಳಿಗಳ ಪ್ರಚೋದಕ ಶಕ್ತಿ ಮುಖ್ಯವಾಗಿ ಏಕೆ ತಮಿಳು ವಿರೋಧವೇ ಆಗಿದೆ ಎಂಬ ಪ್ರಶ್ನೆಗಳನ್ನೂ.

ಇತ್ತೀಚೆಗೆ ಪ್ರಕಟಗೊಂಡ ಡಾ॥ ಷ.ಶೆಟ್ಟರ್ ಅವರ *'ಶಂಗಂ ತಮಿಳಗಂ ಮತ್ತು ಕನ್ನಡ ನಾಡು ನುಡಿ'* ಪುಸ್ತಕವು ಕನ್ನಡ ಭಾಷೆ ಹಾಗೂ ಸಂಸ್ಕೃತಿ ಚರಿತ್ರೆಯನ್ನು ಈವರೆಗೆ ನಮ್ಮ ಗಮನಕ್ಕೆ ಬಾರದಿದ್ದ ನೆಲೆಗಳ ಆಧಾರದ ಮೇಲೆ ಪುನಾರಚಿಸುವ ಅಗತ್ಯವನ್ನು ಮನಗಾಣಿಸುತ್ತದೆ. ಮುಖ್ಯವಾಗಿ ಈ ಪುಸ್ತಕ ಕನ್ನಡವನ್ನು ಕಟ್ಟಿದ್ದೆಂದು ಈವರೆಗೆ ನಾವು ಭಾವಿಸಿರುವ ಕನ್ನಡ–ಸಂಸ್ಕೃತ 'ಬಾಂಧವ್ಯ'ಕ್ಕಿಂತ ಮೂಲಭೂತವಾದ ಹಾಗೂ ಅರ್ಥಪೂರ್ಣವಾದ ಕನ್ನಡ–ತಮಿಳು 'ಬಾಂಧವ್ಯ'ವನ್ನು ನಮಗೆ ಎತ್ತಿ ತೋರಿಸುತ್ತದೆ. ಆದಿ ತಮಿಳಿನ ಮತ್ತು ತಮಿಳು 'ಪ್ರದೇಶ'ದ(ತಮಿಳಗಂ) ಒಡನಾಟದಲ್ಲೇ ಒಡಮೂಡಿದ ಕನ್ನಡ ಮತ್ತು ಕನ್ನಡ ಸಮುದಾಯ, ತಮಿಳು ತನ್ನದೇ ಲಿಪಿಯನ್ನು ಪಡೆಯುವ ಸಾಕಷ್ಟು ಮುನ್ನವೇ ತನ್ನದೇ ಲಿಪಿಯನ್ನು ಪಡೆದುಕೊಂಡಿತು. ಇದರಿಂದಾಗಿ ಕನ್ನಡವು ತಮಿಳು ಭಾಷೆ, ಸಾಹಿತ್ಯ ಮತ್ತು ರಾಜ್ಯ ವ್ಯವಸ್ಥೆಯ ಮೇಲೂ ಪ್ರಭಾವ ಬೀರುವಷ್ಟು ಆತ್ಮ ವಿಶ್ವಾಸದಿಂದ ಬೆಳೆದ ಒಂದು ಕಾಲ ಘಟ್ಟದ ಚರಿತ್ರೆಯನ್ನು ಷ. ಶೆಟ್ಟರ್ ಈ ಪುಸ್ತಕದಲ್ಲಿ ಅನೇಕ ಶಾಸನ ಹಾಗೂ ಸಾಹಿತ್ಯ ಕೃತಿಗಳ ಸೂಕ್ಷ್ಮ ವಿಶ್ಲೇಷಣೆಯ ಮೂಲಕ ನಮ್ಮ ಮುಂದೆ ಬೆರಗಾಗುವಂತೆ ಮಂಡಿಸುತ್ತಾರೆ. ಈ ಮೂಲಕ ಪರೋಕ್ಷವಾಗಿ; ಕನ್ನಡ ಕುಲ ಮೂಲದ ನಿಜ ಚರಿತ್ರೆ ಹೀಗಿದ್ದರೂ, ಕನ್ನಡ

ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಗಳ ಚರಿತ್ರೆಯನ್ನು ಸಂಸ್ಕೃತದ ಒಡನಾಟದ ಆಧಾರದ ಮೇಲೇ ಕಟ್ಟಲಾಗಿರುವ ಸಾಂಸ್ಕೃತಿಕ ರಾಜಕಾರಣದ ಕಡೆ ಅವರು ನಮ್ಮ ಗಮನ ಸೆಳೆಯುತ್ತಾರೆ.

ತಮಿಳು ಸಂಸ್ಕೃತಿ ಮತ್ತು ಕನ್ನಡ ಸಂಸ್ಕೃತಿಗಳ ನಡುವೆ ಈ ಸಾಂಸ್ಕೃತಿಕ ರಾಜಕಾರಣ ಉಂಟು ಮಾಡಿದ ಬಿರುಕೇ ಈ ದಿನಗಳ ಕನ್ನಡ–ತಮಿಳರ ಘರ್ಷಣೆಗಳ ಹಿಂದೆ ಕೆಲಸ ಮಾಡುತ್ತಿರಬಹುದೇ ಎಂಬ ಅನುಮಾನ ನನ್ನದು. ಇದೊಂದೇ ಅಲ್ಲ. ಇನ್ನೂ ಒಂದು ಮುಖ್ಯ ಸಂಗತಿ ಇದರ ಹಿಂದೆ ಕೆಲಸ ಮಾಡುತ್ತಿರಬಹುದೇ ಎಂಬ ಅನುಮಾನವೂ ಇದೆ: ಮೂರನೇ ಮೈಸೂರು ಯುದ್ಧದಲ್ಲಿ ಟಿಪ್ಪು ಸೋತ. ಇದರ ಪರಿಣಾಮವಾಗಿ ಬ್ರಿಟಿಷರು ಚಾರಿತ್ರಿಕ ಕನ್ನಡ ನಾಡಿನ ಕೊನೆಯ ರೂಪ ಎನ್ನಬಹುದಾದ ಮೈಸೂರು ಸಂಸ್ಥಾನವನ್ನು ಮೂರು ಭಾಗಗಳಾಗಿ ಛಿದ್ರ ಮಾಡಿದರು. ಒಂದು ಭಾಗ ಬ್ರಿಟಿಷ್ ಆಡಳಿತದ ಮದ್ರಾಸ್ ಪ್ರಾಂತ್ಯಕ್ಕೆ ಸೇರಿದಾಗ, ಬ್ರಿಟಿಷರು ಅಲ್ಲಿಂದ ತಮಿಳು–ತೆಲುಗರನ್ನು ಭಾರಿ ಪ್ರಮಾಣದಲ್ಲಿ ದುಡಿಮೆಗಾಗಿ ಇಲ್ಲಿಗೆ ಸಾಗಿಸಿದರು. ಈ ರಾಜಕೀಯ ದುರುದ್ದೇಶದ ಆಯೋಜಿತ ವಲಸೆ ಮೈಸೂರು ಕನ್ನಡಿಗರ ಮಧ್ಯೆ ಉಂಟು ಮಾಡಿದ ಸಾಂಸ್ಕೃತಿಕ ಆಘಾತದ ಸುಪ್ತ ನೆನಪುಗಳೂ ಇಲ್ಲಿ ಕೆಲಸ ಮಾಡುತ್ತಿರಬಹುದು. ಹಾಗಾಗಿಯೇ ಕನ್ನಡ ಚಳುವಳಿ ತಮಿಳರು ಗಣನೀಯ ಸಂಖ್ಯೆಯಲ್ಲಿರುವ ಬೆಂಗಳೂರು ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲೇ ತನ್ನನ್ನು ವಿವಿಧ ರೂಪಗಳಲ್ಲಿ ಕಟ್ಟಿಕೊಂಡು, ತಮಿಳರನ್ನು ತನ್ನ ದೃಷ್ಟಿಕೇಂದ್ರವನ್ನಾಗಿ ಮಾಡಿಕೊಂಡಿದೆ. ಕನ್ನಡ ಚಳುವಳಿಯ ಈ ತಮಿಳು ವ್ಯಸನದಿಂದಾಗಿ ಇತರ ಭಾಷಾ ಸಮುದಾಯಗಳು– ಉದಾ: ಮಲೆಯಾಳಿಗಳು, ಹಿಂದೀಯರು, ಇತ್ತೀಚೆಗೆ ರಾಜಸ್ಥಾನಿಗಳು ಮತ್ತು ಬಿಹಾರಿಗಳು– ಬೆಂಗಳೂರು ಮತ್ತು ಸುತ್ತಮುತ್ತಲ ಪ್ರದೇಶಗಳಿಗೆ ವಲಸೆ ಬಂದು ನೆಲೆಗೊಂಡು ಇಲ್ಲಿನ ಜನ ಸಮುದಾಯದೊಂದಿಗೆ ಬೆರೆಯುವ ಪ್ರಕ್ರಿಯೆಯಲ್ಲಿ ತೊಡಗದೇ ಹೋಗಿರುವುದು ಯಾರ ಗಮನಕ್ಕೂ ಬಾರದೆ ಹೋಗಿ, ತಮಿಳರು ತಮಿಳರಾಗಿಯೇ ಉಳಿದಿರುವುದು ಮಾತ್ರ ಈ ಕನ್ನಡ ಚಳುವಳಿಕಾರರನ್ನು ಬಾಧಿಸುವ ದೊಡ್ಡ ಸಮಸ್ಯೆಯಾಗಿದೆ! ಕನ್ನಡ ಚಳುವಳಿಯ ಈ ದೃಷ್ಟಿದೋಷದಿಂದಾಗಿ ಕನ್ನಡದ ಪೂರ್ವ ಗಡಿ ಪೂರ್ತಾ ರಾಜಕೀಯವಾಗಿ(ಇದೇ ಅಂತಿಮ ಹಂತ ತಾನೇ?) ತೆಲುಗರ ವಶವಾಗುತ್ತಿರುವುದು ಯಾರಿಗೂ ದೊಡ್ಡ ಸಮಸ್ಯೆಯಾಗಿ ಕಾಣುತ್ತಿಲ್ಲ! ಇದು ಕನ್ನಡ ಚಳುವಳಿಯ ಇಂದಿನ ದುರಂತ.

ಈ ದುರಂತಕ್ಕೆ ಕಾರಣ, ಕನ್ನಡ ಚಳುವಳಿಯು ಕನ್ನಡನಾಡಿನ ಛಿದ್ರೀಕರಣದ ಚರಿತ್ರೆಯ ಗಾಯಗಳನ್ನೇ ಇನ್ನೂ ನೆಕ್ಕಿಕೊಳ್ಳುತ್ತಿದ್ದು (ಹಾಗಾಗಿಯೇ ಏನೋ, ಅದು ನೋವು ನಿವಾರಕವೆಂಬಂತೆ ಕರ್ನಾಟಕದ ಗತವೈಭವವನ್ನು ಅಷ್ಟು ಮೆರೆಸುವುದು!) ವರ್ತಮಾನದ ಕನ್ನಡದ ನಿಜ–ಬೇರು ಮಟ್ಟದ–ಸಮಸ್ಯೆಗಳ ಕಡೆ ಗಮನವನ್ನೇ ಕೊಡದೇ ಹೋಗಿರುವುದು. ಕನ್ನಡ ಚಳುವಳಿಯು ಕನ್ನಡದ ಅಸ್ಮಿತೆಗೆ, ಅದರ ಅಳಿವು–ಉಳಿವುಗಳಿಗೆ ಆಧಾರಭೂತವಾಗಿರುವ. ಶಿಕ್ಷಣದಲ್ಲಿನ ಕನ್ನಡದ ಪ್ರಶ್ನೆ ಅಥವಾ ಗಣಕ ಯಂತ್ರಜ್ಞಾನದಲ್ಲಿನ ಕನ್ನಡದ ಪ್ರಶ್ನೆಯನ್ನು ಎಂದಾದರೂ ಕೈಗೆತ್ತಿಕೊಂಡಿರುವುದನ್ನು ಕಂಡಿದ್ದೀರಾ? ಶಾಲಾ ಶಿಕ್ಷಣದ ಒಂದು ಹಂತದವರೆಗಾದರೂ ಕರ್ನಾಟಕದಲ್ಲಿ ಕನಿಷ್ಠ ಕನ್ನಡದ ಮಕ್ಕಳಿಗೆ ಕನ್ನಡ ಮಾಧ್ಯಮವನ್ನು ಕಡ್ಡಾಯ ಮಾಡಬಹುದೆಂಬ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಜಾರಿಗೆ ತರುವಂತೆ

ಇವರೆಂದಾದರೂ ಸರ್ಕಾರದ ಮೇಲೆ ಒತ್ತಡ ಹಾಕಿದ್ದುಂಟಾ? ಈ ತೀರ್ಪಿಗೆ ತಡೆಯಾಜ್ಞೆ ತಂದ ಬೆಂಗಳೂರಿನ ಖಾಸಗಿ ಶಾಲಾ ಸಾಮ್ರಾಜ್ಯದ ವಿರುದ್ಧ ಮತ್ತು ಈ ತಡೆಯಾಜ್ಞೆಯನ್ನು ತೆರವುಗೊಳಿಸುವ ಆಸಕ್ತಿಯನ್ನೇ ತೋರದ ಕರ್ನಾಟಕ ಸರ್ಕಾರದ ವಿರುದ್ಧ ಇವರೇಕೆ ಚಳುವಳಿ ಹೂಡದೇ ಹೋದರು?

ಈ ಮಧ್ಯೆ ಬೆಂಗಳೂರು ಕೇಂದ್ರಿತವಾದ ಕನ್ನಡದ್ದೇ ಆದ ಒಂದು ಗುಂಪು ಚಾರಿತ್ರಿಕ ಸನ್ನಿವೇಶವೇ ಬದಲಾಗಿದೆ ಎಂದು ವಾದಿಸುತ್ತಾ, ದಲಿತ ಮತ್ತು ಹಿಂದುಳಿದ ವರ್ಗಗಳ ಹಿತಾಸಕ್ತಿಯ ಹೆಸರಲ್ಲಿ; ಶಾಲೆಗಳಲ್ಲಿ ಒಂದನೇ ತರಗತಿಯಿಂದಲೇ ಇಂಗ್ಲಿಷ್ ಬೋಧಿಸುವ ಆಜ್ಞೆಯನ್ನು ಸರ್ಕಾರ ಹೊರಡಿಸುವಂತೆ (ಸರ್ಕಾರವೂ ಇಂತಹ ಒತ್ತಡಕ್ಕೆ ಕಾಯುತ್ತಿತ್ತೋ ಅಥವಾ ಅದೇ ಇಂತಹ ಒತ್ತಡವನ್ನು ಸೃಷ್ಟಿಸಿತೋ ಇನ್ನೂ ತಿಳಿಯದು!) ಸತತ ಒತ್ತಡ ಹೇರಿತು. ಇದರಲ್ಲಿ ಅದು ಯಶಸ್ವಿಯಾದಾಗ, ಈವರೆಗೆ ಕನ್ನಡ ಹೋರಾಟದ ಕೇಂದ್ರ ಕಳಕಳಿಯಾಗಿದ್ದ ಕನ್ನಡ ಶಿಕ್ಷಣದ ಪ್ರಶ್ನೆಯೇ ಅಪ್ರಸ್ತುತ ಹಾಗೂ ಅಸಂಗತವಾಗಿ ಹಿನ್ನೆಲೆಗೆ ಸರಿಯುವಂತಾಯಿತು. ಆಗ ಕನ್ನಡ ಮತ್ತು ಕನ್ನಡ ಸಮಾಜಕ್ಕೆ ಸಂಬಂಧಿಸಿದಂತೆ ಇದರ ಮುಂದಿನ ಪರಿಣಾಮಗಳೇನು ಎಂಬುದರ ಬಗ್ಗೆ ಯೋಚಿಸುವ ತಾಕತ್ತನ್ನೇ ಕಳೆದುಕೊಂಡಂತೆ ಈ ಚಳುವಳಿಗಳು ನಿಷ್ಕ್ರಿಯವಾಗಿದ್ದುದಾದರೂ ಯಾಕೆ? ರಾಜ್ಯ ಸರ್ಕಾರದ ಅನಾಸಕ್ತಿಯಿಂದಾಗಿ ಹದಿಮೂರು ವರ್ಷಗಳವರೆಗೆ ತಡೆಯಾಜ್ಞೆಗೆ ಸಿಕ್ಕಿ ನೆನೆಗುದಿಗೆ ಬಿದ್ದಿದ್ದ ಸರ್ವೋಚ್ಚ ನ್ಯಾಯಾಯಲಯದ ತೀರ್ಪು ಕೊನೆಗೂ ವಿಚಾರಣೆಗೆ ಬಂದು, ವಿಚಾರಣೆ ಮುಗಿದು ಒಂದು ವರ್ಷದ ಮೇಲಾಯಿತು. ಆದರೂ ನಮ್ಮ ಉಚ್ಚ ನ್ಯಾಯಾಲಯದಿಂದ ಆ ಬಗೆಗಿನ ತೀರ್ಪು ಹೊರಬರದಿರುವ 'ವಿಶಿಷ್ಟ ಸನ್ನಿವೇಶ'ದ ಕಡೆ ಈ ಚಳುವಳಿಗಳ ಗಮನವೇಕೆ ಹರಿದಿಲ್ಲ? * ಏಕೆಂದರೆ, ವ್ಯಕ್ತಿಗತ ಖಾಸಗಿ ಕಂಪನಿಗಳಂತೆ ಬೆಳೆದಿರುವ ಈ ಚಳುವಳಿಗಳು ರೂಪಿತವಾಗಿರುವುದೇ ಮೂಲತಃ ಅನ್ಯರ ವಿರುದ್ಧ. ಹೀಗಾಗಿ, ಇಂದು ಕನ್ನಡ ಚಳುವಳಿ ತನ್ನ ವಿರುದ್ಧವೂ ಚಳುವಳಿ ಹೂಡಬೇಕಾದ ಸಾಧ್ಯತೆಗಳ ಅರಿವಿರದ, ಸಂಪೂರ್ಣ ಹೊರ ಹೋರಾಟದ-ಬರೀ ಗಲಾಟೆ ಹುಟ್ಟಿಸುವ-ಚಳುವಳಿಯಾಗಿ ಮೂಡಿ ನಿಂತಿದೆ.

ಕನ್ನಡವನ್ನು ಕೈಬಿಡುವುದು ಅನಿವಾರ್ಯವೆಂದು ಕನ್ನಡಿಗರೇ ಹೇಳುವಂತಾಗಿರುವ ಈ 'ಬದಲಾದ ಚಾರಿತ್ರಿಕ ಸನ್ನಿವೇಶ'ದಲ್ಲಿ ಕನ್ನಡ ಚಳುವಳಿಯ ಮೂಲ ಆಶಯಗಳೇ ಸಂಪೂರ್ಣ ಬದಲಾಗಬೇಕಿತ್ತು. ಆದರೆ ಹಾಗಾಗದೇ ಅದು ಕನ್ನಡವನ್ನು ಕೈಬಿಟ್ಟು, ಇಂಗ್ಲಿಷ್-ಹಿಂದಿಗಳನ್ನು ತಮ್ಮ ವ್ಯಕ್ತಿತ್ವದ ಹಿರಿಮೆ-ಗರಿಮೆಗಳನ್ನಾಗಿ ಮಾಡಿಕೊಳ್ಳಲು ಹಾತೊರೆಯುತ್ತಿರುವ 'ಕನ್ನಡಿಗ'ರ ನೆಲ ಜಲಗಳಿಗಾಗಿ ಹೋರಾಟ ಮಾಡುವುದನ್ನು ತನ್ನ ಗುರಿಯಾಗಿಸಿಕೊಂಡಿರುವ ವಿಪರ್ಯಾಸವನ್ನು ನಾವಿಂದು ನೋಡುತ್ತಿದ್ದೇವೆ. ಇದರ ಅಂತಿಮ ಪರಿಣಾಮವೆಂದರೆ, ತಮಿಳರ ಸ್ವಭಾವಕ್ಕೆ ವಿರುದ್ಧವಾಗಿ ಅನ್ಯರ ಸಾಂಸ್ಕೃತಿಕ ಪ್ರಭಾವಕ್ಕೆ ಒಳಗಾಗುವ ಚಾರಿತ್ರಿಕ ದೌರ್ಬಲ್ಯವುಳ್ಳ ಕನ್ನಡಿಗರು, ತಮ್ಮ ನೆಲ ಜಲಗಳನ್ನು ಹಿಂದಿ-ಇಂಗ್ಲಿಷ್‌ಗಳ ನವ ಸಾಮ್ರಾಜ್ಯಶಾಹಿಯ ವಶಕ್ಕೆ (ಅಂದರೆ ರಾಷ್ಟ್ರೀಯ-ಬಹುರಾಷ್ಟ್ರೀಯ ಕಂಪನಿ ವ್ಯಾಪಾರಿಗಳಿಗೆ)

---

* ಈಗ ತೀರ್ಪು ಹೊರಬಂದಿದ್ದು ಅದನ್ನು ರಾಜ್ಯಸರ್ಕಾರ ಸರ್ವೋಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಿದೆ.

ಬಿಟ್ಟುಕೊಡುವಂತಹ– ಕನ್ನಡದ ಬೇರುಗಳೇ ನಿರ್ನಾಮವಾಗುವಂತಹ– ವಾತಾವರಣ ಮುಂದಿನ ದಿನಗಳಲ್ಲಿ ನಿರ್ಮಾಣವಾಗಲಾರಂಭಿಸುವುದು. ಈ ಅಪಾಯಕ್ಕೆ ಮುಖ್ಯ ಕಾರಣ, ಕನ್ನಡ ಚಳುವಳಿ ಈಗ ಮೂಲತಃ ನಗರ ಕೇಂದ್ರಿತ ಮಧ್ಯಮ ಮತ್ತು ಕೆಳ ಮಧ್ಯಮ ಜಾತಿಗಳ ಚಳುವಳಿಯಾಗಿರುವುದು. ಅದು ರೈತರು, ದಲಿತರು, ಕಾರ್ಮಿಕರು, ಪರಿಸರವಾದಿಗಳು–ಹೀಗೆ ಕನ್ನಡದ ವಿವಿಧ ಚಲನಶೀಲ ಹಾಗೂ ಮುಖ್ಯವಾಹಿನಿಯ ಚಳುವಳಿಗಳನ್ನು ಒಳಗೊಂಡು ಬೆಳೆಯುವಂತಾಗಿದ್ದರೆ, ತನ್ನ ಬುಡವನ್ನೇ ಕತ್ತರಿಸುವ ಕೊಡಲಿಗೆ ತಾನೇ ಕಾವಾಗುವಂತಹ ಈ ಇಕ್ಕಟ್ಟಿಗೆ ಸಿಲುಕಿಕೊಳ್ಳುತ್ತಿರಲಿಲ್ಲ.

ಈ ಇಕ್ಕಟ್ಟಿನಿಂದ ಕನ್ನಡ ಚಳುವಳಿಯನ್ನು ಪಾರುಮಾಡಬಲ್ಲುದಾಗಿದ್ದುದು ಕನ್ನಡ ಬುದ್ಧಿಜೀವಿ ವರ್ಗ. ಆದರೆ ಗೋಕಾಕ್ ಚಳುವಳಿಯವರೆಗೆ ಕನ್ನಡ ಚಳುವಳಿಯೊಂದಿಗೆ ಸ್ಥೂಲವಾಗಿಯಾದರೂ ಗುರುತಿಸಿಕೊಂಡಿದ್ದ ಈ ವರ್ಗ ಇತ್ತೀಚಿನ ವರ್ಷಗಳಲ್ಲಿ ಕಾಲಧರ್ಮಕ್ಕನುಸಾರವಾಗಿಯೋ ಏನೋ, ಜಾಗತೀಕರಣದ ಇಕ್ಕಟ್ಟಿಗೆ ಸಿಲುಕಿಕೊಂಡಿರುವ ಮಧ್ಯಮ ವರ್ಗದವರ ಕಷ್ಟ ಸುಖಗಳೊಂದಿಗೆ ತನ್ನನ್ನು ಗುರುತಿಸಿಕೊಳ್ಳಲಾರಂಭಿಸಿದೆ. ಹಾಗೇ, ಕನ್ನಡ ಚಳುವಳಿ, ರೈತ ಚಳುವಳಿ ಹಾಗೂ ಪರಿಸರ ಚಳುವಳಿಗಳು ಕೈಬಿಟ್ಟು ದಲಿತ ವರ್ಗವನ್ನು ಮುಂದೆ ಮಾಡಿಕೊಂಡು, ಕನ್ನಡವನ್ನು ಜಾಗತೀಕರಣದ ಇಕ್ಕಟ್ಟುಗಳಿಂದ ಪಾರುಮಾಡಲು ಇಂಗ್ಲಿಷ್‌ನೊಡನೆ ಅನುಸಂಧಾನ ನಡೆಸುವುದೇ ಶ್ರೇಷ್ಠ ಮಾರ್ಗವೆಂದು ಅದು ಪ್ರತಿಪಾದಿಸತೊಡಗಿದೆ. ಈ ವರ್ಗ ದಲಿತರಿಗೆ ಮತ್ತು ಇತರ ಶೂದ್ರರಿಗೆ ಈಗ ಶಿಕ್ಷಣ ಮತ್ತು ಆಡಳಿತಗಳಲ್ಲಿ ಬಳಸಲಾಗುತ್ತಿರುವ 'ಪ್ರಮಾಣಿತ'–ಶಿಷ್ಟ–ಕನ್ನಡವು ಕ್ಲಿಷ್ಟವೂ, ಸಾಮಾಜಿಕವಾಗಿ ಕೀಳರಿಮೆ ಉಂಟುಮಾಡುವಂತಹದಾಗಿದ್ದು; ಅವರು ಇವುಗಳಿಂದ ಪಾರಾಗಲು ಇಂಗ್ಲಿಷ್ ಶಿಕ್ಷಣವನ್ನು ಬಯಸತೊಡಗಿದ್ದಾರೆಂಬ ವಿಚಿತ್ರ ವಾದದ ಮೂಲಕ ಕನ್ನಡ ಶಿಕ್ಷಣದ ಹಿಂದಿರುವ ತಾತ್ವಿಕತೆ ಹಾಗೂ ನೈತಿಕತೆಗಳಿಗೆ ಮತ್ತು ಆ ಮೂಲಕ ಕನ್ನಡ ಸಮಾಜದ ಮೂಲ ಅಸ್ಮಿತೆಗೇ ಕೊಡಲಿ ಪೆಟ್ಟು ಹಾಕತೊಡಗಿದೆ.

ಈ ವಿಷಯ ಕಳೆದ ೫ ಹಾಗೂ ೬ರಂದು ಶಿವಮೊಗ್ಗದಲ್ಲಿ ನಡೆದ 'ನಮಗೆ ಬೇಕಾದ ಕನ್ನಡ' ಎಂಬ ವಿಷಯ ಕುರಿತ ವಿಚಾರ ಸಂಕಿರಣದಲ್ಲಿ(ಇದನ್ನು ಆಯೋಜಿಸಿದ್ದುದು ಮುಖ್ಯವಾಗಿ, ಕುವೆಂಪು ವಿಶ್ವವಿದ್ಯಾಲಯದ ಪದವಿ ಕಾಲೇಜುಗಳ ಕನ್ನಡ ಅಧ್ಯಾಪಕರ ಸಂಘ) ಬಹು ಆಯಾಮಗಳಲ್ಲಿ ಚರ್ಚಿತವಾಯಿತು. ಕನ್ನಡದ ತಮಿಳು ಒಡನಾಟದ ಬಗ್ಗೆ ಇತ್ತೀಚೆಗೆ ಹೊಸ ಬೆಳಕು ಚೆಲ್ಲಿರುವ ಷ. ಶೆಟ್ಟರ್, ಕನ್ನಡದಲ್ಲಿನ ಆಧುನಿಕ 'ತೋಂಡಿ' ಸಂಪ್ರದಾಯದ ಪಿತಾಮಹರೆನಿಸಿರುವ ಕಿ.ರಂ.ನಾಗರಾಜ ಹಾಗೂ ಕನ್ನಡದ ಆಧುನಿಕ ಭಾಷಾಶಾಸ್ತ್ರಜ್ಞರೆನಿಸಿರುವ ಕೆ.ವಿ.ನಾರಾಯಣ ಮುಖ್ಯವಾಗಿ ಈ ಸಂಕಿರಣದ ಸಂಪನ್ಮೂಲ ವ್ಯಕ್ತಿಗಳು. ವಿಚಾರ ಸಂಕಿರಣದ ಭಾಗವಾಗಿ ಇವರೆಲ್ಲರ ಎದುರಿನಲ್ಲಿ ನಾನು ಮೇಲೆ ವಿವರಿಸಿದಂತಹ ಕನ್ನಡಕ್ಕೊದಗಿರುವ ಬಿಕ್ಕಟ್ಟಿನ ಬಗ್ಗೆ ಮಾತನಾಡಿದಾಗ ಅದು ಬಿಸಿ ಬಿಸಿ ಚರ್ಚೆಗೆ ಕಾರಣವಾಯಿತು, ಕೆ.ವಿ.ನಾರಾಯಣರ ಇತ್ತೀಚಿನ 'ಕನ್ನಡ ಜಗತ್ತು:ಅರ್ಧ ಶತಮಾನ' ಎಂಬ ಪುಸ್ತಕವೇ ಕನ್ನಡದ ಇಂದಿನ ಬಿಕ್ಕಟ್ಟನ್ನು ಸಮರ್ಥವಾಗಿ ಬಿಂಬಿಸುತ್ತದೆ ಎಂದು ಕಿ.ರಂ. ಪ್ರತಿಪಾದಿಸತೊಡಗಿದಾಗ ಅದನ್ನು ನಾನು ತೀವ್ರವಾಗಿಯೇ ವಿರೋಧಿಸಬೇಕಾಯಿತು.

ಏಕೆಂದರೆ ಸದಾ ಇತರ ಭಾಷೆಗಳ(ತಮಿಳು,ಸಂಸ್ಕೃತ, ಪರ್ಷಿಯನ್, ಇಂಗ್ಲಿಷ್, ಈಗ ಅಮೆರಿಕನ್) ಮುಖಾಮುಖಿಯಲ್ಲೇ ಉಳಿದು ಬೆಳೆಯುವ ಸಂಕಟದಲ್ಲೇ ತನ್ನ ಚರಿತ್ರೆಯನ್ನು ಕಟ್ಟಿಕೊಳ್ಳುತ್ತಾ ಬಂದಿರುವ ಕನ್ನಡ, ತನ್ನ ನಿಜವಾದ ಸ್ವಾಯತ್ತತೆಯನ್ನು ಸ್ಥಾಪಿಸಿಕೊಳ್ಳುವ ಹೋರಾಟದಲ್ಲಿ ಎಲ್ಲ ಅಡೆ ತಡೆಗಳನ್ನೂ ದಾಟಿ; ಸರ್ವೋನ್ನತ ನ್ಯಾಯಾಲಯದ ತೀರ್ಪಿನ ಮೂಲಕ ಒಂದು ಹಂತದವರೆಗಾದರೂ ಶಿಕ್ಷಣದ ಭಾಷೆಯಾಗಿ ಸ್ಥಾಪಿತವಾಗುವ ಸಂದರ್ಭ ಒದಗಿ ಬಂದಾಗ, ಅದನ್ನು ತಮ್ಮ 'ಒಂದನೇ ತರಗತಿಯಿಂದ ಇಂಗ್ಲಿಷ್' ಚಳುವಳಿಯ ಮೂಲಕ ಹಾಳು ಮಾಡಲು ಒಟ್ಟುಗೂಡಿದ ಹೊಸ ಪಟ್ಟಭದ್ರರ ಎಲ್ಲ ವಾದಗಳಿಗೂ ನನ್ನ ಪ್ರಕಾರ ಈ ಪುಸ್ತಕ, ತಾನು ವಿನ್ಯಾಸಗೊಳಿಸಿಕೊಂಡಿರುವ ತಾತ್ವಿಕತೆ ಮತ್ತು ಶೈಲಿಯ ಮೂಲಕ ಒಂದು ಸಾಧುತ್ವವನ್ನು ಒದಗಿಸಲು ಹವಣಿಸುತ್ತದೆ.

ಈ ಪುಸ್ತಕ ಹೇಳುವ ಅತಿಯಾದ ಸಂಸ್ಕೃತೀಕರಣದಿಂದ ಕನ್ನಡ ಭಾಷೆಯ ರಚನೆ ಮತ್ತು ಲಿಪಿಗಳಲ್ಲಿ ಉಂಟಾಗಿರುವ ಸಾಮಾಜಿಕ ನೆಲೆಯ ತೊಡಕುಗಳು ಇಂದಿನ ಸಂದರ್ಭದಲ್ಲಿ ಈ ಭಾಷೆ ಬೆಳೆಯಲು ಇರುವ ತೊಂದರೆಗಳಾಗಿವೆ ಎಂಬುದನ್ನು ನಾನು ಒಪ್ಪುವೆ. ಆದರೆ, ಇವನ್ನು ಹಿರಿಯರಾದ ಡಿ.ಎನ್.ಶಂಕರಭಟ್ಟರು ಈಗಾಗಲೇ ಪ್ರತಿಪಾದಿಸಿರುವ ಹಾದಿಯಲ್ಲಿ ಸರಿಪಡಿಸಿಕೊಳ್ಳುವ ರೀತಿಯಲ್ಲಿ ಭಾಷಾ ಆಂದೋಲನವನ್ನು ಸಾಮಾಜಿಕವಾಗಿ ಪುನರ್ರೂಪಿಸಬೇಕೆಂದು ಹೇಳುವವನು ನಾನು. ಬದಲಿಗೆ, ಈ ಇಕ್ಕಟ್ಟನ್ನು ಇಂಗ್ಲಿಷ್ ಶಿಕ್ಷಣದ ಹಪಾಹಪಿಯನ್ನು ಪ್ರತ್ಯಕ್ಷವಾಗಿಯಲ್ಲದಿದ್ದರೂ(ಅದಕ್ಕೂ ಧೈರ್ಯ ಬೇಕಾದ ಸ್ಥಿತಿ ಇನ್ನೂ ಉಳಿದಿದೆ ಎಂಬುದೇ ಸದ್ಯದ ಸಂತೋಷದ ಸಂಗತಿ!) ಪರೋಕ್ಷವಾಗಿ ಬೆಂಬಲಿಸುವ ವಾದಗಳನ್ನು ಮಂಡಿಸಲು ಸುಲಭದ ದಾರಿಯಾಗಿ ಬಳಸಿಕೊಳ್ಳಬಾರದು. ಆದರೆ, ಈ ಪುಸ್ತಕದಲ್ಲಿ ಕೆ.ವಿ.ನಾರಾಯಣರು ಹಾಗೆ ಮಾಡಿರುವುದು ನನಗೆ ಕಂಡಿದೆ. ಏಕೆಂದರೆ, 'ಅಂತಸ್ಥ ಜಾಗತಿಕ ವ್ಯಾಕರಣ'ವೆಂಬ ಸಿದ್ಧಾಂತದ ಆಧಾರದ ಮೇಲೆ ಇಲ್ಲಿ ಅವರು ಮಂಡಿಸಿರುವ ಹಲವು ವಾದಗಳು ಅನುಮಾನಾಸ್ಪದವೂ, ಪ್ರಶ್ನಾರ್ಹವೂ ಆಗಿವೆ. ಭಾಷಾ ಪರಿಸರದ ಪ್ರಸ್ತಾಪವೇ ಇಲ್ಲದೆ, ಒಂದು ಮಗು ಎಷ್ಟು ಭಾಷೆಗಳನ್ನಾದರೂ ಕಲಿಯಬಲ್ಲುದು, ಶಿಕ್ಷಣ ಮಾಧ್ಯಮಕ್ಕೂ ಕಲಿಕೆಗೂ ಸಂಬಂಧವಿಲ್ಲ, ಭಾಷಾ ಕಲಿಕೆಗೂ ಸಾಂಸ್ಕೃತಿಕ ಅಸ್ಮಿತೆಯ ಪ್ರಶ್ನೆಗೂ ಸಂಬಂಧವಿಲ್ಲ, ಕನ್ನಡ ತನ್ನ ಸಹ ಭಾಷೆಗಳ(ತುಳು, ಕೊಂಕಣಿ, ಕೊಡವ) ಜೊತೆ ಯಾಜಮಾನ್ಯ ಸಂಬಂಧಗಳನ್ನು ಬೆಳೆಸಿಕೊಂಡು ಆ ಭಾಷೆಗಳ ಸಹಜ ಬೆಳವಣಿಗೆಗೆ ಅಡ್ಡಿಯಾಗಿದೆ ಮುಂತಾದ ಇವರ ವಾದಗಳನ್ನು ಪ್ರಶ್ನೆಗಳಿಲ್ಲದೆ ಒಪ್ಪಿಕೊಂಡುಬಿಟ್ಟರೆ, ಕನ್ನಡ ಚಳುವಳಿಯ–ಈಗಾಗಲೇ ಕ್ಷೀಣ ಸ್ಥಿತಿ ತಲುಪಿರುವ–ಹೃದಯವೇ ನಿಂತು ಹೋದಂತಾಗುತ್ತದೆ.

ಕನ್ನಡದ ಇಂತಹ ಹೃದಯ ಸ್ತಂಭನವನ್ನು ನಾರಾಯಣರು ಬಯಸಲಾರರು ಎಂಬ ನಂಬಿಕೆಯಿಂದಲೇ ನಾನು ನನ್ನ ವಿಚಾರಗಳನ್ನು ಮಂಡಿಸಿದ್ದೆ. ಆದರೆ ಅವರು ನಾನು ಅವರ ವಿಚಾರಗಳನ್ನು ಸರಿಯಾಗಿ ಅರ್ಥಮಾಡಿಕೊಂಡಿಲ್ಲವೆಂಬ ಅಸಮಧಾನದಲ್ಲಿದ್ದಂತಿದ್ದು, ಏನೂ ಮಾತಾಡಲಿಲ್ಲ. ಕಿ.ರಂ. ಸಹಜವಾಗಿಯೇ ಉದ್ವಿಗ್ನರಾಗಿ, ಇಂದಿನಿಂದಲೇ ನೀವು ಇಂಗ್ಲಿಷ್ ಮಾಧ್ಯಮ ಶಾಲೆಗಳನ್ನು ಮುಚ್ಚಿಸಿ, ನಾವು ನಿಮ್ಮ ಜೊತೆಗಿರುತ್ತೇವೆ ಎಂದು ಘೋಷಿಸಿದರು–ಇದು ಎಲ್ಲರೂ ಸೇರಿ ಮಾಡಬೇಕಾದ ದೀರ್ಘಕಾಲಿಕ ರಾಜಕಾರಣ ಎಂಬುದನ್ನೇ ಮರೆತವರಂತೆ! ಇವರು ಕನ್ನಡದ ಮಕ್ಕಳಿಗೆ ಕನ್ನಡ ಶಿಕ್ಷಣವೆಂಬುದು ಒಂದು

ಸಾಮಾಜಿಕ ನೈತಿಕತೆಯ ಹಾಗೂ ಜವಾಬ್ದಾರಿಯ ಪ್ರಶ್ನೆಯೂ ಆಗಿದೆ ಮತ್ತು ಅದಕ್ಕೆ ತಕ್ಕನಾದ ಉದ್ಯೋಗ ಮಾರುಕಟ್ಟೆ ನಿರ್ಮಾಣವಾಗುವಂತೆ ಖಚಿತಪಡಿಸಿಕೊಳ್ಳುವ ದಾರಿಗಳನ್ನು ಹುಡುಕುವುದೇ ಇಂದು ನಾವು ಮಾಡಬೇಕಾದ ನಿಜವಾದ ರಾಜಕಾರಣವೆಂಬುದನ್ನು ಮರೆತು, ಜಾಗತೀಕರಣದ ರಾಜಕೀಯ ಒತ್ತಡಗಳಿಗೆ ಸುಲಭವಾಗಿ ಮಣಿದವರಂತೆ ಕಂಡು ಖೇದವೆನಿಸಿತು. ಇವರ ಇನ್ನೊಬ್ಬ ಬೆಂಬಲಿಗರು ಅಂಬೇಡ್ಕರರ ಸಂಕಟಕ್ಕೆ ಇಂಗ್ಲಿಷ್ ಹೇಗೆ ಹೊರ ದಾರಿಯನ್ನು ಕಲ್ಪಿಸಿತು ಎಂಬುದನ್ನು ವಿವರಿಸುತ್ತಾ, ನನ್ನ ವಾದ ಆರ್.ಎಸ್.ಎಸ್. ವಾದಕ್ಕೆ ಸಮೀಪವಾಗಿದೆ ಎಂದು ಎಚ್ಚರಿಸಿದರು! ಕನ್ನಡ ವಿದ್ವದ್ವಲಯದ ತಾರೆಗಳಲ್ಲೊಬ್ಬರಾದ ಇವರು, ಸಂಪೂರ್ಣ ದಿವಾಳಿಯೆದ್ದ ಒಬ್ಬ ಎಡಪಂಥೀಯರಂತೆ ನನ್ನ ಮುಂದೆ ಆರ್.ಎಸ್.ಎಸ್. ಗುಮ್ಮನನ್ನು ಇರಿಸಿ ಮಾತನಾಡತೊಡಗಿದ್ದು ಗಾಬರಿ ಹುಟ್ಟಿಸಿತು. ಅಲ್ಲದೆ, ಅಂಬೇಡ್ಕರ್ ಇಡೀ ಶಾಲಾ ಶಿಕ್ಷಣವನ್ನು ಮುಗಿಸಿದ್ದು ಮರಾಠಿಯಲ್ಲಿ ಮತ್ತು ಅವರು ಇಂಗ್ಲಿಷ್ ಕಲಿತದ್ದು ಸ್ವಂತ ಪರಿಶ್ರಮದಿಂದ–ಹೆಚ್ಚಿನ ವಿದ್ವತ್ತಿಗಾಗಿ ಹಾಗೂ ರಾಜಕಾರಣಕ್ಕಾಗಿ ಎಂಬುದನ್ನು ಗಣನೆಗೇ ತೆಗೆದುಕೊಳ್ಳದೆ ಅವರು ಮಾಡಿದ ವಾದ, ಕೇವಲ ಅಮಾಯಕವಾದುದಲ್ಲವೆನ್ನಿಸಿ ಜಿಗುಪ್ಸೆಯನ್ನೂ ಹುಟ್ಟಿಸಿತು.

ಯಾರೂ, ಯಾವುದೂ ಪವಿತ್ರ ಗೋವುಗಳಲ್ಲ ಎಂದು ಸರಿಯಾಗಿಯೇ ವಾದಿಸುವ ಈ ಗುಂಪು, ಅಂಬೇಡ್ಕರರನ್ನು ಮಾತ್ರ ಪವಿತ್ರ ಗೋವಿನಂತೆ ಕಾಪಾಡಿಕೊಂಡು ತಮ್ಮ ರಾಜಕೀಯ ವಾದಗಳಿಗೆ ಬಳಸಿಕೊಳ್ಳುವ ರೀತಿಯೇ ಅವರ ವಾದಗಳ ಹಿಂದಿರುವ ಟೊಳ್ಳು ರಾಜಕಾರಣವನ್ನು ಸೂಚಿಸುತ್ತದೆ ಎಂದು ನನಗನ್ನಿಸುತ್ತದೆ. ದಲಿತರ ಬೇಡಿಕೆಗಳನ್ನೆಲ್ಲ ಪ್ರಶ್ನೆಯೇ ಇಲ್ಲದೆ ಸಾರಾಸಗಟಾಗಿ ಒಪ್ಪಿಕೊಳ್ಳಬೇಕೆಂದು ವಾದಿಸುವವರ ಗುಂಪಿಗೆ ದಲಿತರು 'ಕರುಣೆ'ಗೆ ಅರ್ಹರಾದ 'ಅನ್ಯ'ರು;'ಕರುಣಾ'ದ ವ್ಯಾಪ್ತಿಗೆ ಬರುವ ಜೊತೆಗಾರರಲ್ಲ. ಹೀಗೆ ದಲಿತರನ್ನು ಕೇವಲ ಒಂದು ರಾಜಕೀಯ ಸಮುದಾಯವೆಂಬಂತೆ ಕಲ್ಪಿಸಿಕೊಂಡು, ದಲಿತರಲ್ಲಿಯೂ ಕನ್ನಡದ ಸತ್ಯ ಮತು ಸತ್ವದ ಬಗ್ಗೆ ನಂಬಿಕೆ–ಗೌರವಗಳನ್ನು ಉಳಿಸಿಕೊಂಡಿರುವವರೂ ಇನ್ನೂ ಸಾಕಷ್ಟು ಸಂಖ್ಯೆಯಲ್ಲಿದ್ದಾರೆ ಎಂಬುದನ್ನು ಇವರು ಗುರುತಿಸಲಾರದೇ ಹೋಗಿದ್ದಾರೆ. ಹಾಗಾಗಿಯೇ, ನಾವ್ಯಾರೂ ಇಂಗ್ಲಿಷನ್ನು ಕಲಿಸಬೇಡಿ ಎಂದು ಹೇಳುತ್ತಿಲ್ಲ;ಬದಲಿಗೆ ಕನ್ನಡ ಕಲಿಕೆಯ ನೆಲಗಟ್ಟಿನ ಮೇಲೆ ಇಂಗ್ಲಿಷನ್ನು ಚೆನ್ನಾಗಿ ಕಲಿಸಿ ಎಂದು ಹೇಳುತ್ತಿದ್ದೇವೆ ಎಂಬುದನ್ನು ಉದ್ದೇಶಪೂರ್ವಕವಾಗಿಯೇ ಜನರಿಂದ ಮರೆಸಿ ಇವರು ವಾದ ಮಾಡುತ್ತಿದ್ದಾರೆ. ಅಲ್ಲದೆ, ನಮ್ಮ ನಿಜವಾದ ಆತಂಕ ಇರುವುದು ಒಂದನೇ ತರಗತಿಯ ಇಂಗ್ಲಿಷ್ ಕಲಿಕೆಯ ಬಗೆಗಲ್ಲ, ಬದಲಿಗೆ ಅದರ ಮುಂದಿನ ಶೈಕ್ಷಣಿಕ, ಸಾಮಾಜಿಕ, ರಾಜಕೀಯ ಪರಿಣಾಮಗಳ ಬಗೆಗೆ ಎಂದು ಸಾರಿ ಸಾರಿ ಹೇಳುತ್ತಿದ್ದರೂ, ಇವರ ಕಿವಿಗಳಿಗೇಕೆ ಬೀಳದಾಗಿದೆ? ಜಾಗತೀಕರಣದೊಂದಿಗೆ ಚರಿತ್ರೆ ತನ್ನ ಅಂತ್ಯ ಮುಟ್ಟಿದೆ ಎಂದು ಹೇಳುತ್ತಿರುವ ಜಾಗತೀಕರಣವಾದಿಗಳ ಮಾತುಗಳಿಗೆ ಮರುಳಾದಂತೆ ಇವರು, ಕನ್ನಡವೂ ಸೇರಿದಂತೆ ತಮ್ಮೆಲ್ಲ ದೇಶೀ ಅಸ್ತ್ರಗಳನ್ನು ಕೆಳಗಿಟ್ಟಂತೆ ತೋರುತ್ತದೆ. ಇದು ಖಂಡಿತ ಬಾಣಲೆಯಿಂದ ಬೆಂಕಿಯ ಕಡೆಗಿನ ಪ್ರಯಾಣವೇ ಆಗಿದೆ ಎಂದು ನನಗನ್ನಿಸುತ್ತದೆ. ನನ್ನ ಈ ಅನ್ನಿಸಿಕೆ ಸುಳ್ಳಾಗಲಿ ಎಂಬುದರ ಹೊರತಾಗಿ ಇನ್ನಾವ ಹಾರೈಕೆಯ ಅವರಿಗಾಗಿ ನನ್ನ ಬಳಿ ಸದ್ಯಕ್ಕೆ ಇಲ್ಲದಾಗಿದೆ!

ಶಿವಮೊಗ್ಗದಲ್ಲಿನ ವಿಚಾರ ಸಂಕಿರಣದ ಈ ಪುರಾಣವನ್ನೆಲ್ಲ ನಾನು ಇಲ್ಲಿ ಇಷ್ಟು ವಿವರವಾಗಿ ಏಕೆ ಹೇಳಬೇಕಾಗಿ ಬಂತೆಂದರೆ, ಈಚಿನ ಹೊಗೇನಕಲ್ ಗಲಾಟೆಯಲ್ಲಿ ನಾವು ನೋಡಿದಂತೆ, ಕನ್ನಡ ಬೀದಿ ಚಳುವಳಿ ರೂಕ್ಷವಾಗಿ ಕಾಣುವಂತಾಗಿದ್ದರೆ ಅದಕ್ಕೆ ಕನ್ನಡದ ಕೆಲವು (ಅತಿ)ಬುದ್ಧಿಜೀವಿಗಳು ಹಿಡಿದಿರುವ ಇಂತಹ ಅಡ್ಡದಾರಿಗಳೂ ಕಾರಣವಾಗಿರಬಹುದೇ ಎಂಬ ನನ್ನ ಅನುಮಾನವನ್ನು ಸೂಚಿಸಲು. ಇದಕ್ಕೆ, ಇಂದು ಯದ್ವಾತದ್ವಾ ವರ್ತಿಸುತ್ತಿರುವಂತೆ ತೋರುವ ಇವರಿಬ್ಬರಲ್ಲೂ ಸಾಮಾಜಿಕ ನೈತಿಕತೆಯ ಭಯ ಹುಟ್ಟಿಸುವ ಕನ್ನಡದ ಹಿರಿಯರೆಂಬುವವರು ಒಬ್ಬರೂ ಇಲ್ಲದೇ ಹೋಗಿರುವುದೇ ಕಾರಣವಾಗಿರಬಹುದು. ಕುವೆಂಪು, ಕಾರಂತ ಮತ್ತು ರಾಜಕುಮಾರ್ ನಮ್ಮ ಮಧ್ಯೆ ಇದ್ದರೆಂಬುದೇ ಬುದ್ಧಿಜೀವಿಗಳನ್ನೂ ಒಳಗೊಂಡಿದ್ದ ಕನ್ನಡ ಚಳುವಳಿ ತನ್ನ ಸಾಮಾಜಿಕ ಸಭ್ಯತೆಯ ಎಲ್ಲೆಗಳನ್ನು ದಾಟದಂತೆ ಪ್ರತಿಬಂಧಿಸುತ್ತಿತ್ತು. ಅವರ ಕಾಲದಲ್ಲೂ ಕನ್ನಡ ಬೀದಿ ಚಳುವಳಿ(ಈ ಶಬ್ದವನ್ನು ನಾನು ಖಂಡಿತ ಅವಹೇಳನಕಾರಿ ಉದ್ದೇಶದಿಂದ ಬಳಸುತ್ತಿಲ್ಲ; ಬದಲಿಗೆ ಅದರ ಅಸ್ತಿತ್ವದ ಅಗತ್ಯವನ್ನು ಗೌರವಪೂರ್ಣವಾಗಿ ಒಪ್ಪಿಕೊಂಡೇ ಹೇಳುತ್ತಿರುವೆ) ಪುಂಡಾಟಿಕೆ, ಚಂದಾ ವಸೂಲಿಗಳನ್ನು ನಡೆಸುತ್ತಿದ್ದರೂ, ಅದು ಒಂದು 'ಚಿಲ್ಲರೆ' ಪ್ರಮಾಣದಲ್ಲಿ ಮತ್ತು ಅಪರಾಧಿ ಮನೋಭಾವನೆಯೊಂದಿಗೇ ನಡೆಯುತ್ತಿತ್ತು. ಇಂದು ಅದಾದರೋ ಸೇನೆ, ವೇದಿಕೆ, ಕೇಂದ್ರಗಳ ಹೆಸರುಗಳಲ್ಲಿ ಸಾಂಸ್ಥಿಕ ಸ್ವರೂಪ ಪಡೆದು ರಾಜಾ-ರೋಷವಾಗಿ ನಡೆಯುತ್ತಿದೆ. ಇದರ ಅನಾಹುತಕಾರಿ ಪರಿಣಾಮಗಳನ್ನು ನಾವು ಒಂದೆರಡು ವರ್ಷಗಳಿಂದೀಚೆಗೆ ಕಾಣುತ್ತಾ ನಿಶ್ಚೇಷ್ಟಿತರಾಗುತ್ತಿದ್ದೇವೆ! ಬೆಳಗಾವಿಯ ಮೇಯರ್ ಆಯ್ಕೆಯ ಹಿಂದಿನ ರಾಜಕಾರಣವನ್ನು ನಿರ್ವಹಿಸಲು ಇಂತಹ 'ವೇದಿಕೆ'ಯೊಂದರ ನಾಯಕರು ಬೆಂಗಳೂರಿನಿಂದ ಅಲ್ಲಿಗೆ ಹೋಗಿ ಮೊಕ್ಕಾಂ ಮಾಡಿದ್ದರೆಂಬುದು ಈ ಕನ್ನಡ ಚಳುವಳಿಯ ರಾಜಕಾರಣ ಪಡೆಯುತ್ತಿರುವ ಹೊಸ ಹಾಗೂ ಆತಂಕಕಾರಿ ಆಯಾಮಗಳೆಂತಹುದು ಎಂಬುದನ್ನು ಸೂಚಿಸುತ್ತದೆ. ಕರ್ನಾಟಕದ ರಾಜಕೀಯ ಪಕ್ಷಗಳ ರಾಜಕಾರಣಕ್ಕೆ ಮತ್ತು ಬುದ್ಧಿಜೀವಿಗಳ ಕಾರ್ಯಶೀಲತೆಗೆ ಕನ್ನಡ ಒಂದು ನಿಜವಾದ ಕಳಕಳಿಯ ವಿಷಯವಾಗದಿರುವುದೇ ಇದಕ್ಕೆಲ್ಲ ಕಾರಣ ಎಂಬುದು ಸ್ಪಷ್ಟ.

ಮಾರುಕಟ್ಟೆಯಲ್ಲಿ ಉಳಿಯಲು ಹೆಣಗುತ್ತಿರುವ ಕೆಲವು ಪತ್ರಿಕೆಗಳು ಮಾಡುತ್ತಿರುವ ಮಸಾಲಾ ಪತ್ರಿಕೋದ್ಯಮ, ಚಳುವಳಿ ಹೂಡಿ ನಾಯಕರಾಗಲು ಸಂದರ್ಭಕ್ಕಾಗಿ ಕಾಯುತ್ತಿರುವ ಕೆಲವು ಕನ್ನಡ ಪುಢಾರಿಗಳು ಮತ್ತು ಹತ್ತಿರ ಬಂದಿರುವ ಚುನಾವಣೆಗಳಲ್ಲಿ ಲಾಭ ಪಡೆಯಲು ಕೆಲವು ಪಕ್ಷಗಳು ನಡೆಸಿದ ಪ್ರಯತ್ನಗಳು ಸೃಷ್ಟಿಸಿದ ಹೊಗೇನಕಲ್ ಉದ್ವಿಗ್ನತೆಯು, ಕರುಣಾನಿಧಿಯವರ 'ಬಿಸಿ' ಪ್ರತಿಕ್ರಿಯೆಯಿಂದಾಗಿ ಬೀದಿಗೆ ಹರಡಿ ತೆಗೆದುಕೊಂಡ ತಿರುವು, ಕನ್ನಡಿಗರಿಗೆ ಖಂಡಿತ ಮರ್ಯಾದೆ ತರುವಂತಹದಾಗಿರಲಿಲ್ಲ. ಹೊಗೇನಕಲ್ ಕುಡಿಯುವ ನೀರಿನ ಯೋಜನೆ ಹತ್ತು ವರ್ಷಗಳ ಹಿಂದೆಯೇ, ಕರ್ನಾಟಕದ ಪಾಲಿನ ಕಾವೇರಿ ನೀರಿನ ಅಗತ್ಯವಿಲ್ಲದಂತೆ ಮತ್ತು ಕರ್ನಾಟಕ ಸರ್ಕಾರದ ಒಪ್ಪಿಗೆಯೊಂದಿಗೇ ಕೇಂದ್ರ ಸರ್ಕಾರ ನೀಡಿದ್ದ ನಿರಪೇಕ್ಷಣಾ ಪತ್ರದ ಆಧಾರದ ಮೇಲೆ ರೂಪಿತವಾಗಿದ್ದು; ಅದು ಕರ್ನಾಟಕಕ್ಕೆ ಸೇರಿದ ನಡುಗಡ್ಡೆಯಲ್ಲಿ ಸ್ಥಾಪಿತವಾಗುತ್ತದೆ ಎಂಬುದು ಬರೀ ಹುಯ್ಲು ಮಾತ್ರವಾಗಿದೆ. ವಾಸ್ತವವೆಂದರೆ, ಈ ಯೋಜನೆ ಜಾರಿಗೆ ಬಂದರೆ ಆ ನಡುಗಡ್ಡೆ ಮುಳಗಬಹುದು ಎಂಬುದಷ್ಟೇ

ಸದ್ಯದ ಆತಂಕ. ಈ ಯಾವ ವಿವರಗಳನ್ನೂ ಗಮನಕ್ಕೆ ತೆಗೆದುಕೊಳ್ಳದೆ ರಾಜ್ಯಾದ್ಯಂತ ನಡೆದ ಪ್ರತಿಭಟನೆ ಮತ್ತು ಬೆಂಗಳೂರಲ್ಲಿ ನಡೆದ ತಮಿಳು ವಿರೋಧಿ ಪುಂಡಾಟಿಕೆ ಮೂಲತಃ ಕನ್ನಡದ ಮನಸ್ಸಿನ ಎರಡು ಸುಪ್ತ ಆತಂಕಗಳಿಂದ ಹೊಮ್ಮಿದುದು ಎಂದು ನಾನೂ ಭಾವಿಸಿದ್ದೇನೆ. ಒಂದು: ಭಾರತದ ಒಕ್ಕೂಟದಲ್ಲಿ ಕರ್ನಾಟಕ ಸದಾ ಅನ್ಯಾಯಕ್ಕೆ ಒಳಗಾಗುತ್ತಿದೆ. ಎರಡು: ಬಹಳಷ್ಟು ಬಾರಿ ಈ ಅನ್ಯಾಯಗಳಿಗೆ ತಮಿಳ್ನಾಡೇ ಕಾರಣ.

ಇವೆರಡೂ ಆತಂಕಗಳನ್ನು ದೂರ ಮಾಡಬಲ್ಲ ರಾಜಕೀಯ ಮುತ್ಸದ್ದಿತನ ನಮ್ಮ ಯಾವ ರಾಜಕಾರಣಿಗಳಲ್ಲೂ ಇಲ್ಲವಾಗಿದೆ. ಅವರೆಲ್ಲರೂ ಶೇಕಡಾ ನೂರಕ್ಕೆ ನೂರು ರಾಜಕಾರಣಿಗಳೇ ಆಗಿದ್ದಾರೆ. ತಾವು, ತಮ್ಮ ಕುಟುಂಬ, ತಮ್ಮ ಜಾತಿ, ತಮ್ಮ ಪಕ್ಷ, ತಮ್ಮ ಪಕ್ಷಕ್ಕೆ ಹಣಕಾಸು ಒದಗಿಸುವ 'ಡಾನ್'ಗಳು–ಇಷ್ಟೇ ಇವರ ಕಳಕಳಿಯ ವಸ್ತುಗಳಾಗಿವೆ. ಹೊಗೇನಕಲ್ ಗಲಾಟೆ ಆರಂಭವಾದೊಡನೆ ದೇವೇಗೌಡರೋ, ಕೃಷ್ಣರೋ ಅಥವಾ ಖರ್ಗೆಯವರೋ ಅಥವಾ ಈ ಮೂವರೂ ಸೇರಿಯೋ ಚಳುವಳಿಕಾರರ ನಾಯಕರನ್ನು ಆಹ್ವಾನಿಸಿ, ನಾವು ತಮಿಳ್ನಾಡು ಮತ್ತು ಕೇಂದ್ರದೊಂದಿಗೆ ಮಾತಾಡಿ ಸಮಸ್ಯೆಗೆ ಒಂದು ಇತ್ಯರ್ಥ ರೂಪಿಸುತ್ತೇವೆ ಎಂದು ಹೇಳಿ ಅವರ ಮನವೊಲಿಸುವ ರಾಜಕೀಯ ವಿವೇಕವಾಗಲಿ, ಆತ್ಮ ವಿಶ್ವಾಸವಾಗಲೀ ಇವರಿಗಿಲ್ಲವಲ್ಲ ಎಂಬುದೇ ಕರ್ನಾಟಕದ ಇಂದಿನ ನಿಜವಾದ ಸಮಸ್ಯೆಯಾಗಿದೆ. ತಮ್ಮ ಪಕ್ಷದ ಧ್ವಜ ಹಾರಿಸಿಕೊಂಡು ಹೊಗೇನಕಲ್ ನಡುಗಡ್ಡೆಗೆ ದೋಣಿ ಪ್ರಯಾಣ ಮಾಡಿ ಬಂದ ಯಡಿಯೂರಪ್ಪ ಮತ್ತು ಅವರ ಸಂಗಾತಿಗಳಿಗೆ ಈ ಯೋಜನೆಗೆ ಅನುಮತಿ ದೊರೆತದ್ದೇ ತಮ್ಮ ನಾಯಕ ವಾಜಪೇಯಿ ಮಧ್ಯಸ್ಥಿಕೆಯಲ್ಲಿ ಎಂಬುದೇ ಮರೆತು ಹೋದಂತಿದೆ! ಈ ದೃಷ್ಟಿಯಿಂದ, ಕರ್ನಾಟಕದ ಇಂತಹ ಎಲ್ಲ ರಾಜಕಾರಣಿಗಳ ಬಗ್ಗೆ ರಜನೀಕಾಂತ್ ಆಡಿರುವುದಾಗಿ ವರದಿಯಾಗಿರುವ ಮಾತುಗಳು ಸಭ್ಯತೆಯ ಎಲ್ಲೆ ಮೀರಿದೆಯಾದರೂ, ಸರಿಯಾಗಿಯೇ ಇದೆ. ಅದೇನೇ ಇದ್ದರೂ, ಈ ಮಾತುಗಳ ಬಗ್ಗೆ ಪ್ರತಿಭಟಿಸಬೇಕಾದವರು ಕರ್ನಾಟಕದ ಹಾಲಿ ಮತ್ತು ಭಾವಿ ರಾಜಕಾರಣಿಗಳೇ ಹೊರತು ಚಳುವಳಿಕಾರರಲ್ಲ. ಆದರೂ ಪ್ರತಿಭಟನೆಗಳು ನಡೆದೇ ಇವೆ.

ಇದೆಲ್ಲದರಿಂದಾಗಿ ನಮ್ಮ ಕನ್ನಡ ಚಳುವಳಿಕಾರರು ತಮಿಳ್ನಾಡಿನ ವಿರುದ್ಧ ಚಳುವಳಿ ಹೂಡಲು ನೆಪಕ್ಕಾಗಿ ಕಾಯುತ್ತಿರುವವರಂತೆ ಇತರರಿಗೆ ಕಾಣಿಸತೊಡಗಿದ್ದಾರೆ. ರಾಷ್ಟ್ರ ಮಟ್ಟದಲ್ಲಿ ಕರ್ನಾಟಕವೆಂದರೆ ಜಗಳಕೋರರ ರಾಜ್ಯವೆಂದೇ ಪ್ರತಿಬಿಂಬಿತವಾಗ[illegible] ಮುನಿ'ಯಂತಿರುವವರು ನಿಜವಾಗಿ [illegible]. ಕನ್ನಡಿಗರ ಈ ದೌರ್ಬಲ್ಯದ ಮೂಲವಿರುವುದು ಕನ್ನಡ ಸಮಾಜದ ಬುದ್ಧಿಜೀವಿ ನಾಯಕತ್ವ, ರಾಜಕೀಯ ನಾಯಕತ್ವ ಮತ್ತು ಬೀದಿ ಚಳುವಳಿಗಳ(ಕನ್ನಡ ಕಾರ್ಯಕರ್ತರ) ನಾಯಕತ್ವಗಳ ನಡುವಣ ಸಮನ್ವಯ ಹಾಗೂ ಏಕತೆಗಳು ಕಾಣೆಯಾಗಿ, ಮೂರೂ ಮೂರಾಬಟ್ಟೆಯಾಗಿರುವುದರಲ್ಲಿ. ಆದರೆ ತಮಿಳ್ನಾಡಿನಲ್ಲಿ ಆ ಜನರಲ್ಲಿ ಆಳವಾಗಿ ಬೇರು ಬಿಟ್ಟಿರುವ ಭಾಷಾ ಕುಲ ಪ್ರಜ್ಞೆ ಅವರ ಸಮಾಜ ಹೀಗೆ ಮೂರಾಬಟ್ಟೆಯಾಗದಂತೆ ನೋಡಿಕೊಂಡಿದೆ. ಅದೇ ನಮ್ಮ ಕಣ್ಣುರಿಸುತ್ತಿರುವ ತಮಿಳು ಸಮಾಜದ, ರಾಜಕಾರಣದ ಯಶಸ್ಸಿನ ಗುಟ್ಟೂ ಆಗಿದೆ. ತಮಿಳರು ಕಾವೇರಿ ಕೆಳ ಕಣಿವೆಯ ಮಕ್ಕಳಾದರೆ, ನಾವು ಕಾವೇರಿ ಮೇಲ್ಕಣಿವೆಯ ಮಕ್ಕಳು. ಅಂದರೆ ಮೂಲತಃ ಇಬ್ಬರೂ ಒಂದೇ ನದಿಯ ನೀರು ಕುಡಿದು ಬೆಳೆದ ಮಕ್ಕಳು. ಷ. ಶೆಟ್ಟರ್ ಅವರ ಪುಸ್ತಕ

ಈ ಇಬ್ಬರ ಒಡನಾಟವನ್ನು ಉತ್ತರದಿಂದ ಆಮದಾದ ಸಂಸ್ಕೃತೀಕರಣ ಹೇಗೆ ಭಂಗಗೊಳಿಸಿತು ಎಂಬುದನ್ನು ಸೂಕ್ಷ್ಮವಾಗಿ ಹೇಳುತ್ತದೆ. ಆದರೆ ಅರ್ಧ ಶತಮಾನದ ಕನ್ನಡ ಜಗತ್ತಿನ ಬಗ್ಗೆ ಬರೆಯಲಾಗಿರುವ ಕೆ.ವಿ.ನಾರಾಯಣರ ಪುಸ್ತಕ ಇದನ್ನು ಅನುಮೋದಿಸುತ್ತದಾದರೂ, ಮುಂದೆ ಬೇರೆ ದಾರಿಯನ್ನೇ ಹಿಡಿಯುತ್ತದೆ. ಇದಕ್ಕೆ ಕಾರಣ ಅದು ಈ ಅರ್ಧ ಶತಮಾನದ ವಿದ್ಯಮಾನಗಳನ್ನೇ ತನ್ನ ಅಧ್ಯಯನದ ಮೂಲ ನೆಲೆಗಳನ್ನಾಗಿ ಮಾಡಿಕೊಂಡು ಸಮೀಪ ದೃಷ್ಟಿಯ ದೋಷಗಳಿಗೆ ಒಳಗಾಗಿರುವುದು. ನಾರಾಯಣರು ಕನ್ನಡದ ಪ್ರಗತಿಗಾಗಿ ಇಂಗ್ಲಿಷ್ ಭಾಷಾ ಸಂಶೋಧನೆಗಳ ಕಡೆ ಕಣ್ಣು ಹಾಯಿಸಿದಂತೆ ತಮಿಳು ಭಾಷಾ ಸಂಶೋಧನಾ ಲೋಕದ ಕಡೆಗೂ ಕಣ್ಣು ಹಾಯಿಸಿದ್ದರೆ ಚೆನ್ನಿತ್ತೇನೋ!

ಅದೇನೇ ಇರಲಿ, ನಾವು ಈಗ ಕನ್ನಡಕ್ಕೆ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ರಾಜಕಾರಣದಿಂದ ಒದಗಿರುವ ಆತಂಕಗಳನ್ನು ಎದುರಿಸಲು ನಮ್ಮ ಮೂಲ ಸೋದರರೇ ಆದ ತಮಿಳರಿಂದ ದೂರ ದೃಷ್ಟಿಯ ರಾಜಕಾರಣದ ಮೂಲ ಪಾಠಗಳನ್ನು ಕಲಿಯುವ ಅಗತ್ಯವನ್ನು ಮನಗಾಣಬೇಕಿದೆ. ಇದು ಅವರ ರಾಜಕಾರಣವನ್ನೂ ಎದುರಿಸಲು ಸಹಾಯವಾಗಬಹುದು! ಹಾಗಾಗಿ ಕನ್ನಡ ಚಳುವಳಿ ಮಾಡಬೇಕಾದ ಮೊದಲ ಕೆಲಸವೆಂದರೆ, ಕನ್ನಡಿಗರಲ್ಲಿ ಭಾಷಾ ಕುಲಪ್ರಜ್ಞೆಯನ್ನು ಬೆಳೆಸುವುದಾಗಿದೆ. ಇದಕ್ಕಾಗಿ ಕನ್ನಡ ಸಮಾಜ ಕನ್ನಡ ಭಾಷಾ ಕೇಂದ್ರಿತವಾಗಿ ಬೆಳೆಯುವಂತೆ ನೋಡಿಕೊಳ್ಳುವ ಕಾರ್ಯಕ್ರಮಗಳ ಕಡೆ ತನ್ನ ಗಮನವನ್ನು ಕೇಂದ್ರೀಕರಿಸಬೇಕಿದೆ. ಅಂದರೆ ಶಿಕ್ಷಣ ಕ್ಷೇತ್ರದ ಕನ್ನಡದ ಅಗತ್ಯಗಳ ಕಡೆಗೆ. ಇದಕ್ಕಾಗಿ ಅದು ತನ್ನ ಭೌಗೋಳಿಕ ವ್ಯಾಪ್ತಿಯನ್ನು ಹೆಚ್ಚಿಸಿಕೊಳ್ಳುವುದಕ್ಕಿಂತ ಹೆಚ್ಚಾಗಿ ತನ್ನ ಬೌದ್ಧಿಕ ವ್ಯಾಪ್ತಿಯನ್ನು ಹೆಚ್ಚಿಸಿಕೊಳ್ಳಬೇಕಿದೆ. ಈ ಬೌದ್ಧಿಕ ವ್ಯಾಪ್ತಿಯೊಳಕ್ಕೆ ಕನ್ನಡ ಸಂಸ್ಕೃತಿಗೆ ಅಪರಿಚಿತವಾದ 'ರಾಕ್ಷಸ ಭಾಷೆ'ಯಲ್ಲಿ ಮಾತನಾಡುವ ದೇಜಗೌರಂತಹ ಕನ್ನಡ ಸಾಮ್ರಾಜ್ಯವಾದಿಗಳು ಎಂದೂ ಪ್ರವೇಶ ಪಡೆಯಲಾರರು ಎಂಬುದನ್ನೂ ಮುಖ್ಯವಾಗಿ ತಿಳಿಯಬೇಕಿದೆ.

(ಏಪ್ರಿಲ್ ೧೮, ೨೦೦೮, 'ವಿಕ್ರಾಂತ ಕರ್ನಾಟಕ')

೬. 'ಶಂಗಂ ತಮಿಳಗಂ ಮತ್ತು ಕನ್ನಡ ನಾಡು ನುಡಿ'

ತಮಿಳಿಗೆ ಶಾಸ್ತ್ರೀಯ ಭಾಷಾ ಸ್ಥಾನಮಾನವನ್ನು ಕೇಂದ್ರ ಸರ್ಕಾರ ಪ್ರಕಟಿಸಿದಾಗಿನಿಂದ ವೀರ ಕನ್ನಡಿಗರ ತಳಮಳ ಹೇಳತೀರದಾಗಿದೆ. ನಾಲ್ಕು ವರ್ಷಗಳಿಂದ ಈ ಕನ್ನಡಿಗರ ಅಸಮಾಧಾನ ಒಂದೇ ಸಮನೆ ಹಲವಾರು ರೂಪಗಳಲ್ಲಿ ಭುಗಿಲೇಳುತ್ತಲೇ ಇದೆ. ಕನ್ನಡಕ್ಕೂ ಆ ಸ್ಥಾನಮಾನ ನೀಡಬೇಕೆಂಬ ಬೇಡಿಕೆ ರಾಜ್ಯಾದ್ಯಂತ ಪ್ರತಿಧ್ವನಿಸುತ್ತಿದೆ. ಇನ್ನು ಈ ಕನ್ನಡದ ಸ್ಥಾನಮಾನಕ್ಕಾಗಿ ಹೋರಾಟ ಮಾಡಲು ಮುಂದೆ ಬರದಿರುವ ರಾಜಕೀಯ ಪಕ್ಷವೇ ಇಲ್ಲವೆನ್ನುವಂತಾಗಿದೆ. ಆದರೆ, ಕಳೆದ ನಾಲ್ಕು ವರ್ಷಗಳಲ್ಲಿ ರಾಜ್ಯದ ಮೂರೂ ರಾಜಕೀಯ ಪಕ್ಷಗಳು ಅಧಿಕಾರ ನಡೆಸಿದ್ದರೂ, ಅವು ಈ ದಿಸೆಯಲ್ಲಿ ಏನೂ ಮಾಡಲಾಗದಾಗಿವೆ. ಇದರ ಜವಾಬ್ದಾರಿಯನ್ನು ಹೊತ್ತಿದ್ದಂತೆ ಅಥವಾ ಹೊರಿಸಲಾಗಿದ್ದಂತೆ ತೋರಿದ ಎಂ.ವಿ.ರಾಜಶೇಖರನ್ ಕೇಂದ್ರದಲ್ಲಿ ಮಂತ್ರಿ ಪದವಿ ಕಳೆದುಕೊಂಡು ವಿಧಾನ ಪರಿಷತ್ತಿಗೆ ಬಂದಿದ್ದಾರೆ! ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಕನ್ನಡ ಅಭಿವೃದ್ಧಿಯ ವಿಶೇಷ ಪ್ರಸ್ತಾಪ ಮಾಡಿದ್ದ ಬಿಜೆಪಿ, ಅದಕ್ಕೆ ತಕ್ಕಂತೆ ಈಗ ಕನ್ನಡಕ್ಕೆ ಶಾಸ್ತ್ರೀಯ ಭಾಷಾ ಸ್ಥಾನಮಾನವನ್ನು ನೀಡುವಂತೆ ಪ್ರಧಾನಿಯನ್ನು ಒತ್ತಾಯಿಸಲು ಹಿರಿಯ ಸಾಹಿತಿಗಳ ನಿಯೋಗವೊಂದನ್ನು ದೆಹಲಿಗೆ ಕರೆದುಕೊಂಡು ಹೋಗಿ, ಈ ಸಾಹಿತಿಗಳಿಗೆ ಪ್ರಧಾನಿಯ ಭೇಟಿ ಲಭ್ಯವಾಗದ ಮುಜುಗರದೊಡನೆ ಹಿಂತಿರುಗಿದ್ದೂ ಆಗಿದೆ! ಅಂತೂ ಕನ್ನಡಿಗರ ಕಸಿವಿಸಿಗೆ ಕೊನೆಯಿಲ್ಲದಂತಾಗಿದೆ.

ತಮಿಳರಿಗೆ ಸಿಗುವುದೆಲ್ಲ ಕನ್ನಡಿಗರಿಗೂ ಸಿಗಬೇಕು. ಇದು ಕರ್ನಾಟಕ ಏಕೀಕರಣೋತ್ತರದಲ್ಲಿ ಕಂಡುಬರುತ್ತಿರುವ 'ಕನ್ನಡತನ'ದ ಒಂದು ಸ್ಥಾಯೀಭಾವವಾಗಿಬಿಟ್ಟದೆ! ತಮಿಳಿಗೆ ಶಾಸ್ತ್ರೀಯ ಭಾಷಾ ಸ್ಥಾನಮಾನವನ್ನು ನೀಡುವವರೆಗೂ ಕನ್ನಡಿಗರಿಗೆ ಶಾಸ್ತ್ರೀಯ ಭಾಷೆಯ ಕಲ್ಪನೆಯಾಗಲೀ, ಆ ಸ್ಥಾನಮಾನ ಕನ್ನಡಕ್ಕೆ ಒದಗಬೇಕೆಂಬ ಆಶಯವಾಗಲೀ ಇದ್ದುದು ಎಲ್ಲೂ ದಾಖಲಾದಂತಿಲ್ಲ. ತಮಿಳಿಗೆ ಆ ಸ್ಥಾನಮಾನ ದೊರೆತ ಮೇಲೇ ಕನ್ನಡಿಗರು, ಕನ್ನಡ ವಿದ್ವಾಂಸರು ಮತ್ತು ಸಂಶೋಧಕರು ಹಾಗೆಂದರೇನು ಎಂದು ತಿಳಿದುಕೊಳ್ಳಲು ಆಸಕ್ತಿ ವಹಿಸತೊಡಗಿದ್ದು. ಇನ್ನು ಇದಕ್ಕಾಗಿ ವ್ಯಗ್ರರಾಗಿ ಆಗಾಗ್ಗೆ ಚಳುವಳಿ ಹೂಡುತ್ತಿರುವ ಹೋರಾಟಗಾರರಿಗಂತೂ ನಾಲ್ಕು ವರ್ಷಗಳ ನಂತರವೂ ಶಾಸ್ತ್ರೀಯ ಭಾಷೆ ಎಂದರೇನು ಎಂಬುದು ತಿಳಿದಂತಿಲ್ಲ. ತಿಳಿದಿದ್ದರೆ, ಅದಕ್ಕಾಗಿ ಸ್ವಾಭಿಮಾನ ತೊರೆದು ಹೀಗೆ ಕಾಡಿ ಬೇಡುವ ಕೆಲಸಗಳಲ್ಲಿ ತೊಡಗುತ್ತಿರಲಿಲ್ಲ. ಬದಲಿಗೆ ತಮಿಳಿಗೆ ಈ ಸ್ಥಾನಮಾನ ಹೇಗೆ ಮತ್ತು ಏಕೆ ದೊರಕಿತು ಎಂಬುದನ್ನು ತಿಳಿಯುವ ಕಡೆ ಗಮನ ನೀಡಿ ಕನ್ನಡ ಭಾಷೆಯನ್ನು ಅದಕ್ಕಾಗಿ ಸಿದ್ಧಪಡಿಸುವ ರೀತಿಯಲ್ಲಿ ತನ್ನ

ಚಳುವಳಿಯನ್ನು ಪುನರ್ರೂಪಿಸಿಕೊಳ್ಳುತ್ತಿತ್ತು. ಆದರೆ ತಮಿಳಿಗೆ ಕೊಟ್ಟ ಮೇಲೆ ನಮಗೇಕೆ ಕೊಡಬಾರದು, ನಾವು ಅವರಿಗಿಂತ ಏನು ಕಡಿಮೆ ಎಂಬ ಮತ್ಸರಪೂರಿತ ಮನೋಭಾವನೆಯಷ್ಟೇ ಕನ್ನಡ ಹೋರಾಟಗಾರರ–ಇದರಲ್ಲಿ ಕೆಲ ಹಿರಿಯ 'ಸಾಹಿತಿ'ಗಳೂ ಸೇರಿದ್ದಾರೆ–ಚಳುವಳಿಯನ್ನು ನಿಯಂತ್ರಿಸುತ್ತಿರುವಂತೆ ತೋರುತ್ತಿದೆ.

ಹೌದು, ರಾಜ್ಯ ಸರ್ಕಾರ ಕನ್ನಡವೂ ಶಾಸ್ತ್ರೀಯ ಭಾಷೆಯ ಸ್ಥಾನಮಾನಕ್ಕೆ ಅರ್ಹವಾಗಿದೆ ಎಂದು ಸಾಬೀತುಪಡಿಸುವಂತಹ ದಾಖಲೆಗಳನ್ನು ಸಿದ್ಧಪಡಿಸಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದೆ. ಕೇಂದ್ರದ ಸಂಸ್ಕೃತಿ ಇಲಾಖೆ ಇವುಗಳ ಪರಿಶೀಲನೆಗಾಗಿ ಒಂದು ಸಮಿತಿಯನ್ನೂ ರಚಿಸಿದೆ. ಕನ್ನಡದವರ ಗಲಾಟೆಯಿಂದ ಸ್ಫೂರ್ತಿಗೊಂಡ ತೆಲುಗಿನವರೂ, ತಮ್ಮ ಭಾಷೆಗೂ ಶಾಸ್ತ್ರೀಯ ಸ್ಥಾನಮಾನ ಬೇಕೆಂದು ಮನವಿ–ದಾಖಲೆಗಳನ್ನು ಸಲ್ಲಿಸಿದ್ದಾರೆ. ಸಮಿತಿ ಬರುವ ಆಗಸ್ಟ್‌ನಲ್ಲಿ ಸಭೆ ಸೇರಿ ಈ ಬಗ್ಗೆ ಅಂತಿಮ ತೀರ್ಮಾನ ಕೈಗೊಳ್ಳುವುದೆಂದು ಈ ಸಮಿತಿಯ ಓರ್ವ ಸದಸ್ಯರಾದ ಮೈಸೂರಿನ ಕೇಂದ್ರೀಯ ಭಾಷಾ ಸಂಸ್ಥಾನದ ನಿರ್ದೇಶಕ ಉದಯನಾರಾಯಣ ಸಿಂಗ್ ಹೇಳಿದ್ದಾರೆ. ಆದರೆ ಸಮಿತಿಯೊಳಗೇ ಈ ಎರಡೂ ಭಾಷೆಗಳಿಗೆ ಶಾಸ್ತ್ರೀಯ ಸ್ಥಾನಮಾನ ನೀಡುವ ಬಗ್ಗೆ ವಿರೋಧವಿದೆ ಎಂದು ಹೇಳಲಾಗಿದೆ. ಕಾರಣ, ಶಾಸ್ತ್ರೀಯ ಸ್ಥಾನಮಾನ ನೀಡಿಕೆ ರಾಜಕೀಯ ಮೇಲಾಟದ ವಿಷಯವಾಗದೆ, ಅದು ಅಂತಾರಾಷ್ಟ್ರೀಯ–ಯುನೆಸ್ಕೋ–ಮಟ್ಟದಲ್ಲೂ ತನ್ನ ಘನತೆ ಉಳಿಸಿಕೊಳ್ಳುವ ಜಾಗತಿಕ ಭಾಷಾ ಪರಂಪರೆ ರಕ್ಷಣೆಯ ವಿಶಿಷ್ಟ ಕೆಲಸವೂ ಅನ್ನಿಸಿಕೊಳ್ಳಬೇಕಾಗಿದೆ. ಏಕೆಂದರೆ, ಶಾಸ್ತ್ರೀಯ ಭಾಷೆ ಎಂಬುದೇ ಅಂತಾರಾಷ್ಟ್ರೀಯ ಶೈಕ್ಷಣಿಕ ವಲಯದ ಒಂದು ಪರಿಕಲ್ಪನೆಯಾಗಿದ್ದು, ಅದರ ಪಾವಿತ್ರ್ಯ ನಿಕಷಕ್ಕೊಡ್ಡಲ್ಪಡುವುದು ಆ ಮಟ್ಟದಲ್ಲೇ. ಹಾಗೆ ನೋಡಿದರೆ, ತಮಿಳು ಶಾಸ್ತ್ರೀಯ ಭಾಷೆಯ ಸ್ಥಾನಕ್ಕೆ ಅರ್ಹವೆಂಬ ಧ್ವನಿ ಕೇಳಿಬಂದದ್ದು ಅಂತಾರಾಷ್ಟ್ರೀಯ ಮಟ್ಟದ–ಅದೂ ವಿದೇಶೀ–ಭಾಷಾ ಶಾಸ್ತ್ರಜ್ಞರಿಂದಲೇ ಎಂಬುದನ್ನು ನಾವು ಗಮನಿಸಬೇಕು.

ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ಕೊಡಲ್ಪಡುತ್ತದೆ ಎಂದೇ ಆಶಿಸೋಣ. ಆದರೆ ಅದಕ್ಕೆ ಕನ್ನಡ ಒಂದು ಭಾಷೆಯಾಗಿ, ಸಂಸ್ಕೃತಿಯಾಗಿ ಸಿದ್ಧವಾಗಿದೆಯೇ? ಶಾಸ್ತ್ರೀಯ ಸ್ಥಾನಮಾನ ಪಡೆದಿರುವ ತಮಿಳು ಭಾಷೆ ಈ ಸಂಬಂಧ ಎದುರಿಸುತ್ತಿರುವ ಬಿಕ್ಕಟ್ಟನ್ನು, ಮೊನ್ನೆ ಇದಕ್ಕೆ ಸಂಬಂಧಪಟ್ಟ ಯೋಜನೆಗಳ ಪರಿಚಯವಿರುವ ಕನ್ನಡದ ವಿದ್ವಾಂಸರೊಬ್ಬರು ವಿವರಿಸುತ್ತಿದ್ದರು. ಈ ಸ್ಥಾನಮಾನ ಒದಗಿಸುವ ಸವಲತ್ತುಗಳನ್ನು ನಿರ್ವಹಿಸಲು ತಮಿಳು ಶೈಕ್ಷಣಿಕ ವಲಯದಲ್ಲಿ ಆ ಗುಣಮಟ್ಟದ ವಿದ್ವಾಂಸರೇ ಇಲ್ಲವಾಗಿದ್ದಾರೆ! ಈ ವಿಷಯದಲ್ಲಿ ಕನ್ನಡದ ಸ್ಥಿತಿಗತಿಯೇನೂ ಭಿನ್ನವಾಗಿಲ್ಲ. ಇಂದು ನಮ್ಮ ವಿಶ್ವವಿದ್ಯಾಲಯಗಳಲ್ಲಿ ನಡೆಯುತ್ತಿರುವ ಭಾಷೆ ಮತ್ತು ಸಂಸ್ಕೃತಿ ಸಂಶೋಧನೆಯ ಗುಣಮಟ್ಟವನ್ನು ಗಮನಿಸಿದರೆ, ವಿದ್ವತ್ತೆಂಬುದು ಕಾಣೆಯಾಗಿ ಬಹಳ ವರ್ಷಗಳೇ ಆಗಿವೆ ಎಂಬುದು ಗೊತ್ತಾಗುತ್ತದೆ. ಅದರ ಜಾಗವನ್ನು ಪುಢಾರಿಗಿರಿ, ವಶೀಲಿಬಾಜಿ ಆಕ್ರಮಿಸಿಕೊಂಡಿವೆ. ಇರುವ ನಾಲ್ಕಾರು ಜನ ವಿದ್ವಾಂಸರನ್ನೇ ಕೇಳಿ ನೋಡಿ. ವಿಶ್ವವಿದ್ಯಾಲಯಗಳ ಮಟ್ಟದಲ್ಲಿ ಈಗಿರುವ ಯೋಜನೆಗಳನ್ನು ಗುಣಮಟ್ಟ ಕಾಪಾಡಿಕೊಂಡು ಮುಗಿಸಿದರೇ ಸಾಕಾಗಿದೆ ಎನ್ನುತ್ತಿದ್ದಾರೆ ಅವರು.

ಆದರೆ ಇದಾವುದೂ ಗೊತ್ತಿಲ್ಲದ ಸಾಮಾನ್ಯ ಕನ್ನಡಿಗರು ಶಾಸ್ತ್ರೀಯ ಭಾಷಾ

ಸ್ಥಾನಮಾನವನ್ನು ಕನ್ನಡ ಭುವನೇಶ್ವರಿಯ ಕೊರಳಿಂದ ವಂಚಿತವಾಗಿರುವ ಕಂಠೀಹಾರದಂತೆ ಪರಿಗಣಿಸಿ, ಹಾಹಾಕಾರವೆಬ್ಬಿಸುತ್ತಿದ್ದಾರೆ! ಶಾಸ್ತ್ರೀಯ ಭಾಷಾ ಸ್ಥಾನಮಾನವನ್ನು ತಮಿಳಿಗೆ ನೀಡಲು ಕಾರಣವಾಗಿದೆಯೆಂದು ಕೆಲವು ವಲಯಗಳಲ್ಲಿ ಭಾವಿಸಲಾಗಿರುವ ರಾಜಕೀಯ ಕಾರಣದ ಮೇಲೆ; ತಮಿಳಿಗೆ ಬದಲಾಗಿ, ಹಿಂದಿಗೋ, ಬಂಗಾಳಿಗೋ ನೀಡಿದ್ದರೆ, ಕನ್ನಡಿಗರು ಇಷ್ಟು ಚಿಂತಿತರಾಗಿ, ವ್ಯಗ್ರರಾಗಿ ಗಲಾಟೆ ಮಾಡುತ್ತಿದ್ದರೆ? ಏಕೀಕರಣದ ನಂತರ ಕನ್ನಡ ಸ್ವಾಭಿಮಾನಿ ಚಳುವಳಿ ಬೆಳೆದು ಬಂದಿರುವ ಬಗೆಯನ್ನು ಗಮನಿಸಿದರೆ ಇದು ಅನುಮಾನವೆನಿಸುತ್ತದೆ. ಕನ್ನಡ ಸ್ವಾಭಿಮಾನಿ ಚಳುವಳಿ ಜನಪ್ರಿಯ ನೆಲೆಯಲ್ಲಿ ತಮಿಳು ಕೇಂದ್ರಿತವಾಗಿಯೇ, ಇನ್ನೂ ಸ್ಪಷ್ಟವಾಗಿ ಹೇಳುವುದಾದರೆ, ತಮಿಳು ವಿರೋಧಿಯಾಗಿಯೇ ತನ್ನನ್ನು ಕಟ್ಟಿಕೊಳ್ಳುತ್ತಾ ಬಂದಿದೆ. ಇದಕ್ಕೆ ಕನ್ನಡ ಚಳುವಳಿ ಮೂಲತಃ ಬೆಂಗಳೂರು ಕೇಂದ್ರಿತವಾಗಿ ಆರಂಭವಾಗಿ, ಪುಢಾರಿಗಿರಿಯ ರಾಜಕೀಯ ನೆಲೆಗಳನ್ನು ಪಡೆದು ಬೆಳೆದದ್ದೇ ಕಾರಣವಾಗಿರಬಹುದು. ಅದರ ಪರಿಣಾಮವನ್ನು ನಾವಿಂದು ನೋಡುತ್ತಿದ್ದೇವೆ. ಬೆಂಗಳೂರು ಇಂದು ಯಾವ ಪ್ರಾದೇಶಿಕ ಪರಿಮಳವನ್ನೂ ಉಳಿಸಿಕೊಳ್ಳಲಾಗದೆ ಕನ್ನಡಿಗರ ಕೈಬಿಟ್ಟು ಹೋಗುತ್ತಿದೆ. ಅದಕ್ಕೆ–ಬೃಹತ್ ನಗರದ ಅಸಂಸ್ಕೃತಿಗೆ–ಕನ್ನಡಿಗರೂ ನಿಧಾನವಾಗಿ ಹೊಂದಿಕೊಳ್ಳುತ್ತಿದ್ದಾರೆ.

ಸಾಮಾನ್ಯವಾಗಿ ನಿರಭಿಮಾನಿಗಳೆಂದೇ ಹೆಸರಾಗಿರುವ, ಆದರೆ ಸ್ವಾಭಿಮಾನ ಪ್ರಕಟಿಸುವ ಸಂದರ್ಭ ಬಂದಾಗಲೆಲ್ಲ ಅದು ತಮಿಳು ವಿರೋಧಿಯಾಗಿಯೇ ಹೊರ ಹೊಮ್ಮುವಂತಿರುವ ಬೆಂಗಳೂರು ಹಾಗೂ ಅದರ ಸುತ್ತಮುತ್ತಲಿನ ಕನ್ನಡಿಗರ ಈ ವಿಚಿತ್ರ ನಡಾವಳಿಯ ಬಗ್ಗೆ ನನಗೊಂದು ಹೊಸ ಹೊಳಹು ಸಿಕ್ಕಿದ್ದು, ಇತ್ತೀಚೆಗೆ ಪ್ರಕಟವಾದ ಹಿರಿಯ ಇತಿಹಾಸಜ್ಞ ಷ. ಶೆಟ್ಟರ್ ಅವರ 'ಶಂಗಂ ತಮಿಳಗಂ ಮತ್ತು ಕನ್ನಡ ನಾಡು ನುಡಿ' (ಪ್ರ: 'ಅಭಿನವ', ಬೆಂಗಳೂರು) ಎಂಬ ಪುಸ್ತಕವನ್ನು ಓದಿದಾಗ. ಆರಂಭ ಕಾಲದ ದ್ರಾವಿಡ ಸಂಬಂಧಗಳ ಚಿಂತನೆಯನ್ನು ಪರಿಚಯಿಸುವ ಉದ್ದೇಶವುಳ್ಳ ಈ ಪುಸ್ತಕ, ಇಂದು ತಮಿಳ್ನಾಡು ಎಂದು ಕರೆಯಲಾಗುವ ಪ್ರಾಚೀನ 'ತಮಿಳಗಂ'ನ ಪ್ರಾಗೈತಿಹಾಸಿಕ ಹಿನ್ನೆಲೆ ನೀಡುತ್ತಾ, ಇದರ ಒಡಲಾಳದಿಂದಲೇ ಕನ್ನಡ ಭಾಷೆ ಮತ್ತು ಸಂಸ್ಕೃತಿಗಳು ತಮ್ಮನ್ನು ಕಟ್ಟಿಕೊಂಡ ಪರಿಯ ಬಗ್ಗೆ ಹಲವು ಹೊಸ ಒಳನೋಟಗಳನ್ನು ನೀಡುತ್ತದೆ. ಆ ಮೂಲಕ ಈವರೆಗೆ ಬೆಳಕೇ ಕಾಣದ ಕನ್ನಡ–ತಮಿಳು ಸಂಬಂಧಗಳ ಹಲವು ನೆಲೆಗಳನ್ನು, ತಮಿಳಿನ 'ಶಂಗಂ' ಸಾಹಿತ್ಯವನ್ನು ನಿರ್ಮಿಸಿದ ಸಾಂಸ್ಕೃತಿಕ ಶಕ್ತಿಗಳ ಹಿನ್ನೆಲೆಯಲ್ಲಿ ಪರಿಚಯಿಸುತ್ತದೆ. ಮುಖ್ಯವಾಗಿ, ಕನ್ನಡ ನುಡಿ ಮತ್ತು ಸಂಸ್ಕೃತಿಗಳ ವಿಕಾಸವನ್ನು ಸಂಸ್ಕೃತದ ಪ್ರಭಾವದ ನೆಲೆಯಲ್ಲಷ್ಟೇ ಅರ್ಥ ಮಾಡಿಕೊಂಡು ಕನ್ನಡ ಸಂಸ್ಕೃತಿ ಚರಿತ್ರೆಯನ್ನು ಕಟ್ಟಿಕೊಂಡಿದ್ದ ನಾವು, ಇದರಿಂದ ಪಡೆದದ್ದೆಷ್ಟು, ಕಳಕೊಂಡಿದ್ದೆಷ್ಟು ಮತ್ತು ಏನು ಎಂಬುದರ ಬಗ್ಗೆ ಚಿಂತನೆ ಮಾಡುವಂತೆ ನಮ್ಮನ್ನು ಪ್ರೇರೇಪಿಸುತ್ತದೆ.

ಕನ್ನಡಕ್ಕೆ 'ಕವಿರಾಜ ಮಾರ್ಗ'ವಿರುವಂತೆ ತಮಿಳಿಗೆ 'ತೊಳ್ಕಾಪ್ಪಿಯಮ್' ಒಂದು ಸಂಸ್ಕೃತಿ ಲಕ್ಷಣ ಗ್ರಂಥ. ಆದರೆ ಅದು ತಮಿಳು ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಗಳನ್ನು ಪ್ರಭಾವಿಸಿರುವಷ್ಟು ಆಳವಾಗಿ 'ಕವಿರಾಜ ಮಾರ್ಗ' ಕನ್ನಡ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಗಳನ್ನು ಪ್ರಭಾವಿಸಿಲ್ಲ ಏಕೆ ಎಂಬುದನ್ನು ಈ ಪುಸ್ತಕ, ಸೂಕ್ಷ್ಮವಾಗಿ ಶೋಧಿಸುವ ಪ್ರಯತ್ನ ಮಾಡುತ್ತದೆ. ಆ

ಪ್ರಯತ್ನದ ಮೂಲಕ 'ಕವಿರಾಜ ಮಾರ್ಗ' ಹೇಗೆ 'ದೇಸಿ'ಗೆ ಸ್ಪೂರ್ತಿ ನೀಡದೆ, 'ತಿರುಳ್ಗನ್ನಡ'ದ ಕಲ್ಪನೆಯೊಂದಿಗೆ 'ಮಾರ್ಗ'ದ ಕಡೆಗೇ ಕನ್ನಡ ಸಂಸ್ಕೃತಿಯ ನಡಿಗೆಯನ್ನು ನಿರ್ದೇಶಿಸುವಂತಾಯಿತು ಎಂಬುದರ ಹಿಂದಿನ ರಾಜಕಾರಣದ ಒಳಸುಳಿಗಳ ಪರಿಚಯ ಮಾಡಿಕೊಡುತ್ತದೆ. ಈ ದಿಸೆಯಲ್ಲಿ ನಿರ್ಣಾಯಕ ತೀರ್ಮಾನಗಳನ್ನು ಕೊಡುವಷ್ಟು ಖಚಿತ ಆಕರಗಳು ದೊರೆಯುತ್ತಿಲ್ಲವಾದ್ದರಿಂದ, ಶೆಟ್ಟರ್ ಈ ರಾಜಕಾರಣವನ್ನು 'ಯುಗಧರ್ಮ'ವೆಂದು ಕರೆಯುತ್ತಾರೆ. ಆದರೆ, ಅಶೋಕನ ಕಾಲದ ಆಸುಪಾಸಿನಲ್ಲಿ ಉತ್ತರದ ಮೌರ್ಯ ಸಾಮ್ರಾಜ್ಯ ದಕ್ಷಿಣದ 'ತಮಿಳಗಂ' ಕಡೆಗೆ ವಿಸ್ತರಿಸಲು ಮಾಡಿದ ಪ್ರಯತ್ನಗಳಲ್ಲಿ 'ವಡುಗ'ರೆಂಬ ತಮಿಳೇತರ ದಕ್ಷಿಣ ಕುಲಗಳು ವಹಿಸಿದ 'ಮಧ್ಯವರ್ತಿ' ಪಾತ್ರವೇ, ಕನ್ನಡ ಭಾಷೆ ಮತ್ತು ರಾಜ್ಯಗಳು ಒಡಮೂಡಿದ್ದರ ಹಿಂದಿನ ರಾಜಕಾರಣವನ್ನೂ ಸೃಷ್ಟಿಸಿತು ಎಂಬುದನ್ನು ಅವರು ಪರೋಕ್ಷವಾಗಿ ಸೂಚಿಸುತ್ತಾರೆ.

ಈ ರಾಜಕಾರಣದ ಫಲವಾಗಿ, ತಮಿಳರಿಗೆ ಅರ್ಥವಾಗದ 'ಅಶುದ್ಧ' ತಮಿಳಿನಂತೆ ಕೇಳಿಸುತ್ತಿದ್ದ ಹಲವು ಭಾಷೆಗಳನ್ನಾಡುವ ಒಕ್ಕೂಟದಂತಿದ್ದ ಈ ವಡುಗರಲ್ಲಿ ಕನ್ನಡ, ಲಿಪಿ ಪಡೆದುಕೊಂಡ ಮೊದಲ ಭಾಷೆಯಾಗಿ ಮೂಡಿತು. ಇದರಿಂದಾಗಿ ಕನ್ನಡ ಇನ್ನೂ ತನ್ನದೇ ಲಿಪಿ ಪಡೆಯದ ತಮಿಳು ಭಾಷೆ, ಸಾಹಿತ್ಯ, ಸಂಸ್ಕೃತಿಗಳನ್ನಲ್ಲದೆ ರಾಜಕಾರಣವನ್ನೂ ಪ್ರಭಾವಿಸುವಷ್ಟರ ಮಟ್ಟಿಗೆ ಒಂದು ಸಮಾನಾಂತರ ರಾಜಕೀಯ ಶಕ್ತಿಯಾಗಿಯೂ ಹೇಗೆ ಒಡಮೂಡಿತು ಎಂಬುದರ ಸೂಕ್ಷ್ಮ ವಿವರಗಳನ್ನು ಶೆಟ್ಟರ್ ಈ ಪುಸ್ತಕದಲ್ಲಿ ನೀಡುತ್ತಾರೆ. ಈ ರಾಜಕಾರಣ, ಸಂಸ್ಕೃತಿಯ ನೆಲೆಯಲ್ಲಿ ಇನ್ನಷ್ಟು ಸ್ಪಷ್ಟಗೊಳ್ಳುವುದು, ಈ ಎರಡು ಭಾಷೆಗಳು ಹೊರಗಿಂದ ಬಂದ ಸಂಸ್ಕೃತ ಶಬ್ದಗಳಿಗೆ ತೆರೆದುಕೊಳ್ಳಬೇಕಾದ ರೀತಿ ನೀತಿಗಳ ಬಗ್ಗೆ 'ಕವಿರಾಜ ಮಾರ್ಗ' ಮತ್ತು 'ತೊಲ್ಕಾಪ್ಪಿಯಮ್'ಗಳು ನಿರೂಪಿಸುವ ನಿಯಮಗಳ ವಿಭಿನ್ನ ಸ್ವರೂಪದಲ್ಲಿ. ಈ ಸಂಕೀರ್ಣ ರಾಜಕಾರಣವೇ ಕಾವೇರಿಯೆಂಬ ಒಂದೇ ನದಿಯ ಕಣಿವೆಗಳಲ್ಲಿ ಹುಟ್ಟಿದ ಭಾಷೆಗಳಾಗಿದ್ದ ತಮಿಳು ಮತ್ತು ಕನ್ನಡಗಳನ್ನು, ಕಾಲಾನಂತರದಲ್ಲಿ ವಿರುದ್ಧ ಸಾಂಸ್ಕೃತಿಕ ದಿಕ್ಕುಗಳೆಡೆಗೆ ಎಳೆದುಕೊಂಡು ಹೋದದ್ದು. ಕನ್ನಡದ ಮೂಲ ನೆಲೆಯಲ್ಲಿನ ಈ ಸಾಂಸ್ಕೃತಿಕ ಪಲ್ಲಟವೇ, ಕನ್ನಡಿಗರು ಮತ್ತು ತಮಿಳರ ನಡುವೆ ಇಂದಿಗೂ ಕಾಣುವ ಅಸಹಜ ಸಾಂಸ್ಕೃತಿಕ ಬಿಗುವನ್ನು ಸೃಷ್ಟಿಸಿರುವುದು.

ಇತಿಹಾಸದಲ್ಲಿ ಹೀಗೆ ಕನ್ನಡ ತನ್ನ ಕರುಳ ಬಳ್ಳಿ ಸಂಬಂಧವನ್ನು ಕಳೆದುಕೊಳ್ಳುವಂತಾದ, ಪರಾಕರ್ಷಣೆಯ–'ಆಧುನೀಕರಣ'ದ(?)– ರಾಜಕಾರಣಕ್ಕೆ ಸಿಕ್ಕ ದುರಂತವೇ, ಇಂದು ಕರ್ನಾಟಕದ ಶಾಲೆಗಳಲ್ಲಿ ಕನ್ನಡ ಮಾಧ್ಯಮವನ್ನು ಜಾರಿಗೊಳಿಸುವ ಸರ್ಕಾರದ ಕ್ರಮವನ್ನು ಅನೂರ್ಜಿತಗೊಳಿಸಿರುವ ರಾಜ್ಯ ಹೈಕೋರ್ಟ್ ತೀರ್ಪನ್ನು ಅನೇಕ ಕನ್ನಡಿಗರು ವಿಜಯ ಚಿಹ್ನೆ ತೋರಿಸುತ್ತಾ, ಸಂಭ್ರಮದಿಂದ ಹಲ್ಕಿರಿದು ಸ್ವಾಗತಿಸುವಂತೆ ಮಾಡಿರುವುದು ಕೂಡಾ ಎಂದರೆ ತಪ್ಪಾಗಲಾರದು. ಅದೇನೇ ಇರಲಿ, ಕನ್ನಡ ಮಾಧ್ಯಮದ ಆಜ್ಞೆ ಅನೂರ್ಜಿತಗೊಂಡಿತೆಂದು ನೆಮ್ಮದಿಯ ನಿಟ್ಟುಸಿರು ಬಿಡುವ ಕನ್ನಡಿಗರೇ ತಮ್ಮ ಭಾಷೆಗೆ ಶಾಸ್ತ್ರೀಯ ಭಾಷಾ ಸ್ಥಾನಮಾನಕ್ಕಾಗಿಯೂ ಹೊಡೆದಾಡಬಲ್ಲರು ಎಂಬುದೇ ಇಲ್ಲಿನ ವಿಪರ್ಯಾಸ! ತಮ್ಮ ಭಾಷೆಯ ಸ್ಥಾನಮಾನವನ್ನು ತಮಿಳಿನ ಸ್ಥಾನಮಾನದೊಂದಿಗಷ್ಟೇ ಹೋಲಿಸಿಕೊಂಡು ಅದನ್ನು ಸಂರಕ್ಷಿಸಿಕೊಳ್ಳುವಷ್ಟು ಮಾನಧನರಾದ ಕನ್ನಡಿಗರು, ತಮ್ಮ

ಭಾಷೆಯ ಬಗ್ಗೆ ನಿಜವಾಗಿ ಎಷ್ಟು ಆಳವಾದ ಅಭಿಮಾನವನ್ನು ಹೊಂದಿದ್ದಾರೆ ಎಂಬುದನ್ನು ಷ.ಶೆಟ್ಟರ್ ಅವರು ತಮ್ಮ ಪುಸ್ತಕದಲ್ಲಿ ಸೂಚಿಸಿರುವುದು ಹೀಗೆ:'ತಮ್ಮ ಸಾಹಿತ್ಯವನ್ನು ಪರಭಾಷೀಯರಿಗೆ ಪರಿಚಯಿಸುವ ಕಾರ್ಯವನ್ನು ತಮಿಳು ಭಾಷಾ ಪಂಡಿತರು ಬಹುಶಃ ಉಳಿದೆಲ್ಲ ಭಾಷಾ ಪಂಡಿತರಿಗಿಂತಲೂ–ಖಂಡಿತವಾಗಿಯೂ ಕನ್ನಡ ಕೃತಿಗಳನ್ನು ಪರಿಚಯಿಸಲು ಮಾಡಿದ ನಮ್ಮ ಪರಿಶ್ರಮಕ್ಕಿಂತಲೂ ಸರಿ ಸುಮಾರು ನೂರು ಪಟ್ಟು–ಹೆಚ್ಚು ಶ್ರಮ ಮತ್ತು ಶ್ರದ್ಧೆಯಿಂದ ಪೂರೈಸಿಕೊಟ್ಟಿರುವರು.'

ತಮಿಳರಂತೆ ತಮ್ಮ ಭಾಷೆಯ ಬಗ್ಗೆ ನಿಜವಾದ ಶ್ರದ್ಧೆಯನ್ನಾಗಲೀ, ಪರಿಶ್ರಮವನ್ನಾಗಲೀ ಪ್ರದರ್ಶಿಸದ ಕನ್ನಡಿಗರು ತಮ್ಮ ಭಾಷೆಗೆ ತಮ್ಮದೇ ಬದುಕಿನಲ್ಲಿ ತಾವು ಕೊಡಲಾಗದ ಮಾನ್ಯತೆಯನ್ನು ಇತರರು ಕೊಡಬೇಕೆಂದು ಬಯಸುವ ಹುಸಿ ಆತ್ಮಾಭಿಮಾನದ ರೋಗಕ್ಕೆ ತುತ್ತಾಗಿ ಬಳಲುತ್ತಿದ್ದಾರೆ. ಈ ರೋಗದಿಂದ ಮುಕ್ತರಾಗದ ಹೊರತು ಕನ್ನಡಿಗರಿಗೆ ಮತ್ತು ಕನ್ನಡಿಗರಿಗೆ ಮುಕ್ತಿಯಿಲ್ಲ. ಇದೇ 'ಶಂಗಂ ತಮಿಳಗಂ' ಪುಸ್ತಕ ನೀಡುವ ಮುಖ್ಯ ಸಾಂಸ್ಕೃತಿಕ ಹೊಳಹು ಕೂಡಾ ಎಂದು ನಾನು ಭಾವಿಸಿದ್ದೇನೆ.

(ಜುಲೈ ೧೮, ೨೦೦೮, 'ವಿಕ್ರಾಂತ ಕರ್ನಾಟಕ')

೭. ಕರ್ನಾಟಕದ ರಕ್ಷಣೆ ಯಾರಿಂದ?

ಸಮಾಜವಾದಿ ಗೆಳೆಯ ಶ್ರೀನಿವಾಸ ಕುಮಾರ್ ಇನ್ನಿಲ್ಲ ಎಂದರೆ ನಂಬುವುದು ಕಷ್ಟ. ಇನ್ನೂ ಮಧ್ಯ ವಯಸ್ಸಿನಲ್ಲಿದ್ದ ಅವರು ಮೊನ್ನೆ ಹೃದಯಾಘಾತದಿಂದ ನಿಧನ ಹೊಂದಿದ್ದಾರೆ. ಶ್ರೀನಿವಾಸ ಕುಮಾರ್ ಮೂಲತಃ ತುಮಕೂರು ಜಿಲ್ಲೆಯವರಾದರೂ ಉದ್ಯೋಗ ನಿಮಿತ್ತ ದೂರದ ಚಾಮರಾಜ ನಗರದಲ್ಲಿ ನೆಲೆಸಿದ್ದು, ಅಲ್ಲಿ ಅಪೂರ್ವ ಡಿಸಿಲ್ವ, ಮಹೇಶ್ ಹರವೆ, ಬಿ.ರಾಜೇಶ್ ಮುಂತಾದ ಯುವ ಗೆಳೆಯರೊಡಗೂಡಿ ಸಮಾಜವಾದಿ ಅಧ್ಯಯನ ಕೇಂದ್ರವೆಂಬುದೊಂದನ್ನು ಕಟ್ಟಿಕೊಡಿದ್ದರು, ಅದರಡಿಯಲ್ಲಿ ಅವರು ತಮ್ಮ ಮಿತಿಗಳಲ್ಲೇ ಅನೇಕ ರೀತಿಯ ಸಮಾಜವಾದಿ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದರು: ತಮ್ಮ ಗೆಳೆಯರನ್ನು ಅಂತರ್ಜಾತಿ ಹಾಗೂ ಅಂತರ್ಧರ್ಮೀಯ ಮದುವೆಗಳಿಗೆ ಪ್ರೋತ್ಸಾಹಿಸಿ, ಸ್ಥಳೀಯವಾಗಿ ಅದನ್ನೊಂದು ಸಣ್ಣ ಚಳುವಳಿಯಾಗಿ ರೂಪಿಸಿದ್ದರು. ಸಮಾಜವಾದಿ ಸಾಹಿತ್ಯವನ್ನು ಕನ್ನಡಕ್ಕೆ ತರುವ ಪ್ರಯತ್ನವನ್ನೂ ಅವರು ಮಾಡಿದ್ದರು. ಕಂಪ್ಯೂಟರ್ ನಿರ್ವಹಣೆಯಲ್ಲಿ ಪರಿಣತಿ ಹೊಂದಿದ್ದ ಶ್ರೀನಿವಾಸ ಕುಮಾರ್, ಇತ್ತೀಚಿನ ದಿನಗಳಲ್ಲಿ ಲೋಹಿಯಾ ಕುರಿತ ಜಾಲ-ತಾಣವೊಂದನ್ನು ಸ್ಥಾಪಿಸುವ ಸಾಹಸದಲ್ಲಿ ತೊಡಗಿದ್ದರು. ಅದಕ್ಕಾಗಿ ನನ್ನಿಂದ ಲೋಹಿಯಾ ಸಂಪಾದಕತ್ವದ ಹಳೆಯ 'ಮ್ಯಾನ್‌ಕೈಂಡ್' ಸಂಚಿಕೆಗಳನ್ನು ತರಿಸಿಕೊಂಡಿದ್ದರು. ಈ ಕೆಲಸ ಎಷ್ಟು ಪೂರ್ಣವಾಗಿದೆಯೋ ತಿಳಿಯದು. ಸರಳ ಸಜ್ಜನರಾಗಿದ್ದ ಶ್ರೀನಿವಾಸಕುಮಾರ್, ಬಹಳಷ್ಟು ಸಮಾಜವಾದಿಗಳ ಕಾರ್ಯಶೈಲಿಗೆ ವಿರುದ್ಧವಾಗಿ, ಎಲೆ ಮರೆಯ ಕಾಯಿಯಂತೆ ಕೆಲಸ ಮಾಡಿ ಕಣ್ಮರೆಯಾಗಿದ್ದಾರೆ. ಈ ಕಾಲದಲ್ಲಿ ಸಮಾಜವಾದಿ ಎನಿಸಿಕೊಳ್ಳಲು ಸಾಕಷ್ಟು ಧೈರ್ಯ ಹಾಗೂ ಬದ್ಧತೆ ಬೇಕು. ಅಂತಹ ಅಪರೂಪದ ಧೈರ್ಯ, ಬದ್ಧತೆಗಳಿದ್ದ ಶ್ರೀನಿವಾಸ ಕುಮಾರ್‌ರ ಸಾವು ಅವರ ಗೆಳೆಯರಲ್ಲಿ ಅಪಾರ ದುಃಖವನ್ನುಂಟು ಮಾಡಿರುವುದು ಸಹಜವೇ. ಆದರೆ, ಕನಿಷ್ಟ ಅವರ ಅಪೂರ್ಣ ಕೆಲಸಗಳನ್ನು ಪೂರ್ಣಗೊಳಿಸುವುದೇ ಆ ಚೇತನಕ್ಕೆ ಈ ಗೆಳೆಯರು ಸಲ್ಲಿಸಬಹುದಾದ ನಿಜವಾದ ಶ್ರದ್ಧಾಂಜಲಿ.

ಈ ಕಾಲ ಶ್ರೀನಿವಾಸ ಕುಮಾರ್‌ರಂತಹ ತಾತ್ವಿಕ ಬದ್ಧತೆಯಿದ್ದವರು ಬೆಳಕಿಗೆ ಬರುವ ಕಾಲವಲ್ಲ. ಏನಿದ್ದರೂ, ಪ್ರಮೋದ್ ಮುತಾಲಿಕ ಅಥವಾ ನಾರಾಯಣ ಗೌಡರಂತಹ ಬೀದಿ ಬಂಟರು ಮೆರೆಯುವ ಕಾಲ. ಇತ್ತೀಚೆಗೆ ರೈಲ್ವೇ ನೇಮಕಾತಿಯ ವಿರುದ್ಧ ಬೆಂಗಳೂರಿನಲ್ಲಿ ನಡೆದ ಮತ್ತು ರಾಜ್ಯದ ಹಲವು ಕಡೆ ಪ್ರತಿಧ್ವನಿಸಿದ ಪ್ರತಿಭಟನೆಯನ್ನೇ ನೋಡಿ. ವಸೂಲಾತಿ ಮೂಲಕ ಅಪಾರ ಆಸ್ತಿ ಸಂಗ್ರಹ ಹಾಗೂ ಅನೇಕ ರೀತಿಯ ದುಂಡಾವರ್ತಿಯ ಆರೋಪಗಳನ್ನು ತಮ್ಮ ಮಾಜಿ ಸಹಚರರಿಂದಲೇ ಎದುರಿಸುತ್ತಿರುವ ಟಿ. ನಾರಾಯಣ ಗೌಡರ ಕರ್ನಾಟಕ

ರಕ್ಷಣಾ ವೇದಿಕೆ, ರೈಲ್ವೆ ಇಲಾಖೆ ತನ್ನ ನೇಮಕಾತಿ ಪ್ರಕ್ರಿಯೆಯನ್ನು ಅಮಾನತ್ತಿನಲ್ಲಿಡಬೇಕಾದ ಪರಿಸ್ಥಿತಿಯನ್ನು ನಿರ್ಮಿಸಿ, ಇಂದು ಒಂದು ಸಾರ್ವಜನಿಕ ಮಾನ್ಯತೆ ಹಾಗೂ ಗೌರವಾನ್ವಿತತೆಗಳನ್ನು ಗಳಿಸಿಕೊಳ್ಳುವಂತಾಗಿದೆ. ಹೋದ ವಾರದ 'ವಿಕ್ರಾಂತ ಕರ್ನಾಟಕ'ದ ಸಂಪಾದಕೀಯದಲ್ಲಿ ರೇಷ್ಮೆಯವರು ಹೇಳಿದಂತೆ, ಇದಕ್ಕೆ ಕಾರಣ ನಮ್ಮ ರಾಜಕೀಯ ನಾಯಕತ್ವದ ವೈಫಲ್ಯವೇ ಆಗಿದೆ. ನಮ್ಮದು ಪ್ರಾತಿನಿಧಿಕ ಪ್ರಜಾಪ್ರಭುತ್ವ ವ್ಯವಸ್ಥೆ. ಅಂದರೆ, ಜನರ ಅಧಿಕೃತ ಪ್ರತಿನಿಧಿಗಳು ಜನರ ಹಿತಾಸಕ್ತಿಗಳನ್ನು ಸಂರಕ್ಷಿಸುವ ವ್ಯವಸ್ಥೆ. ಆದರೆ ಇಂದು ಈ ಅಧಿಕೃತ ಜನ ಪ್ರತಿನಿಧಿಗಳು ತಮ್ಮ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ವಿಫಲರಾಗಿ, ಅನಧಿಕೃತ ಜನ ಪ್ರತಿನಿಧಿಗಳಿಗೆ ರಾಜ್ಯಾಡಳಿತ ವ್ಯವಸ್ಥೆಯನ್ನು ವಹಿಸಿಕೊಡುತ್ತಿದ್ದಾರೆ.

ನಮ್ಮ ಪ್ರಜಾಪ್ರಭುತ್ವದಲ್ಲಿ ಅನಧಿಕೃತ ಜನ ಪ್ರತಿನಿಧಿಗಳಿಗೆ ಜಾಗವಿಲ್ಲವೆಂದಲ್ಲ. ಜನರ ಹಿತಾಸಕ್ತಿಗಳು ಧಕ್ಕೆಗೊಳಗಾದಾಗಲೆಲ್ಲ ಆ ಬಗ್ಗೆ ಜಾಗೃತಿ ಮೂಡಿಸಲು ಅನಧಿಕೃತ ಜನಸಂಘಟನೆಗಳು ಅಗತ್ಯ. ಅವುಗಳ ಪ್ರತಿನಿಧಿಗಳು ಅಥವಾ ನಾಯಕರೆನಿಕೊಂಡವರು ಅಧಿಕೃತ ಪ್ರತಿನಿಧಿಗಳ ಮೇಲೆ ಒತ್ತಡ ಹಾಕಿ ಅವರ ಮೂಲಕ ತಮ್ಮ ಹಕ್ಕುಗಳನ್ನು ಸಂರಕ್ಷಿಸಿಕೊಳ್ಳುವಂತಹ ಕಾರ್ಯಾಚರಣೆಗಳಲ್ಲಿ ತೊಡಗುವುದು ಒಂದು ಕ್ರಿಯಾಶೀಲ ಪ್ರಜಾಪ್ರಭುತ್ವದ ಲಕ್ಷಣ. ಆದರೆ ಇಂದು ಕಂಡುಬರುತ್ತಿರುವುದೇನೆಂದರೆ, ಅನಧಿಕೃತ ಜನ ಪ್ರತಿನಿಧಿಗಳೇ ನೇರವಾಗಿ ವ್ಯವಸ್ಥೆಗೆ ಸವಾಲು ಹಾಕಿ ವ್ಯವಸ್ಥೆಯಿಂದ ಪ್ರತಿಸ್ಪಂದನವನ್ನೂ, ಆ ಮೂಲಕ ಮಾನ್ಯತೆಯನ್ನೂ ಪಡೆಯುತ್ತಿರುವುದು! ಇದು, ನಮ್ಮಲ್ಲಿ ಪ್ರಾತಿನಿಧಿಕ ಪ್ರಜಾಪ್ರಭುತ್ವ ವ್ಯವಸ್ಥೆ ಸೋಲುತ್ತಿರುವ, ಅರಾಜಕತೆಗೆ ದಾರಿ ಮಾಡಿಕೊಡುತ್ತಿರುವ ಸೂಚನೆಯಷ್ಟೇ. ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಗೆ ಇಂದು ಒಂದು ಕಡೆಯಿಂದ ಕಾರ್ಪೊರೇಟ್‌ಶಾಹಿ ತನ್ನ ಧನ ಮದದ ಮೂಲಕ ಬೆದರಿಕೆ ಹಾಕುತ್ತಿದ್ದರೆ, ಇನ್ನೊಂದು ಕಡೆ ಇದಕ್ಕೆ ಪ್ರತಿಕ್ರಿಯೆ ಎಂಬಂತೆ ಜನಸಾಮಾನ್ಯರ ಅನಧಿಕೃತ ಪ್ರತಿನಿಧಿಗಳು ತಮ್ಮ ದುಂಡಾವೃತ್ತಿಯ ಮೂಲಕ ಬೆದರಿಕೆ ಹಾಕುತ್ತಿದ್ದಾರೆ.

ಮೊನ್ನೆ ವಿಶ್ವಬ್ಯಾಂಕಿನ ಆರ್ಥಿಕ ಸಲಹೆಗಾರರೆಂದು ಹೇಳಲಾದ ಬಾಲಸುಬ್ರಹ್ಮಣ್ಯಂ ಎಂಬುವವರು ಕರ್ನಾಟಕವನ್ನು ಭಾರತದಲ್ಲೇ ಅತ್ಯಂತ ಭ್ರಷ್ಟ ರಾಜ್ಯವೆಂದು ಕರೆದಿದ್ದಾರೆ. ಇದಕ್ಕೂ, ರಾಜ್ಯದಲ್ಲಿ ಇಂದು ಅನೇಕ ರೀತಿಯ ಅಸಂಖ್ಯಾತ ವೇದಿಕೆಗಳು, ಸೇನೆಗಳು, ದಳಗಳು, ಅಭಿಮಾನಿ ಸಂಘಗಳು ತಲೆ ಎತ್ತುತ್ತಿರುವುದಕ್ಕೂ ಸಂಬಂಧವಿದ್ದಂತೆ ತೋರುತ್ತದೆ. ನಮ್ಮ ಶಾಸಕಾಂಗ, ಕಾರ್ಯಾಂಗಗಳೆರಡೂ ಭ್ರಷ್ಟತೆಯ ಭಾರದಲ್ಲಿ ಕುಸಿದು ಬಿದ್ದು, ನ್ಯಾಯಾಂಗ ಅದನ್ನು ಅಸಹಾಯಕವಾಗಿ ನೋಡುವಂತಹ ಸ್ಥಿತಿ ಉಂಟಾದಾಗ; ಖಾಸಗಿ ದಳಗಳು– ಒಳ್ಳೆಯದು, ಕೆಟ್ಟದು ಎರಡಕ್ಕೂ–ಹುಟ್ಟಿಕೊಳ್ಳುವುದು ಸಹಜವೇ ಆಗಿದೆ. ಕಾರ್ಪೊರೇಟ್‌ಶಾಹಿ ತನ್ನ ಮಾನವ ಸಂಪನ್ಮೂಲ ಅಭಿವೃದ್ಧಿ ವಿಭಾಗದ ಸ್ವೋಪಜ್ಞ ಹೆಸರುಗಳಲ್ಲಿ ಖಾಸಗಿ ದಳಗಳನ್ನು ರಚಿಸಿಕೊಂಡು ಅವುಗಳ ಮೂಲಕ ತುಂಬಾ ನಾಜೂಕಾಗಿ (ಅಥವಾ ನಾಜೂಕಯ್ಯಗಳಾಗಿ?) ತಮ್ಮ ಹಿತಾಸಕ್ತಿಗಳನ್ನು ರಕ್ಷಿಸಕೊಳ್ಳತೊಡಗಿದ್ದರೆ; ಸಾಮಾನ್ಯ ಜನರು ತಮ್ಮದೇ ಬೀದಿ ಹೋರಾಟದ ಅನಧಿಕೃತ ದಳ, ಸೇನೆ, ವೇದಿಕೆ, ಸಂಘಗಳ ಮೂಲಕ ದೊಂಬಿ, ಗಲಭೆ, ಪ್ರತಿಭಟನೆ, ಮೆರವಣಿಗೆಗಳನ್ನು ಏರ್ಪಡಿಸಿಕೊಂಡು ತಮ್ಮ ಹಿತಾಸಕ್ತಿಗಳನ್ನು ರಕ್ಷಿಸಕೊಳ್ಳತೊಡಗಿದ್ದಾರೆ. ಇದರಲ್ಲಿನ ಮುಖ್ಯ ಅಪಾಯವೆಂದರೆ, ಆ ನಾಜೂಕುತನದಲ್ಲಿನ

ಜಾಣ ಸುಳ್ಳು, ಮೋಸ, ತಟವಟ, ಆಮಿಷ ಅಥವಾ ಈ ದೊಂಬಿ–ಮೆರವಣಿಗೆಗಳಲ್ಲಿನ ಹಿಂಸಾಚಾರ, ಸಾರ್ವಜನಿಕ ಜೀವನದ ಅಸ್ತವ್ಯಸ್ತತೆಗಳ ಬಗೆಗಿನ ಚರ್ಚೆಗಳ ಮರೆಯಲ್ಲಿ ಸಾರ್ವಜನಿಕ ಹಿತಾಸಕ್ತಿಯೆಂಬುದೇ ಖಾಸಗಿ ಹಿತಾಸಕ್ತಿಯಾಗಿ ಮಾರ್ಪಾಡಾಗುತ್ತಿರುವುದು. ನಮ್ಮ ಕಾರ್ಪೊರೇಟ್ ಸಂಸ್ಥೆಗಳ ಬರೀ ಬೆಂಗಳೂರು ಕೇಂದ್ರಿತ ಅಭಿವೃದ್ಧಿ ಬೇಡಿಕೆಗಳನ್ನು ನೋಡಿದರೆ ಅಥವಾ ಕರ್ನಾಟಕ ರಕ್ಷಣಾ ವೇದಿಕೆಯ ಬ್ಯಾನರ್‌ಗಳ ತುಂಬಾ ವ್ಯಾಪಿಸಿರುವ ಅದರ ನಾಯಕ ಮಣಿಗಳ ಮುಖಾರವಿಂದಗಳನ್ನು ನೋಡಿದರೆ ಇದು ವೇದ್ಯವಾದೀತು.

ಅಂದ ಮಾತ್ರಕ್ಕೆ ನಾನು ಕರ್ನಾಟಕ ರಕ್ಷಣಾ ವೇದಿಕೆಯ ಇತ್ತೀಚಿನ ಹೋರಾಟದ ಮಹತ್ವವನ್ನು ಅಲ್ಲಗಳೆಯುತ್ತಿಲ್ಲ. ಈ ಹೋರಾಟದ ಮೂಲಕ ಅದು ಗಳಿಸಿಕೊಂಡಿರುವ ಕೀರ್ತಿಗೆ ಅದು ನಿಜವಾಗಿಯೂ ಬಾಧ್ಯವೇ ಆಗಿದೆ. ಆದರೆ, ಭಾರತದ ಸ್ವತಂತ್ರ ಪ್ರಜೆಗಳಾಗಿ ಕನ್ನಡಿಗರ–ಕರ್ನಾಟಕದವರ ಹಕ್ಕುಗಳನ್ನು ಎತ್ತಿ ಹಿಡಿಯಲು ಎಷ್ಟೆಲ್ಲ ವೇದಿಕೆಗಳನ್ನು ನಮ್ಮ ಪ್ರಜಾಪ್ರಭುತ್ವ ಕಲ್ಪಿಸಿ ಕೊಟ್ಟಿದ್ದರೂ–ಸಂಸತ್ತು, ರಾಜ್ಯ ಶಾಸನ ಸಭೆ, ನ್ಯಾಯಾಂಗ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕನ್ನಡ ಸಾಹಿತ್ಯ ಪರಿಷತ್ತು ಇತ್ಯಾದಿಗಳು– ಕನ್ನಡಿಗರು ಯಾವಾಗಲೂ ಸಾರ್ವಜನಿಕ ಜೀವನವನ್ನು ಅಸ್ತವ್ಯಸ್ತಗೊಳಿಸುವ ದುಂಡಾವರ್ತಿಯ ಮೂಲಕವೇ ಮತ್ತು ಅನ್ಯ ಭಾಷಿಕ ಸಮುದಾಯಗಳ ವಿರುದ್ಧ ಕಹಿ ಹುಟ್ಟಿಸುತ್ತಲೇ, ತಮ್ಮ ಹಕ್ಕುಗಳಿಗಾಗಿ ಹೋರಾಟ ಮಾಡುವ ಅನಿವಾರ್ಯತೆ ಉಂಟಾಗಿರುವ ಬಗ್ಗೆ ನಮಗೆ ವಿಷಾದವೂ ಉಂಟಾಗಬೇಕು. ರಕ್ಷಣಾ ವೇದಿಕೆಯ ಹೋರಾಟ ದೊಡ್ಡ ಸುದ್ದಿಯಾಗಿ ಸಾರ್ವಜನಿಕರ ಗಮನ ಸೆಳೆದ ಮೇಲೇ ಅಲ್ಲವೇ, ಈ ಎಲ್ಲ ಅಧಿಕೃತ ವೇದಿಕೆಗಳ ಸದಸ್ಯರು ಹೋರಾಟದಲ್ಲಿ ತಾವೂ ಇದ್ದೇವೆ ಎಂದು ಮುಖ ತೋರಿಸ ಹೊರಟದ್ದು? ಕನ್ನಡದ ಜನಸಮುದಾಯ ಭಾರತವೆಂಬ ಒಕ್ಕೂಟದ ಒಂದು ಭಾಗವಾಗಿರುವುದು ತಮ್ಮ ಕುಲ ಅಸ್ಮಿತೆಯನ್ನು ಕಳೆದುಕೊಳ್ಳುವುದಕ್ಕಲ್ಲ;ಬದಲಿಗೆ ಅದನ್ನು ಇನ್ನಷ್ಟು ಸಂಪನ್ನಗೊಳಿಸಿಕೊಳ್ಳುವ ಮೂಲಕ ಈ ಒಕ್ಕೂಟವನ್ನು ಬಲಗೊಳಿಸಲು. ನಮ್ಮ ರಾಷ್ಟ್ರೀಯ (ಸ್ವಾತಂತ್ರ್ಯ) ಹೋರಾಟ ಹಾಗೂ ಕರ್ನಾಟಕ ಏಕೀಕರಣ ಹೋರಾಟಗಳು ನಡೆದದ್ದು ಈ ಆಶಯದೊಂದಿಗೇ. ಹೀಗಾಗಿಯೇ ನಮ್ಮ ಸಂವಿಧಾನ ಈ ರಾಷ್ಟ್ರವನ್ನು ಸಾಂಘಿಕ ಸ್ವರೂಪದ ರಾಷ್ಟ್ರವನ್ನಾಗಿ ಘೋಷಿಸಿ, ಎಲ್ಲರಿಗೂ ತಮ್ಮ ಭಾಷೆ, ಸಂಸ್ಕೃತಿಗಳನ್ನು ಉಳಿಸಿಕೊಂಡು ಬೆಳೆಸುವ ಹಕ್ಕುಗಳನ್ನು ನೀಡಿರುವುದು.

ಇದು ಸಾಧ್ಯವಾಗುವುದು ಎಲ್ಲ ಭಾಷೆ–ಸಂಸ್ಕೃತಿಗಳ ಜನರಿಗೂ ರಾಷ್ಟ್ರ ಜೀವನವನ್ನು ಕಟ್ಟುವ ಸಮಾನಾವಕಾಶಗಳು ಲಭ್ಯವಿರುವ ವಾತಾವರಣವಿದ್ದಾಗ. ಆದರೆ, ಏಕೀಕರಣ ಸಮಯದಲ್ಲೇ ಕರ್ನಾಟಕದ 'ಅಖಿಲ ಭಾರತೀಯ' ನಾಯಕರ ತಲೆಕೆಳಗಾದ ರಾಷ್ಟ್ರೀಯತೆಯಿಂದಾಗಿ ಅನೇಕ ಕನ್ನಡ ಪ್ರದೇಶಗಳನ್ನು ರಾಜ್ಯ ಕಳೆದುಕೊಂಡಿತು. ನಂತರದ ವರ್ಷಗಳಲ್ಲಿ ಈ ತಲೆಕೆಳಗಾದ ರಾಷ್ಟ್ರೀಯತೆಯಿಂದಾಗಿಯೇ ಹುಟ್ಟಿದ ಸ್ವಾರ್ಥ, ಅಧಿಕಾರ ಲಾಲಸೆ ಹಾಗೂ ಜಾತಿ ಹಿತಾಸಕ್ತಿಗಳನ್ನಾಧರಿಸಿದ ಜನದೂರವಾದ ರಾಜಕಾರಣ ತನ್ನ ಸಾಂಸ್ಕೃತಿಕ ಅಸ್ಮಿತೆಯನ್ನೇ ಕಳೆದುಕೊಂಡು, ಸಾಮಾನ್ಯ ಕನ್ನಡಿಗರನ್ನು ಭಾರತದ ಅಸಹಾಯಕ ಪ್ರಜೆಗಳನ್ನಾಗಿ ಮಾಡಿ ಕೂರಿಸಿದೆ. ಇದರ ಜೊತೆಗೆ, ಅನೇಕ ಐತಿಹಾಸಿಕ ಕಾರಣಗಳಿಂದಾಗಿ ತಮ್ಮ ಸಾಂಸ್ಕೃತಿಕ ಅಸ್ಮಿತೆಯ ಬಗೆಗೆ ಅಷ್ಟು ಕಾಳಜಿ ಇಲ್ಲದ ಕನ್ನಡಿಗರ ಒಂದು ದೊಡ್ಡ ಜನಸಮೂಹದ ನಿರಭಿಮಾನವೂ ಸೇರಿ, ಕರ್ನಾಟಕವನ್ನು ಸಾಂಸ್ಕೃತಿಕ ಬೇರು

ಕಳೆದುಕೊಳ್ಳುತ್ತಿರುವ ಒಂದು ಆಧುನಿಕ ಪೆಡಂಭೂತವನ್ನಾಗಿ ಪರಿವರ್ತಿಸುತ್ತಿದೆ.

ಹೀಗೆ ಬೇರೆ ರಾಜ್ಯಗಳ ಭಾಷಾ ಸಮುದಾಯಗಳ ನಾಯಕತ್ವಕ್ಕೆ ಹೋಲಿಸಿದರೆ, ಒಂದು ಸಾಂಸ್ಕೃತಿಕ ಅರಿವೇ ಇಲ್ಲದಂತೆ ತೋರುವ ಕರ್ನಾಟಕದ ರಾಜಕೀಯ ನಾಯಕತ್ವ, ತನ್ನ ಉಳಿವಿಗಾಗಿ ಪೋಷಿಸುತ್ತಿರುವ ಭ್ರಷ್ಟಾಚಾರ, ಕುಟುಂಬವಾದ, ಜಾತಿವಾದ, ಜಾಗತಿಕವಾದಗಳ ಸುಳಿಯಲ್ಲಿ ರಾಜ್ಯ ಭಾರತದ ರಾಜಕಾರಣದಲ್ಲಿ ತನ್ನ ಲಂಗರುಗಳನ್ನು ಕಳೆದುಕೊಂಡು ಆತ್ಮವಿಲ್ಲದ ದೇಹದಂತೆ ಎದ್ದೆದ್ದು ಬೀಳುತ್ತಿದೆ. ಇದರ ರಾಜಧಾನಿ ಬೆಂಗಳೂರು ಎಲ್ಲ ಪ್ರಾದೇಶಿಕ ಪರಿಮಳವನ್ನೂ ಕಳೆದುಕೊಂಡು ಮಿರಿ ಮಿರಿ ಮಿಂಚುವ ಕಾಗದದ ರಾಕ್ಷಸ ಹೂವಿನಂತೆ, ಜಾಗತಿಕವಾದದ ಗಾಳಿಗೆ ಸಿಕ್ಕಿ ಹೇಗೆ ತೊನೆದಾಡುತ್ತಿದೆ ನೋಡಿ. ಈ ನರ್ತನವನ್ನು ಕಂಡು, ಕರ್ನಾಟಕದ ಎಲ್ಲ ಪಟ್ಟಣ–ನಗರಗಳೂ ಇಂತಹ ಕಾಗದದ ಹೂಗಳಾಗಲು ಹೇಗೆ ಹಾತೊರೆಯುತ್ತಿವೆ ನೋಡಿ!

ಇಂತಹ ವಾತಾವರಣದಲ್ಲಿ ಕರ್ನಾಟಕ ರಕ್ಷಣಾ ವೇದಿಕೆಯ ವೀರಾವೇಶದ ಹಾರಾಟ–ಹೋರಾಟಗಳೆಲ್ಲವೂ ಅಲ್ಪಕಾಲಿಕ ಹಾಗೂ ಅಲ್ಪ ತೃಪ್ತ ಮಾತ್ರವಾಗಿರಬಲ್ಲವು. ಮೂಲತಃ ಇಂತಹ ಸೇನೆಗಳು ಭಾವನಾತ್ಮಕ ನೆಲೆಯಲ್ಲಿ ಮಾತ್ರ ಕೆಲಸ ಮಾಡಬಲ್ಲವಾಗಿದ್ದು, ಭಾವಾವೇಶ ಇಳಿದೊಡನೆ ಅವುಗಳ ಹೋರಾಟ–ಹಾರಾಟಗಳೆಲ್ಲ ಹಿನ್ನೆಲೆಗೆ ಸರಿದು, ತಾವು ಉಳಿಯಲು ತಮ್ಮ ದೈನಂದಿನ 'ವ್ಯವಹಾರ'ಗಳಲ್ಲಿ ತೊಡಗಬೇಕಾಗುತ್ತದೆ. ಮತ್ತೆ ಏಕೆಂದರೆ, ಇಂದಿನ ಜಾಗತೀಕರಣದ ಬಿರುಗಾಳಿಯನ್ನು ತಡೆಯುವಷ್ಟು ಅವುಗಳ ಬುಡ ಭದ್ರವಿರುವುದಿಲ್ಲ. ಬಿಹಾರದ ಲಾಲೂ ಪ್ರಸಾದ್ ಯಾದವ್ ಹಾಗೂ ಕರ್ನಾಟಕದ ಕೆ.ಎಚ್.ಮುನಿಯಪ್ಪ ಅಥವಾ ತೇಜಸ್ವಿನಿ ಈಗ ಎತ್ತಿ ಹಿಡಿಯುತ್ತಿರುವುದಾದರೂ ನಮ್ಮ ಹೊಸ ರಾಷ್ಟ್ರೀಯತೆಯ ಹೊಸ ಆದರ್ಶವಾಗಿರುವ ಜಾಗತೀಕರಣ ಪ್ರತಿಪಾದಿಸುತ್ತಿರುವ ಮುಕ್ತ ಸ್ಪರ್ಧೆಯನ್ನೇ! ಯಾರು ಎಲ್ಲಿಗೆ ಬೇಕಾದರೂ ಹೋಗಿ ಅಥವಾ ಬಂದು ಸ್ಪರ್ಧಿಸಿ 'ಗೆಲ್ಲ'ಬಹುದು ಎಂಬ 'ಉದಾರ' ತತ್ವವನ್ನೇ! ಆದರೆ ಈ ಸ್ಪರ್ಧೆ ನಾವು ಒಪ್ಪಿಕೊಂಡ ಒಕ್ಕೂಟದ ಪರಿಕಲ್ಪನೆಗೇ ಧಕ್ಕೆ ತರುವಂತಿದ್ದರೆ? ರಾಜಕೀಯ ಬಲಶಾಲಿಗಳು ಈ ಒಕ್ಕೂಟದ ಆಶಯವನ್ನೇ ವಿಕೃತಗೊಳಿಸಿದ್ದರೆ? ಇದರಿಂದಾಗಿ ಕೆಲ ಸಮುದಾಯಗಳು ಸದಾ ಅನ್ಯಾಯಕ್ಕೇ ಒಳಗಾಗುವಂತಹ ಸ್ಥಿತಿ ನಿರ್ಮಾಣವಾಗಿದ್ದರೆ?

ಇಂತಹ ಮೂಲಭೂತ ಪ್ರಶ್ನೆಗಳನ್ನು ಕೇಳಬಲ್ಲ ಪ್ರಬುದ್ಧತೆ ಕರ್ನಾಟಕ ರಕ್ಷಣಾ ವೇದಿಕೆಯಂತಹ ಸಂಘ ಸಂಸ್ಥೆಗಳಿಗೆ ಬಂದಲ್ಲಿ ಮಾತ್ರ ಅವು ನಿಜವಾಗಿ ಕನ್ನಡ–ಕರ್ನಾಟಕವನ್ನು ರಕ್ಷಿಸಬಲ್ಲವು. ಆದರೆ ಅವುಗಳ ಇಂದಿನ ನಾಯಕತ್ವವನ್ನು ನೋಡಿದರೆ ಅದು ಸಾಧ್ಯವಿಲ್ಲದಂತೆ ತೋರುತ್ತದೆ. ಏಕೆಂದರೆ, ಕನ್ನಡದ ಮಕ್ಕಳಿಗೆ ಬಾಲ್ಯದಲ್ಲೇ ಕನ್ನಡ ಭಾಷೆ, ಸಂಸ್ಕೃತಿಗಳ ಬಗ್ಗೆ ಅರಿವು ಮೂಡಿಸುವಂತಹ ಶಿಕ್ಷಣ ಕ್ರಮ ಮತ್ತು ಅದಕ್ಕಾಗಿ ಕನ್ನಡ ಮಾಧ್ಯಮ ಶಾಲಾ ಶಿಕ್ಷಣವನ್ನು ಕಡ್ಡಾಯ ಮಾಡುವಂತೆ ಒತ್ತಾಯಿಸುವ ಮೂಲಕ ಮಾತ್ರ ಕನ್ನಡಿಗರ ಲೌಕಿಕ ಅಭ್ಯುದಯಕ್ಕಾಗಿ ಅವರನ್ನು ನಿಜವಾದ ಅರ್ಥದಲ್ಲಿ ಜಾಗೃತಗೊಳಿಸಲು ಸಾಧ್ಯ ಎಂಬ ಎಂಬ ಮೂಲಭೂತ ಅರಿವೇ ಅವಕ್ಕೆ ಇಲ್ಲವಾಗಿದೆ. ಹಾಗೇ, ಇತ್ತೀಚೆಗೆ ಸರ್ಕಾರ ಒಂದನೇ ತರಗತಿಯಿಂದಲೇ ಕನ್ನಡದ ಮಕ್ಕಳಿಗೆ ಇಂಗ್ಲಿಷ್ ಕಲಿಸುವ ಆಜ್ಞೆ ಹೊರಡಿಸಿದಾಗ, ಮೊದಲು

ಕನ್ನಡ ಮಾಧ್ಯಮವನ್ನು ಕಡ್ಡಾಯ ಮಾಡಿ; ನಂತರ ಎಲ್ಲಿಂದಲಾದರೂ ಇಂಗ್ಲಿಷ್ ಕಲಿಸಿ ಎಂದು ಹೇಳುವ ಕನ್ನಡ ನೈತಿಕತೆಯನ್ನು ಎಷ್ಟು ಕನ್ನಡ ಸಂಘಟನೆಗಳು ಪ್ರದರ್ಶಿಸಲು ಸಾಧ್ಯವಾಯಿತು?

ಹಾಗಾಗಿಯೇ ಆರೇಳು ತಿಂಗಳುಗಳ ಹಿಂದೆ ರೈಲ್ವೇ ಇಲಾಖೆ ರೇಲ್ವೇ ಟಿಕೆಟ್ಟಿನಿಂದ ಕನ್ನಡವನ್ನು ತೆಗೆದು ಹಾಕಿದಾಗ, ಇಲ್ಲಿಂದ ಅನ್ಯ ರಾಜ್ಯಗಳಿಗೆ ಹೋಗುವ ಅಥವಾ ಬರುವ ರೈಲುಗಳಿಂದ ಕನ್ನಡದ ಫಲಕಗಳನ್ನು ಹಿಂತೆಗೆದುಕೊಂಡಾಗ ಕರ್ನಾಟಕ ರಕ್ಷಣಾ ವೇದಿಕೆ ಸೇರಿದಂತೆ ಕನ್ನಡ ಚಳುವಳಿಕಾರರು ಒಂದೆರಡು ದಿನ ತಕ ತಕ ಕುಣಿದು ಆಮೇಲೆ ಸುಮ್ಮನಾದವು. ರೇಲ್ವೇ ಟಿಕೆಟ್ಟಿನಿಂದ ಕನ್ನಡ ಶಾಶ್ವತವಾಗಿ ಹೋಗಿಯೇ ಹೋಯಿತು. ಅದಕ್ಕಾಗಿ ಕಣ್ಣೀರು ಸುರಿಸುವವರು ಯಾರೂ ಇಲ್ಲ– ಬಹುಶಃ ಮೊನ್ನೆ ಶಿವಮೊಗ್ಗದಿಂದ ರೈಲು ಹತ್ತಿ, ಯಾವ ಊರಿಗೆ ಟಿಕೆಟ್ ಕೊಟ್ಟಿದ್ದಾರೆ ನೋಡಿ ಹೇಳಿ ಎಂದು ನನ್ನ ಬಳಿ ಟಿಕೆಟ್ ಕೊಟ್ಟು ಯಾಚಿಸಿದ ಮುದುಕರೊಬ್ಬರ ಮುಖದಲ್ಲಿ ನಾನು ಕಂಡ–ತನ್ನ ದೇಶದಲ್ಲೇ ತಾನು ಪರದೇಶಿಯಾಗುವ–ಆಳದ ವಿಷಾದದ ಹೊರತಾಗಿ.

ಹೀಗಿರುವಾಗ ಹೇಳಿ, ಯಾವ ಪ್ರಜಾಪ್ರಭುತ್ವವಿದು, ಎಂತಹ ಪ್ರಜಾಪ್ರಭುತ್ವವಿದು? ಇಲ್ಲಿ ಯಾರಿಗೆ, ಯಾವುದಕ್ಕೆ ದೊರೆಕಿರುವುದು ಸ್ವಾತಂತ್ರ್ಯ? ನಿಜವಾಗಿ ಮುಗಿದಿದೆಯೇ ನಮ್ಮ ಪಾರತಂತ್ರ್ಯ? ಪ್ರಜಾಪ್ರಭುತ್ವವನ್ನು ರಕ್ಷಿಸಬೇಕಾದವರೇ ಅದನ್ನು ಭಕ್ಷಿಸತೊಡಗಿದಾಗ, ಪಾರತಂತ್ರ್ಯ ಹಿಂದಿರುಗಿ ಬರಲು ಒಂದಲ್ಲ ಒಂದು ವೇಷದಲ್ಲಿ ಕಾದು ನಿಂತಿರುತ್ತದೆ ಅಲ್ಲವೇ?

ಇದನ್ನು ಕನ್ನಡಿಗರಿಗೆ ಮನವರಿಕೆ ಮಾಡಿಕೊಡುವುದಾದರೂ ಯಾರು? ಹೇಗೆ?

(೧ ಫೆಬ್ರುವರಿ, ೨೦೦೮, ವಿಕ್ರಾಂತ ಕರ್ನಾಟಕ)

೮. ಹುಚ್ಚು ಹೊಳೆಯಲ್ಲಿ ತೇಲುತ್ತಾ ಮುಳುಗುತ್ತಾ.....

ಗೆಳೆಯ ಸುಗತಾ ಶ್ರೀನಿವಾಸರಾಜು ಬರೆದ 'ಬೆಂಗಳೂರೇಕೆ ಐ.ಟಿ. ಸಂಸ್ಕೃತಿಯನ್ನು ದ್ವೇಷಿಸುತ್ತದೆ?' ಎಂಬ ವರದಿಯೊಂದು ಹೋದ ವಾರದ 'ಔಟ್‌ಲುಕ್' ಪತ್ರಿಕೆಯಲ್ಲಿ ಪ್ರಕಟವಾಗಿದೆ. ಈ ವರದಿಯಲ್ಲಿ ಮಾತಾಡಿರುವ ಬೆಂಗಳೂರಿನ ಹಿರಿಯ ನಾಗರೀಕರ ಹಾಗೂ ಅನ್ಯ ವೃತ್ತಿಗಳ ಜನರ ಅಭಿಪ್ರಾಯಗಳಲ್ಲಿ ಹೊಸದೇನಿಲ್ಲ, ನಿಜ. ಆದರೆ ನಮ್ಮ ವಿವೇಕವನ್ನು ಉಳಿಸಿಕೊಂಡು ಜಾಗತೀಕರಣದ ಲಾಭ-ಪ್ರಯೋಜನಗಳನ್ನು ಪಡೆಯಲು ಮುಂದಾಗಬಾರದೇಕೆ ಎಂದು ಪ್ರಶ್ನಿಸುತ್ತಿರುವವರಿಗೆ ಇವುಗಳಲ್ಲಿ ಕೆಲವು ಉತ್ತರಗಳೂ, ಸೂಚನೆಗಳೂ ಇವೆ ಎಂಬ ದೃಷ್ಟಿಯಿಂದ ಈ ವರದಿ ಗಮನಾರ್ಹವೆನಿಸುತ್ತದೆ. ಮುಖ್ಯ ಸೂಚನೆ ಎಂದರೆ, ಒಂದು ಮಿತಿಯನ್ನು ಮೀರಿದ ಹಣದ ಹರಿವು ಎಲ್ಲ ವಿವೇಕವನ್ನೂ ಕೊಚ್ಚಿಕೊಂಡು ಹೋಗಬಲ್ಲುದು ಎಂಬುದು. ಬೆಂಗಳೂರಿನ ಇಂದಿನ ದೊಡ್ಡ ಸಮಸ್ಯೆ ಎಂದರೆ, ಕೆಲವರಿಗೆ ತಮ್ಮ ಬಳಿ ಇದ್ದಕ್ಕಿದ್ದಂತೆ ಬಂದಿರುವ ಅಪಾರ ಹಣವನ್ನು ಹೇಗೆ ಖರ್ಚು ಮಾಡಬೇಕೆಂದು ಗೊತ್ತಾಗದ ದಿಗ್ಭ್ರಮೆಯಲ್ಲಿ ಎಲ್ಲ ವಿವೇಕ ಕಳೆದುಕೊಂಡಿರುವುದೇ ಆಗಿದೆ. ಇವರು 'ಔಟ್‌ಲುಕ್' ವರದಿ ಹೇಳುವಂತೆ, ಬರೀ ಐ.ಟಿ. ಜನರಲ್ಲ. ಬೆಂಗಳೂರಿನ ಐ.ಟಿ.-ಬಿ.ಟಿ. ಆಸ್ಫೋಟದಿಂದ ಪ್ರಯೋಜನ ಪಡೆದುಕೊಂಡಿರುವ ಇತರೆಷ್ಟೋ ವೃತ್ತಿಗಳವರು ಇವರಲ್ಲಿ ಸೇರಿದ್ದಾರೆ. ಉದಾಹರಣೆಗೆ ಭೂ-ವ್ಯವಹಾರ ಮಾಡುವವರು, ಕಟ್ಟಡ ಗುತ್ತಿಗೆದಾರರು, ಷೇರು ದಲ್ಲಾಳಿಗಳು, ಹೊಟೆಲ್-ರೆಸಾರ್ಟ್‌ದಾರರು, ಮನರಂಜನೆ ಹಾಗೂ 'ಅಧ್ಯಾತ್ಮಿಕತೆ'ಯ ಉದ್ಯಮದವರು ಇತ್ಯಾದಿ.

ಇವರೆಲ್ಲ ಸೇರಿ ಕಳೆದ ಐವತ್ತು ವರ್ಷಗಳಲ್ಲಿ ಬೆಂಗಳೂರನ್ನು ಸರಳ ಸುಂದರ ನಗರವನ್ನಾಗಿ ಸಂರಕ್ಷಿಸಿಕೊಂಡು ಬಂದಿದ್ದ ಬಡವರು ಮತ್ತು ಮಧ್ಯಮ ವರ್ಗದವರು ಇಂದು ಇಲ್ಲಿ ಮರ್ಯಾದೆಯಿಂದ ಬಾಳಲಾಗದ ಪರಿಸ್ಥಿತಿಯನ್ನು ನಿರ್ಮಿಸಿದ್ದಾರೆ. ಮರ್ಯಾದೆಯಿಂದ ಬಾಳುವುದು ಎನ್ನುವುದನ್ನು ಕೇವಲ ಜೀವನ ಮಟ್ಟದ ಮಾತನ್ನಾಗಿ ಮಾತ್ರವಲ್ಲ, ಜೀವನ ಶೈಲಿಯ ಮಾತನ್ನಾಗಿಯೂ ಅರ್ಥ ಮಾಡಿಕೊಳ್ಳಬೇಕಿದೆ. ಕಳೆದ ಹೊಸ ವರ್ಷಾಚರಣೆ ಸಂದರ್ಭದಲ್ಲಿ ಬೆಂಗಳೂರು ಒಂದೇ ರಾತ್ರಿಯಲ್ಲಿ ಕುಡಿದದ್ದು ೧೫ ಕೋಟಿ ರೂಪಾಯಿಗಳ ಮದ್ಯವನ್ನು(ರಾಜ್ಯದ ಉಳಿದ ಭಾಗ ಬಳಸಿದ್ದು ೧೦ ಕೋಟಿ ರೂಪಾಯಿಗಳ ಬೆಲೆಯ ಮದ್ಯವನ್ನು!) ಎಂದರೆ, ಬೆಂಗಳೂರು ಒಂದು ಸಂಸ್ಕೃತಿಯಾಗಿ ಎಂತಹ ಮತ್ತಿನಲ್ಲಿರಬೇಕು! ಈ ಮತ್ತಿನಲ್ಲಿ 'ವಿವೇಕ'ವೆಂಬ ಶಬ್ದವೇ ಅರ್ಥಾಂತರಕ್ಕೊಳಗಾಗಿದ್ದರೂ ಸಾಕು!

ಐ.ಟಿ. ಸಂಬಂಧಿತ ಉದ್ಯಮಗಳ ಪಾಳಿ ಕೆಲಸದ ಮಹಿಳೆಯರು ಒಂದಲ್ಲ ಒಂದು

ರೀತಿಯಲ್ಲಿ ಸದಾ ಪ್ರಾಣ ಭಯದಿಂದ ಕೆಲಸ ಮಾಡುವಂತಾಗಿರುವುದು-ಇತ್ತೀಚಿನ ದಿನಗಳಲ್ಲಿ ಕೊಲೆಗೆ ಈಡಾಗುತ್ತಿರುವುದೂ-ಆ ಉದ್ಯಮದ ಸ್ವರೂಪವೇ ಪ್ರೇರೇಪಿಸುವ ಜೀವನ ಶೈಲಿಯಿಂದ ಉದ್ಭವಿಸಿರುವ ಅಪಾಯವಾಗಿದೆ ಎಂಬುದು ಅವರ ಜೀವನ 'ಶೈಲಿ'ಗಳನ್ನು ಹತ್ತಿರದಿಂದ ಕಂಡವರ ಅಭಿಪ್ರಾಯವಾಗಿದೆ. ಇಂದು ಮೂಲ ಬೆಂಗಳೂರಿಗರು ಈ ಹೊಸ 'ಸಾಹುಕಾರ'ರನ್ನು ದ್ವೇಷಿಸಲು ಮುಖ್ಯ ಕಾರಣ; ಅವರು ಬೆಂಗಳೂರಿಗೆ ನಿಜವಾಗಿ ಏನನ್ನೂ ಕೊಡದೆ, ತಮ್ಮ ಜೀವನ ಶೈಲಿಗಳ ಒತ್ತಡಗಳು ಹಾಗೂ ಬೇಡಿಕೆಗಳ ಮೂಲಕ ಈ ನಗರವನ್ನು ನಾಶ ಮಾಡತೊಡಗಿರುವುದು. ಭೌತಿಕವಾಗಿ ಹಾಗೂ ಆತ್ಮಿಕವಾಗಿ-ಈ ಎರಡೂ ನೆಲೆಗಳಲ್ಲಿ. ಇದನ್ನು ಅತ್ಯಂತ ಪರಿಣಾಮಕಾರಿಯಾಗಿ ಇತ್ತೀಚೆಗೆ ಹೇಳಿರುವವರು ಭಾರತದ ಅತ್ಯಂತ ಶ್ರೇಷ್ಠ ವಿಜ್ಞಾನಿ ಎನಿಸಿರುವ ಡಾ॥ ಸಿ.ಎನ್.ಆರ್.ರಾವ್ ಅವರು. ಅವರು 'ಔಟ್‌ಲುಕ್'ಗಾಗಿ ಸುಗತಾ ಅವರಿಗೆ ಹೇಳಿರುವ ಮಾತುಗಳನ್ನು ಇಲ್ಲಿ ಸಂಕ್ಷಿಪ್ತವಾಗಿ ನೀಡುತ್ತಿರುವೆ:

'ನಾನೊಬ್ಬ ನಿಜವಾದ ಬೆಂಗಳೂರಿಗ. ಬಸವನಗುಡಿಯಲ್ಲಿ ಹುಟ್ಟಿ ಬೆಳೆದವನು. ಬೆಂಗಳೂರಿನ ದೊಡ್ಡ ಗುಣ ಎಂದರೆ, ಇಲ್ಲಿ ಸರಳ ಸಂತೋಷಕ್ಕೆ ಅವಕಾಶವಿತ್ತು. ವಿದ್ಯಾರ್ಥಿ ಭವನದಲ್ಲಿ ಒಂದು ಮಸಾಲೆ ದೋಸೆ ತಿಂದು ಕಾಫಿ ಕುಡಿದರೆ ಅದೇ ಒಂದು ದೊಡ್ಡ ಸಂತೋಷ. ಈಗ ಆ ಸಂತೋಷ ಬೆಂಗಳೂರಲ್ಲಿ ಕಾಣೆಯಾಗಿದೆ. ಈಗ ಇದೊಂದು ಭಯಂಕರ ನಗರವಾಗಿ ಬೆಳೆದಿದೆ. ಐ.ಟಿ. ಸ್ಫೋಟದ ಮುನ್ನ ಇಲ್ಲಿ ಕಾವ್ಯ ಹಾಗೂ ಸಂಗೀತ ಹೆಚ್ಚಿರುತ್ತಿತ್ತು. ಇತ್ತೀಚಿನ ದಿನಗಳಲ್ಲಿ ಈ ನಗರ ಕೊಳೆತು ನಾರುತ್ತಿದೆ-ಐ.ಟಿ. ಕೈಗಾರಿಕೆಯವರು ತಂದು ಒಟ್ಟುತ್ತಿರುವ ಬೌದ್ಧಿಕ ಕಸವೂ ಸೇರಿದಂತೆ, ಎಲ್ಲ ತರದ ಕಸ-ಕೊಳೆ ಊರು ತುಂಬಾ ಬಿದ್ದಿದೆ;ವಾತಾವರಣವನ್ನು ಮಲಿನಗೊಳಿಸಿದೆ.

ಬೆಂಗಳೂರು ಒಂದು ಬೌದ್ಧಿಕ ನಗರವಾಗಿತ್ತು. ಇದನ್ನು ತೋಟಗಳ ನಗರ ಎಂದು ಕರೆಯಲಾಗುತ್ತಿತ್ತಾದರೂ, ಭಾರತದ ಇತರ ನಗರಗಳಿಗಿಂತ ಇಲ್ಲಿ ಹೆಚ್ಚು ವಿಜ್ಞಾನವಿತ್ತು. ಈಗ ಯಾರೂ ಈ ಬಗ್ಗೆ ಮಾತಾಡುವುದಿಲ್ಲ. ಇದು ಈಗ ಐ.ಟಿ. ನಗರ. ನಮ್ಮ ಹೆಚ್ಚೆಚ್ಚು ಯುವಜನರಿಗೆ ಒಳ್ಳೊಳ್ಳೆಯ ಸಂಬಳ ಸಿಗುವಂತಾಗುವುದು ಸಂತೋಷದ ವಿಷಯವೇ. ಆದರೆ ಅದು ಇತರ ವೃತ್ತಿಗಳ ಪ್ರಾಣವನ್ನೇ ಹೀರುವಂತಾಗಬಾರದು. ಕ್ಷಿಪ್ರ ಹಣದ ಹಿಂದೆ ಬಿದ್ದ ಬಹಳಷ್ಟು ಬುದ್ಧಿವಂತ ಯುವಜನರು ತಮ್ಮ ಬೌದ್ಧಿಕತೆಯ ಬಹು ಕಡಿಮೆ ಮಟ್ಟದ ವೃತ್ತಿಗಳಲ್ಲಿ, ಸಂಬಳದ ಮೇಲಿನ ಕೂಲಿಗಳಂತೆ ಕೆಲಸ ಮಾಡುತ್ತಿದ್ದಾರೆ. ಇದು ವಕ್ರ ಬೆಳವಣಿಗೆ. ಇದರಿಂದ ರಾಷ್ಟ್ರಕ್ಕೂ ಒಳ್ಳೆಯದಾಗದು. ಸಮಾಜದಲ್ಲಿ ಎಲ್ಲ ರೀತಿಯ ಸೃಜನ ಶಕ್ತಿಗಳ ಸಮತೋಲನವಿರಬೇಕು-ಒಳ್ಳೆಯ ಕವಿಗಳಿರಬೇಕು, ಒಳ್ಳೆಯ ಅರ್ಥಶಾಸ್ತ್ರಜ್ಞರಿರಬೇಕು, ಒಳ್ಳೆಯ ಇತಿಹಾಸಕಾರರಿರಬೇಕು, ಅತ್ಯುತ್ತಮ ವಿಜ್ಞಾನಿಗಳೂ, ಎಂಜಿನಿಯರ್‌ಗಳೂ ಇರಬೇಕು. ಐ.ಟಿ.ಯಲ್ಲಿ ಜಗತ್ತಿನಲ್ಲೇ ಅಪೂರ್ವ ಸಾಧನೆ ಮಾಡಿರುವುದಾಗಿ ಹೇಳಿಕೊಳ್ಳುವ ನಮ್ಮ ದೇಶದಲ್ಲಿ, ಕಂಪ್ಯೂಟರ್ ವಿಜ್ಞಾನ ಕ್ಷೇತ್ರದಲ್ಲಿ ಏಕೆ ವರ್ಷಕ್ಕೆ ಕೇವಲ ೨೫ ಪಿ.ಎಚ್.ಡಿ.ಗಳು ಮಾತ್ರ ಸಾಧ್ಯವಾಗುತ್ತಿದೆ? ಇದಕ್ಕೆ ಉತ್ತರ ಕೊಡುವರಾರು?

ಕೆಲವರಿಗೆ ಅಪಾರ ಹಣ ತಂದು ಕೊಟ್ಟಿರುವುದರ ಹೊರತಾಗಿ ಐ.ಟಿ. ಇಲ್ಲಿ ಏನು ಸಾಧಿಸಿದೆ? ತನ್ನದೇ ಆದ ಒಂದು ಉತ್ತಮ ಗುಣಮಟ್ಟದ ವಿಶ್ವವಿದ್ಯಾಲಯವೊಂದನ್ನು

ಕಟ್ಟಲು ಸಾಧ್ಯವಾಗಿದೆಯಾ ಅದಕ್ಕೆ? ನಮ್ಮ ಈ ಸಮಾಜ; ಈ ನಗರದ ಮಾತ್ರವಲ್ಲ, ಇಡೀ ಭಾರತದ ಭವಿಷ್ಯವನ್ನು, ನಮ್ಮ ಮೌಲ್ಯ ವ್ಯವಸ್ಥೆಯನ್ನು ವಿಕೃತಗೊಳಿಸುತ್ತಿರುವ ಅನುಕರಣೆಯ ಮೂರ್ತಿಗಳನ್ನೂ, ಉದಾಹರಣೆಗಳನ್ನೂ ನಿರ್ಮಿಸುತ್ತಿದೆ. ನಮ್ಮ ಜನಕ್ಕೆ ಜ್ಞಾನ–ವಿಜ್ಞಾನಗಳ ಬಗ್ಗೆ ಗೌರವವೇ ಹೋಗಿಬಿಟ್ಟಿದೆ. ಹಣ ಹಾಗೂ ವಾಣಿಜ್ಯದ್ದೇ ಸಾಮ್ರಾಜ್ಯವೀಗ. ಐ.ಟಿ. ನಮ್ಮ ಆಧಾರ ಮೌಲ್ಯಗಳನ್ನೇ ನಾಶ ಮಾಡಹೊರಡುವುದಾದರೆ, ಬೆಂಗಳೂರಿಗೂ, ಐ.ಟಿ.ಗೂ ಒಟ್ಟಿಗೇ ಬೆಂಕಿ ಹಾಕಬಹುದು.'

ಸಿ.ಎನ್.ಆರ್. ರಾವ್ ಅವರ ಈ ಸಾತ್ವಿಕ ಕೋಪ, ಸದ್ಯದ ಬೆಂಗಳೂರನ್ನು ಕುರಿತಾದದ್ದಾದರೂ; ಬೆಂಗಳೂರು ಐ.ಟಿ. ಲೋಕ ಪ್ರತಿನಿಧಿಸುವ ಕೆಳ ಮಟ್ಟದ ಬೌದ್ಧಿಕತೆಯೊಂದಿಗೆ ಬಹು ಮೇಲ್ಮಟ್ಟದ ಜೀವನ ಶೈಲಿ ಸಾಧ್ಯವಾಗಿ, ಅದಕ್ಕೊಂದು 'ಗೌರವಾನ್ವಿತತೆ' ಒದಗಿಸಿರುವ ಹೊಸ ಜೀವನ ಸಂಸ್ಕೃತಿಯನ್ನು ಕುರಿತಾದದ್ದೂ ಆಗಿದೆ ಎಂಬುದನ್ನೂ ನಾವು ಗಮನಿಸಬೇಕು. ದಿನೇ ದಿನೇ ಬಹು ಜನಪ್ರಿಯವಾಗುತ್ತಿರುವ– ಅಂದರೆ ಈ 'ಗೌರವಾನ್ವಿತತೆ'ಗೆ ಪಾತ್ರವಾಗುವ ಹಂಬಲ ಇಟ್ಟುಕೊಂಡವರ–ಈ 'ಕು'ಸಂಸ್ಕೃತಿ ಉಂಟು ಮಾಡುತ್ತಿರುವ ಸಾಮಾಜಿಕ ಒತ್ತಡಗಳನ್ನು ಯಾರೂ ಅಷ್ಟು ಗಂಭೀರವಾಗಿ ಗಮನಿಸಿದಂತಿಲ್ಲ: ಮಕ್ಕಳು ಪೋಷಕರ ನಿರೀಕ್ಷೆ ಮುಟ್ಟಲಾಗದೆ ಆತ್ಮಹತ್ಯೆಗೆ ಶರಣಾಗುತ್ತಿವೆ; ಹದಿ ಹರೆಯಕ್ಕೂ ಕಾಲಿಡದ ಹುಡುಗರು ಸುಪಾರಿ ಪಡೆದು ಕೊಲೆಗಳಿಗೆ ಕೈ ಹಾಕತೊಡಗಿದ್ದಾರೆ, ಉನ್ನತ ಮಟ್ಟದ ಶಾಲೆಗಳಲ್ಲಿ ಮಕ್ಕಳು ತಮ್ಮ ಬಾಲ ಜಗಳಗಳನ್ನು ಅಪ್ಪನ ಪಿಸ್ತೂಲನ್ನು ಬಳಸಿ ಪರಿಹರಿಸಕೊಳ್ಳತೊಡಗಿದ್ದಾರೆ; ಮಕ್ಕಳಿಗೆ ಉದಾಹರಣೆಗಳಾಗಬೇಕಾಗಿರುವ ಉಪಾಧ್ಯಾಯರುಗಳೇ ಪರೀಕ್ಷಾ ಉತ್ತರ ಪತ್ರಿಕೆಗಳನ್ನು ಬದಲಾಯಿಸುವುದನ್ನು ಒಂದು ದಂಧೆ ಮಾಡಕೊಳ್ಳತೊಡಗಿದ್ದಾರೆ; ವಿಶ್ವವಿದ್ಯಾಲಯಗಳ ಪ್ರಶ್ನೆ ಪತ್ರಿಕೆಗಳು ಯಾವುದೇ ಅಡೆತಡೆ ಇಲ್ಲದೆ ಒಂದಾದರ ಮೇಲೊಂದರಂತೆ ಬಯಲಾಗುತ್ತಲೇ ಇವೆ; ಕಣ್ಣೆದುರಿಗೇ ನೂರಾರು ಕಾರ್ಮಿಕರನ್ನೂ, ಯಂತ್ರಗಳನ್ನೂ ಬಳಸಿಕೊಂಡು ಸಾವಿರಾರು ಎಕರೆ ಭೂಮಿಯಲ್ಲಿ ಅಕ್ರಮ ಗಣಿಗಾರಿಕೆ ನಡೆಯುತ್ತಿದ್ದರೂ, ಪ್ರಭುತ್ವಕ್ಕೆ ಅದನ್ನು ಗಮನಿಸಲಾಗದಂತಹ ಕುರುಡು ಉಂಟಾಗಿದೆ;ಸರ್ಕಾರಿ ಖಜಾನೆಯನ್ನು ಲೂಟಿ ಹೊಡೆದು ಮೂಟೆಗಟ್ಟಲೆ ಹಣ ಸಂಗ್ರಹಿಸಿಟ್ಟುಕೊಂಡು, ಆದರೆ ಕಿಂಚಿತ್ತೂ ಸಂಕೋಚವಿಲ್ಲದೆ ರಾಷ್ಟ್ರ ನಿರ್ಮಾಣದ ಮೌಲ್ಯಗಳ ಬಗ್ಗೆ ಮಾತಾಡುವ ರಾಜಕಾರಣಿಗಳು; ಹಾಗೂ ಅದಕ್ಕಿಂತ ಮುಖ್ಯವಾಗಿ, ಎಲ್ಲ ಗೊತ್ತಿದ್ದೂ ಅವರ ಮಾತುಗಳಿಗೆ ಮೆಚ್ಚುಗೆಯಿಂದ ಚಪ್ಪಾಳೆ ತಟ್ಟುವ–ಆತ್ಮಸಾಕ್ಷಿ ಕಳೆದುಕೊಂಡ–ಮಹಾ ಘಾತುಕ ಜನಸ್ತೋಮವೊಂದು ಇಂದು ದೊಡ್ಡದಾಗಿ ಎದ್ದು ನಿಂತಿದೆ.

ಹೀಗೆ ಇಡೀ ವ್ಯವಸ್ಥೆ ಕುಸಿದು ಅರಾಜಕವಾಗುವ ಶೀಲ ಶಿಥಿಲತೆಯ ಭಯಾನಕ ಉದಾಹರಣೆಗಳು ಒಂದೊಂದೇ ಬೆಳಕಿಗೆ ಬರತೊಡಗಿದ್ದರೂ, ನಾವು–ಸಾಮಾನ್ಯ ಜನ– ಇದೆಲ್ಲ ಎಲ್ಲ ಕಾಲದಲ್ಲೂ ಇರುವಂತಹುದೇ ಎಂದು ಈ ಬಗ್ಗೆ ಒಂಚೂರೂ ವಿಚಲಿತರಾಗದೆ; ಲೋಕಾಭಿರಾಮವಾಗಿ, ಹೊಸ ಭೋಗವಾದದ ಏಣಿ ಹತ್ತಿ ಆಕಾಶ ಮುಟ್ಟುವ ರೋಮಾಂಚನದ ನಮ್ಮ ಅವಕಾಶಕ್ಕಾಗಿ ಸರತಿ ಸಾಲಿನಲ್ಲಿ ಕಾದು ನಿಂತಿದ್ದೇವೆ. ಅಷ್ಟು ಅಪ್ಯಾಯಮಾನವಾಗಿದೆ, ಅಮಲಿನಿಂದ ಕೂಡಿದೆ ಈ ಹೊಸ ಗ್ರಾಹಕ 'ಮಾಲ್' ಜಗತ್ತು! ಇಲ್ಲದಿದ್ದರೆ–ಎಲ್ಲ ದೇಶಗಳು

ತಂತಮ್ಮ ಉತ್ಪಾದನಾ ಹಾಗೂ ಬಳಕೆದಾರಿಕೆಯ ಪದ್ಧತಿ ಹಾಗೂ ವಿನ್ಯಾಸಗಳನ್ನು ಬದಲಿಸಿಕೊಂಡು ವಿಷಕಾರಿ ಇಂಗಾಲದ ಅನಿಲಗಳ ವಿಸರ್ಜನೆಯನ್ನು ಕ್ರಮೇಣ ಶೇ.೬೫ರಿಂದ ೪೫ರಷ್ಟು ಕಡಿಮೆ ಮಾಡಿಕೊಳ್ಳದಿದ್ದಲ್ಲಿ, ಇನ್ನು ಕೆಲವೇ ವರ್ಷಗಳಲ್ಲಿ ಅರ್ಧ ಜಗತ್ತು ಪ್ರವಾಹಗಳಿಗೆ ಸಿಕ್ಕಿ ಮುಳುಗುವುದು; ಹಾಗೆ ಮುಳಗದೆ ಉಳಿದ ಇನ್ನರ್ಧ ಜಗತ್ತು ಬೆಂದು ಉಸಿರು ಕಟ್ಟಿ ಸಾಯುವುದು ಎಂಬ ಪರಿಸರ ವಿಜ್ಞಾನಿಗಳ ಕಟು ಎಚ್ಚರಿಕೆಯ ಬಗ್ಗೆ–ಮೊನ್ನೆ ಬಾಲಿಯಲ್ಲಿ ಮುಕ್ತಾಯಗೊಂಡ ಹವಾಮಾನ ಬದಲಾವಣೆ ಕುರಿತ ವಿಶ್ವ ಸಮ್ಮೇಳನ ಅಷ್ಟು ಲಘುವಾದ ನಡಾವಳಿಯನ್ನೇಕೆ ಅಳವಡಿಸಿಕೊಳ್ಳುತ್ತಿತ್ತು?

ಭಾರತವೇನೋ, ಸ್ವಚ್ಛ ತಂತ್ರಜ್ಞಾನದ ವರ್ಗಾವಣೆಯ ಆಗ್ರಹದ ತನ್ನ ನಿಲುವು ಯಶಸ್ವಿಯಾಗಿದೆ ಎಂದು ಹೇಳಿಕೊಳ್ಳುತ್ತಿದೆ. ಆದರೆ ಕ್ಯೋಟೋ ಒಪ್ಪಂದಂತೆ ಯಾವ ದೇಶವೂ ವಿಷಕಾರಿ ವಿಸರ್ಜನೆಯ ತನ್ನ ಗುರಿಗಳನ್ನು ಮುಟ್ಟಲಾಗದಿರುವ ಮತ್ತು ಸದ್ಯದ ಅತಿ ಗ್ರಾಹಕವಾದಿ ಹಾಗೂ ಅಪಾರ ಕಸೋತ್ಪತ್ತಿಯ ಹೊಸ ಜೀವನ ಶೈಲಿಯ ಹರಿಕಾರನಾದ ಅಮೆರಿಕಾದ ಮೇಲೆ ಮಾಲಿನ್ಯ ತಡೆಯ ನಿರ್ದಿಷ್ಟ ಗುರಿಗಳನ್ನು ಒಪ್ಪಿಕೊಳ್ಳುವಂತೆ ಒತ್ತಡ ಹೇರಲಾಗದಿರುವ ದೌರ್ಬಲ್ಯ–ಅಸಹಾಯಕತೆಗಳೊಂದಿಗೆ ಈ ಸಮ್ಮೇಳನ ಮುಕ್ತಾಯಗೊಂಡಿದೆ. ೨೦೦೯ರ ಕೋಪನ್ ಹೇಗನ್ ಸಮ್ಮೇಳನದ ಹೊತ್ತಿಗೆ ಎಲ್ಲ ದೇಶಗಳೂ ಒಪ್ಪುವಂತಹ ನಿರ್ದಿಷ್ಟ ಗುರಿಗಳ ಒಪ್ಪಂದವನ್ನು ಸಿದ್ಧಪಡಿಸುವ ಆಶಯವನ್ನಷ್ಟೆ ಇದು ವ್ಯಕ್ತಪಡಿಸಿದೆ! ಜಗತ್ ವಿನಾಶಕವಾದ ಈ ದೌರ್ಬಲ್ಯಗಳಿಗೆ ಮುಖ್ಯ ಕಾರಣ, ಪ್ರತಿ ದೇಶವೂ ಹೊಸ ಕೈಗಾರಿಕೀಕರಣದ ಸ್ಪರ್ಧೆಯಲ್ಲಿದ್ದು, ಯಾವ ದೇಶಕ್ಕೂ ತನ್ನ 'ಪ್ರಗತಿ'ಯ ನೆಲೆಗಳನ್ನು ಬದಲಾಯಿಸಿಕೊಳ್ಳಬೇಕೆಂಬ ಅರಿವೇ ಉಂಟಾಗದಂತಹ ಹೊಸ ಜೀವನ ಶೈಲಿಯ ಅಮಲಿನಲ್ಲಿರುವುದು. ಹೀಗಾಗಿ ಜಗತ್ತಿನ 'ಅಮೆರಿಕನ್ನೀಕರಣ'ವೆಂಬ ಜಾಗತೀಕರಣ ಪ್ರಕ್ರಿಯೆ, ಒಂದು ಜಾಗತಿಕ ರಾಜಕೀಯ ಕಾರ್ಯಕ್ರಮವಾಗಿ ಎಗ್ಗಿಲ್ಲದೆ ಸಾಗಿದೆ. ಬೆಂಗಳೂರೂ, ನಾವೂ, ನಮ್ಮ ಮಕ್ಕಳೂ ನಮ್ಮದೇ ರೀತಿಯ ಪ್ರತಿರೋಧಗಳ ನಡುವೆಯೂ ಇದಕ್ಕೆ ಹೊರತಾಗಲಾರದ ಪರಿಸ್ಥಿಗೆ ಸಿಕ್ಕಿ ಬಿದ್ದಿದ್ದೇವೆ. ಇದರ ಮಧ್ಯೆ ವಿವೇಕವನ್ನು ಹುಡುಕುವುದು ಕುರುಕ್ಷೇತ್ರದ ಮಧ್ಯೆ ಧರ್ಮವನ್ನು ಹುಡುಕಿದಂತೆಯೇ ಸರಿ. ಆದರೂ ಧರ್ಮ ಉಳಿದು ಕಾಣಿಸಿಕೊಳ್ಳಲೇ ಬೇಕಲ್ಲ! ಉಳಿಯದಿದ್ದರೆ ಅದು ಧರ್ಮವಾದರೂ ಹೇಗಾದೀತು?

ಬಹುಶಃ ಈ ಆಸೆಯಲ್ಲೇ, ಈ ನಿರೀಕ್ಷೆಯಲ್ಲೇ ಸಿ.ಎನ್.ಆರ್. ರಾವ್ ಹಾಗೂ ಅವರಂತೆ ಯೋಚಿಸುವ ಜನ ಇನ್ನೂ ಭರವಸೆಯಿಂದ ಬದುಕಿರುವುದು!

(ಡಿಸೆಂಬರ್ ೨೮, ೨೦೦೭, 'ವಿಕ್ರಾಂತ ಕರ್ನಾಟಕ')

೯. ಬೆಂಗಳೂರೆಂಬ ರ‍್ಾಕ್ಷಸ ನಗರಿಯೂ, ಭಯೋತ್ಪಾದನೆಯೂ...

ಹನೀಫ್, ಕಫೀಲ್ ಮತ್ತು ಸಬೀಲ್‌ರೆಂಬ ಮೂವ್ವರು ಸೋದರ ಸಂಬಂಧಿಗಳ ಭಯೋತ್ಪಾದನಾ ಸಾಹಸಗಳ ಸುದ್ದಿಯಿಂದ ಕಂಗೆಟ್ಟಿರುವ ಬೆಂಗಳೂರಿನ ಜನತೆ ತನ್ನ ಇತ್ತೀಚಿನ ಜಾಯಮಾನಕ್ಕೆ ತಕ್ಕಂತೆ, 'ವಿಪ್ರೋ'ದ ಮುಖ್ಯಸ್ಥ ಅಜೀಂ ಪ್ರೇಮ್‌ಜಿ ಎಂಬ ಪಾರ್ಸಿ ಉದ್ಯಮಿಯ ಮೂಲಕ ತನ್ನ ಆತಂಕವನ್ನು ವ್ಯಕ್ತಪಡಿಸಿದೆ. ಈ ಪ್ರೇಮ್‌ಜಿ ಪ್ರಕಾರ, ಬೆಂಗಳೂರು ಭಯೋತ್ಪಾದನೆಯ ತಾಣವಾಗುತ್ತಿರುವುದರಿಂದ ಆಗುತ್ತಿರುವ ದೊಡ್ಡ ತೊಂದರೆ ಎಂದರೆ, ತಮ್ಮಂತಹವರೆಲ್ಲ ಸೇರಿ ರೂಪಿಸಿದ್ದ ಬೆಂಗಳೂರೆಂಬ ವಾಣಿಜ್ಯ ಮುದ್ರೆ (Brand)ಗೆ ಧಕ್ಕೆಯೊದಗಿರುವುದು! ಇನ್ನು ಈ ಹೊತ್ತಿಗಾಗಲೇ ಈ ವಿಷಯದಲ್ಲಿ ಬಾಯಿ ಹಾಕಿ ಸರ್ಕಾರವನ್ನು ತರಾಟೆಗೆ ತೆಗೆದುಕೊಳ್ಳಬೇಕಿದ್ದ ಇನ್ಫೋಸಿಸ್‌ನ ನಾರಾಯಣ ಮೂರ್ತಿಯವರು ಇತ್ತೀಚೆಗೆ ರಾಷ್ಟ್ರಗೀತೆ ಗಾಯನದ ಅಧಿಕ ಪ್ರಸಂಗದ ಮೊಕದ್ದಮೆಯನ್ನು ಕುತ್ತಿಗೆಗೆ ತೂಗು ಹಾಕಿಕೊಂಡಿರುವುದರಿಂದಾಗಿ, ಸದ್ಯಕ್ಕೆ ಬಾಯಿ ಮುಚ್ಚಿಕೊಂಡಿದ್ದಾರೆ. ಆದರೆ, ಅವರ ವಕ್ತಾರರು ತಮ್ಮ ಕಂಪನಿಯ ವಿಸ್ತರಣೆ ಇನ್ನು ಪುಣೆಯಲ್ಲಿ ಎಂದು ಹೇಳುವ ಮೂಲಕ ಬೆಂಗಳೂರನ್ನು ಕುರಿತ ತಮ್ಮ ಅಸಮಧಾನವನ್ನು ತೋಡಿಕೊಂಡಿದ್ದಾರೆ. ಇದಕ್ಕೆ ಅಭದ್ರತೆಯ ಕಾರಣ ನೀಡಿಲ್ಲವಾದರೂ, ಮೂಲ ಸೌಲಭ್ಯಗಳನ್ನು ಒದಗಿಸುವಲ್ಲಿ ಸರ್ಕಾರದ ವೈಫಲ್ಯವನ್ನು ಅವರು ಮುಂದು ಮಾಡಿದ್ದಾರೆ. ಇನ್ನು ಬಿ.ಟಿ. ರಾಣಿ ಕಿರಣ್ ಮಜ್ಞುಂದಾರ್‌ದೇನೂ ಸುದ್ದಿಯಿಲ್ಲ. ಬಹುಶಃ ಆಕೆ ಬೆಂಗಳೂರಿಗೆ ಅನಂತಮೂರ್ತಿಯವರು ಕೊಡಲಾಗದಂತಹ ಕೊಡುಗೆಯನ್ನು ಕೊಟ್ಟೇ ಬೆಂಗಳೂರು ಬಿಡುವ ನಿರ್ಧಾರ ಮಾಡುವರೆಂದು ಕಾಣುತ್ತದೆ! *ಒಟ್ಟಿನಲ್ಲಿ ಬೆಂಗಳೂರು ತನ್ನ ಬೆಳವಣಿಗೆಯಲ್ಲಿ ಸೋಲುತ್ತಿರುವ ಸೂಚನೆಗಳು ಬರತೊಡಗಿವೆ... ಏಕೆ?

ಬೆಂಗಳೂರೀಗ ಕನ್ನಡದ ರಾಜಧಾನಿಯಾಗಿದ್ದರೆ ಅದು ವಾಟಾಳ್ ನಾಗರಾಜ್ ಮತ್ತು ಕರ್ನಾಟಕ ರಕ್ಷಣಾ ವೇದಿಕೆಯವರಿಗೆ ಮಾತ್ರ. ಇತರರಿಗೆಲ್ಲ ಅದು ಜಗತ್ತಿನ ಎಲ್ಲರಿಗೂ ಸೇರಿದ ಜಾಗತಿಕ ನಗರ! ಹಾಗಾಗಿ ಬೆಂಗಳೂರೆಂಬುದು ಒಂದು ಜಾಗತಿಕ ವಾಣಿಜ್ಯ ಮುದ್ರೆ. ಈ ಮುದ್ರೆ ಬಿದ್ದದ್ದು ಐ.ಟಿ. ಅಥವಾ ಬಿ.ಟಿ. ಬಂದ ಮೇಲೆ ಎಂಬುದು ನಿಜವಾದರೂ, ಇದರ ಅಚ್ಚು ಸಿದ್ಧವಾಗತೊಡಗಿದ್ದು ದೇವರಾಜ ಅರಸರ ಕಾಲದಲ್ಲಿ; ಬಿ.ಟಿ.ಸೋಮಣ್ಣ

---

* ಇವರು ಅನಂತಮೂತಿ ಬೆಂಗಳೂರಿನ ಬಗ್ಗೆ ಮಾತಾಡಲು ಬೆಂಗಳುರಿಗೆ ಅವರ ಕೊಡುಗೆಯೇನು ಎಂದು ಪ್ರಶ್ನಿಸಿದ್ದರು!

ಎಂಬುವವರು ಬೆಂಗಳೂರು ನಗರಾಭಿವೃದ್ಧಿ ಮಂಡಳಿಯ ಅಧ್ಯಕ್ಷರಾಗಿ ಆರಂಭಿಸಿದ ನಿವೇಶನ ಹಂಚಿಕೆಯ ಅವ್ಯವಸ್ಥೆಯೊಂದಿಗೆ. ನಗರಾಭಿವೃದ್ಧಿ ಎಂದರೆ ಕೇವಲ ಭೌಗೋಳಿಕ ವಿಸ್ತರಣೆ ಎಂಬ ಸರಳಾರ್ಥದಲ್ಲಿ, ಸಿಕ್ಕ ಸಿಕ್ಕವರಿಗೆ ಎಲೆಯಡಿಕೆ ಮಡಿಚಿ ಕೊಟ್ಟಂತೆ ನಿವೇಶನ ಮಂಜೂರು ಮಾಡುವ ಸೋಮಣ್ಣನವರ ಹುಂಬತನದಿಂದಾಗಿ, ಬೆಂಗಳೂರು ಮುಂದಿನ ಹತ್ತಿಪ್ಪತ್ತು ವರ್ಷಗಳಲ್ಲಿ ಎಂತಹ ನಗರವಾಗಿ ಬೆಳೆಯ ಬೇಕೆಂಬ ಕಲ್ಪನೆಯೇ ಅಭಿವೃದ್ಧಿ ಚೌಕಟ್ಟಿನಿಂದ ಮರೆಯಾಗಿ ಹೋಯಿತು. ಮುಂದೆ ಇದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವೆಂದಾದ ಮೇಲಂತೂ, ಇದರ ಅಧ್ಯಕ್ಷತೆ ಎಂದರೆ ಕಾಸು ಮಾಡಿಕೊಳ್ಳುವ ಮತ್ತು ಮಾಡಿಕೊಡುವ ಫಲವತ್ತಾದ ಜಾಗವಾಗಿ ಮಾರ್ಪಾಡಾದ ಕಾರಣ, ಬೆಂಗಳೂರು ಅಭಿವೃದ್ಧಿ ಎಂಬುದು ಒಂದು ಬೃಹತ್ ರಿಯಲ್ ಎಸ್ಟೇಟ್ ದಂಧೆಯಾಗಿ, ಬೆಂಗಳೂರು ನಗರ ಸಂಪೂರ್ಣ ಹೊರಗಿನ ವಾಣಿಜ್ಯ ಶಕ್ತಿಗಳ ವಸಾಹತುವಾಗಿ ರೂಪುಗೊಳ್ಳತೊಡಗಿತು.

ತೊಂಭತ್ತರ ದಶಕದಲ್ಲಿ ಜಾಗತೀಕರಣ ಆರಂಭವಾಗುವ ಮುನ್ನವೇ, ಬೆಂಗಳೂರು ಕೇಂದ್ರವನ್ನು ಕಳೆದುಕೊಂಡ ವೃತ್ತದಂತೆ ಅಸ್ಥಿರವಾಗಿ ಬೆಳೆಯತೊಡಗಿತ್ತು. ಬೆಂಗಳೂರಿನ 'ಪರಿಮಳ' ನಾಶವಾಗಿ ಮೂಲ ಬೆಂಗಳೂರಿಗರೇ ಇಲ್ಲಿ ಅನಾಥರಂತೆ ಓಡಾಡಬೇಕಾದ ಸಾಂಸ್ಕೃತಿಕ ಸ್ಥಿತ್ಯಂತರವೊಂದು ನಡೆಯತೊಡಗಿತ್ತು. ಬಹು ಹಿಂದಿನಿಂದಲೂ, ತೆಲುಗರು, ತಮಿಳರು ಮಾತ್ರವಲ್ಲ, ಮರಾಠರು ಮತ್ತು ಗುಜರಾತಿಗಳು ಸೇರಿದಂತೆ ಅನೇಕ ಜಾತಿ-ಜನಾಂಗಗಳು ಬೆಂಗಳೂರಲ್ಲಿ ನೆಲೆಸಿ, ಕನ್ನಡಿಗರೊಂದಿಗೆ ಸೇರಿ ರೂಪಿಸಿದ ಒಂದು ಸಾಮಾನ್ಯ ಜೀವನ ಕ್ರಮದ ಮೂಲಕ ನಗರಕ್ಕೆ ತನ್ನದೇ ಆದ ಒಂದು ಸಾಂಸ್ಕೃತಿಕ ಪರಿಮಳವನ್ನು ಸೃಷ್ಟಿಸಿದ್ದವು. ಆದರೆ ಎಪ್ಪತ್ತರ ದಶಕದಲ್ಲಿ ಕರ್ನಾಟಕದ ರಾಜಕಾರಣದಲ್ಲಿ ಹಣದ ಪ್ರಭಾವ ಹೆಚ್ಚಿದಂತೆ ಬೆಂಗಳೂರಿನ ಈ ಪರಿಮಳ ನಾಶವಾಗತೊಡಗಿತು. ವಿಪರೀತ ಹಣದ ಆಕರ್ಷಣೆಗೆ ಒಳಗಾದ ನಮ್ಮ ಆಡಳಿತಗಾರರು, ನಗರವೊಂದರ ಅಭಿವೃದ್ಧಿಯ ಪರಿಕಲ್ಪನೆಯಲ್ಲಿ ರಸ್ತೆ, ನೀರು, ಚರಂಡಿ, ದೀಪ, ಉದ್ಯಾನಗಳ ಜೊತೆಗೇ ಅದರ ಮೂಲ ಸಂಸ್ಕೃತಿಯ ಸಂರಕ್ಷಣೆಯ ಅಂಶವೂ ಸೇರಿರಬೇಕೆಂಬ ಅರಿವನ್ನೇ ಕಳೆದುಕೊಂಡರು. ಇವರು ಹಣದ ಥೈಲಿ ತಂದವರಿಗೆಲ್ಲಾ ಒಂದಲ್ಲ ಒಂದು ನೆಪದಲ್ಲಿ ನಿವೇಶನ-ಭೂಮಿಯನ್ನು ಹಂಚುತ್ತಾ ಹೋಗಿ, ಇಂದು ಬೆಂಗಳೂರನ್ನು ಒಂದು ರಾಕ್ಷಸ ನಗರಿಯನ್ನಾಗಿ ಪರಿವರ್ತಿಸಿದ್ದಾರೆ.

ಬೆಂಗಳೂರು ಹೊರಕ್ಕೆ ಚಾಚಿಕೊಂಡಷ್ಟೂ ಒಳಕ್ಕೆ ಹಿಚುಕಿಕೊಳ್ಳುತ್ತಾ ಹೋಗುತ್ತಿದ್ದರೆ, ಭೌಗೋಳಿಕವಾಗಿ ವಿಸ್ತರಿಸಿಕೊಂಡಷ್ಟೂ ಅದರೊಳಗಿನ ಜನಕ್ಕೆ ಉಸಿರುಗಟ್ಟುತ್ತಾ ಹೋಗುತ್ತಿದ್ದರೆ ಅದಕ್ಕೆ ಕಾರಣ, ಅದರ ಅಸಮರ್ಪಕ ರಸ್ತೆ-ಸಾರಿಗೆ-ನೀರು-ವಿದ್ಯುತ್-ಚರಂಡಿ ಇತ್ಯಾದಿ ವ್ಯವಸ್ಥೆಗಳಿಗಿಂತ ಹೆಚ್ಚಾಗಿ, ಅದರ ಸ್ಥಳೀಯ ಸಂಸ್ಕೃತಿಯ ಅಡಿಗಲ್ಲೇ ಅಲುಗಾಡಿ ಹೋಗಿರುವುದೇ ಕಾರಣವಾಗಿದೆ. ಇಂದು ಬೆಂಗಳೂರಿನಲ್ಲಿ ಬೆಂಗಳೂರಿಗನೇ ಅಪರಿಚಿತ-ಅಭದ್ರ! ಅವನ ಭಾಷೆಯಿಂದ ಹಿಡಿದು ಅವನ ಜೀವನ ಕ್ರಮ, ಶೈಲಿ, ಲಯ, ದೃಷ್ಟಿಗಳೆಲ್ಲವೂ ಕಳೆದ ಇಪ್ಪತ್ತು ವರ್ಷಗಳಲ್ಲಿ ಬಂದು ನಗರವನ್ನು ಆಕ್ರಮಿಸಿಕೊಂಡ ಹೊರಗಿನ ಜನಸ್ತೋಮದ ಎದುರು 'ಗುಜರಿ'ಯಾಗಿ ಹೋದಂತೆ ಕಾಣುತ್ತಿದೆ... ಇದು ಯಾವುದೇ ಜನವಸತಿ ಬೆಳೆಯುವ ರೀತಿಯಲ್ಲ. ಹೊರಗಿನಿಂದ ಬಂದವರು ಮೂಲ ಸಂಸ್ಕೃತಿಯಲ್ಲಿ ಬೆರೆತು ಅದಕ್ಕೆ ಕೊಡುಗೆಗಳನ್ನು

ಸಲ್ಲಿಸಿ ಅದನ್ನು ಬೆಳೆಸುವಂತಾಗಬೇಕು. ಅಂತಹುದನ್ನು ವಿಕಾಸ ಎಂದು ಕರೆಯಬಹುದು. ಆದರೆ ಕಳೆದ ಹದಿನೈದು–ಇಪ್ಪತ್ತು ವರ್ಷಗಳಲ್ಲಿ ಬೆಂಗಳೂರಲ್ಲಿ ಅಭಿವೃದ್ಧಿಯ ಹೆಸರಿನಲ್ಲಿ ನಡೆದಿರುವುದು ಸಾಂಸ್ಕೃತಿಕ ಆಕ್ರಮಣ. ಇಂದು ಬೆಂಗಳೂರು ಒಂದು ಊರಾಗಿ ಉಳಿದಿಲ್ಲ. ಬದಲಿಗೆ ಹಲವು 'ಸಂಸ್ಕೃತಿ'ಗಳ ಮೇಲಾಟದಲ್ಲಿ ತೊಡಗಿರುವ ಯುದ್ಧಭೂಮಿಯಂತೆ ಕಾಣುತ್ತಿದೆ. ಇದು ನಗರ ಜೀವನದ ಚಲನಶೀಲಾತ್ಮಕತೆಯ ದೃಷ್ಟಿಯಿಂದ ಅನಪೇಕ್ಷಣೀಯವಲ್ಲವಾದರೂ, ಈ 'ಸಂಸ್ಕೃತಿ'ಗಳು ಮೂಲತಃ ವಾಣಿಜ್ಯೋದ್ದೇಶಗಳ ಸಂಸ್ಕೃತಿಗಳಾಗಿರುವುದರಿಂದ, ಇಂತಹ ಮೇಲಾಟದಲ್ಲಿ ಉದ್ಭವವಾಗುವುದು ಅಮೃತಕ್ಕಿಂತ ವಿಷವೇ ಹೆಚ್ಚು. ಇದು ಇತ್ತೀಚಿನ ದಿನಗಳಲ್ಲಿ ಬೆಂಗಳೂರಿನ ಜನಜೀವನ ಎದುರಿಸುತ್ತಿರುವ ಭಯಂಕರ ಸವಾಲುಗಳಿಂದಲೇ ಸ್ಪಷ್ಟವಾಗುತ್ತಿದೆ.

ಬಡ ಹಾಗೂ ಮಧ್ಯಮ ವರ್ಗದವರ ಪಾಲಿಗೆ ಕ್ಷಿಪ್ರ ಗತಿಯಲ್ಲಿ ಏರುತ್ತಿರುವ ಜೀವನ ವೆಚ್ಚ, ಇದ್ದಕ್ಕಿದ್ದಂತೆ ಸೃಷ್ಟಿಯಾಗುತ್ತಿರುವ ಕಣ್ಣು ಕೋರೈಸುವಂತಹ ಅತಿ ಸಮೃದ್ಧಿಯ ದ್ವೀಪಗಳು, ಇವು ಉದ್ದೀಪಿಸುವ 'ದುಡಿಮೆ'ಯ ಅಡ್ಡದಾರಿಗಳು, ಇದರ ಪರಿಣಾಮವಾಗಿ ಆರಂಭವಾಗಿರುವ ವೈವಿಧ್ಯಮಯ, ನವ ನವೀನ ಹಾಗೂ ಕಲ್ಪನಾತೀತ ಅಪರಾಧಗಳು, ಇವಕ್ಕೆಲ್ಲ ನೆಲೆಯೊದಗಿಸುತ್ತಿರುವ ವಿಕೃತ ಮನರಂಜನಾ ತಾಣಗಳು, ಶಾಂತಿ ಸಾಧನೆಯ ವ್ಯಾಪಾರಿ ಕೇಂದ್ರಗಳು, ವ್ಯಕ್ತಿಗಳು ಮತ್ತು ಸಂಸ್ಥೆಗಳು ರೂಪಿಸಿಕೊಳ್ಳುತ್ತಿರುವ ಖಾಸಗಿ ಭದ್ರತಾ ವ್ಯವಸ್ಥೆಗಳು– ಹೀಗೆ, ಬೆಂಗಳೂರು ಕೇಂದ್ರ ಕಳೆದುಕೊಂಡ ಒಂದು'ಸಂಸ್ಕೃತಿ'ಯಂತೆ 'ಅನಾಗರಿಕ'ವಾಗಿ ಬೆಳೆಯತೊಡಗಿದೆ. ಆದರೆ ನಮ್ಮ ಆಡಳಿತಗಾರರು ಇದೇ ಹೊಸ ನಾಗರಿಕ ಜೀವನವೆಂಬಂತೆ, ಇದಕ್ಕೊಂದು ಸುವ್ಯವಸ್ಥಿತ ರೂಪ ಕೊಡಲು 'ಬೃಹತ್ ಬೆಂಗಳೂರು' ಎಂಬ ಸಾವಿರಾರು ಕೋಟಿ ರೂಪಾಯಿಗಳ ವೆಚ್ಚದ ಹೊಸ ಯೋಜನೆಯನ್ನು ಪ್ರಕಟಿಸಿದೆ! ಆದರೆ ಬೆಂಗಳೂರಿಗಿಂತ ಪ್ರಾಚೀನವಾದ ಹಾಗೂ ದೊಡ್ಡದಾಗಿ ಬೆಳೆಯುತ್ತಿರುವ ಕೊಲ್ಕತ್ತಾವಾಗಲಿ ಅಥವಾ ಚೆನ್ನೈಯಾಗಲಿ ಹೀಗೆ ತಂತಮ್ಮ ಮೂಲ ಚಹರೆಗಳನ್ನು ಕಳೆದುಕೊಂಡು ದೆವ್ವದಂತಹ ನಗರಗಳಾಗಿ, ಅಲ್ಲಿನ ಜನಜೀವನದ 'ಶೀಲ'ದಲ್ಲಿ ಬಿರುಕು ಮೂಡಿಸಿಲ್ಲ. ಈ ನಗರಗಳ ಅಥವಾ ಬೆಂಗಳೂರಿನ ಜೊತೆ ಸ್ಪರ್ಧಿಸಿ ಸರಿಸಮವಾಗಿ ಬೆಳೆಯುತ್ತಿರುವ ಹೈದರಾಬಾದ್‌ನ ಯಾವ ಮೂಲೆಗೆ ಹೋದರೂ, ಅಲ್ಲಿನ ಸ್ಥಳೀಯತೆಯ ಪರಿಮಳ ಅಲ್ಲಿನ ಜೀವನ ಕ್ರಮಗಳ ವಿವಿಧ ಮಾದರಿಗಳ ಮೂಲಕ ನಿಮ್ಮ ಪಂಚೇದ್ರಿಯಗಳಿಗೆ ರಾಚುತ್ತದೆ.

ಈ ಎಲ್ಲ ಮಾದರಿಗಳಿಗೆ ಮೂಲಾಧಾರ ಅಲ್ಲಿನ ಭಾಷೆ. ಬೆಳವಣಿಗೆಯ ಭಾಗವಾಗಿ ನಗರಕ್ಕೆ ಬಂದ ಹೊಸ ಸಂಸ್ಕೃತಿಗಳು ಈ ಭಾಷೆಯ ಮೂಲಕ ಸ್ಥಳೀಯ ಚಹರೆಗಳನ್ನು ಪಡೆದುಕೊಳ್ಳುತ್ತವೆ. ಇಲ್ಲಿ ಭಾಷೆಯೆಂದರೆ ಕೇವಲ ಶಬ್ದಗುಚ್ಛವಲ್ಲ;ಒಂದು ಸಂಸ್ಕೃತಿ ಸಂವಹನ ಮಾಧ್ಯಮ. ನಿಮ್ಮ ಸಾಹಿತ್ಯ, ನಿಮ್ಮ ಸಂಗೀತ, ನಿಮ್ಮ ಮನರಂಜನೆ, ನಿಮ್ಮ ಹಬ್ಬ ಹರಿದಿನಗಳು, ನಿಮ್ಮ ರಾಜಕಾರಣ ಎಲ್ಲವೂ ಈ ಸಂವಹನಕ್ಕೀಡಾಗಿ ಅದೆಲ್ಲವೂ ನಮ್ಮದು ಕೂಡ ಎನಿಸಿಕೊಳ್ಳುತ್ತದೆ. ಈ ಊರುಗಳಲ್ಲಿ ಎಲ್ಲಿಗೆ ಹೋದರೂ, ಹೊರ ರೂಪಗಳಲ್ಲಿ ವೈವಿಧ್ಯ–ಏರುಪೇರುಗಳು ಕಂಡರೂ, ಒಳಗಿನ ಸತ್ವ ಒಂದೇ ಆಗಿರುತ್ತದೆ–ಅದು ಬಂಗಾಳಿ ಸಂಸ್ಕೃತಿ ,

ತಮಿಳು ಸಂಸ್ಕೃತಿ ಅಥವಾ ಆಂಧ್ರ ಸಂಸ್ಕೃತಿ. ಇದು ಅಲ್ಲಿ ಸಾಧ್ಯವಾಗಿರುವುದು ನಗರಾಭಿವೃದ್ಧಿಯನ್ನು ಸಂಸ್ಕೃತಿ ಸಂರಕ್ಷಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಕೈಗೊಂಡಿರುವ ಸ್ಥಳೀಯ ವಿವೇಕದಿಂದಾಗಿ. ಯಾವುದೇ ಲೌಕಿಕ ಅಭಿವೃದ್ಧಿ ಸ್ಥಿರವಾಗಿರುವುದು ಸಾಂಸ್ಕೃತಿಕ ಅಡಿಪಾಯದ ಮೇಲೆ ಎಂಬ ಮುನ್ನೋಟ ಅಲ್ಲಿನ ಸ್ಥಳೀಯರಲ್ಲಿ, ಆ ಮೂಲಕ ಅಲ್ಲಿನ ಆಡಳಿತಗಾರರ ಮನದಲ್ಲಿ ಮನೆ ಮಾಡಿರುವುದರಿಂದಾಗಿ. ಆದರೆ ಬೆಂಗಳೂರಿನ ಸುಖದಾಯಕ ಹವಾಮಾನದಿಂದಾಗಿ ಮೈ ಮರೆತುಹೋದಂತಿರುವ ನಮ್ಮ ಜನ ಹಾಗೂ ಆಡಳಿತಗಾರರಿಬ್ಬರೂ, ಬೆಂಗಳೂರನ್ನು ಹೊರಗಿನವರಿಗೆ ದತ್ತು ಕೊಟ್ಟಂತಿದೆ. ಹಾಗಾಗಿಯೇ ಇಂದು ಬೆಂಗಳೂರಲ್ಲಿ ಕನ್ನಡ ಸಂಸ್ಕೃತಿ ಹೋಗಲಿ, ಬೆಂಗಳೂರು ಸಂಸ್ಕೃತಿ ಎಂಬುದೂ ಕಾಣೆಯಾಗಿ; ಸರ್ಕಾರದ ಪರವಾಗಿ 'ಬೆಂಗಳೂರು ಹಬ್ಬ'ವನ್ನು ಆಚರಿಸುವವರು ಅಪ್ಪಟ ಪರದೇಶಿಗಳಂತೆ ಕಾಣುತ್ತಿರುವುದು!

ನನ್ನ ಕಾಲೇಜು ಶಿಕ್ಷಣದ ನಂತರ ಮುವ್ವತ್ತು ವರ್ಷಗಳ ಹಿಂದೆ ಬಿಟ್ಟು ಬಂದ ಮತ್ತು ಆಗಾಗ್ಗೆ ಅನಿವಾರ್ಯವಾದಾಗ ಮಾತ್ರ ಭೇಟಿ ನೀಡುವ ಬೆಂಗಳೂರಿನ ಬಗ್ಗೆ ನಾನು ಇಷ್ಟು ವಿಸ್ತಾರವಾಗಿ ಯೋಚಿಸುವಂತಾದ್ದು, ಮೊನ್ನೆ ಟಿ.ವಿ. ನೋಡುತ್ತಿದ್ದಾಗ ಹನೀಫ್ ಮತ್ತು ಕಫೀಲನ ಮನೆಯವರೆಲ್ಲರೂ–ಆತನ ತಾಯಿಯ ಹರಕು ಮುರುಕು ಕನ್ನಡದ ಹೊರತಾಗಿ–ಕನ್ನಡವೇ ಬಾರದಂತೆ, ಸ್ಥಳೀಯ ಮಾಧ್ಯಮದವರೊಂದಿಗೂ ಉರ್ದು ಅಥವಾ ಇಂಗ್ಲಿಷ್‌ನಲ್ಲೇ ಮಾತನಾಡಿದ್ದನ್ನು ಕಂಡಾಗ. ಇವರಲ್ಲಿ ಬಹುತೇಕರು ನಮ್ಮ ಮಲೆನಾಡಿನ ಮೂಲೆಯ ಹಳ್ಳಿಗಳಲ್ಲಿ ಹುಟ್ಟಿ ಬೆಳೆದವರು. ಆದರೂ ಮನೆಯಲ್ಲಿ ಕನ್ನಡದ ಗಂಧವೇ ಇಲ್ಲವೆಂದರೆ? ಈ ಪ್ರಶ್ನೆಯನ್ನು ನಾನು ಕನ್ನಡಾಭಿಮಾನದ ಪ್ರಶ್ನೆಯಾಗಿ ಖಂಡಿತ ಎತ್ತುತ್ತಿಲ್ಲ. ಅದಕ್ಕೆ ಇದು ಸಂದರ್ಭವೂ ಅಲ್ಲ. ಬದಲಿಗೆ ಹೇಗೆ ಒಂದು ಸಮುದಾಯ ತನ್ನ ಸುತ್ತಲಿನ ಭಾಷೆಯ ಬಗ್ಗೆ ಕುರುಡು ಬೆಳೆಸಿಕೊಂಡು ಇಡಿಯಾದ ಸಮಾಜದೊಂದಿಗೆ ಸಂವಾದವನ್ನೇ ಕಳೆದುಕೊಳ್ಳುತ್ತಾ ಒಂದು ಸಾಂಸ್ಕೃತಿಕ ದ್ವೀಪವಾಗಿ ಉಳಿಯುವ ಮೂಲಕ ತನಗೇ ಗೊತ್ತಿಲ್ಲದಂತೆ ಮೂಲಭೂತವಾದದಲ್ಲಿ ಸೆರೆಯಾಗಬಲ್ಲುದು ಎಂಬುದನ್ನು ಸೂಚಿಸಲು ಮಾತ್ರ. ಹಾಗೇ, ಬೆಂಗಳೂರು ಹೀಗೆ ಒಂದು ಸಾಮಾನ್ಯ ಸಾಂಸ್ಕೃತಿಕ ಚಹರೆಯೇ ಇಲ್ಲದ ನಗರವಾಗಿ ಬೆಳೆಯುವ ಮೂಲಕ ಇಂತಹ ಅನೇಕ ಅಜ್ಞಾತ ಸಾಂಸ್ಕೃತಿಕ ದ್ವೀಪಗಳಿಗೆ ಸುರಕ್ಷಿತ ನೆಲೆಯೊದಗಿಸುತ್ತಾ, ತನ್ನ ಒಡಲಿನ ತುಂಬಾ ಅದೆಷ್ಟು ಅಸಮಾಧಾನ–ಅತೃಪ್ತಿಗಳ ಆಸ್ಫೋಟನಕಾರಿ ಸಿಡಿಮದ್ದುಗಳನ್ನು ತುಂಬಿಕೊಂಡಿರಬಹುದು ಎಂಬ ಆತಂಕ ವ್ಯಕ್ತಪಡಿಸಲು ಮಾತ್ರ.

ಇಂದು ಬೆಂಗಳೂರು ಮುಸ್ಲಿಂ ಮೂಲಭೂತವಾದಿ ಭಯೋತ್ಪಾದಕರ ಒಂದು ಮುಖ್ಯ ಕೇಂದ್ರವಾಗಿ ಬೆಳೆಯುತ್ತಿದೆ ಎಂಬ ಪ್ರಚಲಿತ ಅನುಮಾನದ ಹಿನ್ನೆಲೆಯಲ್ಲಿ ಹೇಳುವುದಾದರೆ, ಮೊದಲಿಗೆ ಕರ್ನಾಟಕದ ಮುಸ್ಲಿಂ ಸಮುದಾಯ ನಿಸ್ಸಂಕೋಚವಾಗಿ ತನ್ನ ಒಳಗನ್ನೊಮ್ಮೆ ಸಂಪೂರ್ಣವಾಗಿ ಪರಿಶೀಲಿಸಿಕೊಳ್ಳಬೇಕಿದೆ. ಹೊರಗಿನ ಮೂಲಭೂತವಾದಿಗಳ ಪ್ರಚಾರಕ್ಕೆ ಮನಸ್ಸು ಕೊಡುವಂತಹ ದೌರ್ಬಲ್ಯಗಳು ತನ್ನಲ್ಲೇನಿವೆ ಮತ್ತು ಇದ್ದರೆ ಅವಕ್ಕೇನು ಕಾರಣ ಎಂಬುದನ್ನು ಪರಿಶೀಲಿಸಿಕೊಳ್ಳಬೇಕಿದೆ. ಅನೇಕ ಉದಾರವಾದಿ ಮುಸ್ಲಿಂ ಸ್ನೇಹಿತರನ್ನು ಹೊಂದಿರುವ;ಆದರೆ ಇತ್ತೀಚಿನ ಪ್ರಕ್ಷುಬ್ಧ ಕೋಮುವಾದಿ ವಾತಾವರಣದಲ್ಲಿ ಅವರೆಲ್ಲ ಒಂದಿಷ್ಟು

ವಿಚಲಿತರೂ, ಖಿನ್ನರೂ ಆಗಿರುವುದನ್ನು ನೋಡುತ್ತಿರುವ ನನಗೆ, ಕರ್ನಾಟಕದ ಮುಸ್ಲಿಮರು ತಮ್ಮ ಮಕ್ಕಳು ಮೂಲಭೂತವಾದಿಗಳ ಪ್ರಭಾವಕ್ಕೆ ಸಿಗದಂತೆ ತಡೆಯಲು ಬಳಸಬಹುದಾದ ಸುಲಭ ಸಾಧನವಾಗಿ ಕಾಣುತ್ತಿರುವುದೆಂದರೆ ಕನ್ನಡ ಭಾಷೆ. ಕರಾವಳಿ (ಹಾಗೂ ಕನ್ನಡವನ್ನೇ ಮನೆಮಾತಾಗುಳ್ಳ ಪಿಂಜಾರರನ್ನು) ಬಿಟ್ಟರೆ, ಕರ್ನಾಟಕದ ಉಳಿದ ಭಾಗಗಳಲ್ಲಿ ಮುಸ್ಲಿಮರಲ್ಲಿ ಬಹುಪಾಲು ಜನ ಕನ್ನಡದಿಂದ ದೂರವೇ ಉಳಿದಿದ್ದಾರೆ. ಶಿವಮೊಗ್ಗದಂತಹ ಅಚ್ಚ ಕನ್ನಡ ಊರಿನಲ್ಲೂ ಕನ್ನಡ ಬಾರದ ಮುಸ್ಲಿಮರಿದ್ದಾರೆಂದರೆ? ಹೀಗಾಗಿಯೇ ಇವರು ಮುಚ್ಚಿಕೊಂಡ ಸಮಾಜಗಳಾಗಿ ತಮ್ಮ ಮಕ್ಕಳಿಗೆ–ಮೊಮ್ಮಕ್ಕಳಿಗೆ ಲಾಡೆನ್ ಎಂದೋ ಸದ್ದಾಂ ಎಂದೋ ಹೆಸರಿಟ್ಟುಕೊಂಡು ಹೆಮ್ಮೆ ಪಡುವ ಅವಿವೇಕದಲ್ಲಿ ಬಾಳುತ್ತಾ, ಹಿಂದೂ ಕೋಮುವಾದಿಗಳನ್ನು ಕೆರಳಿಸಬಲ್ಲವರಾಗಿದ್ದಾರೆ.

ಈ ಅವಿವೇಕವನ್ನು, ತಮ್ಮದೇ 'ಅಜೆಂಡಾ'ದ ಕಾರಣದಿಂದಾಗಿ ಸಲ್ಲದ ವಿವರಣೆ ನೀಡುತ್ತಾ ಸಮರ್ಥಿಸುವ ಕೆಲವು ಬೇಜವಾಬ್ದಾರಿ 'ಜಾತ್ಯತೀತ' ಗುಂಪುಗಳೂ ನಮ್ಮ ಮಧ್ಯೆ ಇವೆ. ಇವು ಮಾರುವೇಷದ ಮುಸ್ಲಿಂ ಕೋಮುವಾದಿ ಗುಂಪುಗಳ ಸಹಚರಿಗಳಲ್ಲದೆ ಮತ್ತೇನಲ್ಲ ಎಂದು ಅರಿತು ಮುಸ್ಲಿಮರು ಕನ್ನಡ ಕಲಿಯಲು, ಅದರಲ್ಲಿ ಅಭಿವ್ಯಕ್ತಿ ಸಾಧಿಸಲು ಪ್ರಯತ್ನಿಸಬೇಕಿದೆ. ಆ ಮೂಲಕ ತನ್ನಾಚೆಯ ಸಮಾಜದೊಂದಿಗೂ ಸಂವಾದ ಸಾಧ್ಯವಾಗಿ, ಅವರ ದೃಷ್ಟಿ ದಿಗಂತಗಳು ವಿಸ್ತರಿಸಿಕೊಳ್ಳುತ್ತವೆ. ತನ್ನ ಧರ್ಮವನ್ನು ಕೂಡ ತನ್ನದೇ ಕಣ್ಣುಗಳಿಂದ ನೋಡುವ ಧೈರ್ಯ ಮತ್ತು ಸಾಮರ್ಥ್ಯ ಒದಗಿ ಬರುತ್ತದೆ. ರಾಜಕೀಯವಾಗಿ ತನ್ನ ವಿರುದ್ಧವೇ ಇರಬಹುದಾದ ಜಾಗತಿಕ ಇಸ್ಲಾಂ ಜೊತೆಗೆ ಹುಂಬ ಹುಂಬಾಗಿ ಗುರುತಿಸಿಕೊಂಡು, ತಾನಿರುವ ಪ್ರದೇಶದಲ್ಲೇ ವಿಕಾಸಗೊಂಡ ಇಸ್ಲಾಮನ್ನು ಮರೆಯುವ ವಿಸ್ಮೃತಿಗೆ ಒಳಗಾಗುವುದು ತಪ್ಪುತ್ತದೆ.

ಹೀಗಾಗಿ ಕನ್ನಡ ಶಿಕ್ಷಣವೆನ್ನುವುದು ಮುಸ್ಲಿಮರಲ್ಲಿ ಭಯೋತ್ಪಾದನೆಯನ್ನು ಪ್ರಚೋದಿಸುವ ಮೂಲಭೂತವಾದದ ವಿರುದ್ಧ ಒಂದು ಪ್ರತಿರೋಧ ಶಕ್ತಿಯಾಗಿ ಕೆಲಸ ಮಾಡಬಲ್ಲುದಾಗಿದೆ. ಈ ರೀತಿಯಲ್ಲಿ ಸ್ಥಳೀಯ ಸಂಸ್ಕೃತಿಯೊಂದಿಗೆ ಒಂದಾಗಲೇಬೇಕಾದ ಅನಿವಾರ್ಯತೆಯಿರುವ ಚೆನ್ನೈ ಅಥವಾ ಕೊಲ್ಕೊತ್ತಾದಂತಹ ನಗರಗಳಲ್ಲಿ ಸ್ಥಳೀಯರಿಂದ ಕುಮ್ಮಕ್ಕು ಪಡೆದ ಭಯೋತ್ಪಾದನೆಯ ಚಟುವಟಿಕೆ ಇಲ್ಲವೇ ಇಲ್ಲವೆನ್ನುವಷ್ಟು ಕಡಿಮೆ ಎಂಬುದನ್ನೂ ನಾವು ಗಮನಿಸಬಹುದಾಗಿದೆ. ಆದುದರಿಂದ ಬೆಂಗಳೂರಲ್ಲಿ ಭಯೋತ್ಪಾದನೆ ವಿರುದ್ಧದ ಕಾರ್ಯಕ್ರಮದಲ್ಲಿ, ಮುಸ್ಲಿಮರೂ ಸೇರಿದಂತೆ ಎಲ್ಲ ಕನ್ನಡೇತರರಿಗೆ ಕನ್ನಡ ಕಲಿಕೆಯನ್ನೂ ಒಂದಂಶವನ್ನಾಗಿ ಅಳವಡಿಸಿಕೊಳ್ಳುವಂತೆ ಸರ್ಕಾರದ ಮೇಲೆ ಒತ್ತಾಯ ಹೇರಬೇಕಿದೆ. ಬೆಂಗಳೂರಿನ ಸಾಂಸ್ಕೃತಿಕ ಪುನರುಜ್ಜೀವನ ಇದರೊಂದಿಗೇ ಆರಂಭವಾಗಬೇಕಿದೆ. ಬಹುಶಃ ಇದೊಂದೇ ಬೆಂಗಳೂರು ಹೊರಗಿನ ಭಾರಗಳಿಂದ ಕುಸಿಯದಂತೆ ಅದನ್ನು ಉಳಿಸುವ ಮಾರ್ಗವಾಗಿದೆ.

(ಆಗಸ್ಟ್ ೩, ೨೦೦೭, 'ವಿಕ್ರಾಂತ ಕರ್ನಾಟಕ')

೧೦. ಭಾಷಾಭಿಮಾನ, ರಾಷ್ಟ್ರೀಯತೆ, ಸಾಮಾಜಿಕ ಬದ್ಧತೆ ಇತ್ಯಾದಿ...

ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ಪ್ರಕಟವಾಗುತ್ತಿದ್ದಂತೆ ಕನ್ನಡ ರಾಜ್ಯೋತ್ಸವದ ಸಂಭ್ರಮ ರಾಜ್ಯಾದ್ಯಂತ ಮುಗಿಲು ಮುಟ್ಟಿದೆಯೆಂದು ಕನ್ನಡ ಟಿ.ವಿ. ವಾಹಿನಿಗಳು ವರದಿ ಮಾಡಿವೆ. ಈ ಕನ್ನಡ ಟಿ.ವಿ. ವಾಹಿನಿಗಳು ಭಾಷೆಯನ್ನು ಕಳೆದುಕೊಂಡು ಬಹಳ ದಿನಗಳೇ ಆಗಿರುವುದರಿಂದ, ಅವು ಮುಗಿಲು ಮುಟ್ಟಿದೆ ಎಂದರೂ ಒಂದೇ, ನೆಲ ಕಚ್ಚಿದೆ ಎಂದರೂ ಒಂದೇ ಅರ್ಥ ಎಂಬಂತಾಗಿದೆ! ಇದು, ಕನ್ನಡಿಗರು ಕನ್ನಡದ ಬಗ್ಗೆ ಬೆಳೆಸಿಕೊಂಡು ಬಂದಿರುವ ಹುಸಿ ಅಭಿಮಾನದ ಸಂಕೇತವೂ ಆಗಿದೆ ಎಂದರೆ ತಪ್ಪಾಗಲಾರದು. ಕನ್ನಡ ಸೇನಾನಿಗಳು ಪಟಾಕಿ ಹಚ್ಚಿ ಅದರ ಸುತ್ತಾ ಕನ್ನಡ ಬಾವುಟವಾಡಿಸುತ್ತಾ ಕುಣಿದಿದ್ದೇನು, ನಮ್ಮ ಮುಖ್ಯಮಂತ್ರಿಗಳು ಟಿ.ವಿ. ಕ್ಯಾಮರಾಗಳ ಮುಂದೆಯೇ ಬಾಯಿ ಇಷ್ಟಗಲ ಮಾಡಿಕೊಂಡು ಈ ಬಾರಿ ರಾಜ್ಯೋತ್ಸವ ಸಂಭ್ರಮವನ್ನು ರಾಜ್ಯಾದ್ಯಂತ ವಿಶೇಷವಾಗಿ(ಶಾಸ್ತ್ರೀಯ ಸ್ಥಾನಮಾನಕ್ಕೆ ತಕ್ಕಂತೆ?) ಆಚರಿಸುವಂತೆ ಜಿಲ್ಲಾಧಿಕಾರಿಗಳಿಗೆ ದೂರವಾಣಿ ಮೂಲಕ ಸೂಚಿಸಿದ್ದೇನು! ಆಹಾ, ಇದೇ ಅಲ್ಲವೇ ಕನ್ನಡಾಭಿಮಾನವೆಂದರೆ? ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ದೊರಕುವಂತೆ ಮಾಡಲು ಹೋರಾಡಿದವರಿಗೆ ಸನ್ಮಾನ ಮಾಡುವುದಾಗಿಯೂ ಯಡಿಯೂರಪ್ಪನವರು ಈ ಸಂದರ್ಭದಲ್ಲಿ ಪ್ರಕಟಿಸಿದ್ದಾರೆ.

ಆದರೆ ಯಾವ ಹೋರಾಟ? ಹಲವು ಬಾರಿ ಒಂದು ದಿನದ ಆಮರಣಾಂತ ಉಪವಾಸ ಗೈದಿದ್ದೆ? ಹಣೆ ತುಂಬ ತಿಲಕ ಹಚ್ಚಿಕೊಂಡು ಊರೂರುಗಳಲ್ಲಿ ಬೀದಿ ತುಂಬಾ ಕೂಗುತ್ತಾ ಮೆರವಣಿಗೆ ತೆಗೆದದ್ದೆ? ಇವುಗಳಿಂದ ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ಸಿಕ್ಕಿದೆಯೆಂದು ಇವರು ನಂಬಿದ್ದರೆ ಅದಕ್ಕಿಂತ ದೊಡ್ಡ ಭ್ರಮೆ ಇನ್ನೊಂದಿರಲಾರದು! ಏಕೆಂದರೆ ತೆಲುಗಿನವರು ಯಾವ ಉಪವಾಸವನ್ನೂ ಮಾಡದೆ, ಯಾವ ಬೀದಿ ಮೆರವಣಿಗೆಯನ್ನೂ ತೆಗೆಯದೆ ತಮ್ಮ ಭಾಷೆಗೆ ಶಾಸ್ತ್ರೀಯ ಸ್ಥಾನಮಾನ ಗಿಟ್ಟಿಸಿಕೊಂಡಿದ್ದಾರೆ! ಇದು ಹೇಗೆ ಸಾಧ್ಯವಾಯಿತು? ತೆಲುಗಿನವರು ಸ್ವಾಭಿಮಾನಿಗಳಂತೆ ವರ್ತಿಸಿ, ಮಾಡಬೇಕಾದ ರೀತಿಯಲ್ಲಿ ಭಾಷಾ ರಾಜಕಾರಣ ಮಾಡಿ ತಮಗೆ ಬೇಕಾದುದನ್ನು ಘನತೆಯಿಂದ ಪಡೆದಿದ್ದಾರೆ. ಆದರೆ ಕನ್ನಡಿಗರು? ಕೂಗಾಡಿ, ಬೈದು, ರಚ್ಚೆ ಮಾಡಿ, ಬೆದರಿಕೆ ಹಾಕಿ, ಅವುಗಳಿಂದಲೇ ಪಡೆಯಬೇಕಾದುದನ್ನೆಲ್ಲ ಪಡೆದುಕೊಂಡಂತೆ, ಈಗ ಸನ್ಮಾನಕ್ಕೆ ಬೇರೆ ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ! ಇನ್ನು ಯಾರಾರನ್ನೆಲ್ಲ ಸನ್ಮಾನಿಸಬಹುದೆಂದು ನಮ್ಮ ರಾಷ್ಟ್ರ ಕವಿಗಳು ಪರೋಕ್ಷವಾಗಿ ಸೂಚಿಸಿಯೂ ಬಿಟ್ಟಿದ್ದಾರೆ.

ಇವರು ಶಿಫಾರ್ಸು ಮಾಡಿರುವ ಹೋರಾಟಗಾರರನ್ನೊಮ್ಮೆ ನೋಡಿದರೆ, ಕನ್ನಡದ ಭವಿಷ್ಯ ನಿಜವಾಗಿಯೂ ಆತಂಕದಲ್ಲಿದೆ ಎಂದೇ ಹೇಳಬೇಕು!

ಈ ಮುಗಿಲು ಮುಟ್ಟಿದ ಸಂಭ್ರಮದ ರಾಜ್ಯೋತ್ಸವದ ಎರಡು ದಿನಗಳ ಹಿಂದಷ್ಟೆ ನಮ್ಮ ಉಚ್ಚ ನ್ಯಾಯಾಲಯದ ನ್ಯಾಯಾಧೀಶರೊಬ್ಬರು ಕರ್ನಾಟಕದಲ್ಲಿ ಇಂಗ್ಲಿಷ್ ಮಾಧ್ಯಮ ಶಾಲೆಗಳಿಗೆ ಅನುಮತಿ ನೀಡುವಂತೆ ಆದೇಶಿಸುತ್ತಾ, ಈ ಆದೇಶದೊಂದಿಗೆ ಮಕ್ಕಳಿಗೆ ಇಂಗ್ಲಿಷ್ ಕಲಿಸುವುದು ತಂದೆ ತಾಯಿಗಳ ಹಕ್ಕಷ್ಟೇ ಅಲ್ಲ, ಕರ್ತವ್ಯವೂ ಎಂಬಂತೆ ಪ್ರವಚನ ನೀಡಿದ್ದಾರೆ ಎಂಬುದನ್ನೂ ನಾವು ಗಮನಿಸಬೇಕು. ನಮ್ಮ ನ್ಯಾಯಾಧೀಶರುಗಳು ನ್ಯಾಯ ನೀಡುವ ಅಧಿಕಾರವನ್ನಷ್ಟೇ ಅಲ್ಲ, ಹೊಸ ಕಾಲದ ಪ್ರವಾದಿತ್ವವನ್ನೂ ತಮ್ಮ ಮೇಲೆ ಆರೋಪಿಸಿಕೊಂಡಂತಿದೆ! ಆದರೆ ಅವರು ಸಂವಿಧಾನವನ್ನು ಸೂಕ್ತವಾಗಿ ಅರ್ಥೈಸುವುದರ ಹೊರತಾಗಿ ಮತ್ತಾವ ಕೆಲಸಕ್ಕೂ ಅಧಿಕಾರಸ್ಥರೂ ಅಲ್ಲ, ಅರ್ಹರೂ ಅಲ್ಲ ಎಂಬುದು ಅನೇಕ ವೇಳೆ ಅನೇಕರಿಂದ ವಿಷದೀಕರಿಸಲ್ಪಟ್ಟಿದೆ. ಆದರೂ, ಅವರು ಇತ್ತೀಚಿನ ದಿನಗಳಲ್ಲಿ ತಮ್ಮ ಈ ಅಧಿಕಾರ–ಅರ್ಹತೆಗಳನ್ನೂ ಮೀರಿ ತಮ್ಮ ತೀರ್ಪಿನ ಜೊತೆಯಲ್ಲಿ ಸಾರ್ವಜನಿಕ ಮಹತ್ವದ ವಿಷಯಗಳ ಬಗ್ಗೆ ನಿರ್ಣಯಾತ್ಮಕ ರೂಪದ ಹೇಳಿಕೆಗಳನ್ನು ನೀಡುವುದು, ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದು ಸಾಮಾನ್ಯವಾಗಿ ಹೋಗಿರುವುದನ್ನು ನಮ್ಮ ಅನೇಕ ಕಾನೂನು ಪಂಡಿತರು ವಿಷಾದದಿಂದ ಗಮನಿಸಿದ್ದಾರೆ. ಅದಕ್ಕೆ ಕಾರಣ ಹೊಸ ಆರ್ಥಿಕತೆಯ ಗಾಳಿಗೆ ಅವರೂ ತಮ್ಮ ಮೈಮನಗಳನ್ನು ತೆರೆದುಕೊಂಡಿರುವುದೇ ಆಗಿದೆ. ಅದರ ದುಷ್ಪರಿಣಾಮಗಳನ್ನು ನಾವು ನ್ಯಾಯಾಂಗದ ಇತ್ತೀಚಿನ ಹಲವಾರು ಭ್ರಷ್ಟಾಚಾರದ ಪ್ರಕರಣಗಳ ವರದಿಗಳಲ್ಲಿ ನೋಡಬಹುದಾಗಿದೆ. ಸದರಿ ನ್ಯಾಯಾಧೀಶರ ತೀರ್ಪನ್ನು ಕುರಿತ ಪತ್ರಿಕಾ ವರದಿಗಳನ್ನೇ ಆಧರಿಸಿ ಹೇಳುವುದಾದರೆ, ಈ ನ್ಯಾಯಾಧೀಶರಿಗೆ ಶಿಕ್ಷಣದ ಮಾಧ್ಯಮದ ಪ್ರಶ್ನೆಯೇ ಬೇರೆ, ಇಂಗ್ಲಿಷ್ ಕಲಿಕೆಯ ಅಗತ್ಯದ ಪ್ರಶ್ನೆಯೇ ಬೇರೆ ಎಂಬುದು ಅರ್ಥವಾದಂತಿಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ.

ಆದರೆ ಇದಕ್ಕಿಂತ ಹೆಚ್ಚಿನ ವಿಷಾದದ ಸಂಗತಿಯೆಂದರೆ, ಶಾಸ್ತ್ರೀಯ ಭಾಷಾ ಸ್ಥಾನಮಾನದ ಬಗ್ಗೆ ಸಂಭ್ರಮ ಪಡುತ್ತಿರುವ ವೀರ ಕನ್ನಡಿಗರಾರೂ ಸಾರ್ವಜನಿಕವಾಗಿ ಕನ್ನಡ ಎದುರಿಸುತ್ತಿರುವ ಈ ಮುಜುಗರದ ಬಗ್ಗೆ ತಲೆ ಕೆಡಿಸಿಕೊಳ್ಳದೇ ಇರುವುದು. ಕನ್ನಡದ ತಂದೆ ತಾಯಿಗಳೇ ತಮ್ಮ ಮಕ್ಕಳಿಗೆ ಕನ್ನಡದಲ್ಲಿ ಶಾಲಾ ಶಿಕ್ಷಣವೂ ಬೇಡವೆಂದು ಘಂಟಾಘೋಷವಾಗಿ ಹೇಳಿಕೊಂಡು, ಅದಕ್ಕೆ ನಮ್ಮ ನ್ಯಾಯಾಲಯಗಳ ಮನ್ನಣೆಯನ್ನೂ ಪಡೆದುಕೊಳ್ಳುತ್ತಿರುವ ಈ ಸಂದರ್ಭದಲ್ಲಿ, ಕನ್ನಡ ರಾಜ್ಯೋತ್ಸವ ಮುಗಿಲು ಮುಟ್ಟಿದೆ ಎಂದರೆ, ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ಸಿಕ್ಕಿದೆಯೆಂದು ಕನ್ನಡಿಗರು ಬೀದಿ ಬೀದಿಗಳಲ್ಲಿ ಹುಚ್ಚೆದ್ದು ಕುಣಿಯಲಾರಂಭಿಸಿದ್ದಾರೆ ಎಂದರೆ; ಕನ್ನಡಾಭಿಮಾನವೆಂಬುದು ಈಗ ಎಷ್ಟು ವಿಕ್ಷಿಪ್ತವಾಗಿ ಹೋಗಿರಬೇಕು ಎಂದು ಯೋಚಿಸಿ! ಒಂದು ಭಾಷೆ ಉಳಿಯುವುದು, ಬೆಳೆಯುವುದು ಅದರ ಸಾರ್ವಜನಿಕ ಬಳಕೆದಾರಿಕೆಯ ವೈವಿಧ್ಯದಲ್ಲಿ. ಹಾಗಾಗಿ, ಕನ್ನಡದ ಮಕ್ಕಳು ಪ್ರಾಥಮಿಕ ಶಿಕ್ಷಣವನ್ನೂ ಕನ್ನಡದ ಮೂಲಕ ಪಡೆಯುವುದು ಅವರ ಭವಿಷ್ಯದ ದೃಷ್ಟಿಯಿಂದ ಆತಂಕಕಾರಿ ಎಂಬ ಸಾಮಾಜಿಕ ಸಂದರ್ಭವನ್ನುಂಟುಮಾಡಿರುವ ನಮ್ಮ ಸಾಮಾಜಿಕ ನಾಯಕರಿಗೆ ಮತ್ತು ಸರ್ಕಾರಕ್ಕೆ ರಾಜ್ಯೋತ್ಸವ ಆಚರಿಸುವ ಯಾವ ನೈತಿಕ ಹಕ್ಕೂ ಇಲ್ಲ ಎಂದು ಹೇಳಬೇಕಾಗಿದೆ. ಕನ್ನಡದ

ಮಕ್ಕಳು ಕನ್ನಡದಲ್ಲಿ ಶಿಕ್ಷಣ ಪಡೆಯುವುದು ಅವರ ಧರ್ಮ ಮತ್ತು ಹಾಗಾಗಿ ಅವರ ಹಕ್ಕು ಎಂಬ ಪ್ರಜಾಸತ್ತಾತ್ಮಕ ಸಾರ್ವಜನಿಕ ಸಮ್ಮತಿಯನ್ನು ಸಂಘಟಿಸಲಾಗದ ಯಾವುದೇ ಸರ್ಕಾರ, ಕನ್ನಡಕ್ಕೆ ತನ್ನ ಬದ್ಧತೆಯನ್ನು ಮತ್ತು ಕನ್ನಡ ಭಾಷಾಭಿವೃದ್ಧಿಗಾಗಿ ಕೋಟ್ಯಾಂತರ ರೂಪಾಯಿಗಳ ಅನುದಾನ ಘೋಷಿಸಿವುದು ದೊಡ್ಡ ಆತ್ಮವಂಚನೆಯಲ್ಲದೆ ಮತ್ತೇನಲ್ಲ. ಹಾಗೇ ಅಂತಹ ಸರ್ಕಾರದಿಂದ ಸನ್ಮಾನಕ್ಕೆ ಸಿದ್ಧರಾಗುತ್ತಿರುವವರ ಕೃತಾರ್ಥತೆ ಕೂಡಾ ಇದಕ್ಕೆ ಹೊರತಲ್ಲ.

ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ದೊರಕಿದ್ದರಿಂದಾಗಿ ಕೋಟ್ಯಾಂತರ ರೂಪಾಯಿ ಮೌಲ್ಯದ ಸಂಶೋಧನಾ ಯೋಜನೆಗಳು ಮಂಜೂರಾಗುವುವಂತೆ. ತಮಿಳು ಶಾಸ್ತ್ರೀಯ ಭಾಷಾ ಯೋಜನೆಗಳಲ್ಲಿ ಕೆಲಸ ಮಾಡುತ್ತಿರುವ ಅನುಭವಿಗಳೊಬ್ಬರ ಮಾತನ್ನೇ ನಂಬುವುದಾದರೆ, ಅವರಿಗೆ ಈ ಯೋಜನೆಗಳನ್ನು ನಿರ್ವಹಿಸಬಲ್ಲ ವಿದ್ವಾಂಸರೇ ಸಿಗುತ್ತಿಲ್ಲವಂತೆ. ಇನ್ನು ಇವೊತ್ತು ಕನ್ನಡದಲ್ಲಿ ನಡೆಯುತ್ತಿರುವ ಸಂಶೋಧನೆಗಳ ಗುಣಮಟ್ಟವನ್ನು ನೋಡಿದರೆ, ಈ ಹೊಸ ಯೋಜನೆಗಳಿಂದ ಈ ಮಟ್ಟ ಇನ್ನಷ್ಟು ಕುಸಿದು, ಕನ್ನಡ ಪಾಂಡಿತ್ಯ ಕ್ಷೇತ್ರವೆಂಬುದು ಸಂಶೋಧನೆಯ ಹೆಸರಿನಲ್ಲಿ ಹಣ ಲಪಾಟಿಯಿಸುವ ದುಷ್ಟರ ಮತ್ತು ಭ್ರಷ್ಟರ ದೊಡ್ಡ ಜಾಲವಾಗಿ ಪರಿವರ್ತಿತವಾದರೆ ಆಶ್ಚರ್ಯವೇನಿಲ್ಲ. ಕನ್ನಡವನ್ನು ಬಳಸುವ ಮತ್ತು ಬೆಳಸುವ ಕೆಲಸಗಳ ಬಗ್ಗೆ ತಲೆ ಕೆಡಿಸಿಕೊಳ್ಳದೆ, ಅದರ ಪ್ರಾಚೀನ ವೈಭವವನ್ನಷ್ಟೇ ಆಚರಿಸಲೆಣಿಸುವವರ ಈ ಪ್ರಯತ್ನ ಆತ್ಮಘಾತುಕವೇ ಆಗಿದೆ ಎಂದರೆ ತಪ್ಪಾಗಲಾರದು.

ಒಂದು ಕಡೆ ಈ ವಿಪರ್ಯಾಸವಿದ್ದರೆ, ಇನ್ನೊಂದು ಕಡೆ ಒಂದು ಭಾಷೆ ಮತ್ತು ಆ ಭಾಷೆಯನ್ನಾಡುವ ಜನರ ಹಿತದ ಬಗ್ಗೆ ಮಾತನಾಡುವುದೇ ಸಂಕುಚಿತತೆ ಎನ್ನಿಸಿಕೊಳ್ಳಲಾ ರಂಭಿಸಿರುವುದು ಇನ್ನೊಂದು ವಿಪರ್ಯಾಸ. ಮಹರಾಷ್ಟ್ರ ನವನಿರ್ಮಾಣ ಸೇನೆಯ ರಾಜ್ ಠಾಕ್ರೆಯ ಭಾಷಾಭಿಮಾನ ಪ್ರಕಟಣೆಯ ಮಾರ್ಗಗಳು ಯಾರೂ ಒಪ್ಪಲಾಗದಂತಹವು, ನಿಜ. ಹಾಗಾಗಿಯೇ ಈ ಹಿಂಸಾ ಮಾರ್ಗಗಳಿಗೆ ಬಲಿಯಾದ ಭಾಷಾ ರಾಜ್ಯಗಳ ಜನರೂ ಪ್ರತಿಹಿಂಸೆಗೆ ಇಳಿದಿದ್ದಾರೆ. ಭಾರತ ಒಂದು ರಾಷ್ಟ್ರವಾಗಿ ಭಾರತೀಯರೆನ್ನಿಸಿಕೊಂಡವರು ಯಾವುದೇ ಪ್ರದೇಶದಲ್ಲಿ ಉದ್ಯೋಗ ಮಾಡುವ, ನೆಲಸುವ ಹಕ್ಕನ್ನು ಪಡೆದಿದ್ದಾರೆ ಎಂಬುದು ನಿಜ. ಆದರೆ ಈ ಹಕ್ಕು ಸ್ವಾತಂತ್ರ್ಯೋತ್ತರ ಭಾರತದಲ್ಲಿ ಎಷ್ಟು ದುರುಪಯೋಗವಾಗಿದೆ ಎಂದರೆ, ನಮ್ಮ ರಾಷ್ಟ್ರ ನಿರ್ಮಾಪಕರು ಭಾಷಾ ರಾಷ್ಟ್ರೀಯತೆಗಳ ವಾಸ್ತವವನ್ನು ಮನಗಂಡು ರಚಿಸಿದ ಭಾಷಾಧಾರಿತ ರಾಜ್ಯಗಳ ಒಕ್ಕೂಟದ ಪರಿಕಲ್ಪನೆಯೇ ಇದರಿಂದ ಘಾಸಿಗೊಳ್ಳಲಾರಂಭಿಸಿದೆ. ಇದು ಸಮುದಾಯ ವಿಶಿಷ್ಟತೆಯನ್ನು ನಾಶ ಮಾಡುತ್ತಾ, ಭಾರತವೆಂಬುದನ್ನು ರಾಜಕೀಯ ಬಲ ಸಂಘಟಿಸಿಕೊಳ್ಳಬಲ್ಲ ಸಮುದಾಯಗಳ 'ಸಾಮ್ರಾಜ್ಯಶಾಹಿ' ಪ್ರವೃತ್ತಿಗಳ ಆಡೊಂಬಲವನ್ನಾಗಿ ಪರಿವರ್ತಿಸುತ್ತಿದೆ. ಭಾರತ ಒಂದು ರಾಷ್ಟ್ರವಾಗಿ ಉಳಿಯುವುದು ಮತ್ತು ಉಳಿಯಬೇಕಾದದ್ದು, ತನ್ನ ವೈವಿಧ್ಯತೆ ಬಲಗೊಳ್ಳುವ ಏಕತೆಯಲ್ಲಿ;ಏಕತೆಯ ಒತ್ತಡದಲ್ಲಿ ನಲುಗುವ ವೈವಿಧ್ಯತೆಯಲ್ಲಲ್ಲ. ಭಾರತದ ಒಕ್ಕೂಟವನ್ನು ಬಲಪಡಿಸುವುದೆಂದರೆ, ಆ ಒಕ್ಕೂಟ ಯಾವುದರಿಂದ ನಿರ್ಮಿತವಾಗಿದೆಯೋ ಆ ರಾಜ್ಯಗಳ ಆಧಾರಗಳನ್ನು ಬಲಪಡಿಸುವುದು. ಅಂದರೆ ಆಯಾ ಭಾಷಾ ಸಮುದಾಯಗಳ ಸಾಮಾಜಿಕ-ಸಾಂಸ್ಕೃತಿಕ-ರಾಜಕೀಯ ಅಸ್ತಿವಾರಗಳನ್ನು ಬಲಗೊಳಿಸುವುದು. ಆದರೆ ಈಗ ಆಗುತ್ತಿರುವುದಾದರೂ ಏನು?

ಉದಾಹರಣೆಗೆ, ಈ ಮೊದಲು ಕರ್ನಾಟಕದಲ್ಲಿ ಮತ್ತು ಈಗ ಮಹಾರಾಷ್ಟ್ರದಲ್ಲಿ ಗಲಾಟೆಗೆ ಕಾರಣವಾಗಿರುವ ರೈಲ್ವೇ ನೇಮಕಾತಿಗಳ ವಿಷಯವನ್ನೇ ತೆಗೆದುಕೊಳ್ಳಿ. ಈ ನೇಮಕಾತಿಯ ಪ್ರಕ್ರಿಯೆಯನ್ನು ರಾಷ್ಟ್ರದ ವಿವಿಧ ಪ್ರದೇಶಗಳಲ್ಲಿ, ಕೇಂದ್ರಗಳಲ್ಲಿ ನಡೆಸುವ ಉದ್ದೇಶವಾದರೂ ಏನು? ಎಲ್ಲ ಪ್ರದೇಶಗಳ ಜನ ರೈಲ್ವೇ ಎಂಬ ರಾಷ್ಟ್ರೀಯ ವ್ಯವಸ್ಥೆಯಲ್ಲಿ ಪಾಲ್ಗೊಳ್ಳುವಂತಾಗಬೇಕೆಂದು ತಾನೆ? ಆದರೆ ಬೆಂಗಳೂರಿನಲ್ಲಿಯೋ, ಮುಂಬೈನಲ್ಲಿಯೋ ನಡೆಯುವ ನೇಮಕಾತಿ ಪ್ರಕ್ರಿಯೆಯಲ್ಲಿ ದೂರದ ಉತ್ತರ ಪ್ರದೇಶ, ಬಿಹಾರ, ಬಂಗಾಳ, ಅಸ್ಸಾಂಗಳ ಜನರೂ ಪಾಲ್ಗೊಳ್ಳಬಹುದೆಂದರೆ, ಇಂತಹ ನೇಮಕಾತಿ ಪ್ರಕ್ರಿಯೆಯ ಹಿಂದಿನ ಈ ರಾಷ್ಟ್ರೀಯ ಉದ್ದೇಶವೇ ವಿಫಲವಾದಂತಲ್ಲವೆ? ಕಳೆದೆರಡು ದಶಕಗಳಿಂದ ರೈಲ್ವೇ ಮಂತ್ರಿಗಳಾಗಿರುವವರ ರಾಜ್ಯವಾದ ಬಿಹಾರದಿಂದಲೇ ಅಭ್ಯರ್ಥಿಗಳು ಪ್ರವಾಹದೋಪಾದಿಯಲ್ಲಿ ರಾಷ್ಟ್ರದ ಬೇರೆ ಬೇರೆ ಕೇಂದ್ರಗಳಲ್ಲಿ ನಡೆಯುವ ನೇಮಕಾತಿಗಳಿಗೆ ಬರಲಾರಂಭಿಸಿದ್ದಾರೆ ಎಂದರೆ, ಇದರಲ್ಲಿ ಅರಾಷ್ಟ್ರೀಯವಾದದ್ದೇನೋ ನಡೆಯುತ್ತಿದೆ ಎಂದೇ ಅಲ್ಲವೆ? ಒಂದು ಕೇಂದ್ರದಲ್ಲಿ ನೇಮಕಾತಿ ಎಂದರೆ, ಆ ಕೇಂದ್ರದ ನೆರೆಹೊರೆಯ ಜನ–ಅವರು ಯಾವುದೇ ಭಾಷೆಯ ಸಮುದಾಯದವರಾಗಿರಲಿ–ಅದರಲ್ಲಿ ಭಾಗವಹಿಸಿ ಉದ್ಯೋಗ ಪಡೆಯುವ ಅವಕಾಶ ಹೊಂದಿರಬೇಕು ಎಂಬುದು ಅದರ ಆಶಯವಾಗಿರುತ್ತದೆ. ಆದರೆ ಇಂದು ಈ ಆಶಯವನ್ನು ರಾಷ್ಟ್ರೀಯತೆಯ ಹೆಸರಿನಲ್ಲಿ ಭಂಗಗೊಳಿಸಲಾಗುತ್ತಿದೆ. ಇದು ತಲೆಕೆಳಗಾದ ರಾಷ್ಟ್ರೀಯತೆಯಲ್ಲದೆ ಮತ್ತೇನಲ್ಲ.

ಇದನ್ನು ಸಹಜವಾಗಿಯೇ ಇಂದು ಹಲವು ಕಡೆ ಪ್ರಶ್ನಿಸಲಾಗುತ್ತಿದೆ. ಆದರೆ ಇದನ್ನು ಒರಟೊರಟಾಗಿ ಮಾಡುತ್ತಿರುವ ರಾಜ್ ಠಾಕ್ರೆಯನ್ನು ರಾಷ್ಟ್ರ ವಿರೋಧಿ ಎಂದು ಕರೆಯಲಾಗುತ್ತಿದೆ. ಅಷ್ಟೇ ಅಲ್ಲ, ಆತನ ಪ್ರತಿಭಟನೆಯನ್ನು 'ಗೂಂಡಾರಾಜ್' ಎಂದೂ ಇಂಗ್ಲಿಷ್ ಟಿ.ವಿ. ವಾಹಿನಿಗಳು ಕರೆಯುತ್ತಿವೆ. ಆದರೆ ಆಳವಾಗಿ ನೋಡಿದಾಗ, ಈ ಗೂಂಡಾರಾಜ್‌ನ ಮೂಲಕರ್ತೃ ಆತನಲ್ಲ. ಬದಲಿಗೆ, ಭಾರತದ ಭಾಷಾ ಸಮುದಾಯಗಳ ಸಾಂಸ್ಕೃತಿಕ ಅಸ್ಮಿತೆಯನ್ನಷ್ಟೇ ಅಲ್ಲ, ಅವುಗಳ ಸಾಮಾಜಿಕ ಭದ್ರತೆಯನ್ನೂ; ತಮ್ಮ ತಲೆಕೆಳಗಾದ ರಾಷ್ಟ್ರೀಯತೆಯನ್ನು ಅವುಗಳ ಮೇಲೆ ಹೇರಲಾರಂಭಿಸಿ ಆತಂಕಕ್ಕೀಡು ಮಾಡತೊಡಗಿರುವವರೇ ಆಗಿದ್ದಾರೆ ಎಂಬುದು ಗೊತ್ತಾಗುತ್ತದೆ. ಯಾವುದೇ ತೆರನ ಸ್ಥಳೀಯತೆಯ ಅಡೆತಡೆಯಿಲ್ಲದೆ ರಾಷ್ಟ್ರದುದ್ದಗಲಕ್ಕೂ ತಮ್ಮ ವ್ಯಾಪಾರೋದ್ಯಮಗಳ ಜಾಲ ವಿಸ್ತರಿಸಿಕೊಳ್ಳಬಯಸುವ ಎಲ್ಲ ಆಸೆಬುರುಕ ವಣಿಜರೂ, ಅವರ ಗುಲಾಮರಾಗಿರುವ ನಮ್ಮ ರಾಜಕಾರಣಿಗಳೂ ಕಟ್ಟತೊಡಗಿರುವ ಹೊಸ ರೀತಿಯ–ತಲೆಕೆಳಗಾದ–ರಾಷ್ಟ್ರೀಯತೆ ಇದು.

ಈ ಪ್ರವೃತ್ತಿಯ ವಿರುದ್ಧ ಪ್ರತಿಭಟಿಸುವುದೇ ಇಂದು ನಿಜವಾದ ರಾಷ್ಟ್ರೀಯತೆ ಎನ್ನಿಸಿಕೊಳ್ಳಬೇಕು. ಆದರೆ ಇಂತಹ ಪ್ರತಿಭಟನೆಯನ್ನು ನಮ್ಮ ಕರ್ನಾಟಕ ರಕ್ಷಣಾ ವೇದಿಕೆ ಮತ್ತು ಮಹಾರಾಷ್ಟ್ರ ನವನಿರ್ಮಾಣ ಸೇನೆಗಳಂತಹ ಪ್ರಾದೇಶಿಕ ಸಂಘಟನೆಗಳು ಗಲಭೆ ಮತ್ತು ಹಿಂಸೆಯ ಮೂಲಕ ಕೈಗೊಂಡು ಅದರ ವಿಶ್ವಾಸಾರ್ಹತೆಯನ್ನೇ ಹಾಳುಗೆಡಹಿವೆ. ಅವು ಸಾಮೂಹಿಕ ಸತ್ಯಾಗ್ರಹ ಮಾರ್ಗವನ್ನು ತಮ್ಮ ಪ್ರತಿಭಟನೆಯ ಮಾರ್ಗವಾಗಿ ಆಯ್ದುಕೊಳ್ಳುವುದಾದರೆ, ಅವಕ್ಕೆ ಇಡೀ ರಾಜ್ಯದ–ಅವರು ಯಾವುದೇ ಭಾಷೆ

ಮಾತನಾಡುವವರಾಗಿರಲಿ–ಜನತೆಯ ಸಹಾನುಭೂತಿ, ಬೆಂಬಲ ದೊರಕುತ್ತದೆ ಮತ್ತು ದೀರ್ಘಕಾಲಿಕ ರಾಜಕೀಯ ಪರಿಣಾಮಗಳಿಗೆ ಕಾರಣವಾಗುತ್ತದೆ. ಆದರೆ ಇದು ಸಾಧ್ಯವಾಗುವುದು ಅಲ್ಪಕಾಲಿಕ ರಾಜಕೀಯ ಲಾಭವನ್ನು ಮೀರಿದ ಉದ್ದೇಶಗಳಿಂದ ಈ ಚಳುವಳಿಗಳ ನಾಯಕತ್ವ ರೂಪುಗೊಂಡಾಗ ಮಾತ್ರ. ಕರವೇ ಮತ್ತು ಮನಸೇಗಳಿಗೆ ಈ ದೀರ್ಘಕಾಲಿಕ ಮತ್ತು ಘನ ಉದ್ದೇಶಗಳಿದ್ದಂತಿಲ್ಲ ಎಂಬುದೇ ಅವುಗಳ ದೊಡ್ಡ ಮತ್ತು ಮುಖ್ಯ ಕೊರತೆಯಾಗಿದೆ.

ಅದೇನೇ ಇರಲಿ, ದಿನೇ ದಿನೇ ಹೆಚ್ಚುತ್ತಿರುವ ಇಂತಹ ಸಾಮಾಜಿಕ ಗಲಭೆ–ಗೊಂದಲಗಳಿಂದಾಗಿ ನಮ್ಮ ಸೂಕ್ಷ್ಮ ಮನಸ್ಸಿನ ಬುದ್ಧಿಜೀವಿಗಳ ಖಿನ್ನತೆ ಹೆಚ್ಚುತ್ತಾ ಹೋಗುತ್ತದೆಂದು ಕಾಣುತ್ತದೆ. ಈ ಖಿನ್ನತೆಯ ಪರಿಣಾಮವೆಂದರೆ, ನಮ್ಮ ದೃಷ್ಟಿದೂರ ಸಂಕುಚಿತವಾಗುತ್ತಾ ಹೋಗುವುದು! ವಿಕ್ರಾಂತ ಕರ್ನಾಟಕದ ಅಕ್ಟೋಬರ್ ೧೭ರ ಸಂಚಿಕೆಯ 'ಹನಿ ಕಷಾಯ' ಪುಟದಲ್ಲಿ ಅದರ ಕ್ರಾಂತಿಕಾರಿ ಉಪ ಸಂಪಾದಕರಾದ ಮಲ್ಲನಗೌಡರು ಆಯ್ದು ಪ್ರಕಟಿಸಿರುವ ಜಿ.ರಾಜಶೇಖರರ ಮಾತುಗಳು ಇದಕ್ಕೊಂದು ಉದಾಹರಣೆಯಂತಿದೆ. ಜಿ.ವಿ.ಆನಂದಮೂರ್ತಿಯವರ ಕವನ ಸಂಕಲನವೊಂದಕ್ಕೆ ಅವರು ಬರೆದಿರುವ ಮುನ್ನುಡಿಯಿಂದ ಆಯ್ದ ಈ ಮಾತುಗಳನ್ನು ಮಲ್ಲನಗೌಡರು ಸದ್ಯದ ಕನ್ನಡ ಸಾಹಿತಿಗಳ, ನಿರ್ದಿಷ್ಟವಾಗಿ ಕವಿಗಳ ಸಾಮಾಜಿಕ ಬದ್ಧತೆಯ ದಿವಾಳಿತನವನ್ನು ಎತ್ತಿ ತೋರಿಸಿ ತಮ್ಮ ಸಂತೋಷವನ್ನೋ, ದುಃಖವನ್ನೋ ಪ್ರದರ್ಶಿಸಲು ಪ್ರಕಟಿಸಿದಂತಿದೆ! ನಮ್ಮ ಮಲ್ಲನಗೌಡರಿಗೇನೋ ಸಾಹಿತ್ಯ–ಗೀಹಿತ್ಯವೆಲ್ಲ ಕ್ರಾಂತಿಗೆ ಬೇಕಾದ ಬಂದೂಕು–ಮದ್ದು ಗುಂಡುಗಳೆಂಬ ಕಲ್ಪನೆ ಇರಬಹುದು. ಆದರೆ ನಮ್ಮ ನಡುವಿನ ಬಹುಸೂಕ್ಷ್ಮ ಚಿಂತಕರೆನಿಸಿದ ರಾಜಶೇಖರರಿಗೆ?

ಕನ್ನಡದ ಇಂದಿನ ಬಹಳಷ್ಟು ಕವಿಗಳು ಮರುಕಕ್ಕೆ ಮಾತ್ರ ಅರ್ಹರಿರಬಹುದು. ಆದರೆ ಅದಕ್ಕೆ ಬೆಂಬಲವಾಗಿ ಅವರನ್ನು ಕುರಿತು ರಾಜಶೇಖರರು ಆಡಿರುವ ಮಾತುಗಳೂ ಅಷ್ಟೇ ಮರುಕಕ್ಕೆ ಅರ್ಹವಾಗಿವೆ. ಏಕೆಂದರೆ, ಸಾಹಿತ್ಯ ಯಾರದೇ ನಿರೀಕ್ಷೆಗಳಿಗೆ, ಆದೇಶಗಳಿಗೆ, ನಿರ್ದೇಶನಗಳಿಗೆ ತಕ್ಕಂತೆ ನಿರ್ಮಾಣವಾಗಲಾರದು. ಅದು ಅದರ ತತ್ಕಾಲೀನ ಸಾಮಾಜಿಕ ಸಂದರ್ಭವನ್ನು ಮೀರಿದ ಶಕ್ತಿಗಳಿಂದ ನಿರ್ಮಾಣವಾಗುವ ಸಮಷ್ಟಿಯ ನೆಲೆಯಲ್ಲಿ ಉಕ್ಕುವಂತಹುದು. ಇವೊತ್ತಿನ ಕಾವ್ಯದಲ್ಲಿ ಸಮಕಾಲೀನ ಸಂದರ್ಭದ ಒತ್ತಡಗಳು ಪ್ರತಿಬಿಂಬಿತವಾಗಿಲ್ಲವೆಂದರೆ, ಆ ಒತ್ತಡಗಳು ಕಾವ್ಯಾಭಿವ್ಯಕ್ತಿಗೆ ಸೂಕ್ತವಾದ ಸಮಷ್ಟಿಯನ್ನು ಇನ್ನೂ ನಿರ್ಮಾಣ ಮಾಡಿಲ್ಲವೆಂದೇ ಅರ್ಥ. ಹೀಗೆ ಸಮಷ್ಟಿ ನಿರ್ಮಾಣದ ಭಾಗವಾಗಿ ವ್ಯಕ್ತವಾಗದ ಅದೆಷ್ಟೋ ಕಾವ್ಯಾಭಿವ್ಯಕ್ತಿಯನ್ನು ಕನ್ನಡ ಕಂಡಿದೆ, ನಿಜ. ಆದರೆ ಅದೆಂದೂ ಊರ್ಜಿತವಾಗದ ಕೆಟ್ಟ ಕಾವ್ಯ ಮಾತ್ರವಾಗಿದೆ. ಹಾಗೇ, ಈ ಹಿಂದೆ ಸಂದರ್ಭೋಚಿತವಾಗಿ ಊರ್ಜಿತವಾದಂತೆ ತೋರಿದ ಕಾವ್ಯವೂ ಬದಲಾದ ಇಂದಿನ ಸಾಮಾಜಿಕ ಸಂದರ್ಭದಲ್ಲಿ ಸಂಶಯಾಸ್ಪದವಾಗಿ ತೋರತೊಡಗಿರುವುದನ್ನೂ ರಾಜಶೇಖರರು ಗಮನಿಸಬೇಕು. ಇಂತಹ ವಿದ್ಯಮಾನಗಳಿಂದ ಕನ್ನಡ ಕಾವ್ಯ ಪರಂಪರೆಗೆ ಆಗುವ ಆಘಾತ ಕಡಿಮೆ ಪ್ರಮಾಣದ್ದಲ್ಲ. (ಕರಾವಳಿಯ)ಕೋಮು ಹಿಂಸಾಚಾರಗಳಿಂದ ತಲ್ಲಣಗೊಂಡ ಕಾವ್ಯವೇಕೆ ಇಂದು ಬರುತ್ತಿಲ್ಲ

ಎಂದು ವ್ಯಗ್ರರಾಗಿ ಕೇಳುತ್ತಿರುವಂತೆ ತೋರುವ ಜಿ.ರಾಜಶೇಖರರ ಮಾತುಗಳಲ್ಲಿ ನನಗೆ ಇಂತಹ ಆಘಾತವನ್ನು ಆಹ್ವಾನಿಸುತ್ತಿರುವ ಸೂಚನೆ ಕಾಣುತ್ತದೆ.

ಇನ್ನು ಪ್ರಕೃತಿಯೊಳಗಿನ ವಿಸ್ಮಯವನ್ನು ಅಭಿವ್ಯಕ್ತಿಸುವ ಕವಿಗಳ ಮೇಲೆ ರಾಜಶೇಖರರು ಹರಿಹಾಯ್ದಿರುವ ರೀತಿಯಂತೂ ಅತ್ಯಂತ ಅಸಾಹಿತ್ಯಕವೂ, ಅಸಾಮಾಜಿಕವೂ ಆಗಿದೆ. ಏಕೆಂದರೆ, ಪ್ರಕೃತಿಯನ್ನು ಕುರಿತ ಮನುಷ್ಯನ ವಿಸ್ಮಯಕ್ಕೆ ಒಂದು ಕೊನೆಯಿದೆ, ಕೊನೆಯಿರಬೇಕು ಎಂದು ಇವರು ಭಾವಿಸಿದಂತಿದೆ. ಅನಂತದ ಭಾವನೆಯ ಭಾಗವಾಗಿಯೇ ಸದ್ಯದ ಭಾವನೆಯ ತೀವ್ರತೆಯೂ ಸೃಷ್ಟಿಯಾಗುವುದು ಎಂಬುದನ್ನು ಅವರು ಮರೆತಂತಿದೆ. ಈ ಸಂಬಂಧವಾಗಿ, ಈ ಹಿಂದೆ ತುರ್ತು ಪರಿಸ್ಥಿತಿಯ ರಾಜಕೀಯ ನೆಲೆಗಳಿಗೆ ಬಂಧಿತರಾಗಿ ಡಿ.ಆರ್. ನಾಗರಾಜ್ ಚಂಪಾ ಅವರ ಕವನ ಸಂಕಲನವೊಂದಕ್ಕೆ ಬರೆದ ಬೆನ್ನುಡಿಯ ಕೆಲವು ಮಾತುಗಳಿಗೆ ಯಶವಂತ ಚಿತ್ತಾಲರು ಬರೆದ ಪ್ರತಿಕ್ರಿಯೆ ನೆನಪಾಗುತ್ತಿದೆ. ನೆರೂಡಾನಿಂದ ಮೇಲ್ಮೈಯಲ್ಲಿ ಸ್ಫೂರ್ತಿಗೊಂಡಂತೆ ಡಿ.ಆರ್., ಬೀದಿಯಲ್ಲಿ ರಕ್ತ ಚೆಲ್ಲುತ್ತಿರುವಾಗ ಗುಲಾಬಿಯ ಸೌಂದರ್ಯದಲ್ಲಿ ಮಗ್ನರಾಗಿದ್ದಾರೆ ಎಂದು ಕೆಲವು ಕವಿಗಳನ್ನು ಟೀಕಿಸಿದ್ದರು. ಅದಕ್ಕೆ ಚಿತ್ತಾಲರ ಪ್ರತಿಕ್ರಿಯೆ: ಗುಲಾಬಿಯ ಸೌಂದರ್ಯದಲ್ಲಿ ಮಗ್ನವಾಗಬಲ್ಲ ಮನಸ್ಸು ಮಾತ್ರ ಬೀದಿಯಲ್ಲಿ ರಕ್ತ ಕಂಡು ತಲ್ಲಣಿಸಬಲ್ಲುದು. ಕಾವ್ಯ ಮನಸ್ಸು ಅಖಂಡವಾದದ್ದು. ಜಿ.ರಾಜಶೇಖರ್ ತಮ್ಮದೇ ಆದ ಸಾಮಾಜಿಕ ಅವಸರದಲ್ಲಿ ಅದನ್ನು ಒಡೆಯ ಹೊರಟಂತಿದೆ.

(ನವೆಂಬರ್ ೧೪, ೨೦೦೮, 'ವಿಕ್ರಾಂತ ಕರ್ನಾಟಕ')

೧೧. ಕನ್ನಡ ಸಾಹಿತ್ಯ ಸಮ್ಮೇಳನವಲ್ಲ, ಕನ್ನಡ ಜನ ಸಮ್ಮೇಳನ!

ಕನ್ನಡಿಗರ ಸ್ವಾಭಿಮಾನ ಮತ್ತೊಮ್ಮೆ ಪ್ರದರ್ಶನವಾಗಿದೆ–ಮೊನ್ನೆ ನಡೆದ ಕರ್ನಾಟಕ ರಕ್ಷಣಾ ವೇದಿಕೆಯ ಬೃಹತ್ ಸಮಾವೇಶದಲ್ಲಿ! ಜೈಕಾರ ಹಾಕುವ ಜನಜಂಗುಳಿ, ಕನ್ನಡ ಧ್ವಜಗಳ ಹಾರಾಟ, ಜನಪದ ಕಲಾವಿದರ ಕುಣಿತ, ಸಿನೆಮಾ ನಟನಟಿಯರ ಹಾಜರಾತಿ, ಮಠಾಧೀಶರ ಹಾಗೂ ಕೆಲವು ವೃತ್ತಿಪರ ಭಾಷಣಕಾರರ ಧೀರ ಕರೆಗಳು, ಒಂದಷ್ಟು ಸನ್ಮಾನಗಳು, ನಿರ್ಣಯಗಳು–ಇವೇ ಸ್ವಾಭಿಮಾನದ ಪ್ರದರ್ಶನ ಎನ್ನುವುದಾದರೆ, ಹಣವಿದ್ದ ಯಾರಾದರೂ ಇದನ್ನೊಂದು ದಂಧೆಯನ್ನಾಗಿ ಮಾಡಿಕೊಂಡು ಇನ್ನೂ ದೊಡ್ಡ ಪ್ರದರ್ಶನಗಳನ್ನು ನಡೆಸಬಹುದು. ಕರ್ನಾಟಕದ ಹೆಚ್ಚೂ ಕಡಿಮೆ ಎಲ್ಲ ಊರುಗಳಲ್ಲೂ ಶಾಖೆಗಳನ್ನು ಹೊಂದುವಷ್ಟು ಹಾಗೂ ಆಗಾಗ್ಗೆ ಕನ್ನಡಕ್ಕೆ ಸಂಬಂಧಿಸಿದಂತಷ್ಟೇ ಅಲ್ಲ, ವಿವಿಧ ಸಾಮಾಜಿಕ ಕಾರಣಗಳಿಗೂ ಪ್ರದರ್ಶನಗಳನ್ನು ನಡೆಸುವಷ್ಟು 'ಸಂಪದ್ಭರಿತ'ವಾಗಿರುವ ಈ ವೇದಿಕೆ, ಕನ್ನಡವನ್ನು ಬೆಳೆಸುವ ಕೆಲಸಕ್ಕಿಂತ ಹೆಚ್ಚಾಗಿ 'ಇತರರ ಆಕ್ರಮಣ'ದಿಂದ ಕನ್ನಡವನ್ನು ರಕ್ಷಿಸುವ ಕೆಲಸಕ್ಕೇ ತನ್ನನ್ನು ತೆತ್ತುಕೊಂಡಂತಿದೆ! ಕನ್ನಿಡಿಗರಿಂದಲೇ ಕನ್ನಡಕ್ಕೆ ಆಗುತ್ತಿರುವ ಅನ್ಯಾಯದ ಬಗ್ಗೆ ಮೌನದಿಂದಿರುವ ಈ ವೇದಿಕೆಗೆ, ಅನ್ಯಭಾಷಿಕರ ಭಾಷಾಭಿಮಾನವೇ ಸಮಸ್ಯೆಯಾದಂತಿದೆ!

ನಾವು ಕನ್ನಡಿಗರು, ಕನ್ನಡವನ್ನು ಎಲ್ಲ ಹಂತಗಳಲ್ಲಿ ಆಡಳಿತ ಭಾಷೆಯನ್ನಾಗಿ, ಶಿಕ್ಷಣ ಮಾಧ್ಯಮವನ್ನಾಗಿ ಮತ್ತು ಎಲ್ಲಕ್ಕಿಂತ ಮುಖ್ಯವಾಗಿ ಗಣಕ ಯಂತ್ರಗಳ ಭಾಷೆಯನ್ನಾಗಿ ಬೆಳಸಿ ಬಳಸದ ಹೊರತು; ಕನ್ನಡ ಸ್ವಾಭಿಮಾನದ ಹೆಸರಲ್ಲಿ ಎಂತಹುದೇ ಬೃಹತ್ ಪ್ರದರ್ಶನ ನಡೆಸಿದರೂ, ರಾಜ್ಯದ ಅನ್ಯಭಾಷಿಕರ ಭಾಷಾಭಿಮಾನದ ವಿರುದ್ಧ ಎಂತಹ ದಾಳಿ ನಡೆಸಿದರೂ, ಕನ್ನಡ ಉಳಿಯುವುದಿಲ್ಲ ಎಂಬ ಪ್ರಾಥಮಿಕ ಅರಿವೇ ಇವರಿಗೆ ಇಲ್ಲವಾಗಿದೆ. ದಿನೇ ದಿನೇ ಕನ್ನಡಿಗರೇ ಕನ್ನಡವನ್ನು ಒಂದೊಂದೇ ಕ್ಷೇತ್ರದಿಂದ ಕೈಬಿಡುತ್ತಿರುವುದರ ಹಿಂದಿನ ಕಾರಣಗಳಾದರೂ ಏನು ಎಂಬ ಆತ್ಮನಿರೀಕ್ಷಣೆಯ ಪ್ರಶ್ನೆಯನ್ನೂ ಹಾಕಿಕೊಳ್ಳಲಾಗದಷ್ಟು ಸ್ವಯಂವ್ಯಸನಕ್ಕೀಡಾಗಿರುವ ಈ(ಹಾಗೂ ಇತರ ಸಂಘಟನೆಗಳನ್ನೊಳಗೊಂಡ) ಕನ್ನಡ ಚಳುವಳಿ, ಕನ್ನಡಕ್ಕೆ ಸಂಬಂಧಿಸಿದಂತೆ ಶಾಸ್ತ್ರೀಯ ಭಾಷಾ ಸ್ಥಾನಮಾನದಂತಹ ಬರೀ ತೊಗಟೆಯ ವಿಷಯುಗಳನ್ನಷ್ಟೇ ಹಿಡಿದು ಕೂಗಾಡುತ್ತಿರುವುದು ಅದರ ಮನಸ್ಸು ಇನ್ನೂ ಮಧ್ಯಯುಗೀನತೆಯಲ್ಲೇ ಸಿಕ್ಕಿಹಾಕಿಕೊಂಡಿರುವುದನ್ನು ತೋರಿಸುತ್ತದಷ್ಟೆ. ಕನ್ನಡಿಗರೇ ಆತ್ಮತಃ ಕನ್ನಡೇತರರಾಗುತ್ತಿರುವಾಗ ಕನ್ನಡದ ರಕ್ಷಣೆ ಯಾರಿಗಾಗಿ, ಯಾರಿಂದ?

ಈ ವಿಷಯದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಕೂಡ ಗಂಭೀರವಾಗಿ ಯೋಚಿಸಿದಂತಿಲ್ಲ. ಅದೂ ಆಗಾಗ್ಗೆ ಈ ತೊಗಟೆ ಚಳುವಳಿಕಾರರ ಜೊತೆಗೇ ಗುರುತಿಸಿಕೊಳ್ಳುವಷ್ಟರ ಮಟ್ಟಿಗೆ

ಅಸಹಾಯಕವಾಗಿದೆ, ದುರ್ಬಲವಾಗಿದೆ! ವರ್ಷಕ್ಕೊಮ್ಮೆ ನಡೆಸುವ ಸಾಹಿತ್ಯ ಸಮ್ಮೇಳನಗಳ ಹೊರತಾಗಿ ಅದರಿಂದ ಕನ್ನಡದ ಕೆಲಸವೆಂದು ಕರೆಯಬಹುದಾದ ಯಾವ ಕೆಲಸವೂ ನಡೆಯುತ್ತಿಲ್ಲ. ಅದರ ಸ್ಥಳೀಯ ಶಾಖೆಗಳಂತೂ, ಆಡಳಿತ ಮಾಧ್ಯಮ, ಶಿಕ್ಷಣ ಮಾಧ್ಯಮ, ಗಣಕ ಮಾಧ್ಯಮದಂತಹ ಪ್ರಾಣದಾಯಿ ವಿಷಯಗಳ ಪರಿವೆಯೇ ಇಲ್ಲದಂತೆ, ದತ್ತಿ ಉಪನ್ಯಾಸ, ವಸಂತೋತ್ಸವ, ಸಾಹಿತ್ಯ ಹುಣ್ಣಿಮೆಗಳಂತಹ ಸ್ಥಳಿಯ ಪುಢಾರಿಗಳನ್ನು ಒಲೈಸುವ ಪುಡಿ ಕಾರ್ಯಕ್ರಮಗಳನ್ನಷ್ಟೇ ಹಾಕಿಕೊಂಡು ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು, ಸಾರಿಕೊಳ್ಳಲು ಯತ್ನಿಸುತ್ತಿವೆ. ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಸುವ ಸರ್ಕಾರದ ಕ್ರಮದ ವಿರುದ್ದ ದೊಡ್ಡ ಗುಟುರು ಹಾಕಿದ ಸಾಹಿತ್ಯ ಪರಿಷತ್ತು ನಂತರ ಮಾಡಿದ್ದಾದರೂ ಏನು?

ಈಗ ಸಾಹಿತ್ಯ ಪರಿಷತ್ತು ಉಡುಪಿಯಲ್ಲಿ ಮತ್ತೊಂದು ಸಾಹಿತ್ಯ ಸಮ್ಮೇಳನಕ್ಕೆ ಸಿದ್ಧತೆ ನಡೆಸಿದೆ. ಇದಕ್ಕೆ ಪ್ರತಿಯಾಗಿ ಕೆಲವು ಸ್ಥಳೀಯರು 'ಸೌಹಾರ್ದ ಸಾಹಿತ್ಯ ಸಮ್ಮೇಳನ' ನಡೆಸಲು ಹೊರಟಿದ್ದಾರೆ! ಅಂದರೆ ಪರಿಷತ್ತಿನ ಸಮ್ಮೇಳನದಲ್ಲಿ ಸೌಹಾರ್ದದ ಕೊರತೆ ಇದೆ ಎಂದೆ? ಸಾಹಿತ್ಯ ಪರಿಷತ್ತಿನ ಸಮ್ಮೇಳನಗಳ ವಿರುದ್ಧ ಸಮ್ಮೇಳನ ನಡೆಸುತ್ತಿರುವುದು ಇದು ಮೊದಲ ಸಲವೇನಲ್ಲ. ಮೊದಲ ಬಂಡಾಯ ಸಮ್ಮೇಳನದ ಪೌರೋಹಿತ್ಯ ವಹಿಸಿದ್ದವರೇ ಇಂದು ಪರಿಷತ್ತಿನ ಪೌರೋಹಿತ್ಯ ವಹಿಸಿದ್ದರೂ, ಈ ಬಂಡಾಯದ ಹಾವಳಿ ನಿಂತಿಲ್ಲವೆಂದರೆ, ಪರಿಷತ್ತಿನ ಮೂಲ ಸ್ವರೂಪದಲ್ಲೇ ಏನೋ ಐಬಿದೆ ಎಂದೇ ಅರ್ಥ. ಬದಲಾದ ಕಾಲ ಸಂದರ್ಭಕ್ಕೆ ತನ್ನನ್ನು ಒಗ್ಗಿಸಿಕೊಳ್ಳಲು ನಿರಾಕರಿಸುವಂತಹ ಮೂಲ ಜಡತೆ ಅದರಲ್ಲಿದ್ದಂತಿದೆ. ಈಚಿನ ವರ್ಷಗಳಲ್ಲಿ ಇದರ ಅಧ್ಯಕ್ಷ ಸ್ಥಾನಕ್ಕೆ ನಡೆಯುವ ಚುನಾವಣೆ, ಅದರಲ್ಲಿ ನಡೆಯುವ ವಿವಿಧ ರೀತಿಯ ಚಿತಾವಣೆಗಳನ್ನು ಗಮನಿಸಿದವರಾರಿಗೂ ಪರಿಷತ್ತಿನ ಪದಾಧಿಕಾರಿಗಳ ಬಗ್ಗೆ ಗೌರವ ಮೂಡಲಾರದು.

ಆದರೂ ಇದು ನಡೆಸುವ ಸಮ್ಮೇಳನಗಳಿಗೆ ಜನ ಮುಗಿ ಬೀಳುತ್ತಾರೆ. ಕಾರಣ ಅದನ್ನು ಒಂದು ಜನ ಜಾತ್ರೆಯಂತೆಯೇ ಏರ್ಪಡಿಸಲಾಗುತ್ತಿದೆ. ಸರ್ಕಾರದಿಂದ ಕೋಟ್ಯಾಂತರ ರೂಪಾಯಿಗಳ ಧನ ಸಹಾಯ ಪಡೆದು ಏರ್ಪಾಡಾಗುವ ಈ ವಾರ್ಷಿಕ ಸಾಹಿತ್ಯ ಜಾತ್ರೆ ಬಹುಶಃ ಕರ್ನಾಟಕಕ್ಕೇ ವಿಶಿಷ್ಟವಾದದ್ದು. ಬೇರೆ ಯಾವ ರಾಜ್ಯದಲ್ಲೂ ಸಾಹಿತ್ಯದ ಹೆಸರಲ್ಲಿ ಈ ಪ್ರಮಾಣದಲ್ಲಿ ಜನ ಸೇರುವುದಿಲ್ಲ. ಸೇರಿದರೆ ಸಾಹಿತಿಗಳಷ್ಟೇ ಸೇರುವುದು. ಆದರೆ ನಮ್ಮ ಸಾಹಿತ್ಯ ಸಮ್ಮೇಳನಗಳಿಗೆ ಸಾಹಿತಿಗಳಿಗಿಂತ ಸಾರ್ವಜನಿಕರೇ ಹೆಚ್ಚು ಸೇರುವುದು! ಅದೂ ಲಕ್ಷ ಲಕ್ಷಗಟ್ಟಲೆ! ಸರ್ಕಾರಿ ನೌಕರರಿಗೆ 'ರಜೆ' ಸೌಲಭ್ಯವನ್ನೂ ಒದಗಿಸುವುದರಿಂದ ಬಹುಜನಕ್ಕೆ ಇದು ವಾರ್ಷಿಕ ಸಾಂಸ್ಕೃತಿಕ ವಿಹಾರ ಯಾತ್ರೆಯೂ ಹೌದು. ನಾಲ್ಕಾರು ವರ್ಷಗಳ ಹಿಂದೆ ತುಮಕೂರು ಸಾಹಿತ್ಯ ಸಮ್ಮೇಳನಕ್ಕಾಗಿ ಸರ್ಕಾರಿ ನೌಕರರಿಂದ ದೇಣಿಗೆ ಪಡೆದದ್ದೇ ತಪ್ಪಾದಂತೆ, ಅವರ ದೂರದೂರಿನ ಬಂಧು-ಬಾಂಧವರೂ ಸಮ್ಮೇಳನಕ್ಕೆ ಮುಗಿ ಬಿದ್ದು ಊಟ-ತಿಂಡಿಗಳ ವ್ಯವಸ್ಥೆಯನ್ನೇ ಅಸ್ತವ್ಯಸ್ತಗೊಳಿಸಿದ್ದನ್ನು ನೆನಪಿಸಿಕೊಳ್ಳಬಹುದು.

ಸಾಹಿತ್ಯ ಸಮ್ಮೇಳನದ ನಿಜವಾದ ಆಕರ್ಷಣೆ ಎಂದರೆ ಊಟ ತಿಂಡಿಗಳೇ! ಸಮ್ಮೇಳನದ ಸಾಹಿತ್ಯ ಕಾರ್ಯಕ್ರಮಗಳಿಗಿಂತ ಮುಂಚೆ ಪ್ರಚಾರ ಸಿಗುವುದು ಸಮ್ಮೇಳನದ ವಿಶಿಷ್ಟ ಭಕ್ಷ್ಯ ಭೋಜ್ಯಗಳಿಗೇ! ಹಾಗಾಗಿಯೇ, ನಾಲಿಗೆ ರುಚಿಯ ಮುದುಕ ಮುದುಕಿಯರು ಸುಲಭ

ದರದಲ್ಲಿ ಭಕ್ಷ್ಯ ಭೋಜ್ಯಗಳನ್ನು ಸವಿಯುವ ದೃಷ್ಟಿಯಿಂದ ನೂರಾರು ಮೈಲಿಗಳ ದೂರದಿಂದ ಸಮ್ಮೇಳನಕ್ಕಿಂತ ಒಂದೆರಡು ದಿನ ಮುಂಚೆಯೇ ಹಾಜರಾಗಿ ಊಟ-ವಸತಿಗಳಿಗಾಗಿ ಸ್ಥಳೀಯ ಸಂಘಟಕರನ್ನು ಕಾಡುವುದು ಪ್ರತಿ ಸಮ್ಮೇಳನದಲ್ಲೂ ಸಾಮಾನ್ಯ ದೃಶ್ಯ! ಹೋದ ಬಾರಿಯ ಶಿವಮೊಗ್ಗ ಸಮ್ಮೇಳನ ನಮ್ಮ ಹಿರಿಯ ಜಾನಪದ ತಜ್ಞ ಮುದೇನೂರು ಸಂಗಣ್ಣ ಅವರ ಮಾತುಗಳಲ್ಲೇ ಹೇಳುವುದಾದರೆ, 'ದೆವ್ವನಂತಹ ಸಮ್ಮೇಳನ'! ಆ ಜನ, ಆ ಧೂಳು, ಆ ವಿವಾದ, ಆ ಹೊಡೆದಾಟ, ಆ ಪೋಲೀಸು, ಆ ಊಟ, ಅದಕ್ಕಾಗಿ ಆ ಉದ್ದನೆ ಸರತಿ ಸಾಲು, ನಿದ್ದೆಯಲ್ಲಿದ್ದ ಜನರಿಗೆ ತೊಂದರೆ ಕೊಡುತ್ತ ಬೆಳಗಿನ ಜಾವದವರೆಗೆ ನಡೆದ ಆ ಬುರ್ನಾಸು ಕವಿಗೋಷ್ಠಿ , ಪುಸ್ತಕ ಹಾಗೂ ಬಟ್ಟೆಯಂಗಡಿಗಳಲ್ಲಿ ನಡೆದ ವ್ಯಾಪಾರ ಹಾಗೂ ಕಳ್ಳತನ! ಹೀಗೆ ಎಲ್ಲ ವಿಷಯಗಳಲ್ಲೂ ದಾಖಲೆ ನಿರ್ಮಿಸಿದ ಸಮ್ಮೇಳನವದು. ಇಲ್ಲಿ ಯಾರಿಗೂ ವಿಚಾರ ಮುಖ್ಯವಿರಲಿಲ್ಲ. ಸದ್ದು-ಗದ್ದಲ-ಸಡಗರ-ಸಂಭ್ರಮ ಮುಖ್ಯ. ಊಟ-ನಿದ್ದೆ-ವಿಚಾರ-ಗದ್ದಲ-ಜಗಳ-ವ್ಯಾಪಾರ-ಕಳ್ಳತನ ಒಟ್ಟಿಗೇ ನಡೆಯುವ ಇಲ್ಲಿ ಯಾರೋ ಭಾಷಣ ಮಾಡುತ್ತಿರುತ್ತಾರೆ, ಯಾರದೋ ಪುಸ್ತಕ ಬಿಡುಗಡೆಯಾಗುತ್ತಿರುತ್ತದೆ, ಯಾರಿಗೋ ಸನ್ಮಾನ ನಡೆದಿರುತ್ತದೆ, ಯಾರ್ರೋ ನಿರ್ಣಯ ಓದುತ್ತಿರುತ್ತಾರೆ, ಯಾರೋ ಚಪ್ಪಾಳೆ ತಟ್ಟಿ ಅನುಮೋದಿಸುತ್ತಿರುತ್ತಾರೆ, ಯಾರೋ ಸಮಾರೋಪ ಭಾಷಣ ಮಾಡುತ್ತಿರುತ್ತಾರೆ. ಜನ ಸುಮ್ಮನೆ ನಿದ್ದೆಗಣ್ಣಲ್ಲೋ ಬೆರಗುಗಣ್ಣಲ್ಲೋ ನೋಡುತ್ತಿರುತ್ತಾರೆ. ಎಚ್ಚರ ಕಾಪಾಡಿಕೊಳ್ಳಲು ಆಗಾಗ್ಗೆ ತಾವೂ ಚಪ್ಪಾಳೆ ತಟ್ಟುತ್ತಿರುತ್ತಾರೆ.

ಹೀಗಾಗಿ ಸಾಹಿತ್ಯ ಸಮ್ಮೇಳನವೆಂದರೆ, ಜನ ಸಾಮಾನ್ಯರೂ ಆಯಾಸವಿಲ್ಲದೇ ಆನಂದಿಸಬಲ್ಲ ಒಂದು ಯಶಸ್ವಿ ಅಸಂಗತ ನಾಟಕವಿದ್ದಂತೆ. ಆದರೂ ನನ್ನಂತಹವರು ಇಷ್ಟಪಟ್ಟು ಸಾಹಿತ್ಯ ಸಮ್ಮೇಳನಕ್ಕೆ ಹೋಗುತ್ತೇವೆ. ಜೀವನದಲ್ಲಿ ಆಗಾಗ್ಗೆ ಇಂತಹ ಅಸಂಗತ ಸಂಭ್ರಮ-ಸಂತೋಷಗಳು ಅಗತ್ಯವಾದ್ದರಿಂದ. ಅಲ್ಲಿ ಕರ್ನಾಟಕದ ವೈವಿಧ್ಯಮಯ ಭೌತಿಕ, ಸಾಮಾಜಿಕ, ಸಾಂಸ್ಕೃತಿಕ ರೂಪಗಳು ಎದುರಾಗುತ್ತವೆ. ಅಲ್ಲಿ ತಮ್ಮ ಪುಸ್ತಕ, ಔಷಧಿ, ಬಟ್ಟೆ ಇತ್ಯಾದಿಗಳನ್ನು ಮಾರಾಟ ಮಾಡಲು ಬರುವ ಜನರನ್ನು ಜನರನ್ನು ಗಮನಿಸುವುದೇ ಒಂದು ಮೋಜಿನ ಸಂಗತಿ. ಇನ್ನು ವಿಚಾರಗಳಿಗೆ, ವಿವಾದಗಳಿಗೆ, ಕಾವ್ಯಕ್ಕೆ, ಪುಸ್ತಕಗಳಿಗೆ ಜನಸ್ತೋಮ ಪ್ರತಿಕ್ರಿಯಿಸುವ ರೀತಿ-ನೀತಿಗಳನ್ನು ನೋಡುವುದೇ ಇನ್ನೊಂದು ಮೋಜು! ಬಹುದಿನಗಳಿಂದ ಕಾಣದ ಸ್ನೇಹಿತರನ್ನು ಕಾಣಲು, ನಮ್ಮೂರಿನಲ್ಲಿ ಸಿಗದ ಪುಸ್ತಕ ಕೊಳ್ಳಲು, ಎಲ್ಲೋ ಓದಿ ಮೆಚ್ಚಿದ್ದ ಲೇಖಕರ ಮುಖ ದರ್ಶನ ಮಾಡಲು-ಸಾಧ್ಯವಾದರೆ ಮಾತಾಡಿಸಲು, ಸಹನೆ ಹಾಗೂ ತ್ರಾಣ ಇದ್ದರೆ ಸುಲಭ ದರದಲ್ಲಿ ಭಕ್ಷ್ಯ ಭೋಜ್ಯ ಸವಿಯಲು-ಹೀಗೆ ವಿವಿಧ ಉದ್ದೇಶಗಳಿಂದ ಜನ ಬರುತ್ತಾರೆ. ಹಾಗೆ ನೋಡಿದರೆ ಇದನ್ನು ಕನ್ನಡ ಸಾಹಿತ್ಯ ಸಮ್ಮೇಳನವೆಂದು ಕರೆಯುವುದು ಉಚಿತವಾಗಲಾರದು. ಇದು ಕರ್ನಾಟಕ ಜನ ಸಮ್ಮೇಳನ. ಇದನ್ನು ಹಾಗೆಂದು ಭಾವಿಸಿ ಹೋಗುವುದೇ ಒಳ್ಳೆಯದು. ಹಾಗೇ ಪರಿಷತ್ತು ಇದನ್ನು ಆ ಭಾವನೆಯಿಂದಲೇ ಸಂಘಟಿಸಿದರೆ ಇನ್ನೂ ಒಳ್ಳೆಯದು. ಇಲ್ಲಿನ ಸಾಹಿತ್ಯ-ಸಂಸ್ಕೃತಿ ಚರ್ಚೆಗಳಿಂದ ಯಾರಿಗಾದರೂ ಪ್ರಯೋಜನವಾದ;ಹಾಗೇ ಇದರ ನಿರ್ಣಯಗಳು ಜಾರಿಯಾದ ಸಂಗತಿ ಇನ್ನೂ ಬೆಳಕಿಗೆ ಬರಬೇಕಿದೆ

ಪರಿಸ್ಥಿತಿ ಹೀಗಿರುವಾಗ, ಕೆಲವು ಗೆಳೆಯರು ಉಡುಪಿಯಲ್ಲಿ ಪ್ರತಿ ಸಮ್ಮೇಳನವೊಂದನ್ನು

ಏಕೆ ಮಾಡಹೊರಟಿರುವರೋ ತಿಳಿಯದು! ಸ್ಥಳೀಯ ಸಂಘಟಕರು ಒಂದು ರಾಜಕೀಯ ನಿಲುವಿಗೆ ಬದ್ಧರಾದವರೆಂದೇ? ಹಾಗಾದರೆ, ಪ್ರತಿ ಸಮ್ಮೇಳನ ಮಾಡ ಹೊರಟಿರುವವರು? ಇವರು ಪರಿಷತ್ತಿನ ಸಮ್ಮೇಳನಕ್ಕೆ ಸಲ್ಲದ ರಾಜಕೀಯ ಹಾಗೂ ಸಾಂಸ್ಕೃತಿಕ ಮಹತ್ವ ಕೊಟ್ಟು ತಾವೂ ಮಹತ್ವ ಪಡೆಯಲು ಹೊರಟಂತಿದೆ! ಹಾಗೆ ನೋಡಿದರೆ, ಈ ಪ್ರತಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಲಿರುವ ಮಹನೀಯರ ಸಾಹಿತ್ಯಿಕ ಮಹತ್ವವಾದರೂ ಏನು? ಇಂತಹ ಅಸಾಹಿತ್ಯಕ ನೆಲೆಯ ಸವಾಲಿನಿಂದ ಸಾಹಿತ್ಯ ಸಮ್ಮೇಳನದ ಗುಣಮಟ್ಟವನ್ನು ಸುಧಾರಿಸಲು ಸಾಧ್ಯವೇ? ಅಥವಾ ಇವರ ಉದ್ದೇಶವೇ ಬೇರೆ ಏನಾದರೂ ಇದೆಯೇ? ಕಾದು ನೋಡಬೇಕು. ಆದರೆ ಕರ್ನಾಟಕದ ಈ ವಿಶಿಷ್ಟ ಜನ ಜಾತ್ರೆ, ಸಮ್ಮೇಳನದಿಂದ ಸಮ್ಮೇಳನಕ್ಕೆ ರಾಜಕೀಯ ಮೇಲಾಟದ ವೇದಿಕೆಯಾಗಿ ಪರಿವರ್ತಿತವಾಗುತ್ತಿರುವುದು ಮಾತ್ರ ದುರದೃಷ್ಟಕರ.

(ಡಿಸೆಂಬರ್ ೧೪, ೨೦೦೭, 'ವಿಕ್ರಾಂತ ಕರ್ನಾಟಕ')

೧೨. ಸಾರ್ಥಕವಾಗದ ಸಾಹಿತ್ಯ ಸಮ್ಮೇಳನಗಳು

ಇನ್ನೊಂದು ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಮುಗಿದಿದೆ. ಚಿತ್ರದುರ್ಗದಲ್ಲಿ ನಡೆದ ಈ ೭೫ನೇ ಸಮ್ಮೇಳನ ಬಹು ಯಶಸ್ವಿಯೆಂದು ಅದರ ಸಂಘಟಕರೂ, ಅವ್ಯವಸ್ಥೆಯ ಆಗರವಾಗಿತ್ತೆಂದು ಮಾಧ್ಯಮದವರೂ ಹೇಳತೊಡಗಿದ್ದಾರೆ. ಸಂಘಟನೆಯ ನೇತೃತ್ವ ವಹಿಸಿದ್ದ ಜಿಲ್ಲಾಧಿಕಾರಿ ಬಿಸ್ವಾಸ್ ಸ್ಥಳೀಯ ಪುಢಾರಿಗಳನ್ನು(ಇವರಲ್ಲಿ ಸ್ಥಳೀಯ ಪತ್ರಕರ್ತರೂ, ಅವರ ಗೆಣೆಕಾರರೂ ಸೇರಿರುತ್ತಾರೆ ಎಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ!) ಸಂಘಟನೆಯ ಕಾರ್ಯದಲ್ಲಿ (ಅಂದರೆ ಹಣಕಾಸಿನ ವ್ಯವಹಾರಗಳಲ್ಲಿ) ತೊಡಗಿಸಿಕೊಳ್ಳದೇ ಇದ್ದುದೇ, ಮಾಧ್ಯಮಗಳಲ್ಲಿ ಪ್ರತಿಕೂಲ ವರದಿಗಳಿಗೆ ಕಾರಣವಾಗಿದೆ ಎಂದೂ ಹೇಳಲಾಗುತ್ತಿದೆ. ಗೋಷ್ಠಿಯೊಂದು ಜನವೇ ಇಲ್ಲದೆ ಭಣಗುಟ್ಟಿತೆಂದು ಸೂಚಿಸುತ್ತಾ ಕನ್ನಡದ ಪ್ರಮುಖ ಪತ್ರಿಕೆಯೊಂದು ತನ್ನ ಮುಖ ಪುಟದಲ್ಲೇ ಖಾಲಿ ಕುರ್ಚಿಗಳ ಚಿತ್ರವೊಂದನ್ನು ಪ್ರಕಟಿಸಿತ್ತು. ಆದರೆ ಈ ಗೋಷ್ಠಿಗೆ ಹೋಗಿದ್ದ ನನ್ನ ಸ್ನೇಹಿತರೊಬ್ಬರ ಪ್ರಕಾರ ಈ ಗೋಷ್ಠಿ ಸಾಕಷ್ಟು ತುಂಬಿದ ಸಭಿಕರ ನಡುವೆಯೇ ಯಶಸ್ವಿಯಾಗಿ ನಡೆದಿದ್ದು, ಪತ್ರಿಕೆಯವರು ಹಿಂಭಾಗದಲ್ಲಿ ಖಾಲಿ ಇದ್ದ ಕುರ್ಚಿಗಳ ಚಿತ್ರ ತೆಗೆದು ಪ್ರಕಟಿಸಿದ್ದಾರಷ್ಟೆ! ನಾನೂ ಒಂದು ದಿನದ ಮಟ್ಟಿಗೆ ಸಮ್ಮೇಳನಕ್ಕೆ ಹೋಗಿದ್ದೆ. ಅಲ್ಲೇನೂ ಅವ್ಯವಸ್ಥೆ ನನಗೆ ಕಾಣಲಿಲ್ಲ. ಆ ಹೊತ್ತಿಗೆ ಬಹುಶಃ ಊಟ-ವಸತಿಗಳಿಗೆ ಸಂಬಂಧಿಸಿದಂತೆ ಉದ್ಭವವಾಗಿದ್ದ ಅವ್ಯವಸ್ಥೆಯನ್ನು ಸರಿಪಡಿಸಲಾಗಿತ್ತೆಂದು ಕಾಣುತ್ತದೆ. ಅಂದು ನಡೆದ ಅತಿ ಸಾಧಾರಣ ಕವಿಗೋಷ್ಠಿಯೊಂದನ್ನೂ, ಆನಂತರ ನಡೆದ ಸಮ್ಮೇಳನಾಧ್ಯಕ್ಷರೊಡನೆಯ ಸಂವಾದವನ್ನು ಬೃಹತ್ ಚಪ್ಪರದಡಿ ಸೇರಿದ್ದ ಬೃಹತ್ ಜನಸಮೂಹ ಶಾಂತ ರೀತಿಯಲ್ಲೇ ಕೇಳಿತು. ವಿಶೇಷವಾಗಿ ಎಲ್. ಬಸವರಾಜು ಅವರ ಸಹಜ ಹಾಗೂ ದಿಟ್ಟ ಮಾತುಗಾರಿಕೆಯನ್ನು ಮೆಚ್ಚಿ ಚಪ್ಪಾಳೆ ತಟ್ಟಿ ಸಂತೋಷಿಸಿತು ಕೂಡಾ.

ಅದೇನೇ ಇರಲಿ, ಈಚಿನ ವರ್ಷಗಳಲ್ಲಿ ಸಾಹಿತ್ಯ ಸಮ್ಮೇಳನಗಳು ಹೆಚ್ಚೆಚ್ಚು ಅದ್ದೂರಿಯಾಗುತ್ತಿವೆ. ಅವು ಕೋಟ್ಯಾಂತರ ರೂಪಾಯಿಗಳ ವ್ಯವಹಾರವಾಗಿ ಪರಿವರ್ತಿತವಾಗುತ್ತಿವೆ. ಹೀಗಾಗಿ ಬೃಹತ್ ಚಪ್ಪರ, ಬೃಹತ್ ವೇದಿಕೆ, ಅವುಗಳ ಬೃಹತ್ ಪ್ರಮಾಣದ ಅಲಂಕಾರ, ಲಕ್ಷಾಂತರ ಜನಕ್ಕೆ ಊಟ-ವಸತಿ, ಪುಸ್ತಕ ಮುದ್ರಣ, ಹಾರ ತುರಾಯಿ, ಸ್ಮರಣಿಕೆ ಇತ್ಯಾದಿಗಳ ಈ ಬೃಹತ್ ವ್ಯವಹಾರದಲ್ಲಿ ದಲ್ಲಾಳಿಗಳಾಗಲು ಸ್ಥಳೀಯ ಪುಢಾರಿಗಳು ಹಾತೊರೆಯುತ್ತಿರುತ್ತಾರೆ. ಅದರೆ ಈ ಬಾರಿಯ ಸಮ್ಮೇಳನದಲ್ಲಿ ಇವರೆಲ್ಲರನ್ನೂ ದೂರವಿಟ್ಟು, ಎಲ್ಲವನ್ನೂ ತಮ್ಮ ಕಛೇರಿಯ ಸುಪರ್ದಿಯಲ್ಲೇ ಕಟ್ಟುನಿಟ್ಟಾಗಿ ನಡೆಸಿದರೆಂದು

ಹೇಳಲಾದ ಜಿಲ್ಲಾಧಿಕಾರಿ ಬಿಸ್ವಾಸ್ ಅವರೇನೋ, ಪ್ರತಿ ಗೋಷ್ಠಿಯನ್ನೂ ಕನಿಷ್ಠ ೨೦–೨೫ ಸಾವಿರ ಜನ ಕೂತು ಕೇಳಿದ್ದಾರೆ ಎಂದು ಹೇಳುತ್ತಾ ಸಮ್ಮೇಳನ ಯಶಸ್ವಿಯಾಗಿದೆ ಎಂಬ ತಮ್ಮ ಹೇಳಿಕೆಯನ್ನು ಸಮರ್ಥಿಸಿಕೊಂಡಿದ್ದಾರೆ. ಆದರೆ ಸಂತೆಯಂತಹ ಇಂತಹ ಸಮ್ಮೇಳನಗಳಲ್ಲಿ ಜನ ಸಾವಿರಾರು ಸಂಖ್ಯೆಯಲ್ಲಿ ಕೂತಿದ್ದರೆಂಬುದೇ ಸಮ್ಮೇಳನದ ಯಶಸ್ಸಿಗೆ ಮಾನದಂಡವಾಗಲಾರದು.

ಸಾಹಿತ್ಯ ಸಮ್ಮೇಳನವೆಂದರೆ ಇತ್ತೀಚೆಗೆ ಸಾಹಿತ್ಯದೊಂದಿಗೆ ಅಥವಾ ಸಾಹಿತ್ಯಕ್ಕಿಂತ ಹೆಚ್ಚಿಗೆ ಇತರ ಆಕರ್ಷಣೆಗಳು ಹೆಚ್ಚಾಗಿವೆ. ವಿಶೇಷವಾಗಿ, ಅತಿ ರಿಯಾಯ್ತಿ ದರದಲ್ಲಿ–ಪತ್ರಿಕೆಗಳು ಎಲ್ಲಕ್ಕಿಂತ ಮುಂಚೆ ಪ್ರಚಾರ ಮಾಡುವ–ಭರ್ಜರಿ ಊಟ ತಿಂಡಿಗಳ ಮತ್ತು ವಸತಿ ವ್ಯವಸ್ಥೆ, ಪರಸ್ಥಳ ಸಂದರ್ಶನದ ಸಂತೋಷ, ವೈವಿಧ್ಯಮಯ ಸರಕುಗಳ ಮಾರಾಟದ ಜನ ಜಂಗುಳಿಯ ಜಾತ್ರೆಯ ವಾತಾವರಣ, ಹಲವು ಸ್ನೇಹಿತರನ್ನು ಒಂದೆಡೆಯಲ್ಲೇ ಭೇಟಿ ಮಾಡುವ ಸದವಕಾಶ, ಸರ್ಕಾರಿ ನೌಕರರಿಗಂತೂ ವಿಶೇಷ ರಜೆಯೊಂದಿಗೆ ತಮ್ಮ ಹೆಂಡಿರು–ಮಕ್ಕಳೊಡನೆ ವಿಹಾರ ಮಾಡುವ ಸೌಲಭ್ಯ ಇತ್ಯಾದಿ. ಹೀಗಾಗಿ ಸಾವಿರಾರು, ಲಕ್ಷಾಂತರ ಜನ ಬರುತ್ತಾರೆ. ಇವರಲ್ಲಿ ಒಂದಲ್ಲ ಒಂದು ಭಾಗ, ಒಂದಲ್ಲ ಒಂದು ಸಮಯದಲ್ಲಿ ದಣಿವಾರಿಸಿಕೊಳ್ಳಲೆಂಬಂತೆ ಚಪ್ಪರದ ನೆರಳಿನಲ್ಲಿ ತಮ್ಮ ಸ್ನೇಹಿತರು ಅಥವಾ ಬಂಧು ಬಾಂಧವರೊಡಗೂಡಿ ಸಾವಿರಾರು ಸಂಖ್ಯೆಯಲ್ಲಿ ಕೂತು ಭಾಗವಹಿಸುವುದು ವಿಶೇಷ ಸಂಗತಿಯೇನಲ್ಲ. ಆದರೆ ಇದರ ಮೂಲಕ ಸಾರತಃ ಏನನ್ನು ಸಾಧಿಸಲಾಯಿತು ಎಂದು ಯೋಚಿಸಿದಾಗ ನಿರಾಸೆಯೇ ಆಗುತ್ತದೆ.

ಏಕೆಂದರೆ, ಇತ್ತೀಚಿನ ವರ್ಷಗಳಲ್ಲಿ ಅಖಿಲ ಭಾರತ(ಇದು ಅಖಿಲ ಭಾರತ ಏಕೋ, ಹೇಗೋ ತಿಳಿಯದು!) ಸಾಹಿತ್ಯ ಸಮ್ಮೇಳನಗಳ ಗೋಷ್ಠಿಗಳ ಗುಣಮಟ್ಟ ತೀರಾ ಕಳಪೆಯಾಗತೊಡಗಿದೆ. ಈ ಕಳಪೆತನಕ್ಕೆ ಯಾರ ನಿಯಂತ್ರಣಕ್ಕೂ ಸಿಗದಷ್ಟು ಸಂಖ್ಯೆಯ ಗೋಷ್ಠಿಗಳು, ಅವುಗಳಿಗೆ ನಿಶ್ಚಯಿಸಲಾಗುವ ಅತಿ ಸ್ಥೂಲವೆನಿಸುವ ವಿಷಯಗಳು ಹಾಗೂ ಅದರಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸುವವರ ಆಯ್ಕೆಯಲ್ಲಿನ ಅಗ್ಗದ ರಾಜಕಾರಣ, ಕಾರಣವಾಗಿದೆ. ಕವಿಗೋಷ್ಠಿಗಳಂತೂ ಕುಕವಿಗಳ ಸಂತೆಯಂತಿರುತ್ತವೆ! ಅವುಗಳಲ್ಲಿ ಅಕಸ್ಮಾತ್ ಸೇರಿರುವ ಇಬ್ಬರೋ ಮುವ್ವರೋ ಒಳ್ಳೆಯ ಕವಿಗಳ ಪಾಡಂತೂ ನಾಯಿಪಾಡೇ ಆಗಿರುತ್ತದೆ! ಇದರಿಂದಾಗಿ ಅಲ್ಲಿ ಸೇರಿರುವ ಜನಸ್ತೋಮಕ್ಕೆ ಸಾಹಿತ್ಯದ ಬಗ್ಗೆ ಒಂದು ಸುಲಭ ಮತ್ತು ಕೆಟ್ಟ ಕಲ್ಪನೆಯನ್ನು ಕೊಟ್ಟಂತಾಗುತ್ತದೆ. ಇದು ಇಂದಿನ ಸಾಹಿತ್ಯ ಸಮ್ಮೇಳನಗಳ ದೊಡ್ಡ ಅಪಾಯವೂ ಆಗಿದೆ. ಜೊತೆಗೆ, ಬಹುಪಾಲು ಗೋಷ್ಠಿಗಳು ಸಾಹಿತ್ಯೇತರ ವಿಷಯುಗಳಿಗೇ ಸಂಬಂಧಿಸಿದಂತಿರುವುದು ಇತ್ತೀಚಿನ ಸಮ್ಮೇಳನಗಳ ವಿಶೇಷತೆಯಾಗಿದೆ. ನಿಜ, ಸಾಹಿತ್ಯ ಪರಿಷತ್ತು ಈಗ ಕೇವಲ ಸಾಹಿತ್ಯ ಸಂಘಟನೆಯಾಗಿ ಉಳಿದಿಲ್ಲ. ಅದು ನುಡಿಯ ಜೊತೆಗೇ ನಾಡಿನ ಹಿತವನ್ನೂ ಕಾಯ್ದುಕೊಂಡು ಹೋಗುವ ಜವಾಬ್ದಾರಿಯನ್ನೂ ಹೊತ್ತಿದೆ. ವಾಸ್ತವವಾಗಿ ಅದು ಆರಂಭವಾದದ್ದೇ ನುಡಿ ಹಿತ ಕಾಯುವ ಮೂಲಕ ನಾಡ ಹಿತ ಕಾಯುವ ಉದ್ದೇಶದಿಂದ. ಹಾಗಾಗಿ, ನಾಡಿನ ಹಿತ ಕಾಯುವ ಈ ಜವಾಬ್ದಾರಿಯನ್ನು ನುಡಿಯ ಹಿತ ಕಾಯುವ ಕೆಲಸದ ಒಂದು ಭಾಗವಾಗಿಯೇ ನಿರ್ವಹಿಸುವ ಎಚ್ಚರವನ್ನೂ ಪರಿಷತ್ತು

ಕಾಯ್ದುಕೊಂಡು ಹೋಗಬೇಕಿದೆ. ಇಲ್ಲವಾದರೆ ಸಾಹಿತ್ಯ ಪರಿಷತ್ತಿನ ವಿಶಿಷ್ಟತೆಯೇ ನಾಶವಾಗಿ, ಅದೊಂದು ಈಗಾಗಲೇ ರಾಜ್ಯದಲ್ಲಿ ತಲೆಯೆತ್ತಿರುವ ಅನೇಕ ಸಾರ್ವತ್ರಿಕ ಪುಢಾರಿ ಸಂಘಟನೆಗಳಲ್ಲೊಂದು ಮಾತ್ರವಾಗಿ, ತನ್ನೆಲ್ಲ ಘನತೆಯನ್ನೂ ಕಳೆದುಕೊಳ್ಳುತ್ತದೆ.

ಕೆಲವು ದಿನಗಳ ಹಿಂದೆ ನನ್ನ ಗೆಳೆಯರೊಬ್ಬರು, ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಕೆ ಮತ್ತು ಶಿಕ್ಷಣ ಮಾಧ್ಯಮ ವಿಷಯಗಳಿಗೆ ಸಂಬಂಧಿಸಿಯೋ ಏನೋ; ಲೋಕಾಭಿರಾಮವಾಗಿ ಮಾತನಾಡುತ್ತಾ, ಕರ್ನಾಟಕದಲ್ಲಿ ಎಲ್ಲ ವಿಷಯಗಳಲ್ಲೂ ಸಾಹಿತಿಗಳೇ ಪರಿಣತರಂತೆ ಮಾತಾಡುವ ಪ್ರವೃತ್ತಿಯ ಬಗ್ಗೆ ವ್ಯಂಗ್ಯವಾಡಿದರು. ನಿಜ, ಎಲ್ಲ ಸಾರ್ವತ್ರಿಕ ವಿಷಯಗಳಿಗೂ ಸಾಹಿತಿಗಳೇ ವಕ್ತಾರರಾಗುವುದು ಸರಿಯಲ್ಲ. ಆದರೆ ಇಂದು ಕರ್ನಾಟಕದಲ್ಲಿ ಸಾಹಿತಿಗಳನ್ನು ಬಿಟ್ಟು ಇತರೆ ವೃತ್ತಿವಂತರಾಗಲೀ, ಸಾರ್ವಜನಿಕರಾಗಲೀ ನಾಡು-ನುಡಿಗಳ ಬಗ್ಗೆ ವಿಶೇಷವಾಗಿ ಮತ್ತು ಗಂಭೀರವಾಗಿ ಚಿಂತಿಸಿ ಮಾತಾಡುವವರು ಎಷ್ಟು ಜನರಿದ್ದಾರೆ? ಇವರೆಲ್ಲ ತಮ್ಮ ವೃತ್ತಿ ವ್ಯವಹಾರಗಳಲ್ಲೇ ಮುಳುಗಿ, ಅದಷ್ಟೇ ಬದುಕು ಎಂಬ ಭ್ರಮೆ ಸೃಷ್ಟಿಸಿದ್ದಾರಲ್ಲಾ? ಈ ಭ್ರಮೆಯನ್ನು ತೊಡೆದು ಹಾಕಲಾದರೂ ಸಾಹಿತಿಗಳು ಕರ್ನಾಟಕದ ಸಾರ್ವಜನಿಕ ಜೀವನದ ಬೇಕು ಬೇಡಗಳ ಬಗ್ಗೆ ಮಾತನಾಡುವುದು ಅನಿವಾರ್ಯವಾಗಿದೆ ಅಲ್ಲವೆ?

ಹಾಗೆ ನೋಡಿದರೆ ಇದು ಕರ್ನಾಟಕ ಏಕೀಕರಣದ ದಿನಗಳಿಂದ ನಡೆದು ಬಂದ ಪರಂಪರೆಯಾಗಿದೆ. ಏಕೆಂದರೆ, ನುಡಿಯ ಹಿತದ ಜೊತೆಗೇ ನಾಡಿನ ಜನರ ಬದುಕಿನ ಹಿತವೂ ತಳಕು ಹಾಕಿಕೊಂಡಂತೆಯೇ ನಮ್ಮೆಲ್ಲ ಹಿರಿಯ ಸಾಹಿತಿಗಳ ಚಿಂತನ ನಡೆದು ಬಂದಿದೆ. ಹಾಗಾಗಿ ಸಾಹಿತ್ಯ ಸಮ್ಮೇಳನ ಸಂಪೂರ್ಣವಾಗಿ ಸಾಹಿತ್ಯ ಸಮ್ಮೇಳನವಾಗದಿದ್ದರೂ, ಸಾಹಿತಿಗಳ ಸಮ್ಮೇಳನವಂತೂ ಆಗಬೇಕಿದೆ. ಭಾಷೆ ಮತ್ತು ಸಾಹಿತ್ಯ ಕುರಿತ ಚರ್ಚೆ ಅದರ ಮುಖ್ಯ ಕಾಳಜಿಯಾಗಿರಬೇಕು. ಅದರ ಆಧಾರದ ಮೇಲೆ ಅಥವಾ ಆ ಮೂಲಕ ಇತರ ವಿಷಯಗಳ ಚರ್ಚೆ, ಪೂರಕ ಗೋಷ್ಠಿಗಳಾಗಿ ನಡೆಯಲಿ. ಹಾಗಾದಾಗ ಮಾತ್ರ ಸಾಹಿತ್ಯ ಪರಿಷತ್ತು ಒಂದು ವಿಶೇಷ ಪರಿಣಿತ ಸಂಸ್ಥೆ ಎನಿಸಿ, ಅದರ ಧ್ವನಿಗೂ ಒಂದು ತೂಕ ಮತ್ತು ಮಾನ್ಯತೆಗಳು ಸಿಕ್ಕಾವು. ಇಲ್ಲದೇ ಹೋದರೆ, ಅದು ಪ್ರತಿ ವರ್ಷ ಕಳ್ಳರೂ ಸೇರಿದಂತೆ ಎಲ್ಲರೂ ಸೇರುವ ಸಮ್ಮೇಳನವೆಂಬ ಬೃಹತ್ ಸಂತೆ ನಡೆಸಲು ಸರ್ಕಾರ ಮತ್ತು ಮಠಾಧಿಪತಿಗಳ ಮುಂದೆ ಹಲ್ಲು ಕಿರಿದು ನಿಲ್ಲುವ ಸಂಸ್ಥೆಯಾಗಿ ಮಾತ್ರ ಜನರ ಮುಂದೆ ಪಸ್ತುತಗೊಂಡು, ಹಾಸ್ಯಾಸ್ಪದವಾಗುತ್ತದೆ. ಏಕೆಂದರೆ, ಪರಿಷತ್ತು ಈ ಸಮ್ಮೇಳನಗಳನ್ನು ನಡೆಸುವುದರ ಹೊರತಾಗಿ ನಾಡು-ನುಡಿಗೆ ಸಂಬಂಧಿಸಿದಂತೆ ಇಂದಿಗೆ ಪ್ರಸ್ತುತವೆನಿಸುವ ಇನ್ನಾವ ಘನ ಕಾರ್ಯವನ್ನೂ ಮಾಡುತ್ತಿರುವಂತೆ ತೋರುತ್ತಿಲ್ಲ.

ಇದು ಕಷ್ಟಸಾಧ್ಯ. ಕಷ್ಟ ಏಕೆಂದರೆ, ಸಾಹಿತ್ಯ ಪರಿಷತ್ತಿನ ಇಂದಿನ ರಚನೆಯೇ ಹಾಗಿದೆ. ಇದರ ಅಧ್ಯಕ್ಷ ಸ್ಥಾನಕ್ಕೆ ಇತ್ತೀಚಿನ ವರ್ಷಗಳಲ್ಲಿ ನಡೆಯುವ ತುರಸಿನ ಸ್ಪರ್ಧೆ ನೋಡಿದರೆ ಅದೊಂದು ರಾಜಕೀಯ ಚುನಾವಣೆಯ ಎಲ್ಲ ದುಷ್ಟ ಲಕ್ಷಣಗಳನ್ನೂ ಹೊತ್ತೇ ನಡೆಯುತ್ತದೆ

ಎಂಬುದು ಯಾರಿಗಾದರೂ ಸ್ಪಷ್ಟವಾಗುವಂತಿದೆ. ಹಣದ ಪ್ರಭಾವ ಅಷ್ಟಿಲ್ಲದಿದ್ದರೂ, ಜಾತಿ–ಮತಗಳ ಹಾವಳಿಯಂತೂ ಇದ್ದೇ ಇದೆ. ಕಳೆದ ಚುನಾವಣೆಯಲ್ಲಿ ಯಾರ್‍ಯಾರಿಗೆ ಎಲ್ಲೆಲ್ಲಿ ಎಷ್ಟೆಷ್ಟು ಮತ್ತು ಏಕೆ ಮತಗಳು ಬಿದ್ದಿವೆ ಎಂಬುದೇ ಒಂದು ಕುತೂಹಲಕಾರಿ ಅಧ್ಯಯನದ ವಸ್ತುವಾಗಬಲ್ಲುದು! ಆದರೆ, ಅದೃಷ್ಟವಶಾತ್ ಈವರೆಗೆ ರಾಜ್ಯ ಮಟ್ಟದಲ್ಲಿ–ಶ್ರೀಮಾನ್ ಹರಿಕೃಷ್ಣ ಪುನರೂರರ ಹೊರತಾಗಿ–ಸಾಹಿತ್ಯಾಭಿರುಚಿಯ ದೃಷ್ಟಿಯಿಂದ ಅಯೋಗ್ಯರೆಂಬುವವರು ಯಾರೂ ಆಯ್ಕೆಯಾಗಿಲ್ಲ. ಆದರೆ ಇದೇ ಮಾತನ್ನು ಜಿಲ್ಲಾ ಮಟ್ಟದ ಅಧ್ಯಕ್ಷರು ಮತ್ತು ಇತರ ಪದಾಧಿಕಾರಿಗಳ ಬಗ್ಗೆ ಹೇಳುವಂತಿಲ್ಲ. ಇವರಲ್ಲಿ ಬಹಳಷ್ಟು ಜನ ಸಾಹಿತ್ಯ ಗಂಧವಿಲ್ಲದ ಸ್ಥಳೀಯ ಪುಢಾರಿಗಳು. ಇದಕ್ಕೆ ಮುಖ್ಯ ಕಾರಣ, ಸಾಹಿತ್ಯ ಪರಿಷತ್ತಿನ ಸದಸ್ಯ ಸ್ವರೂಪ ಅದರ ಕಾರ್ಯಾಚರಣೆಯ ಶೈಲಿಯಿಂದಾಗಿಯೇ ಕ್ರಮೇಣ ಅಸಾಹಿತ್ಯಕವಾಗುತ್ತಾ ಹೋದದ್ದು: ಸಾಹಿತ್ಯ ಮಾರ್ಯದೆಯುಳ್ಳ ಜನ ಇದರಿಂದ ದೂರವಾಗುತ್ತಾ, ಸದಸ್ಯರಾಗಲು ಹಿಂಜರಿಯುತ್ತಾ ಹೋಗಿ; ಬರೀ ವ್ಯಾಪಾರಿಗಳು, ಕಂಟ್ರಾಕ್ಟುದಾರರು ಮತ್ತು ಹಲವು ಜಾತಿವಾದಿ ಗುಂಪುಗಳು ಸಾಮೂಹಿಕವಾಗಿ ಸದಸ್ಯತ್ವ ಪಡೆಯುತ್ತಾ ಹೋದದ್ದು ಅಥವಾ ಅದನ್ನು ಕೆಲವರು ತಮ್ಮ ಚುನಾವಣಾ ಹಿತ ದೃಷ್ಟಿಯಿಂದ ಪ್ರಾಯೋಜಿಸುತ್ತಾ ಹೋದದ್ದು.

ಇದರಿಂದಾಗಿ ಜಿಲ್ಲಾ ಮಟ್ಟದಲ್ಲಿ ಎಂತಹ ಪ್ರಭೃತಿಗಳು ಪದಾಧಿಕಾರಗಳಲ್ಲಿ ಬಂದು ಕೂತಿದ್ದಾರೆಂದರೆ, ಅವರಿಗೆ ಸ್ಥಳೀಯ ರಾಜಕಾರಣಿಗಳ, ಮಠಾಧಿಪತಿಗಳ ಮತ್ತು ಅಧಿಕಾರಿಗಳ ಒಡನಾಟ ಉಳಿಸಿಕೊಂಡು ಹೋಗಲು ಒಂದು ಮಾಧ್ಯಮವಾಗಿಯಷ್ಟೇ ಸಾಹಿತ್ಯ ಪರಿಷತ್ತಿನ ಅಗತ್ಯವಿರುತ್ತದೆ. ಹಾಗಾಗಿ ಇವರು ನಡೆಸುವ ಸಾಹಿತ್ಯ ಸಮ್ಮೇಳನಗಳ ಗೋಷ್ಠಿಗಳಲ್ಲಿ ಹೆಚ್ಚಾಗಿ ತುಂಬಿರುವವರು ಸ್ಥಳೀಯ ಅಧಿಕಾರ ಕೇಂದ್ರಗಳ 'ಸಂಪರ್ಕ' ಹೊಂದಿದ ಚೇಲಾ 'ಸಾಹಿತಿ'ಗಳೇ. ಇಲ್ಲಿ ಗೋಷ್ಠಿಗಳಲ್ಲಿ ಭಾಗವಹಿಸುವುದಕ್ಕಿಂತ ಹೆಚ್ಚಾಗಿ ಸ್ವಾಗತ, ನಿರೂಪಣೆ, ವಂದನಾರ್ಪಣೆ ಮಾಡಲು ನೂಕುನುಗ್ಗಲು. ಆಹ್ವಾನ ಪತ್ರಿಕೆಗಳ ತುಂಬಾ ಇವರದೇ ಹಾವಳಿ! ಹೀಗಾಗಿ ಸಣ್ಣ ಊರುಗಳಲ್ಲಿ ಜನ ಅಲ್ಲಿಗೆ ಸಂತೆಗೆ ಹೋಗುವಂತೆ, ಸಾಹಿತ್ಯೋದ್ದೇಶವೊಂದರ ಹೊರತಾಗಿ ಇನ್ನೆಲ್ಲ ಉದ್ದೇಶಗಳೊಂದಿಗೆ ಸಂಭ್ರಮದಿಂದ ಹೋಗಿ ಬರುತ್ತಾರೆ. ದೊಡ್ಡ ಊರುಗಳಲ್ಲಿ ಅದೂ ಇಲ್ಲ. ಮಂತ್ರಿ ಮಹೋದಯರು ಮತ್ತು ಮಠಾಧಿಪತಿಗಳು ಭಾಗವಹಿಸುವ ಉದ್ಘಾಟನಾ ಅಥವಾ ಸಮಾರೋಪ ಕಾರ್ಯಕ್ರಮಗಳನ್ನು ಬಿಟ್ಟರೆ ಎಲ್ಲ ಭಣ ಭಣ!

ಇಂತಹ ಜಿಲ್ಲಾ ಘಟಕಗಳನ್ನು ಹೊಂದಿದ ಕೇಂದ್ರ ಸಮಿತಿ ತನ್ನ ಸಮ್ಮೇಳನದ ಗುಣಮಟ್ಟವನ್ನು ಕಾಪಾಡಿಕೊಂಡು ಹೋಗುವುದಾದರೂ ಹೇಗೆ? ಇದಕ್ಕೊಂದೇ ದಾರಿ. ರಾಜ್ಯ ಮಟ್ಟದಲ್ಲಿನ್ನೂ ಅಧ್ಯಕ್ಷ ಸ್ಥಾನದ ಅಭ್ಯರ್ಥಿಗಳ ಗುಣಮಟ್ಟ ಗಾಬರಿ ಪಡುವಷ್ಟೇನೂ ಕಳಪೆಯಾಗಿಲ್ಲದಿರುವುದರಿಂದ(ಇದೂ ಕಳಪೆಯಾದಲ್ಲಿ ಬೇರೆ ಮಾರ್ಗಗಳನ್ನು ಹುಡುಕಬೇಕಾಗುತ್ತದೆ!) ಈ ಪ್ರತಿ ಅಭ್ಯರ್ಥಿಯೂ, ಜಿಲ್ಲಾ ಮಟ್ಟದಲ್ಲಿಯೂ ತನ್ನ ಆಯ್ಕೆಯ ಅಭ್ಯರ್ಥಿಯೊಬ್ಬರನ್ನು ನಿಲ್ಲಿಸುವ ಮತ್ತು ಅಂತಹವರು ಮಾತ್ರ ಅಭ್ಯರ್ಥಿಗಳಾಗುವ ಹಾಗೆ ಚುನಾವಣಾ ನಿಯಮಗಳನ್ನು ಬದಲಾಯಿಸುವುದು ಒಳ್ಳೆಯದು. ಆಗ, ರಾಜ್ಯ ಮಟ್ಟದಲ್ಲಿ ಆಯ್ಕೆಯಾಗುವ ಅಧ್ಯಕ್ಷರು ಮುಂದೆ ಸುಗಮ ಮತ್ತು ಗುಣ ಮಟ್ಟದ ಆಡಳಿತಕ್ಕಾಗಿ

ಸುಮಾರು ತನ್ನದೇ ತಂಡವನ್ನೂ ಆಯ್ಕೆ ಮಾಡಿಕೊಂಡಂತಾಗುತ್ತದೆ. ಇಲ್ಲೇ ಹೋದಲ್ಲಿ ಬಹಳ ಕಡೆ ಈಗಾಗುತ್ತಿರುವಂತೆ ಕೆಳ ಹಂತದ ಸಮ್ಮೇಳನಗಳು ಹಾಸ್ಯಾಸ್ಪದವಾಗುತ್ತಾ ಹೋಗುತ್ತವೆ. ಅಲ್ಲದೆ, ಈ ಜಿಲ್ಲಾ ಸಮಿತಿಗಳು, ಸಮ್ಮೇಳನಗಳ ಅಧ್ಯಕ್ಷತೆಯ ಆಯ್ಕೆಯ ವಿಷಯದಲ್ಲೂ ತಮ್ಮ ಅಪ್ರಬುದ್ಧತೆಯನ್ನು ತೋರುತ್ತಾ, ಗೋಷ್ಠಿಗಳಿಗೆ-ವಿಶೇಷವಾಗಿ ಕವಿಗೋಷ್ಠಿಗಳಿಗೆ-ತಮ್ಮ ಚೇಲಾಗಳನ್ನು ತುಂಬುವ ಒತ್ತಡ ರಾಜಕಾರಣ ಮಾಡುವ ಮೂಲಕ ಅಖಿಲ ಭಾರತ ಸಮ್ಮೇಳನಗಳನ್ನೂ ಕುಲಗೆಡಿಸುತ್ತವೆ. ಈಗ ಆಗುತ್ತಿರುವುದೂ ಹಾಗೆಯೇ. ಹಾಗಾಗಿಯೇ, ರಾಜ್ಯದ ಅಧಿಕೃತ ನುಡಿಹಬ್ಬವೆನಿಸಿರುವ ಈ ಸಮ್ಮೇಳನದತ್ತ ಆಹ್ವಾನಿತರ ಹೊರತಾಗಿ ಇನ್ನಾವ ಗಣ್ಯ ಸಾಹಿತಿಯೂ ಸುಳಿಯದಂತಾಗಿದೆ.

ಜೊತೆಗೆ, ಅಖಿಲ ಭಾರತ ಸಮ್ಮೇಳನ ತನ್ನ ಹೆಸರಿಗೆ ತಕ್ಕಂತೆ ಅಖಿಲ ಭಾರತ ಮಟ್ಟಕ್ಕಲ್ಲದಿದ್ದರೂ, ರಾಜ್ಯ ಮಟ್ಟದ ಸಮ್ಮೇಳನವಾಗಿಯಾದರೂ ನಡೆಯುವಂತೆ ನೋಡಿಕೊಳ್ಳಬೇಕಾಗಿದೆ. ಸ್ಥಳೀಯ ಸಂಘಟಕರ ಅಥವಾ ಸಾಹಿತಿಗಳ ಒತ್ತಡಕ್ಕೆ ಮಣಿದು ಜಿಲ್ಲಾ ಮಟ್ಟದ ಸಾಹಿತ್ಯ-ಸಂಸ್ಕೃತಿ-ಅಭಿವೃದ್ಧಿ ವಿಷಯಗಳ ಗೋಷ್ಠಿಗಳಿಗೆ ಇಲ್ಲಿ ಅವಕಾಶ ನೀಡಬಾರದು. ಇವನ್ನೆಲ್ಲ ಜಿಲ್ಲಾ ಸಮ್ಮೇಳನಗಳಲ್ಲಿ ನಡೆಸಿಕೊಂಡು ಹೋಗಿ ಎಂದು ಕಟ್ಟುನಿಟ್ಟಾಗಿ ಸೂಚಿಸಬೇಕು. ಇದರಿಂದಾಗಿ ಗೋಷ್ಠಿಗಳ ವಿಪರೀತ ಸಂಖ್ಯೆ, ಪ್ರತಿನಿಧಿಗಳ ತಾರಾಟ ಮತ್ತು ಸಂಘಟನೆಯ ಭಾರ ಮತ್ತು ಖರ್ಚು ವೆಚ್ಚಗಳು ಕಡಿಮೆಯಾಗುವುದಲ್ಲದೆ, ಜಿಲ್ಲಾ ಸಮ್ಮೇಳನಗಳನ್ನು ನಿಯಮಿತವಾಗಿ ನಡೆಸುವ ಒತ್ತಡವೂ ಜಿಲ್ಲಾ ಸಮಿತಿಗಳಲ್ಲಿ ನಿರ್ಮಾಣವಾಗುತ್ತದೆ. ಈಗ ಅನೇಕ ಜಿಲ್ಲೆಗಳಲ್ಲಿ-ಉದಾ: ಚಿತ್ರದುರ್ಗದಲ್ಲಿ-ಜಿಲ್ಲಾ ಸಮ್ಮೇಳನ ನಡೆದೇ ಹಲವಾರು ವರ್ಷಗಳಾಗಿವೆ. ಹಾಗಾಗಿ, ನಿಯಮಿತವಾಗಿ ಜಿಲ್ಲಾ ಸಮ್ಮೇಳನಗಳನ್ನು ನಡೆಸಲಾಗದ ಜಿಲ್ಲಾ ಸಮಿತಿಗಳ ಮಾನ್ಯತೆಯನ್ನು ಕೇಂದ್ರ ಪರಿಷತ್ತು ರದ್ದುಗೊಳಿಸುವ ಅಧಿಕಾರವನ್ನು ಪಡೆಯಬೇಕು. ಜಿಲ್ಲಾ ಸಮ್ಮೇಳನಗಳು ಅಖಿಲ ಭಾರತ ಸಮ್ಮೇಳನಕ್ಕೆ ಸಿದ್ಧತೆಯ-ಚರ್ಚಾ ವಿಷಯಗಳು ಮತ್ತು ಸಂಘಟನೆಯ ಸ್ವರೂಪ ಎರಡೂ ನೆಲೆಗಳಲ್ಲಿ-ರೂಪದಲ್ಲಿ ನಡೆಯಬೇಕು.

ರಾಜ್ಯ ಮಟ್ಟದ ಸಮ್ಮೇಳನ ಬೇಕಾದರೆ ಎರಡು ವರ್ಷಗಳಿಗೊಮ್ಮೆ ನಡೆಯಲಿ. ಅಲ್ಲಿ ಆಹ್ವಾನಿತರ ಹೊರತಾಗಿ ಬೇರಾರ ಊಟ-ವಸತಿಗಳ ವ್ಯವಸ್ಥೆಯ ಜವಾಬ್ದಾರಿಯನ್ನು ಪರಿಷತ್ತು ವಹಿಸಿಕೊಳ್ಳದಿರಲಿ. ಬೇಕಾದರೆ ಖಾಸಗಿಯವರಿಗೆ ಸರ್ಕಾರದ ಸಹಾಯ ಧನದ ವ್ಯವಸ್ಥೆ ಮಾಡಿ, ಪ್ರತಿನಿಧಿಗಳಾಗಿ ಬರಬಯಸುವವರಿಗೆ ಅವನ್ನು ನಿಗದಿತ ರಿಯಾಯ್ತಿ ದರಗಳಲ್ಲಿ ಒದಗಿಸುವಂತೆ ನೋಡಿಕೊಳ್ಳಲಿ. ಆಗ ನಿಜವಾಗಿ ನಾಡು-ನುಡಿಗಳ ಏಳಿಗೆಯಲ್ಲಿ ಸಕ್ರಿಯ ಆಸಕ್ತಿ ಇರುವವರು ಮಾತ್ರ ಸಮ್ಮೇಳನಗಳಿಗೆ ಬರುವಂತಾಗುತ್ತದೆ. ಸಂಘಟಕರೂ ಸಾಹಿತ್ಯ ಸಮ್ಮೇಳನದ ಮುಖ್ಯ ಉದ್ದೇಶವಾದ ನಾಡು-ನುಡಿಗಳಿಗೆ ಸಂಬಂಧಿಸಿದ ಜ್ವಲಂತ ಸಮಸ್ಯೆಗಳ ಬಗ್ಗೆ ಚರ್ಚೆ ನಡೆಸುವ ಮತ್ತು ಕಾರ್ಯಕ್ರಮಗಳನ್ನು ರೂಪಿಸುವ ಗೋಷ್ಠಿಗಳ ಕಡೆ ಗಮನವನ್ನು ಕೇಂದ್ರೀಕರಿಸಲು ಸಾಧ್ಯವಾಗುತ್ತದೆ. ಆಗ ಈ ಚರ್ಚೆಗಳ ಗುಣಮಟ್ಟವೂ ಹೆಚ್ಚಿ, ಕಾರ್ಯಕ್ರಮಗಳು ಎಲ್ಲರ ವಿಶ್ವಾಸಾರ್ಹತೆಯನ್ನೂ ಗಳಿಸುವಂತಾಗಿ; ಸರ್ಕಾರ ಸಾಹಿತ್ಯ ಪರಿಷತ್ತಿನ ನಿರ್ಣಯಗಳನ್ನು

ಗಂಭೀರವಾಗಿ ಪರಿಗಣಿಸುವ ಒತ್ತಡ ನಿರ್ಮಾಣವಾಗುತ್ತದೆ.

ಈ ಎಲ್ಲ ಹಿನ್ನೆಲೆಯಲ್ಲಿ ಚಿತ್ರದುರ್ಗ ಸಮ್ಮೇಳನವನ್ನು, ಒಳಗಿನವರು ಹೇಳುವ ಯಶಸ್ಸು ಅಥವಾ ಹೊರಗಿನವರು ಹೇಳುವ ವೈಫಲ್ಯಗಳ ನೆಲೆಗಳಿಗಿಂತ ಹೆಚ್ಚಾಗಿ ಸಾರ್ಥಕತೆಯ ದೃಷ್ಟಿಯಿಂದ ನೋಡಿದಾಗ, ಅದೊಂದು ದಿಕ್ಕೆಟ್ಟ ಸಮ್ಮೇಳನದಂತೆ ಕಾಣುತ್ತದೆ. ಅದು ಎಲ್. ಬಸವರಾಜು ಅವರ ಉದ್ಘಾಟನಾ ಭಾಷಣದಿಂದಲೇ ಆರಂಭವಾಯಿತೆಂದು ಹೇಳಬಹುದು. ಸಮ್ಮೇಳನದ ಚೌಕಟ್ಟಿನಾಚೆ ಇಟ್ಟು ನೋಡಿದಾಗ ಖಂಡಿತ ಮೆಚ್ಚಬಹುದಾದ ಮಾತುಗಳಾಗಿ ಕಾಣುವ ಅವು, ಸಾಹಿತ್ಯ ಸಮ್ಮೇಳನವೊಂದರ ಉದ್ಘಾಟನಾ ಮಾತುಗಳಾಗಿ ನೋಡಿದಾಗ ಅನುಚಿತವೆನಿಸುತ್ತವೆ. ಅವರು ಸಾಹಿತ್ಯ ಸಮ್ಮೇಳನವೊಂದರ ಅಧ್ಯಕ್ಷರಾಗಿ ಪ್ರಚಲಿತ ಸಾಹಿತ್ಯ-ಸಂಸ್ಕೃತಿಗಳ ಸಮಸ್ಯೆಗಳ ಬಗ್ಗೆ ಮಾತನಾಡುತ್ತಾ, ಅದರ ಮುಂದುವರಿಕೆಯಾಗಿ ಅಥವಾ ಪೂರಕವಾಗಿ ರಾಜಕಾರಣಿಗಳ ಮತ್ತು ಮಠಾಧೀಶರ ಪಾತ್ರಗಳ ಬಗ್ಗೆ ಟೀಕೆ-ವ್ಯಾಖ್ಯಾನ ಮಾಡಿದ್ದರೆ, ಅವುಗಳಿಗೊಂದು ಹದವಿರುತ್ತಿತ್ತು, ಅದನ್ನು ನಾವು ಒಪ್ಪಬಹುದಿತ್ತು, ಸ್ವಾಗತಿಸಬಹುದಿತ್ತು. ಬದಲಿಗೆ, ಸಿದ್ಧ ಭಾಷಣವನ್ನು ಬಿಟ್ಟು ಎದುರಿಗಿದ್ದ ಜನರಾಶಿಯನ್ನು ನೋಡಿ ಸಮಯ ಸ್ಫೂರ್ತಿಗೆ ಒಳಗಾದಂತೆ ತಮ್ಮ ಆಲೋಚನಾ ಲಹರಿಯನ್ನು ಯದ್ವಾ ತದ್ವಾ ಹರಿಸ ಹೊರಟಿದ್ದು ಅವರ ಹಿರಿತನ ಮತ್ತು ವಿದ್ವತ್ತುಗಳಿಗೆ ತಕ್ಕುದಾಗಿರಲಿಲ್ಲ. ಈ ಅವಲಕ್ಷಣದೊಂದಿಗೆ ಆರಂಭವಾದ ಸಮ್ಮೇಳನ, ಊಟ-ವಸತಿಗಳ ಗಲಾಟೆ ಮತ್ತು ಕ್ಲೀಷಾತ್ಮಕ ವಿಷಯಗಳ ಬಗೆಗಿನ ಅತಿ ಸಾಮಾನ್ಯ ಗೋಷ್ಠಿಗಳೊಂದಿಗೆ, ನಾಡು-ನುಡಿಗಳ ಪ್ರವರ್ಧನೆಗೆ ಸಂಬಂಧಿಸಿದಂತೆ ಯಾವುದೇ ಗಮನಾರ್ಹ ಉದ್ದೇಶ ಸಾಧನೆಯಿಲ್ಲದೆ ಮುಗಿಯಿತಷ್ಟೆ.

ಆದುದರಿಂದ, ಕೋಟ್ಯಾಂತರ ರೂಪಾಯಿಗಳ ಸಾರ್ವಜನಿಕ ಹಣದಿಂದ ನಡೆಯುವ ಸಾಹಿತ್ಯ ಸಮ್ಮೇಳನವೊಂದರ ಯಶಸ್ಸನ್ನು, ಅದು ನಾಡು-ನುಡಿಯ ಪ್ರವರ್ಧನೆಯ ದೃಷ್ಟಿಯಿಂದ ಎಷ್ಟು ಸಾರ್ಥಕವಾಗಿದೆ ಎಂಬ ಅಳತೆಗೋಲಿನಿಂದಷ್ಟೇ ನಿರ್ಧರಿಸುವಂತಾಗಬೇಕು. ಈ ಸಾರ್ಥಕತೆ ಸಾಧ್ಯವಾಗುವುದು, ಜಾತ್ರೆಯಂತೆ ರೂಪಿತವಾಗಿ ಊಟ-ವಸತಿ ವ್ಯವಸ್ಥೆ, ಗೋಷ್ಠಿಗಳು, ಪುಸ್ತಕ ಪ್ರದರ್ಶನ, ಮಾರಾಟ-ಈ ಎಲ್ಲ ಹಂತಗಳಲ್ಲೂ ದೊಂಬಿಯಾದಂತಾಗುತ್ತಿರುವ ಸಮ್ಮೇಳನಗಳ ಬೃಹತ್ ಪ್ರಮಾಣ ಮತ್ತು ವೈಭವವನ್ನು ಕಡಿಮೆ ಮಾಡಿದಾಗ ಮಾತ್ರ, ಹಾಗಾದಲ್ಲಿ, ಈ ಹಿಂದೆ ಸೂಚಿಸಿದಂತೆ ಹಣ ಮತ್ತು ಸಂಘಟನೆಯ ಅಗತ್ಯಗಳೂ ಕಡಿಮೆಯಾಗಿ, ರಾಜಕಾರಣಿ ಮತ್ತು ಮಠಾಧೀಶರ ಮೇಲಿನ ಅವಲಂಬನೆಯೂ ಕಡಿಮೆಯಾಗುತ್ತದೆ. ಜೊತೆಗೆ ಇವರಿಬ್ಬರನ್ನೂ ವೇದಿಕೆಗಳಿಂದ ದೂರವಿಡಲೂ ಸಾಧ್ಯವಾಗುತ್ತದೆ. ನಾನಿದನ್ನು ಇವರಿಬ್ಬರ ಬಗ್ಗೆ ಅವಮರ್ಯಾದೆಯಿಂದ ಹೇಳುತ್ತಿಲ್ಲ. ಅವರೂ ನಮ್ಮೆಲ್ಲರಂತೆ ಸಾಹಿತ್ಯ ಸಮ್ಮೇಳನಗಳಲ್ಲಿ ಭಾಗವಹಿಸುವ ಎಲ್ಲ ಅಧಿಕಾರ, ಹಕ್ಕು, ಅರ್ಹತೆ ಎಲ್ಲವನ್ನೂ ಹೊಂದಿದ್ದಾರೆ. ಆದರೆ ಸಭಿಕರಾಗಿ ಅಥವಾ ತಾವು ಪರಿಣತರಾದ ವಿಷಯಗಳಿಗೆ ಸಂಬಂಧಪಟ್ಟ ಗೋಷ್ಠಿಗಳಿಗೆ ಆಹ್ವಾನಿತರಾದ ಭಾಷಣಕಾರರಾಗಿ ಮಾತ್ರ.

ಮರಾಠಿ ಸಾಹಿತ್ಯ ಸಮ್ಮೇಳನಗಳಲ್ಲಿ ಮುಖ್ಯಮಂತ್ರಿಗಳಾದಿಯಾಗಿ ಸಮಾಜದ ಎಲ್ಲ ಗಣ್ಯರೂ ಯಾವುದೇ ಮುಜುಗರ ಅಥವಾ ಬಿಗುಮಾನವಿಲ್ಲದೆ ಸಭಿಕರ ಸಾಲಿನಲ್ಲಿ

ಕೂತಿರುವುದನ್ನು ನಾವು ಮಾಧ್ಯಮಗಳಲ್ಲಿ ನೋಡುತ್ತಿದ್ದೇವೆ. ಅವರು ಅಲ್ಲಿಗೆ ಸಾಹಿತ್ಯ-ಸಂಸ್ಕೃತಿಗಳ ಬಗೆಗಿನ ಆಸಕ್ತಿಯಿಂದ ಬಂದು ಕೂರುತ್ತಾರೆ. ಸಾಹಿತ್ಯ-ಸಂಸ್ಕೃತಿ ಚಿಂತಕರ ಮಾತುಗಳನ್ನು ಕೇಳಿ ಹೋಗುತ್ತಾರೆ. ಅಲ್ಲಿ ಸಾಹಿತ್ಯ-ಸಂಸ್ಕೃತಿ ಚಿಂತಕರಿಗಷ್ಟೇ ವೇದಿಕೆ. ಅಲ್ಲಿ ಅವರೇ ಅಗ್ರಗಣ್ಯರು. ವರ್ಷದಲ್ಲಿ ಒಮ್ಮೆಯಾದರೂ ಅವರಿಗೆ ಅಗ್ರ ಸ್ಥಾನ ನೀಡದಿದ್ದರೆ, ಅವರ ಮಾತುಗಳನ್ನು ಒಂದು ಮುಕ್ತ ವಾತಾವರಣದಲ್ಲಿ ಆಲಿಸಲಾಗದಿದ್ದರೆ ಒಂದು ನಾಡು ಮತ್ತು ಅದರ ಸಾಹಿತ್ಯ ಸಂಸ್ಕೃತಿಗಳಾದರೂ ಹೇಗೆ ಬೆಳೆದಾವು? ಇದು ಮಹಾರಾಷ್ಟ್ರದಲ್ಲಿ ಸಾಧ್ಯವಾಗುವುದಾದರೆ, ಕರ್ನಾಟಕದಲ್ಲಿ ಏಕೆ ಸಾಧ್ಯವಾಗಬಾರದು?

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ನಲ್ಲೂರು ಪ್ರಸಾದರು ಈ ದಿಸೆಯಲ್ಲಿ ಯೋಚಿಸಬಲ್ಲರೆಂಬ ನಂಬಿಕೆ ನನಗಿರುವುದರಿಂದಲೇ ಇಷ್ಟೆಲ್ಲ ಬರೆದಿದ್ದೇನೆ.

(ಫೆಬ್ರುವರಿ ೨೭, ೨೦೦೯, 'ವಿಕ್ರಾಂತ ಕರ್ನಾಟಕ')

೧೩. 'ಕನ್ನಡ'ದ ಬಿಕ್ಕಟ್ಟು : ಒಂದು ಟಿಪ್ಪಣಿ

ಕನ್ನಡದ ಜನ ಕನ್ನಡ ಮಾಧ್ಯಮದ ಶಿಕ್ಷಣದಿಂದ ಸುಖವಿಲ್ಲ ಎಂದು ತೀರ್ಮಾನಿಸಿರುವಂತೆ ತೋರುತ್ತಿದೆ. ಇದಕ್ಕೆ ತಕ್ಕುದಾಗಿ ಕರ್ನಾಟಕ ಸರ್ಕಾರ ಸರ್ಕಾರಿ ಶಾಲೆಗಳಲ್ಲಿ ಒಂದನೇ ತರಗತಿಯಿಂದಲೇ ಇಂಗ್ಲಿಷ್ ಕಲಿಸಲು ಉತ್ಸುಕತೆ ತೋರುತ್ತಿದೆ. ಒಂದಷ್ಟು ಜನ 'ಬುದ್ಧಿವಾದಿ'ಗಳು ಹಾಗೂ 'ಶ್ರಮವಾದಿ'ಗಳು, ಕನ್ನಡವನ್ನು ನಂಬಿ ಹಿಂದುಳಿದಿದ್ದು ಸಾಕು ಎಂದು ಕೂಗು ಹಾಕುತ್ತಿದ್ದಾರೆ. ಜನತೆಯನ್ನು ಪ್ರತಿನಿಧಿಸುವ ವಿಧಾನ ಮಂಡಲದ ಎರಡೂ ಸಭೆಗಳಲ್ಲಿ ಈ ಕೂಗಿಗೆ ವ್ಯಾಪಕ ಬೆಂಬಲ ವ್ಯಕ್ತವಾಗಿದೆ. ಹತ್ತು ವರ್ಷಗಳ ಹಿಂದಷ್ಟೆ ಕನ್ನಡದ ಹೋರಾಟ ಎಂದರೆ ಶಿಕ್ಷಣ, ಆಡಳಿತ, ವ್ಯವಹಾರ, ಆಚಾರ, ವಿಚಾರ ಎಲ್ಲವೂ ಕನ್ನಡದಲ್ಲೇ ಎಂಬ ತತ್ವದ ಅನುಷ್ಠಾನ ಎಂಬಂತಿದ್ದು, ಇಂದು ಕನ್ನಡವು ಮನೆಯೊಳಗಷ್ಟೇ ಇದ್ದರೆ ಚೆನ್ನ ಎಂಬ 'ವಾಸ್ತವ'ಕ್ಕೆ ಕ್ರಮೇಣ ಜಾರುತ್ತಿದೆ. ಭಾಷೆಯನ್ನು ಯಾರೂ ಹಠ-ಅಭಿಮಾನಗಳಿಂದ, ಹಾರಾಟ-ಹೋರಾಟಗಳಿಂದ ಉಳಿಸಲಾಗದು, ಯೋಗ್ಯತೆ ಇದ್ದುದು ಮಾತ್ರ ಉಳಿಯುತ್ತದೆ ಎಂಬ 'ಕಟು ವಾಸ್ತವ'ವೆಂದು ಹೇಳಲಾಗುವ ಮಾತನ್ನು ಆಡಲಾಗುತ್ತಿದೆ. ಹಾಗಾದರೆ ಕನ್ನಡದ ಕಾಲ ಮುಗಿಯುತ್ತಾ ಬಂದಿತೆ? ಜಾಗತೀಕರಣ ಎಂಬ ರಾಕ್ಷಸನು ಕನ್ನಡವನ್ನು ತಿಂದು ತೇಗುವ ಕಾಲ ಸನ್ನಿಹಿತವಾಗಿ ಬಿಟ್ಟಿದೆಯೇ? ಹಾಗೆಂದೇ, ಕನ್ನಡಕ್ಕೆ ಶಾಸ್ತ್ರೀಯ ಸ್ಥಾನ ಮಾನದ ಮನ್ನಣೆ ಒದಗಿಸಿ, ಅದಕ್ಕೆ ಚರಿತ್ರೆಯ ಗುಡಿಯಲ್ಲಿ ಪೂಜಾರ್ಹತೆಯನ್ನು ಸ್ಥಾಪಿಸಿ ಕೊಡುವ ತುರಾತುರಿ ಕಾಣಬರುತ್ತಿದೆಯೇ?

ಈ ಎಲ್ಲ ಅನ್ನಿಸಿಕೆ-ಅಭಿಪ್ರಾಯ-ವಿಚಾರ-ಪ್ರಶ್ನೆಗಳ ಹಿಂದೆ ಇರುವುದು ಒಂದೇ ಆತಂಕ: ಸಾಹಿತ್ಯ-ಸಂಸ್ಕೃತಿಗಳ ಕನಿಷ್ಟ ಒಂದು ಸಾವಿರ ವರ್ಷಗಳ ಇತಿಹಾಸವಿರುವ ಒಂದು 'ಭಾಷೆ'ಯನ್ನು ಕೇವಲ ಹತ್ತು ವರ್ಷಗಳ ಅವಧಿಯಲ್ಲಿ ಹೀಗೆ ಹಿಗ್ಗಾ ಮುಗ್ಗಾ ದಾಳಿಗೆ ಈಡುಮಾಡಿರುವ ಈ ಜಾಗತೀಕರಣ, ಆ 'ಭಾಷೆ'ಯಲ್ಲೇ ತನ್ನ ವ್ಯಕ್ತಿತ್ವ ರೂಢಿಸಿಕೊಂಡು ಬಂದಿರುವ ಸಮುದಾಯಕ್ಕೆ ಯಾವ ಗತಿ ಕಾಣಿಸೀತು? ವಸಾಹತೀಕರಣ ಉಂಟು ಮಾಡಿದ 'ವಿಸ್ಮೃತಿ'ಯಿಂದ ನಾವು ಎಚ್ಚೆತ್ತುಕೊಳ್ಳಬೇಕಾದ ಅರಿವಿಗೆ ತೆರೆದುಕೊಳ್ಳುತ್ತಿರುವ ಸಂದರ್ಭದಲ್ಲಿಯೇ, ನಾವು ಜಾಗತೀಕರಣವೆಂಬ ನವ ವಸಾಹತುಶಾಹಿಯು ಉಂಟು ಮಾಡುತ್ತಿರುವ ಇನ್ನೊಂದು ರೀತಿಯ 'ವಿಸ್ಮೃತಿ'ಗೇನಾದರೂ ಬೀಳುತ್ತಿದ್ದೇವೆಯೋ? ನೆನಪಿರಲಿ, ಆ ವಸಾಹತೀಕರಣವು ಆರಂಭವಾದದ್ದೂ ವ್ಯಾಪಾರದ ರೂಪದಲ್ಲಿ, ಈ ನವ ವಸಾಹತೀಕರಣವು ಆರಂಭವಾಗುತ್ತಿರುವುದೂ ವ್ಯಾಪಾರದ ರೂಪದಲ್ಲಿ. ವ್ಯಾಪಾರ ಎಂದರೆ ಮೂಲಾರ್ಥದಲ್ಲಿ

ವಿನಿಮಯ-ಒಂದನ್ನು ಕೊಟ್ಟು ಇನ್ನೊಂದನ್ನು ತೆಗೆದುಕೊಳ್ಳುವುದು ಅಥವಾ ನಮ್ಮಲ್ಲಿ ಅಗತ್ಯವಿರುವುದಕ್ಕಿಂತ ಹೆಚ್ಚಿರುವುದನ್ನು ಕೊಟ್ಟು; ನಮ್ಮಲ್ಲಿಲ್ಲದ, ಆದರೆ ಅಗತ್ಯವಾಗಿರುವುದನ್ನು ತೆಗೆದುಕೊಳ್ಳುವುದು. ಅಂದರೆ ವ್ಯಾಪಾರ ನಡೆಯಬೇಕಾದುದು 'ಅಗತ್ಯ'ಗಳ ಮೇಲೆ. ಹಾಗಾದರೆ ಆ ವ್ಯಾಪಾರವು ವಸಾಹತೀಕರಣವಾದುದು ಹೇಗೆ? ಈ 'ಅಗತ್ಯ'ಗಳ ಮೂಡುವಿಕೆಯಲ್ಲಿಯೇ ಏನೋ ಹೆಚ್ಚು ಕಮ್ಮಿಯಾಗಿರಬೇಕು ಅಲ್ಲವೇ?

ನಾವಿಂದು ಜಾಗತೀಕರಣದ ಸಂದರ್ಭದಲ್ಲಿ ಕನ್ನಡದ ಬಿಕ್ಕಟ್ಟನ್ನು ಅರ್ಥ ಮಾಡಿಕೊಳ್ಳಬಯಸುವವರು ಈ 'ಅಗತ್ಯ'ಗಳ ರಾಜಕಾರಣವನ್ನು ಮೊದಲು ಅರ್ಥಮಾಡಿಕೊಳ್ಳಬೇಕು. ನಮಗೆ ಯಾವುದು ಅಗತ್ಯ? ಅದು ಏಕೆ ಅಗತ್ಯ ಎಂಬ ಪ್ರಶ್ನೆಗಳನ್ನು ವಸಾಹತೀಕರಣದ ಇತಿಹಾಸದ ಹಿನ್ನೆಲೆಯಲ್ಲಿ ಆಳವಾಗಿ ಕೇಳಿಕೊಂಡು ಉತ್ತರಗಳನ್ನು ಪಡೆದುಕೊಳ್ಳಬೇಕಾಗಿದೆ. ಮನುಷ್ಯನ ಮೂಲಭೂತ ದ್ವಂದ್ವ ಅನ್ನ-ಸ್ವಾತಂತ್ರ್ಯದ ನಡುವಣದ್ದಾಗಿದೆ. ಮಿಕ್ಕೆಲ್ಲಾ ದ್ವಂದ್ವಗಳು ಈ ದ್ವಂದ್ವದಿಂದಲೇ ಹುಟ್ಟಿದ್ದಾಗಿವೆ. ಹಾಗಾಗಿ ಅನ್ನದ ಅರ್ಥ ಹಾಗೂ ಅಗತ್ಯದ ವ್ಯಾಪ್ತಿಗಳನ್ನು ಮತ್ತು ಸ್ವಾತಂತ್ರ್ಯದ ಅರ್ಥ ಹಾಗೂ ಅಗತ್ಯದ ವ್ಯಾಪ್ತಿಗಳನ್ನು, ಪರಸ್ಪರ ಘಾಸಿಗೊಳ್ಳದ ರೀತಿಯಲ್ಲಿ ಎಷ್ಟು ಹಿಗ್ಗಿಸಬಹುದಾಗಿದೆ ಎಂಬುದೇ ಇಲ್ಲಿ ನಿರ್ಣಾಯಕ ಪ್ರಶ್ನೆಯಾಗಿದೆ. ಇದು, ಒಂದು ಸಮುದಾಯದ ಸಂಸ್ಕೃತಿಯ ತಾಳಿಕೆ-ಬಾಳಿಕೆಗಳನ್ನು ನಿರ್ಣಯಿಸುವ ಮತ್ತು ಎಲ್ಲಿ ವ್ಯಾಪಾರವು ವಸಾಹತೀಕರಣವಾಗಿ ಪರಿವರ್ತಿತವಾಗಲಾರಂಭಿಸುವುದು ಎಂಬುದನ್ನು ನಿರ್ಧರಿಸುವ defining moment of history, ಒಂದು ಸಮುದಾಯದ ಪಾಲಿಗೆ.

ಜಾಗತೀಕರಣದ ಶಬ್ದಾರ್ಥವೇನೇ ಇರಲಿ, ಅದು ಅನ್ನದ ಹಾಗೂ ದೇಹ ಸುಖದ ಅರ್ಥ ಮತ್ತು ಅಗತ್ಯಗಳನ್ನು ವಿಸ್ತರಿಸಿ ನಮ್ಮ ಮುಂದೆ ಇಟ್ಟಿದೆ. ಹಾಗಾಗಿಯೇ ಅದು ನಮ್ಮ ಸ್ವಾತಂತ್ರ್ಯದ ಅಭಿವ್ಯಕ್ತಿ ರೂಪಗಳ ತಾಯಿ ಸ್ಥಾನದಲ್ಲಿರುವ ನಮ್ಮ 'ಭಾಷೆ'ಗೆ– 'ಕನ್ನಡ'ಕ್ಕೆ– ಘಾಸಿ ತಂದಿಟ್ಟಿದೆ. 'ಕನ್ನಡ'ದ ಅಗತ್ಯ ನಮಗೆ ಕಡಿಮೆ ಎನಿಸತೊಡಗಿದೆ. ಇಲ್ಲಿ 'ಕನ್ನಡ' ಎಂದರೆ ಒಂದು ಜೀವನ ಕ್ರಮ, ಒಂದು ಜೀವನ ದೃಷ್ಟಿಕೋನ-ಕವಿರಾಜ ಮಾರ್ಗಕಾರನು ನಿರೂಪಿಸಿದ-'ಆ ಕನ್ನಡದೊಳ್ ಭಾವಿಸಿದ ಜನಪದಂ'. ಅದು 'ವಸುಧಾ ವಲಯ ವಿಲೀನ ವಿಶದ ವಿಷಯ ವಿಶೇಷ' ಕೂಡ. ಅಂದರೆ ಕನ್ನಡದ ಅಪರೂಪದ ಸಂಸ್ಕೃತಿ ಚಿಂತಕ ಕೆ.ವಿ. ಸುಬ್ಬಣ್ಣ ಸೃಷ್ಟಿಶೀಲವಾಗಿ ವ್ಯಾಖ್ಯಾನಿಸಿರುವ ಹಾಗೆ, ಈ 'ಕನ್ನಡ'ವು ವಿಶಾಲವಾದ ವಿಶ್ವದಲ್ಲಿ ಲೀನವಾಗಿದ್ದರೂ ತನ್ನಲ್ಲೇ ವಿಶಾಲವಾದ ವಿಶ್ವವನ್ನು ಲೀನಗೊಳಿಸಿಕೊಂಡಿದೆ. ಒಂದು ಸಾವಿರ ವರ್ಷಗಳಷ್ಟು ಹಿಂದಿನ ಈ ಅರಿವನ್ನು 'ಕನ್ನಡ' ಕಳೆದುಕೊಳ್ಳುವುದು ಎಂದರೆ ಏನು? ಹಾಗಾದಲ್ಲಿ ಆ ಜನಪದದಲ್ಲಿ ಉಳಿಯುವುದಾದರೂ ಏನು?

'ಕನ್ನಡ'ವೆನ್ನುವುದರಲ್ಲೇ ಜಗತ್ತು ಹಾಸುಹೊಕ್ಕಾಗಿ ಬೆಳೆದಿದೆ. ಹೀಗಾಗಿ ಕನ್ನಡದ ಬೆಳವಣಿಗೆ ಎಂದರೆ ವಿಶ್ವದ ಬೆಳವಣಿಗೆ ಹಾಗೂ ವಿಶ್ವದ ಬೆಳವಣಿಗೆ ಎಂದರೆ ಕನ್ನಡದ ಬೆಳವಣಿಗೆ. ಇದರರ್ಥ, ಕನ್ನಡವನ್ನು ಕಳೆದುಕೊಳ್ಳುವುದೆಂದರೆ ವಿಶ್ವವನ್ನೇ ಕಳೆದುಕೊಂಡಂತೆ. ವಿಶ್ವ ಎಂದರೆ ಅದರೆಲ್ಲ ಅರ್ಥದಲ್ಲಿ-ಅಲ್ಲಿ ಹುಟ್ಟುವ ಅನ್ನದ ಸತ್ವ ಮತ್ತು ರುಚಿ ಎರಡನ್ನೂ

ಸೃಷ್ಟಿಸುವ ನೆಲೆ ಎಂಬರ್ಥದಲ್ಲಿ. ಈ ಕನ್ನಡದ ಸತ್ವ ಮತ್ತು ರುಚಿ ಕಳಕೊಂಡ ಜನಪದಕ್ಕೆ ಆ ವಿಶ್ವದ ಸತ್ವ ಮತ್ತು ರುಚಿ ದಕ್ಕದು. ಈ ಆಳದ ಸತ್ಯವನ್ನು ಶೋಧಿಸಿಕೊಳ್ಳುವಷ್ಟು ವಿವೇಕ 'ಕವಿ–ರಾಜ–ಮಾರ್ಗ' ಸೃಷ್ಟಿಸಿಕೊಂಡ ಕನ್ನಡಕ್ಕೆ ಇಲ್ಲ ಎಂದರೆ ನಂಬುವುದು ಕಷ್ಟ. ನಂಬಿಕೆಯೊಂದೇ ಕಷ್ಟದ–ಬಿಕ್ಕಟ್ಟಿನ–ಕಾಲದ ಊರುಗೋಲು.

(ಶೃಜನಾ ವಿಶೇಷಾಂಕ, ೨೦೦೫–೦೬)

೧೪. ಇಂಗ್ಲಿಷ್ ಮರುಳಿನಲ್ಲಿ ಕನ್ನಡದ ಸುವರ್ಣೋತ್ಸವ

ಕನ್ನಡವೇ ಸತ್ಯ
ಕನ್ನಡವೇ ನಿತ್ಯ
ಅನ್ಯವೆನಲದೆ ಮಿಥ್ಯ

–ಕುವೆಂಪು

ಕಾವೇರಿಯಿಂದ ಗೋದಾವರಿವರೆಗೆ ಹರಡಿ ಕನ್ನಡದೊಳ್ ಭಾವಿಸಿದ್ದ ಜನಪದವೀಗ, ಕನ್ನಡದಲ್ಲಿ ಭಾವಿಸಿದರೆ ಅನ್ನ ಹುಟ್ಟುವುದಿಲ್ಲ ಎಂದು ತೀರ್ಮಾನಿಸಿದಂತಿದೆ! ಅದನ್ನು ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಕೆಯನ್ನು ಕಡ್ಡಾಯ ಮಾಡಿರುವ ಆಜ್ಞೆಯ ಮೂಲಕ ಖಚಿತಪಡಿಸಿರುವ ಕರ್ನಾಟಕ ಸರ್ಕಾರವು, ಕನ್ನಡ ರಾಜ್ಯೋದಯದ ಚಿನ್ನದ ಹಬ್ಬವನ್ನು ಮಾತ್ರ ಕೋಟ್ಯಾಂತರ ರೂಪಾಯಿಗಳ ವೆಚ್ಚದಲ್ಲಿ ವಿಜೃಂಭಣೆಯಿಂದ ಆಚರಿಸುತ್ತಿರುವುದು ದೊಡ್ಡ ವಿಪರ್ಯಾಸವೇ ಆಗಿದೆ. ಈ ರಾಜ್ಯೋದಯಕ್ಕಾಗಿ ಹೋರಾಡಿದ ಹಲವರು, ಕೆಲವಿಬ್ಬರನ್ನು ಬಿಟ್ಟರೆ, ಯಾವ ಘನೋದ್ದೇಶಕ್ಕಾಗಿ ಇವರೆಲ್ಲ ಹೋರಾಟ ಮಾಡಿದರೋ– ಒಂದು ಭಾಷಾ ಸಮುದಾಯದ ಜನ ಒಟ್ಟಿಗೆ ತಮ್ಮ ಭಾಷೆ ಮತ್ತು ಸಂಸ್ಕೃತಿಗಳ ವಿವಿಧ ಸಾಧ್ಯತೆ ಹಗೂ ಸಂಪನ್ನತೆಗಳ ಮೂಲಕ ತನ್ನದೆನ್ನುವ ಚಂದದ ಬದುಕನ್ನು ಕಟ್ಟಿಕೊಳ್ಳುವ ರಾಜಕೀಯ ಇಚ್ಛಾಶಕ್ತಿಯ ಸಂಘಟನೆ–ಆ ಉದ್ದೇಶವನ್ನೇ ಅಪ್ರಸ್ತುತಗೊಳಿಸುವ ಸದರಿ ಸರ್ಕಾರಿ ಆಜ್ಞೆಯ ವಿರುದ್ಧ ಒಂದು ಸಣ್ಣ ಪ್ರತಿಭಟನೆಯ ಸೊಲ್ಲೂ ಇಲ್ಲದೆ, ರಾಜ್ಯ ಸರ್ಕಾರ ಕೊಡಮಾಡುತ್ತಿರುವ ಪ್ರಶಸ್ತಿಗಳನ್ನು ಸ್ವೀಕರಿಸಲು ಸಿದ್ಧವಾಗಿ ನಿಂತಿರುವುದನ್ನು ನೋಡಿದರೆ, ಇಂಗ್ಲಿಷ್ ಮರುಳು ಉಂಟು ಮಾಡಿರುವ 'ವಿಸ್ಮೃತಿ' ಎಷ್ಟು ವಿನಾಶಕಾರಿ ಆಯಾಮಗಳುಳ್ಳದ್ದು ಎಂಬುದು ಅರಿವಿಗೆ ಬಂದು ಆತಂಕವುಂಟಾಗುತ್ತದೆ. ಅದಕ್ಕಿಂತ ಹೆಚ್ಚಾಗಿ, ನಮ್ಮ ಮಾಧ್ಯಮಗಳು– ಅದೂ ಕನ್ನಡದ ಕೆಲವು ಪತ್ರಿಕೆಗಳು–ತಮ್ಮ ಉದ್ಯಮದ ಎಲ್ಲಾ ನೀತಿ ಮರ್ಯಾದೆಗಳನ್ನು ಗಾಳಿಗೆ ತೂರಿ, ಭಿನ್ನಾಭಿಪ್ರಾಯಗಳಿಗೆ ಅವಕಾಶವನ್ನೇ ನಿರಾಕರಿಸಿ, ಸರ್ಕಾರಿ ಆಜ್ಞೆ ಪರ ವಾತಾವರಣ ನಿರ್ಮಾಣ ಮಾಡ ಹೊರಟಿರುವುದು ಈ ಸುವರ್ಣ ಕರ್ನಾಟಕಾಚರಣೆಯ ರುಚಿಯನ್ನೇ ಕೆಡಿಸಿದೆ. ಇವರೆಲ್ಲರೂ, ಕಳೆದ ಕೆಲವು ವರ್ಷಗಳಿಂದ ದೇಶಾದ್ಯಂತ ನಡೆಯುತ್ತಿರುವ ವಿಶ್ವಬ್ಯಾಂಕ್ ಆಯೋಜಿತ 'ಕಣ್ಣು ಕೋರೈಸುವಂತಹ ಬೃಹತ್ ಅಭಿವೃದ್ಧಿ'ಯ ರಾಜಕಾರಣದ ಬಲೆಗೆ ಬಿದ್ದಿರುವ ರೀತಿ–ನೀತಿಗಳನ್ನು ನೋಡಿದರೆ, 'ಈಸ್ಟ್ ಇಂಡಿಯಾ ಕಂಪನಿ' ರಾಜಕಾರಣದ

ಹೊಸ ಆವೃತ್ತಿಗೆ ದೇಶ ಸಿದ್ಧವಾಗುತ್ತಿರುವಂತೆ ತೋರುತ್ತದೆ.

ವಸಾಹತುಶಾಹಿ ಮನಸ್ಸು ಮಾಡುವ ಮೊದಲ ಕೆಲಸವೆಂದರೆ, ದೇಶೀ ಜನರಲ್ಲಿ ದೇಶೀಯ ಪರಿಕರಗಳ ಶಕ್ತಿ–ಸಾಮರ್ಥ್ಯಗಳ ಬಗ್ಗೆ ಅನುಮಾನ ಮತ್ತು ಅವರ ಜೀವನ ಮಟ್ಟವನ್ನು ಕುರಿತು ಅವಮಾನವನ್ನು ಸೃಷ್ಟಿಸುವುದು. ಈ ಹಿನ್ನೆಲೆಯಲ್ಲಿ ಇಂದು ಕರ್ನಾಟಕದಲ್ಲಿ ಕನ್ನಡ ಭಾಷೆಯ ಶಕ್ತಿ–ಸಾಮರ್ಥ್ಯಗಳನ್ನು ಕುರಿತು ಕನ್ನಡಿಗರಲ್ಲೇ ಮೂಡಿಸಲಾಗುತ್ತಿರುವ ಅವಮಾನ ಹಾಗೂ ಭಾಷೆ ಮತ್ತು ಜಾತಿ ನಡುವೆ ತಳುಕು ಹಾಕಿ ವಿವಿಧ ಸಾಮಾಜಿಕ ವರ್ಗಗಳಲ್ಲಿ ಅಭಿವೃದ್ಧಿ ಪರಿಕಲ್ಪನೆ ಕುರಿತಂತೆ ಉಂಟು ಮಾಡಿರುವ ಗೊಂದಲ ಅನೇಕ ನೆಲೆಗಳಲ್ಲಿ ಪ್ರತಿಧ್ವನಿಗಳನ್ನು ಹೊರಡಿಸುವಂತಾಗಿವೆ: ಕಣ್ಣು ಕೋರೈಸುವ ಈ ಅಭಿವೃದ್ಧಿಯು, ಆ ಅಭಿವೃದ್ಧಿಯ ತಾಣಗಳಲ್ಲಿ ಉಂಟುಮಾಡಿರುವ ನೆಮ್ಮದಿ ಭಂಗವನ್ನೂ, ಸಾಮಾಜಿಕ ಅಶಾಂತಿಯನ್ನೂ ಅರ್ಥಮಾಡಿಕೊಳ್ಳಲಾಗದಷ್ಟು ನಮ್ಮನ್ನು ಅಸೂಕ್ಷ್ಮಗೊಳಿಸಿ, ಒಂದನೇ ತರಗತಿಯ ಇಂಗ್ಲಿಷ್ ಪ್ರಣೀತ ಅಭಿವೃದ್ಧಿ ಮತ್ತು ಸಾಮಾಜಿಕ ಸಮಾನತೆ ಎಂಬ ಮರೀಚಿಕೆಯ ಬೆನ್ನ ಹಿಂದೆ ಬೀಳುವಂತೆ ಮಾಡಿದೆ. ಹೀಗಾಗಿ, ಸ್ವಾತಂತ್ರ್ಯ ಬಂದ ಐವತ್ತು ವರ್ಷಗಳ ನಂತರ ಅನೇಕ ಅಡೆತಡೆಗಳನ್ನು ನಿವಾರಿಸಿಕೊಂಡು, ಸತತ ಕಾನೂನು ಹೋರಾಟದ ಮೂಲಕ ಭಾರತೀಯ ಶಾಲೆಗಳಲ್ಲಿ ಮಾತೃಭಾಷಾ ಶಿಕ್ಷಣವನ್ನು ಕಡ್ಡಾಯ ಮಾಡಬಹುದೆಂದು ಸರ್ವೋನ್ನತ ನ್ಯಾಯಾಲಯದಿಂದ ತೀರ್ಪು ಪಡೆದ ಭಾರತೀಯ ಭಾಷಾ ಆಂದೋಲನಕಾರರಿಗೆ ಇಂದು ಎದುರಾಗಿರುವವರು, ನಾವೇ– ನಮ್ಮ ಒಂದು ಭಾಗವೇ ಎಂಬುದು, ವಿಚಿತ್ರವಾದರೂ ಸತ್ಯವಾಗಿದೆ!

ಈ ವಿಚಿತ್ರ ಸತ್ಯದ ಒಂದು ಭಾಗವಾಗಿ, ರಾಜಕೀಯ ಸಂಕಷ್ಟಕ್ಕೆ ಸಿಲುಕಿರುವ ರಾಜ್ಯ ಸರ್ಕಾರವು ಅದರಿಂದ ಪಾರಾಗಲು ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಕೆಯೆಂಬ ಆಮಿಷದ ಮೂಲಕ ಈ ಜನಭಾಗದ ಮನಸ್ಸನ್ನು ಗೆಲ್ಲುವ ತಾತ್ವಿಕ ಮುಖವಾಡದ, ಆದರೆ ವಾಸ್ತವದಲ್ಲಿ ಅಗ್ಗದ ಜನಪ್ರಿಯತೆಯ ಪ್ರಯತ್ನವಾಗಿರುವಂತಹ ಕ್ರಮಕ್ಕೆ ಕೈ ಹಾಕಿದೆ. ಅಲ್ಲದೆ, ಅದನ್ನು ಶಿಕ್ಷಣದ ವಿಷಯದಲ್ಲಿ ಬಡ ಮತ್ತು ಗ್ರಾಮಾಂತರ ಮಕ್ಕಳಿಗೆ ಆಗುತ್ತಿರುವ ವಂಚನೆಯನ್ನು ತಪ್ಪಿಸುವ ಉದ್ದೇಶವುಳ್ಳ 'ವ್ಯಾವಹಾರಿಕ ನೀತಿ ಮಾತ್ರ' ಎಂದು ವರ್ಣಿಸುವ ಮೂಲಕ ಜನರನ್ನು ಒಡೆದು, ಯಾಮಾರಿಸಲು ಹೊರಟಿದೆ. ಆದರೆ ಮೂರು ಶತಮಾನಗಳ ಹಿಂದೆ ನಾವು ಹೀಗೇ, ಇಂತಹ ರಾಜಕೀಯದಿಂದಲೇ ಕಿತ್ತಾಡಿಕೊಂಡು ಒಡೆದು ಹೋಗಿ, ಈಸ್ಟ್ ಇಂಡಿಯಾ ಕಂಪನಿಯನ್ನೂ 'ವ್ಯವಹಾರಕ್ಕೆ ಮಾತ್ರವಲ್ಲವೇ?' ಎಂದು ಸ್ವಾಗತಿಸಿದ್ದೆವು ಎಂಬುದನ್ನು ಮರೆತು, ಸರ್ಕಾರದ ಈ 'ವ್ಯಾವಹಾರಿಕ ಆಮಿಷ'ಕ್ಕೆ ಒಂದು ಜನಭಾಗ ಮರುಳಾಗಿದೆ. ಈ ಮರುಳಿನಲ್ಲಿ ಈ ಜನಭಾಗವು, ಕನ್ನಡ ಶಾಲೆಗಳಲ್ಲಿ ಕಲಿತ ಬಡ ಹಾಗೂ ಗ್ರಾಮಾಂತರ ಮಕ್ಕಳು ಈಗ ಜೀವನದಲ್ಲಿ ಯಶಸ್ವಿಯೇ ಆಗಿಲ್ಲವೇನೋ ಮತ್ತು ಯಶಸ್ವಿಯಾಗಿರದವರೆಲ್ಲರಿಗೂ, ಅವರು ಐದನೇ ತರಗತಿಯಿಂದ ಮಾತ್ರ ಇಂಗ್ಲಿಷ್ ಕಲಿಯುವಂತಾದುದೇ ಕಾರಣವೇನೋ ಎಂದೂ ಭಾವಿಸಿದಂತಿದೆ. ರಾಜ್ಯಾದ್ಯಂತ ಇರುವ ಬಹುತೇಕ ಕೈಗಾರಿಕೋದ್ಯಮಿಗಳು ಹಾಗೂ ಇತರೆ ಉದ್ಯೋಗ ಸಂಸ್ಥೆಗಳ ಒಳ ಹೊಕ್ಕು

ನೋಡಿದರೆ, ಇದಕ್ಕಿಂತ ಹಾಸ್ಯಾಸ್ಪದ ಸಂಗತಿ ಇನ್ನೊಂದಿಲ್ಲ ಎಂಬುದು ಗೊತ್ತಾಗುತ್ತದೆ. ಅಲ್ಲದೆ, ಈಗ ಎಲ್ಲರನ್ನೂ ಯಾಮಾರಿಸುತ್ತಿರುವ ಜಾಗತೀಕರಣದ ಅತ್ಯದ್ಭುತ ಸಾಧನೆಗಳ ಪ್ರತ್ಯಕ್ಷ ಮೂರ್ತಿಯಾಗಿ ಕಾಣುತ್ತಿರುವ ಇನ್ಫೋಸಿಸ್ ನಾರಾಯಣಮೂರ್ತಿಯವರೂ ಸೇರಿದಂತೆ, ಇತ್ತೀಚಿನ ದಿನಗಳಲ್ಲಿ ಭಾರತದಲ್ಲಿ ಕೆಲವರ ಪಾಲಿಗಷ್ಟೇ ದಿಢೀರ್ ಶ್ರೀಮಂತಿಕೆ ತಂದು ಕೊಟ್ಟಿರುವ ತಾಂತ್ರಿಕ ಉದ್ಯಮಗಳನ್ನು ಸ್ಥಾಪಿಸಿರುವವರು ಬಹುತೇಕ, ಈವರೆಗೆ ಚಾಲ್ತಿಯಲ್ಲಿರುವ ಶಿಕ್ಷಣ ಕ್ರಮದ ಶಿಶುಗಳೇ ಆಗಿದ್ದಾರೆ ಎಂಬುದು ಇವರ ಅರಿವಿಗೇ ಬಾರದಿರುವುದು ಈ ಮರುಳನ್ನು ಖಚಿತಪಡಿಸುತ್ತದೆ. ಇನ್ನು ಜಾಗತೀಕರಣವೆಂದರೆ, ಎಲ್ಲರಿಗೂ ಕಾರು-ಕಂಪ್ಯೂಟರ್ ಇತ್ಯಾದಿ ಆತ್ಯಾಧುನಿಕ ಸೌಲಭ್ಯಗಳ ಲಭ್ಯತೆಯೆಂದೂ, ಇನ್ನು ಮುಂದೆ ಐದನೇ ತರಗತಿಗೆ ಬದಲಾಗಿ ಒಂದನೇ ತರಗತಿಯಿಂದಲೇ ಇಂಗ್ಲಿಷ್ ಕಲಿತವರಿಗೆ ಮಾತ್ರ ಇದರ ಲಭ್ಯತೆ ಸಾಧ್ಯವೆಂದು ಇವರು ನಂಬಿದಂತಿದೆ! ಆದರೆ ಇಂಗ್ಲಿಷ್ ಇರಲಿ, ಕನ್ನಡವನ್ನೂ ಸರಿಯಾಗಿ ಕಲಿಯದ ಬೆಂಗಳೂರಿನ ಬಹುತೇಕ ರೌಡಿಗಳು, ರಿಯಲ್ ಎಸ್ಟೇಟ್ ಏಜೆಂಟರುಗಳು ಹಾಗೂ ಈಗ ಚಾಲ್ತಿಗೆ ಬಂದಿರುವ ಹೊಸ ಹೊಸ ವ್ಯಾಪಾರ ಪದ್ಧತಿಗಳ ದಲ್ಲಾಳಿಗಳೂ, ವೈವಿಧ್ಯಮಯ ಕಾರುಗಳನ್ನು ಓಡಿಸುತ್ತಾ ತಮ್ಮ ಬೃಹತ್ ಬಂಗಲೆಗಳಲ್ಲಿ ಕಂಪ್ಯೂಟರ್ ಇತ್ಯಾದಿ ಅತ್ಯಾಧುನಿಕ ಸಾಧನ ಸಲಕರಣೆಗಳನ್ನು ಅಳವಡಿಸಿಕೊಂಡಿದ್ದಾರೆ ಎಂಬುದನ್ನು ಇಂತಹವರ ಗಮನಕ್ಕೆ ತರಬೇಕಿದೆ.

ಮಾತೃಭಾಷಾ ಶಾಲಾ ಶಿಕ್ಷಣ ಮಾಧ್ಯಮವನ್ನು ಎತ್ತಿ ಹಿಡಿದಿರುವ ಸರ್ವೋನ್ನತ ನ್ಯಾಯಾಲಯದ ತೀರ್ಪಿಗೆ ರಾಜ್ಯ ಶ್ರೇಷ್ಠ ನ್ಯಾಯಾಲಯದಲ್ಲಿ ತಡೆಯಾಜ್ಞೆ ತಂದ ನಮ್ಮ ಶಿಕ್ಷಣೋದ್ಯಮಿಗಳ ಜೊತೆಗೆ ಕಳೆದ ೧೩ ವರ್ಷಗಳಿಂದಲೂ ಮೌನವಾಗಿ ಶಾಮೀಲಾಗಿದ್ದುಕೊಂಡು, ಈಗ ಇಂಗ್ಲಿಷ್ ಕಲಿಕೆ ಆಜ್ಞೆಗೆ ಅನುವು ಮಾಡಿಕೊಳ್ಳಲಷ್ಟೇ ಆ ತಡೆಯಾಜ್ಞೆ ಕುರಿತಂತೆ ಎಚ್ಚೆತ್ತಿರುವ ರಾಜ್ಯ ಸರ್ಕಾರ (ಇದರಲ್ಲಿ ಎಲ್ಲ ಪಕ್ಷಗಳ ಪಾಲೂ ಇದೆ.) ಕನ್ನಡದ ಪ್ರಶ್ನೆಯನ್ನು ಅದರೆಲ್ಲ ಆಯಾಮಗಳೊಂದಿಗೆ ಅರ್ಥ ಮಾಡಿಕೊಳ್ಳುವ ಇಚ್ಛಾ ಶಕ್ತಿಯನ್ನಾಗಲೀ, ಪ್ರತಿಭೆಯನ್ನಾಗಲೀ ಹೊಂದಿದೆ ಎಂದು ನಂಬುವುದು ಕಷ್ಟ. ಕಟ್ಟು ಬಿಚ್ಚಿದ ಕುದುರೆಯಂತೆ ಈಗ ಅಡ್ಡಾದಿಡ್ಡಿ ನೆಗೆಯುತ್ತಾ, ಕೆನೆಯುತ್ತಾ ಓಡಾಡುತ್ತಿರುವ ಹೊಸ ಆರ್ಥಿಕತೆಯ ಸವಾರಿಗೆ ತಮ್ಮ ಮಕ್ಕಳನ್ನು ಹುರಿದುಂಬಿಸುತ್ತಿರುವ ನಮ್ಮ ಪಾಲಕರ ಹಪಾಹಪಿಯನ್ನೇ ಬಂಡವಾಳ ಮಾಡಿಕೊಂಡು ಕನ್ನಡದ ಬುಡಕ್ಕೇ ಕೊಡಲಿ ಹಾಕಲು ಹೊರಟಿರುವ ಈ ರಾಜಕಾರಣಿಗಳ ಹುನ್ನಾರಕ್ಕೆ ಜಾತಿ-ವರ್ಗಗಳ ಹೆಸರಲ್ಲಿ ನಮ್ಮ ಬುದ್ಧಿಜೀವಿಗಳೆನಿಸಿಕೊಂಡ ಅನೇಕರು ಬೆಂಬಲ ವ್ಯಕ್ತಪಡಿಸಿರುವುದರ ಹಿಂದಿನ ರಾಜಕಾರಣವು, ರಾಜಕಾರಣಿಗಳ ರಾಜಕಾರಣವನ್ನೂ ಮೀರಿಸುವಷ್ಟು ವೃತ್ತಿಪರವಾಗಿದೆ. ಇವರೆಲ್ಲ ಈ ಮೊದಲು ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಕೆಗೆ ಪ್ರಬಲ ವಿರೋಧ ವ್ಯಕ್ತಪಡಿಸಿದವರಾಗಿದ್ದು, ಈ ವಿವಾದಕ್ಕೆ ಜಾತಿ ಸ್ಪರ್ಶ ನೀಡಿದೊಡನೆ ಪಕ್ಷಾಂತರ ಮಾಡಿ, ನಮ್ಮ ಸಮಾಜದಲ್ಲಿ ದಲಿತ-ಹಿಂದುಳಿದ ಜಾತಿಗಳ ಮಕ್ಕಳು ಹಿಂದುಳಿದಿರುವುದೇ ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಯದಂತೆ ಮಾಡಿರುವ ಮೇಲ್ಜಾತಿ ಮನಸ್ಸುಗಳ ಹುನ್ನಾರದಿಂದ ಎಂಬ

ಹೊಸ ಸತ್ಯವನ್ನು ಆವಿಷ್ಕರಿಸಿ ಕೊಡುವ ಮೂಲಕ, ಆವರೆಗೆ ತಾವು ಇಂಗ್ಲಿಷ್ ಕಲಿಕೆ ಬಗ್ಗೆ ತಳೆದಿದ್ದ ನಿಲುವನ್ನು ಕ್ಷಣಾರ್ಧದಲ್ಲಿ ಬದಲಾಯಿಸಿಕೊಂಡು ತಮ್ಮ ಬೌದ್ಧಿಕ ದಿವಾಳಿತನವನ್ನು ಮೆರೆದಿದ್ದಾರೆ. ಹಾಗೇ ಕನ್ನಡದ ಸೇನಾನಿ ಪಾಟೀಲ ಪುಟ್ಟಪ್ಪನವರು ಕೂಡಾ ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಕೆಯು ಕನ್ನಡಕ್ಕೆ ಧಕ್ಕೆ ತರುವಂತಹುದಲ್ಲ ಎಂದು ಈ ಹಿಂದಿನ ಮತ್ತು ಪ್ರಸ್ತುತ ಸರ್ಕಾರ ಬಾರಿ ಬಾರಿ ಹೇಳಿದ್ದರೂ ನಂಬದಿದ್ದ ಅವರೀಗ, ಈಚೆಗೆ ಧಾರವಾಡದ ವಿದ್ಯಾವರ್ಧಕ ಸಂಘದಲ್ಲಿ ತಮ್ಮ ಸಮ್ಮುಖದಲ್ಲಿ ಪ್ರಾಥಮಿಕ ಶಿಕ್ಷಣ ಮಂತ್ರಿ ಬಸವರಾಜ ಹೊರಟ್ಟಿಯವರು ಅದನ್ನೇ ಪುನರುಚ್ಚರಿಸಿದೊಡನೆ ಸಂಪ್ರೀತರಾಗಿ, ಹಾಗಿದ್ದಲ್ಲಿ ತಮ್ಮ ಅಭ್ಯಂತರವೇನೂ ಇಲ್ಲವೆಂದು ಅನುಮತಿ ನೀಡಿದ್ದಾರೆ! ಇನ್ನು ಕನ್ನಡದ 'ಹುಟ್ಟು ಹೋರಾಟಗಾರ' ವಾಟಾಳ್ ನಾಗರಾಜ್ ತಮ್ಮ ಜನಪ್ರಿಯತೆಯ ಲೆಕ್ಕಚಾರದಲ್ಲಿ ಹಾಗೂ ಇತ್ತೀಚಿನವರೆಗೆ ಕನ್ನಡ ಮಾಧ್ಯಮವಾಗಿ ಜಾರಿಯಾಗದೆ ಇಂಗ್ಲಿಷ್ ಕಲಿಕೆ ಅಪಾಯಕಾರಿ ಎಂದು ಸಾರಿ ಸಾರಿ ಹೇಳುತ್ತಿದ್ದ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸಿದ್ಧಲಿಂಗಯ್ಯನವರು, ಈಗ ಈ ವಿಷಯದಲ್ಲಿ ಒಂದು ಮಾತನ್ನೂ ಆಡಲಾಗದ ಅಧಿಕಾರ ರಾಜಕಾರಣದ ಇಕ್ಕಟ್ಟಿಗೆ ಸಿಲುಕಿದ್ದಾರೆ. ಇನ್ನು 'ಮೋರೆಗೆ ಮಸಿ' ಕುಖ್ಯಾತಿಯ ಕನ್ನಡ ರಕ್ಷಣಾ ವೇದಿಕೆ, ಈ ವಿಷಯದಲ್ಲಿ ಮೌನವಾಗಿರುವ ಮೂಲಕ ತನ್ನ ಮೋರೆಗೇ ಮಸಿ ಬಳಿದುಕೊಂಡಿದೆ.

ಇಂತಹ ಬೌದ್ಧಿಕ ದಿವಾಳಿತನದ ದಟ್ಟ ವಾತಾವರಣದಲ್ಲಿ ಯುನೆಸ್ಕೋ ಮತ್ತು ನಮ್ಮದೇ ಶಿಕ್ಷಣ ಸಂಶೋಧನಾ ಮತ್ತು ತರಬೇತಿ ಸಂಸ್ಥೆ NCERTಯ ಸಮೀಕ್ಷೆ– ಶಿಫಾರ್ಸುಗಳ ಕಡೆ ನಮ್ಮ ಗಮನ ಹರಿಯದೇ ಇರುವುದು ಸಹಜವಾಗಿಯೇ ಇದೆ: ವಿಶ್ವ ಸಂಸ್ಥೆಯ ಅಂಗ ಸಂಸ್ಥೆಯಾದ ಯುನೆಸ್ಕೋ ಈಗ 'ಮಾತೃಭಾಷಾ ಶಿಕ್ಷಣ ಕಾರ್ಯಕ್ರಮ'ವನ್ನು ತನ್ನ ಒಂದು ತುರ್ತು ಕಾರ್ಯಕ್ರಮವನ್ನಾಗಿ ಹಮ್ಮಿಕೊಂಡಿದ್ದು, ಈ ಸಂಬಂಧದ ತನ್ನ ಸಂಶೋಧನೆಗಳನ್ನೂ, ಅದರ ಆಧಾರದ ವರದಿಗಳನ್ನೂ ಅಂತರ್ಜಾಲ ಸೇರಿದಂತೆ ವಿವಿಧ ಮಾಧ್ಯಮಗಳ ಮೂಲಕ ಬಿತ್ತರಿಸುತ್ತಿದೆ. ಮೂಲಭೂತ ಶಿಕ್ಷಣವನ್ನು ಮಾತೃ ಅಥವಾ ಪರಿಸರದ ಭಾಷೆಯಲ್ಲಿ ಪಡೆದ ಮಕ್ಕಳು ಮುಂದಿನ ಹಂತಗಳಲ್ಲಿ ಇಂಗ್ಲಿಷ್‌ನಂತಹ ಅನ್ಯ ಭಾಷೆಗಳನ್ನೂ, ಇತರ ವಿಷಯಗಳನ್ನೂ ಹೆಚ್ಚು ಶೀಘ್ರವಾಗಿ ಹಾಗೂ ಆಳವಾಗಿ ಕಲಿಯಬಲ್ಲವು ಎಂದು ಮಾಜಿ ವಸಾಹತುಗಳನ್ನೊಳಗೊಂಡ ಆಫ್ರಿಕಾದ ಕೆಲವು ದೇಶಗಳಲ್ಲಿ ನಡೆಸಿದ ಸಂಶೋಧನೆ– ಸಮೀಕ್ಷೆಗಳಿಂದ ತಿಳಿದು ಬರುತ್ತದೆಂದು ಅದು ಹೇಳುತ್ತಿದೆ. ನಮ್ಮದೇ ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಹಾಗೂ ತರಬೇತಿ ಸಂಸ್ಥೆ, ರಾಷ್ಟ್ರೀಯ ಪಠ್ಯಕ್ರಮದ ಚೌಕಟ್ಟೊಂದನ್ನು ರೂಪಿಸಲು ರಚಿಸಿದ್ದ ಕಾರ್ಯಪಡೆಯ ಇತ್ತೀಚಿನ ವರದಿ (೨೦೦೬) ಕೂಡಾ ಉತ್ತಮ ಗುಣ ಮಟ್ಟದ ಕಲಿಕೆಯನ್ನು ಸಾಧ್ಯ ಮಾಡುವ, ತರಗತಿಯೊಳಗಿನ ಸಂವಾದ ರೂಪಿ ಶಿಕ್ಷಣ ಕ್ರಮಕ್ಕಾಗಿ ಮಾತೃಭಾಷಾ ಶಾಲಾ ಶಿಕ್ಷಣವನ್ನೇ ಶಿಫಾರ್ಸು ಮಾಡಿದೆ. ಇದಕ್ಕೆ ಸೂಕ್ತವಾಗಿ ಹೊಂದಿಕೊಂಡಂತೆ ಬೇಕಾದರೆ, ಇಂಗ್ಲಿಷನ್ನು ಒಂದು ಭಾಷೆಯಾಗಿ ಕಲಿಸಬಹುದೆಂದು ಸೂಚಿಸಿದೆ. ಏಕೆಂದರೆ ಇಂಗ್ಲಿಷ್ ಕಲಿಕೆಗೆ ಪೂರ್ವಭಾವಿಯಾಗಿ ಮಾತೃಭಾಷಾ ಶಾಲಾ ಶಿಕ್ಷಣ ಈ ಐದು ರಾಷ್ಟ್ರೀಯ ಉದ್ದೇಶಗಳನ್ನು ಈಡೇರಿಸುತ್ತದೆ:

೧. ಜನರನ್ನು ರಾಷ್ಟ್ರ ಪುರ್ನನಿರ್ಮಾಣದಲ್ಲಿ ತೊಡಗುವಂತೆ ಮಾಡುತ್ತದೆ.

೨. ಜ್ಞಾನವನ್ನು ಅಲ್ಪಸಂಖ್ಯಾತ ಪ್ರತಿಷ್ಠಿತ ವರ್ಗದ ಒತ್ತಡಗಳಿಂದ ಬಿಡುಗಡೆಗೊಳಿಸುತ್ತದೆ.

೩. ಅಂತರ್ಸಂಬಂಧಿ ಹಾಗೂ ಪರಸ್ಪರಾವಲಂಬಿ ಸಮಾಜವನ್ನು ನಿರ್ಮಾಣ ಮಾಡುತ್ತದೆ.

೪. ಹೆಚ್ಚಿನ ಸಂಖ್ಯೆಯ ಸಮುದಾಯಗಳು ತಮ್ಮ ಸಲಹೆ–ಸಮ್ಮತಿ ಸೂಚಿಸಲು ಹೆಚ್ಚಿನ ಅವಕಾಶ ಕಲ್ಪಿಸುವ ಮೂಲಕ ಪ್ರಜಾತಂತ್ರದ ರಕ್ಷಣೆ ಮಾಡುತ್ತದೆ.

೫. ಮಾಹಿತಿಯ ವಿಕೇಂದ್ರೀಕರಣಕ್ಕೆ ದಾರಿ ಮಾಡಿಕೊಡುತ್ತದೆ ಹಾಗೂ ಮಾಧ್ಯಮಗಳನ್ನು ನಿಯಂತ್ರಣದಿಂದ ಮುಕ್ತಗೊಳಿಸುತ್ತದೆ; ಹೆಚ್ಚು ಜನರಿಗೆ ಶಿಕ್ಷಣ ಮತ್ತು ವ್ಯಕ್ತಿತ್ವ ಬೆಳವಣಿಗೆಯ ಹೆಚ್ಚೆಚ್ಚು ಅವಕಾಶಗಳನ್ನು ಒದಗಿಸುತ್ತದೆ.

ಈಗ ಕಾಣುತ್ತಿರುವ ವಿಕ್ಷಿಪ್ತ ಅಭಿವೃದ್ಧಿಯ ಹಪಾಹಪಿಯಲ್ಲಿ, ಪರಿಣತ ವಲಯದ ಈ ಶಿಫಾರ್ಸುಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆ, ಸ್ವಯಂ ಘೋಷಿತ ಸಾಮಾಜಿಕ ನ್ಯಾಯವಾದಿಗಳ ಹಾಗೂ ರಾಜಕೀಯ ಪುಢಾರಿಗಳ ಪ್ರಚಾರವನ್ನೇ ನಂಬಿ ಹೊರಟರೆ, ಮೊನ್ನೆ ಇನ್ಫೋಸಿಸ್‌ನ ನಾರಾಯಣ ಮೂರ್ತಿಯವರು ನೀಡಿದ 'ಇಂಗ್ಲಿಷ್ ಮಾಧ್ಯಮ ಕಡ್ಡಾಯವಾಗಲಿ' ಎಂಬ ಹೇಳಿಕೆಯು, 'ಒಂದು ಭಾಷೆಯಾಗಿ ಮಾತ್ರ ಇಂಗ್ಲಿಷ್' ಎಂಬ ಸರ್ಕಾರದ ಹಾಗೂ ಅವರ ಬೆಂಬಲಿಗರ ಘೋಷಣೆಯನ್ನೂ ಮೀರಿ ಹಲವು ಕಡೆಯಿಂದ ಚಲಾವಣೆಗೆ ಬರತೊಡಗಿ, ಕ್ರಮೇಣ 'ಸಾಮಾಜಿಕ ನ್ಯಾಯ'ದ ಪರಿವೇಷ ತೊಟ್ಟು ಅಧಿಕೃತ ಮಾನ್ಯತೆ ಪಡೆಯುವಂತಾಗುತ್ತದೆ. ಏಕೆಂದರೆ, ಈಗಾಗಲೇ ತಮ್ಮ ಹೇಳಿಕೆಯಲ್ಲಿ ನಾರಾಯಣ ಮೂರ್ತಿಯವರು ಕನ್ನಡ ಮಾಧ್ಯಮದ ಮೂಲಕ ದಲಿತರಿಗೆ ಹಾಗೂ ಹಿಂದುಳಿದವರಿಗೆ ಆಗುತ್ತಿರುವ ಅನ್ಯಾಯದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಆದರೆ ಇಂಗ್ಲಿಷ್ ಮಾಧ್ಯಮದಲ್ಲೇ ಓದಿದ ಎಷ್ಟು ಜನ ದಲಿತರಿಗೆ ಹಾಗೂ ಹಿಂದುಳಿದವರಿಗೆ ಮತ್ತು ಕನ್ನಡ ಮಾಧ್ಯಮದಲ್ಲಿ ಓದಿದ ಎಷ್ಟು ಜನ ಇತರರಿಗೆ ತಮ್ಮ ಸಂಸ್ಥೆಯಲ್ಲಿ ಕೆಲಸ ದೊರಕಿದೆ ಎಂಬುದನ್ನು ಮಾತ್ರ ಅವರು ಹೇಳಿಲ್ಲ! ಹೇಳಿದ್ದರೆ ಚೆನ್ನಿತ್ತು. ಇಡೀ ಜಗತ್ತೇ ಜಾಗತಿಕ ಮಾರುಕಟ್ಟೆಯಾಗಿ ಪರಿವರ್ತಿತವಾಗುತ್ತಿರುವುದೆಂದು(?) ಹೇಳಲಾಗುತ್ತಿರುವ ಇಂದಿನ ಸಂದರ್ಭದಲ್ಲಿ ಇಂಗ್ಲಿಷ್ ಮಾಧ್ಯಮದ ಅನಿವಾರ್ಯತೆಯನ್ನು ಎತ್ತಿ ಹೇಳಿರುವ ಅವರು, ಸ್ವತಃ ತಾವೇ ಕನ್ನಡ ಶಾಲೆಯಲ್ಲಿ ಓದಿ ಈ ಜಾಗತಿಕ ಮಾರುಕಟ್ಟೆಗೆ ಸಡ್ಡು ಹೊಡೆದು ನಿಲ್ಲಲು ಸಾಧ್ಯವಾಗಿರುವ ಸತ್ಯವನ್ನು ಮರೆಯುವಂತಾಗಿರುವುದು, ನವ ವಸಾಹತುಶಾಹಿ ಸೃಷ್ಟಿಸಿರುವ 'ವಿಸ್ಮೃತಿ'ಯ ಪರಿಣಾಮವೇ ಆಗಿರಬಹುದು. ಹಾಗಾಗಿಯೇ, ಕರ್ನಾಟಕದ ಗ್ರಾಮಾಂತರ ಪ್ರದೇಶದಲ್ಲಿ ಹುಟ್ಟಿ, ಕನ್ನಡ ಕಲಿತು ಬೆಳೆದ ನಾರಾಯಣ ಮೂರ್ತಿಯವರು 'ಕನ್ನಡದಲ್ಲಿ ಸಂದರ್ಶನ ನೀಡಿದರು' ಎಂದು 'ಪ್ರಜಾವಾಣಿ'ಯಂತಹ ಪತ್ರಿಕೆ ಸಂಭ್ರಮದಿಂದ ಹೇಳಿಕೊಳ್ಳುವಂತಹ ದುಸ್ಥಿತಿಗೆ ಕನ್ನಡ ಈಡಾಗಿರುವುದು!

ಪಾಸ್‌ಪೋರ್ಟ್ ಹಾಗೂ ವೀಸಾಗಳ ನಿಯಮಾವಳಿ ದಿನೇ ದಿನೇ ಹೆಚ್ಚೆಚ್ಚು ಕಟ್ಟುನಿಟ್ಟಾಗುತ್ತಿದ್ದರೂ, ಇಡೀ ಜಗತ್ತೇ ಒಂದು ಹಳ್ಳಿಯಂತಾಗುತ್ತಿದೆ ಎಂದು ಇಂಟರ್‌ನೆಟ್ಟಿಗರು

ಹರಡುತ್ತಿರುವ ಹುಂಬ ನಂಬಿಕೆಗೆ ಮರುಳಾಗಿರುವ ನಾವು ನಮ್ಮ ಮಕ್ಕಳನ್ನು ನೆಲದಿಂದ ಕಿತ್ತು ಆಕಾಶಕ್ಕೆ ಎಸೆದು ಅದೃಷ್ಟ ಪರೀಕ್ಷೆ ಮಾಡಿಕೊಳ್ಳಲು ಹೊರಟಿದ್ದೇವೆ. ಆಧುನಿಕ ಮಾಧ್ಯಮ ಮಾಯಾಜಾಲವು ಸೃಷ್ಟಿಸಿಬಿಟ್ಟಿರುವ ಇಂತಹ ವಿಕ್ಷಿಪ್ತ ಜೀವನ ದೃಷ್ಟಿಯಿಂದಾಗಿಯೇ, ಆಧುನೀಕರಣದ ಆರಂಭದ ದಿನಗಳಲ್ಲಿ ಜ್ಞಾನದ ಕಿಟಕಿಯಾಗಿ ಕಂಡ ಇಂಗ್ಲಿಷ್, ಈಗ ಅದರ ಜಾಗತೀಕರಣದ ಹಂತದಲ್ಲಿ ಶುದ್ಧ ವ್ಯಾಪಾರ ಕಿಟಕಿಯಾಗಿ ಮಾರ್ಪಾಡಾಗಿರುವ ವಾಸ್ತವಕ್ಕೆ ನಾವು ಅಷ್ಟೇನೂ ಎಚ್ಚರಾದಂತೆ ತೋರುವುದಿಲ್ಲ. ಹಾಗೇ, ಅದು ಜಗತ್ತಿನ 'ಬೌದ್ಧಿಕ ಆಸ್ತಿ' ಎಂಬುದನ್ನು ನಿರ್ವಚಿಸಿ, ಅದನ್ನು ಹರಾಜಿಗಿಡುವ ಮೂಲಕ ಮಾನವ ಸಂಪನ್ಮೂಲದ ಪರಿಕಲ್ಪನೆಯನ್ನೇ ವಿಕ್ಷಿಪ್ತಗೊಳಿಸಿ, ಮಾನವ ಸತ್ವದ ಪಾವಿತ್ರ್ಯ ಹಾಗೂ ಅವಿಭಾಜ್ಯತೆಗೆ ಭಂಗ ತಂದಿರುವುದರ ಬಗ್ಗೆಯೂ ನಮ್ಮಲ್ಲಿ ಅಂತಹ ವ್ಯಸ್ತತೆಯೇನೂ ಉಂಟಾಗಿಲ್ಲ. ಹೀಗಾಗಿ ಪರಿಣಾಮದ ದೃಷ್ಟಿಯಿಂದ, ಜಾಗತೀಕರಣವೆಂದರೆ ಸಾಮ್ರಾಜ್ಯಶಾಹಿಯ ಸ್ವಯಂ ಅಥವಾ ದೇಶೀ ಪುನರುತ್ಪಾದನೆಯೇ ಆಗಿದೆ. ಅಲ್ಲದೇ ಅದು, ವಿಜ್ಞಾನ–ತಂತ್ರಜ್ಞಾನ ಕ್ಷೇತ್ರಗಳಿಗಷ್ಟೇ ಅನ್ವಯವಾಗದೆ, ನಮ್ಮ ಕಲೆ–ಮಾನವಿಕ ಕ್ಷೇತ್ರಗಳಿಗೂ ಅನ್ವಯವಾಗುವಂತಾಗಿರುವುದರ ಕಾರಣಗಳನ್ನು, ಆಧುನೀಕರಣ ನಿಜವಾಗಿ ಭಾರತಕ್ಕೆ, ಅದರ ಆತ್ಮಕ್ಕೆ ಏನು ಮಾಡಿದೆ ಎಂಬುದರ ಅನ್ವೇಷಣೆಯ ಹಾದಿಯಲ್ಲಿ ಕಂಡುಕೊಳ್ಳಬಹುದಾಗಿದೆ:

ನಿಲ್ಲದ ರೈತರ ಆತ್ಮಹತ್ಯೆ ಸರಣಿ, ಬೃಹತ್ ಯೋಜನೆಗಳಿಗಾಗಿ ಈಗಲೂ ಮುಂದುವರಿಯುತ್ತಿರುವ ಬಡ ಹಾಗೂ ಅಸಹಾಯಕ ಜನರ ನಿರ್ವಸತೀಕರಣ; ತಾರಕಕ್ಕೇರಿರುವ ವಿಶಿಷ್ಟ ಕಸುಬುಗಳ, ಜನ ವರ್ಗಗಳ ಆದಾಯಗಳಲ್ಲಿನ ಅಂತರದಿಂದಾಗಿ ಉಂಟಾಗುತ್ತಿರುವ ಆತಂಕ–ಅಶಾಂತಿಗಳ ವಿವಿಧ ರೂಪದ ಸ್ಫೋಟಗಳು; ಮೂಲಭೂತ ಬದಲಾವಣೆಗೆ ಒಳಗಾಗುತ್ತಿರುವ ದುಡಿಮೆಯ ಅರ್ಥ; ಇವುಗಳ ಮಧ್ಯೆಯೇ ನಗರಗಳಲ್ಲಿನ ಉದ್ಯಮ ಹಾಗೂ ಉದ್ಯಮಿಗಳಿಗಾಗಿ 'ಮೂಲಭೂತ ಸೌಕರ್ಯ'ಗಳ ನಿರ್ಮಾಣದ ಹೆಸರಿನಲ್ಲಿ ನಾಡಿನಾದ್ಯಾಂತ ಕಡಿದು ಬೀಳುತ್ತಿರುವ ಲಕ್ಷಾಂತರ ಮರಗಳು, ಅದರಿಂದ ಉಂಟಾಗುತ್ತಿರುವ ಜೀವ ಪರಿಸರ ಸಮಸ್ಯೆಗಳು–ಇವುಗಳಿಂದಾಗಿ ಸೃಷ್ಟಿಯಾಗುತ್ತಿರುವ ಮಾರುಕಟ್ಟೆಯ ಮಾಯಾಜಾಲ (ಈಗ ಸಣ್ಣ ಊರುಗಳಲ್ಲೂ ಹವಾ ನಿಯಂತ್ರಣ ಯಂತ್ರಗಳು ಗೃಹಪಯೋಗಿ ವಸ್ತುಗಳಾಗಿ ಮಾರುಕಟ್ಟೆಗೆ ಬಂದಿವೆ!); ನದಿಗಳ ತುಂಡು ಮಾರಾಟ; ಆಧುನಿಕ ವಿದ್ಯೆ ಕಲಿತ ವೃತ್ತಿಪರರ ನೇತೃತ್ವದಲ್ಲಿಯೇ ನಡೆಯುತ್ತಿರುವ ಆತ್ಮಾಹುತಿಗಳ ಮೂಲಕ ವ್ಯಕ್ತವಾಗುತ್ತಿರುವ ಕೋಮುವಾದಿ ಉಗ್ರವಾದದ ಬರ್ಬರತೆ– ಇತ್ಯಾದಿಗಳಾವುದರಿಂದಲೂ ವಿಚಲಿತರಾಗದಂತೆ, ಜನ ಜಾಗತೀಕರಣದ ಫಲಗಳನ್ನುಣ್ಣಲು ಮುಗಿ ಬೀಳುತ್ತಿದ್ದಾರೆ. ಹೀಗೆ ಮುಗಿಬೀಳುವುದಕ್ಕೆ ಎಲ್ಲರಿಗೂ ಸಮಾನ ಅವಕಾಶ ಮಾಡಿಕೊಡಲು ಸಮಾನ ಇಂಗ್ಲಿಷ್ ಕಲಿಕೆ ಅಗತ್ಯವಾಗಿದೆ ಎಂಬುದೇ ಕರ್ನಾಟಕ ಸರ್ಕಾರದ ಆಜ್ಞೆಯ ಹಾಗೂ ಅದರ ಉದ್ದೀಪಕರ ಮತ್ತು ಬೆಂಬಲಿಗರ ವಾದದ ತಾತ್ಪರ್ಯವಾಗಿದ್ದಂತೆ ತೋರುತ್ತದೆ!

ಈ ಜಾಗತೀಕರಣವು ನಮ್ಮ ಜನಸಂಖ್ಯೆಯ ಎಷ್ಟು ಪಾಲಿನ ಜನರ ಹಸಿವನ್ನು,

ನೀಗಿಸಬಹುದು, ಯಾವ ಯಾವ ಜನ ವರ್ಗಗಳಲ್ಲಿ ಎಂತೆಂತಹ ದಾಹಗಳನ್ನು ಸೃಷ್ಟಿಸಿ- ಅವನ್ನು ಎಷ್ಟರ ಮಟ್ಟಿಗೆ ಹಿಂಗಿಸಬಲ್ಲುದು ಹಾಗೂ ಇನ್ನೆಷ್ಟು ಪಾಲಿನ ಜನರನ್ನು ತನ್ನ ಅಭಿವೃದ್ಧಿಯ ವ್ಯಾಪ್ತಿಯ ಹೊರಗಿಟ್ಟು ಇನ್ನೂ ಎಂತೆಂತಹ ಸಾಮಾಜಿಕ ಅಶಾಂತಿ ಹಾಗೂ ಸಾಂಸ್ಕೃತಿಕ ಬಿಕ್ಕಟ್ಟುಗಳನ್ನು ಸೃಷ್ಟಿಸಬಹುದು ಎಂಬುದರ ಒಂದು ಅಂದಾಜನ್ನಾದರೂ, ಈವರೆಗಿನ ಅನುಭವಗಳ ಆಧಾರದ ಮೇಲೆ ಇವರಿಗೆ ಮಾಡಲಿಕ್ಕಾಗಲಿಲ್ಲ. ಬದಲಿಗೆ ಇವರಿಗೆ ಎದ್ದು ಕಾಣುತ್ತಿರುವುದು, ಈಗ ಬೆಂಗಳೂರಿನಲ್ಲಿ ಒಂದು ವಾಚ್‌ಮೆನ್ ಕೆಲಸಕ್ಕೂ ಇಂಗ್ಲಿಷ್ ಜ್ಞಾನ ಅಗತ್ಯವಾಗಿದೆ ಎಂಬ ಮೇಲ್ಮೈ ಸತ್ಯ ಮಾತ್ರ. ಆದರೆ ಇದು ಏನನ್ನು ಸೂಚಿಸುತ್ತದೆ, ಇಂತಹ ಬೆಂಗಳೂರಿನ ಸೃಷ್ಟಿ ಹೇಗಾಯಿತು, ಇದು ರೂಪಿಸುತ್ತಿರುವ ಬದುಕಿನ ಸ್ವರೂಪ ಹಾಗೂ ಗುಣ ಮಟ್ಟವಾದರೂ ಎಂತಹದು, ಇದು ಹೀಗೇ ಬೆಳೆಯಬೇಕೇ- ಬೇರೆ ಪರ್ಯಾಯಗಳಿಲ್ಲವೇ ಎಂಬ ಪ್ರಶ್ನೆಗಳಿಗೆ ಕಿವುಡಾಗಿರುವ ಸತ್ಯವಿದು. ಇಂದು ಬೆಂಗಳೂರು, ಜನತೆ ಆಯ್ಕೆ ಮಾಡುವ ಸರ್ಕಾರಗಳನ್ನೇ (ಗ್ರಾಮ ಪಂಚಾಯ್ತಿಗಳಿಂದ ಹಿಡಿದು ರಾಜ್ಯ- ಕೇಂದ್ರ ಸರ್ಕಾರಗಳವರೆಗೆ) ಅಪ್ರಸ್ತುತಗೊಳಿಸುವಂತಹ ಕೆಲವು ಪಟ್ಟಭದ್ರ ಹಿತಾಸಕ್ತಿಗಳ ಆಡೊಂಬಲವಾಗಿ ಬೆಳೆಯುತ್ತಿದೆ; ಖಾಸಗಿ ಕಂಪನಿಗಳು, ನಿಗಮಗಳು ತಮ್ಮ ಬೃಹತ್ ಲಾಭಾಂಶಗಳ ಬೊಜ್ಜನ್ನು ಪ್ರದರ್ಶಿಸುತ್ತಾ, ಬಳಸಿಕೊಳ್ಳುತ್ತಾ ಈ ಸರ್ಕಾರಗಳ ಅಧಿಕೃತತೆ, ಅಧಿಕಾರ ವಿಶ್ವಾಸಾರ್ಹತೆಗಳನ್ನೇ ಸಾರ್ವಜನಿಕವಾಗಿ ಪ್ರಶ್ನಿಸುತ್ತಾ, ಸಮಾನಂತರ ಸರ್ಕಾರಗಳಂತೆ ಕೆಲಸ ಮಾಡತೊಡಗಿವೆ. ಇವು ಸೃಷ್ಟಿಸುತ್ತಿರುವ ಅಮೂರ್ತ ಹಾಗೂ ಮೂರ್ತ ಹಿಂಸೆಗಳು (ವಾಚ್‌ಮನ್ ಕೆಲಸಕ್ಕೂ ಇಂಗ್ಲಿಷ್ ಅಗತ್ಯ ಎಂಬುದೂ ಸ್ಥಳೀಯತೆಯ- ಸ್ಥಳೀಯತೆಯು ಒಂದು ಸಾಂಸ್ಕೃತಿಕ ಮೌಲ್ಯವೂ, ಪರಿಮಳವೂ ಆಗಿರುವುದರಿಂದ-ಮೇಲೆ ಎಸಗುವ ಅತ್ಯಾಚಾರವೇ ಆಗಿದೆ) ಸಾಮಾನ್ಯ ಜನ ತಮ್ಮ 'ಸ್ಮೃತಿ'ಯನ್ನೇ ಕಳೆದುಕೊಳ್ಳುವಂತೆ ಮಾಡುತ್ತಿವೆ: ಪ್ರಜಾಪ್ರಭುತ್ವ, ಸಮಾನತೆ ಹಾಗೂ ಜಾತ್ಯಾತೀತೆಯ ಆಶಯ-ಆದರ್ಶಗಳು, ಜನಮಾನಸದಲ್ಲಿ ಹಿನ್ನೆಲೆಗೆ ಸರಿಯುತ್ತಿವೆ.

ಇದರಿಂದ ಉಂಟಾಗುತ್ತಿರುವ ಕ್ಷೋಭೆಯನ್ನು ತಡೆಯಲು ಇಂದು ಕನ್ನಡವನ್ನು ತುರ್ತು ಅಗತ್ಯವೆಂಬಂತೆ-ಈಗ ಅದರ ಅಳಿದುಳಿರುವ ಸಾರ್ವಜನಿಕ ಸ್ಥಾನಮಾನಕ್ಕೆ ಕಿಂಚಿತ್ತೂ ಭಂಗಬಾರದಂತೆ-ಉಳಿಸಿಕೊಳ್ಳಬೇಕಾಗಿದೆ: ಜಾಗತೀಕರಣದ ದುಷ್ಪರಿಣಾಮಗಳು ವ್ಯಾಪಕವಾಗಿ ಹಬ್ಬದಂತೆ ಪ್ರತಿರೋಧ ಶಕ್ತಿಯಾಗಿ ಕನ್ನಡ ಶಿಕ್ಷಣದ ಪ್ರಾಥಮಿಕತೆಯನ್ನು ಉಳಿಸಿ ಬೆಳಸಬೇಕಾಗಿದೆ. ಶಾಲಾ ಶಿಕ್ಷಣದಲ್ಲಿ ಕನ್ನಡಿಗರಿಗಾದರೂ ಕನ್ನಡ ಮಾಧ್ಯಮ ಕಡ್ಡಾಯವಾಗಿ ಜಾರಿಯಾಗದೆ ಇಂಗ್ಲಿಷ್ ಕಲಿಕೆ ಪ್ರಸ್ತಾವನೆಯನ್ನು ಮಂಡಿಸುವುದು ಮತ್ತು ಅದನ್ನು ಬೆಂಬಲಿಸುವುದು, ಬೆಂಗಳೂರಿನ ರೋಗವನ್ನು ವಾಸಿಮಾಡಲು ಹೋಗಿ ಅಂತಹ ರೋಗದ ವಿರುದ್ಧ ರಾಜ್ಯದ ಉಳಿದೆಡೆ ಉಳಿದುಕೊಂಡಿರುವ ಅಷ್ಟಿಷ್ಟಾದರೂ ಪ್ರತಿರೋಧ ಶಕ್ತಿಯನ್ನು ನಾಶ ಮಾಡುವಂತಹ ಆತ್ಮಘಾತುಕ ಕೆಲಸವಾಗುತ್ತದೆ.

ಇನ್ನು ಕಾಂಗ್ರೆಸ್ ಪಕ್ಷದ ಕೆಲವು ಶಾಸಕರು ಹಾಗೂ ಮುಖಂಡರು ಸರ್ಕಾರದ ಆಜ್ಞೆ ಪರವಾಗಿ ನೀಡಿರುವ ಒಂದು ಸುದೀರ್ಘ ಹೇಳಿಕೆಯಲ್ಲಿ, ಭಾರತದ ಇತರ ರಾಜ್ಯಗಳು

ತಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಇಂಗ್ಲಿಷ್‌ಗೆ ಪ್ರಾಥಮಿಕತೆ ನೀಡಲಾರಂಭಿಸಿರುವುದನ್ನು ಪ್ರಸ್ತಾಪ ಮಾಡಿದ್ದಾರೆ. ಆದರೆ ಆ ರಾಜ್ಯಗಳಲ್ಲಿ ಆಯಾ ರಾಜ್ಯ ಭಾಷೆಗಳ 'ಅಭಿವೃದ್ಧಿ ಪ್ರಾಧಿಕಾರ', 'ಪುಸ್ತಕ ಪ್ರಾಧಿಕಾರ'ದಂತಹ ಸಂಸ್ಥೆಗಳನ್ನು ರಚಿಸುವಂತಹ ದುಃಸ್ಥಿತಿಯಲ್ಲಿ ಅಲ್ಲಿನ ಭಾಷೆಗಳಿಲ್ಲ. ಅಲ್ಲಿನ ಸರ್ಕಾರಗಳು ಸಮರ್ಥ ಭಾಷಾ ಹಾಗೂ ಶಿಕ್ಷಣ ನೀತಿಗಳ ಮೂಲಕ ಅಲ್ಲಿನ ರಾಜ್ಯ ಭಾಷೆಗಳನ್ನು ಪೋಷಿಸಿದ ನಂತರವಷ್ಟೇ, ಇಂಗ್ಲಿಷ್ ಕಲಿಕೆ ಕಡೆ ಗಮನ ಹರಿಸಿವೆ. ಹಾಗೇ ಈ ವಿಷಯಕ್ಕೆ ಸಂಬಂಧಿಸಿದಂತೆ ಪದೇ ಪದೇ ಉಲ್ಲೇಖಗೊಳ್ಳುವ ಚೀನಾ ಮತ್ತು ಜಪಾನ್ ದೇಶಗಳಲ್ಲಿ ಕೂಡಾ ನಮ್ಮ ಕರ್ನಾಟಕದಲ್ಲಿರುವಂತೆ ಗಲ್ಲಿಗೊಂದು ಗಟಾರಕ್ಕೊಂದರಂತೆ ಇಂಗ್ಲಿಷ್ ಮಾಧ್ಯಮ ಶಾಲೆಗಳಿಲ್ಲ. ನಾವು ಸುಮಾರು ನೂರು ವರ್ಷಗಳ ಹಿಂದೆ ಆರಂಭಿಸಿದ ಇಂಗ್ಲಿಷ್ ಕಲಿಕೆಯನ್ನು ಅಲ್ಲೀಗ ಅವರು ಆರಂಭಿಸಿದ್ದಾರಷ್ಟೆ. ಹಾಗಾಗಿ ನಾವು ಅವರಿಗೆ ಉದಾಹರಣೆಯೇ ಹೊರತು, ಅವರು ನಮಗೆ ಉದಾಹರಣೆಯಾಗಲಾರರು.

ಹಾಗೇ ಮುಖ್ಯಮಂತ್ರಿ ಕುಮಾರಸ್ವಾಮಿಯವರು, ತಮಗೆ ಸಾರ್ವಜನಿಕವಾಗಿ ಇಂಗ್ಲಿಷ್ ಮಾತನಾಡಲು ಆಗುತ್ತಿರುವ ಹಿಂಜರಿಕೆಯ ಬಗ್ಗೆ ಅಲವತ್ತುಕೊಳ್ಳುತ್ತಾ, 'ತಮ್ಮ ಸ್ಥಿತಿಯೇ ಹೀಗಿರುವಾಗ ಮಿಕ್ಕ ಗ್ರಾಮಾಂತರ ಮಕ್ಕಳ ಗತಿಯೇನು? ಇಂಗ್ಲಿಷ್ ಮೂಲಕ ಪಟ್ಟಣದ ಮಕ್ಕಳು ಸಿರಿವಂತರಾಗುತ್ತಿದ್ದರೆ, ಹಳ್ಳಿ ಮಕ್ಕಳು ಕನ್ನಡ ಕಲಿತು ಬಡತನದಲ್ಲೇ ಉಳಿದುಬಿಡಬೇಕೆ?' ಎಂಬ ಭಾವಾವೇಶದ ಪ್ರಶ್ನೆಗಳನ್ನು ಕೇಳಿದ್ದಾರೆ. ಹಳ್ಳಿಗಳ ಮಕ್ಕಳಿಗೆ ಇಂಗ್ಲಿಷ್ ಕಲಿಯುವ ಸೌಲಭ್ಯವಿಲ್ಲವೆನ್ನುವುದು ಅಥವಾ ಹಳ್ಳಿಗಳ ಮಕ್ಕಳು ಈವರೆಗೆ ಇಂಗ್ಲಿಷ್ ಕಲಿಯಲಾಗಿಲ್ಲವೆನ್ನುವುದು, ವಾಸ್ತವಕ್ಕೆ ದೂರವಾದ ಸಂಗತಿಯಾಗಿದೆ. ತಮ್ಮ ಸಹಪಾಠಿಗಳಲ್ಲಿ ಅನೇಕರು ಕೀಳರಿಮೆಯಿಲ್ಲದೆ ಮಾತಾಡಬಲ್ಲಷ್ಟು ಇಂಗ್ಲಿಷ್ ಕಲಿತಿರುವುದನ್ನು ಅವರು ಗಮನಿಸಿದಂತಿಲ್ಲ. ಏಕೆಂದರೆ, ಅವರ ಗಮನವೆಲ್ಲ ಬೆಂಗಳೂರಿನ ಕಾನ್ವೆಂಟಿಗರ ಇಂಗ್ಲಿಷ್ ಕಡೆಗಿದೆ! ಅಂದರೆ, ಅವರ ಅಂತಿಮ ಉದ್ದೇಶವೇನಿದ್ದರೂ, ಇಂಗ್ಲಿಷ್ ಮಾಧ್ಯಮ ಜಾರಿಯೇ ಆಗಿದೆ. ಇದನ್ನು ಪ್ರಾಮಾಣಿಕವಾಗಿ ಹೇಳುವ ಧೈರ್ಯವೂ ಇಲ್ಲದೆ, ಭಾಷೆಯ ವಿಷಯದಲ್ಲಿ ಅವರು ಸದ್ಯಕಷ್ಟೇ 'ವ್ಯಾವಹಾರಿಕ ನೀತಿ'ಯ ಮಾತಾಡುತ್ತಿದ್ದಾರೆ.

ಇನ್ನು, ಕನ್ನಡ ಕಲಿತು ಸಿರಿವಂತರಾಗಲು ಸಾಧ್ಯವಿಲ್ಲವೇ? ಹಾಗಾದರೆ, ಮುಖ್ಯಮಂತ್ರಿಯವರ ಸದ್ಯದ ಶ್ರೀಮಂತಿಕೆಯನ್ನು ಹೇಗೆ ವಿವರಿಸಬೇಕೋ ತಿಳಿಯದಾಗಿದೆ! ಅಂದ ಹಾಗೆ ತಮ್ಮ ಇಂಗ್ಲಿಷ್ ಜ್ಞಾನದ ಬಗ್ಗೆ ಅವರಿಗೇಕೆ ಕೀಳರಿಮೆ ಇರಬೇಕು? ಕುಮಾರಸ್ವಾಮಿಯವರು ಮುಖ್ಯಮಂತ್ರಿಯಾಗಿ, ಜಗತ್ತಿನಲ್ಲಿ ಫ್ರಾನ್ಸ್ ಅಥವಾ ಜರ್ಮನಿಗಳ ಅಧ್ಯಕ್ಷರುಗಳು ಅಥವಾ ಚೀನಾ ಅಥವಾ ಜಪಾನ್‌ಗಳ ಪ್ರಧಾನ ಮಂತ್ರಿಗಳಿಂದ ಹೆಚ್ಚಿನ ಮಹತ್ವದ ಅಥವಾ ಜವಾಬ್ದಾರಿಯ ಸ್ಥಾನಮಾನವನ್ನೇನೂ ಹೊಂದಿಲ್ಲ. ಆದರೆ, ಅವರೆಲ್ಲ ನಮ್ಮ ಮುಖ್ಯಮಂತ್ರಿಗಳಂತೆ ಇಂಗ್ಲಿಷ್ ಬಗ್ಗೆ ಕೀಳರಿಮೆಯಿಂದ ನರಳದೆ, ವಿಶ್ವವೇದಿಕೆಗಳಲ್ಲೂ ಹೆಮ್ಮೆಯಿಂದ ತಂತಮ್ಮ ದೇಶ ಭಾಷೆಗಳಲ್ಲಿ ಮಾತನಾಡುತ್ತಾರೆ. ನಮ್ಮ ರಾಜಕಾರಣಿಗಳಂತೆ ಬೌದ್ಧಿಕ ದಾರಿದ್ರ್ಯದಿಂದ ನರಳದ ಅವರು, ಜಾಗತಿಕ ಮಟ್ಟದ ಎಲ್ಲ ಜ್ಞಾನವನ್ನು ತಂತಮ್ಮ ದೇಶ ಭಾಷೆಗಳಿಗೆ ತಂದುಕೊಳ್ಳುವ ವ್ಯವಸ್ಥೆ ಮಾಡುವ ಬದ್ಧತೆ ಹಾಗೂ ದಿಗಂತ ದೃಷ್ಟಿ

ಹೊಂದಿದವರಾಗಿದ್ದಾರೆ. ಆದರೆ ರಾಜಕೀಯ ಪಟ್ಟುಗಳನ್ನು ಹಾಕುತ್ತಾ, ದುಡ್ಡು ಮಾಡುವ ದಂಧೆಯನ್ನೇ ಮೂಲ ಕಸುಬು ಮಾಡಿಕೊಂಡಿರುವ ನಮ್ಮ ನಾಯಕರು, ಇದರ ಭಾಗವಾಗಿಯೇ ಒತ್ತಡಕ್ಕೆ ಸಿಕ್ಕಾಗ, ತಮ್ಮ ಭಾಷೆಯೇ ಜಾಗತಿಕವಾಗಿ ಅಪ್ರಸ್ತುತವಾಗುತ್ತಿದೆ ಎಂದು ಪರೋಕ್ಷವಾಗಿ ಸೂಚಿಸಲು ಹೇಸದವರಾಗುತ್ತಾರೆ.

ಗ್ರಾಮಾಂತರ ಮತ್ತು ದಲಿತ ಹಾಗೂ ಹಿಂದುಳಿದ ಜಾತಿ–ವರ್ಗಗಳ ಮಕ್ಕಳು ಸಮಕಾಲೀನ ಜೀವನದಲ್ಲಿ ಯಶಸ್ವಿಯಾಗುತ್ತಿಲ್ಲ ಎಂಬುದೇ ದೊಡ್ಡ ಸುಳ್ಳಾಗಿದೆ ಮತ್ತು ಇವರೆಲ್ಲರಿಗೂ ಐದನೆಯ ತರಗತಿಗೆ ಬದಲಾಗಿ, ಒಂದನೇ ತರಗತಿಯಿಂದಲೇ ಇಂಗ್ಲಿಷ್ ಕಲಿಸಲಾರಂಭಿಸಿದರೆ, ಅವರು ಯಶಸ್ವಿಯಾಗುತ್ತಾರೆ ಎಂಬುದು ಅದಕ್ಕಿಂತ ದೊಡ್ಡ ಸುಳ್ಳಾಗಿದೆ. ಬೃಹತ್ ವಾಣಿಜ್ಯ ಲಾಬಿಗಳ ಪ್ರತ್ಯಕ್ಷ ಅಥವಾ ಪರೋಕ್ಷ ಪ್ರಭಾವದಿಂದ ಹುಟ್ಟಿರುವಂತೆ ತೋರುವ ಈ ತರಹದ ಸುಳ್ಳು ಸುಳ್ಳಾದ ಚಿಂತನಾ ಲಹರಿಯು, ಈ ಸಮುದಾಯಗಳ ಆತ್ಮವಿಶ್ವಾಸವನ್ನೇ ಭಂಗಗೊಳಿಸಿ, ಅವರನ್ನು ದಾರಿ ತಪ್ಪಿಸುವ ಹುನ್ನಾರವೂ ಆಗಿದ್ದರೆ ಆಶ್ಚರ್ಯವಿಲ್ಲ. ನಮ್ಮ ದಲಿತ ಹಾಗೂ ಹಿಂದುಳಿದ ವರ್ಗಗಳ ನಾಯಕತ್ವದ ಒಂದು ಭಾಗವು ತಮ್ಮ ಸಮುದಾಯಗಳ ಸಮಸ್ಯೆಗಳ ತಳ ಶೋಧನೆಗೆ ಕೈ ಹಾಕುವ ಕಷ್ಟ ತೆಗೆದುಕೊಳ್ಳದೆ, ತಮ್ಮ ಕೀಳರಿಮೆಗೆಲ್ಲಾ ಒಂದೊಂದು ಕಾಲದಲ್ಲಿ ಒಂದೊಂದು ಕಾರಣ ಹುಡುಕಿಕೊಳ್ಳುವ ಸಮೀಪ ದೃಷ್ಟಿ ದೋಷದಿಂದ ನರಳುತ್ತಿರುವಂತೆ ತೋರುತ್ತಿದೆ. ಈ ನಾಯಕತ್ವವು ತಮ್ಮನ್ನು ನಂಬಿರುವ ಮುಗ್ಧ ಜನಸ್ತೋಮವನ್ನು ಜಾತಿ ವರ್ಗಗಳ ಹೆಸರಿನಲ್ಲಿ ಕೆರಳಿಸುತ್ತಾ, ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳುವುದರಲ್ಲೇ ನಿರತವಾಗುತ್ತಿರುವುದು ಈ ಸಂದರ್ಭದಲ್ಲೂ ಎದ್ದು ಕಾಣುವಂತಿದೆ.

ಇಂತಹವರ ಬೇಡಿಕೆಯನ್ನು ದಲಿತರ–ಹಿಂದುಳಿದವರ ಬೇಡಿಕೆಯೆಂದು ಸಾರಾಸಗಟಾಗಿ ನಂಬಿ, ಗ್ರಾಮಾಂತರ ಮಕ್ಕಳಿಗೆ ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಸುವ ಬಗೆಗಳ ಬಗ್ಗೆ ಕೆಲವರು ಸಲಹೆ–ಸೂಚನೆಗಳನ್ನು ಕೊಡುತ್ತಿರುವುದನ್ನು ಮತ್ತು ನಮ್ಮ ಶಾಲೆಗಳ ಶಿಕ್ಷಕರು ತಾವು ಇಂಗ್ಲಿಷ್ ಕಲಿಸಲು ಸಿದ್ಧವೆಂದು ಕೊಡುತ್ತಿರುವ ಹೇಳಿಕೆಗಳನ್ನು ಕಂಡು ನಗಬೇಕೋ ಅಳಬೇಕೋ ತಿಳಿಯದಾಗಿದೆ: ಇತ್ತೀಚೆಗೆ ತಾನೇ ನಮ್ಮ ಶಾಲೆಗಳಲ್ಲಿನ ಕಲಿಕೆ ಗುಣಮಟ್ಟದ ಬಗ್ಗೆ ಸಿದ್ಧಪಡಿಸಿರುವ ಅಧಿಕೃತ ವಾರ್ಷಿಕ ಶಿಕ್ಷಣ ವರದಿಯ ಫಲಿತಾಂಶಗಳು ಕನ್ನಡದ ಎಲ್ಲ ಪ್ರಮುಖ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಇದರ ಪ್ರಕಾರ ಕರ್ನಾಟಕದ ಗ್ರಾಮಾಂತರ ಶಾಲೆಗಳಲ್ಲಿನ ಏಳರಿಂದ ಹತ್ತು ವರ್ಷಗಳ ವಯೋಮಾನದ ಮಕ್ಕಳಲ್ಲಿ ಶೇ.೫೩ರಷ್ಟು ಮಕ್ಕಳಿಗೆ ಒಂದು ಸಣ್ಣ ಮತ್ತು ಸರಳ ಗದ್ಯಭಾಗವನ್ನು ಸರಿಯಾಗಿ ಓದಲು ಬರುವುದಿಲ್ಲ ಹಾಗೂ ಶೇ.೬೦ ಮಕ್ಕಳಿಗೆ ಸರಳ ಕೂಡುವ ಮತ್ತು ಕಳೆಯುವ ಲೆಕ್ಕ ಬರುವುದಿಲ್ಲ. ಇನ್ನು ಶೇ.೯೦ಭಾಗ ಮಕ್ಕಳಿಗೆ ಸರಳ ಭಾಗಾಕಾರ ಮಾಡಲಾಗುವುದಿಲ್ಲ. ಇಂತಹ ದುಃಸ್ಥಿತಿಯಲ್ಲಿರುವ ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಕಲಿಸಲಾಗುವ ಇಂಗ್ಲಿಷ್ ಮೂಲಕ ನಮ್ಮ ಮಕ್ಕಳನ್ನು ಜಾಗತಿಕ ಉದ್ಯೋಗ ಮಾರುಕಟ್ಟೆಗೆ ತಯಾರು ಮಾಡಹೊರಟ್ಟಿದ್ದೇವೆ!

ಕನ್ನಡದ ಮಕ್ಕಳಿಗೆ ಸುವರ್ಣ ಕರ್ನಾಟಕಾಚರಣೆಯ ಸಂದರ್ಭದಲ್ಲಿ ಮಾಡಬಹುದಾದ, ಇದಕ್ಕಿಂತ ದೊಡ್ಡ ಮೋಸ ಇನ್ನೊಂದಿದೆಯೇನು? ಕನ್ನಡದ ಜನ ವ್ಯವಧಾನದಲ್ಲಿ

ಯೋಚಿಸಬೇಕಾದ ವಿಚಾರವಿದು. ಸರ್ಕಾರದ ಆಜ್ಞೆಯ ವಿರುದ್ಧವಿರುವವರು, ಇದರ ಬೆಂಬಲಿಗರು ಬಿಂಬಿಸುತ್ತಿರುವ ಹಾಗೆ, ಖಂಡಿತಾ ಇಂಗ್ಲಿಷ್ ವಿರೋಧಿಗಳಲ್ಲ. ಬದಲಿಗೆ, ಮೂರನೇ ತರಗತಿಯಿಂದ ಅನೌಪಚಾರಿಕವಾದ ಇಂಗ್ಲಿಷ್ ಕಲಿಕೆಗೆ ಸೂಕ್ತ ವ್ಯವಸ್ಥೆ ಕಲ್ಪಿಸಿ ಎಂಬುದೇ ಇಂತಹವರ ನಿಲುವಾಗಿದೆ. ಈ ಎಲ್ಲದರ ಹಿನ್ನೆಲೆಯಲ್ಲಿ ಈಗ ತುರ್ತು ಅಗತ್ಯವಾಗಿರುವುದು ಇಂಗ್ಲಿಷ್ ಕಲಿಕೆಯ ಹೊಸ ಪ್ರಸ್ತಾವನೆಯಲ್ಲ; ಬದಲಿಗೆ ಪ್ರಜಾಪ್ರಭುತ್ವ, ಸಮಾನತೆ ಹಾಗೂ ಜಾತ್ಯಾತೀತತೆಯ ಆಶಯಗಳನ್ನು ಸಂರಕ್ಷಿಸಬಲ್ಲ ಆಧುನೀಕರಣದ ಪುನರ್‌ನಿರೂಪಣೆಯನ್ನಾಧರಿಸಿದ ಹೊಸ ಅಭಿವೃದ್ಧಿ ಮಾದರಿಯಡಿ ಏಕರೂಪದ ಶಿಕ್ಷಣ ವ್ಯವಸ್ಥೆಯ ಜಾರಿಗಾಗಿ ಒತ್ತಾಯ. ಇದರ ಹೊರತು ಮಿಕ್ಕೆಲ್ಲ ದಾರಿಗಳು ಸುಲಭದ ಹಾಗೂ ಅಪಾಯದ ದಾರಿಗಳೇ ಆಗಿವೆ. ಹೀಗಾಗಿ ಪ್ರಾಥಮಿಕ ಶಿಕ್ಷಣ ಮಾಧ್ಯಮ ಕುರಿತ ಸರ್ವೋನ್ನತ ನ್ಯಾಯಾಲಯದ ಐತಿಹಾಸಿಕ ಶಾಲೆಗಳಲ್ಲಿ ಒಂದನೇ ತರಗತಿಯಿಂದಲೇ ಇಂಗ್ಲಿಷ್ ಕಲಿಕೆಯನ್ನು ಕಡ್ಡಾಯ ಮಾಡುವ ಕರ್ನಾಟಕ ಸರ್ಕಾರದ ಇತ್ತೀಚಿನ ನಿರ್ಧಾರವನ್ನು ವಿವೇಚನಾಶೀಲರೆಲ್ಲರೂ, ಕರ್ನಾಟಕದ ಸರ್ವಜನರ ಲೌಕಿಕಾಭ್ಯುದಯದ ದೃಷ್ಟಿಯಿಂದಲೂ ಮತ್ತು ಕನ್ನಡ ಮನಸ್ಸಿನ ಸೃಜನಶಕ್ತಿಯ ದೃಷ್ಟಿಯಿಂದಲೂ ಖಂಡಿಸಿ ವಿರೋಧಿಸಬೇಕಾಗಿದೆ.

ಹೀಗಾಗಿ ಇದು ಕನ್ನಡದ ನಿರ್ಣಾಯಕ ಹೋರಾಟವೇ ಆಗಿದೆ.

(ಸಂವಾದ, ಡಿಸೆಂಬರ್–೨೦೦೬)

೧೫. ಇಂಗ್ಲಿಷ್ ಕಲಿಕೆ : ಎಲ್ಲಿಂದ...? ಹೇಗೆ...?

ನಾನು ಇಂದು ಮಾತನಾಡಬೇಕಾಗಿರುವ "ಇಂಗ್ಲಿಷ್ ಕಲಿಕೆ ಎಲ್ಲಿಂದ? ಹೇಗೆ?" ಎಂಬ ವಿಷಯವು ಮೊದಲ ನೋಟಕ್ಕೆ, ಶೈಕ್ಷಣಿಕ ಚೌಕಟ್ಟಿನಲ್ಲಿನ ಒಂದು ತಾಂತ್ರಿಕ ವಿಷಯವಾಗಿ ಮಾತ್ರ ಕಾಣುತ್ತದೆ. ಆದರೆ ಈ ವಿಷಯ ಇಂದೇಕೆ ದಿಢೀರ್ ಮಹತ್ವ ಪಡೆದುಕೊಂಡಿದೆ ಎಂಬ ಪ್ರಶ್ನೆ, ಈ ವಿಷಯದ ಹಿಂದಿರುವ ಸಾಂದರ್ಭಿಕತೆಯ ಅನೇಕ ಆಯಾಮಗಳನ್ನು ತೆರೆದಿಡುತ್ತದೆ. ಮೊದಲಾಗಿ ಈ ವಿಷಯ 'ಕನ್ನಡ ಮನಸ್ಸು : ಪ್ರಚಲಿತ ಪ್ರಶ್ನೆಗಳು' ಎಂಬ ವಿಶಾಲ ಭಿತ್ತಿಯ ಹಿನ್ನೆಲೆಯಲ್ಲಿ, ಆಧುನಿಕ ವಿದ್ಯಮಾನಗಳ ನಡುವೆ ಶಿಕ್ಷಣದ ಸವಾಲುಗಳು' ಎಂಬ ಉಪ ಶೀರ್ಷಿಕೆಯಡಿ ಚರ್ಚಿತವಾಗುತ್ತಿರುವುದರಿಂದ, ನನ್ನ ಮಾತುಗಳು ಶೈಕ್ಷಣಿಕ ಚೌಕಟ್ಟಿನ ತಾಂತ್ರಿಕ ಅಂಶಗಳಿಗೆ ಸೀಮಿತವಾದರೆ, ವಿಷಯದ ಹಿಂದಿನ ಸಮಸ್ಯೆ ಪೂರ್ಣಗ್ರಹಿಕೆಗೆ ಸಿಗಲಾರದು ಎಂದೇ ನನ್ನ ಭಾವನೆ. ಉದಾಹರಣೆಗೆ ನೋಡಿ, 'ಇಂಗ್ಲಿಷ್ ಕಲಿಕೆ ಎಲ್ಲಿಂದ ಹೇಗೆ'? ಎಂಬ ವಿಷಯದ ಚರ್ಚೆಯೇ, ಸಂದರ್ಭದ ಹೊರಗಿನಿಂದ ನೋಡಿದವರಿಗೆ, ಈಗ ನಮ್ಮ ಶಿಕ್ಷಣ ಕ್ರಮದಲ್ಲಿ ಇಂಗ್ಲಿಷ್ ಕಲಿಕೆಗೆ ಅವಕಾಶವೇ ಇಲ್ಲವೇನೋ ಎಂಬ ಅಭಿಪ್ರಾಯವನ್ನು ಹುಟ್ಟಿಸುವಂತಿದೆ. ಹಾಗಾಗಿ ಇಂತಹ ಪ್ರಶ್ನೆ ಅಥವಾ ಪ್ರಶ್ನೆಗಳನ್ನು – ಎಲ್ಲಿಂದ? ಹೇಗೆ? ಎಂಬ ಪ್ರಶ್ನೆಗಳನ್ನು– ಹುಟ್ಟು ಹಾಕಿದ ಸಂದರ್ಭದ ಪರಿಶೀಲನೆಯಿಲ್ಲದೆ, ಈ ವಿಷಯದ ಚರ್ಚೆ ಪೂರ್ಣವಾಗದೆಂದೇ ನನ್ನ ಭಾವನೆ. ಆದುದರಿಂದ ನಾನು ಮೊದಲು, ಈ ಪ್ರಶ್ನೆಗಳು ಹೊಸದೆಂಬಂತೆ ಹುಟ್ಟಿದ ಸಂದರ್ಭ, ಆ ಸಂದರ್ಭಕ್ಕೆ ಬೆಂಬಲವಾಗಿ ಮಂಡಿಸಲ್ಪಟ್ಟ ವಾದಗಳು ಮತ್ತು ಅವುಗಳ ಪರಿಶೀಲನೆ, ನಂತರ ಈ ಪರಿಶೀಲನೆಯ ಹಿನ್ನೆಲೆಯಲ್ಲಿ ಈ ಪ್ರಶ್ನೆಗಳಿಗೆ ಉತ್ತರ– ಹೀಗೆ ನಾಲ್ಕು ಹಂತಗಳಲ್ಲಿ ವಿಷಯವನ್ನು ಮಂಡಿಸಲಿಚ್ಛಿಸುತ್ತೇನೆ.

ಇಂದು ಇಂಗ್ಲಿಷ್ ಕಲಿಕೆ ಕುರಿತಂತೆ, ಕರ್ನಾಟಕ ಸರ್ಕಾರದ ಹೊಸ ಆಜ್ಞೆಗೆ ಕಾರಣವಾಗಿರುವ ಮತ್ತು ಇಂದಿನ ಈ ಚರ್ಚೆ ಹುಟ್ಟು ಹಾಕಿರುವ ಇಂಗ್ಲಿಷ್ ಕಲಿಕೆಯ ಹೊಸ ಪ್ರಸ್ತಾವನೆ ಮೊದಲ ಬಾರಿಗೆ ಸಾರ್ವಜನಿಕ ಗಮನಕ್ಕೆ ಬಂದದ್ದು, ಬೆಂಗಳೂರಿನ 'ಗ್ರಾಮರಾಜ್ಯ' ಎಂಬ ಸಂಸ್ಥೆಯೊಂದು ಈ ಬಗ್ಗೆ ಸರ್ಕಾರಕ್ಕೆ ಒಂದು ಔಪಚಾರಿಕ ಮನವಿ ಸಲ್ಲಿಸಿದಾಗ. ಈ ಸಂಸ್ಥೆ ಮೂಲತಃ ಹಳ್ಳಿಗಳಿಂದ ಉದ್ಯೋಗ ನಿಮಿತ್ತ ವಲಸೆ ಬಂದು ಬೆಂಗಳೂರಿನಲ್ಲಿ ನೆಲೆಸಿರುವ ಕೆಲವು ಬುದ್ಧಿಜೀವಿಗಳಿಂದ ರಚಿತವಾಗಿರುವುದು. ಇವರು ಒಂದು ನಿಯೋಗದಲ್ಲಿ ಒಂದೂವರೆ ವರ್ಷಗಳ ಹಿಂದೆ, ಆಗಿನ ರಾಜ್ಯ ಶಿಕ್ಷಣ ಮಂತ್ರಿ ಶ್ರೀ

ರಾಮಲಿಂಗರೆಡ್ಡಿಯವರಿಗೆ (ಇವರು ಬೆಂಗಳೂರಿನ ರಾಜಕಾರಣಿಯಾಗಿದ್ದು, ಬೆಂಗಳೂರು ಹಾಗೂ ಅದರ ಸುತ್ತಮುತ್ತ ಒಂದು ದೊಡ್ಡ ದಂಧೆಯಾಗಿ ಬೆಳೆಯುತ್ತಿರುವ ಇಂಗ್ಲಿಷ್ ಶಾಲೆಗಳ ಅಧಿಪತಿಗಳ ಪ್ರಭಾವ ವಲಯದ ಮಧ್ಯೆ ಇರುವವರು ಎಂಬುದು ಗಮನಾರ್ಹ.) ಮನವಿ ಸಲ್ಲಿಸಿ, ಈ ಕೂಡಲೇ ಸರ್ಕಾರಿ ಶಾಲೆಗಳಲ್ಲಿ ಒಂದನೇ ತರಗತಿಯಿಂದಲೇ ಇಂಗ್ಲಿಷ್ ಕಲಿಸಲಾರಂಭಿಸದೇ ಹೋದಲ್ಲಿ, ಗ್ರಾಮಾಂತರ ಶಾಲೆಗಳ ಬಡ ಮಕ್ಕಳು ಇಂದಿನ ಸ್ಪರ್ಧಾ ಜಗತ್ತಿನಲ್ಲಿ ಎಲ್ಲ ರೀತಿಯಲ್ಲೂ ಶಾಶ್ವತವಾಗಿ ಹಿಂದೆ ಬಿದ್ದು ಹೋಗುತ್ತಾರೆ ಎಂದು ಸರ್ಕಾರಕ್ಕೆ ಮನವರಿಕೆ ಮಾಡಿಕೊಡುವ ಪ್ರಯತ್ನ ಮಾಡಿದರು. ಈ ಮನವಿಗೆ ಯಾವುದಾದರೂ ಅಂಕಿ ಅಂಶಗಳ ಅಥವಾ ಸಮೀಕ್ಷೆಯ ಬೆಂಬಲವಿತ್ತೋ, ಯಾರಿಗೂ ತಿಳಿಯದು. ವಿಚಿತ್ರವೆಂದರೆ, ಇಂತಹ ಸಾರ್ವಜನಿಕ ಮನವಿಗಳ ಪರಿಶೀಲನೆಗೆ ತನ್ನದೇ ಕಾಲ ತೆಗೆದುಕೊಳ್ಳುವ ಸರ್ಕಾರ ಈ ನಿರ್ದಿಷ್ಟ ಮನವಿಯನ್ನು, ಅದಕ್ಕಾಗಿ ತಾನೂ ಕಾಯುತ್ತಿದ್ದಂತೆ ತಕ್ಷಣ ಪರಿಶೀಲನೆಗೆ ತೆಗೆದುಕೊಂಡು, ಸಚಿವ ಸಂಪುಟದಲ್ಲಿ ಚರ್ಚಿಸಿ ತತ್‌ಕ್ಷಣದಿಂದಲೇ ಜಾರಿಗೆ ತರುವ ಇಂಗಿತ ವ್ಯಕ್ತಪಡಿಸಿತು. ಕೂಡಲೇ ಹಲವಾರು ಕಡೆಗಳಿಂದ ಇದಕ್ಕೆ ವಿರೋಧ ವ್ಯಕ್ತವಾಯಿತು. ಜಾಗತೀಕರಣದ ಹೆಸರಲ್ಲಿ, ಕನ್ನಡದ ನಿರ್ನಾಮದ ಆರಂಭವಿದು ಎಂಬುದು ಈ ವಿರೋಧದ ತಾತ್ವಿಕತೆಯಾಗಿತ್ತು. ಹೀಗೆ ವಿರೋಧ ವ್ಯಕ್ತಪಡಿಸಿದವರಲ್ಲಿ ಕನ್ನಡದ ಹಿರಿಯ ಸಾಹಿತಿಗಳು, ಚಿಂತಕರು ಹೋರಾಟಗಾರರು ಸೇರಿದ್ದರಿಂದ, ಸರ್ಕಾರ ಒಂದು ಹೆಜ್ಜೆ ಹಿಂದಿಟ್ಟಿತು. ಸಂಬಂಧಪಟ್ಟವರೆಲ್ಲರೊಂದಿಗೆ ಚರ್ಚೆ ನಡೆಸಿದ ನಂತರವೇ, ಸರ್ಕಾರ ಅಂತಿಮ ತೀರ್ಮಾನ ತೆಗೆದುಕೊಳ್ಳುವುದೆಂದು ಪ್ರಕಟಿಸಿತು.

ಇದರಿಂದ ಕೆರಳಿದಂತೆ ತೋರಿದ 'ಗ್ರಾಮರಾಜ್ಯ' ಗುಂಪಿನವರು ಸರ್ಕಾರಿ ಶಾಲೆಗಳಲ್ಲಿ ಓದುತ್ತಿರುವವರು ಬಹುತೇಕ, ದಲಿತ ಮತ್ತು ಹಿಂದುಳಿದ ಜಾತಿಗಳಿಗೆ ಸೇರಿದ ಬಡ ಮಕ್ಕಳಾದುದರಿಂದ, ತಮ್ಮ ವಾದ ಈ ಜನವರ್ಗಗಳ ಹಿತ ದೃಷ್ಟಿಯಿಂದ ಪ್ರೇರಿತವಾಗಿದೆ ಎಂದು ಸೂಚಿಸುತ್ತಾ, ಇಂದು ಕನ್ನಡದ ಪರವಾಗಿ ಮಾತನಾಡುತ್ತಿರುವವರೆಲ್ಲರ ಮಕ್ಕಳೂ ಇಂಗ್ಲಿಷ್ ಶಾಲೆಗಳಲ್ಲಿ ಓದಿದವರು ಅಥವಾ ಓದುತ್ತಿದ್ದಾರೆ ಎಂಬ ಎದುರು ಪಕ್ಷದ ವಿಶ್ವಾಸಾರ್ಹತೆ ಹಾಳುಮಾಡುವ ಆರೋಪದ ಶೈಲಿಯ ಪ್ರತಿದಾಳಿ ಆರಂಭಿಸಿದರು. ಇದರಿಂದಾಗಿ ತಜ್ಞ ಚರ್ಚೆಯ ಮೂಲಕ, ಅಗತ್ಯವಾದರೆ ಅಧಿಕೃತ ಸಮೀಕ್ಷೆಗಳ ಮೂಲಕ ಇತ್ಯರ್ಥವಾಗಬೇಕಿದ್ದ ವಿಷಯ, ಭಾವಾವೇಶದ ವಾದ-ಪ್ರತಿವಾದಗಳ ವಸ್ತುವಾಯಿತು. ಇಂಗ್ಲಿಷ್ ಕಲಿಕೆಯ ಹೊಸ ಪ್ರಸ್ತಾವನೆಯ ವಿರೋಧಿಗಳನ್ನು ಕನ್ನಡದ ಅಂಧಾಭಿಮಾನಿಗಳೆಂದೋ, ಸಂಪ್ರದಾಯವಾದಿ ಚಿಂತಕರೆಂದೋ ಅಥವಾ ಇಂಗ್ಲಿಷಿನಿಂದ ಎಲ್ಲ ಲಾಭ ಪಡೆದು ಈಗ ದಲಿತರಿಗೆ – ಹಿಂದುಳಿದವರಿಗೆ ಆ ಲಾಭ ನಿರಾಕರಿಸುತ್ತಿರುವ ಪಟ್ಟ ಭದ್ರರೆಂದೋ ಗುರುತಿಸುವ, ಹಳಿಯುವ ಗುಂಪೊಂದು ಸೃಷ್ಟಿಯಾಯಿತು.

ಈ ಬೆಳವಣಿಗೆಯ ನಂತರ, ಇಂಗ್ಲಿಷ್ ಕಲಿಕೆಯ ಪ್ರಶ್ನೆ ಶೈಕ್ಷಣಿಕ ಪ್ರಶ್ನೆಯಾಗುಳಿಯದೆ ಸಾಮಾಜಿಕ ನ್ಯಾಯದ, ರಾಜಕೀಯ ಪ್ರಶ್ನೆಯಾಗಿ ಪರಿವರ್ತಿತವಾಯಿತು. ಈ ಗೊಂದಲದಲ್ಲಿ ಒಬ್ಬರ ವಾದವನ್ನು ಇನ್ನೊಬ್ಬರು ಸಂಯಮದಿಂದ ಕೇಳುವ, ಸಹಾನುಭೂತಿಯಿಂದ

ಅರ್ಥಮಾಡಿಕೊಳ್ಳುವ, ಆ ವಾದಗಳನ್ನು ಅಂಕಿ ಅಂಶಗಳ ಆಧಾರದ ಮೇಲೆ ಸಮರ್ಥಿಸುವ ಅಥವಾ ಅಲ್ಲಗಳೆಯುವ; ಇಂತಹಚರ್ಚೆಗಿರಬೇಕಾದ ಶೈಕ್ಷಣಿಕ ಗಾಂಭೀರ್ಯ- ಜವಾಬ್ದಾರಿಯೇ ಕಾಣೆಯಾಯಿತು. ಅಭಿಪ್ರಾಯ- ಅನಿಸಿಕೆಗಳೇ, ಕಿವಿ ಮೇಲೆ ಬಿದ್ದ ಮಾತುಗಳೇ ಬೀದಿಗಳಲ್ಲಿ, ಸಾರ್ವಜನಿಕ ವೇದಿಕೆಗಳಲ್ಲಿ, ಶಾಸನ ಸಭೆಯಲ್ಲಿ ಚರ್ಚೆಯನ್ನು ಬೆಳೆಸಿದವು. ಭಾಷಾತಜ್ಞರ ಹಾಗೂ ಮಕ್ಕಳ ಶಿಕ್ಷಣ ತಜ್ಞರ ಅಭಿಪ್ರಾಯಗಳನ್ನು ತಿರುಚಿ ಹಿನ್ನೆಲೆಗೆ ಸರಿಸಲಾಯಿತು. ದೊಡ್ಡ ಗಂಟಲಿನ ಕೂಗೇ ವಾಸ್ತವದ ಪ್ರತಿಬಿಂಬ ಹಾಗೂ ಸತ್ಯದ ಪ್ರತಿಪಾದನೆ ಎಂಬ ವಾತಾವರಣ ಸೃಷ್ಟಿಯಾಯಿತು. ಈ ಮಧ್ಯೆ ಇಂಗ್ಲಿಷ್ ಕಲಿಕೆಯ ಹೊಸ ಪ್ರಸ್ತಾವನೆಯನ್ನು ಮಂಡಿಸಿದ ಬುದ್ಧಿ ಜೀವಿಗಳ ಪೈಕಿ ಹಲವರಿಗೆ, ಬೆಂಗಳೂರು ನಗರಪಾಲಿಕೆ ಪರವಾಗಿ ಕೆಂಪೇಗೌಡ ಪ್ರಶಸ್ತಿ ಪ್ರದಾನವೂ ಆಯಿತು.

ಈ ಮಧ್ಯೆ ಶೈಕ್ಷಣಿಕ ವರ್ಷ ಆರಂಭವಾಗಿ ಬಿಟ್ಟುದುದರಿಂದ, ಈ ಹೊಸ ಪ್ರಸ್ತಾವನೆಯ ಜಾರಿಯನ್ನು ಮರುವರ್ಷಕ್ಕೆ ಮುಂದೂಡಿದ ಸರ್ಕಾರ, ತದನಂತರ ಅಧಿಕಾರ ಕಳೆದುಕೊಂಡಿತು. ಬಂದ ಹೊಸ ಸಮ್ಮಿಶ್ರ ಸರ್ಕಾರ, ಈ ಹಳೆಯ ಚರ್ಚೆಗಳೇ ತನ್ನ ನಿರ್ಧಾರಕ್ಕೆ ಸಾಕೆಂದು ಹೇಳಿ, ಅದರ ಶಿಕ್ಷಣ ಮಂತ್ರಿಯ ವಿರೋಧ ಹಾಗೂ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರ ಅಭಿಪ್ರಾಯ ಹಾಗೂ ಕನ್ನಡ ಸಾಹಿತ್ಯ ಪರಿಷತ್ ನೇತೃತ್ವದ ಹಿರಿಯ ಸಾಹಿತಿಗಳ, ಚಿಂತಕರ, ಹೋರಾಟಗಾರರ ಪ್ರತಿಭಟನೆಯನ್ನು ಲೆಕ್ಕಿಸದೆ, ಇಂಗ್ಲಿಷ್ ಕಲಿಕೆಯ ಹೊಸ ಪ್ರಸ್ತಾವನೆಯನ್ನು ಆಜ್ಞೆಯನ್ನಾಗಿ ಪ್ರಕಟಿಸಿದೆ. ಇದರಲ್ಲಿ ಹೊಸ ಸೇರ್ಪಡೆ ಎಂದರೆ, ಕೇಂದ್ರ ಪಠ್ಯ ಕ್ರಮದ ಶಾಲೆಗಳಲ್ಲೂ ಕನ್ನಡ ಕಡ್ಡಾಯದ ಪ್ರಸ್ತಾವನೆ. ಸರ್ಕಾರವು ತನ್ನ ಈ ಕ್ರಮವನ್ನು ಗ್ರಾಮಾಂತರ ಜನರ, ಬಡವರ, ಹಿಂದುಳಿದವರ ಕಲ್ಯಾಣಕ್ಕಾಗಿ ರೂಪಿಸಲಾಗಿರುವ, ವ್ಯಾವಹಾರಿಕ ನೀತಿ ಮಾತ್ರ ಎಂದು ಸಮರ್ಥಿಸಿಕೊಂಡಿದೆ.

ಈ ಅಂತಿಮ ಸಮರ್ಥನೆಯ ಹಿಂದೆ ಕೆಲಸ ಮಾಡಿರುವ ವಾದ-ವಾಸ್ತವ-ಅಭಿಪ್ರಾಯ-ಅನಿಸಿಕೆಗಳನ್ನು ಎದುರಿಸುವ ಮೊದಲು ಪರಿಶೀಲನೆಗೆ ಒಳಗಾಗಬೇಕಾದದ್ದು, ಈ ಇಂಗ್ಲಿಷ್ ಕಲಿಕೆಯ ಹೊಸ ಪ್ರಸ್ತಾವನೆಯು ಮೂಡಿದ್ದಾದರೂ ಏಕೆ, ಹೇಗೆ- ಇದರ ಹಿಂದೆ ಇದ್ದ ಪ್ರೇರಣೆಯಾದರೂ ಏನು? ಎಂಬುದು. ಸರ್ಕಾರಿ ಶಾಲೆಗಳ ಮಕ್ಕಳು ಒಂದನೇ ತರಗತಿಯಿಂದ ವಂಚಿತರಾಗಿ, ಜಾಗತೀಕರಣಗೊಳ್ಳುತ್ತಿರುವ ಜಗತ್ತಿನಲ್ಲಿ ಅಬಲರಾಗಿ ಬಿಡುತ್ತಾರೆಂಬ ಆತಂಕವೇ? ಹಾಗಾದರೆ, ಈ ಆತಂಕಕ್ಕೆ ಇರುವ ಕಾರಣಗಳೇನು ಮತ್ತು ಈ ಆತಂಕದ ಹಿಂದಿರುವ ಜಾಗತೀಕರಣದ ಬಗೆಗಿನ ಪ್ರತಿಕ್ರಿಯೆ ಎಷ್ಟರಮಟ್ಟಿಗೆ ಸರಿ ಎಂಬ ಮುಖ್ಯ ಪ್ರಶ್ನೆಗಳಿಗೂ ಮುನ್ನ ಉತ್ತರ ಬೇಡುವ ಇನ್ನೊಂದು ಬಹುಮುಖ್ಯ ಪ್ರಶ್ನೆ ಎಂದರೆ: ಕೆಲವರ ಇಂತಹ ಆತಂಕವೇ, ಸರ್ಕಾರವು ಮಕ್ಕಳ ಶಿಕ್ಷಣದಂತಹ ಮಹತ್ವದ ವಿಷಯದಲ್ಲಿ ನೀತಿ ಬದಲಾವಣೆಗೆ ಮುಂದಾಗಲು ಕಾರಣವಾಗಬಲ್ಲದೇ ಎಂಬುದು.

ಈ ಸಹಜ ಸಂಶಯದ ಹಿನ್ನೆಲೆಯಲ್ಲಿ ಎದ್ದು ಕಾಣುವುದು ಎರಡು ಸಂಗತಿಗಳು. ವಿಶ್ವಬ್ಯಾಂಕ್ ಪ್ರೇರಿತ ಹೊಸ ಅಭಿವೃದ್ಧಿ ಮಾದರಿಯ ಪ್ರಬಲ ಸಮರ್ಥಕರಾದ ಇನ್ಫೋಸಿಸ್‌ನ ಎನ್.ಆರ್. ನಾರಾಯಣ ಮೂರ್ತಿಯವರು ಎರಡು ವರ್ಷಗಳ ಹಿಂದಿನಿಂದ ಕರ್ನಾಟಕ

ಸರ್ಕಾರಕ್ಕೆ, ರಾಜ್ಯದ ಶಾಲೆಗಳಲ್ಲಿ ಇಂಗ್ಲಿಷ್ ಮಾಧ್ಯಮವನ್ನು ಕಡ್ಡಾಯಮಾಡುವಂತೆ ಕಿವಿಮಾತು ಹೇಳುತ್ತಿರುವುದು ಮತ್ತು ಇದಕ್ಕೆ ಪೂರಕ ಮಾಹಿತಿಯಂತೆ ವಿಶ್ವಬ್ಯಾಂಕ್, 'ಕರ್ನಾಟಕದಲ್ಲಿ ಶಾಲಾ ಶಿಕ್ಷಣ ಮತ್ತು ಆರ್ಥಿಕ ಪ್ರಗತಿಗಾಗಿ ಹೊಸ ಕಾರ್ಯಕ್ರಮ ನಕ್ಷೆ' ಎಂಬ ವರದಿಯಲ್ಲಿ (ಸಂ. ೨೪೨೦೮ – ಐ.ಎನ್) ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಕೆಲವು ಶಾಲೆಗಳ ಹಾಗೂ ಕಾರ್ಯಾಗಾರಗಳ ಸಮೀಕ್ಷೆ ಮಾಡಿ, ಕನ್ನಡ ಮಾಧ್ಯಮದಲ್ಲಿ ಓದಿದ ವಿದ್ಯಾರ್ಥಿಗಳಿಗಿಂತ, ಇಂಗ್ಲಿಷ್ ಮಾಧ್ಯಮದಲ್ಲಿ ಓದಿದ ವಿದ್ಯಾರ್ಥಿಗಳು, ತಾಂತ್ರಿಕ ವಿಷಯಗಳಲ್ಲಿ ಹೇಗೆ ಹೆಚ್ಚು ಸಮರ್ಥರಿರುತ್ತಾರೆ ಎಂಬುದನ್ನು ವಿಶದ ಪಡಿಸುತ್ತಾ ನೀಡಿರುವ ಸೂಚನೆಗಳು. ಈ ಸಮೀಕ್ಷಾ ವರದಿ ಎಷ್ಟು ವಸ್ತುನಿಷ್ಠ ಹಾಗೂ ವೈಜ್ಞಾನಿಕ (ಶಾಲಾ ಶಿಕ್ಷಣಕ್ಕೆ ಒಂದೇ – ಕರ್ನಾಟಕದಲ್ಲಿ ಕನ್ನಡ– ಮಾಧ್ಯಮ ಇರುವಂತಾದಾಗ ಇಂತಹ ಸಮೀಕ್ಷೆಗಳೇ. ಅಸಂಬದ್ಧವೆನಿಸಿ ಕೊಳ್ಳುತ್ತವೆಯಲ್ಲವೇ? ಎಂಬ ಪ್ರಶ್ನೆ ಒಂದು ಕಡೆ ಇದ್ದರೆ, ಇಂತಹ ಸಮೀಕ್ಷೆಗಳ ಉದ್ದೇಶವಾದರೂ ಏನು ಮತ್ತು ವಿಶ್ವಬ್ಯಾಂಕ್‌ನಂತಹ ಹೊರಗಿನ ಸಂಸ್ಥೆಗಳು ನಮ್ಮ ರಾಜ್ಯದಲ್ಲಿ ಇಂತಹ ಕೆಲಸಗಳಿಗೆ ಕೈಹಾಕುವುದರ ಮರ್ಮವಾದರೂ ಏನು? ನಮ್ಮ ಅಭಿವೃದ್ಧಿಯ ಸ್ವರೂಪ, ಮಾದರಿ, ಗತಿ–ಲಯಗಳನ್ನು ಇವರು ನಿರ್ಧರಿಸುವಂತಹ ರಾಜಕಾರಣ, ನಮ್ಮನ್ನು ಒಂದು ದೇಶವಾಗಿ ಎಲ್ಲಿಗೆ ಕೊಂಡೊಯ್ಯುತ್ತದೆ ಎಂಬ ಪ್ರಶ್ನೆಗಳು ಇನ್ನೊಂದು ಕಡೆ ಇವೆ.

ಈ ಪ್ರಶ್ನೆಗಳನ್ನು ನಾವು ಕೇಳಿಕೊಳ್ಳಲಾರಂಭಿಸಿಲ್ಲವಾದ್ದರಿಂದಲೇ ಹೊಸ ಜಾಗತಿಕ ಸಂದರ್ಭದಲ್ಲಿ ಇಂಗ್ಲಿಷ್ = ಅಭಿವೃದ್ಧಿ ಎಂಬ ಸರಳ ಸೂತ್ರಕ್ಕೆ ಬಲಿಯಾಗಿದ್ದೇವೆ. ಇದೇನೂ ಹೊಸ ಸೂತ್ರವಲ್ಲ. ನವಭಾರತದ ದೇಸಿ ಶಿಕ್ಷಣ ತಜ್ಞರು, ಯಾವುದನ್ನು ಬ್ರಿಟಿಷ್ ಸಾಮ್ರಾಜ್ಯ ಶಾಹಿಯ ಬಾಗಿಲು ಕಾಯುವ ಶಿಕ್ಷಣ ಕ್ರಮವೆಂದು ಕರೆದರೋ, ಆ ಮೆಕಾಲೆ ಪ್ರಣೀತ ಶಿಕ್ಷಣ ಕ್ರಮ ಎಂದಿನಿಂದ ಜಾರಿಗೆ ಬಂದಿತೋ, ಅಂದಿನಿಂದ ಈ ಸೂತ್ರ ನಮ್ಮ ದೇಶದಲ್ಲಿ ಜಾರಿಯಲ್ಲಿದೆ. ಸ್ವಾತಂತ್ರ್ಯ ಬಂದ ಮೇಲೂ ಈ ಬಾಗಿಲು ಕಾಯುವ ಕೆಲಸ, ಆ ಸಾಮ್ರಾಜ್ಯವನ್ನು ಕಟ್ಟಿದ ತಂತ್ರಜ್ಞಾನವನ್ನು ನಮ್ಮ ದೇಶವನ್ನು ಕಟ್ಟಲು ಮಾದರಿಯಾಗಿ ಸ್ವೀಕರಿಸಿದ್ದರಿಂದಾಗಿ, ಪರೋಕ್ಷವಾಗಿ ಮುಂದುವರೆದಿದೆ. ಇಲ್ಲಿ ನಾನು ತಂತ್ರಜ್ಞಾನ ಎಂಬುದನ್ನು ವೈಜ್ಞಾನಿಕ ತಾಂತ್ರಿಕತೆ ಎಂಬರ್ಥದಲ್ಲಿ ಮಾತ್ರವಲ್ಲದೆ, ವೈಚಾರಿಕ ಆಕೃತಿಗಳು ಎಂಬರ್ಥದಲ್ಲೂ ಬಳಸುತ್ತಿರುವೆ. ಉದಾಹರಣೆಗೆ ಸೆಕ್ಯುಲರಿಸಂ ಎಂಬ ವೈಚಾರಿಕ ಆಕೃತಿಯೊಂದಿಗೆ ನಾವು ನಡೆಸುತ್ತಿರುವ ರಾಜಕೀಯ ಅನುಸಂಧಾನ ಎಷ್ಟು ಗೊಂದಲಗಳನ್ನು ಸೃಷ್ಟಿಸಿದೆ ಎಂಬುದನ್ನು ಗಮನಿಸಬಹುದು. ಗಾಂಧೀಜಿ ಇದರ ವಿರುದ್ಧ ಎಚ್ಚರಿಸಿದ್ದರು. ಅಂತಹ ತಂತ್ರಜ್ಞಾನದ ಮೂಲಕ ನಮ್ಮದು ಎನ್ನುವ ಮತ್ತು ನಮ್ಮದಾಗಿ ಉಳಿಯುವ ದೇಶವನ್ನು ಕಟ್ಟಲಾಗದು ಎಂದಿದ್ದ ಅವರು, ಒಂದಲ್ಲ ಒಂದು ದಿನ ಆತ್ಯಂತಿಕ ಬಿಕ್ಕಟ್ಟಿಗೆ ಸಿಲುಕಿಸುವಂತಹ, ಸದಾ ಏರುತ್ತಾ ಹೋಗುವ ಜೀವನ ಮಟ್ಟವನ್ನು ಸಾಧ್ಯಮಾಡುವ ತಂತ್ರವಾಗಿ, ದೇಶಿ ತಂತ್ರಜ್ಞಾನದ ವಿಕಾಸದ ಪ್ರತಿಪಾದನೆ ಮಾಡಿದ್ದರು.

ಆದರೆ ಹೊಸ ಜಗತ್ತಿನಲ್ಲಿ ಅದೆಲ್ಲ ಅವಾಸ್ತವಿಕ, ಅಸಾಧ್ಯ, ಎಂದು ಭಾವಿಸಿದ ನಾವು ನೆಹರೂ ಸ್ಫೂರ್ತಿಯೊಂದಿಗೆ, ವಿಜ್ಞಾನದ ನಿರಂತರ ಅನ್ವಯವನ್ನಾಧರಿಸಿದ ಆಧುನಿಕ

ತಂತ್ರಜ್ಞಾನದ ನೆರವಿನಿಂದ ದೇಶವನ್ನು ಕಟ್ಟಿಯೇ ಕಟ್ಟಿದೆವು. ೧೫ ವರ್ಷಗಳ ಹಿಂದೆ ನಮ್ಮ ದೇಶದ ಕಾಪು ದಾಸ್ತಾನು ಚಿನ್ನವನ್ನೆಲ್ಲ ವಿಶ್ವಬ್ಯಾಂಕ್ ಬಳಿ ಅಡವಿಟ್ಟು; ದೇಶ ಕಟ್ಟುವುದಿರಲಿ, ನಡೆಸುವ ಖರ್ಚಿಗೆ ಹಣ ಸಾಲ ಪಡೆಯುವ ದುಃಸ್ಥಿತಿಗೆ ಈಡಾಗುವವರೆಗೆ. ಇಂತಹ ಅಭಿವೃದ್ಧಿಯ ಭಾಷೆ ಇಂಗ್ಲಿಷ್ ಆಗಿತ್ತು. ಈ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು, ಅದರ ಫಲಗಳನ್ನುಣ್ಣಲು ಇಂಗ್ಲಿಷ್ ಸಹಜವಾಗಿ ಅಗತ್ಯವಾಗಿತ್ತು. ಏಕೆಂದರೆ, ಈ ಅಭಿವೃದ್ಧಿಯ ಮಾಧ್ಯಮವನ್ನು ಭಾರತೀಯ ಭಾಷೆಗಳಿಗೆ ಅಳವಡಿಸಿಕೊಳ್ಳುವ ಮನಃಪೂರ್ವಕ ಪ್ರಯತ್ನಗಳು ಬೇರೆ ದೇಶಗಳಲ್ಲಾದಂತೆ– ಉದಾಹರಣೆಗೆ ಏಷಿಯಾದ ದೇಶಗಳೇ ಆದ ಚೀನಾ, ಜಪಾನ್, ಕೊರಿಯಾ– ನಮ್ಮ ದೇಶದಲ್ಲಿ ಆಗಲೇ ಇಲ್ಲ. ಮೆಕಾಲೆ ಶಿಕ್ಷಣ ಕ್ರಮದ ಮೂಲಕ ಶಿಕ್ಷಣದ ಅರ್ಥೋದ್ದೇಶಗಳನ್ನೇ ಮೂಲಭೂತವಾಗಿ ಬದಲಿಸಿಕೊಂಡಿದ್ದ ನಾವು ಎಂತಹ ವಸಾಹತುಶಾಹಿ ಮಂಕಿಗೆ ಒಳಗಾಗಿದ್ದುವೆಂದರೆ, ನಮಗೆ ಇಂಗ್ಲಿಷ್ ಒಂದು ಭಾಷೆ ಮಾತ್ರವಲ್ಲ, ಒಂದು ಮನೋಭೂಮಿಕೆಯೇ ಆಗಿತ್ತು. ಹಾಗಾಗಿಯೇ. ಕಳೆದ ಅರವತ್ತು ವರ್ಷಗಳಲ್ಲಿ ಎಷ್ಟೋ 'ಇಂಗ್ಲಿಷ್ ತೊಗಲಿಸಿ' ಆಂದೋಲನಗಳು ನಡೆದಿದ್ದರೂ, ಇಂಗ್ಲಿಷ್ ನಮ್ಮ ಶಿಕ್ಷಣ ಕ್ರಮದ ಒಂದು ಅವಿಭಾಜ್ಯ ಅಂಗವಾಗಿ ಉಳಿದುಕೊಂಡೇ ಬಂದಿದೆ ಮತ್ತು ದೇಶದ ಹೆಚ್ಚೆಚ್ಚು ಜನಭಾಗ ಅದನ್ನೊಂದು ಭಾಷೆಯಾಗಿ ಕಲಿಯುವುದಷ್ಟೇ ಅಲ್ಲ, ಅದನ್ನು ಶಿಕ್ಷಣ ಮಾಧ್ಯಮವನ್ನಾಗಿಯೂ ಸ್ವೀಕರಿಸುತ್ತಿದೆ.

ಈ ಪ್ರವೃತ್ತಿಯು ಶಿಕ್ಷಣದ ಗುಣಮಟ್ಟದ ಮೇಲೆ ಹಾಗೂ ರಾಷ್ಟ್ರದ ಮನಸ್ಸಿನ ಮೇಲೆ ಉಂಟುಮಾಡುವ ದುಷ್ಪರಿಣಾಮಗಳ ಬಗ್ಗೆ ಭಾಷಾ ತಜ್ಞರು, ಶಿಕ್ಷಣ ತಜ್ಞರು, ಸಂಸ್ಕೃತಿ ಚಿಂತಕರು ಆಗಾಗ್ಗೆ ಎಚ್ಚರಿಸುತ್ತಲೇ ಬಂದಿದ್ದರೂ; ಸರ್ವೋನ್ನತ ನ್ಯಾಯಾಲಯವೂ ಪ್ರಾಥಮಿಕ ಶಿಕ್ಷಣವನ್ನು ಮಾತೃ ಅಥವಾ ರಾಜ್ಯ ಭಾಷೆಯಲ್ಲಿಯೇ ನಡೆಸಬೇಕಾದ ಸರ್ಕಾರದ ಹಕ್ಕು–ಕರ್ತವ್ಯಗಳನ್ನು ಈ ಹಿಂದೆಯೇ ಸಂವಿಧಾನಿಕ ಎಂದು ಎತ್ತಿ ಹಿಡಿದಿದ್ದರೂ, ನಮ್ಮಲ್ಲಿ ಇಂಗ್ಲಿಷ್ ಹಪಾಹಪಿ ದಿನೇ ದಿನೇ ಹೆಚ್ಚುತ್ತಲೇ ಇದೆ. ಜನರ ಹಪಾಹಪಿಯ ಜೊತೆಗೆ ಸರ್ಕಾರದ ಹಪಾಹಪಿಯೂ ಈಗ ಸೇರಿಕೊಂಡು, ಸಮಸ್ಯೆ ಇನ್ನಷ್ಟು ಬಿಗಡಾಯಿಸಿದೆ.

ಕೇವಲ ಹತ್ತು ವರ್ಷಗಳ ಹಿಂದಿನವರೆಗೆ, ಇಂಗ್ಲಿಷ್ ಭಾಷೆ ಗ್ರಾಮಾಂತರದ ಮಕ್ಕಳಿಗೆ ಒಂದು ಕುತ್ತಾಗಿ ಪರಿಣಮಿಸಿದೆ; ಇದು ಶಾಲಾ ಮಟ್ಟದಲ್ಲಿಯೇ ಮಕ್ಕಳು ಶಿಕ್ಷಣ ನಿಲ್ಲಿಸುವುದಕ್ಕೆ ಕಾರಣವಾಗಿದೆ. ಆದುದರಿಂದ ಇಂಗ್ಲಿಷ್ ಭಾಷಾ ಕಲಿಕೆ ಕಡ್ಡಾಯವನ್ನು ಶಿಕ್ಷಣ ಕ್ರಮದಿಂದ ತೆಗೆದು ಹಾಕಬೇಕೆಂದು ಹೇಳುತ್ತಾ ಚಳುವಳಿಯನ್ನು ನಡೆಸಿದ್ದ ದಲಿತ ಹಿಂದುಳಿದ ವರ್ಗಗಳ ನಾಯಕತ್ವದ ಒಂದು ಭಾಗ ಇಂದು ಇದಕ್ಕೆ ತದ್ವಿರುದ್ಧ ದಿಕ್ಕಿನಲ್ಲಿ, ಒಂದನೇ ತರಗತಿಯಿಂದಲೇ ಇಂಗ್ಲಿಷ್ ಅನ್ನು ಕಡ್ಡಾಯ ಮಾಡಬೇಕೆಂದು ಒತ್ತಾಯಿಸುತ್ತಿರುವುದರ ಮರ್ಮವಾದರೂ ಏನು? ಹಲವು ರೀತಿಯ ಸಂಕಷ್ಟ– ಸಂದಿಗ್ಧಗಳಲ್ಲಿರುವ ಸರ್ಕಾರವು ಈ ಜನವರ್ಗಗಳ

---

* ಇದರ ವಿವರವಾದ ವಿಶ್ಲೇಷಣೆಗಾಗಿ ಇದೇ ಪುಸ್ತಕದಲ್ಲಿನ 'ಕೆ.ವಿ. ನಾರಾಯಣರ ಭಾಷಾ ಚಿಂತನೆಯೂ, ಗಾಂಧೀಜಿಯ 'ಹಿಂದ್ ಸ್ವರಾಜ್ಯ'ವೂ ಲೇಖನವನ್ನು ಗಮನಿಸಿ.

ಸಹಾನುಭೂತಿಯನ್ನು ಗಳಿಸಿಕೊಳ್ಳುವ ರಾಜಕೀಯ ಹುನ್ನಾರವೇನಾದರೂ ಈ ತುರ್ತಿನ ಹಿಂದೆ ಕೆಲಸ ಮಾಡಿದೆಯೇ? ಅತಿ ಲಾಭ ತರುವಂತಹ ಸರಕಿನ ಉತ್ಪತ್ತಿಯಲ್ಲಿ ತೊಡಗಿರುವ ತನ್ನ ಉದ್ಯಮಗಳಿಗೆ, ಉದ್ಯೋಗ ಹಾಗೂ ಮಾರುಕಟ್ಟೆ– ಈ ಎರಡೂ ವಿಷಯಗಳಲ್ಲಿ ಅನುಕೂಲವಾಗುವಂತಹ ಸಾಮಾಜಿಕ ವಾತಾವರಣ ನಿರ್ಮಾಣ ಮಾಡಿಕೊಳ್ಳಬಯಸುವ ಉದ್ಯಮಪತಿಗಳ ವ್ಯಾಪಾರಿ ಹಿತಾಸಕ್ತಿಯ ಒತ್ತಡಗಳು ಇಲ್ಲಿ ಕೆಲಸ ಮಾಡಿವೆಯೇ? ಅಥವಾ ಇವೆಲ್ಲವನ್ನೂ ಒಳಗೊಂಡಂತಿರುವ ವಿಶ್ವಬ್ಯಾಂಕ್ ನಿರ್ದೇಶನದ ಅಭಿವೃದ್ಧಿ ಮಾದರಿಯ, ಜಾಗತೀಕ ರಾಜಕಾರಣದ ಒತ್ತಡಗಳೇನಾದರೂ ಕೆಲಸ ಮಾಡಿವೆಯಾ?

ಹಾಗೆ ನೋಡಿದರೆ, ಈ ಎಲ್ಲಾ ಒತ್ತಡಗಳಿಗೂ ಒಂದೇ ಮೂಲದಿಂದ ಬಂದಂತಹವು– ಅದೇ ಜಾಗತೀಕರಣ. ಈ ಜಾಗತೀಕರಣವು ತಾನು ಈ ಹಿಂದೆ ಪ್ರಸ್ತಾಪಿಸಿದ ಆಧುನಿಕರಣದ ಹೊಸ ರೂಪವೇ ಆಗಿದೆ. ನಮ್ಮ ಚಿನ್ನವನ್ನೆಲ್ಲ ವಿಶ್ವಬ್ಯಾಂಕ್ ಬಳಿ ಅಡವಿಡುವಂತೆ ಮಾಡಿದ ಆಧುನೀಕರಣವು ಆ ದುಃಸ್ಥಿತಿ ತಲುಪಲು, ಅದು ಸಮಾಜವಾದಿ ದೃಷ್ಟಿಕೋನವನ್ನು ಹೊಂದಿದುದೇ ಕಾರಣವೆಂದು ಜಾಗತೀಕರಣ ರೂಪದ ಆಧುನೀಕರಣವು ಹೇಳುತ್ತಿದೆ. ಅದೀಗ ಮುಕ್ತ ಸ್ಪರ್ಧೆ–ಮುಕ್ತ ಮಾರುಕಟ್ಟೆಯನ್ನು ಎತ್ತಿ ಹಿಡಿಯುತ್ತ ಮತ್ತು ಮಾಹಿತಿ ಹಾಗೂ ಜೈವಿಕವೆಂಬ ಎರಡು ಹೊಸ ತಂತ್ರಜ್ಞಾನಗಳ ಸವಾರಿ ಮಾಡುತ್ತಾ; ನಮ್ಮ ಮಧ್ಯಮ ವರ್ಗಗಳಲ್ಲಿ ಬಣ್ಣದ ಕನಸುಗಳನ್ನು ಸೃಷ್ಟಿಸುತ್ತಾ ನಮ್ಮೆದುರು ಬಂದು ನಿಂತಿದೆ. ಮೊದಲ ಸುತ್ತಿನ ಆಧುನೀಕರಣ ಇಂಗ್ಲಿಷ್ ಪ್ರೇಮವನ್ನಷ್ಟೆ ಸೃಷ್ಟಿಸಿದ್ದರೆ, ಜಾಗತೀಕರಣವೆಂಬ ಈ ಎರಡನೇ ಸುತ್ತಿನ ಆಧುನೀಕರಣ ಇಂಗ್ಲಿಷ್ ಕಾಮವನ್ನು ಸೃಷ್ಟಿಸಿದೆ. 'ಕಾಮಾತುರಣಾಂ ನಲಜ್ಜಃ ನಭಯಃ' ಎಂಬಂತೆ ಈ ಇಂಗ್ಲಿಷ್ ಕಾಮ, ನಮ್ಮನ್ನು ಯಾವುದೇ ಸಾಮಾಜಿಕ ಮರ್ಯಾದೆಯೆದುರು ನಿರ್ಲಜ್ಜರನ್ನಾಗಿಯೂ, ಯಾವುದೇ ರಾಷ್ಟ್ರೀಯ ಅಪಾಯದ ಎದುರು ನಿರ್ಭಯರನ್ನಾಗಿಯೂ ಮಾಡಿ, ವಿಷಯ ತಜ್ಞರ ಪರಿಣತಿಯ ಹಾಗೂ ವಿವೇಕದ ಮಾತು ತಲೆಯೊಳಗೇ ಹೋಗದಷ್ಟು ಮರುಳು ಸೃಷ್ಟಿಸಿದೆ.

ಹೀಗಾಗಿಯೇ ಒಂದನೇ ತರಗತಿಯಿಂದ ಇಂಗ್ಲಿಷ್ ಬೇಡ ಎಂದರೆ, ಇವರ ಕಿವಿಗಳಿಗೆ ಇಂಗ್ಲಿಷೇ ಬೇಡ ಎಂದಂತೆ ಕೇಳಿಸುತ್ತದೆ. ಭಾರತದ ಸದ್ಯದ ಶ್ರೇಷ್ಠ ವಿಜ್ಞಾನಿ ಡಾ. ಸಿ.ಎನ್. ಆರ್. ರಾವ್ ಅವರೇ, ಮೊದಲು ಕನ್ನಡ, ನಂತರವಷ್ಟೇ ಇಂಗ್ಲಿಷ್ ಎಂದು ಹೇಳಿದ್ದು ಇವರ ಕಿವಿಗೆ ಬೀಳದೇ ಹೋಗುತ್ತದೆ. ಭಾಷಾ ತಜ್ಞರು ಮಗು ಏಳನೇ ವಯಸ್ಸಿನವರೆಗೆ ಒಂದು ಭಾಷೆಯನ್ನು ಮಾತ್ರ ತನ್ನೊಳಗೆ ಅಂತರ್ಗತ ಮಾಡಿಕೊಳ್ಳಬಹುದು ಎಂದರೆ, ಅದೆಲ್ಲ ಹಳೆಯ ಶಾಸ್ತ್ರ ಎನ್ನುತ್ತಾರೆ– ತಾವೇ ಒಂದು ಭಾಷಾಶಾಸ್ತ್ರವನ್ನು ಆವಿಷ್ಕರಿಸಿಕೊಂಡಿರುವ ಹಾಗೆ! ಶಿಕ್ಷಣ ತಜ್ಞರು, ಮಗು ಆರಂಭದಲ್ಲಿ ತನ್ನ ಮಾತೃ ಅಥವಾ ಪರಿಸರ ಭಾಷೆಯಲ್ಲಿ ಜ್ಞಾನಕ್ಕೆ ತೆರೆದುಕೊಂಡರೆ ಮಾತ್ರ ಮುಂದಿನ ಶಿಕ್ಷಣ ಸುಗಮವಾಗುತ್ತದೆ ಎಂದರೆ; ನೀವಿನ್ನೂ ಜ್ಞಾನದ ಯುಗದಲ್ಲಿದ್ದೀರಿ– ಇದು ಉದ್ಯೋಗ ಯುಗ ಎಂದು, ಉದ್ಯೋಗಕ್ಕೂ ಜ್ಞಾನಕ್ಕೂ ಸಂಬಂಧ ಕಳಚಿ ಹೋಗಿರುವ ಕಟು ಸತ್ಯವನ್ನು ನಿಮ್ಮ ಮುಖಕ್ಕೆ ರಾಚಿ ತಮ್ಮನ್ನು ಸಮರ್ಥಿಸಿಕೊಳ್ಳುತ್ತಾರೆ! ಐದನೇ ತರಗತಿಗೆ ಬದಲಾಗಿ ಒಂದನೇ ತರಗತಿಯಿಂದಲೇ ಇಂಗ್ಲಿಷ್ ಕಲಿಸುವಂತಾದರೆ, ಗ್ರಾಮಾಂತರದ ದಲಿತ– ಹಿಂದುಳಿದ ವರ್ಗಗಳ ಮಕ್ಕಳೂ ಜಾಗತೀಕರಣದ

ಫಲಗಳನ್ನು ಉಣ್ಣಲು ಶಕ್ತರಾಗುತ್ತಾರೆ ಎಂದು ಹುಂಬ ಹುಂಬಾಗಿ ನಂಬುತ್ತಾರೆ.

ಇಲ್ಲಿ ಜಾಗತೀಕರಣದ ಲಾಭ-ನಷ್ಟಗಳ ಬಗ್ಗೆ ಸಾರಾಸಗಟಾಗಿ ಏನನ್ನೂ ಹೇಳದೇ, ಈಗ ಭಾರತದಲ್ಲಿ ಜಾರಿಯಾಗುತ್ತಿರುವ ಜಾಗತೀಕರಣದ ಆವೃತ್ತಿಯ ಬಗ್ಗೆ ಜಾಗತೀಕರಣದ ವಿರೋಧಿಗಳೇನೂ ಅಲ್ಲದ, ಜಗತ್ತಿನ ಶ್ರೇಷ್ಠ ಅರ್ಥಶಾಸ್ತ್ರಜ್ಞರೆನ್ನಿಸಿರುವ, ಅಮಾರ್ತ್ಯಸೇನರ ಈ ಮಾತನ್ನು ಉಲ್ಲೇಖಿಸಬಯಸುವೆ: "ಇಂದು ಭಾರತದ ಮೂರನೇ ಒಂದು ಭಾಗ ಕ್ಯಾಲಿಫೋರ್ನಿಯಾ ಆಗುತ್ತಿದ್ದರೆ, ಮೂರನೇ ಎರಡು ಭಾಗ ಇಥಿಯೋಪಿಯಾ ಆಗುತ್ತಿದೆ." ಇದು ಸತ್ಯವೇ ಆಗಿದ್ದರೆ, ಅದು ಉಂಟುಮಾಡಬಹುದಾದ ಅನಾಹುತಗಳು ಊಹಾತೀತವೇ ಸರಿ. ಸದ್ಯದ ಸಂದರ್ಭದ ಅಶಾಂತಿ, ಅಭದ್ರತೆ, ಹಿಂಸಾಚಾರಗಳ ವೈವಿಧ್ಯವೇ ಈ ಅನಾಹುತಗಳ ಮುನ್ಸೂಚನೆಗಳೂ ಆಗಿರಬಹುದು. ಈ ಎಲ್ಲಾ ಬೆಳವಣಿಗೆಗಳ ಹಿಂದೆ ಎದ್ದು ಕಾಣುವ ಒಂದು ಮುಖ್ಯ ಸತ್ಯವೆಂದರೆ, ಅನ್ಯಭಾಷೆಯೊಂದರ ಮಾತೃಕೆಗಳಲ್ಲಿನ ಅಭಿವೃದ್ಧಿ ಮಾದರಿಯ ಮೂಲಕ ಆಧುನೀಕರಣಗೊಳ್ಳಲು ಹೊರಟ ಜನಸಮುದಾಯವೊಂದು, ತನ್ನ ಭಾಷೆಯ ಸಾಧ್ಯತೆಗಳ ಬಗೆಗೇ ಅನುಮಾನ ಬೆಳೆಸಿಕೊಂಡು ತನ್ನ ವಿವೇಚನಾಶಕ್ತಿಯ ಆಧಾರಗಳನ್ನೇ ಕಳೆದುಕೊಂಡಿರುವುದು. ಲೌಕಿಕ ಬಂಡವಾಳವನ್ನರಸಿಕೊಂಡು ತನ್ನ ಪ್ರಜ್ಞಾ ಪರಿಧಿಯಾಚೆ ಹೊರಟ ಜನಸಮುದಾಯವೊಂದು ತನ್ನ ಸಾಂಸ್ಕೃತಿಕ ಬಂಡವಾಳದ ವಿಷಯದಲ್ಲಿ ದಿವಾಳಿತನಕ್ಕೆ ಒಳಗಾಗುತ್ತಿರುವ ದುರಂತವಿದು. ಇದು ಈಗಾಗಲೇ ಅಮಾರ್ತ್ಯಸೇನರ ಮಾತಿನ ಮೂಲಕ ಸೂಚಿಸಿದಂತೆ, ಜಾತಿಕೊಟ್ಟರೂ, ಸುಖ ಪಡಲಾಗದ ಸಂದಿಗ್ಧ. ಇಂತಹ ಸಂದಿಗ್ಧಗಳಲ್ಲೇ, ಕೆಲವು ಜನವರ್ಗಗಳಲ್ಲಿ ಹಿಂದುಳಿದಿರುವಿಕೆ ಎಂಬುದು ಒಂದು ವ್ಯಸನವಾಗಿ; ಅದಕ್ಕೆ ಕಾರಣಗಳಿಗೆ ಬದಲಾಗಿ, ನೆಪಗಳನ್ನು ಹುಡುಕಿಕೊಳ್ಳುವ ಹತಾಶೆ ಬೆಳೆಯುವುದು.

ಹಾಗಾದರೆ ಈ ಸಮಸ್ಯೆಗೆ ಪರಿಹಾರವೇ ಇಲ್ಲವೇ? ಜಗತ್ತು ಬದಲಾಗುತ್ತಿರುವುದನ್ನು ಗಮನಿಸದೆಯೆ ನಮ್ಮ ಹಳೆಯ ಪರಿಕಲ್ಪನೆಗಳಿಗೇ ಜೋತು ಬಿದ್ದು, ಹೊಸ ವಿಚಾರ ಪ್ರಯೋಗಗಳಿಗೆ ತೆರೆದುಕೊಳ್ಳದೆ ಬದುಕನ್ನು ಸ್ಥಗಿತಗೊಳಿಸಿಕೊಳ್ಳಬೇಕೆ? ಈ ಪ್ರಶ್ನೆಯೇ ಅಸಂಬದ್ಧ. ಏಕೆಂದರೆ, ನೀವು ನಿಂತಲ್ಲೇ ನಿಂತರೂ, ಬದಲಾವಣೆ ನಿಮ್ಮನ್ನು ಕೊಚ್ಚಿಕೊಂಡು ಹೋಗುತ್ತದೆ. ಈಗ ಆಗುತ್ತಿರುವುದೂ ಹಾಗೆಯೇ. ಬದಲಾಗಿ ನಮ್ಮ ನೆಲದ ಮೇಲೆ ನಾವು ಭದ್ರವಾಗಿ ನಿಲ್ಲುವ ವ್ಯವಸ್ಥೆ ಮಾಡಿಕೊಂಡು, ಬದಲಾವಣೆ ಪ್ರಕ್ರಿಯೆಯಲ್ಲಿ ನಾವೂ ಪಾಲ್ಗೊಂಡು ಅದನ್ನು ನಮ್ಮ ಸುಖ ಸಂತೋಷಗಳಿಗೆ ಅನುವಾಗುವಂತೆ ವಿನ್ಯಾಸಗೊಳಿಸಿಕೊಳ್ಳುವುದು ವಿವೇಕದ, ನಿಜವಾದ ಸಾಹಸ- ಸೃಜನಶೀಲತೆ ಎನ್ನಿಸಿಕೊಳ್ಳುತ್ತದೆ; ಅದು ಆಧುನೀಕರಣ ಎನ್ನಿಸಿಕೊಳ್ಳುತ್ತದೆ. ಇತರರ ವಿಚಾರ ಪ್ರಯೋಗಗಳನ್ನು ಅನುಕರಿಸುವುದಲ್ಲ. ಇದಕ್ಕೆ ಮೊದಲಾಗಿ ನಾವು ನಮ್ಮ ಮೂಲಸತ್ವವನ್ನು ಗುರುತಿಸಿಕೊಂಡು, ಸಂಘಟಿಸಿಕೊಳ್ಳಬೇಕಾಗಿದೆ. ಈ ನಮ್ಮ ಮೂಲ ಸತ್ವದ ಮಾತೃಕೆಗಳು ಇರುವುದು ನಮ್ಮ-ಮಾತೃ-ಭಾಷೆಯಲ್ಲಿ-ಮೊದಲ ಭಾಷೆಯಲ್ಲಿ. ಹಾಗಾಗಿಯೇ ಸಮಕಾಲೀನ ಜಗತ್ತಿನ ಶ್ರೇಷ್ಠ ಭಾಷಾ ತಜ್ಞ ನೋಮ್ ಚಾಮ್‌ಸ್ಕಿ, ಮಗುವಿಗೆ ಅದರ ಬೆಳವಣಿಗೆಯ ಆರಂಭಿಕ ವರ್ಷಗಳಲ್ಲಿ – ಏಳನೇ ವಯಸ್ಸಿನವರೆಗೆ– ಮಾತೃಭಾಷೆಯ ಹೊರತಾಗಿ ಇನ್ನೊಂದು (ಎರಡನೆಯ) ಭಾಷೆಯನ್ನು ಕಲಿಸುವುದು ಆದರ ಗ್ರಹಿಕೆಯ

ಮೂಲನೆಲೆಗಳನ್ನೆ ಅಸ್ತವ್ಯಸ್ತಗೊಳಿಸಿ, ಅದರ ಸೃಜನಶಕ್ತಿಯನ್ನೇ ಭಂಗಗೊಳಿಸಬಲ್ಲದು ಎಂದು ಹೇಳಿರುವುದು.

ಇದಕ್ಕೆ ಆತ ಕೊಡುವ ಕಾರಣ, ಮನುಷ್ಯ ಸಂಸ್ಕೃತಿಯ ಸ್ಮೃತಿಕೋಶದಲ್ಲೇ ಜಾಗತಿಕ ಭಾಷಾ ವ್ಯಾಕರಣವೊಂದು (Universal grammer) ಅಂತರ್ಗತವಾಗಿದ್ದು, ಹುಟ್ಟುವ ಪ್ರತಿಯೊಂದು ಮಗುವೂ ಅದನ್ನ ಹೊತ್ತುಕೊಂಡೇ ಬರುತ್ತದೆ ಮತ್ತು ಆ ವ್ಯಾಕರಣ ಅದರ ಮಾತೃ ಪರಿಸರ ಭಾಷೆಯಲ್ಲೇ ಅಭಿವ್ಯಕ್ತವಾಗಿ, ಆ ಮಗುವಿನ ಸೃಜನಶೀಲತೆಯನ್ನು ರೂಪಿಸುತ್ತದೆ. ವಾಸ್ತವವಾಗಿ ಮಗು ಶಾಲೆಗೆ ಹೋಗುವ ಮುನ್ನವೇ, ತನ್ನ ಭಾಷೆಯನ್ನು ಸಾಧಿಸಿಕೊಂಡಿರುತ್ತದೆ. ಬಹುಭಾಷಾ ಸಂದರ್ಭದಲ್ಲಿ ಮಗುವಿನ ಕಿವಿಗೆ ಹಲವು ಭಾಷೆಗಳನ್ನು ಸಾಧಿಸಿಕೊಳ್ಳಬಲ್ಲದು. ಇದನ್ನೇ ಕೆಲವು ಸ್ವಯಂ ಘೋಷಿತ ಭಾಷಾ ಹಾಗೂ ಶಿಕ್ಷಣ ತಜ್ಞರು, ಮಗು ಒಮ್ಮೆಗೇ ಹಲವು ಭಾಷೆಗಳನ್ನ ಕಲಿಯಬಲ್ಲದೆಂದು ಚೋಮ್‌ಸ್ಕಿ ಹೇಳಿದ್ದಾನೆ ಎಂದು ಈ ವಿಚಾರ ಗೊತ್ತಿಲ್ಲದವರ ಹಾದಿ ತಪ್ಪಿಸಿದ್ದೂ ಉಂಟು. ಹಾಗಾಗಿಯೇ ನಮ್ಮ ಮಧ್ಯದ ಶ್ರೇಷ್ಠ ಭಾಷ ತಜ್ಞ ಕೆ.ವಿ. ತಿರುಮಲೇಶರು ಈ ಚರ್ಚೆಯಲ್ಲಿ ಮಧ್ಯೆ ಪ್ರವೇಶಿಸಿ, ಇದನ್ನು ಪ್ರಶ್ನಿಸಿ, ಸ್ಪಷ್ಟೀಕರಿಸಿದ್ದು. *('ಪ್ರಜಾವಾಣಿ' ಸಾಪ್ತಾಹಿಕ ಪುರವಣಿ: ೨೨.೧೦.೦೬)* ಮಗು ಒಂದು ಭಾಷೆಯನ್ನು ತನ್ನಲ್ಲಿನ ಜಾಗತಿಕ ವ್ಯಾಕರಣದಿಂದ ಸಾಧಿಸಿಕೊಳ್ಳುವುದೇ ಬೇರೆ, ಮನುಷ್ಯ ನಿರ್ಮಿತ ವ್ಯಾಕರಣದಿಂದ ಕಲಿಯುವುದೇ ಬೇರೆ. ಉದಾಹರಣೆಗೆ, ಕನ್ನಡ ಮಾತೃಭಾಷೆಯ ಮಗು ಶಾಲೆಯಲ್ಲಿ ಕಲಿಯುವುದು ಕನ್ನಡ ಭಾಷೆಯನ್ನಲ್ಲ. ಬದಲಿಗೆ, ಆಗಲೇ ಸಾಧಿಸಿಕೊಂಡಿರುವ ಆ ಭಾಷೆಯ ಮುಖಾಂತರ ಆಧುನಿಕ ಶಿಕ್ಷಣಕ್ಕೆ ಅಗತ್ಯವಾದ ಅದರ ಅಕ್ಷರ ರೂಪದ ಭಾಷಾ ಶಿಸ್ತುಗಳನ್ನು; ಮತ್ತು ಆ ಮೂಲಕ ಜಗತ್ತನ್ನು ತನ್ನ ಅಗತ್ಯಗಳಿಗೆ ತಕ್ಕಂತೆ ನಿರೂಪಿಸಿಕೊಳ್ಳುವ ಉಪಾಯಗಳನ್ನು.

ಹಾಗಾಗಿಯೇ, ಮಾತೃ ಅಥವಾ ಪರಿಸರದ ಭಾಷೆಯಾಗಿರದ ಇಂಗ್ಲಿಷನ್ನು ನಮ್ಮ ಮಕ್ಕಳು ಬಾಲ್ಯದಲ್ಲಿ ಸಾಧಿಸಿಕೊಳ್ಳಲಾರವು, ಕಲಿಯಬಲ್ಲವು ಮಾತ್ರ. ಹಾಗೆ ಕಲಿಯಲು ಅವಕ್ಕೆ ಸಾಧಿಸಿಕೊಂಡ ಭಾಷೆಯೊಂದರ ಶಿಸ್ತುಗಳ ಅಸ್ತಿವಾರಗಳಿರಬೇಕು. ಕನ್ನಡದ ಮಕ್ಕಳಿಗೆ ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಕೆಗೆ ನಿಜವಾದ ವಿರೋಧವಿರುವುದು ಈ ನೆಲೆಯಿಂದ; ಕನ್ನಡಾಭಿಮಾನದಿಂದ ಅಲ್ಲ–ಬದಲಿಗೆ, ಇಂಗ್ಲಿಷ್ ಅಭಿಮಾನದಿಂದ! ನಮ್ಮ ಮಕ್ಕಳು ಇಂಗ್ಲಿಷ್ ಕಲಿಯುವುದಾದರೆ, ಚೆನ್ನಾಗಿ ಕಲಿಯಲೆಂದು– ಗಿಳಿಪಾಠವಾಗಿ ಅಲ್ಲ, ಜ್ಞಾನವನ್ನು ಹೀರಿಕೊಳ್ಳುವ ಮಾತೃಕೆಗಳ ರೂಪದಲ್ಲಿ. ಇದು ಸಾಧ್ಯವಾಗುವುದು ಕನಿಷ್ಠ ಐದು ವರ್ಷಗಳ ಶಿಸ್ತುಬದ್ಧ ಕಲಿಕೆಯಿಂದ. ಆದರೆ transformation, expansion ಮತ್ತು substitution ಎಂದು ಭಾಷಾ ಹಾಗೂ ಶಿಕ್ಷಣ ತಜ್ಞರು ಕರೆಯುವ ಕಲಿಕಾ ತಂತ್ರಗಳು ಮಕ್ಕಳಿಗೆ ಅಂತರ್ಗತವಾಗಬೇಕು. ಹಾಗಾಗಿ ಏಳನೆಯ ತರಗತಿಯವರೆಗಿನ ಶಾಲಾ ಶಿಕ್ಷಣ ಮಾಧ್ಯಮ ಕರ್ನಾಟಕದಲ್ಲಿ, ಭಾಷಾ ಅಲ್ಪಸಂಖ್ಯಾತರ ಶಾಲೆಗಳ ಹೊರತಾಗಿ, ಕನ್ನಡದಲ್ಲಿರಲಿ. ಮೌಖಿಕ ಇಂಗ್ಲಿಷ್ ಕಲಿಕೆ ಮೂರನೆಯ ತರಗತಿಯಿಂದ ಆರಂಭವಾಗಿ, ನಾಲ್ಕನೇ ತರಗತಿಯಲ್ಲಿ ಅಕ್ಷರಾಭ್ಯಾಸ, ಐದನೇ ತರಗತಿಗೆ ಪಠ್ಯಾಧಾರಿತ ಇಂಗ್ಲಿಷ್ ಶಿಕ್ಷಣ ಶುರುವಾಗಲಿ. ಪರಿಸರದಲ್ಲಿರುವ ಒಂದು ಭಾಷೆಯ ಕಲಿಕೆ

ಆರಂಭವಾಗಬೇಕಾಗಿರುವುದೇ ಹೀಗೆ: Pattern drill ಅಂದರೆ ಭಾಷಾ ರಚನೆಯ ಸ್ವರೂಪವನ್ನು ಪರಿಚಯಮಾಡಿಕೊಡುವ ಸರಳವಾಕ್ಯ ಅಥವಾ ಸಾಲುಗಳ ಮೌಖಿಕ ಅಭ್ಯಾಸ; ನಂತರ reinforcement ಅಂದರೆ ಪದೇ ಪದೇ ಇಂಗ್ಲಿಷ್ ಶಬ್ದ, ವಾಕ್ಯಗಳು ಕಿವಿಗೆ ಬೀಳುವಂತಹ ತರಗತಿ ವಾತಾವರಣ ನಿರ್ಮಾಣ.

ಈ ಮಾದರಿಯ ಇಂಗ್ಲಿಷ್ ಕಲಿಕೆ ಮಾತ್ರ ಮಕ್ಕಳನ್ನು ಉನ್ನತ ಶಿಕ್ಷಣಕ್ಕೆ ಸಜ್ಜುಗೊಳಿಸಬಲ್ಲವು. ಈ ಶಿಕ್ಷಣವೂ ವ್ಯಾವಹಾರಿಕ ಇಂಗ್ಲಿಷ್ ಕಡೆಗೇ ಹೆಚ್ಚು ಒತ್ತು ಕೊಡುವಂತಿರಬೇಕೇ ಹೊರತು, ಈಗಿರುವಂತೆ ಸಾಹಿತ್ಯಕ ಇಂಗಿಷ್ ಕಡೆಗಲ್ಲ. ಇದು ಭಾಷಾ ಮತ್ತು ಶಿಕ್ಷಣ ಶಾಸ್ತ್ರಗಳ ಮೂಲತತ್ವಗಳನ್ನಾಧರಿಸಿದ ಹಾಗೂ ಬದಲಾಗುತ್ತಿರುವ ಜಗತ್ತಿನಲ್ಲಿ ಇಂಗ್ಲಿಷ್ ಭಾಷೆಯ ಪಾತ್ರವನ್ನು ಗಮನಿಸಿ ರೂಪಿಸಬಹುದಾದ ಪ್ರಾಥಮಿಕ ಶಿಕ್ಷಣದ ಸ್ಥೂಲರೂಪ. ಇದರ ವಿವರಗಳನ್ನು ಪರಿಣತ ಭಾಷಾತಜ್ಞರು, ಶಿಕ್ಷಣತಜ್ಞರು, ಸಾಮಾಜಿಕ ಕಾರ್ಯಕರ್ತರು, ವಿಜ್ಞಾನಿಗಳು, ಉದ್ಯಮ ತಂತ್ರಜ್ಞರು ಹಾಗೂ ಸಂಸ್ಕೃತಿ ಚಿಂತಕರಿಂದ ಕೂಡಿದ ಆಯೋಗವೋ, ಸಮಿತಿಯೋ ಸಿದ್ಧಪಡಿಸಬಹುದಾಗಿದೆ.

ಈ ವ್ಯವಸ್ಥೆ, ಅನೇಕ ಸಮಸ್ಯೆಗಳನ್ನು ತಂತಾನೇ ಪರಿಹರಿಸುತ್ತದೆ ಹಾಗೂ ಭಾಷೆ ಮತ್ತು ಶಿಕ್ಷಣ ಕುರಿತಂತೆ ಆಧುನೀಕರಣದ ಹೆಸರಿನ ನಿಲುವುಗಳನ್ನು ಸರಿಪಡಿಸುತ್ತದೆ. ಮಾತೃಭಾಷಾ ಶಾಲಾ ಶಿಕ್ಷಣವು ಏಕರೂಪದ ಶಿಕ್ಷಣದ ಮೊದಲ ಹೆಜ್ಜೆಯಾಗಿ, ಅನೇಕ ರೀತಿಯ ಸಾಮಾಜಿಕ ಬಿಗುವುಗಳನ್ನು ಕಡಿಮೆ ಮಾಡುತ್ತದೆ. ಇದರಿಂದಾಗಿ ಇಂಗ್ಲಿಷ್ ಶಾಲೆಗಳಿಗೆ ವಲಸೆ ಹೋಗಿದ್ದ ಜನವರ್ಗಗಳಲ್ಲಿ ಒಂದಷ್ಟು ಪಾಲಾದರೂ ಸರ್ಕಾರಿ ಶಾಲೆಗಳಿಗೆ ವಾಪಾಸಾಗುವುದರಿಂದ, ಆ ಶಾಲೆಗಳ ಗುಣಮಟ್ಟದ ಸುಧಾರಣೆಗೆ ಒತ್ತಡಗಳು ಹೆಚ್ಚುತ್ತವೆ. ಜ್ಞಾನ, ಸಾಧಿಸಿಕೊಂಡ ಭಾಷಾ ಮಾತೃಕೆಗಳಲ್ಲಿ ಮಾತ್ರ ಸ್ಪಷ್ಟವಾಗಿ ಮತ್ತು ಸುಸ್ಥಿರವಾಗಿ ನೆಲೆಗೊಳ್ಳುವುದಾದ್ದರಿಂದ, ಕನ್ನಡ ಶಾಲಾ ಶಿಕ್ಷಣವು ಮಗುವಿನ ಪಾಲಿಗೆ ನಿಜವಾಗಿ ಜ್ಞಾನಾರ್ಜನೆಯ ಮಾಧ್ಯಮವಾಗಿ, ಅದು ಜಗತ್ತನ್ನು ಗ್ರಹಿಸುವ ತನ್ನದೇ ಅರಿವಿನ ದ್ವಾರಗಳನ್ನು ಗುರುತಿಸಿಕೊಳ್ಳುತ್ತದೆ. ತದನಂತರ, ಮೌಖಿಕ ಅಭ್ಯಾಸಗಳ ಅಸ್ತಿವಾರದ ಮೇಲೆ ಕನ್ನಡ ಭಾಷಾ ಶಿಸ್ತಿನಿಂದ ಕಟ್ಟಲ್ಪಟ್ಟ ಇಂಗ್ಲಿಷ್ ಬಳಕೆಗೆ ಬರುವುದರಿಂದ, ಹೆಚ್ಚಿನ ಜ್ಞಾನವನ್ನು ಇಂಗ್ಲಿಷ್ ಮೂಲಕ ಪಡೆದುಕೊಳ್ಳಲು, ಕನ್ನಡದಲ್ಲಿ ಅರಳಿಕೊಂಡಿರುವ ಜ್ಞಾನದ ಮೂಲಮಾತೃಕೆಗಳ ನೆರವಿನಿಂದಾಗಿ ಅಷ್ಟೇನೂ ಕಷ್ಟವಾಗುವುದಿಲ್ಲ.

ಒಟ್ಟಾರೆಯಾಗಿ ಇದು ಸದ್ಯದ ಸಂದರ್ಭದಲ್ಲಿ ನಮ್ಮ ಮಕ್ಕಳ ಹಾಗೂ ಆ ಮೂಲಕ ನಮ್ಮ ರಾಷ್ಟ್ರದ ಕಾರ್ಯದಕ್ಷತೆಯನ್ನು ಹೇಗೆ ಗರಿಷ್ಟ ಹಾಗೂ ಸಮಗ್ರಗೊಳಿಸಬಹುದು ಎಂಬುದನ್ನು ನಿರ್ಧರಿಸುವ ಪ್ರಶ್ನೆ. ಈ ಹಿನ್ನೆಲೆಯಲ್ಲೇ ಸಮಾಜವಾದಿ ಚಿಂತಕ ಡಾ॥ ರಾಮಮನೋಹರ ಲೋಹಿಯಾ, ಎಲ್ಲಿಯವರೆಗೆ ನಮ್ಮ ಶಿಕ್ಷಣ ನಮ್ಮದೇ ಭಾಷೆಯಲ್ಲಿ ಜಾರಿಯಾಗದೋ, ಅಲ್ಲಿಯವರೆಗೆ ನಮ್ಮಲ್ಲಿ ಮೂಲಭೂತ ಸಂಶೋಧನೆ ಸಾಧ್ಯವಾಗದು ಎಂದಿದ್ದುದು. ಅದೇನೇ ಇರಲಿ, ಎಲ್ಲಕ್ಕಿಂತ ಮುಖ್ಯವಾಗಿ, ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಸಬೇಕೆಂಬ ನಿರ್ಧಾರದಿಂದ, ಕನ್ನಡ ಭಾಷೆಯಿಂದ ಅನ್ನ ಹುಟ್ಟುವುದಿಲ್ಲ–

ಅದನ್ನು ನಂಬಿಕೊಂಡರೆ ಅಭಿವೃದ್ಧಿ ಸಾಧ್ಯವಿಲ್ಲ ಎಂಬ ಸಂದೇಶ ನಮ್ಮ ಮುಂದಿನ ತಲೆಮಾರಿಗೆ ರವಾನೆಯಾಗಿ, ಅದು ತನ್ನ ಭಾಷೆ ಸಂಸ್ಕೃತಿಗಳ ಬಗೆಗೇ ಸುಪ್ತವಾಗಿ ಕೀಳರಿಮೆ ಬೆಳೆಸಿಕೊಳ್ಳುವ ಮತ್ತು ಆ ಮೂಲಕ ಈವರೆಗೆ ಒಂದು ದೊಡ್ಡ ಸಮುದಾಯವನ್ನು ಎರಡು ಸಾವಿರ ವರ್ಷಗಳ ಕಾಲ ಎಲ್ಲ ರೀತಿಯ ಸವಾಲುಗಳನ್ನು ಎದುರಿಸಿ, ಕಾಪಾಡಿ, ಪ್ರಬುದ್ಧತೆಯೆಡೆಗೆ ನಡೆಸಿರುವ ಒಂದು ಭಾಷೆಯನ್ನು ಅವಮಾನಿಸುವ ಅವಿವೇಕ ತಪ್ಪುತ್ತದೆ.

ಇದಕ್ಕಾಗಿ, ಇಂತಹ ವಿಷಯಗಳಲ್ಲಿ, ಇಂದಿನ ಮುಕ್ತ ಮಾರುಕಟ್ಟೆ ಆರ್ಥಿಕತೆಯ ದಲ್ಲಾಳಿಗಳಂತಿರುವ ರಾಜಕೀಯ ಪುಢಾರಿಗಳು, ಉದ್ಯಮಿಗಳು, ಸ್ವಯಂ ಘೋಷಿತ ಸಮುದಾಯ ನಾಯಕರ ಮಾತುಗಳಿಗೆ ಕಿವಿಗೊಡುವುದನ್ನು ಬಿಟ್ಟು, ವಿಷಯ ತಜ್ಞರ, ಕ್ಷೇತ್ರ ಪಂಡಿತರ ಮಾತುಗಳನ್ನು ಕೇಳುವುದನ್ನು ಕಲಿಯಬೇಕು. ಮಾರುಕಟ್ಟೆಯ ಸದ್ಯದ ಗೌಜು ಗದ್ದಲದಲ್ಲಿ ತಾನೊಂದು ದೇಶ, ಒಂದು ಜನಪದ, ಒಂದು ಸಂಸ್ಕೃತಿ; ಇವುಗಳ ಆಧಾರಗಳು ಉಳಿದು ಬೆಳೆದರೆ ಮಾತ್ರ ಮಾರುಕಟ್ಟೆಯ ಸಂತೋಷಗಳನ್ನು ಅನುಭವಿಸಲು ಸಾಧ್ಯ ಎಂಬ ಸತ್ಯವನ್ನು ಮನಗಾಣಬಹುದು.

(ಮೂಡಬಿದ್ರೆಯಲ್ಲಿ ನವೆಂಬರ್ ೨೪,೨೫ ಹಾಗೂ ೨೬ರಂದು 'ಕನ್ನಡದ ಮನಸ್ಸು: ಪ್ರಚಲಿತ ಪ್ರಶ್ನೆಗಳು' ವಿಷಯ ಕುರಿತು ನಡೆದ 'ಆಳ್ವಾಸ್ ನುಡಿಸಿರಿ–೨೦೦೬'ರ 'ಆಧುನಿಕ ವಿದ್ಯಮಾನಗಳ ನಡುವೆ ಶಿಕ್ಷಣದ ಸವಾಲುಗಳು' ಗೋಷ್ಠಿಯಲ್ಲಿ ಮಂಡಿಸಿದ ಪ್ರಬಂಧ)

೧೬. ಮುಖ್ಯಮಂತ್ರಿ ಚಂದ್ರು ಅವರಿಗೊಂದು ಬಹಿರಂಗ ಪತ್ರ

ಪ್ರಿಯ ಶ್ರೀ 'ಚಂದ್ರು' ಅವರೇ,

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸ್ಥಾನ ವಹಿಸಿಕೊಂಡು ಬಹು ಉತ್ಸಾಹದಿಂದ ಕೆಲಸ ಆರಂಭಿಸಿರುವ ಸೂಚನೆ ನೀಡಿರುವ ನಿಮಗೆ 'ವಿಕ್ರಾಂತ ಕರ್ನಾಟಕ'ದ ಓದುಗರ ಪರವಾಗಿ ಅಭಿನಂದನೆಗಳು. ನೀವು ಇತ್ತೀಚಿನ ದೂರದರ್ಶನದ ಕಾರ್ಯಕ್ರಮವೊಂದರಲ್ಲಿ ಹೇಳಿದಂತೆ, ಕನ್ನಡ ನಾಡಿನಲ್ಲಿ 'ಕನ್ನಡ ಅಭಿವೃದ್ಧಿ ಪ್ರಾಧಿಕಾರ'ವೆಂಬುದೊಂದು ಇದೆ ಎನ್ನುವುದೇ ಕನ್ನಡದ ಸ್ಥಿತಿಗತಿಯನ್ನು ಸೂಚಿಸುವಂತಿದೆ. ಆದರೆ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಸ್ಥಾಪನೆಯಾದ ಎರಡು ದಶಕಗಳ ನಂತರವೂ ಅದರ ಸ್ಥಾಪನೆಯ ಉದ್ದೇಶಗಳು ಅಲ್ಪ ಪ್ರಮಾಣದಲ್ಲಾದರೂ, ನಿಜಾರ್ಥದಲ್ಲಿ ಈಡೇರಿರುವ ಸಾಕ್ಷ್ಯಗಳು ನಮಗಿನ್ನೂ ದೊರೆಯಬೇಕಾಗಿದೆ ಎಂದರೆ ಏನು ಹೇಳುವುದು? ಬದಲಿಗೆ ವರ್ಷೇ ವರ್ಷೇ, ಸಾರ್ವಜನಿಕವಾಗಿ ಕನ್ನಡದ ಸ್ಥಾನ ಮಾನ ಅವನತಿಯತ್ತಲೇ ಸಾಗುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಹೀಗಾಗಿಯೇ ರಾಜ್ಯದಲ್ಲಿ ಸರ್ಕಾರದ 'ಪ್ರಯತ್ನ'ಗಳಿಗೆ ಪರ್ಯಾಯವಾಗಿ, ಕನ್ನಡ ರಕ್ಷಣೆಯ ವೀರ ಪ್ರತಿಜ್ಞೆಗೈಯುತ್ತಾ ಹಲವು ಸಂಘ ಸಂಸ್ಥೆಗಳು, ವೇದಿಕೆಗಳು, ಸೇನೆಗಳು ಒಂದೇ ಸಮನೆ ತಲೆಯೆತ್ತುತ್ತಿವೆ. ಅಲ್ಲದೆ, ಈವರೆಗೆ ಪ್ರಾಧಿಕಾರದ ಅಧ್ಯಕ್ಷರಾಗಿದ್ದವರಲ್ಲಿ ಅನೇಕರು 'ಕನ್ನಡ ವೀರ'ರೇ ಆಗಿದ್ದರೂ, ಈ ಸ್ಥಿತಿ ಏಕುಂಟಾಯಿತೆಂದು ನೀವು ಯೋಚಿಸಬೇಕಿದೆ. ಅಧಿಕಾರ ಕೊಡುವ ಸುಖ-ಸವಲತ್ತುಗಳು ಯಾರನ್ನಾದರೂ ಮೆತ್ತಗಾಗಿಸಬಲ್ಲುದು. ಇದನ್ನು ಮರೆಮಾಚಲು ಅಧಿಕಾರ ಬಿಡುವ ಹೊತ್ತಿನಲ್ಲಿ, ತಾವು ಕೈಗೊಳ್ಳಲು ಸಾಧ್ಯವಾದ ಕೆಲವು ಔಪಚಾರಿಕ ಕಾರ್ಯಕ್ರಮಗಳನ್ನು ಒಳಗೊಂಡ ಪ್ರಗತಿ ನಕ್ಷೆಯೊಂದನ್ನು ಬಿಡುಗಡೆ ಮಾಡುವ ಹಾಸ್ಯಾಸ್ಪದ ಕ್ರಮಕ್ಕೆ ಕೆಲವರು ಕೈಹಾಕಿದ್ದೂ ಉಂಟು! ಇಂತಹ ಅಸಹಾಯಕತೆಗೆ ಒಳಗಾಗದಂತೆ, ಆರಂಭದಿಂದಲೇ ನಿಮ್ಮದೇ ಕಾರ್ಯಕ್ರಮಗಳ ನಕ್ಷೆಯೊಂದನ್ನು ತಯಾರು ಮಾಡಿಕೊಂಡು ನೀವು ಕೆಲಸ ಆರಂಭಿಸಬೇಕಿದೆ. ನಿಮ್ಮ ಈ ಕಾರ್ಯಕ್ರಮಗಳ ಹಿಂದೆ ಒಂದು ಸ್ಪಷ್ಟ ಮುನ್ನೋಟ, ಚಿಂತನೆ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಹಠ ಇರುವುದು ಅತ್ಯಗತ್ಯ.

ನಾನು ಹೀಗೆ ನಿಮ್ಮನ್ನು ವೈಯುಕ್ತಿಕವಾಗಿ ಉದ್ದೇಶಿಸಿ ಬರೆಯಲೂ ಒಂದು ಕಾರಣವಿದೆ. ಕನ್ನಡ ಸಿನೆಮಾಗಳಲ್ಲಿ ಹಾಸ್ಯ (ಮತ್ತು ಕೆಲವೊಮ್ಮೆ ಹಾಸ್ಯಾಸ್ಪದ) ಪಾತ್ರಗಳಲ್ಲಿ ಮಾತ್ರ ನೋಡುತ್ತಿದ್ದ ನಿಮ್ಮನ್ನು ನಾನು ಇತ್ತೀಚೆಗೆ ಬೆಂಗಳೂರಲ್ಲಿ ಪುಸ್ತಕ ಬಿಡುಗಡೆ ಸಮಾರಂಭವೊಂದರಲ್ಲಿ ಭೇಟಿಯಾದಾಗ, ನೀವು ಆ ಸಿನೆಮಾಗಳಲ್ಲಿ ಕಂಡಂತೆ 'ಹಗುರ'

ವ್ಯಕ್ತಿತ್ವದವರೇನಲ್ಲ ಎಂಬುದು ಗೊತ್ತಾಯಿತು. ಜೊತೆಗೆ, ಈ ಹಿಂದೆ ನಮ್ಮ ಸರ್ಕಾರಿ ಶಾಲೆಗಳಲ್ಲಿ ಒಂದನೇ ತರಗತಿಯಿಂದಲೇ ಕನ್ನಡ ಕಲಿಸುವ ಆಜ್ಞೆಗೆ ಸಿದ್ಧತೆ ನಡೆಯುತ್ತಿದ್ದಾಗ ಶಾಸನ ಸಭೆಯಲ್ಲಿ ಅದನ್ನು ದಿಟ್ಟವಾಗಿ ವಿರೋಧಿಸಿದ ಕೆಲವೇ ಕೆಲವರಲ್ಲಿ ನೀವೂ ಒಬ್ಬರು ಎಂಬುದು ನೆನಪಿಗೆ ಬಂತು. ಕನ್ನಡದ ಬಗ್ಗೆ ಆಳವಾದ ನಿಷ್ಠೆ–ನಂಬಿಕೆಯುಳ್ಳವರು ಮಾತ್ರ ಹೀಗೆ, ಇಂದು ಹಲವು ವಕ್ರ ವಿವರಣೆಗಳೊಂದಿಗೆ ಸೃಷ್ಟಿಸಲಾಗುತ್ತಿರುವ ಕನ್ನಡ ವಿರೋಧಿ ಪ್ರವಾಹದ ವಿರುದ್ಧ ಈಜಬಲ್ಲರು. ನಿಮ್ಮನ್ನು ಆ ಸಮಾರಂಭದಲ್ಲಿ ಸಂಘಟಕರೊಬ್ಬರು 'ಕೋಮುವಾದಿ ಪಕ್ಷದ ಸದಸ್ಯರಾದರೂ...' ಎಂಬ ಮಾತುಗಳೊಂದಿಗೆ ಪರಿಚಯಿಸಿದ್ದಕ್ಕೆ ನೀವು ಪ್ರತಿಕ್ರಿಯಿಸುತ್ತಾ, 'ಅದೆಲ್ಲ ಇಂದಿನ ರಾಜಕೀಯದ ಸನ್ನಿವೇಶದಲ್ಲಿ ಅಪ್ರಸ್ತುತವಾದ ಮಾತು. ನಾನು ಮೂಲತಃ ಸಮಾಜವಾದಿ' ಎಂದು ಹೇಳಿದ್ದೂ ನನ್ನ ಮನದಲ್ಲಿದೆ. ಏಕೆಂದರೆ, ಇಂದು ಯಾರಾದರೂ ಸಮಾಜವಾದಿ ಎಂದು ಬಹಿರಂಗವಾಗಿ ಹೇಳಿಕೊಳ್ಳಲು ಹಿಂಜರಿಯಬೇಕಾದಂತಹ ಪರಿಸ್ಥಿತಿ ಇರುವಾಗ, ನೀವು ಹಾಗೆ ಹೇಳಿಕೊಳ್ಳುವಲ್ಲಿ ತೋರಿದ ಧೈರ್ಯದಲ್ಲಿ ಒಂದಷ್ಟು ಮುಗ್ಧತೆಯ ಜೊತೆಗೆ ಸಮಾಜವಾದಿ ತತ್ವದ ಬಗ್ಗೆ ಆಳವಾದ ನಂಬಿಕೆಯೂ ಇದೆ ಎಂದು ಭಾವಿಸಿದ್ದೇನೆ. ಒಂದು ಕಾಲದಲ್ಲಿ ಕನ್ನಡ ಚಳುವಳಿಗೆ ಒಂದು ತಾತ್ವಿಕ ಭಿತ್ತಿ ಒದಗಿಸಿ, ಆ ಮೂಲಕ ಅದಕ್ಕೊಂದು ಘನತೆಯನ್ನೂ ಪ್ರದಾನ ಮಾಡಿದ ಸಮಾಜವಾದಿಗಳೇ; ಇಂದು ಬಹಿರಂಗದಲ್ಲದಿದ್ದರೂ, ಅಂತರಂಗದಲ್ಲಿ ಕನ್ನಡದ ಕಾಲ ಮುಗಿಯಿತೋ ಏನೋ ಎಂಬ ಅನುಮಾನದಿಂದ ಇಂಗ್ಲಿಷ್ ಕೈಯನ್ನು ಹಿಡಿದು ಹೊರಟಿರುವಾಗ, ನಿಮ್ಮ ಈ ಸಮಾಜವಾದಿ ಕನ್ನಡ ಬದ್ಧತೆ ನನ್ನಲ್ಲಿ ಒಂದಿಷ್ಟು ಆಸೆ ಹುಟ್ಟಿಸಿದೆ. ಅದಕ್ಕಾಗಿ ಈ ಪತ್ರ.

ಸಮಾಜವಾದಿ ಕನ್ನಡ ಬದ್ಧತೆ ಎಂದೆ. ಇದರರ್ಥ ಇಷ್ಟೆ: ಸ್ವಾತಂತ್ರ್ಯೋತ್ತರ ಭಾರತದ ಪುನಾರಚನೆಗೆ, ಅದೆಂದೂ ಮತ್ತೆ ಯಾವುದೇ ರೀತಿಯ ಗುಲಾಮಗಿರಿಗೆ ಅಥವಾ ವಸಾಹತು ಶೋಷಣೆಗೆ ಒಳಗಾಗದಂತೆ ರಾಷ್ಟ್ರಜೀವನವನ್ನು ರೂಪಿಸಲು ಭಾರತೀಯ ಸಮಾಜವಾದ ಅತ್ಯಗತ್ಯವೆಂದು ಕಂಡುಕೊಂಡ ಮೂಲಾಧಾರಗಳಲ್ಲಿ ಒಂದು, ಭಾರತೀಯ ಭಾಷಾ ಆಂದೋಲನ. ಇದರ ಬೀಜ, ಸ್ವಾತಂತ್ರ್ಯ ಹೋರಾಟದ ಮೊದಲ ಮಜಲಿನಂತಿರುವ ಅಸಹಕಾರ ಸತ್ಯಾಗ್ರಹದ ಅಂಗವಾಗಿ ಆರಂಭಿಸಲಾಗಿದ್ದ ದೇಶಿ ಶಿಕ್ಷಣ ಆಂದೋಲನದಲ್ಲಿಯೇ ಇದೆ. ಆದರೆ, ಸ್ವಾತಂತ್ರ್ಯೋತ್ತರ ಭಾರತದಲ್ಲಿ ನೆಹರೂ ಸರ್ಕಾರ ಜನ ಸಾಮಾನ್ಯರ ನಿರೀಕ್ಷೆಗೆ ವಿರುದ್ಧವಾಗಿ ದೇಶಾದ್ಯಂತ ಏಕ ಸ್ತರದ ಸಾಮಾನ್ಯ ಶಿಕ್ಷಣವನ್ನು ಜಾರಿಗೆ ತರಲು ವಿಫಲವಾದಾಗ, ಸಮಾಜವಾದಿಗಳು ಸಮಾನ ಶಿಕ್ಷಣದ ಆದರ್ಶದೊಂದಿಗೆ 'ಅಂಗ್ರೇಜಿ ಹಟಾವೋ!' ಚಳುವಳಿಯನ್ನು ಹಮ್ಮಿಕೊಳ್ಳಬೇಕಾಯಿತು. ಈ ಚಳುವಳಿಯ ಹಿಂದೆ ಇಂಗ್ಲಿಷ್ ಭಾಷೆಯ ವಿರೋಧಕ್ಕಿಂತ, ಅದು ಪ್ರತಿನಿಧಿಸುತ್ತಿದ್ದ ಪ್ರತ್ಯೇಕತಾ ಸಾಮಾಜಿಕ ಪ್ರತಿಷ್ಠೆ, ಜನದೂರವಾದ ಆಡಳಿತ ಮತ್ತು ದೇಶೀ ವಿವೇಕವನ್ನು ಹತ್ತಿಕ್ಕುವ ಮೂಲಕ ಬೆಳೆಯುವ ಬಂಡವಾಳಶಾಹಿ ತಂತ್ರಜ್ಞಾನದ ರಾಕ್ಷಸೀ ಪರಿಣಾಮಗಳ ಬಗೆಗಿನ ಆತಂಕವಿತ್ತು.

ಇಂದು ಈ ಪರಿಣಾಮಗಳು ಇಷ್ಟು ವರ್ಷಗಳ ನಂತರ, ಮನುಷ್ಯರನ್ನು ಹಂದಿಗಳನ್ನಾಗಿ ಮಾಡುತ್ತಿರುವ ಜಾಗತೀಕರಣವೆಂಬ ಹೊಸ ಆರ್ಥಿಕ ನೀತಿಯ ಹೆಸರಲ್ಲಿ ಅವತಾರ ತಾಳಿ ನಮ್ಮ ಮುಂದೆ ನಿಂತಿವೆ. ಅವು ಬಡವವ–ಶ್ರೀಮಂತರ ಅಂತರದ ಸ್ಫೋಟಕ ಹೆಚ್ಚಳ,

ಅಶ್ಲೀಲ ಶ್ರೀಮಂತಿಕೆಯ ದ್ವೀಪಗಳು ಉಂಟು ಮಾಡುತ್ತಿರುವ ಆತಂಕಕಾರಿ ಸಾಮಾಜಿಕ ವಿಕ್ಷಿಪ್ತತೆಗಳು, ಒಂದೇ ಸಮನೆ ಹೆಚ್ಚುತ್ತಿರುವ ಹಿಂಸಾಚಾರ ಮತ್ತು ಅಪರಾಧ ವೈವಿಧ್ಯಗಳು ಮತ್ತು ಇವುಗಳಿಗೆ ಸಾಮಾನ್ಯ ಜನತೆ ಪ್ರಜಾಸತ್ತಾತ್ಮಕ ವಿಧಾನಗಳನ್ನು ಧಿಕ್ಕರಿಸಿ ವ್ಯಕ್ತಪಡಿಸುತ್ತಿರುವ ಪ್ರತಿಕ್ರಿಯೆಗಳ ವ್ಯಗ್ರ ರೂಪಗಳಲ್ಲಿ ಕಾಣತೊಡಗಿವೆ. ಒಟ್ಟಾರೆಯಾಗಿ ಇವುಗಳು ಉಂಟು ಮಾಡುತ್ತಿರುವ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಒತ್ತಡಗಳನ್ನು ತಾಳಲಾರದೆ, ಭಾರತೀಯ ಸಮಾಜದ ಅಡಿಗಲ್ಲಿನಂತಿರುವ ರೈತ ಸಮುದಾಯ ಒಂದೇ ಸಮನೆ ಆತ್ಮಹತ್ಯೆಗೆ ಶರಣಾಗುತ್ತಿದೆ. ಈ ಪ್ರಕ್ರಿಯೆಗೆ ತನ್ನದೇ ತರ್ಕವಿದ್ದು, ಅದು ತಂತಾನೇ ಹಿಮ್ಮೊಗವಾಗಲಾರದು ಎಂಬುದನ್ನು ಸದ್ಯದ ಅಭೂತಪೂರ್ವ ಜಾಗತಿಕ ಹಣದುಬ್ಬರದ ಹಿಂದಿನ ಕಾರಣಗಳು ಸೂಚಿಸುತ್ತಿವೆ.

ರಾಷ್ಟ್ರಜೀವನದ ಈ ಅನಾಹುತಕಾರಿ ಸ್ಥಿತ್ಯಂತರದ ಹಿಂದೆ, ಸಾರತಃ ಸಾಂಸ್ಕೃತಿಕವೆಂದು ಕರೆಯಬಹುದಾದ ಒಂದು 'ವಿಸ್ಮೃತಿ' ಇದೆ. ಈ ವಿಸ್ಮೃತಿ ಉಂಟಾಗಿರುವುದು 'ನಮ್ಮತನ'ವೆಂಬ ನಿಜವಾದ ಸಂಪನ್ಮೂಲವನ್ನು ಕಡೆಯಾಗಿ ನೋಡಿ, 'ಪರತನ'ದ ಆಕರ್ಷಣೆಗೆ ಒಳಗಾಗಿದ್ದರಿಂದ. ಈ ನಮ್ಮತನವನ್ನು ಖಂಡಿತ ನಾನು ಒಂದು ಒಣ ಅಭಿಮಾನದ ವಿಷಯವಾಗಿ ಪ್ರಸ್ತುತಪಡಿಸುತ್ತಿಲ್ಲ. ಬದಲಾಗಿ ಅದು, ಈ ನೆಲದೊಡನೆಯ, ನಮ್ಮ ಸಮಾಜದೊಡನೆಯ ನಮ್ಮ ಸಂಬಂಧಗಳ ಸಮತೋಲನ ಶಕ್ತಿಯೇ ಆಗಿದೆ. ಮೇಲೆ ವಿವರಿಸಿದಂತಹ ಇಂದಿನ ಅಭಿವೃದ್ಧಿ ಅನಾಹುತಗಳಿಗೆ ಈ ಸಮತೋಲನ ಶಕ್ತಿಯ ನಾಶವೇ ಕಾರಣವಾಗಿದೆ. ಈ ಸಮತೋಲನ ಶಕ್ತಿ ಹರಳುಗಟ್ಟಿರುವುದು, ಈ ನೆಲ ಹಾಗೂ ಇಲ್ಲಿನ ಜನಗಳ ಸಂಬಂಧಗಳಲ್ಲಿ ವಿನ್ಯಾಸಗೊಂಡಿರುವ ಸ್ಥಳೀಯ ವಿವೇಕದಲ್ಲಿ ಮತ್ತು ಅದು ಅಭಿವ್ಯಕ್ತಿಗೊಂಡಿರುವ ಭಾಷಾ ಮಾತೃಕೆಗಳಲ್ಲಿ. ಹಾಗಾಗಿ ಚರಿತ್ರೆಯ ನಡಿಗೆಯಲ್ಲಿ ನಮ್ಮ 'ಸ್ಥಿತಿ'ಯನ್ನು ಸ್ವಯಂಮರುಕಕ್ಕೊಳಪಡಿಸಿ ಪರಾಕರ್ಷಣೆಯ ಹಪಾಹಪಿಯನ್ನು ಸೃಷ್ಟಿಸದೆ, ಸಮತೋಲಿತ 'ಪ್ರಗತಿ'ಯೆಡೆಗೆ ನಮ್ಮನ್ನು ಒಯ್ಯಬಲ್ಲ ಶಕ್ತಿ ಇರುವುದು ನಮ್ಮ ಭಾಷೆಗೇ. ಅದರ ವ್ಯಾಕರಣ ಮತ್ತು ನುಡಿಗಟ್ಟುಗಳಲ್ಲಿ ಮೂಡುವ ವಿಚಾರ-ವಿವೇಕಗಳಲ್ಲೇ.

ಏಕೆಂದರೆ, ಅದು ನಮ್ಮದೇ ಜೀವ ಕೇಂದ್ರದಿಂದ ಹೊಮ್ಮಿ, ನಮ್ಮನ್ನು ಸರ್ವ ಸಂಕಟಗಳಲ್ಲೂ ಪೊರೆಯಬಲ್ಲ 'ಸಾವಯವ' ಗುಣ ಹೊಂದಿರುತ್ತದೆ. ಅದು, ಹೊರಗಿನ ವಿಚಾರಗಳ, ಪರಾಕರ್ಷಣೆಗಳ ಸುಲಭ ಮರುಳಿಗೆ ಒಳಗಾಗದೆ; ಆದರೆ, ಅವುಗಳ ಎಲ್ಲ 'ಪ್ರಗತಿಪರ' ಚೈತನ್ಯವನ್ನೂ ತನ್ನ ವ್ಯಾಕರಣಕ್ಕೆ, ನುಡಿಗಟ್ಟಿಗೆ ತನ್ನದೇ ರೀತಿಯಲ್ಲಿ ಅಳವಡಿಸಿಕೊಂಡು ತನ್ನದನ್ನೇ ಮಾಡಿಕೊಳ್ಳುವ ಜಾಣ್ಮೆ ಅದರಲ್ಲಿ ಅಂತರ್ಗತವಾಗಿರುತ್ತದೆ. ಹಾಗಾಗಿ ಇಂದಿನ ಜಾಗತೀಕರಣದ ಅನುಕೂಲಗಳನ್ನು ಕ್ರೋಢೀಕರಿಸಿಕೊಳ್ಳಲು ಮತ್ತು ಅದೇ ಸಮಯದಲ್ಲಿ ಅದು ನಮ್ಮಲ್ಲಿ ಸೃಷ್ಟಿಸುವ 'ಹಂದಿತನ'ವನ್ನು ನಿವಾರಿಸಿಕೊಳ್ಳಲು;ಅಂದರೆ, ಆಧುನಿಕ ವಿಜ್ಞಾನ-ತಂತ್ರಜ್ಞಾನಗಳ ಫಲಗಳ ಪರಿಣಾಮಗಳು ನಮ್ಮ ವ್ಯಕ್ತಿತ್ವ ಮತ್ತು ಸಮಾಜದ ಮೇಲೆ ಸಮತೋಲಿತವಾಗಿರುವಂತೆ ನೋಡಿಕೊಳ್ಳಲು ಹಾಗೂ ಆ ಮೂಲಕ ನಮ್ಮನ್ನು ಒಂದು ರಾಷ್ಟ್ರವಾಗಿ, ಸಮಾಜವಾಗಿ ಉಳಿಸಲು ದೇಶ ಭಾಷೆಗಳು-ನಮಗೆ ಕನ್ನಡ-ಒಂದು ಸಂವಹನ ಮಾಧ್ಯಮವಾಗಿ ಮಾತ್ರವಲ್ಲ, ಒಂದು ಸಾಂಸ್ಕೃತಿಕ ಸಾಧನವಾಗಿ ಕೂಡಾ ಅತ್ಯವಶ್ಯಕವಾಗಿದೆ.

ಹೀಗಾಗಿ 'ಚಂದ್ರು' ಅವರೇ, ನೀವು ಈ ಯಾವುದರಿಂದಲೂ ವಿಚಲಿತರಾಗದೆ ಕನ್ನಡದ ಅಭಿವೃದ್ಧಿಯನ್ನು ಒಂದು ಸಮಗ್ರ ಹಾಗೂ ಪರ್ಯಾಯ ರಾಜಕೀಯ ಕಾರ್ಯಕ್ರಮದಂತೆಯೇ ಆಯೋಜಿಸಿ, ಜಾರಿಗೆ ತರಲು ಸಿದ್ಧವಾಗುವುದು ನಿಮ್ಮ ಆದ್ಯ ಕರ್ತವ್ಯವಾಗಿದೆ. ಕನ್ನಡ ಉಳಿದು ಬೆಳೆಯವುದು ಕನ್ನಡಿಗರು ಅದನ್ನು ಸಕಲ ಕ್ಷೇತ್ರಗಳಲ್ಲಿ ಬಳಸಿ ಬೆಳೆಸಿದಾಗ ಮಾತ್ರ. ಅದಕ್ಕಾಗಿ ಮುಖ್ಯವಾಗಿ ಶಿಕ್ಷಣ, ಆಡಳಿತ ಮತ್ತು ಉತ್ಪಾದನೆ–ಉದ್ಯಮ ಕ್ಷೇತ್ರಗಳಲ್ಲಿ ಕನ್ನಡದ 'ಅಭಿವೃದ್ಧಿ'ಯನ್ನು ಸಾಧಿಸುವುದರ ಕಡೆ ತೀವ್ರ ಗಮನ ಹರಿಸಬೇಕಿದೆ. ಅದಕ್ಕಾಗಿ ನೀವು ಆದ್ಯತೆಯ ಮೇಲೆ ಮಾಡಬೇಕಾದ ಕೆಲಸಗಳೆಂದರೆ:

೧. ರಾಜ್ಯಾದ್ಯಂತ, ವಿಶೇಷವಾಗಿ ಬೆಂಗಳೂರು ನಗರದಲ್ಲಿ ಸರ್ಕಾರಿ ಕನ್ನಡ ಶಾಲೆಗಳನ್ನು ಶೀಘ್ರವಾಗಿ ಸುಧಾರಿಸಬೇಕಿದೆ. ಅವು ಮೂಲಭೂತ ಸೌಕರ್ಯಗಳಲ್ಲಾಗಲೀ, ಬೋಧನೆಯ ಗುಣ ಮಟ್ಟದಲ್ಲಾಗಲೀ, ಶಿಸ್ತು ಪಾಲನೆಯಲ್ಲಾಗಲೀ, ಯಾವುದೇ ಖಾಸಗಿ ಶಾಲೆಗೆ ಕಡಿಮೆಯಿಲ್ಲದಂತೆ ನೋಡಿಕೊಳ್ಳುವ ವ್ಯವಸ್ಥೆಯನ್ನು ಒಂದು ಕಾಲಬದ್ಧ ಕಾರ್ಯಕ್ರಮವಾಗಿ ಜಾರಿಗೆ ತರುವಂತೆ ಸರ್ಕಾರದ ಶಾಲಾ ಶಿಕ್ಷಣ ಸಚಿವರ ಮನವೊಲಿಸಬೇಕಿದೆ. ಆ ಮೂಲಕ ಮತ್ತೆ ಎಲ್ಲ ವರ್ಗಗಳ ಮಕ್ಕಳು ಕನ್ನಡ ಶಾಲೆಗೆ ಬರುವಂತೆ ಮಾಡಬೇಕಿದೆ.

ಇದರ ಜೊತೆಗೇ ಬರೀ ಅನ್ಯಭಾಷಿಕರ ವಿರುದ್ಧವಷ್ಟೇ ಹೋರಾಡುತ್ತಿರುವಂತೆ ತೋರುವ ಕನ್ನಡ ಚಳುವಳಿಯ ಎಲ್ಲ ಸಂಘಟನೆಗಳ ಸಭೆ ಕರೆದು, ಇಂದು ಹೇಗೆ ಕನ್ನಡ ಶಾಲೆಗಳ ಪುನರುದ್ಧಾರದ ಚಳುವಳಿಯ ಮೂಲಕ ಮಾತ್ರ ಕನ್ನಡ ಉಳಿಯಬಲ್ಲುದೆಂದು, ಅಗತ್ಯವಿದ್ದರೆ ಅವರಿಗೆ ಒಂದು ಕಾರ್ಯಾಗಾರದ ಮೂಲಕ ವಿವರಿಸಿಬೇಕು. ಹಾಗೂ ಅವರನ್ನು ಕನ್ನಡ ಮಾಧ್ಯಮ ಶಾಲಾ ಆಂದೋಲನದಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕು.

೨. ಕನ್ನಡ ಶಿಕ್ಷಣ ಮಾಧ್ಯಮ ಕುರಿತಂತೆ ಹೈಕೋರ್ಟಿನಲ್ಲಿರುವ ತಡೆಯಾಜ್ಞೆಗೆ ಸಂಬಂಧಿಸಿದಂತೆ ವಾದ–ಪ್ರತಿವಾದಗಳು ಮುಗಿದು ಎರಡು ವರ್ಷಗಳಾಗುತ್ತಿದ್ದರೂ, ತೀರ್ಪು ಹೊರಬಿದ್ದಿಲ್ಲ! ತೀರ್ಪು ಕೂಡಲೇ ಹೊರಬೀಳುವಂತೆ ಕ್ರಮ ಕೈಗೊಳ್ಳಬೇಕು. ಆ ತೀರ್ಪಿನ ಪ್ರಕಾರ ಶಾಲಾ ಶಿಕ್ಷಣ ಮಾಧ್ಯಮ ನೀತಿಯನ್ನು ಅಸಂದಿಗ್ಧವಾಗಿ ರಾಜ್ಯಾದ್ಯಂತ ಜಾರಿಗೆ ತರಲು ಮತ್ತು ಯಾವುದೇ ಶಿಕ್ಷಣ ಸಂಸ್ಥೆ ಕನ್ನಡ ಶಿಕ್ಷಣದ ವ್ಯಾಪ್ತಿಯಿಂದ ತಪ್ಪಿಸಿಕೊಳ್ಳಲೆಂದೇ ಕೇಂದ್ರೀಯ ಶಿಕ್ಷಣ ಪಠ್ಯಕ್ರಮವನ್ನು ಆಯ್ದುಕೊಳ್ಳಲು ಅವಕಾಶವಿರದಂತೆ, ಕಾನೂನು ತಿದ್ದುಪಡಿಗೆ ಶಿಫಾರ್ಸು ಮಾಡಬೇಕು.

ಹಾಗೇ ಭಾಷಾ ಅಲ್ಪಸಂಖ್ಯಾತರ ಶಾಲೆಗಳ ಹೊರತಾಗಿ, ರಾಜ್ಯದ ಎಲ್ಲ ಶಾಲೆಗಳಲ್ಲಿ ಕನಿಷ್ಠ ಏಳನೇ ತರಗತಿಯವರೆಗಾದರೂ ಕನ್ನಡ ಮಾಧ್ಯಮ ಕಡ್ಡಾಯವಾಗಿರುವಂತೆ ಮಾಡುವ ನೀತಿ ರೂಪಿಸಿ, ಹಂತಾನುಹಂತವಾಗಿ ಇದನ್ನು ಜಾರಿಗೆ ತರುವಂತೆ ರಾಜ್ಯ ಸರ್ಕಾರದ ಮನವೊಲಿಸಬೇಕು. ಅಲ್ಲಿಯವರೆಗೆ ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಸುವ ಪದ್ಧತಿಯನ್ನು ಅಮಾನತ್ತಿನಲ್ಲಿಟ್ಟು, ಮೂರನೆಯ ತರಗತಿಯಿಂದ ಅದನ್ನು, ಸಂವಹನ ಇಂಗ್ಲಿಷ್ ಕಲಿಸುವಲ್ಲಿ ವಿಶೇಷ ಪರಿಣತಿಯುಳ್ಳ ಸಿಬ್ಬಂದಿಯ ನೇಮಕದ ಮೂಲಕ ಆರಂಭಿಸಬೇಕು.

ಅಂದರೆ, ಯಾವುದೇ ಕಾರಣಕ್ಕೂ ಕನ್ನಡದ ಮಕ್ಕಳಿಗೆ ಶಾಲೆಗಳಲ್ಲಿ ಇಂಗ್ಲಿಷನ್ನು ಕನ್ನಡದ ಸಮಾನಾಂತರ ಭಾಷೆಯಾಗಿ ಕಲಿಸುವ ವ್ಯವಸ್ಥೆ ಇರಕೂಡದು. ಇಂಗ್ಲಿಷ್ ಏನಿದ್ದರೂ

ಕನ್ನಡಕ್ಕೆ ಪೂರಕ ಭಾಷೆಯಾಗಿ ಮಾತ್ರ ಕಲಿಸಲ್ಪಡಬೇಕು. ಇದು ರಾಜ್ಯ ಸರ್ಕಾರದ ಭಾಷಾ ನೀತಿಯ ಅವಿಭಾಜ್ಯ ಅಂಗವಾಗಿರುಂತೆ ಕನ್ನಡ ಅಭಿವೃದ್ಧಿ ಪ್ರಾಧಿಕಾರ ನೋಡಿಕೊಳ್ಳಬೇಕು.

೩. ಇಂದು ಎಲ್ಲ ಕ್ಷೇತ್ರಗಳಲ್ಲಿ ಗಣಕಯಂತ್ರದ ಬಳಕೆ ಅನಿವಾರ್ಯವೂ, ಉಪಯುಕ್ತವೂ ಆಗಿ ಕಂಡುಬಂದಿರುವುದರಿಂದ, ಗಣಕ ಯಂತ್ರ ವಿದ್ಯೆ ನಿರ್ವಹಿಸಲು ಇಂಗ್ಲಿಷ್ ಜ್ಞಾನ ಅಗತ್ಯವಿಲ್ಲದಂತಹ ಕನ್ನಡ ತಂತ್ರಾಂಶದ ಅಭಿವೃದ್ಧಿಯ ಕಡೆ ತುರ್ತು ಗಮನ ಹರಿಸಬೇಕಿದೆ. ಕನ್ನಡ ಇಂದು–ಜಾಗತೀಕರಣದ ದಿನಗಳಲ್ಲಿ–ಹಿಂದುಳಿಯಲು ಇಂತಹ ತಂತ್ರಾಂಶ ಇಲ್ಲದಿರುವುದೇ ಒಂದು ಪ್ರಮುಖ ಕಾರಣವಾಗಿದೆ. ಇದನ್ನು ಆದಷ್ಟು ಬೇಗ ಅಭಿವೃದ್ಧಿಗೊಳಿಸಿ ಮತ್ತು ಸರ್ಕಾರದ ಗಣಕ ಯಂತ್ರ ಜಾಲದಲ್ಲಿ ಅಳವಡಿಸುವ ಮೂಲಕ ಜನಪ್ರಿಯಗೊಳಿಸಬೇಕಿದೆ. ನಂತರ ಅದು ತಂತಾನೇ ಸ್ಥಳೀಯ ವಾಣಿಜ್ಯ–ವ್ಯವಹಾರ ನಿರ್ವಹಣೆಗೂ ಹರಡುತ್ತದೆ. ಜಗತ್ತಿನ ತಂತ್ರಾಂಶ ಅಭಿವೃದ್ಧಿಯ ರಾಜಧಾನಿಯೆನಿಸಿರುವ ಕನ್ನಡ ನಾಡಿನ ರಾಜಧಾನಿ ಬೆಂಗಳೂರಿನಲ್ಲಿ ಇದು ಕಷ್ಟದ ಕೆಲಸವಾಗಲಾರದು. ಸಂಕಲ್ಪ ಮತ್ತು ಹಠ ಬೇಕಷ್ಟೆ.

೪. ಆಡಳಿತ ಭಾಷೆಯಾಗಿ ಕನ್ನಡ ಜಾರಿಯ ಸಮಸ್ಯೆ ಇರುವುದು ವಿಧಾನ ಸೌಧದ ಮಟ್ಟದಲ್ಲಷ್ಟೆ. ಬಾಯಿಬಿಟ್ಟರೆ ಇಂಗ್ಲಿಷ್ ಮಾತನಾಡುವ ಮುಖ್ಯಮಂತ್ರಿ ಅಥವಾ ಮಂತ್ರಿಗಳು ಸದ್ಯದ ಸಚಿವ ಸಂಪುಟದಲ್ಲಿ ಇಲ್ಲವಾದ್ದರಿಂದ, ಈ ಸಮಸ್ಯೆಯನ್ನು ಪರಿಹರಿಸಲು ಅಗತ್ಯವಾದ ವಾತಾವರಣ ನಿಮ್ಮ ಸರ್ಕಾರದಲ್ಲಿದೆ. ಆದುದರಿಂದ ಆಡಳಿತ ಭಾಷಾ ನೀತಿಯನ್ನು ಉಲ್ಲಂಘಿಸುವ ಅಧಿಕಾರಿಗಳಿಗೆ ಬರೀ ಎಚ್ಚರಿಕೆಯಲ್ಲ, ಶಿಕ್ಷೆಯನ್ನೂ ನೀಡುವ ಅಧಿಕಾರವನ್ನು ಪ್ರಾಧಿಕಾರಕ್ಕೆ ಒದಗಿಸಿಕೊಳ್ಳುವ ಕಡೆ ನೀವು ಕ್ರಮ ಕೈಗೊಳ್ಳಬೇಕಾದ ಕಾಲವೀಗ ಬಂದಿದೆ. ಕಾನೂನು ಮಂತ್ರಿ ಸುರೇಶ್ ಕುಮಾರ್ ಅವರು ಈಗಾಗಲೇ ನ್ಯಾಯಾಂಗದ ಎಲ್ಲ ಸ್ತರಗಳಲ್ಲಿ ಕನ್ನಡ ಜಾರಿಗೆ ತರಲು ಸಿದ್ಧತೆ ನಡೆಸುತ್ತಿರುವುದರಿಂದ, ಅವರ ಕನ್ನಡ ಪ್ರೀತಿಯನ್ನು ಬಳಸಿಕೊಂಡು ನೀವು ಈ ಕೆಲಸ ಮಾಡಬಹುದಾಗಿದೆ. ನಿಮ್ಮ ಪಕ್ಷ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ವಿಶೇಷವಾಗಿ ಪ್ರಸ್ತಾಪಿಸಿರುವ ಕನ್ನಡ ಬದ್ಧತೆಯ ಸ್ಫೂರ್ತಿಯಿಂದ ಈ ಕೆಲಸವನ್ನು ಸರ್ಕಾರದಿಂದ ಆಗುಮಾಡಿಸಿಕೊಳ್ಳುವುದು ನಿಮ್ಮ ಜವಾಬ್ದಾರಿಯಾಗಿದೆ.

ಇದರ ಜೊತೆಗೇ ಆಡಳಿತ ಭಾಷೆಯಾಗಿ ಕನ್ನಡವನ್ನು ಇನ್ನಷ್ಟು ತಿಳಿಗೊಳಿಸಿ, ಜನ ಸಾಮಾನ್ಯರಿಗೂ ಸುಲಭವಾಗಿ ಅರ್ಥವಾಗುವಂತೆ ಸರಳ–ಸಾಮಾನ್ಯಗೊಳಿಸುವ ಕಡೆ ಕ್ರಮ ಕೈಗೊಳ್ಳಬೇಕಿದೆ.

೫. ಇನ್ನು ಮುಖ್ಯವಾಗಿ, ಕೇಂದ್ರ–ರಾಜ್ಯ ಸಂಬಂಧಗಳ ಪುನಾರಚನೆ ಕಡೆ ಕೂಡಾ ನೀವು ಗಮನ ಹರಿಸಬೇಕಿದೆ. ಏಕೆಂದರೆ, ರಾಜ್ಯಗಳು ದುರ್ಬಲವಾದಷ್ಟೂ ಆಯಾ ರಾಜ್ಯಗಳ ಭಾಷೆಗಳು ದುರ್ಬಲಗೊಳ್ಳುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಹೆಸರು ಒಕ್ಕೂಟವೆಂತಿದ್ದರೂ, ಭಾರತವು ಕೇಂದ್ರ–ಬಲಿಷ್ಠ ರಾಷ್ಟ್ರವಾಗುತ್ತಿದೆ. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಅನೇಕ ಕಾನೂನು ತಿದ್ದುಪಡಿಗಳ ಮೂಲಕ ರಾಜ್ಯಗಳ ಹಲವು ಸ್ವಯಮಾಧಿಕಾರಗಳನ್ನು ಮೊಟಕುಗೊಳಿಸಲಾಗಿದೆ. ನಮ್ಮ ಆಡಳಿತ ನಡೆಸಲು, ನಮ್ಮ ಜಗಳಗಳನ್ನು ತೀರ್ಮಾನಿಸಲು, ಬೇರೆ ರಾಜ್ಯಗಳ ಮತ್ತು ಬೇರೆ ಭಾಷೆಗಳ ರಾಜ್ಯಪಾಲರಾಗಲೀ, ಅಧಿಕಾರಿಗಳಾಗಲೀ, ನ್ಯಾಯಾಧೀಶರಾಗಲೀ ಏಕೆ

ಬೇಕು? ಕೇಂದ್ರದ ಮೇಲುಗೈಯೇ ರಾಷ್ಟ್ರೀಯತೆ; ಸ್ಥಳೀಯತೆ ಎಂದರೆ ಸಂಕುಚಿತತೆ ಎಂಬಂತಾಗಿದೆ. ಲಾಭಕೋರತನಕ್ಕಾಗಿ ಸದಾ ವಲಸೆಯಲ್ಲಿರುವ ವ್ಯಾಪಾರೋದ್ಯಮಿಗಳ ಹಿತ ರಕ್ಷಣೆಗಾಗಿ ರಾಷ್ಟ್ರೀಯತೆಯ ಹೆಸರಿನಲ್ಲಿ, ಸ್ಥಳಿಯ ಜನರ ಭಾಷೆ, ಸಂಸ್ಕೃತಿ ಮತ್ತು ಉದ್ಯೋಗ–ಅಭಿವೃದ್ಧಿಯ ಕೆಲಸಗಳಿಗೆ ತಡೆಯೊಡ್ಡುವಂತಹ ಕಾನೂನುಗಳನ್ನು ಜಾರಿಗೊಳಿಸಲಾಗಿದೆ. ಶಾಲಾ ಶಿಕ್ಷಣ ಮಾಧ್ಯಮದ ಪ್ರಶ್ನೆ, ಸರೋಜಿನಿ ಮಹಿಷಿ ವರದಿಯ ಅನುಷ್ಠಾನದ ಸಮಸ್ಯೆ ಇದಕ್ಕೆ ಎರಡು ಜ್ವಲಂತ ಉದಾಹರಣೆಗಳಷ್ಟೆ. ಇದು ಸ್ವಾತಂತ್ರ್ಯ ಹೋರಾಟದಲ್ಲಿ ಮೂಡಿದ ರಾಷ್ಟ್ರೀಯತೆಯ ವಿಕ್ಷಿಪ್ತ ರೂಪವಾಗಿದೆ.

ಭಾಷಾ ರಾಷ್ಟ್ರೀಯತೆಗಳೇ ಭಾರತದ ನಿಜವಾದ ರಾಷ್ಟ್ರೀಯತೆಗಳಾಗಿದ್ದು, ಸ್ವಾತಂತ್ರ್ಯ ಹೋರಾಟ ಇವನ್ನೆಲ್ಲ ಜೋಡಿಸಿ, ಆ ತಂತ್ರವನ್ನಷ್ಟೆ ರಾಷ್ಟ್ರವೆಂದು ಕರೆಯಿತು. ಆದರಿಂದು ತಂತ್ರವೇ ರಾಷ್ಟ್ರವಾಗಿ, ನೆಲ ಮತ್ತು ಜನಗಳನ್ನೊಳಗೊಂಡ ರಾಷ್ಟ್ರೀಯತೆಗಳನ್ನು 'ಇಂತೀ ತಮ್ಮ ವಿಧೇಯ' ಸ್ಥಾನಕ್ಕೆ ಇಳಿಸಲಾಗಿದೆ. ಇದರ ವಿರುದ್ಧ ಅಸಮಧಾನಗಳು ಅನೇಕ ಬಾರಿ ಅನೇಕ ರೂಪಗಳಲ್ಲಿ ಭುಗಿಲೆದ್ದಿವೆ. ಆದರೆ ರಾಷ್ಟ್ರೀಯತೆಯ ಹೆಸರಿನಲ್ಲಿ ಅವನ್ನು ದಮನ ಮಾಡಲಾಗಿದೆ. ಆದರೀಗ ಅದನ್ನು ರಾಷ್ಟ್ರವನ್ನು ಬಲಪಡಿಸುವ ಭಾವನೆಯೊಂದಿಗೆ, ಪ್ರಜಾಸತ್ತಾತ್ಮಕ ರೀತಿಯಲ್ಲೇ ಬಗೆಹರಿಸಿಕೊಳ್ಳುವ ಪ್ರಯತ್ನಗಳನ್ನು ಮಾಡಬೇಕಿದೆ.

ಆಶ್ಚರ್ಯವೆಂದರೆ ಇದರ ಮೊದಲ ಪ್ರಯತ್ನ, ರಾಷ್ಟ್ರೀಯತೆಯ ಪರಿಕಲ್ಪನೆಯನ್ನು ಅಸಂಗತ ಮಟ್ಟಕ್ಕೆ ಒಯ್ದಿರುವ ನಿಮ್ಮ ಪಕ್ಷದ ಮುಖ್ಯಮಂತ್ರಿಯೊಬ್ಬರಿಂದಲೇ ಆರಂಭವಾಗಿದೆ! ನಿಮ್ಮ ಪಕ್ಷದ ಕಾರ್ಯಕರ್ತರ ಆರಾಧ್ಯ ದೈವವೆನಿಸಿರುವ ನರೇಂದ್ರ ಮೋದಿ, ಕೇಂದ್ರದ ಆರ್ಥಿಕತೆಯಿಂದ ಗುಜರಾತ್ ರಾಜ್ಯದ ಆರ್ಥಿಕತೆಯ ವಿಮೋಚನೆ ಬಯಸಿದ್ದಾರೆ. ಈ ಬಯಕೆಯನ್ನು ವ್ಯಕ್ತಪಡಿಸಿದ್ದಕ್ಕಾಗಿ ಅಫ್ಜಲ್ ಗುರುವಿನೊಡನೆ ನೇಣು ಏರಲೂ ಅವರು ಸಿದ್ಧವಾಗಿದ್ದಾರೆ! ಇನ್ನು ಈ ವಿಷಯದಲ್ಲಿ ಎಲ್ಲರಿಗೂ ಮುಂದಿರುವ ತಮಿಳ್ನಾಡಂತೂ ಈಗಾಗಲೇ ರಾಜ್ಯ ಸ್ವಾಯತ್ತತೆಗಾಗಿ ಸಂವಿಧಾನ ಪರಿಷ್ಕಾರಕ್ಕಾಗಿ ಒತ್ತಾಯಿಸುವ ಬೇಡಿಕೆಯನ್ನು ತನ್ನ ರಾಜ್ಯಪಾಲರ ಭಾಷಣದ ಮೂಲಕವೇ ಮಂಡಿಸಿ, ಶಾಸನ ಸಭೆಯ ಒಪ್ಪಿಗೆಯನ್ನೂ ಪಡೆದಿದೆ. ಇಂತಹ ಸಂದರ್ಭದಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರವೂ ಕನ್ನಡ ಭಾಷೆ, ಸಂಸ್ಕೃತಿ ಮತ್ತು ಜನರ ಅಭಿವೃದ್ಧಿಗೆ ಭಂಗ ತರುವಂತಹ ಕೇಂದ್ರ–ರಾಜ್ಯ ಸಂಬಂಧದ ನೆಲೆಗಳ ಬಗ್ಗೆ ಅಧ್ಯಯನ ನಡೆಸಲು ಸಂವಿಧಾನ ತಜ್ಞರ ಒಂದು ತಂಡ ರಚಿಸಿ, ಸೂಕ್ತ ಶಿಫಾರ್ಸುಗಳನ್ನು ಸರ್ಕಾರಕ್ಕೆ ಸಲ್ಲಿಸುವ ವ್ಯವಸ್ಥೆ ಮಾಡಬೇಕು. ಇದನ್ನು, ಎಂದೋ ಮುಂದೊಂದು ದಿನ ಆಗಬೇಕಾದ ಕೆಲಸದ ಆರಂಭವನ್ನಷ್ಟೆ ನಾವು ಮಾಡುತ್ತಿದ್ದೇವೆ ಎಂಬ ತಿಳುವಳಿಕೆಯೊಂದಿಗೆ ಮಾಡಬೇಕು.

ಇದೆಲ್ಲ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯವ್ಯಾಪ್ತಿಗೆ ಬರುವುದೋ ಇಲ್ಲವೋ ನನಗೆ ತಿಳಿಯದು. ಆದರೆ ಕನ್ನಡದ ನಿಜವಾದ ಅಭಿವೃದ್ಧಿಗೆ ಇವುಗಳೇ ಮೂಲಭೂತ ಆಧಾರಗಳಾಗಿರುವುದರಿಂದ, ಈ ಕೆಲಸಗಳನ್ನು ನಿಮ್ಮ ಸರ್ಕಾರದ ಸಂಬಂಧಪಟ್ಟ ಯಾವುದೇ ಇಲಾಖೆಯಿಂದಲಾದರೂ ಮಾಡಿಸುವ ಜವಾಬ್ದಾರಿ ನಿಮ್ಮದಾಗಿರುತ್ತದೆ. ಇಂತಹ ಆಧಾರಭೂತ ಕೆಲಸಗಳನ್ನು ಮಾಡದೆ, ಸುಮ್ಮನೆ ಟಿಎ, ಡಿಎ ಲೆಕ್ಕದಲ್ಲಿ ಊರೂರು ತಿರುಗುತ್ತಾ, ಸರ್ಕಾರಿ

ಕಛೇರಿಗಳ ಕಡತಗಳನ್ನು ತಡಕುತ್ತಾ, ಅಸಂಬದ್ಧ ವಿಚಾರ ಗೋಷ್ಠಿಗಳನ್ನೋ ಉತ್ಸವಗಳನ್ನೋ ಆಯೋಜಿಸುತ್ತಾ, ನಿಷ್ಪ್ರಯೋಜಕ ಎಚ್ಚರಿಕೆಯ ಸುತ್ತೋಲೆಗಳನ್ನು ಹೊರಡಿಸುವ ಹಾಸ್ಯಾಸ್ಪದ ಕೆಲಸಗಳನ್ನು ಮಾಡುತ್ತಾ, ಆದರೆ ಸಾರ್ವಜನಿಕ ಭಾಷಣಗಳಲ್ಲಿ ವೀರಾವೇಶದ ಮಾತುಗಳನ್ನಾಡುತ್ತಾ ಕಾಲ ಕಳೆದು, ಕೊನೆಗೆ ಅಧಿಕಾರ ಬಿಡಬೇಕಾದ ಸಂದರ್ಭದಲ್ಲಿ, ಅಧಿಕಾರಗಳೇ ಇಲ್ಲದ ಪ್ರಾಧಿಕಾರವಿದು–ನಿಜವಾದ ಅರ್ಥದಲ್ಲಿ ಏನು ಮಾಡಲೂ ಸಾಧ್ಯವಿಲ್ಲವೆಂದು; ಮೊದಲೇ ಗೊತ್ತಿದ್ದ ಸತ್ಯವನ್ನು ಕೊನೆಯಲ್ಲಿ ಹೇಳುವ ಆತ್ಮದ್ರೋಹಿ ಕೆಲಸ ಮಾಡುವ ಬದಲು, ಸ್ಪಷ್ಟ ಗುರಿ ಮತ್ತು ಕಾರ್ಯಕ್ರಮಗಳೊಂದಿಗೆ ಸರ್ಕಾರದ ಮೇಲೆ ಒತ್ತಡ ಹೇರಿ ನಿಜವಾಗಿ ಕನ್ನಡದ ಕೆಲಸ ಮಾಡಲು ಪ್ರಯತ್ನಿಸಬೇಕು. ಇದು ಸಾಧ್ಯವಿಲ್ಲ ಎನ್ನಿಸುವುದಾದರೆ, ಅಧಿಕಾರ ಬಿಸಾಕಿ ಹೊರಗೆ ಬಂದು, ಅಲ್ಲಿ ಸಾಧ್ಯವಾಗುವ ಕನ್ನಡದ ಕೆಲಸವನ್ನು ಆರಂಭಿಸಬೇಕು.

ಇದು ಸಾಧ್ಯವೇ ನಿಮಗೆ 'ಚಂದ್ರು' ಅವರೇ?

ವಿಶ್ವಾಸದ

ಡಿ.ಎಸ್.ನಾಗಭೂಷಣ

(ಜುಲೈ ೧೧, ೨೦೦೮, 'ವಿಕ್ರಾಂತ ಕರ್ನಾಟಕ')

೧೭. ಕನ್ನಡ ಮಾಧ್ಯಮದ ಪ್ರಶ್ನೆ: ಆಧಾರ ರಹಿತ ಪ್ರಶ್ನೆಗಳು, ಉದ್ದೇಶಪೂರ್ವಕ ಗೊಂದಲಗಳು....

ಮೊನ್ನೆ ಶಿವಮೊಗ್ಗದಲ್ಲಿ ಹಿರಿಯ ಸಾಹಿತಿ ಹಾಗೂ ಸುಪ್ರಸಿದ್ಧ ನುಡಿ ಸೇವಕರೆನಿಸಿರುವ ಡಾ॥ ನಾ.ಮೊಗಸಾಲೆಯವರು ಪ್ರಶಸ್ತಿಯೊಂದನ್ನು ಸ್ವೀಕರಿಸಲು ಬಂದಿದ್ದಾಗ ಮಾತನಾಡುತ್ತಾ, ಕನ್ನಡ ಭಾಷೆಯ ಇಂದಿನ ಸ್ಥಿತಿ–ಗತಿಗಳ ಸಂದರ್ಭದಲ್ಲಿ ಕನ್ನಡ ಲೇಖಕನಾಗಿ ಪ್ರಶಸ್ತಿ ಸ್ವೀಕರಿಸುವಾಗ ಎದುರಿಸಬೇಕಾದ ಮುಜಗರಗಳು ಮತ್ತು ಸಂಕಟಗಳನ್ನು ವಿವರಿಸಿದರು. ಹಲವು ರಾಷ್ಟ್ರಪ್ರಶಸ್ತಿ ವಿಜೇತ ಶಿಕ್ಷಕರನ್ನೊಳಗೊಂಡ ಒಂದು ಮಾದರಿ ಶಾಲೆಯಾಗಿ ಬೆಳೆದು ರಾಜ್ಯಾದ್ಯಂತ ಹೆಸರು ಮಾಡಿದ್ದ ಬೇಲಾಡಿಯ ಕನ್ನಡ ಶಾಲೆ ಇಂದು ವಿದ್ಯಾರ್ಥಿಗಳಿಲ್ಲದೆ ಮುಚ್ಚುವ ಪರಿಸ್ಥಿತಿ ಉಂಟಾಗಿರುವುದನ್ನು ಅವರು ನಮ್ಮ ಗಮನಕ್ಕೆ ತಂದರು. ಹಾಗೇ ತಮ್ಮ ಸುತ್ತಮುತ್ತಲಿನ ಊರುಗಳಲ್ಲಿ ಸಹ ಅನೇಕ ಕನ್ನಡ ಶಾಲೆಗಳು ಇದೇ ಕಾರಣದಿಂದಾಗಿ ಮುಚ್ಚಿ ಹೋದ ಮತ್ತು ಹೋಗುತ್ತಿರುವ ಉದಾಹರಣೆಗಳನ್ನು ನೀಡಿದರು. ಇದು ದ. ಕನ್ನಡ ಜಿಲ್ಲೆಗಷ್ಟೇ ಸೀಮಿತವಾದ ಬೆಳವಣಿಗೆಯಲ್ಲ ಎಂಬುದನ್ನು ನಾವು ಬಲ್ಲೆವು. ಆದರೆ ನಮ್ಮ ಬುದ್ಧಿಜೀವಿಗಳ ಒಂದು ವರ್ಗ, ಕನ್ನಡಕ್ಕೆ ಕುತ್ತೇನೂ ಇಲ್ಲ; ಇದು ಬೆಂಗಳೂರಿನ ಭಾಷಾ ಮಡಿವಂತರ ಸಮಸ್ಯೆಯಷ್ಟೇ ಎಂದೇ ಇನ್ನೂ ವಾದಿಸುತ್ತಿದ್ದಾರೆ. ಕನ್ನಡದ ಅಳಿವು–ಉಳಿವಿನ ಬಗ್ಗೆ ಆತಂಕದ ಮಾತಾಡುವವರನ್ನೆಲ್ಲ ಭಾಷಾ ಸಂಕುಚಿತವಾದಿಗಳೆಂದೋ, ಭಾಷೆಯೊಂದು ಬೆಳೆಯುವ ಸಂಕೀರ್ಣ ರೀತಿ–ನೀತಿಗಳ ಜ್ಞಾನವಿಲ್ಲದವರೆಂದೂ ಜರಿಯುತ್ತಿದ್ದಾರೆ. ಕನ್ನಡ ಭಾಷೆ ಆಧುನಿಕ ಕಾಲದ ಸವಾಲುಗಳಿಗೆ ತಕ್ಕಂತೆ ತನ್ನ ಬಳಕೆಯ ರೂಪಗಳನ್ನು ಬದಲಾಯಿಸಿಕೊಳ್ಳುತ್ತಿದೆಯಷ್ಟೇ; ನಾಶವಾಗುತ್ತಿಲ್ಲ ಎಂದು, ಕನ್ನಡದ ಇಂಗ್ಲೀಷೀಕರಣ ಮತ್ತು (ಎಫ್.ಎಂ. ರೇಡಿಯೋ ಮತ್ತು ಜನಪ್ರಿಯ ಟಿ.ವಿ.ವಾಹಿನಿಗಳ ಮೂಲಕ ನಡೆಯುತ್ತಿರುವ) ನಗರೀಕರಣದ ಉದಾಹರಣೆಗಳನ್ನು ನೀಡುತ್ತಾ, ತಮ್ಮ ವಾದವನ್ನು ಸಮರ್ಥಿಸಿಕೊಳ್ಳುತ್ತಿದ್ದಾರೆ. ಅಷ್ಟೇ ಅಲ್ಲ, ಕನ್ನಡವನ್ನು ಸವಾಲುಗಳ ಈ ಸಮಯದಲ್ಲಿ ಉಳಿಸುವ ಮತ್ತು ಬಳಸುವ ಏಕೈಕ ವಿಧಾನವಾದ; ಅದನ್ನು ವಿವಿಧ ಉದ್ದೇಶಗಳಿಗಾಗಿ ಬಳಸುವ ಕೌಶಲ್ಯಗಳನ್ನು ಪರಿಚಯಿಸುವ, ಕಲಿಸುವ ಶಿಕ್ಷಣ ಕ್ಷೇತ್ರದಲ್ಲಿ ಅದರ ಸ್ಥಾನಮಾನಗಳಿಗೆ ಆಗುತ್ತಿರುವ ಆಘಾತಗಳ ಬಗ್ಗೆ ಇವರಿಗೆ ಚಿಂತೆಯೇ ಇಲ್ಲವಾಗಿದೆ. ಪ್ರಾಥಮಿಕ ಶಾಲಾ ಮಟ್ಟದಲ್ಲಾದರೂ ಕನ್ನಡದ ಮಕ್ಕಳಿಗೆ ಕನ್ನಡ ಮಾಧ್ಯಮವನ್ನು ಕಡ್ಡಾಯ ಮಾಡುವ ಸರ್ಕಾರದ ಪ್ರಯತ್ನಕ್ಕೆ ಇವರಾರ ಬೆಂಬಲವೂ ಇಲ್ಲ. ಬದಲಾಗಿ ಅದನ್ನು ಅಸಾಧ್ಯ, ಅಪ್ರಸ್ತುತ, ಪ್ರಗತಿ ವಿರೋಧಿ ಎಂದೆಲ್ಲ ಅಪಪ್ರಚಾರ ಮಾಡಲಾಗುತ್ತಿದೆ.

ಕನ್ನಡ, ಅದರ ಜನರ ಸಾಂದರ್ಭಿಕ 'ಚಪಲ'ಗಳಿಗನುಗುಣವಾಗಿ ಯಾವುದೇ ರೂಪಗಳನ್ನು ತಳೆಯಲಿ, ಆದರೆ ಅದರ ಮೂಲಕ ಆ ಭಾಷೆಯ ವಿಶಿಷ್ಟ ರಾಚನಿಕತೆ, ಶಬ್ದ ಸಂಪತ್ತು ಮತ್ತು ಸೌಂದರ್ಯಗಳಿಗೆ ಶಾಶ್ವತವಾಗಿ ಊನವುಂಟಾಗುವಂತಾದರೆ, ಒಂದು ಭಾಷೆಗೇ ವಿಶಿಷ್ಟವಾದ ಒಂದು ಜೀವನ ಕ್ರಮ ಹಾಗೂ ಅದರ ಸುತ್ತ ವಿಕಾಸವಾಗಿರುವ ಹಲವು ನೆಲೆಗಳ ಜ್ಞಾನಕೋಶಗಳೂ ಹಾಳಾದಂತೆ–ಒಟ್ಟಾರೆಯಾಗಿ ಒಂದು ಸಂಸ್ಕೃತಿಯೇ ಧೂಳೀಪಟವಾದಂತೆ– ಎಂಬ ಮಾನವಶಾಸ್ತ್ರೀಯ ಸತ್ಯಕ್ಕೆ ನಾವು ಪ್ರಜ್ಞಾಪೂರ್ವಕ ದ್ರೋಹ ಬಗೆದಂತೆಯೇ ಸರಿ. ಹಾಗಾಗಿ, ಕನ್ನಡವನ್ನು ಕನ್ನಡಿಗರಿಗಾಗಿ (ಮತ್ತು ಉಳಿದ ಪ್ರಪಂಚಕ್ಕಾಗಿ ಕೂಡಾ) ಅದರೆಲ್ಲ ಆಂತರಿಕ ಶಕ್ತಿಗಳೊಂದಿಗೆ ಉಳಿಸುವ ಕೊನೆಯ ಪ್ರಯತ್ನದಂತಿರುವ ಕನ್ನಡ ಮಾಧ್ಯಮವನ್ನು ಕಡ್ಡಾಯ(ಹೀಗೆ ಕಡ್ಡಾಯ ಮಾಡುವ ವಿಪರ್ಯಾಸದ ಪರಿಸ್ಥಿತಿಯನ್ನು ನಾವೇ ಉಂಟು ಮಾಡಿಕೊಂಡಿರುವುದಂದಾಗಿಯೇ) ಮಾಡುವ ಈ ಕಾರ್ಯಕ್ರಮಕ್ಕೆ ಅಡೆ–ತಡೆಗಳನ್ನು ಒಡ್ಡಲಾಗುತ್ತಿದೆ. 'ವಿಕ್ರಾಂತ ಕರ್ನಾಟಕ' ಪತ್ರಿಕೆಯಲ್ಲಿ ಇತ್ತೀಚೆಗೆ ಪ್ರಕಟವಾದ ಅದರ ಗೌ॥ ಸಂಪಾದಕರಾದ ರವೀಂದ್ರ ರೇಷ್ಮೆಯವರ ಲೇಖನ–ಸಂದರ್ಶನಗಳು ಇದಕ್ಕೊಂದು ಉದಾಹರಣೆ. ಅವರ ವಾದ ಇತ್ತೀಚೆಗೆ ಕನ್ನಡ ಪರವಾದ ಮಾತುಗಳಿಗೆ ವಿರೋಧವಾಗಿ ಎತ್ತಲಾಗುತ್ತಿರುವ ಎಲ್ಲ ಹುಸಿ ಪ್ರಶ್ನೆಗಳನ್ನೂ, ಸೃಷ್ಟಿಸಲಾಗುತ್ತಿರುವ ಎಲ್ಲ ಉದ್ದೇಶಪೂರ್ವಕ ಗೊಂದಲಗಳನ್ನೂ ಒಳಗೊಂಡಿದೆ. ಅದಕ್ಕೆ ನನ್ನ ಪ್ರತಿಕಿಯೆಯನ್ನು ಇಲ್ಲಿ ದಾಖಲಿಸುತ್ತಿದ್ದೇನೆ.

* * *

'ವಿಕ್ರಾಂತ ಕರ್ನಾಟಕ'ದ ಕಳೆದ ಸಂಚಿಕೆಯಲ್ಲಿ (೭.೮.೨೦೦೯) ಕರ್ನಾಟಕದ ಭಾಷಾ ಅಲ್ಪ ಸಂಖ್ಯಾತರ ಶಾಲೆಗಳ ಹೊರತಾಗಿ, ಸರ್ಕಾರದ ಶಿಕ್ಷಣ ಆಡಳಿತಕ್ಕೊಳಪಡುವ ಎಲ್ಲ ಶಾಲೆಗಳಲ್ಲಿ ಒಂದನೇ ತರಗತಿಯಿಂದ ಐದನೇ ತರಗತಿಯವರೆಗೆ ಕನ್ನಡ ಮಾಧ್ಯಮವನ್ನು ಕಡ್ಡಾಯ ಮಾಡುವ ಸರ್ಕಾರದ ಪ್ರಯತ್ನವನ್ನು ಒಂದು ರೀತಿಯಲ್ಲಿ ಗೇಲಿ ಮಾಡುವಂತಿರುವ ರವೀಂದ್ರ ರೇಷ್ಮೆಯವರ ಲೇಖನ ಮತ್ತು ಸಂಬಂಧಿತ ಸಂದರ್ಶನಗಳನ್ನು ಓದಿದೆ. ರೇಷ್ಮೆಯವರು ಕನ್ನಡ ಮಾಧ್ಯಮವನ್ನು ಕಡ್ಡಾಯ ಮಾಡುವ ನಿರ್ಧಾರ ಅನ್ಯಾಯದ್ದು ಮತ್ತು ಅಸಾಧುವಾದದ್ದು ಎಂದು ವಾದಿಸುವ ನಿಟ್ಟನಲ್ಲಿ ಕೆಲವು ಪ್ರಶ್ನೆಗಳನ್ನು ಮುಂದಿಟ್ಟಿದ್ದಾರಲ್ಲದೆ, ಅನೇಕ ಗೋಜಲುಗಳನ್ನೂ ಸೃಷ್ಟಿಸಿದ್ದಾರೆ. ಈ ಎಲ್ಲ ಪ್ರಶ್ನೆಗಳು ಮತ್ತು ಗೋಜಲುಗಳು ಹೊಸವೇನಲ್ಲವಾದರೂ ಮತ್ತು ಇವಕ್ಕೆ, ಶಾಲಾ ಶಿಕ್ಷಣಕ್ಕಾದರೂ ಕನ್ನಡ ಮಾಧ್ಯಮವನ್ನು ಪ್ರತಿಪಾದಿಸುವ ನನ್ನಂತಹವರು ಈಗಾಗಲೇ ಹಲವಾರು ಸಂದರ್ಭದಲ್ಲಿ ಹಲವಾರು ರೂಪಗಳಲ್ಲಿ ಉತ್ತರ ನೀಡಿರುವೆವಾದರೂ, ರೇಷ್ಮೆಯಂತಹವರು ಪದೇ ಪದೇ ಏಕೆ ಹೀಗೆ ಕನ್ನಡ ಮಾಧ್ಯಮಕ್ಕೆ ಅಡ್ಡಗಾಲು ಹಾಕುತ್ತಾರೆ ಎಂಬುದು ತಿಳಿಯದಾಗಿದೆ! ಕನ್ನಡ ಮಾಧ್ಯಮದ ಪ್ರಶ್ನೆ ಮುಕ್ಕಾಲು ಪಾಲು ಸರ್ಕಾರದ ಪರವಾಗಿ ಇತ್ಯರ್ಥಗೊಂಡು, ಪ್ರತಿಷ್ಠಿತ ಕುಳಗಳ ಯಜಮಾನಿಕೆಯಲ್ಲಿರುವ ಕಡಿಮೆ ಸಂಖ್ಯೆಯ ಅನುದಾನ ರಹಿತ ಶಾಲೆಗಳ ಕನ್ನಡ ವಿರೋಧಿ ನೀತಿಯನ್ನಷ್ಟೇ ಎದುರಿಸುವ ಹಂತದಲ್ಲಿರುವಾಗ; ಇದನ್ನು 'ವಿಕ್ರಾಂತ ಕರ್ನಾಟಕ'ದಂತಹ ಪತ್ರಿಕೆ ಸಾವು–ಬದುಕಿನ ಪ್ರಶ್ನೆಯೆಂಬಂತೆ ಪರಿಗಣಿಸಿ ಹೀಗೆ ಗೆರಿಲ್ಲಾ ದಾಳಿ ನಡೆಸಿರುವ ಪರಿ ನನ್ನನ್ನು ದಿಗ್ಭ್ರಾಂತನನ್ನಾಗಿ ಮಾಡಿದೆ. ಹಾಗಾಗಿ ಈ ಲೇಖನ–ಸಂದರ್ಶನಗಳಲ್ಲಿ ರೇಷ್ಮೆಯರು

ಕನ್ನಡಿಗರ ಪರವಾಗಿಯೇ ಎತ್ತಿರುವುದಾಗಿ ಹೇಳಿಕೊಂಡಿರುವ ಪ್ರಶ್ನೆಗಳಿಗೆ ಉತ್ತರಿಸಲು ಮತ್ತು ಅವರು ಸೃಷ್ಟಿಸಿರುವ ಗೋಜಲುಗಳನ್ನು ಪರಿಹರಿಸಲು ಇಲ್ಲಿ ಸ್ವಲ್ಪ ವಿವರವಾಗಿಯೇ ಪ್ರಯತ್ನಿಸಿದ್ದೇನೆ. ನನ್ನ ಮಾತುಗಳು ದೀರ್ಘವೆನಿಸಿದರೆ, ಅವುಗಳಲ್ಲಿ ಪುನರಾವರ್ತನೆಗಳು ಕಂಡರೆ, ಅದಕ್ಕೆ 'ವಿಕ್ರಾಂತ ಕರ್ನಾಟಕ'ದ ಸದರಿ ಲೇಖನಗಳ ವೈಖರಿ ಮತ್ತು ಸಂದರ್ಭವೇ ಕಾರಣ.

ರೇಷ್ಮೆಯಂತವರು ತಮ್ಮ ವಾದಕ್ಕೆ ಆಧಾರವಾಗಿ ಪದೇ ಪದೇ–ಅದು ಸಾಕಷ್ಟು ಪ್ರಚೋದನಾತ್ಮಕವಾಗಿ ಇರುವುದರಿಂದಾಗಿಯೇ–ಕೇಳುವ ಮತ್ತು ಈಗ ಮತ್ತೆ ಕೇಳುತ್ತಿರುವ ಮುಖ್ಯ ಪ್ರಶ್ನೆ ಎಂದರೆ–

ಪ್ರತಿಷ್ಠಿತರ ಮಕ್ಕಳು ಇಂಗ್ಲಿಷ್ ಮಾಧ್ಯಮ ಶಾಲೆಗಳಲ್ಲಿ ಓದಿ ಒಳ್ಳೊಳ್ಳೆಯ ಸ್ಥಾನಗಳನ್ನು ಗಳಿಸಿ ಮುಂದುವರೆಯುತ್ತಿರುವಾಗ, ಕನ್ನಡ ಮಾಧ್ಯಮ ಶಾಲೆಗಳಲ್ಲಿ ಓದುವ ಬಡವರ ಮಕ್ಕಳು ಹಿಂದೆಯೇ ಉಳಿದುಹೋಗಬೇಕೆ?.

ಈ ವಾದ ಅಥವಾ ಪ್ರಶ್ನೆ ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಸುವುದರ ಪರವಾಗಿ ಮೂರು ವರ್ಷಗಳ ಹಿಂದೆ ಆರಂಭವಾದ ಪ್ರಚಾರಾಂದೋಲನದ ಕಾಲದಿಂದಲೂ ಪ್ರಚಲಿತದಲ್ಲಿದೆ. ಆದರೆ ಇದು ಎಂದೂ ವಾಸ್ತವವನ್ನು ಆಧರಿಸಿರಲಿಲ್ಲ. ಈಗಲೂ ಕೂಡಾ ಯಾವ ಸಾಕ್ಷ್ಯಾಧಾರಗಳಿಂದಲೂ ದೃಢಪಟ್ಟಿಲ್ಲವಾದರೂ, ಈ ವಾದ ಮತ್ತು ಪ್ರಶ್ನೆ ತನ್ನ ಪ್ರಚೋದನಾತ್ಮಕತೆಯಿಂದಲೇ ಇನ್ನೂ ಚಾಲ್ತಿಯಲ್ಲಿದೆ. ಈ ದೃಷ್ಟಿಯಿಂದ ರೇಷ್ಮೆಯವರು ಇಂಗ್ಲಿಷ್ ಮಾಧ್ಯಮಲ್ಲಿ ಓದಿ ಅಥವಾ ಇಂಗ್ಲಿಷ್ ಮಾಧ್ಯಮದಲ್ಲಿ ಓದಿದ್ದರಿಂದ ಮಾತ್ರ 'ಮುಂದುವರೆದ'ವರ ಒಂದು ಉದಾಹರಣೆ ನೀಡಬಲ್ಲರಾದರೆ, ಅದಕ್ಕೆ ಪ್ರತಿಯಾಗಿ ನಾನು ಕನ್ನಡ ಮಾಧ್ಯಮದಲ್ಲಿ ಓದಿ 'ಮುಂದುವರೆದ'ವರ ಎರಡು ಉದಾಹರಣೆಗಳನ್ನು ನೀಡಬಲ್ಲೆ.

ಹಾಗೆ ನೋಡಿದರೆ ಈ 'ಮುಂದುವರಿಕೆ' ಎಂದರಾದರೂ ಏನು? ಹೆಚ್ಚೆಚ್ಚು ಸಂಬಳ–ಸಾರಿಗೆಗಳ ಅವಕಾಶಗಳಿಗಾಗಿರುವ ಸ್ಪರ್ಧೆಯಲ್ಲಿ ಮುಂದುವರೆಯುವುದು ಎಂದು ತಾನೇ? ಇದು ಮನುಷ್ಯನ ಸಹಜ ಪ್ರವೃತ್ತಿ ಎಂದೂ ನಾನು ಬಲ್ಲೆ. ಆದರೆ, ಈ ಸಹಜ ಪ್ರವೃತ್ತಿ ಅನಿಯಂತ್ರಿತವಾಗಿ ಮುಂದುವರೆಯಬೇಕೇ? ಏಕೆಂದರೆ, ಇಂತಹ ಮುಂದುವರಿಕೆಯ ಬಗ್ಗೆ ಈಗಾಗಲೇ ನೈತಿಕ ನೆಲೆಯಲ್ಲಿ ಮಾತ್ರವಲ್ಲ, ಅದರ ಆರ್ಥಿಕ ಸುಸ್ಥಿರತೆಯ ನೆಲೆಯಲ್ಲಿಯೂ ಜಗತ್ತಿನಾದ್ಯಂತ ಗಂಭೀರ ಪ್ರಶ್ನೆಗಳು ಎದ್ದಿವೆ. ಆದರೆ ನಾನು ಕಂಡಂತೆ ಕನ್ನಡ ಮಾಧ್ಯಮದಲ್ಲಿ ಓದಿ ಹೀಗೆ 'ಮುಂದುವರಿದ'ದ ಕುಟುಂಬಗಳಲ್ಲಿ, ತಾವು ಮುಂದುವರಿಯುತ್ತಿರುವ ಈ ದಾರಿ ಸರಿಯೋ ತಪ್ಪೋ ಎಂಬ ಬಗ್ಗೆ ಅನುಮಾನಗಳಾದರೂ ಹುಟ್ಟುತ್ತಿವೆ. ಆದರೆ ಮುಂದುವರಿಯಲೆಂದೇ ಇಂಗ್ಲಿಷ್ ಮಾಧ್ಯಮ ಆರಿಸಿಕೊಂಡ ಬಹಳಷ್ಟು ಕುಟುಂಬಗಳಲ್ಲಿ ಇಂತಹ ಪ್ರಶ್ನೆಗಳೇ ಏಳುತ್ತಿಲ್ಲ. ಇವರೇ ಈಗ ಆರ್ಥಿಕತೆಯನ್ನು ತಮ್ಮ ಹಿತಾಸಕ್ತಿಗಳಿಗೆ ತಕ್ಕಂತೆ ತೆಕ್ಕೆಗೆ ತೆಗೆದುಕೊಳ್ಳುವ ವ್ಯಾಪಾರಿ('take over'ಗಳ) ಮಾನಸಿಕತೆಗೆ ಸಿಕ್ಕಿ, ಇಂಗ್ಲಿಷ್ ಮಾಧ್ಯಮವಿಲ್ಲದೆ ನಾವು ಮುಂದುವರೆಯಲಾರೆವು, ಬದುಕಲಾರೆವು ಎಂದು ಕೂಗು ಹಾಕುತ್ತಿರುವವರು. ಪಾಪ, ಇನ್ನೂ ನಮ್ಮ ಆರ್ಥಿಕತೆಯ ಅಂಚಿನಲ್ಲಿರುವವರು ಈ ಮುಂದುವರೆದವರ 'ಶೋಕಿ'ಗಳನ್ನು ನೋಡಿ ಅವರ ಜೊತೆ ಸೇರಿ ಇಂಗ್ಲಿಷ್ ಮಾಧ್ಯಮದ

ಬೊಬ್ಬೆ ಹಾಕತೊಡಗಿದ್ದಾರೆ. ಇದು ಮೂಲಭೂತ ಅಗತ್ಯಗಳಿಗಾಗಿ ಅಲ್ಲ, 'ಷೋಕಿ'ಗಾಗಿ ವ್ಯಕ್ತವಾಗುತ್ತಿರುವ ಹಪಾಹಪಿಯ ಪರಿಣಾಮವಲ್ಲದೆ ಮತ್ತೇನಲ್ಲ. ಆದರೆ ಇಂತಹ ಷೋಕಿಯ ಆಕರ್ಷಣೆಯ ಸ್ಥಳಗಳಿಂದ ದೂರವಿರುವ ಊರುಗಳ ಜನ ಪ್ರತಿಷ್ಠಿತ–ಅಪ್ರತಿಷ್ಠತರೆನ್ನದೆ, ಈಗಲೂ ತಮ್ಮ ಮಕ್ಕಳನ್ನು ಕನ್ನಡ ಶಾಲೆಗಳಿಗೇ ಕಳಿಸುತ್ತಿದ್ದಾರೆ. ಆ ಮಕ್ಕಳು ಇಂಗ್ಲಿಷ್ ಮಾಧ್ಯಮದವರೊಂದಿಗೆ ಪೈಪೋಟಿ ನಡೆಸಿ ಬದುಕಿನಲ್ಲಿ ಗೆಲ್ಲುತ್ತಲೇ ಇದ್ದಾರೆ. ಇಂಗ್ಲಿಷ್ ಮಾಧ್ಯಮದ ಹಪಾಹಪಿ ಏನಿದ್ದರೂ ಒಳ–ತಿರುಳಿಲ್ಲದ ವರ್ಗದವರ ಕೀಳರಿಮೆಯ ಕೂಗಷ್ಟೇ. ಅದನ್ನು ಅವರು ಇಂಗ್ಲಿಷ್ ಷೋಕಿಯ ಮೂಲಕ ಮುಚ್ಚಿಕೊಳ್ಳಬಯಸುತ್ತಾರಷ್ಟೆ!

ಇದೇ ಮಾತನ್ನು ರೇಷ್ಮೆಯವರು ಭಾವನಾತ್ಮಕವಾಗಿ ಉಲ್ಲೇಖಿಸಿರುವ ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರ ಮಾತುಗಳ ಬಗ್ಗೆಯೂ ಹೇಳಬಹುದಾಗಿದೆ. ನ್ಯಾಯಾಧೀಶರು ಗೌರವಾರ್ಹರೆಂದರೆ, ಅವರು ಯಾವುದೇ ವಿಷಯದ ಸಂವಿಧಾನಾತ್ಮಕ ಸಮರ್ಪಕತೆಯನ್ನು ಇತ್ಯರ್ಥಪಡಿಸುವ ಅಧಿಕಾರ ಹೊಂದಿದವರೆಂದೇ ಹೊರತು, ಸರ್ವಜ್ಞರೆಂದಲ್ಲ. ಆ ಇತ್ಯರ್ಥ ಕೂಡಾ ಆಗುವುದು ಎರಡೂ ಕಡೆಯ ವಾದ–ವಿವಾದಗಳನ್ನು ಆಲಿಸಿದ ಮೇಲೇಯೇ. ಹಾಗಾಗಿ ಅವರು ತಡೆಯಾಜ್ಞೆಗೆ ಸಂಬಂಧಿಸಿದ ವಿಚಾರಣೆಯ ಸಂದರ್ಭದಲ್ಲಿ ಇಂಗ್ಲಿಷ್ ಮಾಧ್ಯಮವನ್ನು ಸಮರ್ಥಿಸಿ ಆಡಿರುವ ಮೇಲ್ಮುಖ ಚಲನೆಯ ಮಾತನ್ನು ರೇಷ್ಮೆಯವರು ನಿರೂಪಿಸಿರುವ ಹಾಗೆ ಆತ್ಯಂತಿಕ ದೈವ ವಾಕ್ಯವೆಂದು ಪರಿಗಣಿಸುವ ಅಗತ್ಯವಿಲ್ಲ. ಏಕೆಂದರೆ ಸಮಾಜಕ್ಕೆ ಹಲವು ದಿಕ್ಕುಗಳಿರುವಾಗ, ಅದರ ಮೇಲ್ಮುಖ ಚಲನೆಗೆ ಮಾತ್ರ ಆದ್ಯತೆ ಕೊಡುವ ಈ ಪ್ರವೃತ್ತಿ ಅಪಾಯಕಾರಿಯೇ ಆಗಿದೆ ಎಂದು ಅವರಿಗೆ ಪೂರ್ಣ ಪ್ರಮಾಣದ ವಿಚಾರಣೆಯ ಸಂದರ್ಭದಲ್ಲಿ ಮನವರಿಕೆ ಮಾಡುವ ಅವಕಾಶವಿದೆ. ಅಂದ ಹಾಗೆ, ಈ ಮುಖ್ಯ ನ್ಯಾಯಧೀಶರ ಶಾಲಾ ಶಿಕ್ಷಣ ಯಾವ ಭಾಷೆಯಲ್ಲಿ ನಡೆಯಿತೋ ತಿಳಿಯದಲ್ಲ!

ಇನ್ನು ರೇಷ್ಮೆಯವರ ವಾದಕ್ಕೆ ಆಧಾರವಾಗಿರುವ ಪ್ರತಿಷ್ಠಿತರಷ್ಟೇ (ಕೆಲವರ ಪ್ರಕಾರ, ಮೇಲ್ಜಾತಿಗಳಷ್ಟೇ) ಇಂಗ್ಲಿಷ್ ಮಾಧ್ಯಮ ಶಾಲೆಗಳಲ್ಲಿ ಓದುವರು;ಬಡವರ ಮಕ್ಕಳೆಲ್ಲ (ಕೆಲವರ ಪ್ರಕಾರ, ದಲಿತರ ಮತ್ತ ಹಿಂದುಳಿದವರ ಮಕ್ಕಳಷ್ಟೇ) ಕನ್ನಡ ಮಾಧ್ಯಮ ಶಾಲೆಗಳಿಗೇ ಹೋಗುತ್ತಾರೆ ಎಂಬ ಮಾತೇ ಶುದ್ಧಾಂಗ ಮತ್ತು ದುರುದ್ದೇಶಪೂರಿತ ಸುಳ್ಳಾಗಿದೆ. ಮುಂದುವರೆಯುವ ಹಪಾಹಪಿಗೆ ಸಿಕ್ಕಿರುವ ಎಲ್ಲರೂ ಈಗ ತಮ್ಮ ಮಕ್ಕಳನ್ನು ಸಾಲ–ಸೋಲ–ಕಳ್ಳತನ ಮಾಡಿಯಾದರೂ ಇಂಗ್ಲಿಷ್ ಮಾಧ್ಯಮ ಶಾಲೆಗಳಿಗೆ ಕಳಿಸುತ್ತಿರುವುದನ್ನು ನಾವು ಕಣ್ಣಾರೆ ನೋಡುತ್ತಿದ್ದೇವೆ. ಆದರೆ ಇಂದು ಈ ಇಂಗ್ಲಿಷ್ ಶಾಲೆಗಳಲ್ಲೂ ದೊಡ್ಡ ಶ್ರೇಣೀಕರಣವುಂಟಾಗಿ, ದುಬಾರಿ ವೆಚ್ಚದ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಶಾಲೆಗಳು ಸ್ಥಾಪಿತವಾಗುತ್ತಿವೆ. ಹಾಗಿರುವಾಗ ಬಡವರು ಹೋಗುತ್ತಿರುವ ಅಥವಾ ರೇಷ್ಮೆಯಂತಹವರು ಹೋಗಬೇಕೆಂದು ಬಯಸುವ ಇಂಗ್ಲಿಷ್ ಮಾಧ್ಯಮ ಶಾಲೆಗಳ ಮಕ್ಕಳ ಪಾಡೇನು? ಅವರು ಇವರೊಂದಿಗೆ ಸ್ಪರ್ಧೆಯಲ್ಲಿ ಹಿಂದುಳಿದುಬಿಡುವುದಿಲ್ಲವೇ? ರೇಷ್ಮೆಯವರು ಈಗ ಅವರಿಗೆ ಸ್ಪರ್ಧಾತ್ಮಕ ನ್ಯಾಯ ದೊರಕಿಸಿಕೊಡಲು ಆ ದುಬಾರಿ ವೆಚ್ಚದ– ಇಂಗ್ಲಿಷ್ ಮಾಧ್ಯಮಗಳ ಪರ ನಿಂತಿರುವ ಶಾಸಕ ಪುಟ್ಟಣ್ಣನವರು ಹೇಳಿದಂತೆ, ಮಂತ್ರಿ ಶಾಸಕರುಗಳನ್ನೇ ಬಾಗಿಲಲ್ಲಿ

ನಿಲ್ಲಿಸುವ– 'ಪಬ್ಲಿಕ್'(ಹೆಸರು ನೋಡಿ!) ಸ್ಕೂಲ್‌ಗಳಿಗೆ ಪ್ರವೇಶ ದೊರಕಿಸಿಕೊಡಲು ಕರೆ ಕೊಡುವರೇನು? ಇಂದು ಹೋಬಳಿ ಕೇಂದ್ರಗಳಲ್ಲಿ ಸ್ಥಳೀಯ ಇಂಗ್ಲಿಷ್ ಶಾಲೆಗಳ 'ಸ್ಟ್ಯಾಂಡರ್ಡ್' ಕಡಿಮೆಯೆಂದು, ದೂರದ ತಾಲ್ಲೂಕು ಅಥವಾ ಜಿಲ್ಲಾ ಕೇಂದ್ರಗಳಲ್ಲಿನ ಇಂಗ್ಲಿಷ್ ಶಾಲೆಗಳಿಗೆ ತುಂಬಿದ ಸರ್ಕಾರಿ ಬಸ್ಸುಗಳಲ್ಲಿ ಮಕ್ಕಳನ್ನು ಅಟ್ಟುತ್ತಿರುವ ತಂದೆತಾಯಿಗಳ ಮಕ್ಕಳ 'ಪ್ರೇಮ'ದ ಪರಿಯನ್ನು ಹೇಗೆ ವಿವರಿಸುವುದು? ಇದು ಮುಗಿಯದ ದುರಂತ ಕತೆಯಾದೀತು!

ಪ್ರಪಂಚದ ಒಂದು ಭಾಗಕ್ಕೆ, ಕೊನೆಯಿರದ ಸುಖದ ಹುಚ್ಚು ಹಿಡಿದು ಆಕಾಶಕ್ಕೆ ಏಣಿ ಹಾಕಿಕೊಂಡು ಹೊರಟಿದೆ. ಇದನ್ನು ಮುಂದುವರೆಯುವುದು, ಸಾಹಸ, ಉದ್ಯಮಶೀಲತೆ ಎಂದೆಲ್ಲ ಕರೆಯಲಾಗುತ್ತಿದೆ. ಆದರೆ ಇಂತಹ ಏಣಿ ಹತ್ತುವ ಕೆಲಸ ಸಾಧುವೇ, ಸುಸಂಗತವೇ ಎಂದು ಒಂದು ದೀರ್ಘ ಸಾಂಸ್ಕೃತಿಕ ಪರಂಪರೆಯುಳ್ಳ ಸಮಾಜದ ಪ್ರಾಜ್ಞರು ಯೋಚಿಸಬೇಕು. ಆದರೆ ಇಂದಿನ ಲಾಭಕೋರರ ಮಧ್ಯೆ ಪ್ರಾಜ್ಞರಿಗೆಲ್ಲಿದೆ ಜಾಗ? ಅದೂ, 'ಯಾಕೆ ಸುಮ್ಮನೆ ತಲೆ ಕೆಡಿಸಿಕೊಳ್ಳುತ್ತೀರಿ? ಹೇಗೋ ಅಡ್ಜಸ್ಟ್ ಮಾಡಿಕೊಂಡು ಹೋಗಬೇಕಪ್ಪಾ!' ಎನ್ನುವ ಉಭಯ ಭ್ರಷ್ಟರೇ ಯಶಸ್ಸಿನ ಸಂಕೇತಗಳಾಗುತ್ತಿರುವಾಗ? ಈ ದೃಷ್ಟಿಯಿಂದ, ರೇಷ್ಮೆಯವರ ಈ ಲೇಖನ–ಸಂದರ್ಶನಗಳ ಜೊತೆಯಲ್ಲೇ ಪ್ರಕಟವಾಗಿರುವ ನಮ್ಮ ಇಂದಿನ ಕೃಷಿ ಜಗತ್ತನ್ನು ಕುರಿತ ಟಿ.ಎಂ.ಕೃಷ್ಣ ಅವರ ಲೇಖನವನ್ನು ಓದಿದರೆ ನನ್ನ ಮಾತುಗಳು ಹೆಚ್ಚು ಅರ್ಥವಾದಾವು!

ಎರಡು ವರ್ಷಗಳ ಹಿಂದೆ ಮೂಡುಬಿದ್ರೆಯ 'ಆಳ್ವಾಸ್ ನುಡಿಸಿರಿ'ಯವರು 'ಕನ್ನಡದ ಮನಸ್ಸು: ಪ್ರಚಲಿತ ಸಮಸ್ಯೆಗಳು' ಎಂಬ ವಿಷಯದ ಬಗ್ಗೆ ಏರ್ಪಡಿಸಿದ್ದ ಗೋಷ್ಠಿಯಲ್ಲಿ 'ನುಡಿಸಿರಿ'ಯ ಸಂಚಾಲಕರಾದ ತುಳು ಮಾತೃ ಭಾಷೆಯ ಮೋಹನ ಆಳ್ವಾ ಅವರು ತಮ್ಮ ಪ್ರಾಸ್ತಾವಿಕ ನುಡಿಗಳಲ್ಲಿ ಒಂದು ಮಾರ್ಮಿಕವಾದ ಮಾತನ್ನಾಡಿದ್ದರು. ತಮ್ಮ ಪತ್ನಿಯ ಬದುಕಿನ ಏಕೈಕ ಬೇಡಿಕೆಯನ್ನು ಪೂರೈಸುವ ಸಲುವಾಗಿ ಮಾತ್ರ ತಮ್ಮ ಮಕ್ಕಳನ್ನು ಇಂಗ್ಲಿಷ್ ಶಾಲೆಗೆ ಸೇರಿಸಬೇಕಾಯಿತೆಂದು ಅಲವತ್ತುಕೊಂಡು, ಅವರು ಹೇಳಿದ್ದು:'ನಾನು ಕನ್ನಡ ಮಾಧ್ಯಮದಲ್ಲಿ ಓದಿಲ್ಲದಿದ್ದಲ್ಲಿ ಈಗ ಏನಾಗಿದ್ದೇನೋ ಅದು ಆಗಲು ಮತ್ತು ಈಗಿರುವಷ್ಟು ಖುಷಿಯಾಗಿರಲು ಸಾಧ್ಯವಾಗುತ್ತಿರಲಿಲ್ಲ!' ಮೋಹನ ಆಳ್ವಾ ಅವರು ಮೂಡುಬಿದ್ರೆಯಲ್ಲಿ ಏನು ಮಾಡಿದ್ದಾರೆ ಮತ್ತು ಏನೆಲ್ಲ ಮಾಡುತ್ತಿದ್ದಾರೆ ಎಂಬುದನ್ನು ಬಲ್ಲ ಯಾರಾದರೂ ಅವರ ಈ ಸಂಕೀರ್ಣ ಮಾತನ್ನು, ಅಲ್ಲಿ ಅವರು ಕಟ್ಟಿರುವ ಒಂದು ಶೈಕ್ಷಣಿಕ ಜಗತ್ತು ಮತ್ತು ಅದರೊಂದಿಗೆ ರೂಪಿಸಿರುವ ಒಂದು ಸಾಂಸ್ಕೃತಿಕ ವಾತಾವರಣದ ಹಿನ್ನೆಲೆಯಲ್ಲಿ ಯಾವುದೇ ಕೊಂಕಿಲ್ಲದೆ ಸೂಕ್ತವಾಗಿ ಅರ್ಥೈಸಿಯಾರು. ಅವರು ಅಂದು ತಮ್ಮ ಬದುಕಿನ ದೊಡ್ಡ ಆಸೆ ಎಂದರೆ ಒಂದು ಅತ್ಯುತ್ತಮ ಕನ್ನಡ ಮಾಧ್ಯಮ ವಸತಿ ಶಾಲೆಯೊಂದನ್ನು ಕಟ್ಟುವುದು ಎಂದಿದ್ದರು. ಆ ಬಗ್ಗೆ ಅವರು ಏನು ಮಾಡಿದ್ದಾರೋ, ಮಾಡಲು ಸಾಧ್ಯವಾಗದಿದ್ದರೆ ಏನು ಕಾರಣವೋ ತಿಳಿಯುವ ಕುತೂಹಲ ನನಗಿದೆ.

ಅದೇನೇ ಇರಲಿ, ನಾನು ಈ ಮೂಲಕ ಸೂಚಿಸಬಯಸಿದ್ದು, ಮಾತೃ ಅಥವಾ ಪರಿಸರ ಭಾಷಾ ಮಾಧ್ಯಮ ಶಿಕ್ಷಣ ಮನುಷ್ಯನನ್ನು ನಿಜವಾದ 'ಸಾಮಾಜಿಕ'ನನ್ನಾಗಿ ಮಾಡುತ್ತದೆ ಎಂಬುದನ್ನು. ಪೂರಕ ವಾತಾವರಣ ಸಾಧ್ಯವಾದರೆ, ಅಂತಹವರೇ ನಿಜವಾದ 'ಸಾಮಾಜಿಕ ಪ್ರಗತಿ'ಯ ನಕ್ಷೆ ನಿರೂಪಕರೂ ಆದಾರು. ಸಾಮಾಜಿಕ ಪ್ರಗತಿಯೇ ನಿಜವಾದ ಪ್ರಗತಿ.

ಇಂಗ್ಲಿಷ್ ಮಾಧ್ಯಮ ಪ್ರೇರೇಪಿಸುವಂತಹ ಕೆಲವರ ವೈಯುಕ್ತಿಕ ಆರ್ಥಿಕ ಪ್ರಗತಿಯಲ್ಲ. ಇದನ್ನು ನಮ್ಮ ರಾಷ್ಟ್ರ ನಿರ್ಮಾಪಕರು, ಶಿಕ್ಷಣ ತಜ್ಞರು, ಭಾಷಾ ಶಾಸ್ತ್ರಜ್ಞರು, ಮಕ್ಕಳ ಮನೋತಜ್ಞರು; ಅಷ್ಟೇ ಏಕೆ, ವಿಶ್ವಸಂಸ್ಥೆಯ ಸಂಸ್ಕೃತಿ–ಶಿಕ್ಷಣ ಪರಿಣತರೂ ಕಾಲಾನುಕಾಲದಿಂದ ಹೇಳುತ್ತಲೇ ಇದ್ದಾರೆ. ಆದರೆ 'ಮುಂದುವರೆಯುವ ಮತ್ತು ಎಲ್ಲರಿಗಿಂತ ಹೆಚ್ಚು ಮುಂದುವರೆಯುವ' ಹಪಾಹಪಿಯಲ್ಲಿ ಇಂಗ್ಲಿಷ್ ಕಾಮಾಂಧತೆಗೆ ಸಿಕ್ಕವರಿಗೆ ಏನು ಹೇಳಲಾದೀತು? ಮಾತೃ ಅಥವಾ ಪರಿಸರ ಭಾಷಾ ಶಿಕ್ಷಣವೇ ಶಿಕ್ಷಣದ ಗುಣಮಟ್ಟದ ದೃಷ್ಟಿಯಿಂದ ಅತ್ಯುತ್ತಮ ಎಂದು ನೀವು ಒಪ್ಪುವಿರಾದರೆ, ಮಿಕ್ಕೆಲ್ಲ ಪರಿಗಣನೆಗಳು ಸಹಜವಾಗಿಯೇ ಅಮುಖ್ಯವಾಗಬೇಕು. ಹಾಗಾಗುತ್ತಿಲ್ಲ. ಏಕೆ? ಏಕೆಂದರೆ ಈ ಸಂಬಂಧವಾಗಿ ಸ್ಪಷ್ಟ ಹಾಗೂ ನೇರ ಆಲೋಚನೆಯೇ ಸಾಧ್ಯವಾಗದಂತೆ, ಅನೇಕ ಗೋಜಲುಗಳನ್ನೂ, ಅನುಮಾನಗಳನ್ನೂ ಸೃಷ್ಟಿಸಲಾಗಿದೆ. ರೇಷ್ಮೆಯವರ ಲೇಖನ ಮತ್ತು ಸಂದರ್ಶನಗಳಲ್ಲಿ ಇಂತಹ ಅನೇಕ ಗೋಜಲು–ಅನುಮಾನಗಳನ್ನು ನಾವು ಕಾಣಬಹುದು:

೧. ಕನ್ನಡ ಮಾಧ್ಯಮ ಕಡ್ಡಾಯಕ್ಕಾಗಿ ಒತ್ತಾಯಿಸುತ್ತಿರುವವರೆಲ್ಲ ತಮ್ಮ ಮಕ್ಕಳು ಅಥವಾ ಮೊಮ್ಮಕ್ಕಳನ್ನು ಇಂಗ್ಲಿಷ್ ಮಾಧ್ಯಮ ಶಾಲೆಗಳಿಗೆ(ಯಡಿಯೂರಪ್ಪನವರು ತಮ್ಮ ಮೊಮ್ಮಕ್ಕಳನ್ನು ವಿಧಾನಸೌಧದ ಬಳಿಯ ಸೋಫಿಯಾ ಇಂಗ್ಲಿಷ್ ಸ್ಕೂಲಿಗೆ ಕಳಿಸುತ್ತಿರುವರೆಂದು ಪುಟ್ಟಣ್ಣ ತಮ್ಮ ಸಂದರ್ಶನದಲ್ಲಿ ಹೇಳಿರುವ ಹಾಗೆ) ಕಳಿಸುತ್ತಿದ್ದಾರೆ.

ಇದು ಸಂಪೂರ್ಣ ಸತ್ಯವಲ್ಲ. ತನಿಖೆ ಮಾಡಿ ಕೂಡಾ ನೋಡಬಹುದು. ಕೆಲವರ ವಿಷಯದಲ್ಲಿ ಇದು ನಿಜವಾದರೂ (ಕನ್ನಡ ಮಾಧ್ಯಮವನ್ನು ಕಡ್ಡಾಯ ಮಾಡುತ್ತಿರುವ ರಾಜ್ಯದ ಮುಖ್ಯಮಂತ್ರಿಯಾಗಿರುವ ಯಡಿಯೂರಪ್ಪನವರ ವಿಷಯದಲ್ಲಿ ಇದು ಅಕ್ಷಮ್ಯ ಅಪರಾಧವೇ ಹೌದಾದರೂ), ಅದಕ್ಕೆ ವಿಶಿಷ್ಟ ಕಾರಣಗಳಿವೆ.(ಜೊತೆಗೆ, ಯಾರೇ ಆದರೂ ತಮ್ಮ ಮಕ್ಕಳಿಗೆ ಜವಾಬ್ದಾರರಾಗಬಹುದೇ ಹೊರತು ಮೊಮ್ಮಕ್ಕಳಿಗೂ ಅಲ್ಲ!) ಇವುಗಳಲ್ಲಿ ಬಹುಮುಖ್ಯ ಕಾರಣವೆಂದರೆ, ಕಳೆದ ೨೫ ವರ್ಷಗಳಲ್ಲಿ ಪ್ರಾಥಮಿಕ ಶಿಕ್ಷಣದ ಜವಾಬ್ದಾರಿಯನ್ನು ಸರ್ಕಾರ ದೊಡ್ಡ ಪ್ರಮಾಣದಲ್ಲಿ ಖಾಸಗಿಯವರಿಗೂ ಬಿಟ್ಟುಕೊಟ್ಟ ಪರಿಣಾಮವಾಗಿ, ಅದು ಒಂದು ದೊಡ್ಡ ದಂಧೆಯಾಗಿ ಮಾರ್ಪಾಡಾಗಿದೆ.(ಇದರಲ್ಲಿ, ಪುಟ್ಟಣ್ಣನವರು ಬಸವರಾಜ ಹೊರಟ್ಟಿಯವರಿಗೆ ಸಂಬಂಧಿಸಿದಂತೆ ಹೇಳಿರುವ ಹಾಗೆ, ರಾಜಕಾರಣಿಗಳೂ ದೊಡ್ಡ ಪ್ರಮಾಣದಲ್ಲಿ ಪಾಲ್ಗೊಂಡಿದ್ದಾರೆ). ಈ ದಂಧೆ ತಾನು ಬೆಳೆಯಲು ಹುಟ್ಟು ಹಾಕಿದ ಇಂಗ್ಲಿಷ್ ಹಪಾಹಪಿಯಿಂದಾಗಿ ನಮ್ಮ ನಗರ–ಪಟ್ಟಣಗಳಲ್ಲಿ ಕನ್ನಡ ಶಾಲೆಗಳೇ ಕ್ರಮೇಣ ನಾಶವಾಗತೊಡಗಿ, ಇಂದು ಅಲ್ಲಿ ಗುಣ ಮಟ್ಟದ ಕನ್ನಡ ಶಾಲೆಗಳೇ ಅಪರೂಪವಾಗಿವೆ. ಮೈಸೂರಿನಲ್ಲಿ ನನ್ನ ಕೆಲ ಸ್ನೇಹಿತರು ತಮ್ಮ ಮಕ್ಕಳನ್ನು ಕನ್ನಡ ಮಾಧ್ಯಮದಲ್ಲೇ ಓದಿಸಲು ತಾವೇ ಒಂದು ಶಾಲೆಯನ್ನು ಸ್ಥಾಪಿಸಬೇಕಾದ ಪರಿಸ್ಥಿತಿ ಉಂಟಾಯಿತು. ಹೀಗಾಗಿ ಕನ್ನಡ ಮಾಧ್ಯಮದಲ್ಲಿ ತಮ್ಮ ಮಕ್ಕಳನ್ನು–ಮೊಮ್ಮಕ್ಕಳನ್ನು ಓದಿಸ ಬಯಸುವ ತಂದೆ–ತಾಯಂದಿರು ಅವರನ್ನು ಅನಿವಾರ್ಯವಾಗಿ ಇಂಗ್ಲಿಷ್ ಮಾಧ್ಯಮ ಶಾಲೆಗಳಿಗೆ ಕಳಿಸುವಂತಾಗಿದೆ. ಎರಡನೇ ಕಾರಣ, ಮೋಹನ ಆಳ್ವರು ನೀಡಿದಂತಹ ಕಾರಣವಿರಬಹುದು.(ಇತ್ತೀಚೆಗೆ ಕನ್ನಡ ಪ್ರಾಧ್ಯಾಪಕರಾಗಿ ನಿವೃತ್ತಿ ಹೊಂದಿದ ಮಹಿಳೆಯೊಬ್ಬರು ತಮ್ಮ ಮೊಮ್ಮಗಳನ್ನು ಕನ್ನಡ ಶಾಲೆಗೆ ಸೇರಿಸಲು

ಪ್ರಯತ್ನಿಸಿದ ಅವರ ಬರಹಗಾರ್ತಿ ಮಗಳನ್ನು, ಹಾಗೇನಾದರೂ ಮಾಡಿದಲ್ಲಿ ತಮ್ಮ ಕಡೆಯಿಂದ ದೊಡ್ಡ ಅನಾಹುತವೊಂದನ್ನು ಎದುರಿಸಬೇಕಾದೀತೆಂದು ಹೆದರಿಸಿದ್ದೂ ಉಂಟು!) ಇಂದು ಕನ್ನಡ ಕನ್ನಡ ಎಂದು ಬೀದಿ ತುಂಬಾ ಕೂಗಿ ಕೊಂಡು ಹೋಗುವ ಅನೇಕ ಕನ್ನಡ ಚಳುವಳಿ ಸಂಘಟನೆಗಳು ಕನ್ನಡ ಮಾಧ್ಯಮದ ಪರವಾಗಿ ಧ್ವನಿ ಎತ್ತದಿರುವುದಕ್ಕೂ–ಇದೊಂದು ದೊಡ್ಡ ವಿಪರ್ಯಾಸವಾದರೂ–ಇಂತಹುದೇ ಕಾರಣಗಳಿರಬಹುದು.

ಆದುದರಿಂದ ಕನ್ನಡ(ಅಥವಾ ಮಾತೃಭಾಷಾ) ಮಾಧ್ಯಮದ ಅರ್ಥಪೂರ್ಣತೆಯಲ್ಲಿ ನಿಮಗೆ ನಿಜವಾದ ನಂಬಿಕೆ ಇದ್ದರೆ(ಅದೇ ನಿಜವಾದ ಕನ್ನಡ ಚಳುವಳಿ ಕೂಡಾ) ಕನ್ನಡ ಮಾಧ್ಯಮ ಬೆಂಬಲಿಗರ ವಿರುದ್ಧ ಇಂತಹ ದುರುದ್ದೇಶಿತ ಪ್ರಚಾರ ಮಾಡುವುದನ್ನು ನಿಲ್ಲಿಸಬೇಕು. ಕನ್ನಡ ಶಾಲೆಗಳನ್ನು ನಮ್ಮ ನಗರ–ಪಟ್ಟಣಗಳಲ್ಲಿ ನಿಧಾನವಾಗಿ ನಾಶ ಮಾಡಿದ ಮತ್ತು ಈಗಲೂ ಮಾಡುತ್ತಿರುವ ಶಿಕ್ಷಣ ದಂಧೆಕೋರರು ಸೃಷ್ಟಿಸಿದ ಇಂಗ್ಲಿಷ್ ಮಾಧ್ಯಮದ ಹಪಾಹಪಿಯನ್ನು ಕೊನೆಗಾಣಿಸಬಲ್ಲ; ಎಲ್ಲ ಪ್ರಾಥಮಿಕ ಶಾಲೆಗಳನ್ನೂ ಕನ್ನಡ ಮಾಧ್ಯಮ ಶಾಲೆಗಳನ್ನಾಗಿ ಮಾಡುವ ಸರ್ಕಾರದ ಪ್ರಯತ್ನಕ್ಕೆ ಬೆಂಬಲ ನೀಡಬೇಕು. ಜೊತೆಗೆ ಸರ್ಕಾರ ಕೂಡಾ ಕನ್ನಡ ಶಾಲೆಗಳ ಗುಣಮಟ್ಟವನ್ನು ಎಲ್ಲ ರೀತಿಯಿಂದಲೂ ಉತ್ತಮ ಪಡಿಸುವ ತೀವ್ರ ಗತಿಯ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ನಾನು ಈ ಹಿಂದೆಯೇ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಮುಖ್ಯ ಮಂತ್ರಿ ಚಂದ್ರು ಅವರಿಗೆ ಬರೆದ ಬಹಿರಂಗ ಪತ್ರದಲ್ಲಿ* ಇದು ಪ್ರಾಧಿಕಾರದ ಬೀಜ ಕಾರ್ಯಕ್ರಮವಾಗಬೇಕೆಂದು ಸೂಚಿಸಿದ್ದೆ. ಆದರೆ ಅವರು ಏಕೋ ಪ್ರವಾಸ–ಭಾಷಣ–ಭೀಷಣಗಳಲ್ಲೇ ಮುಳುಗಿಹೋಗಿದ್ದಂತೆ ಕಾಣುತ್ತದೆ!

೨. ಕನ್ನಡ ಮಾಧ್ಯಮದ ಆಜ್ಞೆ ಸಂಸ್ಕೃತವಾದಿಗಳ ಪಿತೂರಿಯಾಗಿದೆ. ಕನ್ನಡದ ಶತ್ರು ಇಂಗ್ಲೀಷಲ್ಲ, ಸಂಸ್ಕೃತ.....

ಇದು ಉತ್ತರಕ್ಕೂ ಅರ್ಹವಲ್ಲದ ಕುಚೇಷ್ಟೆಯ, ಕುತರ್ಕದ ಪ್ರಯತ್ನ ಮಾತ್ರವಾಗಿದೆ. ಆದರೆ ಇದು ಸಾಕಷ್ಟು ಅನಾಹುತಕಾರಿಯೂ ಆಗಿರುವುದರಿಂದ, ವಿವರವಾಗಿಯೇ ಉತ್ತರಿಸಬೇಕಿದೆ. ರೇಷ್ಮೆಯವರು ಇಲ್ಲಿ ವಿನಾ ಕಾರಣ ಗೋಕಾಕ್ ವರದಿ ಅನುಷ್ಠಾನಕ್ಕೆ ಸಂಬಂಧಿಸಿದ ಮೊಕದ್ದಮೆಯನ್ನು ಎಳೆ ತರುವ ಮೂಲಕ ನ್ಯಾ॥ ರಾಮಾಜೋಯಿಸರ ಕನ್ನಡ ಬದ್ಧತೆಯ ಬಗ್ಗೆ ಅನುಮಾನ ಹುಟ್ಟಿಸಿ, ಸರ್ಕಾರದ ಕನ್ನಡ ಮಾಧ್ಯಮ ಕಾರ್ಯಕ್ರಮದ ಪ್ರಾಮಾಣಿಕತೆಯ ಬಗ್ಗೆಯೇ ಗೊಂದಲ ಹುಟ್ಟಿಸುವ ಪ್ರಯತ್ನ ಮಾಡಿದ್ದಾರೆ.(ಈ ವಿಷಯವಾಗಿ ಅನಂತಮೂರ್ತಿ ಮತ್ತು ನಲ್ಲೂರು ಪ್ರಸಾದರು, ಇದ್ದಕ್ಕಿದ್ದಂತೆ ದೂರವಾಣಿಯಲ್ಲಿ ಮಾತನಾಡಿಸಿದ್ದಕ್ಕೋ ಏನೋ, ಗೊಂದಲದ ಉತ್ತರಗಳನ್ನು ನೀಡಿದ್ದಾರೆ. ಮುಖ್ಯ ಸ್ಥಾನಗಳಲ್ಲಿರುವ ಜನ, ಮುಖ್ಯ ವಿಷಯಗಳ ಬಗ್ಗೆ ಹೀಗೆ ದಿಢೀರ್ ದೂರವಾಣಿ ಸಂದರ್ಶನವನ್ನು ನೀಡುವುದನ್ನು ತಪ್ಪಿಸಿಕೊಂಡರೆ ಒಳ್ಳೆಯದು. ಇಲ್ಲದಿದ್ದರೆ, ಮಾಧ್ಯಮದವರು ಎಲ್ಲವನ್ನೂ ಕಲಸು ಮೇಲೋಗರ ಮಾಡಿ ನಿಮ್ಮನ್ನೂ ತಿಂದು ಮುಗಿಸಿಬಿಡುತ್ತಾರೆ!) ನನಗೆ ನೆನಪಿರುವಂತೆ,

---

* ಅದು ಈ ಕೃತಿಯಲ್ಲಿ ಪ್ರಕಟವಾಗಿದೆ.

ರಾಜ್ಯದ ಎಲ್ಲ ಶಾಲೆಗಳಲ್ಲಿ ಕನ್ನಡವನ್ನು ಪ್ರಥಮ ಭಾಷೆಯಾಗಿ ಕಡ್ಡಾಯ ಮಾಡುವ ಸರ್ಕಾರದ ಆಜ್ಞೆಯನ್ನು ಪ್ರಶ್ನಿಸಿದ್ದು ಮಣಿಪಾಲದ ಕೊಂಕಣಿ ಸಂಸ್ಥೆ ಮಾತ್ರವಲ್ಲ.

ಅದರ ಜೊತೆ ಇನ್ನೂ ಒಂದೆರಡು ಭಾಷಾ ಅಲ್ಪ ಸಂಖ್ಯಾತರ ಸಂಸ್ಥೆಗಳೂ ಸೇರಿದ್ದವು. ಅದೇನೇ ಇರಲಿ, ಈ ಪ್ರಕರಣದಲ್ಲಿ ರಾಮಾಜೋಯಿಸರ ನ್ಯಾಯಪೀಠ ನೀಡಿದ ತೀರ್ಪು ಮಾತೃ ಅಥವಾ ಪರಿಸರ ಭಾಷಾ ಮಾಧ್ಯಮವನ್ನು ಒತ್ತಾಯಿಸುತ್ತಿರುವವರು ಪ್ರತಿಪಾದಿಸುತ್ತಿರುವ ಶೈಕ್ಷಣಿಕ ತತ್ವಕ್ಕೆ ಅನುಗುಣವಾಗಿಯೇ ಇತ್ತು. ಅದೆಂದರೆ, ಒಂದು ಭಾಷೆಯವರ ಮೇಲೆ ಇನ್ನೊಂದು ಭಾಷೆಯನ್ನು ಹೇರಬಾರದು. ಅಂದರೆ, ಕನ್ನಡೇತರರ ಮೇಲೆ ಕನ್ನಡವನ್ನು ಪ್ರಥಮ ಭಾಷೆಯಾಗಿ ಹೇರಲಾಗದು. ಅವರ ಮಾತೃಭಾಷೆ ಕಲಿಕೆಗೆ ಅವಕಾಶ ಇರುವೆಡೆಗಳಲ್ಲಿ ಅವರು ಮಾತೃಭಾಷೆಯನ್ನೇ ಪ್ರಥಮ ಭಾಷೆಯಾಗಿ ಆರಿಸಿಕೊಳ್ಳುವುದು ಅವರ ಸಂವಿಧಾನಬದ್ಧ ಹಕ್ಕು ಎಂಬುದು ಈ ತೀರ್ಪಿನ ಹಿಂದಿದ್ದ ಸಂದೇಶ.

ಆದರೆ ಇದನ್ನು ಕೆಲವರು ಕನ್ನಡಕ್ಕೆ ಬದಲಾಗಿ ಸಂಸ್ಕೃತವನ್ನು ಪ್ರಥಮ ಭಾಷೆಯಾಗಿ ಆರಿಸಿಕೊಳ್ಳಲು ಬಳಸಿಕೊಂಡರೆ ಅಥವಾ ಹಾಗೆ ಆರಿಸಿಕೊಳ್ಳುವ 'ವ್ಯವಸ್ಥೆ'ಯೂ ಇದ್ದರೆ(ಅಂದರೆ ಸಂಸ್ಕೃತದಲ್ಲಿ ಕನ್ನಡಕ್ಕಿಂತ ಸುಲಭವಾಗಿ ಹೆಚ್ಚು ಅಂಕ ಪಡೆಯುಂತಹ ಶಿಕ್ಷಣ ವ್ಯವಸ್ಥೆಯ ಮೂಲಕ 'ಎಲ್ಲರಿಗಿಂತ ಮುಂದುವರೆಯವ' ಹಪಾಹಪಿಗೆ ನೀರೆರೆದರೆ), ರಾಮಾಜೋಯಿಸರು ಅಥವಾ ಇನ್ನ್ಯಾರೇ ನ್ಯಾಯಾಧೀಶರು ಏನು ಮಾಡಿಯಾರು? ಇದನ್ನು ತಪ್ಪಿಸಲು ತಕ್ಷಣ ಸರ್ಕಾರ ಕನ್ನಡೇತರ ಮಾತೃಭಾಷೆಗಳ ಕಲಿಕೆ ಸೌಲಭ್ಯವಿಲ್ಲದ ಶಾಲೆಗಳಲ್ಲಿ ಪರಿಸರ ಭಾಷೆಯಾದ ಕನ್ನಡವನ್ನೇ ಕಡ್ಡಾಯ ಪ್ರಥಮ ಭಾಷೆಯೆಂದು ಘೋಷಿಸಿ ಕಾನೂನು ತಿದ್ದುಪಡಿ ಮಾಡಿದ್ದಲ್ಲಿ, ಈ ಸಮಸ್ಯೆಯನ್ನು ಸುಲಭವಾಗಿ ಪರಿಹರಿಸಿಕೊಳ್ಳಬಹುದಿತ್ತು. ಆದರೆ ಈಗ ಸಂಸ್ಕೃತದ ಹುಯ್ಲೆಬ್ಬಿಸುತ್ತಾ ಕನ್ನಡದ ಬಗ್ಗೆ ಈಗ ಉಮ್ಮಳಿಸಿಕೊಂಡು ಮಾತನಾಡುತ್ತಿರುವ ರೇಷ್ಮೆಯರಂತಹವರೂ ಸೇರಿದಂತೆ ಯಾರೂ ಉಸಿರೆತ್ತಲಿಲ್ಲ. ಆದರೆ, ಈಗ ಏಕೆ ಎತ್ತಲಾಗುತ್ತಿದೆ? ಇಡಿಯಾಗಿ ಸಂಸ್ಕೃತದ ವಿರುದ್ಧ ಹಲವು ವರ್ಗಗಳಲ್ಲಿ ಹುಟ್ಟಿಸಲಾಗಿರುವ ಅನುಮಾನಗಳನ್ನು ಇಂಗ್ಲಿಷ್ ಪರ ಬಳಸಿಕೊಳ್ಳುವ ಹುನ್ನಾರವಿದು! ಇದರಲ್ಲಿ ಕನ್ನಡ ಉಳಿಸುವ ಅಥವಾ ಬೆಳಸುವ ಯಾವ ಉದ್ದೇಶವೂ ಇಲ್ಲ. ಏಕೆಂದರೆ, ಇಂಗ್ಲಿಷನ್ನು ಶತ್ರುವೆಂದು ಪರಿಗಣಿಸಿ ಯಾರೂ ಕನ್ನಡ ಮಾಧ್ಯಮವನ್ನು ಪ್ರತಿಪಾದಿಸುತ್ತಿಲ್ಲ. ಹಾಗಿದ್ದಲ್ಲಿ, ಹಲವು ವರ್ಷಗಳ ಹಿಂದಿನಿಂದಲೇ ಇಂಗ್ಲಿಷ್ ನಮ್ಮ ಪಠ್ಯಕ್ರಮದ ಅವಿಭಾಜ್ಯ ಅಂಗವಾಗಿರಲು ಸಾಧ್ಯವಾಗುತ್ತಿರಲಿಲ್ಲ. ಅದಿರಲಿ, ಸಂಸ್ಕೃತದ ಪರ ಒಲವಿರುವುದೇ ಕನ್ನಡ ವಿರೋಧಿ ಎಂದು ಪ್ರಚಾರ ಮಾಡುವವರ ಇಂಗ್ಲಿಷ್ ಪರ ಒಲವನ್ನು ಹೇಗೆಂದು ಅರ್ಥೈಸಬೇಕು?

೩. ಕನ್ನಡ ಕಲಿಕೆಯ ಅಗತ್ಯವೇ ಇಲ್ಲದ ಸಿ.ಬಿ.ಎಸ್.ಇ. ಮತ್ತು ಐ.ಸಿ.ಎಸ್.ಸಿ. ಪಠ್ಯಕ್ರಮಗಳ ಶಾಲೆಗಳಿಗೆ ಅನುಮತಿ ನೀಡುತ್ತಿರುವ ಸರ್ಕಾರದ ಕನ್ನಡ ಮಾಧ್ಯಮ ಬದ್ಧತೆ ಅನುಮಾನಾಸ್ಪದ.

ಈ ಪಠ್ಯಕ್ರಮಗಳ ಶಾಲೆಗಳನ್ನು ಮೂಲತಃ ಆರಂಭಿಸಿದ್ದು ಅಖಿಲಭಾರತ ವರ್ಗಾವಣೆಯ ವ್ಯಾಪ್ತಿಗೆ ಬರುವ ನೌಕರರ ಮಕ್ಕಳ ಅನುಕೂಲಕ್ಕಾಗಿ. ಇದು ಸರಿಯಾದ ಮತ್ತು ನ್ಯಾಯೋಚಿತ ಕ್ರಮವೇ ಆಗಿತ್ತು. ಆದರೆ ಇವು ಬರಬರುತ್ತಾ, ತಮ್ಮ ಮಕ್ಕಳು ಕನ್ನಡ ಕಲಿಕೆಯನ್ನು ತಪ್ಪಿಸಿಕೊಂಡು ಇಂಗ್ಲಿಷ್ ಅಥವಾ ಹಿಂದಿ ಮಾಧ್ಯಮದಲ್ಲಿ ಶಿಕ್ಷಣ ಪಡೆದು ಬಹುಬೇಗ

ಎಲ್ಲರಿಗಿಂತ ಮುಂಚೆ ಆಕಾಶಕ್ಕೆ ಹಾಕಿರುವ ಏಣಿಯನ್ನು ಹತ್ತಲಾರಂಭಿಸುವುದನ್ನು ನೋಡಬಯಸುವ ಮೂರ್ಖ ತಂದೆತಾಯಿಗಳ ಆಶ್ರಯದಾಣವಾಗಿಬಿಟ್ಟಿವೆ. ಇದಕ್ಕೆ ಇವುಗಳ ಸ್ಥಾಪನೆ ಮತ್ತು ಇವುಗಳ ಪ್ರವೇಶಕ್ಕಿರುವ ಷರತ್ತುಗಳನ್ನು ಬೇಕಾಬಿಟ್ಟಿ ಉಲ್ಲಂಘಿಸಲು ಅವಕಾಶ ಮಾಡಿಕೊಟ್ಟಿರುವ ನಮ್ಮ ರಾಜಕಾರಣಿ–ನೌಕರಶಾಹಿ–ಹುಸಿ ಪ್ರತಿಷ್ಠೆ ಮತ್ತು ದುರಾಸೆಗಳ ಪೋಷಕರಿಂದ ಕೂಡಿದ ದುಷ್ಟ ಕೂಟವೇ ಕಾರಣವಾಗಿದೆ. ಆದರೆ ಈಗ ಈ ಶಾಲೆಗಳಲ್ಲೂ ಕನ್ನಡವನ್ನು ಒಂದು ಭಾಷೆಯಾಗಿ ಕಡ್ಡಾಯವಾಗಿ ಕಲಿಸುವ ಆಜ್ಞೆಯನ್ನು ಸರ್ಕಾರ ಹೊರಡಿಸಿದೆ ಹಾಗೂ ಇಂತಹ ಶಾಲೆಗಳಿಗೆ ಅನುಮತಿ ನೀಡುವುದನ್ನು ಕಟ್ಟುನಿಟಾಗಿ ನಿಯಂತ್ರಿಸುವುದಾಗಿ ಸರ್ಕಾರ ಹೇಳಿದೆ ಎಂಬುದನ್ನು ನಾವು ಗಮನಿಸಬೇಕು. ಇಂತಹ ವಿಷಯಗಳಲ್ಲಿ ಸಮಸ್ಯೆ ಎಂದರೆ, ನಮ್ಮದು ವಿಚಿತ್ರವಾದ ಒಕ್ಕೂಟ ರಾಷ್ಟ್ರವಾಗಿರುವುದರಿಂದ ರಾಜ್ಯ ಸರ್ಕಾರ ಏನೇ ಕ್ರಮ ಕೈಗೊಂಡರೂ ಕೇಂದ್ರದತ್ತ ಒಮ್ಮೆ ನೋಡಿಯೇ ಕೈಗೊಳ್ಳಬೇಕಾದಂತಹ ಪರಿಸ್ಥಿತಿ ಇದೆ. ಈ ದೃಷ್ಟಿಯಿಂದ ಕನ್ನಡ ಸಾಹಿತಿಗಳ ಕೂಟವು ಸರ್ವೋಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿರುವ ಮೇಲ್ಮನವಿಯಲ್ಲಿ ಭಾಷಾ ಮಾಧ್ಯಮ ನೀತಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವನ್ನೂ ಓರ್ವ ಪ್ರತಿವಾದಿಯನ್ನಾಗಿ ಸೇರಿಸಿರುವುದು ಉಚಿತವಾದ ಕ್ರಮವೇ ಆಗಿದೆ.

ಹೀಗಾಗಿ, 'ಮುಂದುವರಿಕೆ'ಯ ಹಪಾಹಪಿಯಲ್ಲಿ ನಮ್ಮ ಮಕ್ಕಳಿಗೆ, ನಮ್ಮ ಸಮಾಜಕ್ಕೆ ಯಾವುದು ಒಳ್ಳೆಯದು, ಯಾವುದು ಕೆಟ್ಟದು ಎಂದು ಯೋಚಿಸುವ ಶಕ್ತಿಯನ್ನೇ ಕಳೆದುಕೊಂಡಿರುವ ವ್ಯವಸ್ಥೆ ಇದಾಗಿರುವುದರಿಂದ, ಸದ್ಯಕ್ಕೆ ಯಾವ ಹಂತದವರೆಗೆ ಸಾಧ್ಯವೋ ಆ ಹಂತದವರೆಗೆ ಮಾತೃಭಾಷಾ/ಪರಿಸರ ಭಾಷಾ ಮಾಧ್ಯಮದ ಶಿಕ್ಷಣಕ್ಕಾಗಿ ಒತ್ತಾಯಿಸುವೊಂದೇ ಇದಕ್ಕೆಲ್ಲ ಮದ್ದು. ಆಗಿರುವ ಅಥವಾ ಆಗುತ್ತಿರುವ ತಪ್ಪುಗಳನ್ನು ಎತ್ತಿ ಹೇಳುತ್ತಾ, ತಾಳ ತಪ್ಪಿರುವ ವ್ಯವಸ್ಥೆಯನ್ನು ಇನ್ನಷ್ಟು ತಾಳ ತಪ್ಪಿಸುವುದಲ್ಲ. ಒಂದು ತಪ್ಪನ್ನು ಇನ್ನೊಂದು ತಪ್ಪಿನ ಮೂಲಕ ಸರಿ ಪಡಿಸಲಾಗುವುದಿಲ್ಲ. ಹೀಗೆ ಹೇಳುವ ನಾವು ಹಾಸ್ಯಾಸ್ಪದ ಅಲ್ಪಸಂಖ್ಯಾತರು ಎಂಬ ನಿರಾಶೆಯೂ ಅಗತ್ಯವಲ್ಲ. ಸತ್ಯ ಯಾವಾಗಲೂ ಅದು ಸ್ಥಾಪಿತವಾಗುವವರೆಗೆ, 'ತಲೆಕೆಟ್ಟ' ಅಲ್ಪಸಂಖ್ಯಾತರ ಅಭಿಪ್ರಾಯವೇ ಆಗಿರುತ್ತದೆ. ಆದುದರಿಂದ, ಸರಿಯಾದ ದಾರಿ ಎಂದು ತಾತ್ವಿಕವಾಗಿ ಕಂಡದ್ದನ್ನು(ಈ ಕಾಣ್ಕೆಯ ಹಿಂದೆ ಒಂದು ಅನುಭವ ಕೋಶವೂ ಕೆಲಸ ಮಾಡಿರುತ್ತದೆ) ವ್ಯಾವಹಾರಿಕಗೊಳಿಸುವುದೋ ಅಥವಾ ತಕ್ಷಣಕ್ಕೆ ವ್ಯಾವಹಾರಿಕವಾಗಿ ಸರಿ ಎನಿಸಿದ್ದನ್ನು ತಾತ್ವೀಕರಿಸುವ ಆತ್ಮವಂಚನೆಯನ್ನು ಮುಂದುವರೆಸಬೇಕೋ? ಇದನ್ನು ಕನ್ನಡಿಗರು ನಿರ್ಧರಿಸಬೇಕು.

ಈ ಸಂಬಂಧ ತುರ್ತಾಗಿ ಆಗಬೇಕಾದ ಕೆಲಸದ ಬಗ್ಗೆ ನಾನು ಶಿಕ್ಷಣ ಸಚಿವ ಶ್ರೀ ವಿಶ್ವೇಶ್ವರ ಹೆಗಡೆಯವರಿಗೆ ಬರೆದ ಪತ್ರವನ್ನೂ ಇಲ್ಲಿ ನಿಮ್ಮ ಹೆಚ್ಚಿನ ವಿವರಗಳಿಗಾಗಿ ನೀಡುತ್ತಿದ್ದೇನೆ:

ದಿನಾಂಕ: ೨೨.೭.೨೦೦೯

ಮಾನ್ಯ ಶಿಕ್ಷಣ ಸಚಿವರಾದ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ ಅವರಲ್ಲಿ,

ವಂದನೆಗಳು. ಪ್ರಾಥಮಿಕ ಶಾಲಾ ಶಿಕ್ಷಣ ಮಾಧ್ಯಮ ಕುರಿತಂತೆ ನ್ಯಾಯಾಂಗದಿಂದ ಎದುರಾಗುತ್ತಿರುವ

ಅಡತಡೆಗಳಿಂದ ಎದೆಗುಂದದೆ ನೀವು ತಳೆದಿರುವ ಕನ್ನಡ ಪರವಾದ ನಿಲುವಿಗಾಗಿ ಈ ಮೂಲಕ ನಿಮ್ಮನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಹಾಗೇ, ಈ ವಿಷಯವಾಗಿ ಆತ್ಯಂತಿಕವಾಗಿ ನಿಮ್ಮ-ನಮ್ಮ ನಿಲುವಿಗೇ ಯಶಸ್ಸು ದೊರಕುವುದೆಂದೂ ಆಶಿಸುತ್ತೇನೆ.

ಎರಡು-ಮೂರು ವರ್ಷಗಳ ಹಿಂದೆ ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಸುವ ಸರ್ಕಾರದ ನಿರ್ಧಾರದ ವಿರುದ್ಧ ಬರೆಯುತ್ತಾ, ಜನಾಭಿಪ್ರಾಯ ಕ್ರೋಢೀಕರಿಸುತ್ತಾ ಬಂದವನು ನಾನು. ನನ್ನ ಈ ನಿಲುವಿನ ಹಿಂದೆ ಇದ್ದದ್ದು ಮತ್ತು ಇರುವುದು ಬಹಳಷ್ಟು ಜನ ತಿಳಿದಂತೆ ಕನ್ನಡಾಭಿಮಾನವಲ್ಲ; ಶಿಕ್ಷಣದ ಅರ್ಥಪೂರ್ಣತೆ ಮತ್ತು ವ್ಯಕ್ತಿತ್ವ ನಿರ್ಮಾಣದ ಸಾರ್ಥಕತೆಗಳನ್ನು ಕುರಿತ ಕಳಕಳಿ. ಈಗ ಸರ್ಕಾರದ ನಿಲುವಿನ ಹಿಂದೆ ಇರುವುದು ಕೂಡಾ ಇದೇ ನೆಲೆಯ ಕಳಕಳಿ ಎಂದು ನಾನು ಭಾವಿಸಿದ್ದೇನೆ. ಆದರೆ ಜನ ಸಾಮಾನ್ಯರು ಹೋಗಲಿ, ಬಹಳಷ್ಟು ಬುದ್ಧಿಜೀವಿಗಳು ಮತ್ತು ನ್ಯಾಯಾಂಗ ಕೂಡ ಈ ದೀರ್ಘಕಾಲಿಕ ಮತ್ತು ಆಳದ ಸತ್ಯವನ್ನು ನಿರ್ಲಕ್ಷಿಸಿ, ತತ್ಕಾಲೀನ ವ್ಯಾವಹಾರಿಕ ಗುರಿಯನ್ನಷ್ಟೇ ಗಮನಿಸಿ ಅಭಿಪ್ರಾಯ, ತೀರ್ಪುಗಳನ್ನು ನೀಡುತ್ತಿರುವುದು ದುರದೃಷ್ಟಕರ ಮಾತ್ರವಲ್ಲ, ಅನಾಹುತಕಾರಿ ಕೂಡ. ಇದಕ್ಕೆ ಒಂದೇ ಉತ್ತರ: ನಾವು ನಂಬಿರುವ ಸತ್ಯವನ್ನು, ವಿಶ್ವಾಸ ಕಳೆದುಕೊಳ್ಳದೆ ಪ್ರತಿಪಾದಿಸುತ್ತಾ, ವಿವರಿಸುತ್ತಾ, ಆಗ್ರಹಿಸುತ್ತಾ ಹೋಗುವುದು.

ನನಗೆ ತಿಳಿದಂತೆ, ನ್ಯಾಯಾಂಗದ ಮಟ್ಟಿಗೆ ನಾವು ಸೋಲುತ್ತಿರುವುದಕ್ಕೆ ಮುಖ್ಯ ಕಾರಣ, ನಾವು ನಮ್ಮ ವಾದವನ್ನು ಆಳದ ಬದ್ಧತೆಯೊಂದಿಗೆ, ಅದರ ವಿವಿಧ ಆಯಾಮಗಳೊಂದಿಗೆ ಸಮರ್ಥವಾಗಿ ಮಂಡಿಸದೇ ಹೋಗುತ್ತಿರುವುದೇ ಆಗಿದೆ. ನಮ್ಮ ವಕೀಲರುಗಳು ಇದನ್ನು ಸರ್ಕಾರದ ಕೆಲಸದಂತೆ ಮಾಡುತ್ತಿರುವಂತೆ ತೋರುತ್ತಿದೆಯೇ ಹೊರತು; ಇದು ತಮ್ಮ ಕೆಲಸ, ತಮ್ಮ ಬದುಕಿನ ನಿಜತ್ವವನ್ನು ಕಾಪಾಡಿಕೊಳ್ಳುವ ಕೆಲಸ ಎಂದು ಮಾಡುತ್ತಿದ್ದಾರೆ ಎಂದೆನಿಸುವುದಿಲ್ಲ. ಈ ವಿಷಯದಲ್ಲಿ ತಮಿಳರಿಗೆ ಹೋಲಿಸಿದಂತೆ ನಮ್ಮ ಜನ-ಇವರಲ್ಲಿ ರಾಜಕಾರಣಿಗಳು, ಅಧಿಕಾರಿಗಳು, ವಕೀಲರು ಮತ್ತು ನ್ಯಾಯಾಧೀಶರೂ ಸೇರಿದ್ದಾರೆ-ಹೆಚ್ಚು ಲೋಕಾಭಿರಾಮಿಗಳೇ ಹೌದು. ಹಾಗಾಗಿ, ಅದೃಷ್ಟವಶಾತ್ ಈಗ ನಿಮ್ಮಂತವರ ನೇತೃತ್ವದಲ್ಲಿರುವ ಶಿಕ್ಷಣ ಇಲಾಖೆ ತುರ್ತಾಗಿ ಮಾಡಬೇಕಾಗಿರುವ ಕೆಲಸವೆಂದರೆ, ಈ ಪ್ರಕರಣವನ್ನು ತಮ್ಮ ಬದುಕಿನ ಸೋಲು-ಗೆಲವುಗಳೆಂದು ಪರಿಗಣಿಸಿ ವಾದ ಮಾಡಬಲ್ಲ ಪ್ರಬುದ್ಧ ವ್ಯಕ್ತಿತ್ವದ ಮತ್ತು ನುರಿತ ವಕೀಲರನ್ನು ಗುರುತಿಸಿ, ಅವರಿಗೆ ಸಕಲ ಸೌಲಭ್ಯಗಳನ್ನು ನೀಡುವುದು. ಉದಾಹರಣೆಗೆ, ಶ್ರೀ ರಾಮಾಜೋಯಿಸರೇ ಏಕೆ ಈ ಪ್ರಕರಣವನ್ನು ನಡೆಸಬಾರದು?

ನ್ಯಾಯಾಧೀಶರು ಕಾನೂನಿನ ದೃಷ್ಟಿಯಿಂದ ಮಾತ್ರ ಅಗ್ರಗಣ್ಯರು ಮತ್ತು ಗೌರವಾರ್ಹರು. ಜ್ಞಾನದ ದೃಷ್ಟಿಯಿಂದ ಅಲ್ಲ. ಅವರ ಜ್ಞಾನ ಏನಿದ್ದರೂ ಮಾಹಿತಿ ರೂಪದ ಕಾನೂನುಗಳಿಂದ ಬಂಧಿಸಲ್ಪಟ್ಟದ್ದು, ಅದನ್ನು ವಿಸ್ತರಿಸುವ ಕೆಲಸವನ್ನು ಸಮರ್ಥ ವಕೀಲರು ಮಾಡಬಲ್ಲರು-ಈ ದಿಸೆಯಲ್ಲಿ ಸ್ವಲ್ಪ ಅವರನ್ನು ಕೆಣಕುವ ದುಸ್ಸಾಹಸ ಮಾಡಿಯಾದರೂ! ಇಂಗ್ಲಿಷ್ ಇಂದು ಬದುಕಲು ಅಗತ್ಯವಾದ ಭಾಷೆ ಎಂಬ ಕಾರಣದ ಮೇಲೆ ರಾಜ್ಯ ಸರ್ಕಾರದ ನಿರ್ಧಾರವನ್ನು ತಿರಸ್ಕರಿಸುತ್ತಿರುವ ನ್ಯಾಯಾಧೀಶರಿಗೆ ಮೊದಲು ಮನವರಿಕೆ ಮಾಡಿಕೊಡಬೇಕಾದದ್ದು, ಸರ್ಕಾರದ ನಿಲುವು ಅಡಿಪಾಯದ ಶಿಕ್ಷಣಕ್ಕೆ ಮಾತ್ರ ಸಂಬಂಧಿಸಿದ್ದು, ಇಂಗ್ಲಿಷ್ ಭಾಷಾ ಕಲಿಕೆ ಮತ್ತು ನಂತರದ ಹಂತದ ಮಾಧ್ಯಮಕ್ಕೆ ಸಂಬಂಧಿಸಿದಂತೆ ಸರ್ಕಾರ ಯಾವ ನಿರ್ಬಂಧವನ್ನೂ ಹೇರಿಲ್ಲ ಎಂಬುದನ್ನು.(ಹಾಗೆ ನೋಡಿದರೆ, ಏಳನೇ ತರಗತಿಯವರೆಗಿನ ಇಡೀ ಶಾಲಾ ಶಿಕ್ಷಣ ಮಾಧ್ಯಮ ಮಾತೃ/ಪರಿಸರ ಭಾಷೆಯಲ್ಲಿರಬೇಕೆಂದೇ ರಾಜ್ಯ ಸರ್ಕಾರ ವಾದಿಸಬೇಕು ಎಂಬುದು ನನ್ನ ಅಭಿಪ್ರಾಯ!). ಭಾಷೆ ಕೇವಲ ಮಾಹಿತಿ ವಾಹಕವಲ್ಲ, ಅದೊಂದು ಸಂಸ್ಕೃತಿ ವಾಹಕವೂ ಹೌದು; ಹಾಗಾಗಿ ನಮ್ಮ ಮಕ್ಕಳು ಇಂಗ್ಲಿಷ್ ಕಲಿತು ಎಷ್ಟೇ 'ಮುಂದುವರೆದರೂ' ಅವರು ನಮ್ಮವರೇ ಆಗಿ ಉಳಿಯಲು ಅಡಿಪಾಯದ ಶಿಕ್ಷಣ ಮಾತೃ ಅಥವಾ ಪರಿಸರ ಭಾಷೆಯ ಮೂಲಕವೇ ಆಗಬೇಕು ಎಂಬುದನ್ನು ನ್ಯಾಯಾಧೀಶರಿಗೆ ಮನಗಾಣಿಸಬೇಕು.

ಇದಕ್ಕಾಗಿ ಎಲ್ಲ ಲಭ್ಯ ಆಕರಗಳೊಂದಿಗೆ(ಹಿರಿಯರ ಉಲ್ಲೇಖಗಳು, ಶೈಕ್ಷಣಿಕ ತತ್ವ-ಸಿದ್ಧಾಂತಗಳು, ಭಾಷಾ ಶಾಸ್ತ್ರೀಯ ಸಂಶೋಧನೆಗಳು ಮತ್ತು ಅಂಕಿ ಅಂಶಗಳು) ನಮ್ಮ ವಕೀಲರುಗಳು ಸಜ್ಜಾಗಬೇಕು. ವಿಶೇಷವಾಗಿ, ಶಿಕ್ಷಣ ಮಾಧ್ಯಮದ ಆಯ್ಕೆ ಮೂಲಭೂತ ಹಕ್ಕುಗಳ ವ್ಯಾಪ್ತಿಗೆ ಏಕೆ ಬರುವುದಿಲ್ಲ ಎಂಬುದನ್ನು ವಾದಿಸಲು,

ಸಂವಿಧಾನದ ಮೂಲ ಆಶಯಗಳು ಮತ್ತು ನಿರ್ದೇಶಕ ತತ್ವಗಳು ಕಟ್ಟಬೇಕೆಂದು ಸೂಚಿಸುವ ಭಾರತೀಯ ಬದುಕಿನ ಸ್ವರೂಪದ ವಿಷದವಾದ ವಿಶ್ಲೇಷಣೆಯನ್ನು ಬಳಸಬೇಕು. ಈ ದಿಸೆಯಲ್ಲಿ ಗಾಂಧೀಜಿಯ 'ಹಿಂದ್ ಸ್ವರಾಜ್' ನೆರವಿಗೆ ಬರಬಹುದು.

ನಾನು ನಿಮಗೆ ಮತ್ತು ನಿಮ್ಮ ವಕೀಲರ ತಂಡಕ್ಕೆ ಇಷ್ಟೆಲ್ಲ ಹೇಳುವ ಅಗತ್ಯವಿದೆಯೋ ಇಲ್ಲವೋ ತಿಳಿಯದು. ಆದರೆ ಹೇಳಲೇಬೇಕೆನಿಸಿದ್ದರಿಂದ ಹೇಳಿದ್ದೇನೆ. ಜೊತೆಗೆ ಈ ಸಂಬಂಧ ನನ್ನ ಒಂದು ಕಿರುಪುಸ್ತಕ ಮತ್ತು ಒಂದೆರಡು ಬಿಡಿ ಬರಹಗಳ ಪ್ರತಿಗಳನ್ನು, ಈ ದಿಸೆಯಲ್ಲಿ ಉಪಯೋಗವಾದೀತೆಂದು ನಿಮ್ಮ ಅವಗಾಹನೆಗೆ ಕಳಿಸುತ್ತಿರುವೆ. ನಿಮಗೆ ನಿಮ್ಮ ಕಾನೂನು ಹೋರಾಟದಲ್ಲಿ ಜಯ ದೊರಕಲೆಂದು ಹಾರೈಸುತ್ತಾ,

ವಂದನೆಗಳೊಂದಿಗೆ,

ವಿಶ್ವಾಸದ

(ಡಿ.ಎಸ್.ನಾಗಭೂಷಣ)

ಇವರಿಗೆ:

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ
ಮಾನ್ಯ ಪ್ರಾಥಮಿಕ ಶಿಕ್ಷಣ ಸಚಿವರು(ಕರ್ನಾಟಕ ಸರ್ಕಾರ)
ವಿಧಾನ ಸೌಧ,
ಬೆಂಗಳೂರು–೫೬೦ ೦೦೧

(ಆಗಸ್ಟ್ ೧೪, ೨೦೦೯, ವಿಕ್ರಾಂತ ಕರ್ನಾಟಕ)

೧೮. ಕೆ.ವಿ.ನಾರಾಯಣರ ಕನ್ನಡ ಚಿಂತನೆಯೂ, ಗಾಂಧೀಜಿಯ 'ಹಿಂದ್ ಸ್ವರಾಜ್ಯ'ವೂ...

'ಅರುಹು-ಕುರುಹು' ಪತ್ರಿಕೆಯ ಜುಲೈ-ಸೆಪ್ಟಂಬರ್, ೨೦೦೯ರ ಸಂಚಿಕೆಯಲ್ಲಿ ಡಾ||ಕೆ.ವಿ.ನಾರಾಯಣರ 'ಕನ್ನಡದ ಕೆಸರು ಗದ್ದೆಯಲ್ಲಿ ಇಂಗ್ಲಿಷಿನ ವೈಹಾಳಿ' ಮತ್ತು ಪ್ರೊ||ರಾಜೇಂದ್ರ ಚೆನ್ನಿಯವರ 'ಕನ್ನಡವು ಪರಿಭಾವಿಸುವ ಒಂದು ಕ್ರಿಯೆ' ಎಂಬ ಲೇಖನಗಳು ಗಮನ ಸೆಳೆದವು. ಈ ಗಮನ ನನ್ನನ್ನು ಮತ್ತೆಲ್ಲೆಲ್ಲಿಗೋ ಸೆಳೆದುಕೊಂಡು ಹೋಗಿ ಈ ದೀರ್ಘ ಪ್ರತಿಕ್ರಿಯೆಯನ್ನು ಬರೆಸಿದೆ. ಮುಖ್ಯವಾಗಿ ಕನ್ನಡ ನವೋದಯ ಮೀಮಾಂಸೆಯನ್ನು ಅದರೆಲ್ಲ ಆಳ-ಆರ್ಥಗಳಲ್ಲಿ ಗ್ರಹಿಸದೇ ಹೋದ ಮತ್ತು ಈಗಲೂ ಗ್ರಹಿಸಲು ನಿರಾಕರಿಸುತ್ತಿರುವ ನಮ್ಮ ಹುಸಿ ಅಥವಾ ಮೇಲ್ಮೈ ಆಧುನಿಕತೆ ಮತ್ತು ಆಧುನಿಕೋತ್ತರತೆಗಳೇ ಕೆವಿಎನ್ ಮತ್ತು ಚೆನ್ನಿಯವರ ಇಲ್ಲಿನ ಲೇಖನಗಳಲ್ಲಿ ಕಾಣುವ ಕೆಲವು 'ಖಾಲಿ ಸ್ಥಳ'ಗಳಿಗೆ ಮತ್ತು ವೈರುಧ್ಯಗಳಿಗೆ ಕಾರಣವೆಂಬುದು ನನ್ನ ಅನ್ನಿಸಿಕೆಯಾಗಿದೆ. ಇದನ್ನು ಆದಷ್ಟೂ ಪೂರ್ಣವಾಗಿ ವಿವರಿಸಲು(ಏಕೆಂದರೆ ಹಲವಾರು ಕಡೆ ಇಂತಹ ವಿವರಣೆ ಸಾಧ್ಯವಾಗದೆ, ನನ್ನದು ಕೇವಲ ಕನ್ನಡ ದುರಭಿಮಾನವನ್ನಾಧರಿಸಿದ 'ವಾದ'ವಾಗಿದೆ ಎಂಬ ಅಪವಾದಕ್ಕೂ ನಾನು-ಅನಗತ್ಯ ಮುಜುಗರಗಳ ನಡುವೆ-ಗುರಿಯಾಗಿರುವುದುಂಟು!) ಪ್ರಯತ್ನಿಸಿರುವುದರಿಂದಾಗಿ, ಕೆಲವರಿಗೆ ಅನಗತ್ಯವಾಗಿ ಕಾಣಬಹುದಾದ ಉಲ್ಲೇಖಗಳೂ, ಪ್ರಸಂಗಗಳೂ ಮತ್ತು ಪುನರಾವರ್ತನೆಗಳಂತೆ ಕಾಣುವ-ಒಂದು ಸಂಗತಿಯನ್ನು ಇನ್ನೊಂದು ಸಂಗತಿ ಕೂಡಿಕೊಂಡು ಸ್ಪಷ್ಟೀಕರಿಸುತ್ತಾ ಹೋಗುವ-ಇಲ್ಲಿನ ಸರ್ವೋತೋಮುಖ ವಿಷದೀಕರಣ ಪ್ರಯತ್ನಗಳು ಇಲ್ಲಿ ಸೇರಿಕೊಂಡುಬಿಟ್ಟಿವೆ. ಅದಕ್ಕಾಗಿ ಕ್ಷಮೆ ಇರಲಿ. ನಾನು ಈ ಪ್ರತಿಕ್ರಿಯೆಯನ್ನು-ಅಥವಾ ನಾರಾಯಣರ ಲೇಖನವನ್ನು ನೆಪವಾಗಿರಿಸಿಕೊಂಡು ಆರಂಭಿಸಿ, ಬಹುಶಃ ಅದರ ವಿಸ್ತರಣೆ ಮಾತ್ರವಾಗಿ ಕೊನೆಗೊಂಡಿರುವ ಈ ಲೇಖನವನ್ನು-ಬರೆಯುತ್ತಿದ್ದಾಗ ಹಲವು ಬಾರಿ, ಇದನ್ನು ಯಾರಿಗಾಗಿ, ಯಾಕಾಗಿ ಬರೆಯುತ್ತಿದ್ದೇನೆ ಎಂದು ಪ್ರಶ್ನಿಸಿಕೊಂಡು ಸುಸ್ತಾಗಿದ್ದೇನೆ. ಆದರೂ, ನಾನು ಹೇಳುತ್ತಿರುವುದರಲ್ಲಿ ನನಗೆ ನಂಬಿಕೆಯಿರುವುದರಿಂದ ಬರೆಯುವುದು ನನ್ನ ಕರ್ತವ್ಯವೆಂದು ಭಾವಿಸಿ ಬರಹವನ್ನು ಆ ಸುಸ್ತಿನಲ್ಲೇ ಪೂರ್ಣಗೊಳಿಸಿದ್ದೇನೆ!

-೧-

ಒಂದೆರಡು ವರ್ಷಗಳ ಹಿಂದೆ, ನಮ್ಮ ಕನ್ನಡ ಮಾಧ್ಯಮ ಶಾಲೆಗಳಲ್ಲಿ ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಸುವ ಸರ್ಕಾರದ ಉಪಕ್ರಮ ಹಾಗೂ ಅದಕ್ಕೆ 'ಪ್ರಗತಿಪರ'ರೆಂದು ಹೇಳಲಾದ ಕೆಲವು ಗುಂಪುಗಳು ನೀಡಿದ ಕುಮ್ಮಕ್ಕು ಇವೆರಡೂ ಸೇರಿ ರಾಜ್ಯದ ಭಾಷಾ

ನೀತಿಯಲ್ಲೇ ಪಲ್ಲಟವನ್ನು ಉಂಟು ಮಾಡಿದವು. ಇದು, ವಿಶಾಲಾರ್ಥದಲ್ಲಿ ಒಂದು ರಾಜಕೀಯ ಚಳುವಳಿ ಎಂದೇ ಕರೆಯಬಹುದಾದ 'ಕನ್ನಡ ಚಳುವಳಿ'ಯಲ್ಲಿನ ಒಂದು ನಿರ್ಣಾಯಕ ಘಟ್ಟವೆಂದೇ ನಾನು ಭಾವಿಸಿದ್ದೇನೆ. ಈ ಪಲ್ಲಟವೇ ಇಂದು ರಾಜ್ಯ ಸರ್ಕಾರವು ಅಪರೂಪದ ಬದ್ಧತೆಯೊಂದಿಗೆ ಕನ್ನಡದ ಎಲ್ಲ ಮಕ್ಕಳಿಗೂ ಅಡಿಪಾಯ ಶಿಕ್ಷಣವನ್ನು ಕನ್ನಡದಲ್ಲೇ ಒದಗಿಸುವ–ಒಂದು ರೀತಿಯಲ್ಲಿ ನಾವೆಲ್ಲ ಬಯಸುವ ಏಕರೂಪದ ಶಿಕ್ಷಣದ ಆರಂಭದಂತೆ–ತನ್ನ ಶಿಕ್ಷಣ ನೀತಿಯನ್ನು ರೂಪಿಸಲು ಮತ್ತು ಜಾರಿಗೊಳಿಸಲು ಹಲವು ನೆಲೆಗಳಲ್ಲಿ ತೊಂದರೆಯನ್ನುಂಟು ಮಾಡಿರುವುದು ಎಂದೂ ಇಲ್ಲಿ ಹೇಳಬಹುದು.(ಕನ್ನಡ ಮಾಧ್ಯಮವನ್ನು ಉಳಿಸಲೆಂದೇ ನಾವು ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಸಬೇಕೆನ್ನುವುದು ಎಂದ ಯಾವ ಚಳುವಳಿಕಾರನೂ, ಸ್ಕರ್ಕಾರದ ಸದ್ಯದ ಭಾಷಾ ನೀತಿಯ ಬೆಂಬಲಕ್ಕೆ ಬಂದಿಲ್ಲ!) ಮುಖ್ಯ ಸಂಗತಿಯೆಂದರೆ, ಇಲ್ಲಿಂದಾಚೆಗೇ ಕನ್ನಡ ಚಳುವಳಿ ತನ್ನ ಮೂಲ ಸಾಂಸ್ಕೃತಿಕ ಆಶಯವನ್ನು ಕಳೆದುಕೊಂಡು ಪೂರ್ಣವಾಗಿ ಬೀದಿ ಬಸವರ ಕೈಗೆ ಜಾರಿ ಹೋದದ್ದು. ಇಂತಹ ಪಲ್ಲಟದ, ನಿರ್ಣಾಯಕ ಘಟ್ಟದಲ್ಲಿ ಕನ್ನಡದ ಈ ಇಬ್ಬರು ಮುಖ್ಯ ಚಿಂತಕರು–ನಾರಾಯಣ ಮತ್ತು ಚೆನ್ನಿ–ತಳೆದ ನಿಲುವುಗಳ ಹಿನ್ನೆಲೆಯಲ್ಲಿಯೇ ಇವರ ಈ ಎರಡು ಲೇಖನಗಳು ನನಗೆ ಗಮನಾರ್ಹವೆನಿಸಿದ್ದು.

ಕೆ.ವಿ.ನಾರಾಯಣರಿಗೆ, ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಸುವುದಕ್ಕೆ, ಅವರ 'ಕನ್ನಡ ಜಗತ್ತು: ಅರ್ಧ ಶತಮಾನ' ಪುಸ್ತಕದಲ್ಲಿನ ವಾದದಲ್ಲಿ ಹಲವಾರು ಕಡೆ ಸೂಚಿತವಾಗಿರುವಂತೆ **(ಟಿಪ್ಪಣಿ–೧ ನೋಡಿ)** ವಿರೋಧವೇನೂ ಇದ್ದಂತೆ ತೋರುವುದಿಲ್ಲ. ಹಾಗೆಂದು, ಅವರು ಬಹಿರಂಗವಾಗಿ(ಅಥವಾ ವಾಚ್ಯವಾಗಿ!) ತಮ್ಮ ವಿರೋಧವಿಲ್ಲವೆಂದೂ ಹೇಳಲಿಲ್ಲ. ಬದಲಿಗೆ ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಸಬೇಕೆಂಬ ಜನರ ಬೇಡಿಕೆಯನ್ನು ಸಹಾನುಭೂತಿಯಿಂದ ಪರಿಶೀಲಿಸಬೇಕೆಂಬುದು ಅವರ ಬಹಿರಂಗ ವಾದವಾಗಿತ್ತು. ಅಂದರೆ ಅಂದಿನ ಸಂದರ್ಭದ ಒತ್ತಡಗಳ ಹಿನ್ನೆಲೆಯಲ್ಲಿ ಗ್ರಹಿಸಿದಾಗ, ಅವರ ಈ ವಾದ ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಸುವುದರ ಪರವಾಗಿಯೇ ಇತ್ತು ಎಂದು ಹೇಳಬಹುದು. ಹಾಗೆ ನೋಡಿದರೆ ಅವರು ಕೇವಲ ಒಬ್ಬ ಭಾಷಾ ವಿಜ್ಞಾನಿಯಾಗಿ ಮಾತ್ರವಲ್ಲ, ಸಂಸ್ಕೃತಿ ಚಿಂತಕರಾಗಿಯೂ ಮಾನ್ಯತೆ ಪಡೆದಿದ್ದವರಾಗಿ, ಜನರ ಆ ಬೇಡಿಕೆಯನ್ನು ತಾವೇ ಸಹಾನುಭೂತಿಯಿಂದ ಪರಿಶೀಲಿಸಿ ಒಂದು ವೈಯುಕ್ತಿಕ ನಿಲುವು ತೆಗೆದುಕೊಂಡು ಅಂದಿನ ಚರ್ಚೆಯನ್ನು ಅರ್ಥಪೂರ್ಣಗೊಳಿಸಬಹುದಿತ್ತು. ಆದರೆ ಅವರು ಹಾಗೆ ಮಾಡಲಿಲ್ಲ. ಅದು ಅವರ ಜಾಣತನವೋ, ಅವರ ವಿದ್ವದ್ವಿಶಿಷ್ಟವಾದ ನಿರ್ಲಿಪ್ತಿಯೋ ಅಥವಾ ಅವರೇ ನನ್ನಲ್ಲಿ ಒಮ್ಮೆ ಹೇಳಿಕೊಂಡಂತೆ ಅವರ ಹುಟ್ಟು ಗುಣವೋ ತಿಳಿಯದು! ಆದರೆ ಇದೆಲ್ಲದರಿಂದ ಒಂದು ಒಂದು ಸಂಗತಿಯಂತೂ ಸ್ಪಷ್ಟವಾಗುತ್ತಿದೆ: ನಮ್ಮ 'ಸಾಮಾಜಿಕ ನ್ಯಾಯ' ಕುರಿತ ಸಂಕಥನ ದಿನೇ ದಿನೇ ಜಟಿಲವಾಗುತ್ತಾ, ಅದರ ಮೂಲ ಆಶಯದಿಂದ ದೂರ ಸರಿಯುತ್ತಾ; ನಮ್ಮ ಚಿಂತಕರನ್ನೂ, ಬುದ್ಧಿಜೀವಿಗಳನ್ನೂ ಸುಲಭದಲ್ಲಿ ಬಿಡಿಸಿಕೊಳ್ಳಲಾರದ ದ್ವಂದ್ವಕ್ಕೆ ಸಿಲುಕಿಸಿದೆ.

ಇಂತಹ ಸಂದರ್ಭದಲ್ಲಿ ಕೆ.ವಿ. ನಾರಾಯಣರ ಪ್ರಸ್ತುತ ಲೇಖನ ಈ ದ್ವಂದ್ವದ ಸಿಕ್ಕುಗಳನ್ನೆಲ್ಲ ಯಾವುದೇ ವಿವರಣೆಯ ಗೋಜಿಲ್ಲದೆ, ಒಮ್ಮೆಗೇ ಮನಸ್ಸಿನಿಂದ ಕಿತ್ತೆಸೆದು, ನಿರಾಳವಾಗಿ ತಮ್ಮ ಚಿಂತನೆಯನ್ನು ಹೊಸ ದಿಕ್ಕಿನೆಡೆಗೆ(ಅಥವಾ ಹಳೆಯ ದಿಕ್ಕಿನೆಡೆಗೆ ಹೊಸ ನಡಿಗೆ?)

ಒಯ್ಯುವ ಪ್ರಯತ್ನದಂತೆ ತೋರುತ್ತದೆ. ಇನ್ನು ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಸುವುದನ್ನು 'ಸಾಮಾಜಿಕ ನ್ಯಾಯ'ದ ಕಾರಣ ಮುಂದೊಡ್ಡಿ ಬಲವಾಗಿ ಪ್ರತಿಪಾದಿಸಿದವರಲ್ಲಿ ಒಬ್ಬರಾದ ಚೆನ್ನಿಯವರ ಲೇಖನ, ದೇಶದ ಎರಡಂಕಿ ಪ್ರಗತಿ ದರದ ಸೊಕ್ಕಿನಲ್ಲಿ ಉಕ್ಕಿದ ಇಂಗ್ಲಿಷ್ ಕಾಮಾಂಧತೆಯನ್ನು ಪಾಪ, ಪ್ರೇಮಾಂಧತೆಯೆಂದು ಅರ್ಥೈಸಿಕೊಂಡು ತಾವು ತೆಗೆದುಕೊಂಡ ಸಹಾನುಭೂತಿಯ ನಿಲುವಿಗೆ; ಇಂದಿನ ಜಾಗತಿಕ ಆರ್ಥಿಕ ಹಿಂಜರಿತದ ಸಂದರ್ಭದಲ್ಲಿ, ಒಂದು ರೀತಿಯ ಸಮರ್ಥಾಯಿಷಿ ನೀಡುವ ರೀತಿಯಲ್ಲಿದೆ. ಅದು, ಆಧುನಿಕ ಕನ್ನಡ ಚಳುವಳಿಯ(ಏಕೆಂದರೆ, ಆಂಡಯ್ಯನಿಂದ ಆರಂಭವಾದ ಪುರಾತನ ಕನ್ನಡ ಚಳುವಳಿಯೂ ಇದೆ!) ಹುಟ್ಟಿಗೆ ಕಾರಣವಾದ ಕನ್ನಡ ನವೋದಯವು ಕನ್ನಡವೆಂದರೇನು ಎಂದು ಹೇಳಿದ್ದನ್ನೇ ಈಗಾಗಲೇ ಕ್ಲೀಷೆಯಾಗಿ ಹೋಗಿರುವ ಎಡಪಂಥೀಯ ಪರಿಭಾಷೆಯಲ್ಲಿ ಹೇಳಲು ಯತ್ನಿಸುತ್ತಾ ತನ್ನ ಮುಜುಗರವನ್ನು ಮರೆ ಮಾಡಿಕೊಳ್ಳಲು ಯತ್ನಿಸಿದೆ. ಹಾಗೇ ಕೆ.ವಿ.ಎನ್. ಅವರ ಈ 'ಹೊಸ' ನೋಟವೂ ಸದ್ಯದ ಆರ್ಥಿಕ ಹಿಂಜರಿತ ಉಂಟು ಮಾಡಿರುವ ಸಾಂಸ್ಕೃತಿಕ ಪರಿಣಾಮವಾಗಿದ್ದರೂ ಆಶ್ಚರ್ಯವಿಲ್ಲ. ಏಕೆಂದರೆ ಈ ಇಬ್ಬರೂ ಸ್ಥೂಲವಾಗಿಯಾದರೂ ಮಾರ್ಕ್ಸ್‌ವಾದಿ ಲೋಕದೃಷ್ಟಿಯನ್ನು ನಂಬಿದವರು ಅರ್ಥಾತ್ ಮೂಲತಃ ಆರ್ಥಿಕವಾದಿ ಆಧುನಿಕತೆಯನ್ನು ಒಪ್ಪಿದವರು ಅಥವಾ ಅದರಿಂದ ವೈಚಾರಿಕ ಸ್ಫೂರ್ತಿ ಪಡೆದವರು.(ನನ್ನ ತಿಳುವಳಿಕೆ ತಪ್ಪಿದ್ದರೆ ತಿದ್ದಬಹುದು)

-೨-

ಕೆ.ವಿ.ನಾರಾಯಣರು ಈ ಲೇಖನದ ಮೂಲಕ ತಾವು ಪುನರ್ಭೇಟಿ (ಈ ಶಬ್ದ ಮತ್ತು ಅದರ ಕಾಗುಣಿತ ಸರಿಯೋ ತಪ್ಪೋ ನನಗೆ ತಿಳಿಯದು!) ನೀಡಲು ಬಯಸಿರುವ ವಿಷಯದ ಬಗ್ಗೆ ಇರಬಹುದಾದುವೆಂದು ಅವರೇ ಸೂಚಿಸಿರುವ ಎರಡು ಪ್ರತಿಕ್ರಿಯೆಗಳಲ್ಲಿ ನಾನು ಮೊದಲನೆಯ ಬಗೆಗೆ ಸೇರಿದವನು. ಆದರೆ, ಅವರು ಬಹುಶಃ ತಮ್ಮ ಪುನರ್ಭೇಟಿಯ ಬಗೆಗೆ ತಮಗೇ ಇರುವ ಸಂಕೋಚದಿಂದಲೋ ಏನೋ ಸಂಶಯಿಸಿರುವಂತೆ, ನಾನು ಕೇಕೆ ಹಾಕಿ ಏನೂ ನಗುವುದಿಲ್ಲ. ಹಾಗೇ, ನಿಮಗೆ ಈಗ ಬುದ್ಧಿ ಬಂತೇ ಎಂದೂ ಕೇಳುವುದಿಲ್ಲ. ಮತ್ತು ಅವರ ಮೇಲೆ ಪಶ್ಚಿಮ ಬುದ್ಧಿಯ ಆರೋಪವನ್ನೂ ಹೊರಿಸುವುದಿಲ್ಲ. ಏಕೆಂದರೆ ಈ ಆರೋಪಕ್ಕೆ ನಮ್ಮಲ್ಲಿ ಮುಕ್ಕಾಲು ಮೂರು ವೀಸಾ ಪಾಲು ಬಾಧ್ಯರೇ ಆಗಿದ್ದೇವಲ್ಲ? ಆದರೆ ನನ್ನಂಥವರು ಅಥವಾ ನಾನು ಪ್ರತಿನಿಧಿಸುವ ಚಿಂತನಾ ಕ್ರಮದವರು ನಾರಾಯಣರು ಭಾವಿಸುವ ಹಾಗೆ, 'ಮರುಖನನದಿಂದ ಅದೋ ನಮ್ಮ ವಿಗ್ರಹ ಕೈಗೆ ದೊರಕುತ್ತದೆ' ಎಂದೂ ಹೇಳುವುದಿಲ್ಲ. ಇದೆಲ್ಲ ನಾರಾಯಣರು ತಾವು ೧೯೮೮ರಲ್ಲಿ 'ಇನ್ನು ಕನ್ನಡಿಗಳು ಸಾಕು' ಲೇಖನದ ಮೂಲಕ ಕಂಡುಕೊಂಡಿದ್ದ ದಾರಿಯಿಂದ ವಿಮುಖವಾದದ್ದರ(ಅಥವಾ ನನ್ನಂಥ ಕೆಲವರು ಹಾಗೆಂದು ಅಂದುಕೊಂಡಿರಬಹುದೆಂದು ಭಾವಿಸಿದ್ದರ) ಬಗ್ಗೆ ಇರಬಹುದಾದ ಅಳುಕನ್ನು ಮುಚ್ಚಿಕೊಳ್ಳಲು ಮುಂದೊಡ್ಡಿರುವ ಊಹೆ ಮಾತ್ರ ಎಂದು ನಾನು ಭಾವಿಸುತ್ತೇನೆ. ಏಕೆಂದರೆ ನನ್ನಂಥವರಿಗೆ, ನಾರಾಯಣರು ಈಗ ಹೊಸದಾಗಿ ಕಂಡುಕೊಂಡಿರುವಂತೆ ತೋರುವ, 'ಹೊರದಾರಿಯ ಸೂಚನೆಗಳು ನಮ್ಮ ಹಿರೀಕರಲ್ಲೇ ಇವೆ' ಎಂಬುದು ಬರೀ ನಂಬಿಕೆ ಮಾತ್ರವಲ್ಲ, ಮನವರಿಕೆಯೂ ಆಗಿದೆ. ಹಾಗಾಗಿ ನಾನು

ಈ ಲೇಖನಕ್ಕಾಗಿ ಅವರನ್ನು ಮೊದಲು ಅಭಿನಂದಿಸಬಯಸುತ್ತೇನೆ.

ನಾರಾಯಣರ 'ಇನ್ನು ಕನ್ನಡಿಗಳು ಸಾಕು' ಬರಹಕ್ಕೆ ಆಗ, ಈಗ ಅವರೇ ನೆನಪಿಸಿರುವಂತಹ ಎರಡು ರೀತಿಯ ಪ್ರತಿಕ್ರಿಯೆಗಳು ಸಹಜವೇ ಆಗಿತ್ತು. (**ಟಿಪ್ಪಣಿ–೨ ನೋಡಿ**). ಈಗಲೂ ಕೂಡಾ ಬಹಳ ಜನರ ಪ್ರತಿಕ್ರಿಯೆ ಹಾಗೇ ಇರುತ್ತದೆ ಎಂಬುದರ ಬಗ್ಗೆ ಸಂದೇಹ ಬೇಡ. ಏಕೆಂದರೆ, ಆಗ ಆಧುನಿಕತಾವಾದದ ಅಮಲಿನಲ್ಲಿ ಹುಟ್ಟಿಕೊಂಡ ಸಕಾರಣ ವಿವರವಾದ ಪ್ರತಿಕ್ರಿಯೆಗಳೂ, ಈಗ ಆಧುನಿಕೋತ್ತರವಾದದ ಅಮಲಿನಲ್ಲಿ ಹುಟ್ಟಲಾರವು. ಬದಲಿಗೆ ನಾರಾಯಣರು ಸೂಚಿಸಿದ ಹಾಗೆ, 'ಇತರ' ಎನ್ನುವುದೇ ಇಲ್ಲ;ಅದು ಭ್ರಮೆ ಎಂದು ಒಂದೇ ಮಾತಿನಲ್ಲಿ ಅದನ್ನು ಅವರು ತಳ್ಳಿಹಾಕಿಯಾರು. ಈ ಇತರ ಎಂಬುದಿಲ್ಲ ಎಂಬುದು 'ಗುಹೇಶ್ವರನೆಂಬುದು ಮೀರಿದ ಘನವು' ಎನ್ನುತ್ತಾರಲ್ಲ, ಆ ಅರ್ಥದಲ್ಲಿ ಬಹು ಘನವಾದ ಮಾತು. ಆದರೆ ಅದನ್ನು, ಗುಹೇಶ್ವರನ ಹೆಸರು ಹೇಳಲೂ ಯೋಗ್ಯರಲ್ಲದವರೆಲ್ಲ ಆಡತೊಡಗಿ ಅದು ಭೋಳೆಯಾಗಿ, ಎಕ್ಕುಟ್ಟಿ ಹೋಗಿದೆ. ಈ ಅವರೆಲ್ಲ ಹಿಪ್ಪಿಗಳಂತೆ ಆಡುವ ಅಣಕು ಹಿಪ್ಪಿಗಳು; ಕಳ್ಳ ಗೃಹಸ್ಥರು. ಅಲ್ಲಮನ ಮಾತಿನಲ್ಲೇ ಹೇಳುವುದಾದರೆ, ಉಭಯ ಭ್ರಷ್ಟರು. ಆದುದರಿಂದ ಅಂತಹವರ ಪ್ರತಿಕ್ರಿಯೆ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಳ್ಳುವ ಅಗತ್ಯವಿಲ್ಲ. ಆದರೆ, ಕೆ.ವಿ.ನಾರಾಯಣರಿಗೆ ಇಂಗ್ಲಿಷ್ ಮೂಲಕ ನಮ್ಮನ್ನು ನಾವು ಅರಿಯುವ, ಕಟ್ಟಿಕೊಳ್ಳುವ ವಿಪರ್ಯಾಸ ಕುರಿತು ಈಗ ಏನನ್ನಿಸಿದೆಯೋ, ಯಾವ ಪ್ರಶ್ನೆಗಳು, ಆತಂಕಗಳು ಹಾಗೂ ಅನುಮಾನಗಳು ಅವರ ಈ ಲೇಖನದಲ್ಲಿ ವ್ಯಕ್ತವಾಗಿವೆಯೋ, ಬಹುಶಃ ಅವೆಲ್ಲವೂ ಕನ್ನಡ–ಕರ್ನಾಟಕ ಕುರಿತ ನಮ್ಮ ನವೋದಯ ಮೀಮಾಂಸೆಯಲ್ಲಿ ಅಂತರ್ಗತವಾಗಿದ್ದವು ಎಂದು ನಾನು ಭಾವಿಸಿದ್ದೇನೆ. ವಿಶೇಷವಾಗಿ ಕುವೆಂಪು ಅವರ ಕನ್ನಡ–ಕರ್ನಾಟಕ ಮೀಮಾಂಸೆಯಲ್ಲಿ. ಆಲೂರರರದು ಬಹುಶಃ 'ಮರುಖನನದಿಂದ, ಅಗೋ ನಮ್ಮ ಬಂಗಾರದ ವಿಗ್ರಹ' ಎಂದು ತೋರಿಸುವರೆಂದು ನಾರಾಯಣರು ಸೂಚಿಸುವ ಮಾದರಿಯಾದರೆ, ಬಿಎಂಶ್ರೀಯವರದು ಈಗ ನಾರಾಯಣರು ಎತ್ತಿರುವ ಪ್ರಶ್ನೆ, ಅನುಮಾನ, ಆತಂಕಗಳಿಗೆ ಕಾರಣವಾಗಿರುವ ಮಾದರಿಯದು. ಕನ್ನಡ ಸಂಸ್ಕೃತಿಯ ನವೋದಯ ಮೀಮಾಂಸೆಯನ್ನು ಕಟ್ಟಿದವರು ಮುಖ್ಯವಾಗಿ ಈ ಮೂವರು ಎಂಬ–ಅಷ್ಟೇನೂ ವಿದ್ವತ್ತಿನಿಂದ ಕೂಡಿರದ–ನನ್ನ ತಿಳುವಳಿಕೆಯ ಆಧಾರದ ಮೇಲೆ ಈ ಮಾತುಗಳನ್ನಾಡುತ್ತಿರುವೆ.

ಕುವೆಂಪು ಅವರ ಕನ್ನಡ ಮೀಮಾಂಸೆ ಯಾವ ಆತಂಕಗಳನ್ನು ಮನಗಂಡು, ಯಾವ ಮುನ್ನೋಟವನ್ನು ಸಾಧಿಸಿತ್ತೋ, ಅವನ್ನು ನಾರಾಯಣರು ಈಗ ಬಿಎಂಶ್ರೀ ಅವರ ಕನ್ನಡ ಮೀಮಾಂಸೆಯನ್ನು ಒಪ್ಪಿ ಸಾಗಿದ ಮಾರ್ಗದಲ್ಲಿ ಉಂಟಾದ ಅನುಮಾನ–ಪ್ರಶ್ನೆಗಳ ರೂಪದಲ್ಲಿ ಎತ್ತುತ್ತಾ, ತಾವು ಬಹುಶಃ ಹೀಗೆ ದಾರಿ ತಪ್ಪಿದ್ದು ಆಲೂರರ ಕನ್ನಡ ಮೀಮಾಂಸೆಯ ಭಯದಿಂದ ಎಂದು ಸೂಚಿಸುತ್ತಿರುವಂತಿದೆ! ಹಾಗೇ ಚೆನ್ನಿಯವರು ಕೂಡಾ. ಯಾವುದೇ ವಿಶ್ವಾಸಾರ್ಹತೆಯಿಲ್ಲದೆ ಈಗ ಅಂಚಿನಲ್ಲೇ ಕ್ರಿಯಾಶೀಲವಾಗಿರುವ ಕನ್ನಡ ಬೀದಿ ಚಳುವಳಿಯನ್ನು ದೊಡ್ಡ ಶತ್ರುವೆಂಬಂತೆ ಕಲ್ಪಿಸಿಕೊಂಡು ಗಂಭೀರವಾಗಿ ವಾದ ಮಾಡುತ್ತಾ, ಯಾವುದೇ ಭಾಷಾ ಚಳುವಳಿ ಆ ಭಾಷೆಯನ್ನಾಡುವ ಜನರ ಕಲ್ಯಾಣವನ್ನೂ ಗಮನದಲ್ಲಿಟ್ಟು ಕೊಂಡಿರಬೇಕೆಂಬ ಎಂಬ ಅನಗತ್ಯ ಕರೆ ಕೊಟ್ಟಿದ್ದಾರೆನಿಸುತ್ತದೆ. ಅದೂ, ಭಾಷೆ ಎಂಬುದು

ಪರಿಭಾವಿಸುವ ಒಂದು ಕ್ರಿಯೆ ಎಂಬ ಅಷ್ಟೇನೂ ಹೊಸದಲ್ಲದ ಪರಿಕಲ್ಪನೆಯನ್ನು ಮುಂದೊಡ್ಡುವ ಮೂಲಕ. ಆದರೆ ಒಂದು ತಿದ್ದುಪಡಿ: ಭಾಷೆ ಪರಿಭಾವಿಸುವ ಒಂದು ಕ್ರಿಯೆ ಮಾತ್ರವಲ್ಲ, ಒಂದು ಕ್ರಮ ಕೂಡಾ!

ಚೆನ್ನಿವರ ಲೇಖನ(ಭಾಷಣ)ದ ಮುಖ್ಯ ಸಮಸ್ಯೆ ಎಂದರೆ, ಅವರು ಕನ್ನಡ ರಾಜಕಾರಣವನ್ನು ಒಂದು ವಿಶಾಲ ರಾಷ್ಟ್ರ ಜೀವನದ ಭಿತ್ತಿಯ ಹಿನ್ನೆಲೆಯಲ್ಲಿಟ್ಟು ನೋಡುತ್ತಿರುವಾಗ, ಭಾರತದಲ್ಲಿ ರಾಷ್ಟ್ರೀಯತೆ ಎಂಬುದು ಅದರ ಆಧುನಿಕ ಅರ್ಥದಲ್ಲಿ ಸಂಘಟಿತವಾಗತೊಡಗಿದ ಸಂದರ್ಭ ಮತ್ತು ಆಶಯಗಳನ್ನು ಗಮನಿಸದೇ ಆ ಕನ್ನಡ ರಾಜಕಾರಣದ ಹಿಂದಿರುವ ಚಲನಶೀಲತೆಯನ್ನು ಅ(ಪಾ)ರ್ಥ ಮಾಡಿಕೊಳ್ಳಹೊರಟಿರುವುದು. ನಮ್ಮ ರಾಷ್ಟ್ರೀಯತೆಯು ಜನ ಮಧ್ಯದ ಬೇರುಗಳನ್ನು ಕಂಡುಕೊಂಡಿದ್ದೇ, ಬ್ರಿಟಿಷರು ದುರುದ್ದೇಶಪೂರ್ವಕವಾಗಿ ಕೈಗೊಂಡ ಬಂಗಾಳ ವಿಭಜನೆಯ ವಿರುದ್ಧ ಎದ್ದ ಬಂಗಾಳಿ ಭಾಷಿಕರ ಆಂದೋಲನದ ಮೂಲಕ; ಹಾಗೂ ನಂತರ ಇದರಿಂದ ದೇಶದ ವಿವಿಧ ಭಾಷಾ ಸಮುದಾಯಗಳಲ್ಲಿ ಉಂಟಾದ ಸಾಂಸ್ಕೃತಿಕ ಅಸ್ಮಿತೆಯ ಜಾಗೃತಿಯ ರಾಜಕೀಯ ರೂಪಗಳಲ್ಲಿ ಎಂಬುದನ್ನು ನಾವು ಗಮನಿಸಬೇಕು. ಹಾಗೆ ಗಮನಿಸಿದಾಗ ಕರ್ನಾಟಕದ ಏಕೀಕರಣದ ಹಿಂದೆ ಕನ್ನಡ ಒಂದು ಭಾಷೆಯಾಗಿ ಮಾತ್ರವಲ್ಲ, ಒಂದು ಸಂಸ್ಕೃತಿಯಾಗಿ ಹಾಗೂ ಒಂದು ರಾಜಕಾರಣವಾಗಿ ಕೂಡಾ ಕ್ರಿಯಾಶೀಲವಾಗಿತ್ತು ಎಂಬುದು ನಮ್ಮ ಅರಿವಿಗೆ ಬರುತ್ತದೆ. ಹಾಗೇ, ಈ ಏಕೀಕರಣ ಚಳುವಳಿಯ ಹಿಂದೆ ಭಾರತದ ಯಾವ ಭಾಷಾ ಸಂಸ್ಕೃತಿಯೂ ಆಧುನಿಕ ಇತಿಹಾಸದಲ್ಲಿ ಒಳಗಾಗದಂತಹ ಅದರ ರಾಜಕೀಯ ಮತ್ತು ಭೌಗೋಳಿಕ ವಿಚ್ಛಿದ್ರೀಕರಣದ(ಬಹುಶಃ ಈ ಕಾರಣದಿಂದಲೇ ಕರ್ನಾಟಕ ಇಡೀ ಭಾರತದಲ್ಲಿ, ತನ್ನ ರಾಜ್ಯಭಾಷೆಯನ್ನಾಡುವ ಅತಿ ಕಡಿಮೆ ಶೇಕಡಾವಾರು–ಸುಮಾರು ಶೇ.೬೫ರಷ್ಟು–ಜನಸಂಖ್ಯೆಯನ್ನುಳ್ಳ ರಾಜ್ಯವಾಗಿದೆ) ಕಹಿ ನೆನಪುಗಳು ಕೆಲಸ ಮಾಡಿದ್ದು; ಅದರ ಪರಿಣಾಮವಷ್ಟೇ, ನಮ್ಮ ಜನಪ್ರಿಯ ಕನ್ನಡ ಚಳುವಳಿಗಳಲ್ಲಿ ಅನ್ಯಭಾಷಾ ಆಕ್ರಮಣಗಳನ್ನು ಕುರಿತ ಆತಂಕದ ವಿವಿಧ ರೂಪಗಳಲ್ಲಿ ಕಾಣಬರುತ್ತಿದೆ ಎಂಬುದು ಗೊತ್ತಾಗುತ್ತದೆ. ಇಂತಹ ಆತಂಕ ಈಗ ಹಲವು ಪ್ರಸಂಗಗಳಲ್ಲಿ ಆಗುತ್ತಿರುವಂತೆ(ಇತ್ತೀಚಿನ ಉದಾ: ಬೆಂಗಳೂರಿನಲ್ಲಿ ತಿರುವಳ್ಳುವರ್ ಪ್ರತಿಮೆ ಸ್ಥಾಪನೆಗೆ ವಿರೋಧ), ವಿಕೃತ ರೂಪಗಳನ್ನು ತಾಳದಂತೆ ನೋಡಿಕೊಳ್ಳುವ ಆರೋಗ್ಯಕರ ದಾರಿ ಎಂದರೆ, ರಾಷ್ಟ್ರ ರಾಜಕಾರಣದ ಒತ್ತಡಗಳ ಎದುರು ಕನ್ನಡದ ರಾಜಕಾರಣವನ್ನು ಬಲಪಡಿಸುವುದೇ ಆಗಿದೆ.

ಹಾಗೆ ನೋಡಿದರೆ, ಕರ್ನಾಟಕ ಏಕೀಕರಣ ಚಳುವಳಿಯೊಂದಿಗೆ ಆರಂಭವಾದ ಆಧುನಿಕ ಕನ್ನಡ ರಾಜಕಾರಣವು ಅದರ ವಿಸ್ತಾರ ರೂಪದಂತಿದ್ದ ಸ್ವಾತಂತ್ರ್ಯ ಹೋರಾಟದ ಉದಾರವಾದಿ ಆಶಯಗಳೊಂದಿಗೆ ಪ್ರಜಾಪ್ರಭುತ್ವವಾದಿಯಾಗಿಯೇ ಬೆಳೆದಿದೆ, ಉಳಿದಿದೆ. ಹೀಗಾಗಿ ಕನ್ನಡ ಸಂಸ್ಕೃತಿಯು ಇತರ ಸಂಸ್ಕೃತಿಗಳ ನಡುವೆ ಬಾಳುತ್ತಿರುವ ಅರಿವು ಹೊಂದಿರಬೇಕು ಎಂದು ಸೂಚಿಸುವ ಚೆನ್ನಿಯವರ ಮಾತು ಇತ್ತೀಚಿಗೆ ಎಡಪಂಥೀಯರಲ್ಲಿ ಒಂದು ಚಟವಾಗಿ ಹೋಗಿಬಿಟ್ಟಿರುವಂತೆ ಕಾಣುವ ಬಹುತ್ವ ಕುರಿತ ಅಕಡೆಮಿಕ್ ರೊಮ್ಯಾಂಟಿಸಿಂನಿಂದ ಮಾತ್ರ ಹುಟ್ಟಿದ ಮಾತಾಗಿ ಕೇಳಿಸುತ್ತದೆ. ಚೆಲುವ ಕನ್ನಡ ನಾಡಿನ ಉದಯ ಒಂದು ನಿರಂತರ ಪ್ರಕ್ರಿಯೆ ಎಂದು ಕನ್ನಡ ನವೋದಯ ನಂಬಿತ್ತು ಎಂದು ಸರಿಯಾಗಿಯೇ ಚೆನ್ನಿ ಗುರುತಿಸಿದ್ದಾರೆ.

ಆದರೆ, ಕನ್ನಡ ನವೋದಯದ ಈ ನಂಬಿಕೆ ಚೆಲುವ ಭಾರತದ ಉದಯ ಕೂಡ ಒಂದು ನಿರಂತರ ಪ್ರಕ್ರಿಯೆಯೇ ಆಗಿದೆ ಎಂಬ ನಂಬಿಕೆಯ ಅವಿಭಾಜ್ಯ ಅಂಗವೇ ಅಗಿತ್ತು ಎಂಬುದನ್ನು ಮರೆತಂತೆ ತೋರುತ್ತದೆ! ಹಾಗಾಗಿಯೇ, ನಮ್ಮ ಬಹಳಷ್ಟು ಬುದ್ಧಿಜೀವಿಗಳು ಕನ್ನಡದ ಸಾಮಾನ್ಯ ಜನರಿಗೆ ಹೋಲಿಸಿದಂತೆ, ಕನ್ನಡ ನವೋದಯ ಎಂಬ ವಿದ್ಯಮಾನದ ವ್ಯುತ್ಪತ್ತಿಯನ್ನೇ ಪೂರ್ಣವಾಗಿ ಪರಿಗ್ರಹಿಸಿದಂತಿಲ್ಲ ಎಂದು ಹೇಳಬೇಕಾಗಿದೆ. ಹಿಂದೊಮ್ಮೆ ಶಂಕರ ಮೊಕಾಶಿ ಪುಣೇಕರರು ಕನ್ನಡ ನವೋದಯವೇ ಇನ್ನೂ ಪೂರ್ಣಗೊಂಡಿಲ್ಲ ಎಂದಿದ್ದುದು ಬಹುಶಃ ಈ ಅರ್ಥದಲ್ಲಿಯೇ ಇರಬಹುದು!

ಪುಣೇಕರರು, ದೊರೆಯ ಮೈಮೇಲೆ ಬಟ್ಟೆಯಿಲ್ಲ ಎಂದು ಹೇಳಬಲ್ಲ ಮಗುವಿನ ಮುಗ್ಧತೆಯನ್ನು ಉಳಿಸಿಕೊಂಡಿದ್ದ ವಿದ್ವಾಂಸ. (ಈ ಕಾರಣದಿಂದಾಗಿಯೇ ಆಗಿನ ಕೆಲವು ಬುದ್ಧಿಜೀವಿ ಘಟವಾಗಳು ಅವರನ್ನು ಸ್ವಲ್ಪ ತಿಕ್ಕಲು ಎನ್ನುತ್ತಾ ಅಣಕಿಸುತ್ತಿದ್ದುದು!) ಆದರೆ ಇಂದು ಕನ್ನಡ ವಿದ್ವತ್ತೆಂಬುದು ಆ ಮುಗ್ಧತೆಯನ್ನು ಕಳೆದುಕೊಂಡು, ಕಲಿತ ಸಿದ್ಧಾಂತಗಳನ್ನು ಚಪ್ಪರಿಸುತ್ತಾ ಸುಮ್ಮನೆ ಮೆರೆದಾಡುತ್ತಿದೆ. ಹಾಗಾಗಿಯೇ ಇಂಗ್ಲಿಷ್ ಅನುವಾದ ಅಥವಾ ನಿರೂಪಣೆಗಳ ಮೂಲಕ ಕನ್ನಡ ಸಂಕಥನಗಳನ್ನು ಹೊಸ ಹೊಳಹುಗಳೊಂದಿಗೆ ಅರ್ಥ ಮಾಡಿಕೊಳ್ಳಬಹುದೆಂಬ– ನಾರಾಯಣರು ಬಹು ಚೆನ್ನಾಗಿ ನುಡಿಗಟ್ಟಿಸಿರುವ–'ಕನ್ನಡ ಅರಿವನ್ನು ಇಂಗ್ಲಿಷ್ ನುಡಿಯ ಮೂಲಕ ಮೂಲಕ ಅರಿಯುವ ಹೊಸ ದಾರಿ'ಯ ಹುಸಿತನವೇ ಈ ಯಾರ ಅರಿವಿಗೂ ಬರಲಿಲ್ಲ. ಇದನ್ನು ಹುಸಿತನವೆಂದು ಕರೆಯುವುದೂ ತಪ್ಪೇನೋ. ಬಹುಶಃ ಅದು ಅಪ್ಪಟ ಮೂರ್ಖತನ;ಹಾಸ್ಯಾಸ್ಪದ ಮೂರ್ಖತನ. ಹೆಚ್ಚೆಂದರೆ ಅದು, ಮೂಲದಲ್ಲಿ ಇಲ್ಲದೇ ಇದ್ದುದನ್ನು ಹೊರಗಿನ 'ಪರಿಕರ'ಗಳ ಮೂಲಕ ಸೃಷ್ಟಿಸಿ ತೋರಿಸುವ ಜಾದೂಗಾರಿಕೆಯಷ್ಟೆ. ಅದೇ ಇಂಗ್ಲಿಷ್ ಜಾದೂ (ಸಂಸ್ಕೃತವೂ ಒಂದು ನುಡಿಯಾಗಿ ಮಾಡಿದ್ದೂ ಸ್ವಲ್ಪ ಇದೇ ತೆರೆನ ಜಾದೂವನ್ನೇ ಇರಬೇಕು). ಈ ಜಾದೂಗೆ (ಕುವೆಂಪು ಪ್ರಕಾರ ಪೂತನಿಯ ಹಾಲು) ಒಳಗಾದ ಬುದ್ಧಿಜೀವಿ ವರ್ಗ ಎಂತಹ ಮೂಲ ಚಿಂತಕರನ್ನು ಅಥವಾ ಸಂಶೋಧಕರನ್ನು ಸೃಷ್ಟಿಸೀತು? ಇಂತಹ ಜನ ಎಲಿಯಟ್ಟನ ನೂರನೇ ಹುಟ್ಟು ಹಬ್ಬವನ್ನು ಮರೆಯದೇ ಆಚರಿಸಿದ ಮೊದಲಿಗರಾಗಿದ್ದಲ್ಲಿ ಆಶ್ಚರ್ಯವೇನು? ಲೋಹಿಯಾ ಭಾರತದ ಬುದ್ಧಿಜೀವಿಗಳ ದುರಂತದ ಬಗ್ಗೆ ಮಾತನಾಡಿದ್ದು ಈ ಸ್ತರದಲ್ಲೇ, ಇಂಗ್ಲಿಷ್ ಜಾದೂಗೆ ಒಳಗಾದ ಅವರ ಈ ಬುದ್ಧಿಗೇಡಿತನದ ಬಗ್ಗೆಯೇ.

–೩–

ಈ ಜಾದೂವಿನ ಹಿಂದೆ ನಾರಾಯಣರೇ ಸೂಚಿಸಿರುವಂತೆ ೧೭ನೇ ಶತಮಾನದ ಡೆಕಾರ್ಟನ Cogito ergo sum(ನಾನು ಯೋಚಿಸುತ್ತೇನೆ;ಹಾಗಾಗಿ ನಾನು ಇದ್ದೇನೆ)ಎಂಬ ತಾತ್ವಿಕತೆ ಇದೆ. ಇದೇ, ಉದ್ದ–ಅಗಲ ಇತ್ಯಾದಿ ಭೌತ ಅಳತೆಗಳಿಗೆ ಸಿಗುವ ಜಗತ್ತೇ ನಿಜವಾದ ಜಗತ್ತು ಎಂದು ನಂಬಿಸುವ ಕಾರ್ಟೇಸಿಯನ್ ತರ್ಕವನ್ನು ವಿಕಾಸಗೊಳಿಸಿದ್ದು. ಈ ವಿಕಾಸದ ಹಿಂದೆ, ಯಾವುದನ್ನು ನಾವೀಗ ಆಧುನಿಕ ನಾಗರೀಕತೆಯ ಪಿತಾಮಹ ಎಂದು ಗುರುತಿಸುತ್ತೇವೆಯೋ ಮತ್ತು ಯಾವುದನ್ನು 'ಜ್ಞಾನಯುಗ' ಎಂದು ಒಪ್ಪಿಕೊಂಡುಬಿಟ್ಟಿದ್ದೇವೆಯೋ, ಆ ಐರೋಪ್ಯ ಪುನರುಜ್ಜೀವನ(Renaisance) ಯುಗದ

ಚಿಂತನಾಕ್ರಮದ ಸ್ಫೂರ್ತಿ ಇದೆ. ಹಾಗಾಗಿ ಇಂದು ನಾವು ಜ್ಞಾನವೆಂದು ಸ್ವೀಕರಿಸಿರುವ ವಿಶ್ಲೇಷಣಾತ್ಮಕ ಅಧ್ಯಯನಗಳೆಲ್ಲವೂ ಈ ವಿಭಿನ್ನ ಅಳತೆ–ತೂಕಗಳ ನಡುವಣ ವೈವಿಧ್ಯಮಯ ಸಂಬಂಧಗಳ ತರ್ಕದ ಮೇಲೆ ನಿಂತಿವೆ. ಈ ತರ್ಕ, ಯಾವುದು ಎಲ್ಲಿ ಬೇಕಾದರೂ ಸಲ್ಲುವಂತಹ ಸಾರ್ವತ್ರಿಕ ಗುಣ ಹೊಂದಿರುವ ವಸ್ತುನಿಷ್ಠ ಜ್ಞಾನ ಪ್ರಪಂಚವೊಂದನ್ನು, ಅದರೊಳಕ್ಕೆ ನಮ್ಮನ್ನೂ ಸೇರಿಸಿ ಕಟ್ಟಿ ಕೊಟ್ಟಿತು. ಅದರಲ್ಲಿ ಬಂಧಿಯಾಗಿರುವ ನಾವು, ಯಾವುದನ್ನು ಯಾವುದಕ್ಕೆ ಬೇಕಾದರೂ, ಮೂಲಕ್ಕೆ ಏನೂ ಊನವಾಗದಂತೆ ವರ್ಗಾಯಿಸಿಕೊಳ್ಳಬಹುದು, 'ಅನುವಾದಿಸಿ'ಕೊಳ್ಳಬಹುದು ಎಂಬ '(ಅ)ಜ್ಞಾನ'ವನ್ನೂ ಅದು ಪ್ರದಾನ ಮಾಡಿತು. ಇಂತಹ ವರ್ಗಾವಣೆ ಮತ್ತು ಅನುವಾದಗಳಿಗೆ ಸಂಬಂಧಿಸಿದ ಉದ್ಯಮವೇ ಇಂದು ಭಾರತದಲ್ಲಿ ಅಧ್ಯಯನ ಮತ್ತು ಸಂಶೋಧನೆಗಳ ಹೆಸರಲ್ಲಿ ಕೋಟ್ಯಾಂತರ ರೂಪಾಯಿಗಳ ವ್ಯವಹಾರವಾಗಿ ಬೆಳೆದಿರುವುದು. **(ಟಿಪ್ಪಣಿ–೩ ನೋಡಿ)**

ಇದರಿಂದಾಗಿ, ಜ್ಞಾನವೆಂದರೆ, ಸದಾ ಸಂಕೀರ್ಣವಾಗುತ್ತಾ, ವಿಸ್ತಾರವಾಗುತ್ತಾ ಹೋಗುವ ಮಾಹಿತಿಯಾಧಾರಿತ ವಿದ್ಯಮಾನ; ಮತ್ತು ಜ್ಞಾನದಾಹ ಎಂದರೆ ನಿರಂತರ ದಾಹ ಎಂಬಂತಾಗಿಬಿಟ್ಟಿದೆ. ಹಾಗೇ, ಈ ನಿರಂತರ ದಾಹವೇ ಜಗತ್ತನ್ನು ಪ್ರಗತಿಯೆಡೆಗೆ ಕೊಂಡೊಯ್ಯುತ್ತಿರುವ ಶಕ್ತಿಯಾಗಿದೆ ಎಂಬ ನಂಬಿಕೆ ಸೃಷ್ಟಿಯಾಗಿಬಿಟ್ಟಿದೆ. ಇದನ್ನು ನಾವು ಆಧುನಿಕ ನಾಗರೀಕತೆ ಎಂದು ಕರೆಯುತ್ತಿದ್ದೇವೆ. ಆದರೆ ಈ ಆಧುನಿಕ ನಾಗರೀಕತೆಯಲ್ಲಿ ಅಂತರ್ಗತವಾಗಿರುವ ಈ ನಿರಂತರ ದಾಹದ ಪರಿಣಾಮಗಳನ್ನೇ ನಾವಿಂದು 'ಅಭಿವೃದ್ಧಿ' ಪರಿಕಲ್ಪನೆ ಎದುರಿಸುತ್ತಿರುವ ಹಲವು ನೆಲೆಯ–ಉದಾ:ರಾಜ–ನೈತಿಕ ಮತ್ತು ಪರಿಸರಾತ್ಮಕ–ಸಂದಿಗ್ಧದಲ್ಲಿ ಕಾಣುತ್ತಿದ್ದೇವೆ. ಈ ಅಭಿವೃದ್ಧಿ, ಕೇವಲ ಭೌತಿಕ ಆಸ್ತಿ (ಹೊರ) ಅಭಿವೃದ್ಧಿಗೆ ಸಂಬಂಧಿಸಿದ್ದಲ್ಲ; ಅದರಲ್ಲಿ ಮಾನವ ಸಂಪನ್ಮೂಲ (ಒಳ) ಅಭಿವೃದ್ಧಿಯ ಪ್ರಶ್ನೆಗಳೂ ಸೇರಿರುವುದೇ ಇದಕ್ಕೆ ಕಾರಣವಾಗಿದೆ. ಬಹುಶಃ ನಾರಾಯಣರ ಪ್ರಸ್ತುತ ಲೇಖನಕ್ಕೆ, ಇಂತಹ ಮಾನವ ಸಂಪನ್ಮೂಲ ಅಭಿವೃದ್ಧಿಯ ಸಂಬಂಧವಾಗಿ ಅವರಲ್ಲಿ ಉಂಟಾದ ಸಂದಿಗ್ಧಗಳೇ, ಎದುರಾದ ಸವಾಲುಗಳೇ ಕಾರಣವಿರಬಹುದು. ಉದಾ: ಅವರ 'ಇದು ಸರಿಯೇ ತಪ್ಪೇ ಎಂದಾಗಲೀ, ಇದರಿಂದ ಏನು ಪರಿಣಾಮವಾಗಿದೆ ಎಂದಾಗಲೀ ಯೋಚಿಸುವ ಬಿಡುವು ನಮಗೆ ಇಲ್ಲವಾಗಿದೆ', 'ನೋಡುವ ನೆಲೆಗಳು ಇದರಲ್ಲಿ ಸೇರಿಕೊಂಡಿರಬಹುದೆಂಬ ಸಂದೇಹ ನಮ್ಮನ್ನು ಕಾಡಿರುವುದು ಕಡಿಮೆ' ಮುಂತಾದ ಮಾತುಗಳು.

ಅದೇನೇ ಇರಲಿ, ಇಂತಹ ಸಂದಿಗ್ಧಗಳ ಮತ್ತು ಸವಾಲುಗಳ ಸೃಷ್ಟಿಗೆ ಕಾರಣವಾಗಿರುವ ಈ ಅಭಿವೃದ್ಧಿಯಲ್ಲಿನ ವೈರುಧ್ಯವಾದರೂ ಯಾವುದು? ನಿರಂತರ ದಾಹವೇ ಆಧುನಿಕ ನಾಗರೀಕತೆಯ ಹೆಗ್ಗುರುತು ಎಂದು ಹಿಂದೆಯಾಗಲೇ ಹೇಳಿಯಾಗಿದೆ. ಇದು ಸೃಷ್ಟಿಸಿದ ವಿಜ್ಞಾನ–ತಂತ್ರಜ್ಞಾನವೆಂಬ ವಿಶ್ಲೇಷಣಾತ್ಮಕ ಅಧ್ಯಯನ ಜೋಡಿಯು ಸಹಜವಾಗಿಯೇ ಕಾರ್ಯಶೀಲವಾಗಲು, ತನ್ನ ಅನ್ವಯಕ್ಕಾಗಿ ನಿರಂತರ ದಾಹದಿಂದ ತಹತಹಿಸುತ್ತದೆ. ಇಂತಹ ಕಾರ್ಯಶೀಲತೆ ಅಥವಾ ನಿರಂತರ ಅನ್ವಯದ ಫಲಗಳು ವೈವಿಧ್ಯಮಯ ಗ್ರಾಹಕ ವಸ್ತುಗಳ ಹೆಸರಲ್ಲಿ, ತನ್ನ ಬಳಕೆದಾರಿಕೆಯ ಕ್ಷೇತ್ರಗಳನ್ನು ಹುಡುಕಿಕೊಂಡು ಹೊರಟದ್ದೇ ವಸಾಹತುಶಾಹಿಗೆ ಮೂಲ ಕಾರಣವಾಯಿತು. ಅದು ಹೀಗೆ ವಸಾಹತುಗಳನ್ನು ಕಂಡುಕೊಂಡದ್ದು, ಜ್ಞಾನದ ಬಗ್ಗೆ ಬೇರೆಯೇ ತಿಳುವಳಿಕೆ ಹೊಂದಿದ್ದ ಏಷ್ಯಾ ಮತ್ತು ಆಫ್ರಿಕಾದ ದೇಶಗಳಲ್ಲಿ ಎಂಬುದು

ಇಲ್ಲಿ ಮುಖ್ಯ. ಏಕೆಂದರೆ ಇದೇ, ಹಿಂದೆ ಮತ್ತು ಇಂದೂ–ವಸಾಹತುಗಳು ವಿಸರ್ಜನೆಯಾದ ಮೇಲೂ–ನಮ್ಮ ಅಭಿವೃದ್ಧಿಗೆ ಸಂಬಂಧಿಸಿದಂತೆ ನಮ್ಮನ್ನು ಕಾಡುತ್ತಿರುವ ಸಂದಿಗ್ಧಗಳನ್ನು ಸೃಷ್ಟಿಸುತ್ತಿರುವ ವೈರುಧ್ಯವಾಗಿರುವುದು.

ಸದ್ಯಕ್ಕೆ ನಾವು ಭಾರತದ ಬಗ್ಗೆಯಷ್ಟೇ ಚರ್ಚಿಸೋಣ. ಭಾರತ 'ಜ್ಞಾನ'ವನ್ನು ತೂಕ ಮತ್ತು ಅಳತೆಗೆ ಸಿಗದ ಮತ್ತು ಕಾಲ ಹಾಗೂ ದೇಶಗಳ ಸಂದರ್ಭದಲ್ಲಿ ಕಡಿಮೆ ಅಥವಾ ಜಾಸ್ತಿಯಾಗದಂತಹ ಒಂದು ಅ–ಭೌತ ವಿದ್ಯಮಾನವಾಗಿ ಪರಿಗ್ರಹಿಸುವ ಮೂಲಕ ಅದನ್ನು ಲೋಕ–ಮಾಹಿತಿಯಿಂದ, ಅದರ ಅನ್ವಯದಿಂದ ಬೇರ್ಪಡಿಸಿ ಪವಿತ್ರೀಕರಿಸಿಟ್ಟಿತ್ತು. ಅದರ ಉಪಾಸನೆಯೇ ಮನುಷ್ಯನ ಪರಮ ಗುರಿ ಎಂದು ಅದು ತನ್ನ ಬದುಕಿನ ಅನೇಕ ಪ್ರಯೋಗಗಳ ಮೂಲಕ ಕಂಡುಕೊಂಡಿತ್ತು. ಅಂದ ಮಾತ್ರಕ್ಕೆ ಅದು ಮಾಹಿತಿ ರೂಪದ ತಿಳುವಳಿಕೆಯನ್ನು ನಿರಾಕರಿಸಿತ್ತೆಂದಲ್ಲ. ಭಾರತ ತನ್ನದೇ ಆದ ಲೌಕಿಕ ಪರಂಪರೆಯನ್ನು ಹೊಂದಿತ್ತು. ಹಾಗಾಗಿಯೇ ಅದು ಒಂದು ಸಂಸ್ಕೃತಿ ಮಾತ್ರವಲ್ಲ, ಇತರರನ್ನು ಸೆಳೆಯಬಲ್ಲ–ಹಾಗೆ ಸೆಳೆದು ಕೊನೆಗೆ ತನ್ನನ್ನೇ ಗುಲಾಮಗಿರಿಗೆ ಒಪ್ಪಿಸಿಕೊಂಡಂತಹ–ಒಂದು ಸಮೃದ್ಧ ನಾಗರೀಕತೆಯನ್ನೂ ಹೊಂದಿತ್ತು. ಈ ನಾಗರೀಕತೆಯೆಂಬ ತಿರುಳಿಗೆ ಈ ಮುನ್ನ ವಿವರಿಸಿದ ಹಾಗೆ, 'ಅನುಭಾವಿಕ'ವಾದುದೆಂದು ಕರೆಯಬಹುದಾದ ಜ್ಞಾನವು ಬೀಜವಾಗಿತ್ತು. ಆದರೆ ವಸಾಹತುಶಾಹಿಯು ತನ್ನ ನಿರಂತರ ದಾಹ ಸೃಷ್ಟಿಯ ಭಾಗವಾಗಿ–ತನ್ನ ಹೊಸ ಹೊಸ ಗ್ರಾಹಕ ವಸ್ತುಗಳಿಗೆ ಮಾರುಕಟ್ಟೆಯನ್ನು ಸೃಷ್ಟಿಸಿಕೊಳ್ಳುವ ಭರದಲ್ಲಿ–ಈ ತಿರುಳಿನ 'ಮಿತಿ'ಗಳನ್ನು ಎತ್ತಿ ತೋರಿಸಲು ತೊಡಗಿದ ಶೈಲಿ ಮತ್ತು ಆವೇಗಗಳು, ಅಂದರೆ ಅದರ ರಾಜಕಾರಣ; ಅದು ಮಿತಿಗಳಲ್ಲ, ಈ ಮಣ್ಣಿನ ಬೀಜದ ಸಹಜ ಗುಣವಷ್ಟೇ–ಅದೇ ಅದರ ಶಕ್ತಿ ಕೂಡಾ ಎಂಬ–ಎಂಬ ಅರಿವನ್ನೇ ಇದರ ನಾಗರಿಕ ಪ್ರಜ್ಞೆಯಲ್ಲಿ ಮಸುಕು ಮಾಡಿತು. ಅದು ಒಂದು ರೀತಿಯಲ್ಲಿ ಕಾಲ ಮಹಿಮೆಯೂ ಆಗಿತ್ತೇನೋ! ಅದೇನೇ ಇರಲಿ, ಇದು ಒಂದು ಜೀವನ ಕ್ರಮವನ್ನೇ, ಜೀವನ ದೃಷ್ಟಿಯನ್ನೇ ತಲೆಕೆಳಗು ಮಾಡಿದ, ನಮ್ಮ ಜ್ಞಾನ ಮಾದರಿಯ 'ಪಾವಿತ್ರ್ಯ'ವನ್ನೇ ಅಲ್ಲಗಳೆದು ಭಗ್ನಗೊಳಿಸಿದ 'ಕ್ರಾಂತಿ'ಯಾಗಿತ್ತು. ಈ ದುಷ್ಕ್ರಾಂತಿಯನ್ನು ನಾವು ಸತ್ಕ್ರಾಂತಿಯೆಂದೇ ಭಾವಿಸಿ, ಅದನ್ನು ಆಧುನಿಕತೆಯೆಂದು ಆರಾಧಿಸುತ್ತಿದ್ದೇವೆ. ಈ ಆಧುನಿಕತೆಯ ಆರಾಧನೆಯ ಭಾಷೆ ಇಂಗ್ಲಿಷ್ ಆಗಿದೆ. ಇಲ್ಲಿ ಭಾಷೆ ಎಂದರೆ, ಕೇವಲ ಗುರುತಿನ ಶಬ್ದಗಳಲ್ಲ. ಬದಲಿಗೆ ನಾರಾಯಣರಿಗೆ ಈಗ, 'ನೋಡುವ ನೆಲೆಗಳು ಇದರಲ್ಲಿ ಸೇರಿಕೊಂಡಿರಬಹುದೆಂಬ ಸಂದೇಹ ನಮ್ಮನ್ನು ಹೆಚ್ಚಾಗಿ ಕಾಡಿರುವುದು ಕಡಿಮೆ' ಎಂದೆನ್ನಿಸಲು ಕಾರಣವಾಗಿರುವಂತಹ 'ಹೇಗೆ ನೋಡಬೇಕೆಂದು ನಮಗೆ ಹೇಳಿಕೊಡಲಾಗುತ್ತಿದೆಯೋ ಅದರಂತೆ ನಾವು ಕಾಣುವ'ಂತೆ ಮಾಡಬಲ್ಲ ಮಾನಸಿಕ ರಚನೆ ಕೂಡಾ ಆಗಿದೆ. ಏನಾದರೂ ನಾವು ಈಗ 'ಮಾಧ್ಯಮವೇ ಸಂದೇಶ ಕೂಡಾ'(Medium is the message) ಎಂಬ ಆಧುನಿಕ ಸಂವಹನ ತತ್ವವನ್ನು ಒಪ್ಪಿಕೊಂಡಿದ್ದೇವೆ ಅಲ್ಲವೆ?

–೫–

ಇದನ್ನು ಇನ್ನಷ್ಟು ಸ್ಪಷ್ಟವಾಗಿ ಮತ್ತು ಸಮಗ್ರವಾಗಿ–ಬೇರು ಮಟ್ಟದಲ್ಲಿ–ಅರ್ಥ ಮಾಡಿಕೊಳ್ಳಲು ನಾವು ಗಾಂಧೀಜಿಯವರ 'ಹಿಂದ್ ಸ್ವರಾಜ್' ಕಡೆ ಸ್ವಲ್ಪ ನಮ್ಮ ಗಮನ ಹರಿಸಬೇಕಾಗುತ್ತದೆ.

ಅವರು ಭಾರತದ 'ಬಿಡುಗಡೆ'ಯನ್ನು ಬ್ರಿಟಿಷ್ ಪ್ರಭುತ್ವದಿಂದ ಬಿಡುಗಡೆ ಎಂದು ಪರಿಭಾವಿಸಲೇ ಇಲ್ಲ. ಅವರ ಪ್ರಕಾರ ಭಾರತ ಈಡಾಗಿದ್ದ ಎಲ್ಲ ಕೇಡುಗಳಿಗೆ ಆಧುನಿಕ ನಾಗರೀಕತೆಯೇ ಕಾರಣವಾಗಿತ್ತು. ಗಾಂಧೀಜಿಯ ಮಾತುಗಳಲ್ಲೇ ಹೇಳುವುದಾದರೆ, 'ಹಿಂದೂಸ್ತಾನ ತಿಣುಕುತ್ತಿರುವುದು ಬ್ರಿಟಿಷರ ಭಾರದಿಂದಲ್ಲ; ಆಧುನಿಕ ನಾಗರೀಕತೆಯ ರಾಕ್ಷಸ ಭಾರದಿಂದ'. ಅದರ ಒಂದು ಪರಿಣಾಮವಾಗಿಯಷ್ಟೇ ಭಾರತ ಒಂದು ವಸಾಹತುವಾಗಿದ್ದುದು. ಆದರೆ ಭಾರತ ೧೯೪೭ರಲ್ಲಿ ವಸಾಹತುತನದಿಂದ ಬಿಡುಗಡೆಯಾಯಿತಾದರೂ, ಆಧುನಿಕ ನಾಗರೀಕತೆಯ ಸಂಕೋಲೆಗಳಿಂದ ಬಿಡುಗಡೆಯಾಗಲಿಲ್ಲ. ಅಂದರೆ, ಭಾರತ ತಾನು ಕಳೆದುಕೊಂಡಿದ್ದ ಜ್ಞಾನ ಮಾದರಿಯನ್ನು ಪಡೆದುಕೊಳ್ಳಲೇ ಇಲ್ಲ.

ಭಾರತದ ಜ್ಞಾನ ಮಾದರಿ ಹೊರ ರೂಪದಲ್ಲಿ, ಗಾಂಧೀಜಿ ಪ್ರಕಾರ ಹಳ್ಳಿಯ ರೂಪದಲ್ಲಿತ್ತು. ಆಧುನಿಕ ನಾಗರೀಕತೆ ಈ ನಮ್ಮ ಹಳ್ಳಿಗಳನ್ನು, ಅದರ ಸತ್ವವನ್ನು ನಾಶ ಮಾಡಿತು. ಆ ಮೂಲಕ ಭಾರತವನ್ನು ಗುಲಾಮಗಿರಿಗೆ ತಳ್ಳಿತು. ಮತ್ತೆ ನಮ್ಮ ಹಳ್ಳಿಗಳನ್ನು ಪುನಾರಚಿಸಿ ಅವಕ್ಕೆ ಜೀವ ಕೊಡದ ಹೊರತು, ಅಂದರೆ 'ಗ್ರಾಮ ಸ್ವರಾಜ್ಯ' ಸ್ಥಾಪನೆಯಾಗದ ಹೊರತು ಭಾರತಕ್ಕೆ ಮುಕ್ತಿಯಿಲ್ಲ;ನೆಮ್ಮದಿ ಇಲ್ಲ. ನೆಮ್ಮದಿಯಿಲ್ಲ ಎಂಬುದು ಈಗ ನಮಗೆ ಗೊತ್ತಾಗಿದೆ. ಆದರೆ ಅದಕ್ಕೆ ಕಾರಣಗಳನ್ನು ಬೇರೆಲ್ಲೆಲ್ಲೋ ಹುಡುಕುತ್ತಿದ್ದೇವೆ. ಏಕೆಂದರೆ, ಹುಡುಕಲು ಅಥವಾ ಹುಡುಕುತ್ತಾ ಅದರ ಮಧ್ಯೆಯೇ ಕಳೆದು ಹೋಗಲು, ಮಿತಿಯಿಲ್ಲದ ಮಾಹಿತಿ ಕ್ಷೇತ್ರವನ್ನು ಆಧುನಿಕ ನಾಗರೀಕತೆ ತನ್ನ ನಿರಂತರ ದಾಹದಲ್ಲಿ ನಮಗೆ ಸೃಷ್ಟಿಸಿಕೊಟ್ಟಿದೆ! ಹೀಗೆ ಹುಡುಕಲು ಹೊರಟವನೇ ಕಳೆದುಹೋಗುವಂತಹ ಈ ನಿರಂತರ ಹುಡುಕಾಟದ ದಾಹಕ್ಕೆ, ಇಂಗ್ಲಿಷ್ ಒಂದು ನುಡಿಗಟ್ಟಾಗಿ, ಚಿಂತನಾ ಕ್ರಮವಾಗಿ ಮಾಧ್ಯಮವಾಗಿದೆ. ಹಾಗಾಗಿ 'ಇಂಗ್ಲಿಷ್ ಜ್ಞಾನ'ಕ್ಕೆ ಸಿಕ್ಕ ನಾವು ಹುಡುಕುತ್ತಲೇ ಇದ್ದೇವೆ... ಇದಕ್ಕೆ ನಾರಾಯಣರ, 'ನಾವು ಮಾತು ಬರಹಗಳಲ್ಲಿ ಯಾವುದು ಅಧಿಕೃತ ಎಂಬ ಬಗ್ಗೆ ಅಲ್ಲಿಯವರೆಗೆ ಇದ್ದ ನಮ್ಮ ನಂಬಿಕೆಗಳನ್ನು ಬಿಟ್ಟುಕೊಟ್ಟು ಹೊಸ ಹಾದಿಯಲ್ಲಿ ಸಾಗತೊಡಗಿದೆವು. ಈ ಚೌಕಟ್ಟಿಗೆ ಸಿಲುಗಿದ ನಾವು ಮಾತಿನಲ್ಲಿದ್ದ ಎಲ್ಲವನ್ನೂ ಬರಹಕ್ಕೆ ತರುವ ಮತ್ತು ಬರಹದಲ್ಲಿರುವ ನಿಜಪಾಠವನ್ನು ಹುಡುಕುವ ಉದ್ಯಮದಲ್ಲಿ ತೊಡಗಿದ್ದೇವೆ' ಎಂಬ ಮಾತು ಸೂಚಿಸುವ ಜ್ಞಾನ ಮಾದರಿ ಕುರಿತ ನಮ್ಮ ಇಂದಿನ ದ್ವಂದ್ವವನ್ನು ಅರ್ಥ ಮಾಡಿಕೊಳ್ಳುವುದಾರೆ, ನನ್ನ ಈ ಮೇಲಿನ ಮಾತುಗಳು ಇನ್ನಷ್ಟು ಸ್ಪಷ್ಟವಾದಾವು.

ಗಾಂಧಿ, ಭಾರತದ ಜ್ಞಾನ ಪರಂಪರೆ ಹಳ್ಳಿಗಳ ಒಕ್ಕೂಟದ ರೂಪದಲ್ಲಿ ತನ್ನ ಕಾರ್ಯಶೀಲತೆಯನ್ನು ಕಂಡುಕೊಂಡಿದೆ ಎಂದು ಗುರುತಿಸಿದ್ದರು. ಹಾಗೇ ಮನುಷ್ಯ ದೇಹವನ್ನು ಈ ಜ್ಞಾನದ ಲೌಕಿಕ ಆವರಣ ಎಂದು ಭಾವಿಸಿದ್ದರು. ಇದರ ಆಧಾರದ ಮೇಲೆ, ತನ್ನ ಅಸ್ತಿತ್ವವನ್ನು ನಿರ್ವಚಿಸುವ ಈ ಜ್ಞಾನಕ್ಕೆ ಅಪಚಾರವೆಸಗದಂತೆ ಮನುಷ್ಯ ಏನೇನು ಮಾಡಬಹುದೆಂಬುದನ್ನು ಅವನ ದೇಹದ ಇತಿ ಮಿತಿಗಳೇ ನಿರ್ಧರಿಸಿವೆ ಎಂದು ಅವರು ತೀರ್ಮಾನಿಸಿದ್ದರು. ಅದೇ ಅವನ ನೈತಿಕತೆಯ ಮೂಲಾಧಾರವೂ ಆಗಿತ್ತು. ಹಾಗಾಗಿಯೇ ಅವರ ಪ್ರಕಾರ, ಅವನ ಕಾಲುಗಳು ನಡೆಯಬಹುದಾದಷ್ಟು ದೂರದವರೆಗೆ ಮಾತ್ರ ಅವನ ಭೌತಿಕ(ಬದುಕಿನ) ಆವರಣವಿರಬೇಕು. ಅವನ ಕೈಗಳು ಮಾಡಬಹುದಾದಷ್ಟು ಕೆಲಸಗಳನ್ನು ಮಾತ್ರ ಅವನು

ಅದರಲ್ಲಿ ಮಾಡಬೇಕು.ಈ ಮಿತಿಗಳ ಪ್ರತೀಕವೇ ಭಾರತದ ಗ್ರಾಮ, ಮತ್ತದರ ಸಂಸ್ಕೃತಿಯಾಗಿತ್ತು. ಹೀಗೆ ಬದುಕಲು ಬೇಕಾದ ಮೂಲಭೂತ ಅಗತ್ಯಗಳ ಕೊರತೆ ಉಂಟಾದಾಗ ಮಾತ್ರ ಒಂದು ಹಳ್ಳಿ ನೆರೆಯ ಹಳ್ಳಿಯನ್ನು ಸಂಪರ್ಕಿಸಬಹುದು.

ಹೀಗೆ ಹಳ್ಳಿ ಎಂಬುದು ಭಾರತದ ಜ್ಞಾನ ಪರಂಪರೆ ತನ್ನ ಗುರಿ ಅಥವಾ ಸಾರ್ಥಕ್ಯದಿಂದ ವಿಚಲಿತಗೊಳ್ಳದಂತೆ ತನ್ನ ಸಂಯಮವನ್ನು ತಾನೇ ಕಂಡುಕೊಂಡಿದ್ದರ ಮೂರ್ತರೂಪವಾಗಿತ್ತು. ಈ ಅರ್ಥದಲ್ಲಿ, ಇಲ್ಲಿ ಹಳ್ಳಿ ಎಂಬುದು ಭೌತಿಕ ಅಳತೆಗಿಂತ ಮುಖ್ಯವಾಗಿ ಸಾಂಸ್ಕೃತಿಕ ಅಳತೆಯಿಂದ ನಿರ್ವಚಿಸಲ್ಪಡುವಂತಹುದೇ ಆಗಿತ್ತು. ಇನ್ನೂ ಮುಂದು ಹೋಗಿ ಹೇಳುವುದಾರೆ, ಹಳ್ಳಿಯೇ ಭಾರತದ ಧಾರ್ಮಿಕ ಬೀಜ ಘಟಕವೂ ಆಗಿತ್ತು. ಇಂತಹ ಹಳ್ಳಿಯನ್ನು ಮತ್ತೆ ಪಡೆಯುವುದೇ–ನಮ್ಮ ಹಳ್ಳಿಗಳನ್ನು, ಅವು ನಾಶವಾಗಲು ಕಾರಣವೇನು ಎಂಬುದರ ಅನ್ವೇಷಣೆಯಲ್ಲಿ ಪುನಾರಚಿಸುವುದೇ–ನಿಜವಾದ ಸ್ವಾತಂತ್ರ್ಯ;ಅದೇ ಸ್ವರಾಜ್ಯ ಎಂದು ಗಾಂಧಿ ನಂಬಿದ್ದರು. ಅವರು ತಮ್ಮ ಈ ಜ್ಞಾನ–ಮೀಮಾಂಸೆಯ ನೆಲೆಯಲ್ಲಿ ಆಡಿದ; ಈ ದೇಶಕ್ಕೆ ಯಂತ್ರ ವ್ಯವಸ್ಥೆ ಬೇಡ, ರೈಲು ಬೇಡ, ನ್ಯಾಯಾಲಯಗಳು ಮತ್ತು ವಕೀಲಿಕೆ ಬೇಡ, ಆಧುನಿಕ ವೈದ್ಯ ಪದ್ಧತಿ ಬೇಡ, ಇತಿಹಾಸ ರಚನೆಯ ವಿದ್ಯೆ ಬೇಡ ಎಂಬ ಮಾತುಗಳ ಹಿಂದೆ ಸಾರಾಂಶ ರೂಪವಾಗಿ ಇಂಗ್ಲಿಷ್ ಶಿಕ್ಷಣ ಬೇಡ ಎಂಬ ಮಾತೂ ಇತ್ತು ಎಂಬುದನ್ನು ನಾವು ಮರೆಯಲಾಗದು. ಏಕೆಂದರೆ ನಮ್ಮ ಹಳ್ಳಿಗಳನ್ನೂ, ಆ ಮೂಲಕ ನಮ್ಮ ಜ್ಞಾನ ಮಾದರಿಯನ್ನೂ ನಾಶ ಮಾಡಿದ ಇಂಗ್ಲಿಷ್, ನಮ್ಮ ಜ್ಞಾನ ಮಾದರಿಯ ಮತ್ತು ನಮ್ಮ ಹಳ್ಳಿಗಳ ಪುನಾರಚನೆಯ ಮಾಧ್ಯಮವಾಗಲಾರದು. ಇದು ಸಾಮಾನ್ಯ ಪರಿಜ್ಞಾನದ ವಿಷಯ. ಇದನ್ನು ವಿವರಿಸಿ ಹೇಳುವುದಾರೆ, ಆ ಭಾಷೆಯ ಆತ್ಮವಿರಲಿ, ದೇಹ ಕೂಡಾ (ಅಂದರೆ, ಅದರ ಲೌಕಿಕ ಆವರಣ–ರಾಚನಿಕತೆ) ಸ್ಥಳೀಯತೆಯನ್ನು ಧಿಕ್ಕರಿಸುತ್ತಾ, ಅದರ ಎಲ್ಲ ನೈತಿಕ ಮಿತಿಗಳನ್ನು ಉಲ್ಲಂಘಿಸಬಲ್ಲ 'ಪುಂಡಾಟಿಕೆ'ಗೆ ತಕ್ಕ ಹಾಗೆ ಈಗ ನಮ್ಮೆದುರಾಗಿ ವಿನ್ಯಾಸಗೊಂಡಿದೆ. ಅದು ಅದರ ಹುಟ್ಟುಗುಣ ಕೂಡಾ ಹೌದು. ನಿಜ, ಇಂಗ್ಲಿಷ್ ಶಿಕ್ಷಣ ನಮಗೆ ಅನೇಕ ಪಾಠಗಳನ್ನು ಕಲಿಸಿದೆ. ಆದರೆ ಈ ಎಲ್ಲ ಪಾಠಗಳ ಪಾಠದಂತಿರುವ ಇಂಗ್ಲಿಷ್ ನಮಗೆ ಯಾವ ರೀತಿಯ ಮುಕ್ತಿಯನ್ನೂ ದೊರಕಿಸಿಕೊಡಲಾರದು ಎಂಬುದನ್ನೇ ನಾವು ಮರೆತಿದ್ದೇವೆ. ಮಾನವ ಮನಸ್ಸಿನ ಮಾಯೆಯನ್ನು ಸೂಚಿಸುವ ಝೆನ್ ಕತೆಯೊಂದರಲ್ಲಿದ್ದಂತೆ, ಪ್ರವಾಹ ದಾಟಿದ ಮೇಲೂ ದೋಣಿಯನ್ನು ತಲೆಯ ಮೇಲೆ ಹೊತ್ತುಕೊಂಡು ನಡೆದಿದ್ದೇವೆ!

ಇಂತಹ ಮರೆವು ನಮ್ಮಂತಹ ಪಾಮರರಿಗಿರಲಿ, ಪಂಡಿತ ನೆಹರೂಗೂ ಬಡಿದಿತ್ತೆಂದರೆ? ಆಧುನಿಕತಾವಾದಿಯಾದ ನೆಹರೂ, ಗಾಂಧೀಜಿಯ ಈ ಚಿಂತನೆಯನ್ನು ನಾಗರೀಕತೆಯ ಹಿಂಪಯಣ ಎಂದು ಬಣ್ಣಿಸಿ, ಸ್ವಾತಂತ್ರ್ಯ ಘೋಷಣೆಯ ಹೊಸ್ತಿಲಲ್ಲೇ ಅದನ್ನು ತಿರಸ್ಕರಿಸಿದರು. ಅಂಬೇಡ್ಕರ್ ನಿರೂಪಿಸಿದ ಹಾಗೆ ಶೋಷಣೆ ಹಾಗೂ ಮೌಢ್ಯಗಳ ಹಾಳು ಕೊಂಪೆಗಳಂತಿದ್ದ ಹಳ್ಳಿಗಳ ಬದುಕಿನಿಂದ ಬೇಸತ್ತಿದ್ದ ನಾವೆಲ್ಲ–ಅವು ಇರುವುದೂ, ಇರಬೇಕಾದದ್ದೂ ಹಾಗೆಯೋ ಅಥವಾ ಅವನ್ನು ಹಾಗೆ ಅವನತಿಗೊಳಿಸಲಾಗಿದೆಯೋ ಎಂಬುದನ್ನು ಯೋಚಿಸುವ ವ್ಯವಧಾನವಿಲ್ಲದೆ–ಅದನ್ನು ನಂಬಿದೆವು, ಬೆಂಬಲಿಸಿದೆವು. ನಮ್ಮನ್ನು ಬೆಳೆಸಿಕೊಳ್ಳಲು,

ಬಲಶಾಲಿಗಳನ್ನಾಗಿ ಮಾಡಿಕೊಳ್ಳಲು ಬೃಹತ್ ಕಾರ್ಖಾನೆ ಮತ್ತು ಅಣೆಕಟ್ಟುಗಳನ್ನೂ;ವಿಸ್ತಾರವೂ, ವೈವಿಧ್ಯಮಯವೂ ಆದ ಜನಕೋಟಿಯಾದ ನಮ್ಮನ್ನು ನಾವು ಸರಿಯಾಗಿ ಮತ್ತು ಸುಭದ್ರವಾಗಿ ಆಳಿಕೊಳ್ಳಲು ಸಂಕೀರ್ಣ ಸಂವಿಧಾನವನ್ನೂ, ಕಾನೂನುಗಳನ್ನೂ ರೂಪಿಸತೊಡಗಿದೆವು. ಇದನ್ನು ಅಭಿವೃದ್ಧಿ ಎಂದು ಕರೆದವು. ಆದರೆ ಅದೇ ಹೊತ್ತಿನಲ್ಲಿ ಈ ಬೃಹತ್, ವಿಸ್ತಾರ ಮತ್ತು ಸಂಕೀರ್ಣತೆಗಳ ಅಭಿವೃದ್ಧಿಯನ್ನು ನಮ್ಮ ಭಾಷೆಗಳು ನಿರ್ವಹಿಸಲಾರವೆಂದೂ ಕಂಡುಕೊಂಡೆವು. ಹಾಗಾಗಿ, ನಮ್ಮ ಎಲ್ಲ ಸಂಕಷ್ಟಗಳಿಗೆ ಇಂಗ್ಲಿಷರೇ ಕಾರಣವೆಂದು ಪ್ರತಿಪಾದಿಸಿ ಅವರನ್ನು ಹೇಗೋ ಇಲ್ಲಿಂದ ಜಾಗ ಖಾಲಿ ಮಾಡಿಸಿದ ನಾವು; ಆ ಎಲ್ಲ ಸಂಕಷ್ಟಗಳ ಪರಿಹಾರದ ಮಂತ್ರವೆಂದು ಆರಂಭಿಸಿದ ಇಂತಹ ಅಭಿವೃದ್ಧಿಯ ಭಾಷೆಯಾಗಿ ಅವರ ಭಾಷೆಯನ್ನೇ ಉಳಿಸಿಕೊಂಡೆವು! ಆದರೆ, ಇದೊಂದು ಅಭಿವೃದ್ಧಿ ಪರಿಕಲ್ಪನೆಯ ವ್ಯುತ್ಪತ್ತಿ ಸಂಬಂಧಿಯಾದ-ಅಂದರೆ ಅಡಿಪಾಯದ ಮಟ್ಟದ-ಒಡಕು ಎಂಬುದು ನಮ್ಮ ಆಡಳಿತಗಾರರಲ್ಲಿ ಯಾರಿಗೂ ತೋಚಲೇ ಇಲ್ಲ. ಅಂದರೆ, ನಮ್ಮ ಭಾಷೆ ನಿರ್ವಹಿಸಲಾರದ ಅಭಿವೃದ್ಧಿ ಎಂಬ ವಿದ್ಯಮಾನವು ನಾವು ಒಂದು ರಾಷ್ಟ್ರವಾಗಿ ನಿರ್ವಹಿಸಲಾಗದ, ನಮಗೆ ನಿಜವಾಗಿಯೂ ಬೇಡವಾಗಿರುವ ವಿದ್ಯಮಾನ ಕೂಡಾ ಆಗಿರಲಾರದೇ ಎಂಬ ಪ್ರಶ್ನೆ ನಮ್ಮ (ಆಳುವ ವರ್ಗದ) ಬುದ್ಧಿಜೀವಿಗಳನ್ನು ಕಾಡಲಿಲ್ಲ, ಕಾಡುತ್ತಿಲ್ಲ ಎಂದರೆ ಏನು ಹೇಳುವುದು? ನೆಹರೂ ಇಂತಹ ಬುದ್ಧಿಜೀವಿಗಳ 'ರಾಜ' ಎನ್ನಿಸಿಕೊಂಡಿದ್ದುದು ಮತ್ತು ಈಗಲೂ ಅನ್ನಿಸಿಕೊಂಡಿರುವುದು ಸಹಜವೇ ಆಗಿದೆ.

-೬-

ನಾವಿಂದು ಸಂಸ್ಕೃತಿಗೆ ಸಂಬಂಧಿಸಿದಂತೆ 'ವಿಸ್ಮೃತಿ'ಯ ಮಾತನಾಡುತ್ತೇವೆ. ಆದರೆ ಹಾಗೆ ಮಾತನಾಡುವಾಗ ಸಂಸ್ಕೃತಿಯನ್ನು ನಾವು ಅದನ್ನು ಕುರಿತ ಆಧುನಿಕ ಗ್ರಹಿಕೆಗಳ ನೆಲೆಗಳಲ್ಲೇ ಪರಿಕಲ್ಪಿಸಿಕೊಂಡು ಮಾತನಾಡುತ್ತಿದ್ದೇವೆ. ಹಾಗಾಗಿ ಈ 'ವಿಸ್ಮೃತಿ'ಯ ಪರಿಕಲ್ಪನೆಯೂ ದೊಡ್ಡ ವಿಸ್ಮೃತಿಗೆ ಒಳಗಾಗಿದೆ ಎಂದರೆ ತಪ್ಪಾಗಲಾರದು. ಯಾವುದೀ ದೊಡ್ಡ ವಿಸ್ಮೃತಿ? ಈ ಪ್ರಶ್ನೆ ನಮ್ಮನ್ನು 'ಹಿಂದ್ ಸ್ವರಾಜ್'ನಲ್ಲಿ ಗಾಂಧೀಜಿ, ಇಂಗ್ಲಿಷರನ್ನು ಹಿಂಸಿಸಿ ಓಡಿಸುವ ಮೂಲಕ ಸ್ವಾತಂತ್ರ್ಯವನ್ನು ಸಾಧಿಸಬಹುದೆಂದು ನಂಬಿದ್ದ ತೀವ್ರಗಾಮಿಗಳಿಗೆ ಹೇಳಿದ 'ನಿಮ್ಮ ಸಮಸ್ಯೆ ಹುಲಿಯಾಗಿದೆಯೇ ಹೊರತು ಹುಲಿಗುಣವಲ್ಲ' ಎಂಬ ಮಾತಿಗೆ ಕೊಂಡೊಯ್ಯುತ್ತದೆ. ಈ ಮಾತಿನ ಆಳದ-ಬಹು ಆಯಾಮದ-ಅರ್ಥವನ್ನು ನಿರ್ಲಕ್ಷಿಸಿದ್ದೇ ನಮ್ಮ ನಿಜವಾದ ವಿಸ್ಮೃತಿಯಾಗಿದೆ. ಹಾಗಾಗಿ ಮಿಕ್ಕ 'ವಿಸ್ಮೃತಿ'ಯ ಪರಿಕಲ್ಪನೆಗಳೆಲ್ಲ-ಅವೆಷ್ಟೇ ವಸಾಹತೋತ್ತರವಾದದ ಹೆಸರಲ್ಲಿ ವಸಾಹತುಶಾಹಿ ವಿರುದ್ಧ ಹೊಸ ಸ್ಫೂರ್ತಿ ಮತ್ತು ಶೈಲಿಗಳೊಂದಿಗೆ ತನ್ನ ಸಂಕಥನಗಳನ್ನು ಮಂಡಿಸಿದರೂ-ಮೂಲತಃ ವಸಾಹತುಶಾಹಿ ಮನಸ್ಸಿನ ಪರಿಕಲ್ಪನೆಗಳೇ ಆಗಿವೆ. ಹಾಗಾಗಿಯೇ ಅವು ಹೆಚ್ಚೆಂದರೆ ಬೌದ್ಧಿಕ ಆಟದ ಪರಿಕರಗಳಾಗಿ ನಮ್ಮ ವಿಶ್ವವಿದ್ಯಾಲಯಗಳ, ಶಾಸ್ತ್ರಾಧ್ಯಯನ ಸಂಸ್ಥೆಗಳ ಅಧ್ಯಾಪಕರುಗಳ ಮತ್ತು ಸಂಶೋಧಕರ ಸ್ಕೀಮುಗಳ, ಪ್ರಾಜೆಕ್ಟುಗಳ, ಸೆಮಿನಾರುಗಳ ಉದ್ಯಮವನ್ನು ಬೆಳೆಸುತ್ತಿವೆಯೇ ಹೊರತು, ಎಲ್ಲ ಮೂಲ ಚಿಂತನೆಗಳ ಗಮ್ಯವಾಗಿರಬೇಕಾದ ರಾಷ್ಟ್ರ ನಿರ್ಮಾಣಕ್ಕೆ ಅಥವಾ ಸಾಮಾಜಿಕ ಪುನಾರಚನೆಗೆ ಸಂಬಂಧಿಸಿದ ಯಾವುದೇ ಬೌದ್ಧಿಕ ಸಂಚಲನೆಗೂ ಕಾರಣವಾಗಿಲ್ಲ.

ನಾರಾಯಣರು ತಮ್ಮ ಲೇಖನದಲ್ಲಿ ಈ ಸಮಸ್ಯೆಯ ಹತ್ತಿರಕ್ಕೆ ಬಂದಿರುವರಾದರೂ, ಅವರು ಹುಲಿಗುಣವನ್ನು ಶಾಸ್ತ್ರೀಯವಾಗಿ ಮಾತ್ರ ಅಭ್ಯಸಿಸಿರುವಂತೆ ತೋರುತ್ತಾ, ಆ ಶಾಸ್ತ್ರ ಪುಸ್ತಕಗಳನ್ನಷ್ಟೇ ಹಿಡಿದುಕೊಂಡು ಹುಲಿಯ ಹಿಂದೆ ಬಿದ್ದಿರುವ ಅಪಾಯವನ್ನು ಎದುರಿಸುತ್ತಿದ್ದಾರೆ. ಹಾಗೇ ಚೆನ್ನಿಯವರು, ಮೇಲ್ಜಾತಿಗಳವರು ಹುಲಿಗಳಾಗಿರುವಾಗ ದಲಿತರೂ ಸ್ವಲ್ಪ ಹುಲಿಗಳಾಗಲು ಅವಕಾಶ ನಿರಾಕರಿಸುವುದು ಅನ್ಯಾಯವೇ ಸರಿ ಎಂದು ತಾವು ಭಾವಿಸಿದ್ದಾಗಿ ಹೇಳಿಕೊಂಡಿದ್ದಾರೆ. ಆದರೆ, ಮೊದಲಾಗಿ ಇಂಗ್ಲಿಷ್ ಶಿಕ್ಷಣದಿಂದ ಯಾರಾದರೂ ಲಾಭ ಗಳಿಸಿದ್ದರೆ ಅದು ಮೇಲ್ಜಾತಿಯವರು ಎಂಬುದೇ ಒಂದು ಸಾರಾ ಸಗಟಾದ, ಹಾಗೇ ಸರಳೀಕೃತವಾದ ಮತ್ತು ಒಂದು ರೀತಿಯಲ್ಲಿ ವಿಕ್ಷಿಪ್ತವೂ ಆದ ತೀರ್ಮಾನವಾಗಿದೆ. ಇದು ಇಂಗ್ಲಿಷ್ ಶಿಕ್ಷಣ ನಮಗೆ ಕಲಿಸಿದ 'ನ್ಯಾಯಾನ್ಯಾಯ'ಗಳ ವಸಾಹತುಶಾಹಿಪರ ಪರಿಕಲ್ಪನೆಯ ಪರಿಣಾಮವೇ ಆಗಿದೆ. ಅಥವಾ ಮುಂಪಯಣದ–ಆಧುನಿಕ ನಾಗರೀಕತೆಯ–ಮಂಪರಿನಲ್ಲಿ, ನಾವು ಆಧುನಿಕ ಅ–ನಾಗರೀಕತೆಯ ಹಿಂಪಯಣ ಮಾಡುತ್ತಿರುವ ಉದಾಹರಣೆಯೇ ಆಗಿದೆ. ಇಲ್ಲದಿದ್ದರೆ ಈಗ ಜಗತ್ತಿನಾದ್ಯಂತ ಇದ್ದಕ್ಕಿದ್ದಂತೆ ಮತ್ತು ಸದ್ಯದ ತುರ್ತು ಅಗತ್ಯವೆಂಬಂತೆ 'ನಾಗರಿಕ ಸಮಾಜ'(Civil Soceity)ಸ್ಥಾಪನೆಯ ಆಂದೋಲನಗಳೇಕೆ ಹೀಗೆ ಹಬ್ಬುತ್ತಿದ್ದವು?

ಹಾಗೆ ನೋಡಿದರೆ ಈ ಹಿಂಪಯಣ–ಮುಂಪಯಣ ಎಂಬ ಪರಿಕಲ್ಪನೆಗಳೇ ಆಧುನಿಕ ವಿದ್ಯೆಯ ಫಲಗಳು. ಏಕೆಂದರೆ, ಜ್ಞಾನಕ್ಕೇ ತಲೆ ತಿರುಗಿರುವಾಗ ಈ ಹಿಂದೆ ಮುಂದೆ ಎನ್ನುವುದಕ್ಕೆ ಏನಾದರೂ ಅರ್ಥವುಂಟೆ? ಆದರೆ, ಆಧುನಿಕ ವಿದ್ಯೆಗಳಾದ ವಿಕಾಸವಾದ, ಇತಿಹಾಸ ಶಾಸ್ತ್ರ, ವಿಜ್ಞಾನಶಾಸ್ತ್ರಗಳೆಲ್ಲವೂ ನಮಗೆ ಮುಂದೆ ಎಂದರೆ ಒಳಿತು, ಹಿಂದೆ ಎಂದರೆ ಕೆಡುಕು ಎಂದೇ–ಅಂದರೆ ಅವೆರಡೂ ಪರ್ಯಾಯ ಪದಗಳೆಂಬಂತೆ– ನಂಬಿಸಿಬಿಟ್ಟಿವೆಯಲ್ಲಾ? ಅವು ಹೇಳುವುದು: ಮುಂದೆ ಇದೆ, ಇನ್ನೂ ಮುಂದೆ ಇದೆ, ಇನ್ನೂ ಮುಂದೆ ಮುಂದೆ.... ಇದೆ, ಆಧುನಿಕ ನಾಗರೀಕತೆಯ ಉತ್ತುಂಗ ಶಿಖರ! ಇಲ್ಲಿ ನಾನು ಜ್ಞಾನಕ್ಕೆ ತಲೆ ತಿರುಗಿದ ಮಾತನ್ನಾಡಿದೆ. ಈ ಮಾತಿನ ಮೂಲಕ ನಾನು ಪ್ರಸ್ತಾಪಿಸ ಬಯಸಿದ್ದು, ಈಗ ಜಗತ್ತನ್ನು ಮುಂದೆ ಮುಂದಕ್ಕೆ ಒಯ್ಯುತ್ತಿರುವ ಶಕ್ತಿ ಎಂದು ಹೇಳಲಾಗುವ ಯೂರೋಪಿನ 'ಜ್ಞಾನಯುಗ'ವನ್ನು ರೂಪಿಸಿದ ತಾತ್ವಿಕತೆಯನ್ನು. ಇದು, ತನ್ನ ಮೂಲ ಜ್ಞಾನ ಮಾದರಿಯಾದ ಕ್ರಿಶ್ಚಿಯನ್ (ಕ್ಯಾಥೋಲಿಕ್) ಧರ್ಮವನ್ನು ಪರಿಷ್ಕರಿಸಿದ (ಪ್ರಾಟೆಸ್ಟೆಂಟ್) ರೀತಿ ಅದರ ಸ್ವರೂಪವನ್ನು ನಿರ್ಣಯಿಸಿತೆಂದು ಹೇಳಬೇಕು. ಅದು ಈ ಜಗತ್ತನ್ನು ಮನುಷ್ಯನ ಸುಖ ಸಂತೋಷಗಳಿಗಾಗಿ ದೇವರು ನೀಡಿರುವ ಕೊಡುಗೆ ಎಂದು ವ್ಯಾಖ್ಯಾನಿಸಿತು.(ಇದೇ, ಆಧುನಿಕ ಜಗತ್ತಿನ–ವಿಶೇಷವಾಗಿ ಆಧುನಿಕತೆಯನ್ನು ಅಳವಡಿಸಿಕೊಂಡ ಮಾಜಿ ವಸಾಹತು ದೇಶಗಳ–ಇನ್ನೊಂದು ತಾತ್ವಿಕ ಸಂದಿಗ್ಧವಾಗಿರುವ 'ಸೆಕ್ಯುಲರಿಸಂ'ಗೂ ಕಾರಣವಾದದ್ದು ಎಂಬುದು ಬೇರೆ ವಿಷಯ). ಆ ಮೂಲಕ ಅದು ದೇವರು ಮತ್ತು ಜಗತ್ತಿನ ನಡುವಣ ಸಾವಯವ ಸಂಬಂಧವನ್ನು ಘಾಸಿಗೊಳಿಸಿದ್ದಲ್ಲದೆ, ಜಗತ್ತನ್ನು ಸುಖೋತ್ಪಾದನೆಗಳಿಗಾಗಿರುವ ಒಂದು ರೀತಿಯ ಕಚ್ಚಾ ಗ್ರಾಹಕ ವಸ್ತುವನ್ನಾಗಿ ಪ್ರಸ್ತುತಪಡಿಸಿತು. ಅದನ್ನು ಹೀಗೆ ಪರಿಗ್ರಹಿಸುವ– ಸುಖ ಸಂತೋಷಗಳಿಗಾಗಿ ಅನ್ವೇಷಿಸುವ, ಬಳಸುವ–ಮನುಷ್ಯನ ರೀತಿಯೇ (ಆಧುನಿಕ) ವಿಜ್ಞಾನ ವಿದ್ಯೆಯನ್ನೂ, ಅದರ ಅನ್ವಯ ಕೌಶಲ್ಯವಾದ ತಂತ್ರಜ್ಞಾನವನ್ನೂ ರೂಪಿಸಿತು. ಜಗತ್ತನ್ನು ಹೀಗೆ ಜಡವಾಗಿ, ತೂಕ–ಅಳತೆಗಳಿಗೆ ಸಿಗಬಲ್ಲ ಬರೀ ಭೌತವಾಗಿ ಗ್ರಹಿಸಿದ ಈ 'ಜ್ಞಾನ'ಗಳು

ಮನುಷ್ಯನನ್ನೂ ಜಡಗೊಳಿಸಿದ್ದರಲ್ಲಿ, ಅದರ ಆಧಾರದ ಮೇಲೆ ಆಧುನಿಕ ನಾಗರೀಕತೆಯೆಂಬ 'ಜಡಾತ್ಮಕ' ನಾಗರೀಕತೆಯನ್ನೂ ಕಟ್ಟಿದ್ದರಲ್ಲಿ ಆಶ್ಚರ್ಯವೇನು? ಜ್ಞಾನಕ್ಕೇ ತಲೆ ತಿರುಗಿದ ಪ್ರಸಂಗವೆಂದರೆ ಇದೇ! ಹಾಗೆಂದೇ ಇದರ ಬಗ್ಗೆ ಗಾಂಧೀಜಿ, ಇದು ನಾಗರೀಕತೆಯಲ್ಲ, ಅಧರ್ಮ, ಒಂದು ಮಹಾರೋಗ ಎಂದದ್ದು.

ಜ್ಞಾನಕ್ಕೆ ತಲೆ ತಿರುಗಿದ ಈ ಪ್ರಸಂಗವೇ ಇಂದೂ ನಮ್ಮನ್ನು ಆಳುತ್ತಿರುವುದು. ಈ ಪ್ರಸಂಗಾನುಸಂಧಾನವೇ ವಸಾಹತುಶಾಹಿಯಾಗಿ ಭಾರತದ ಮೂಲ ಸ್ವರೂಪವನ್ನೇ ಬದಲಾಯಿಸಿದ್ದು;ಅದರ ಅಂತಃಶಕ್ತಿಯನ್ನೇ ನಂದಿಸಿ, ಸೃಜನಶೀಲತೆಯನ್ನು ಬತ್ತಿಸಿದ್ದು. ಅದು ಇದನ್ನೆಲ್ಲ ಮಾಡಿದ್ದು, ನಮ್ಮ ಹಳ್ಳಿಗಳನ್ನು ಹಾಳು ಕೊಂಪೆಗಳನ್ನಾಗಿಸಿ, ನಗರೀಕರಣವೆಂಬ, ಭಾರತೀಯ ಬದುಕಿನ ಅಂತರ್ಗತ 'ಮಿತಿ'ಗಳನ್ನು ಉಲ್ಲಂಘಿಸುವ;ಹೀಗೆ ಉಲ್ಲಂಘಿಸುವುದು ಅನಿವಾರ್ಯವಷ್ಟೇ ಅಲ್ಲ, ಒಳ್ಳೆಯದು ಕೂಡಾ ಎಂಬ ನಂಬಿಕೆಯನ್ನು ಸೃಷ್ಟಿಸುವ ವಿದ್ಯಮಾನದ ಮೂಲಕ. ಈ ನಂಬಿಕೆಯ ಮೂಲಕವೇ ಇಂಗ್ಲಿಷ್ ಭಾರತೀಯ ಭಾಷೆಗಳನ್ನು ಪಕ್ಕಕ್ಕೆ ತಳ್ಳುತ್ತಾ, ನಮ್ಮ ಬದುಕಿನ ಹೊಸ 'ಭವಿಷ್ಯ'ದ ಭಾಷೆಯಾಗಿ ತನ್ನನ್ನು ತಾನು ಪ್ರಸ್ತುತಪಡಿಸಿಕೊಂಡದ್ದು. ಈ ನಂಬಿಕೆಯಲ್ಲೇ ನಾವು ಕನ್ನಡ ಅಥವಾ ಇನ್ನಾವುದೇ ಭಾರತೀಯ ಭಾಷೆ ಆಧುನಿಕ ವಿಜ್ಞಾನ ಅಥವಾ ಇನ್ನಾವುದೇ ಆಧುನಿಕ ಶಾಸ್ತ್ರಗಳನ್ನು ನಿರ್ವಹಿಸಲಾರದು ಎಂಬ ಗಿಣಿ ಪಾಠ ಒಪ್ಪಿಸುತ್ತಿರುತ್ತೇವೆ. ಆದರೆ ಆ ಪಾಠ ಮರೆ ಮಾಡಿರುವ ಸತ್ಯವೆಂದರೆ, ಈ ನಮ್ಮ ಭಾಷೆಗಳು ಆ ಮಿತಿಗಳನ್ನು ಮೈಗೂಡಿಸಿಕೊಂಡೇ ಬೆಳೆದವುಗಳು ಮತ್ತು ಅದಕ್ಕಿಂತ ಹೆಚ್ಚಾಗಿ ಆ ಮಿತಿಗಳು ಭಾರತೀಯ ಬದುಕು ತನ್ನ ತಳ ಹರಿಯದಂತೆ ತನಗೆ ತಾನು ದರ್ಶನಾತ್ಮಕವಾಗಿ ರೂಪಿಸಿಕೊಂಡವೇ ಆಗಿದ್ದವು ಎಂಬುದು. ಅಂದರೆ, ನಮ್ಮ ಭಾಷೆಗಳು ನಮ್ಮ ಸಂಸ್ಕೃತಿಯ ಆತ್ಮ (ಅಥವಾ ಅನಾತ್ಮ)ದರ್ಶನ ಕಟ್ಟಿಕೊಟ್ಟ ಅನಂತತೆಯ ಆಯಾಮಗಳ ಹಾಗೇ, ಆ ಅನಂತತೆಯ ದರ್ಶನದ ಅರಿವು ಮರೆವಾಗದದಂತೆ ರೂಪಿಸಿಕೊಂಡಿದ್ದ ಕೆಲವು ಲೌಕಿಕ ಮಿತಿಗಳನ್ನೂ ಮೈಗೂಡಿಸಿಕೊಂಡಿದ್ದವು. ಹಾಗಾಗಿ, ಉನ್ನತ ವಿಜ್ಞಾನ-ತಂತ್ರಜ್ಞಾನಗಳನ್ನೂ ಮತ್ತು ಇತರೆ ಆಧುನಿಕ ಶಾಸ್ತ್ರಗಳನ್ನು ಕನ್ನಡ ನಿರ್ವಹಿಸಲಾರದು ಎನ್ನುವುದು ಅಸಂಬದ್ಧ ಮಾತ್ರವಲ್ಲ; ಭಾಷೆ ಒಂದು ಸಂಸ್ಕೃತಿಯಾಗಿ, ಆ ಮೂಲಕ ಆ ಭಾಷೆಯ ಜನರಿಗೆ ನೀವು ನಿಮ್ಮ ಮಿತಿ ಮೀರುತ್ತಿದ್ದೀರಾ, ನಿಮ್ಮನ್ನು ನೀವು ಕಳೆದುಕೊಳ್ಳುತ್ತಿದ್ದೀರಾ, ಇದು ಒಳ್ಳೆಯದಕ್ಕಿರಲಾರದು ಎಂದು ನೀಡುತ್ತಿರುವ ಎಚ್ಚರಿಕೆಯನ್ನು ಅರ್ಥ ಮಾಡಿಕೊಳ್ಳದ ಸೊಕ್ಕು ಕೂಡಾ ಆಗಿದೆ ಎನಿಸುತ್ತದೆ.

ಹೀಗೆ ನಮ್ಮ ಭಾಷೆಗಳು ಮೂಲತಃ ಗ್ರಾಮ ಸಂಸ್ಕೃತಿಯ ಭಾಷೆಗಳು. ಹಾಗೇ ಅವು ಒಂದು ಗ್ರಾಮ ಕಾಲ-ದೇಶಗಳಲ್ಲಿ ತನ್ನ ಲಯ ಕಳೆದುಕೊಳ್ಳದೆ, ತನ್ನ ಸತ್ವದ ವಿಸ್ತರಣೆಯಾಗಿ ಎಷ್ಟೆಲ್ಲ ಬೆಳೆಯಬಹುದೋ ಅಷ್ಟನ್ನು ತನ್ನಲ್ಲಿ ಧಾರಣ ಮಾಡಿಕೊಂಡು ಸೃಜನಶೀಲವಾಗಿ ಬೆಳೆದು ಉಳಿದಿರುವುವು ಕೂಡ. ಹಾಗಾಗಿಯೇ ಅವು, ಗಾಂಧೀಜಿ ಮೂಲಕ ತನ್ನದೇ ಸತ್ವದ ಪುನರುಜ್ಜೀವನವಾಗಿ ಅಭಿವ್ಯಕ್ತಗೊಂಡ ಆಧುನಿಕತೆಯ ಆಯಾಮಗಳನ್ನು-ಸಮಾನತೆ, ಸೋದರತೆ ಮತ್ತು ಪ್ರಜಾಪ್ರಭುತ್ವ ತತ್ವಗಳನ್ನು-ಸ್ವಾಗತಿಸಿ, ಅದಕ್ಕೆ ಬೇಕಾದ ಹೊಸ ವ್ಯಾಕರಣ, ವಾಕ್ಯರಚನೆ ಮತ್ತು ಪರಿಭಾಷೆಯನ್ನು ಸಹಜವೆಂಬಂತೆ ರೂಪಿಸಿಕೊಂಡವು. ಅದೇ ಸಮಯದಲ್ಲಿ, ಈ ತತ್ವಗಳು ತಮ್ಮ ಲೌಕಿಕ ರೂಪಗಳಲ್ಲಿ ತಮ್ಮ ಮೂಲ ಜಾಯಮಾನದ ಮಿತಿಗಳನ್ನು

ಉಲ್ಲಂಘಿಸತೊಡಗಿದೊಡನೆ, ಆ ಉಲ್ಲಂಘನೆಯು ಪ್ರಯತ್ನಗಳನ್ನು–ಅದನ್ನು ಆಧುನಿಕತಾವಾದವು ಸಾಹಸ, ಸಂಶೋಧನೆ, ಪ್ರಗತಿ ಇತ್ಯಾದಿ ಆಸೆ ಹುಟ್ಟಿಸುವ ಆಕರ್ಷಕ ನಾಮಧೇಯಗಳಿಂದ ಕರೆಯುವವಾದರೂ–ತಮ್ಮ ರಾಚನಿಕತೆಯಲ್ಲಿ ಒಪ್ಪಿಕೊಳ್ಳದೆ ಪ್ರತಿರೋಧಿಸಿದವು ಕೂಡ. ಆದರೆ ನಾವು ಸಾಹಸ–ಸಂಶೋಧನೆ–ಪ್ರಗತಿಗಳನ್ನು ಕುರಿತ ಮಿತಿ ಮೀರಿದ ವ್ಯಸನದಲ್ಲಿ ಇಂತಹ ಪ್ರತಿರೋಧಗಳನ್ನೆಲ್ಲ ಲೆಕ್ಕಿಸದೇ ಮುನ್ನುಗ್ಗಿ ಹೋಗಿದ್ದೇವೆ. ಹೀಗೆ ಮುನ್ನುಗ್ಗಿ ಹೋದ ಎಷ್ಟೋ ಸಮಯದ ನಂತರ ಎಲ್ಲೋ ಒಳಗೆ ಏಟಾಗಿದೆ ಎನ್ನಿಸಿದಾಗ, ನಾರಾಯಣರ ಲೇಖನದಲ್ಲಿ ಕಂಡು ಬರುವ 'ಕನ್ನಡಿಯೊಳಗೆ ಕಂಡವರು ನಾವೇ ಆಗಿದ್ದವೋ ಇಲ್ಲವೇ ನಾವು ಹೇಗಿರಬೇಕೆಂದು ಬಯಸಿದ್ದವೋ ಅದು ಅಲ್ಲಿ ಕಂಡಿತೋ? ಇದು ನಮ್ಮನ್ನು ಕಾಡಲಿಲ್ಲ', 'ಕನ್ನಡ ಚಿಂತನೆ ಎಂಬುದು ಹೀಗೆಯೇ 'ಇತರ'ಕ್ಕೆ ಜೋತುಬಿದ್ದು ಬದುಕಬೇಕೆ?' ಇತ್ಯಾದಿ ಹಿನ್ನೋಟದ, ಅನುಮಾನದ, ಆತಂಕದ, ಪರಿತಾಪದ ಮಾತುಗಳು, ಪ್ರಶ್ನೆಗಳು ಕೇಳಿಬರುತ್ತಿವೆ.

–೭–

ಎಲ್ಲೋ ಒಳಗೆ ಏಟು ಎಂದೆ. ಆದರೆ ಈ ಏಟು ಈಗ ಹೊರಗೂ ಕಾಣಿಸಲಾರಂಭಿಸಿದೆ. ಕೆಲವು ಸೂಕ್ಷ್ಮ ದೇಹಿಗಳಲ್ಲಿ ನೋವೂ ಅನುಭವಕ್ಕೆ ಬರತೊಡಗಿದೆ. ಈ ಏಟು ಹಲವು ನೆಲೆಗಳಲ್ಲಿ, ಹಲವು ಸ್ಥೂಲ ರೂಪಗಳಲ್ಲಿ– ಸತತವಾಗಿ ಹೆಚ್ಚುತ್ತಿರುವ ಸಾಮಾಜಿಕ ,ಆರ್ಥಿಕ ಮತ್ತು ರಾಜಕೀಯ ಹಿಂಸೆ(ಇದರಲ್ಲಿ ಅಭಿವೃದ್ಧಿ ಹಿಂಸೆಯೂ ಸೇರಿದೆ)–ನಮ್ಮನ್ನು ಕಾಡತೊಡಗಿದೆ. ಆದರೆ ಅದೆಲ್ಲದರ ಕಿರೀಟಪ್ರಾಯ ಪರಿಣಾಮ, 'ಪರಿಸರ ಬದಲಾವಣೆ' ಕುರಿತ ಜಾಗತಿಕ ಮಾತುಕತೆಗಳ ಸತತ ವೈಫಲ್ಯಗಳ–ರಾಜಕೀಯ ಚೌಕಾಸಿಗಳ–ಹಿಂದೆ ಕಾಣುವ ಜೀವ ಜಗತ್ತಿನ ಏಕತೆ ಮತ್ತು ಸಮಗ್ರತೆಯನ್ನು ಕುರಿತ ನಮ್ಮ ಮರೆವಿನಲ್ಲಿ ಎದ್ದು ಕಾಣತೊಡಗಿದೆ. ಇದು ಜಗತ್ತನ್ನು ಒಟ್ಟಿಗೆ ಬಂಧಿಸಿಟ್ಟಿರುವ ಅನುಭಾವದ ಸಂಪೂರ್ಣ ನಾಶದ ಸೂಚನೆಯಲ್ಲದೆ ಮತ್ತೇನಲ್ಲ. ಇನ್ನು ಕೆಲವೇ ವರ್ಷಗಳಲ್ಲಿ ಜಗತ್ತು ಉಸಿರಾಡುವುದೇ ಕಷ್ಟವಾಗುವುದೆಂದು ಸೂಚಿಸುವ ಈ 'ಪರಿಣಾಮ'ದ ಮುಂಗಾಣ್ಕೆಯೇ, ಗಾಂಧಿಯವರ 'ಹಿಂದ್ ಸ್ವರಾಜ್' ಚಿಂತನೆಯ ಮೂಲಭಿತ್ತಿಯೂ ಆಗಿದೆ ಎಂಬುದನ್ನು ನಾವಿಲ್ಲಿ ಗಮನಿಸಬೇಕು: 'ಈ ಭೂಮಿ ಎಲ್ಲರ ಆಸೆಗಳನ್ನು ಪೂರೈಸಬಲ್ಲದೇ ಹೊರತು, ದುರಾಸೆಗಳನ್ನಲ್ಲ'.

ನಮ್ಮ ಆಸೆಗಳು ನಮಗೇ ಗೊತ್ತಾಗದಂತೆ ದುರಾಸೆಗಳಾಗಿ ಮಾರ್ಪಾಡಾಗಿದ್ದು, ನಮ್ಮ ಹಳ್ಳಿಗಳು ನಾಶವಾಗತೊಡಗಿದಾಗ; ನಗರೀಕರಣದ ಭೂತ ನಮ್ಮನ್ನು ಹೊಗಲಾರಂಭಿಸಿದಾಗ. ಮನುಷ್ಯ ನೈಸರ್ಗಿಕವಾಗಿ ಹಳ್ಳಿಯವನಾಗಿಯೇ–ಸ್ಥಳೀಯನಾಗಿಯೇ–ಉಳಿಯುವಂತೆ ಅವನ ದೇಹ ಮತ್ತು ಪ್ರಜ್ಞೆ ವಿಕಾಸಗೊಂಡಿವೆ;ಹಾಗಾಗಿ ಗ್ರಾಮ ಸಂಸ್ಕೃತಿಯೇ ಅವನ ಧರ್ಮ ಎಂದ ಗಾಂಧೀಜಿ ಪ್ರಕಾರ, ಮನುಷ್ಯನ ಮಾಹಿತಿ–ವ್ಯಾವಹಾರಿಕ–ಪ್ರಪಂಚ(ಭೌತಿಕ ಘಟಕ) ದೊಡ್ಡದಾಗುತ್ತಿದ್ದಂತೆ, ಅವನ (ಪ್ರಜ್ಞಾ)ಕೇಂದ್ರವೇ ವಿಚಲಿತವಾಗತೊಡಗಿ; ತನ್ನ ಪ್ರಪಂಚ ತನ್ನ ಗ್ರಹಿಕೆಯನ್ನು ಮೀರಿದ್ದು, ಅದು ತನ್ನ ಹತೋಟಿಗೆ ಸಿಗದಂತಹುದು ಎಂಬ ಭಾವನೆಗೆ ಈಡಾಗತೊಡಗುತ್ತಾನೆ. ಇದರಿಂದಾಗಿ ಅವನು ನಿಧಾನವಾಗಿ ಬದುಕಿನಲ್ಲಿ ನಿಜವಾದ ಆಸಕ್ತಿ ಕಳೆದುಕೊಳ್ಳುತ್ತಾನೆ, ಜಗತ್ತಿಗೆ ಬೇಜವಾಬ್ದಾರನಾಗತೊಡಗುತ್ತಾನೆ; ಅದರೊಂದಿಗೆ ಅವನ

ಪಾಲಿನ ಸ್ವರಾಜ್ಯವೂ ಮಣ್ಣುಗೂಡುತ್ತದೆ.* ಹೀಗೆ ನಮ್ಮ ಪಾಲಿನ ಸ್ವರಾಜ್ಯವನ್ನು–ಸಾಮಾನ್ಯ ಮನುಷ್ಯನ ಆತ್ಮ ಸಾಮ್ರಾಜ್ಯವನ್ನು–ನಿಧಾನವಾಗಿ ಮಣ್ಣುಗೂಡಿಸುವ ಭಾಷೆ ಇಂಗ್ಲಿಷ್. ಹೇಗೆಂದರೆ, ಅದೇ ಅವನನ್ನು ಅವನ ಸಹಜ–ನೈಸರ್ಗಿಕ–ನೈತಿಕ ಮಿತಿಗಳಿಂದ ಹೊರಸೆಳೆದು, ಅವನ ಲೌಕಿಕ ಪ್ರಪಂಚವನ್ನು ದೊಡ್ಡದೂ ಮತ್ತು ಜಟಿಲವನ್ನಾಗಿಯೂ ಮಾಡುತ್ತಾ ಅವನ ಕೇಂದ್ರವನ್ನೇ ದುರ್ಬಲಗೊಳಿಸಿರುವ ಭಾಷೆ. ಹಾಗೆಂದೇ ನಮ್ಮ ಬಹಳಷ್ಟು ನಗರ–ಪಟ್ಟಣಗಳು, ಬದುಕಿನ ಪರಿಣಾಮದ ಭಾಷೆಯಲ್ಲಿ ನೋಡಿದಾಗ ನಮ್ಮ ಹಾಳಾದ ಹಳ್ಳಿಗಳ ಇಂಗ್ಲಿಷ್ ಅನುವಾದಗಳಿಂತಿರುವುದು! ಈ ದೃಷ್ಟಿಯಿಂದ, ನಾರಾಯಣರು ಸದ್ಯದ ಲೇಖನದ ಮೂಲಕ ಪ್ರತಿನಿಧಿಸುತ್ತಿರುವ ಇದೇ ನೆಲೆಯ ಈವರೆಗಿನ ಎಲ್ಲ ಕನ್ನಡ ಭಾಷಾ ಚಿಂತನೆಗಳನ್ನು 'ಕನ್ನಡದ ಹಿಂದ್ ಸ್ವರಾಜ್' ಎಂದು ಕರೆಯಬಹುದೇನೋ!

ಈ ಹಿಂದೆ ನಾನು ಮತ್ತು ನನ್ನ ಕೆಲವು ಮಿತ್ರರು ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಸುವ ಸರ್ಕಾರದ ನಿರ್ಧಾರವನ್ನು ಸಾರಾ ಸಗಟಾಗಿ ವಿರೋಧಿಸಿದ್ದೂ ಇಂತಹ ಚಿಂತನೆಯ ಸ್ಫೂರ್ತಿಯಿಂದಲೇ. ಆದರೆ ಅದು ನಮಗೆ ದೊರಕಿದ್ದು ನೇರವಾಗಿ 'ಹಿಂದ್ ಸ್ವರಾಜ್'ನಿಂದಲ್ಲ. ಕನ್ನಡ ನವೋದಯದ ಮೀಮಾಂಸೆಯಿಂದ. ಅದು ಹೇಗೆಂದರೆ, ಕನ್ನಡ ನವೋದಯವು ಒಂದು ಸಾಂಸ್ಕೃತಿಕ ಮೀಮಾಂಸೆಯಾಗಿ ಗಾಂಧಿಯುಗದ ಮೌಲ್ಯಗಳನ್ನು ಕನ್ನಡ ಪ್ರಜ್ಞೆಯೊಳಕ್ಕೆ ವಿವಿಧ ರೂಪಗಳಲ್ಲಿ ತನ್ನದೇ ವಿಶಿಷ್ಟತೆಯೊಂದಿಗೆ ಅಳವಡಿಸಿಟ್ಟಿತ್ತು. ಹಾಗಾಗಿ ಅದು ಕನ್ನಡದ ಬಗ್ಗೆ ಆಡಿದ ಮಾತೆಲ್ಲ ಕನ್ನಡದ ಬದುಕಿನ ಬಗ್ಗೆ ಆಡಿದ ಮಾತೂ ಆಗಿರುತ್ತಿತ್ತು. ಈ ಸಂಬಂಧ, ಆಗಲೇ ವೈಯುಕ್ತಿಕ ಸಾಹಸವಾಗಿ ಕಾರಂತರು ಕನ್ನಡದ್ದೇ ವಿಶ್ವಕೋಶ ರಚಿಸಿದ್ದನ್ನು, ಬೇಂದ್ರೆಯವರ ಕನ್ನಡವು ಕನ್ನಡವ ಕನ್ನಡಿಸುವಂತಿರಬೇಕು ಎಂಬ ವಾಣಿಯನ್ನು, ಮಾಸ್ತಿಯವರ 'ಮೊದಲು ನಾನು ಕನ್ನಡಿಗನು;ಹಾಗಾಗಿ ಭಾರತದವನು;ಕರ್ನಾಟಕವಿಲ್ಲದೆ ಭಾರತವೆಲ್ಲಿದೆ?' ಎಂಬ ಪ್ರಶ್ನೆಯನ್ನು; ಮತ್ತು ಇವೆಲ್ಲವುಗಳ ಹಿಂದಿದ್ದ ಆತಂಕ ಮತ್ತು ಆತ್ಮ ವಿಶ್ವಾಸಗಳೆರಡನ್ನೂ ಆಗಲೇ ವ್ಯಾಪಕವಾಗಿ ಪಸರಿಸುತ್ತಿದ್ದ ಇಂಗ್ಲಿಷ್ ಹುಚ್ಚಿನ ಹಿನ್ನೆಲೆಯಲ್ಲಿ ವಿವರಿಸಿ ಸ್ಪಷ್ಟಪಡಿಸುವಂತಿದ್ದ ಕುವೆಂಪು ಅವರ 'ಮನುಜಮತ:ವಿಶ್ವಪಥ'ಕೃತಿಯಲ್ಲಿ 'ನಮಗೆಷ್ಟು ಇಂಗ್ಲಿಷ್ ಬೇಕು? ಎಂಬುದನ್ನು ಚರ್ಚಿಸುವ ಕನ್ನಡ ಮೀಮಾಂಸಾ ಲೇಖನಗಳನ್ನೂ ಗಮನಿಸಬೇಕು. ಆದರೆ ಹೀಗೆ ಆಂತರಿಕವಾಗಿ ಕ್ರಾಂತಿಕಾರಿಯೇ ಆಗಿದ್ದ ಈ ಕನ್ನಡ ನವೋದಯ ಪೂರ್ಣವಾಗಿ ಪ್ರಬುದ್ಧಗೊಳ್ಳುವ ಮುನ್ನವೇ ನವ್ಯವು ತನ್ನ ರಭಸದಲ್ಲಿ ಅದನ್ನು ಹೊರಗಿನಿಂದ ಹೊಡೆದುಕೊಂಡು ಹೋಯಿತು. ಈ ನವ್ಯವು ಮೂಲತಃ ಇಂಗ್ಲಿಷ್ ಮೇಷ್ಟ್ರುಗಳ ಬೌದ್ಧಿಕ ಕೊಡುಗೆಯಾಗಿತ್ತು ಎಂಬುದು ಇಲ್ಲಿ ಕಡಿಮೆ ಮಹತ್ವದ ಸಂಗತಿಯೇನಲ್ಲ.(ಈ ಮೂಲಕ ನಾನು ಇಲ್ಲಿ ನವ್ಯ ಆಂದೋಲನದ ಬಗ್ಗೆ ವಿಮರ್ಶೆಯನ್ನೇನೂ ಮಾಡುತ್ತಿಲ್ಲ ಎಂದೂ ಹೇಳಬಯಸುವೆ)

–೮–

ನಾನು ಬರೆದ ಇಷ್ಟೆಲ್ಲ ಓದಿದ ಯಾರಿಗಾದರೂ, ಇಡಿಯಾಗಿ ಇದು ಗಾಂಧಿ

---

* ಗಾಂಧೀಜಿ ಪ್ರಕಾರ ತನ್ನನ್ನು ತಾನು ಅಂಕೆಯಲ್ಲಿಟ್ಟುಕೊಳ್ಳುವುದೇ ಸ್ವರಾಜ್ಯ

ಚಿಂತನೆಯನ್ನೂ, ನವೋದಯ ಮೀಮಾಂಸೆಯನ್ನೂ ಪ್ರಶ್ನೆ ಮಾಡದೆ ಒಪ್ಪಿಕೊಂಡ ಭೋಳೆ ಬರಹ ಎಂದು ಅನ್ನಿಸಿದ್ದರೆ ಆಶ್ಚರ್ಯವಿಲ್ಲ. ಏಕೆಂದರೆ, ಜಗತ್ತೇ ಇಂತಹ ಎಲ್ಲ ಚಿಂತನೆಗಳನ್ನು ಧಿಕ್ಕರಿಸಿ ಇನ್ನೊಂದು ದಿಕ್ಕಿನಲ್ಲಿ ಓಡುತ್ತಿರುವಾಗ, ಅದರ ವಿರುದ್ಧ ದಿಕ್ಕಿನಲ್ಲಿ ಹೋಗಬಯಸುವ ಇವನಿಗೆಲ್ಲೋ ಭ್ರಾಂತು ಎಂದು ಇವರು ಅಂದುಕೊಳ್ಳುವುದು ಸಹಜವೇ ಆಗಿದೆ. ಆದರೆ ಹೀಗೆ ವ್ಯಾವಹಾರಿಕ ನೆಲೆಯಲ್ಲಿ ಪ್ರಶ್ನೆ ಮಾಡಬಯಸುವವರು, ಒಂದು ನಿಜದ ನೆಲೆಯ ಪ್ರಶ್ನೆಯನ್ನೂ ಎದುರಿಸಬೇಕು: ನಿಜವಾಗಿಯೂ ನಾವು ಓಡುತ್ತಿರುವುದು ಸರಿಯಾದ ದಿಕ್ಕಿನಲ್ಲಿಯೇ? ಎದೆ ಮುಟ್ಟಿಕೊಂಡು ನೋಡಿ ಹಾಗೆ ಹೇಳಬಲ್ಲಿರಾ? ನಿಮಗೆ ಒಳಗೆಲ್ಲೋ ಈ ಸಂಬಂಧವಾಗಿ ಪ್ರಶ್ನೆಗಳೇ, ತಲ್ಲಣಗಳೇ ಇಲ್ಲವೇ? ಅಲ್ಲದೆ, ಸರಿ–ತಪ್ಪುಗಳ ಕಲ್ಪನೆಯನ್ನೇ ಆಧುನಿಕ ಜ್ಞಾನಸಂಪತ್ತು ವಿಕ್ಷಿಪ್ತಗೊಳಿಸಿರುವಾಗ, ಎಲ್ಲವನ್ನೂ ಪ್ರಶ್ನೆ ಮಾಡಿಯೇ ತೀರಬೇಕೆಂಬುದು ಒಂದು ಆಧುನಿಕ ಚಟ ಮಾತ್ರವಾಗುವ ಸಂಭವವೂ ಉಂಟಲ್ಲವೇ? ಹಾಗೆ ನೋಡಿದರೆ, ಗಾಂಧಿ ಆಧುನಿಕ ನಾಗರೀಕತೆಯನ್ನು ಪ್ರಶ್ನೆ ಮಾಡಿದ್ದರಿಂದಲೇ 'ಹಿಂದ್ ಸ್ವರಾಜ್' ಹುಟ್ಟಿದ್ದಲ್ಲವೆ? ಹಾಗಾಗಿ, ನಾವೀಗ ಅದನ್ನು ಪ್ರಶ್ನೆ ಮಾಡೋಣ;ಆದರೆ ಅದನ್ನು ತಿರಸ್ಕರಿಸಿ, ಧಿಕ್ಕರಿಸಿ ನಾವು ಹಿಡಿದ ದಾರಿಯಲ್ಲಿ ಎಲ್ಲ ಸರಿಯಾಗಿದೆಯೇ ಎಂಬ ಪ್ರಶ್ನೆಯ ಜೊತೆಗೆ... ಇಲ್ಲ, ನಾವೀಗ ಹಿಡಿದಿರುವ ದಾರಿ ಸರಿಯಿಲ್ಲ, ಮೂಲದಲ್ಲೇ ಎಲ್ಲೋ ಏನೋ ತೊಂದರೆ ಇದ್ದಂತಿದೆ ಎಂದು ಎನಿಸಲಾರಂಭಿಸಿರುವವರಾದರೂ, 'ಹಿಂದ ಸ್ವರಾಜ್'ನ್ನು ಪ್ರಶ್ನೆ ಮಾಡಿಯೂ, ಅದನ್ನು ಸಹಾನುಭೂತಿಯಿಂದ ಪುನರಾವಲೋಕಿಸಬೇಕಿದೆ.

ಈ ದಾರಿಯ ಆರಂಭದಲ್ಲೇ, ಅದ್ಭುತ ಮುನ್ನೋಟದೊಂದಿಗೆ ಹೀಗೆ ಅದನ್ನು ಅವಲೋಕಿಸಿದ ಒಂದು ಪ್ರಯತ್ನವೇ ಭಾರತೀಯ ಸಮಾಜವಾದಿ ಚಳುವಳಿ. ವಿಶೇಷವಾಗಿ ಡಾ॥ರಾಮಮನೋಹರ ಲೋಹಿಯಾ ಅವರ ಸಮಾಜವಾದಿ ಚಿಂತನೆಗಳು. ಲೋಹಿಯಾ ಆಧುನಿಕ ನಾಗರೀಕತೆ ಪೂರ್ಣವಾಗಿ ಜಡಾತ್ಮಕ ಎಂದು ಭಾವಿಸಲಿಲ್ಲ. ಆದರೆ ಅದು ತಾನು ಹುಟ್ಟು ಹಾಕಿದ ರಾಜಕಾರಣಕ್ಕೆ ಸಿಕ್ಕಿ, ಹಾಗಾಗುವ ಅಪಾಯವನ್ನು ಅವರು ಮುನ್ನೋಡಬಲ್ಲವರಾಗಿದ್ದರು. ಹಾಗಾಗಿಯೇ ಅವರು ಅಂತಹ ರಾಜಕಾರಣಗಳೆನಿಸಿದ ಮಾರ್ಕ್ಸ್‌ವಾದಿ ಮತ್ತು ಬಂಡವಾಳಶಾಹಿ ರಾಜಕಾರಣಗಳೆರಡನ್ನೂ ಒಂದೇ ನಾಗರೀಕತೆಯ ಎರಡು ಮುಖಗಳು ಎಂದು ಕರೆದಿದ್ದರಲ್ಲದೆ, ಕಮ್ಯೂನಿಸಮ್ಮನ್ನು ಆಧುನಿಕ ಕ್ರಿಶ್ಚಿಯನ್ ಧರ್ಮದ ನಂತರ ಯೂರೋಪ್ ಏಷ್ಯಾದ ಮೇಲೆ ಪ್ರಯೋಗಿಸುತ್ತಿರುವ ಇತ್ತೀಚಿನ ಅಸ್ತ್ರ ಎಂದು ಬಣ್ಣಿಸಿದ್ದರು. ಅವರು ಗಾಂಧೀಜಿಯ ಹಾಗೆ ರಾಜಕೀಯವಾಗಿ ಆಧುನಿಕ ವಿಚಾರಗಳ ಪರವಾಗಿದ್ದು, ಒಂದು ರೀತಿಯಲ್ಲಿ (ಬಂಡಾಯ)ಗಾಂಧಿವಾದಿ ಎನಿಸಿಕೊಂಡರೂ; ಆಧುನಿಕ ನಾಗರೀಕತೆ ಎಂದರೆ ಬರೀ ಲೌಕಿಕತೆ ಎಂಬ ಗಾಂಧಿ ನಂಬಿಕೆಯನ್ನು ಅಷ್ಟಾಗಿ ಒಪ್ಪಲಿಲ್ಲ. ಹಾಗಾಗಿಯೇ ಗಾಂಧಿ–ಲೋಹಿಯಾ ನಡುವಣ ಮೊದಲ ಪತ್ರ ವ್ಯವಹಾರವೇ ಇಬ್ಬರ ಪಾಲಿಗೂ ಕಹಿಯಿಂದ ಕೂಡಿತ್ತು. ಲೋಹಿಯಾ, ಗಾಂಧೀಜಿಯ ಖಾದಿ–ಗ್ರಾಮೋದ್ಯೋಗಳನ್ನು ಭಾರತ ಸ್ವರಾಜ್ಯವನ್ನು ಸಂಪಾದಿಸಬಲ್ಲ ಕಾರ್ಯ ಸಾಧನಗಳು ಎಂಬುದನ್ನು ಸ್ವಲ್ಪ ಕಟು ಭಾಷೆಯಲ್ಲಿ ಅಲ್ಲಗೆಳೆದಿದ್ದರು. ಭಾರತ ಕಾಲದ ಕಂದಕದಲ್ಲಿ ಸಿಕ್ಕಿಹಾಕಿಕೊಳ್ಳಬಾರದೆಂದು ಅವರು ಸೂಚಿಸಿದ್ದರು.

ಲೋಹಿಯಾರ ಬರಹದ ಭಾವ–ಭಂಗಿಗಳಿಂದ ಗಾಂಧಿ ಅಸಮಾಧಾನಗೊಂಡರು.

ಲೋಹಿಯಾ ತಮ್ಮ ಭಾಷಾ ಶೈಲಿಯ ವಿಷಯದಲ್ಲಿ ಕ್ಷಮೆ ಕೋರಿದೊಡನೆ, ಗಾಂಧಿ-ಲೋಹಿಯಾ ನಡುವೆ 'ವಿಮರ್ಶಾತ್ಮಕ'ವೆಂದು ಕರೆಯಬಹುದಾದ ದೀರ್ಘಕಾಲೀನ ಗುರು-ಶಿಷ್ಯ ಸಂಬಂಧ ಅರಳಿತು. ನೌಖಾಲಿ ಯಾತ್ರೆಯಿಂದ ಆರಂಭವಾದ ಗಾಂಧೀಜಿಯ ಕೊನೆಯ ದಿನಗಳಲ್ಲಿ-ಕೊಲೆಯಗಾಗುವ ಹಿಂದಿನ ದಿನದವರೆಗೂ-ಅವರ ವೈಯುಕ್ತಿಕ ಪರಿವಾರದ ಹೊರತಾಗಿ, ಅವರೊಂದಿಗೆ ಅವರ ಕೋರಿಕೆಯ ಮೇರೆಗೇ ಇದ್ದವರೆಂದರೆ ಲೋಹಿಯಾರೇ. ಆ ಹೊತ್ತಿಗೆ ಗಾಂಧೀಜಿ 'ಹಿಂದ್ ಸ್ವರಾಜ್'ನ್ನು ಅದರ ಭಾವನೆಯ ಮಟ್ಟದಲ್ಲೂ ನಿರಾಕರಿಸಿದ್ದ ನೆಹರೂ ಮತ್ತವರ ಸಹೋದ್ಯೋಗಿಗಳ 'ರಾಜ್ಯಭಾರ'ದ ರೀತಿ ನೀತಿಗಳಿಂದ ಭ್ರಮನಿರಸನರಾಗಿದ್ದರು. ಇದರ ಪರಿಹಾರವಾಗಿ ಲೋಹಿಯಾ ಮತ್ತವರ ಸ್ನೇಹಿತರ ಕಡೆ ನೋಡತೊಡಗಿದ್ದರು. ಆದರೆ ಲೋಹಿಯಾ ಮತ್ತವರ ಸ್ನೇಹಿತರು ಗಾಂಧೀಜಿಯ ನಿರೀಕ್ಷೆಗಳನ್ನು ಪೂರ್ಣವಾಗಿ ಅರ್ಥ ಮಾಡಿಕೊಳ್ಳುವ, ಹಾಗಾಗಿ ನಿಜಗೊಳಿಸುವ ಸ್ಥಿತಿಯಲ್ಲಿರಲಿಲ್ಲ. ಅಥವಾ ಈ ಸಂಬಂಧ ಹಾಗೆ ಪ್ರಬುದ್ಧಗೊಳ್ಳಲು ಇತಿಹಾಸ ಅವಕಾಶ ಕೊಡಲಿಲ್ಲ ಎಂದೂ ಹೇಳಬಹುದು. ಗಾಂಧಿ-ಲೋಹಿಯಾ ಮಾತುಕತೆಗಳು ನಿಜವಾಗಿ ಆರಂಭವಾಗುವ ಮೊದಲೇ ಗಾಂಧಿ ಮತಮೂರ್ಖನೊಬ್ಬನ ಗುಂಡಿಗೆ ಬಲಿಯಾಗಬೇಕಾಯಿತು.

ಇದನ್ನೆಲ್ಲ ಇಷ್ಟು ವಿವರವಾಗಿ ಇಲ್ಲಿ ಏಕೆ ಹೇಳುತ್ತಿದ್ದೇನೆಂದರೆ, 'ಹಿಂದ್ ಸ್ವರಾಜ್' ಕುರಿತ ಪರ ಮತ್ತು ವಿರೋಧಗಳೆಂಬ ಎರಡು ಅತಿಗಳ ನಡುವೆ ಮಧ್ಯಮ ಮಾರ್ಗವೊಂದು ಭಾರತದ ರಾಜಕೀಯ ಇತಿಹಾಸದಲ್ಲಿ ಆರಂಭವಾಗಿತ್ತು ಎಂದು ಸೂಚಿಸಲು. ಲೋಹಿಯಾಗೆ ಪ್ರತಿ ಮನುಷ್ಯನೂ ಸಂತನಾಗಬಲ್ಲ ಎಂಬ ಗಾಂಧಿ ನಂಬಿಕೆಯಲ್ಲಿ ಅಷ್ಟಾಗಿ ವಿಶ್ವಾಸವಿರಲಿಲ್ಲ. ಅವರ ಪ್ರಕಾರ ಸಂತನಾಗಬೇಕೆಂಬುದು ಒಂದು ಉನ್ನತ ಆದರ್ಶ ಅಷ್ಟೆ. ಆದರೆ ಆದರ್ಶಗಳೇ ಎಲ್ಲರ ನಿಜ ಜೀವನವನ್ನು ಆಳಲಾರವು. ಹಾಗಾಗಿ ಸಾಮಾನ್ಯ ಮನುಷ್ಯನ ಚಿತ್ತವೃತ್ತಿಯ ಪರಿಮಿತಗಳನ್ನು ಕಾಲ-ದೇಶಗಳ ವ್ಯಾಪ್ತಿಯಲ್ಲಿ ಗಮನಿಸಿ, ಅದಕ್ಕೆ ತಕ್ಕನಾದ ರಾಜಕೀಯ ಕಾರ್ಯಕ್ರಮಗಳನ್ನು ಆವಿಷ್ಕರಿಸಬೇಕೆಂಬುದು ಅವರ ಅಭಿಪ್ರಾಯವಾಗಿತ್ತು. ಅದಕ್ಕೆ ತಕ್ಕುನಾಗಿಯೇ, ಮನುಷ್ಯನ ದೀರ್ಘಕಾಲಿಕ (ಅಧ್ಯಾತ್ಮಿಕ) ಆಶಯಗಳ ಮತ್ತು ಅಲ್ಪಕಾಲಿಕ (ಲೌಕಿಕ) ಆಸೆಗಳ ನಡುವೆ ವೈರುಧ್ಯ ಸೃಷ್ಟಿಯಾಗದಂತಹ ಮತ್ತು ಆಧುನಿಕ ನಾಗರೀಕತೆ ಎಂಬುದು ಕೊನೆಯಿರದ ಸುಖದ ವ್ಯಸನದಲ್ಲಿ ಮನುಷ್ಯನನ್ನು ಆಂತರಿಕವಾಗಿ ನಾಶ ಮಾಡುವ ಸಾಧನವಾಗದಂತೆ, ಅದನ್ನು ಪಳಗಿಸುವ ರಾಜಕೀಯ ಮಧ್ಯಮ ಮಾರ್ಗವೊಂದನ್ನು ಅವರು ಮಂಡಿಸಿದರು. ಅದರ ಭಾಗವಾಗಿ ಜಗತ್ತೇಕೆ, ನಿರ್ದಿಷ್ಟವಾಗಿ ಭಾರತವೇಕೆ ಹೀಗೆ ಆಧುನಿಕ ನಾಗರೀಕತೆಯ ವ್ಯಾಮೋಹಕ್ಕೆ ಸಿಕ್ಕಿದೆ ಎಂಬುದನ್ನರಿತು, ಅದಕ್ಕೆ ಪರಿಹಾರವಾಗಿ ತನ್ನ ರಾಜಕೀಯ ಕಾರ್ಯಕ್ರಮಗಳನ್ನು ನಿರೂಪಿಸಿದರು.

ಆಧುನಿಕ ನಾಗರೀಕತೆಯು ಎಲ್ಲ ಹಳೆಯ ಸಾಮಾಜಿಕ-ಆರ್ಥಿಕ-ರಾಜಕೀಯ ಸಂರಚನೆಗಳನ್ನೂ ಧ್ವಂಸಗೊಳಿಸಿ, ಹೊಸ ಯುಗದ ಕಾಣ್ಕೆಯ ರೂಪದಲ್ಲಿ ಮಂಡಿಸಿದ್ದ ಸಾರ್ವತ್ರಿಕ ಸಮಾನತೆಗಾಗಿ ಭಾರತ ಹಂಬಲಿಸುತ್ತಿದೆ ಎಂದು ಲೋಹಿಯಾ ಗುರುತಿಸಿದರು. ಈ ಸಮಾನತೆಯ ಹಂಬಲ ನಿರಂತರ ಸುಖ ಸಂಪಾದನೆಯ ವ್ಯಭಿಚಾರವಾಗಿ ಅವನತಿಗೊಳ್ಳದಂತೆ ಅವರು ಅದನ್ನು ಹೊಸ ಜಗತ್ತಿನ ಹಂಬಲವಾಗಿ ಹೀಗೆ ಪ್ರಸ್ತುತಪಡಿಸಿದರು:

'ಸಮಾನತೆಯ ಪರಿಕಲ್ಪನೆಯನ್ನು ಅದರ ನಾಲ್ಕು ಆಯಾಮಗಳಲ್ಲಿ ಗ್ರಹಿಸಬೇಕಾಗಿದೆ. ಲೌಕಿಕ ಸಮಾನತೆ ಎಂದರೆ, ರಾಷ್ಟ್ರಗಳ ನಡುವಣ (ಬಾಹ್ಯಾಂತರ)ಸಮೀಪೀಕರಣವಲ್ಲದೆ, ರಾಷ್ಟ್ರದೊಳಗಿನ (ಆಂತರಿಕ)ಸಮೀಪೀಕರಣವೆಂದೂ; ಆಧ್ಯಾತ್ಮಿಕ ಸಮಾನತೆಯೆಂದರೆ, ಬಾಹ್ಯ ಬಂಧುತ್ವವಲ್ಲದೆ ಆಂತರಿಕ ಪ್ರಶಾಂತಿಯೆಂದೂ ಅರ್ಥವಾಗಬೇಕು. ಈ ಪ್ರಶಾಂತಿ, ಬಂಧುತ್ವ ಹಾಗೂ ರಾಷ್ಟ್ರದೊಳಗೆ ಮತ್ತು ರಾಷ್ಟ್ರಗಳ ನಡುವಣ ಲೌಕಿಕ ಸಮಾನತೆ–ಈ ನಾಲ್ಕೂ ಆಯಾಮಗಳನ್ನೊಳಗೊಂಡ ಒಂದು ಸಮಗ್ರ ಕಲ್ಪನೆ ಮಾತ್ರ ಬದುಕಿನ ಪರಮ ಗುರಿ ಹಾಗೂ ಉದ್ದೇಶವಾಗಲು ಅರ್ಹತೆ ಪಡೆಯುತ್ತದೆ.'

ಇಂತಹ ಸಮಾನತೆಯ ಅನುಷ್ಠಾನಕ್ಕಾಗಿ ಭಾರತದ ಮಟ್ಟಿಗೆ ಲೋಹಿಯಾ, ಗಾಂಧೀಜಿಯ ಗ್ರಾಮ ಸ್ವರಾಜ್ಯದ ಬದಲಾಗಿ, (ರಾಜಕೀಯ ಅಧಿಕಾರ ನಾಲ್ಕು ಹಂತಗಳಲ್ಲಿ ವಿಕೇಂದ್ರಿತವಾಗಿರುವ) ಚತುಸ್ಥಂಭ ರಾಷ್ಟ್ರ ಪರಿಕಲ್ಪನೆ(ಮತ್ತು ಇದರ ಜಾಗತಿಕ ವಿಸ್ತರಣೆಯಾಗಿ ವಿಶ್ವ ಸರ್ಕಾರ), ಇದರ ಸಾಕಾರಕ್ಕಾಗಿ ಚರಕದ ಬದಲಾಗಿ ಸಣ್ಣ ಘಟಕಗಳ ಯಂತ್ರ ವ್ಯವಸ್ಥೆ ಮತ್ತು ಅಸ್ಪೃಶ್ಯತಾ ನಿವಾರಣೆಯ ವಿಸ್ತರಣೆಯಾಗಿ ಜಾತಿ ವಿನಾಶ ಕಾರ್ಯಕ್ರಮಗಳನ್ನು ಪ್ರತಿಪಾದಿಸಿ, ಇದೆಲ್ಲದರ ಯಶಸ್ಸಿಗಾಗಿ 'ಇಂಗ್ಲಿಷ್ ತೊಲಗಿಸಿ' ಚಳುವಳಿಗಾಗಿ ಕರೆಕೊಟ್ಟರು. ಈ ಚಳುವಳಿಯನ್ನು ಅವರು 'ಭಾರತೀಯ ಭಾಷಾ ಆಂದೋಲನ'ವೆಂದೂ ಕರೆದರೆಂಬುದು ಇಲ್ಲಿ ಮುಖ್ಯ(**ಟಿಪ್ಪಣಿ–೪ ನೋಡಿ**). ಇದು ನಮ್ಮ ರಾಜಕಾರಣ ಆಧುನಿಕಗೊಳ್ಳುವುದರೊಂದಿಗೇ ನಮ್ಮ ಭಾಷೆಗಳೂ ಆಧುನಿಕಗೊಳ್ಳಲು ಅನುವು ಮಾಡಿಕೊಟ್ಟ, ಆಧುನಿಕ ನಾಗರೀಕತೆಯೊಂದಿಗೆ ಭಾರತ ನಡೆಸಬಹುದಾದ ಅತ್ಯುತ್ತಮ ಅನುಸಂಧಾನಕ್ಕೆ ಉದಾಹರಣೆಯಂತಿದೆ. ಇದರ ಹಿಂದೆ (ಸ್ವ)ದೇಶಿ ಎನ್ನುವುದು ಬರೀ ಪುರಾತನವಾಗದೆ, ಜಾಗತಿಕ ಬದಲಾವಣೆಯೊಂದಿಗೆ ತನ್ನನ್ನು ತಾನು ಒಮ್ಮೆ ನೋಡಿಕೊಂಡು ಹೊಸ ಕಾಲದ ನಿರೀಕ್ಷೆ ಮತ್ತು ಸವಾಲುಗಳಿಗೆ ತಾನು ದೇಶೀಯ ಚೌಕಟ್ಟಿನಲ್ಲಿಯೇ ಸೃಜನಶೀಲವಾಗಿ ಸಜ್ಜುಗೊಳ್ಳುತ್ತಾ, ಭಾರತೀಯ ಭಾಷೆಗಳ ರಾಚನಿಕ ಸಮಗ್ರತೆಯನ್ನು ಉಲ್ಲಂಘಿಸದೆ ಅವುಗಳ ಸಾಮರ್ಥ್ಯ ವಿಸ್ತರಣೆಗೂ ಅನುವು ಮಾಡಿಕೊಡುವಂತಿರಬೇಕು ಎಂಬ ಲೋಹಿಯಾರ ಅಪೂರ್ವ ಒಳನೋಟ ಕಾಣುತ್ತದೆ. ಒಂದು ಜೀವನ ಕ್ರಮ ಹಾಗೂ ಅದರ ಭಾಷೆಗಿರುವ ಸಾವಯವ ಸಂಬಂಧವನ್ನು ಗ್ರಹಿಸಿ, ಅವೆರಡನ್ನೂ ಅವುಗಳ ಮೂಲ ಬೇರುಗಳಿಗೆ ಧಕ್ಕೆಯಾಗದಂತೆ ಒಟ್ಟಿಗೇ ವಿಕಾಸಕ್ಕೆ ತೆರೆದಿಡುವ ಹೊಸ ಶೈಲಿಯ ಪ್ರಗತಿಪರ ಚಿಂತನೆಯಿದು. ಈ ನೆಲೆಯಲ್ಲಿಯೇ ಅವರು, ಭಾರತೀಯ ಸಂಶೋಧಕರು ಸಣ್ಣ ಘಟಕಗಳ ಪರಿಭಾಷೆಯಲ್ಲಿ ಯೋಚಿಸದ ಹೊರತು, ಅವರಿಂದ ಯಾವುದೇ ಮೂಲಭೂತ ಸಂಶೋಧನೆ ಸಾಧ್ಯವಾಗಲಾರದು ಎಂದಿದ್ದುದು. ಈ ಮಾತು ಇಂದಿಗೂ ನಿಜವಾಗಿದೆಯಲ್ಲವೆ?

ಈ ಪ್ರಯೋಗ ಆಧುನಿಕ ನಾಗರೀಕತೆಯ ಯೌವ್ವನದ ಶಕ್ತಿ–ಸಂಭ್ರಮಗಳ ಎದುರು ಸಾಕಷ್ಟು ಕಾಲ ಹೋರಾಡಿತು;ಬಳಲಿ ಬೆಂಡಾಯಿತು. ಆದರೆ ಸತ್ಯಕ್ಕೆ ಸಾವಿಲ್ಲವೆಂಬಂತೆ, ಆಧುನಿಕ ನಾಗರೀಕತೆ ಈಗ ಜಾಗತೀಕರಣದ ರೂಪ ತಾಳಿ ಎದುರಿಸುತ್ತಿರುವ ತಾತ್ವಿಕ, ವ್ಯಾವಹಾರಿಕ ಮತ್ತು ನೈತಿಕ ಬಿಕ್ಕಟ್ಟುಗಳ ಸಂದರ್ಭದಲ್ಲಿ ಇದು ಮತ್ತೆ ತನ್ನ ಪ್ರಸ್ತುತತೆಯನ್ನು ಮಂಡಿಸುವ ಅವಕಾಶವನ್ನು ಪಡೆದಿದೆ. ಅದಕ್ಕಾಗಿ ಅದು ತನ್ನ ದೀರ್ಘ ಹೋರಾಟದಿಂದ

ಪಡೆದ ಅನುಭವ ಮತ್ತು ವಿವೇಕಗಳನ್ನು ಸೃಜನಶೀಲವಾಗಿ ಜೋಡಿಸಿಕೊಂಡು ಸಜ್ಜಾಗಬೇಕಿದೆ. ಸದ್ಯದ ಜಾಗತಿಕ ಆರ್ಥಿಕ ಹಿಂಜರಿತದ ಹಿನ್ನೆಲೆಯಲ್ಲಿ ಇಂತಹ ಸಾಧ್ಯತೆಗಳು ಅನಿವಾರ್ಯವೆಂಬಂತೆ, ಈಗಾಗಲೇ ಜಗತ್ತಿನಾದ್ಯಂತ ಗೋಚರವಾಗತೊಡಗಿವೆ. ಸಮಾಜವಾದದ ವಿರುದ್ಧ ಜಾಗತಿಕ ಸಮರ ಸಾರಿದ್ದ ಅಮೆರಿಕಾವೇ ಇಂದು ಸಮಾಜವಾದಿಯಾಗತೊಡಗಿದೆ ಎಂದು ಅಲ್ಲಿನ ಬಲಪಂಥೀಯರು ಬೊಬ್ಬೆ ಹೊಡೆಯತೊಡಗಿದ್ದಾರೆ! ಇಂತಹ ಅವಕಾಶ ಮತ್ತು ಸಾಧ್ಯತೆಗಳ ಜೊತೆಗೆ ಮಾತ್ರ ಕೆ.ವಿ.ನಾರಾಯಣರ ಕನ್ನಡ ಚಿಂತನೆ ಪ್ರಸ್ತುತತೆ ಮತ್ತು ಸಾಧುತ್ವಗಳನ್ನು ಗಳಿಸಿಕೊಳ್ಳಬಹುದು. ಅವರು ತಮ್ಮ ಈ ಭಾಷಾ ಚಿಂತನೆಯನ್ನು ಅದರ ರಾಜಕೀಯ ಆಯಾಮಗಳೊಂದಿಗೆ–ಈ ಲೇಖನದಲ್ಲಿ ದ.ಏಷ್ಯಾದ ಪರಿಕಲ್ಪನೆಯ ಹುಟ್ಟಿನ ಹಿಂದಿನ ರಾಜಕಾರಣದ ಸೂಚನೆಯೊಂದಿಗೆ ವಿಷದೀಕರಿಸಿದಂತೆ–ನಿಸ್ಸಂದಿಗ್ಧವಾಗಿ ಮತ್ತು ಕ್ರಿಯಾತ್ಮಕವಾಗಿ(ಅಂದರೆ ಸಮಕಾಲೀನ ಭಾಷಾ ಹೋರಾಟಗಳ ವಕ್ತಾರರಾಗಿ) ಪ್ರಸ್ತುತಪಡಿಸಿದರೆ ಮಾತ್ರ ಅದಕ್ಕೊಂದು ವ್ಯಾವಹಾರಿಕ ಆವೇಗವೂ ಸಿಗುತ್ತದೆ. ಇಲ್ಲದಿದ್ದರೆ ಅದು ಒಣ ಪಾಂಡಿತ್ಯ ಮಾತ್ರವೆನಿಸಿಕೊಳ್ಳುತ್ತದೆ. ಅದು ಹಾಗಾಗದಿರಲೆಂದು ಹಾರೈಸಿಯೇ ಅವರ ಚಿಂತನೆಗಳನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿ, ಇದರ ಬಗ್ಗೆ ಚರ್ಚೆ ಮುಂದುವರಿಯುವುದು ಎಂದು ಆಶಿಸುವೆ.

ಟಿಪ್ಪಣಿ–೧:

ಒಂದನೇ ತರಗತಿಯಿಂದಲೇ ಕನ್ನಡದ ಮಕ್ಕಳಿಗೆ ಇಂಗ್ಲಿಷ್ ಕಲಿಸುವ ಸರ್ಕಾರದ ನಿರ್ಧಾರಕ್ಕೆ ವ್ಯಕ್ತವಾದ ವಿರೋಧದ ಹಿಂದೆ ಇದ್ದ ಮುಖ್ಯ ಚಿಂತನೆಯೆಂದರೆ: ಯಾವ ಕಾರಣದಿಂದ ನಾವು ಸ್ವಾತಂತ್ರ್ಯವನ್ನು ಕಳೆದುಕೊಂಡಿದ್ದೆವೋ, ಆ ಕಾರಣಗಳು ನಮ್ಮ ಜೀವನ ದೃಷ್ಟಿ ಮತ್ತು ಜೀವನ ಕ್ರಮಗಳಲ್ಲಿ ಮತ್ತೆ ಮೈದಾಳಬಾರದು ಎಂಬ ದೃಷ್ಟಿಯಿಂದ ಈವರೆಗೆ ಬೆಳೆಸಿ, ಉಳಿಸಿಕೊಂಡು ಬಂದ ಭಾರತೀಯ ಭಾಷಾ ಆಂದೋಲನಕ್ಕೆ(ಕರ್ನಾಟಕದ ಮಟ್ಟಿಗೆ, ಕನ್ನಡ ಭಾಷಾ ಆಂದೋಲನ)ಕ್ಕೆ ಈ ನಿರ್ಧಾರ ಮಾರಣಾಂತಿಕ ಪೆಟ್ಟು ನೀಡಿದೆ ಎಂಬುದು. ಸ್ಥೂಲವಾಗಿ ಹೇಳುವುದಾದರೆ, ಶಿಕ್ಷಣ ಮಾಧ್ಯಮ ಮತ್ತು ಸಾರ್ವಜನಿಕ ಜೀವನದಲ್ಲಿ ಇಂಗ್ಲಿಷ್ ಬಳಕೆಯನ್ನು ಕಡಿಮೆ ಮಾಡುವ ಮತ್ತು ಅದರ ಜಾಗದಲ್ಲಿ ಭಾರತೀಯ ಭಾಷೆಗಳನ್ನು ಜಾರಿಗೆ ತರುವ ಆಂದೋಲನದ ಮೂಲ ಆಶಯವನ್ನೇ ಇದು ಭಂಗಗೊಳಿಸುವಂತಿದೆ ಎನ್ನುವುದು. ಇದರಲ್ಲಿ ಇಂಗ್ಲಿಷ್ ಭಾಷೆಯ ವಿರೋಧ ಅಥವಾ ಕನ್ನಡ ಸಂಸ್ಕೃತಿಯ ರಕ್ಷಣೆಯ ಪ್ರಶ್ನೆಗಳು ಕೇವಲ ಆನುಷಂಗಿಕವಾದವುಗಳು. ಆದರೆ ಈ ಸಂದರ್ಭದಲ್ಲಿ ಹೊರಬಂದ ಕೆ.ವಿ.ನಾರಾಯಣರ ಈ ಕೃತಿ(ಇನ್ನಿತರ ವಿಷಯಗಳಿಗೆ ಸಂಬಂಧಿಸಿದಂತೆ ಒಂದು ಅನನ್ಯ ಅಧ್ಯಯನವಾಗಿದೆಯಾದರೂ) ಮೇಲಿನ ಚಿಂತನೆಯ ಮೂಲ ತತ್ವಗಳನ್ನೇ ಪ್ರಶ್ನಿಸುವಂತಿದೆ:

೧. ಮೊದಲನೆಯದಾಗಿ, ಕನ್ನಡ ಕಲಿತವರೆಲ್ಲ ಕನ್ನಡ ಸಂಸ್ಕೃತಿಯ ರಕ್ಷಕರೇನೂ ಆಗಿಲ್ಲ ಎಂಬ ತಿರುಗು ತರ್ಕವನ್ನಾಧರಿಸಿದ(ಅಂದರೆ, ಇಂಗ್ಲಿಷಿನಲ್ಲಿ ಕಲಿತವರೆಲ್ಲ ಕನ್ನಡ ಸಂಸ್ಕೃತಿಯನ್ನೇನೂ ಕೈಬಿಡುವುದಿಲ್ಲ ಎಂದು ಸಾಧಿಸುವ ಮಾಧ್ಯಮವಾಗಿ), ಸ್ವಲ್ಪ ಉಡಾಫೆಯೆನ್ನಿಸುವ ಮಾತಿನ ಮೂಲಕ, ಈ ಚಿಂತನೆಯ ಅಂಚಿನಲ್ಲಿ ನಿಂತೇ, ಅದರ ಬಗ್ಗೆ ವ್ಯಂಗ್ಯವಾಡುತ್ತದೆ.

೨. ಎರಡನೆಯದಾಗಿ, ಕಲಿಕೆಯ ಯಶಸ್ಸು ಅದರ ಭಾಷೆ ಪರಿಚಿತವೋ ಅಪರಿಚಿತವೋ ಎಂಬ ಅಂಶವನ್ನು ಅವಲಂಬಿಸುವುದಿಲ್ಲ ಎಂದು ಘೋಷಿಸುತ್ತದೆ... ಇಲ್ಲಿ ನಾರಾಯಣರು ಯಶಸ್ಸು ಎನ್ನುವ ಪದವನ್ನು ಯಾವ ಅರ್ಥದಲ್ಲಿ ಬಳಸಿದ್ದಾರೋ ತಿಳಿಯದು! ಏಕೆಂದರೆ, ತಮ್ಮ ಈ ಘೋಷಣೆಗೆ ಅವರು ಆಧಾರವಾಗಿ ನೀಡುವ ಕಾರಣ, ಭಾಷಾ ಕಲಿಕೆಯ ತರ್ಕವೇ ಬೇರೆ, ವಿಷಯ ಕಲಿಕೆಯ ತರ್ಕವೇ ಬೇರೆ ಎಂಬುದು. ಅದೇನೋ ಸರಿ, ಆದರೆ ವಿಷಯ ಕಲಿಕೆಗೆ ಅವರು ಹೇಳುವ ಅನುಗಮನ ತರ್ಕವನ್ನು ಅನ್ವಯಿಸಲು(ಕಲಿಕೆಗಾಗಿ) ಬಳಸುವ

ಮಾಧ್ಯಮ(ಸಂವಹನ ಘಟಕ)ವಾದರೂ ಯಾವುದು? ಅದು ಭಾಷೆಯೇ ಅಲ್ಲವೇ? ಅದನ್ನೇನೂ ಮೂಕವಾಗಿ ಕಲಿಸಲಾಗುದಿಲ್ಲವಲ್ಲ? ಹಾಗಾಗಿ, ಅದು ಎಷ್ಟರ ಮಟ್ಟಿಗೆ ಅಪರಿಚಿತವಾಗಿರುತ್ತದೋ, ಆ ತರ್ಕವೂ ಅಷ್ಟರ ಮಟ್ಟಿಗೆ ಅಸ್ಪಷ್ಟವಾಗುವುದಿಲ್ಲವೇ? ಆ ಮೂಲಕ ವಿಷಯ ಕಲಿಕೆಯ ಗುಣ ಮಟ್ಟವೂ ಕುಂಠಿತಗೊಳ್ಳುವುದಿಲ್ಲವೇ?

ನಾರಾಯಣರ ಚಿಂತನೆಯೇ ಸರಿಯಿದ್ದರೆ, ಅವರೇ ಹೇಳುವ ಹಾಗೆ ಮಾನವಿಕ ಹಾಗೂ ಕಲಾ ಅಧ್ಯಯನದ ಸಾಕಷ್ಟು ವಿದ್ಯಾರ್ಥಿಗಳು ಇಂಗ್ಲಿಷ್ ಮಾಧ್ಯಮದಲ್ಲಿ ಕಲಿತು ಪರೀಕ್ಷೆಯನ್ನು ಕನ್ನಡದಲ್ಲಿ ಬರೆಯುತ್ತಿರುವುದರ ಕಾರಣವಾದರೂ ಏನು?(ಮೊದಲಾಗಿ ಅಂತಹವರು ಇಂಗ್ಲಿಷ್ ಮಾಧ್ಯಮದಲ್ಲಿ ಓದುವಂತಾಗಿರುವುದೇ ಕನ್ನಡದಲ್ಲಿ ಅವುಗಳ ಅಧ್ಯಯನಕ್ಕೆ ಅವಕಾಶ/ಸೌಲಭ್ಯವಿಲ್ಲವೆಂದಲ್ಲವೇ?) ಇಂಗ್ಲಿಷಿಗಿಂತ ಕನ್ನಡದಲ್ಲಿ ವಿಷಯವನ್ನು ಮಂಡಿಸುವುದು ತಮಗೆ ಸುಲಭ ಎಂದಲ್ಲವೆ? ಹಾಗಾದರೆ, ನಾರಾಯಣರ ತಿರುಗು ತರ್ಕವನ್ನೇ ಬಳಸಿ ಹೇಳುವುದಾದರೆ, ವಿಷಯ ಗ್ರಹಿಕೆಗೂ ಕೂಡಾ ಇಂಗ್ಲಿಷಿಗೆ ಹೋಲಿಸಿದರೆ ಕನ್ನಡವೇ ಸುಲಭ ಎಂದಾಗುವುದಿಲ್ಲವೇ? ಅಭಿವ್ಯಕ್ತಿಗೆ ಪೂರಕವಾಗದ ವಿಷಯ ಗ್ರಹಿಕೆಯ ಕ್ರಮಗಳಲ್ಲೇ ಎಲ್ಲೋ ದೋಷಗಳಿರಬೇಕಲ್ಲವೆ? ಅಥವಾ ಕಲಿತ ವಿಷಯದ ಸಮರ್ಪಕ ಅಭಿವ್ಯಕ್ತಿ ಅಷ್ಟೇನೂ ಮುಖ್ಯವಲ್ಲವೆಂದು ನಾರಾಯಣರ ಅಭಿಪ್ರಾಯವೋ? ಸಾಮಾನ್ಯ ಜನರಿಗೆ ಸಂಬಂಧಪಟ್ಟಂತೆ, ನಮ್ಮ ವಿಜ್ಞಾನ–ತಂತ್ರಜ್ಞಾನ ಮತ್ತು ಆಡಳಿತ ಕ್ಷೇತ್ರಗಳ ಅ–ಪಾರದರ್ಶಕತೆಗೆ ಮೂಲ ಕಾರಣ ಇಲ್ಲೇ ಎಲ್ಲೊ ಇದೆಯಲ್ಲವೇ?

೩. ಒಮ್ಮೆಗೇ ಒಂದು ಮಗು ಒಂದಕ್ಕಿಂತ ಎರಡು ಹೆಚ್ಚು ಭಾಷೆಗಳನ್ನು ಸಮರ್ಪಕವಾಗಿ ಕಲಿಯಲಾರದು ಎಂಬ ಸಾಮಾನ್ಯ ಶೈಕ್ಷಣಿಕ ನಂಬಿಕೆಯನ್ನು 'ಜಾಗತಿಕ ಅಂತಸ್ಥ ವ್ಯಾಕರಣ' ಎಂಬ ಪರಿಕಲ್ಪನೆಯ ಸಹಾಯದಿಂದ ಅಲ್ಲಗೆಳೆಯಲಾಗಿದೆ. ಈ ಪರಿಕಲ್ಪನೆ ಭಾಷಾ ಶಾಸ್ತ್ರಜ್ಞರ ವಲಯದಲ್ಲಿ ವಿವಾದಾಸ್ಪದವಾಗಿಯೇ ಇದೆ ಎಂಬ ಸಂಗತಿಯ ನಡುವೆಯೂ ಇದನ್ನು ಒಪ್ಪಿಕೊಂಡರೂ ಕೂಡ, ಈ ಪರಿಕಲ್ಪನೆ ಅನ್ವಯವಾಗುವುದು ಸಂಬಂಧಪಟ್ಟ ಭಾಷೆಗಳು ಪರಿಸರ ಭಾಷೆಗಳಿದ್ದಾಗ ಮಾತ್ರ ಎಂಬುದನ್ನು ನಾವು ಗಮನಿಸಬೇಕು. ಆದರೆ ನಾರಾಯಣರು ತಮ್ಮ ಈ ವಾದದ ಮೂಲಕ ಯಾವುದನ್ನು ಅಪರಿಚಿತ ಭಾಷೆಯ ಹೆಸರಲ್ಲಿ ಇಂಗ್ಲಿಷ್ ಕಲಿಕೆಯ ಸುಗಮತೆಯನ್ನು ಎತ್ತಿ ಹಿಡಿಯುತ್ತಿರುವಂತೆ ತೋರುವುದೋ ಆ ಇಂಗ್ಲಿಷ್ ಭಾಷೆ ನಮ್ಮ ಸಮಾಜದ ಪರಿಸರ ಭಾಷೆಯಾಗಿಲ್ಲ ಎಂಬುದನ್ನು ಮರೆತಂತಿದೆ!

೪. 'ಆಧುನೀಕರಣ' ಎಂಬ ಅಧ್ಯಾಯದಲ್ಲಿ ಕನ್ನಡ–ಇಂಗ್ಲಿಷ್–ಸಂಸ್ಕೃತಗಳ ಸಂಬಂಧಗಳ ರಾಜಕಾರಣವನ್ನು ಚರ್ಚಿಸುವ ನಾರಾಯಣರು ಕನ್ನಡ ಕುರಿತು ದಲಿತರು ಮತ್ತು ಹಿಂದುಳಿದವರ(ಇವರ ಹಿಂದುಳಿಯುವಿಕೆ ಈಗ ಯಾವ ನೆಲೆಯದ್ದು ಎಂಬುದು ತಿಳಿಯದಾಗಿದೆ!) ಆಲೋಚನೆಗಳೆಂದು ಮಂಡಿಸುವ ವಿಚಾರಗಳು ವಿವಾದಾಸ್ಪದವಾಗಿವೆ. ಒಂದು ರಾಷ್ಟ್ರ ಅಥವಾ ಒಂದು ರಾಜ್ಯವನ್ನು ಕಟ್ಟುವ ಸಂದರ್ಭದಲ್ಲಿ(ಈ ಸಂದರ್ಭವನ್ನು ನೀವು ಒಪ್ಪುವಿರಾದರೆ) ಭಾಷೆಯೊಂದನ್ನು ಆಡಳಿತ ಹಾಗೂ ಶಿಕ್ಷಣಕ್ಕಾಗಿ ಪ್ರಮಾಣೀಕರಿಸುವುದು(ಈ ಪ್ರಮಾಣೀಕರಣದ ರೀತಿ–ನೀತಿಗಳ ಬಗ್ಗೆ ಚರ್ಚೆ ಸಾಧ್ಯವಾದರೂ) ಅನಿವಾರ್ಯವಾಗುತ್ತದೆ: ಆದರೆ ಇದನ್ನು ಹೇರಿಕೆ ಎಂದು ಪರಿಗಣಿಸುವ ನಾರಾಯಣರು ಅಲ್ಲಿ (ಕಾಂಚಾ ಇಲಯ್ಯ ಅವರ ಇಂಗ್ಲಿಷ್ ಪರವಾದ ವಾದವನ್ನು ಬಳಸಿಕೊಂಡು) ಜಾತಿ ರಾಜಕಾರಣವನ್ನು ಹುಡುಕಿ, ದಲಿತರು ಮತ್ತು ಹಿಂದುಳಿದವರು ಸಂಸ್ಕೃತಮಯ ಕನ್ನಡಕ್ಕಿಂತ ಜಾಗತಿಕ ಅವಕಾಶಗಳ ಇಂಗ್ಲಿಷ್ ಮೂಲಕ ತಮ್ಮ ಸಾಮಾಜಿಕ ಬಿಡುಗಡೆಗಾಗಿ ಹಾತೊರೆಯುತ್ತಿದ್ದಾರೆ ಎಂಬ ಸಾರಾ ಸಗಟಾದ ತೀರ್ಮಾನವನ್ನು ಕೊಡುತ್ತಾರೆ.

ಆದರೆ ಇಂದು ದಲಿತರಾಗಲೀ, ಹಿಂದುಳಿದವರಾಗಲೀ ಇಂಗ್ಲಿಷ್(ಮಾಧ್ಯಮ) ಶಿಕ್ಷಣಕ್ಕೆ ಹಾತೊರೆಯುತ್ತಿದ್ದರೆ, ಅದು ಒಟ್ಟಾರೆಯಾಗಿ ರಾಷ್ಟ್ರಜೀವನದಲ್ಲಿ ಇತ್ತೀಚಿನ ವರ್ಷಗಳಲ್ಲಿ ಉಂಟಾಗಿರುವ ಇಂಗ್ಲಿಷ್ ಶಿಕ್ಷಣದ ಸಾರ್ವತ್ರಿಕ ಆಕರ್ಷಣೆಯ ಭಾಗವಾಗಿಯೇ ಹೊರತು; ಇವರು ಹೇಳುವಂತಹ ಅವರ 'ಪ್ರಾದೇಶಿಕ ಭಾಷೆಯ ಹಕ್ಕುದಾರಿಕೆಯ ಹಂಗಿನಿಂದ ಹೊರಬರಬೇಕು ಎಂಬ ಇಚ್ಛೆ'ಯಿಂದಲ್ಲ. (ನಾರಾಯಣರು ಇಲ್ಲಿ ಮಾತೃಭಾಷೆಗೆ ಬದಲಾಗಿ–ಕಾಂಚಾ ಇಲಯ್ಯ ಇಂತಹ ಚರ್ಚೆಗಳಲ್ಲಿ ಪ್ರಯೋಗಿಸುವ–ಪ್ರಾದೇಶಿಕ ಭಾಷೆ ಎಂಬ ಶಬ್ದದ ಬಳಕೆಗೆ ಕೈಹಾಕಿರುವುದರಲ್ಲೇ ಮತ್ತು 'ಹಂಗು' ಎಂಬ ಶಬ್ದವನ್ನು ಬಳಸಿರುವ ಸಾಂಸ್ಕೃತಿಕ ರಾಜಕಾರಣದಲ್ಲೇ, ಈ ವಿಚಾರ ಲಹರಿ ಎಂತಹ ಧೂರ್ತತನದಿಂದ ಕೂಡಿದೆ ಎಂಬುದು ಸ್ಪಷ್ಟವಾಗುತ್ತದೆ.) ಹಾಗೇನಾದರೂ ಇದ್ದಲ್ಲಿ,

ನಮ್ಮ ದಲಿತರೂ ಮತ್ತು ಹಿಂದುಳಿದವರೂ ತಮ್ಮ ಮಕ್ಕಳು–ಮೊಮ್ಮಕ್ಕಳಿಗೆ ಶ್ರೇಯಸ್, ಆಕರ್ಷಣ್, ಸೃಜನ್, ಪ್ರಜ್ವಲ್, ಕೃತ್ತಿಕಾ, ಶಶಾಂಕ್, ಅಂತಃಕರಣ್, ಶುಭ್ರತಾ ಇತ್ಯಾದಿ ಹೆಸರಗಳನ್ನಿಟ್ಟುಕೊಂಡು ಅವರ ಹುಟ್ಟುಹಬ್ಬಗಳಿಗಾಗಿ ಕುಲೀನ ಮನೆತನಗಳ ಭಟ್ಟರುಗಳನ್ನು ಕರೆದು ಗಣಪತಿ ಹೋಮ ಅಥವಾ ಸತ್ಯನಾರಾಯಣ ಪೂಜೆಗಳನ್ನು ಮಾಡಿಸಿಕೊಂಡು ಸಂತೋಷಪಡಲು ಮುಂದಾಗುತ್ತಿರಲಿಲ್ಲ. ಕನ್ನಡ ಏಕಾಕಾರದ ಘನಾಕೃತಿಯಲ್ಲ ಎಂದು ಸರಿಯಾಗಿಯೇ ಹೇಳುವ ನಾರಾಯಣರು, ದಲಿತರು ಮತ್ತು ಹಿಂದುಳಿದವರನ್ನು ಮಾತ್ರ ಏಕಾಕಾರಿ ಘನಾಕೃತಿಯೆಂದು ಏಕೆ ಮತ್ತು ಹೇಗೆ ಭಾವಿಸಿದ್ದಾರೋ ತಿಳಿಯದಾಗಿದೆ!

೫. ನಾರಾಯಣರು ಕರ್ನಾಟಕದಲ್ಲಿ ಕನ್ನಡವನ್ನು ಶಿಕ್ಷಣ ಮತ್ತು ಆಡಳಿತ ಭಾಷೆಯಾಗಿ ಜಾರಿಗೆ ತರುವ ಸಂಬಂಧವಾಗಿ ಚರ್ಚಿಸುವ ಇನ್ನೊಂದು ಪ್ರಕರಣವೆಂದರೆ, 'ಬಹು ಭಾಷಾ ಸಂದರ್ಭ'. ಕರ್ನಾಟಕವನ್ನು–ಅದರ ಒಟ್ಟು ಜನಸಂಖ್ಯೆಯಲ್ಲಿ ಕನ್ನಡ ಮಾತೃಭಾಷಿಕರ ಸಂಖ್ಯೆ ಶೇ.೭೦ಕ್ಕಿಂತ ಕಡಿಮೆ ಎಂಬ ಅಂಕಿ ಅಂಶದ ಆಧಾರದ ಮೇಲೆ–ಬಹು ಭಾಷಾ ಸಂದರ್ಭದ ಒಂದು ವಿಶಿಷ್ಟ ಉದಾಹರಣೆಯೆಂದು ಬಿಂಬಿಸುತ್ತಾ, ಅದರ ಹಿನ್ನೆಲೆಯಲ್ಲಿ 'ಕನ್ನಡ ಹೇರಿಕೆ'ಯ ಸಮಸ್ಯೆಗಳನ್ನು ಲೇಖಕರು ಚರ್ಚಿಸುತ್ತಾರೆ. ಆದರೆ ಕರ್ನಾಟಕದಲ್ಲಿ ಭಾಷಾ ಅಲ್ಪಸಂಖ್ಯಾತರಿಗಿಂತ ಹೆಚ್ಚಾಗಿ, ಸ್ವತಃ ಕನ್ನಡ ಮಾತೃಭಾಷಿಕರೇ ತಮ್ಮ ಮೇಲೆ ಕನ್ನಡ ಹೇರಲಾಗುತ್ತಿದೆ ಎಂದು ಪ್ರತಿಭಟಿಸಹೊರಟಿದ್ದಾರೆ ಎಂಬ ವಿಪರ್ಯಾಸದ ಸಂಗತಿಯನ್ನು ನಾರಾಯಣರು ಗಮನಿಸಿದ್ದರೆ, ಈ ಸಂಬಂಧದ ಅವರ ವಿಶ್ಲೇಷಣೆಯ ವರಸೆಯೇ ಬೇರೆಯಾಗಿರುತ್ತಿತ್ತೇನೋ! ಏಕೆಂದರೆ, ಆಗ ಬಹು ಭಾಷಾ ಸಂದರ್ಭದಲ್ಲಿ ಇವರು ಹೇಳುವ ಕನ್ನಡ ಹೇರಿಕೆಯ ಸಮಸ್ಯೆಗಳು ಬಹುತೇಕವಾಗಿ, ಇಂಗ್ಲಿಷ್ (ಪ್ರೇರಿಸುವ ಜೀವನ ಕ್ರಮದ) ಪರ ಒಲವಿನಿಂದಾಗಿ ಮೂಡಿದವೇ ಹೊರತು ಕನ್ನಡೇತರ ಭಾಷಿಕರ ಸಾಂಸ್ಕೃತಿಕ ಅಥವಾ ವ್ಯಾವಹಾರಿಕ ಬಿಕ್ಕಟ್ಟುಗಳಿಂದಲ್ಲ ಎಂಬುದು ಇವರಿಗೆ ಗೊತ್ತಾಗುತ್ತಿತ್ತು. ಈ ಸಂಬಂಧವಾಗಿ ನಾರಾಯಣರು ಪ್ರಸ್ತಾಪಿಸುವ ಕನ್ನಡ–ತುಳು–ಕೊಂಕಣಿ–ಕೊಡವ–ಬ್ಯಾರಿ ಭಾಷೆಗಳ ಸಂಬಂಧವನ್ನು ಬಹುಭಾಷಾ ಸಂದರ್ಭವೆಂದು ನಿರೂಪಿಸುವುದೇ ಅಚಾರಿತ್ರಿಕವಾಗುತ್ತದೆ. ಅದೊಂದು ಕೌಟುಂಬಿಕ ನೆಲೆಯ ಸಂಬಂಧವೇ ಆಗಿದೆ ಮತ್ತು ಅವುಗಳ ನಡುವಣ ಘರ್ಷಣೆಗಳೂ ಕೌಟುಂಬಿಕ ಸ್ವರೂಪದ್ದೇ ಆಗಿವೆ. ಹಾಗಾಗಿ ಅವನ್ನು ಹಾಗೇ ನಡೆಯಲು ಬಿಡುವುದು ಈ ಎಲ್ಲ ಭಾಷೆಗಳ ಮತ್ತು ಜನರ ಹಿತದೃಷ್ಟಿಯಿಂದ ಒಳ್ಳೆಯದು! ಅಲ್ಲದೆ, ಈ ಸಂಬಂಧವಾಗಿ ಈ ಪುಸ್ತಕದಲ್ಲಿ ದಾಖಲಾಗಿರುವ ಕೊಡಗನ್ನು ಕರ್ನಾಟಕದಲ್ಲಿ ಒತ್ತಾಯಪೂರ್ವಕವಾಗಿ ವಿಲೀನಗೊಳಿಸಿಕೊಳ್ಳಲಾಯಿತೇನೋ ಎಂಬ ಅನುಮಾನದ ಮಾತಿಗೆ ಈಗ ಕೊಡಗಿನಲ್ಲೇ ಯಾವುದೇ ಬೆಂಬಲವಿಲ್ಲ; ಕೊಡಗು 'ವಿಮೋಚನೆ'ಗೆಂದು ಈಗ ಹೊರಟಿರುವ (ಪೂರ್ಣ ಇಂಗ್ಲಿಷ್‌ಮಯ ಹೆಸರನ್ನು ಹೊಂದಿರುವ) ಸಂಘಟನೆ ಕೂಡಾ ವಿಮೋಚಿತ ಕೊಡಗಿನ ಆಡಳಿತ ಭಾಷೆಯೇ ಆಗಿರುತ್ತದೆ ಎಂದು ಘೋಷಿಸಿರುವುದನ್ನು ನಾರಾಯಣರು ಗಮನಿಸಬೇಕು. ಕರ್ನಾಟಕದಲ್ಲಿ ಮಾಸ್ತಿಯವರಿಗಿಂತ ಹೆಚ್ಚು ತಮಿಳರಾಗಲು, ಡಿ.ವಿ.ಜಿಯವರಿಗಿಂತ ಹೆಚ್ಚು ತೆಲುಗರಾಗಲು, ನಾ. ಕಸ್ತೂರಿಯವರಿಗಿಂತ ಹೆಚ್ಚು ಮಲೆಯಾಳಿಯಾಗಲು, ಬೇಂದ್ರೆಯವರಿಗಿಂತ ಹೆಚ್ಚು ಮರಾಠಿಗರಾಗಲು ಯತ್ನಿಸುವುದು ಎಷ್ಟು ಹಾಸ್ಯಾಸ್ಪದವೋ; ಅದಕ್ಕಿಂತ ಹೆಚ್ಚು ಹಾಸ್ಯಾಸ್ಪದವಾದದ್ದು ಮತ್ತು ಘಾತುಕವೂ ಆದದ್ದು ಕಯ್ಯಾರ ಕಿಞ್ಞಣ್ಣರೈ ಅವರಿಗಿಂತ ಹೆಚ್ಚು ತುಳುವರಾಗಲು, ಗೋವಿಂದಪೈ ಅವರಿಗಿಂತ ಹೆಚ್ಚು ಕೊಂಕಣಿಯರಾಗಲು ಅಥವಾ ಚಿಣ್ಣಪ್ಪ ಅವರಿಗಿಂತ ಹೆಚ್ಚು ಕೊಡವರಾಗಲು ಕನ್ನಡಿಗರು ಭಾಷಾ ಉದಾರತೆ ಅಥವಾ ಸಾಂಸ್ಕೃತಿಕ ಬಹುತ್ವದ ಹೆಸರಲ್ಲಿ ಯತ್ನಿಸುತ್ತಿರುವ ಈ ಪರಿ!

ಇನ್ನು ಈ ಕನ್ನಡ ಕೌಟುಂಬಿಕ ಭಾಷೆಗಳಲ್ಲದ ಭಾಷೆಗಳು ಮತ್ತು ಕನ್ನಡದ ನಡುವಣ ಸಂಬಂಧದ ಬಗ್ಗೆ ಹೇಳುವುದಾದರೆ, ಉರ್ದು ಭಾಷಿಕ ಅರಸರು ಆಳಿದ ಭಾಗಗಳಲ್ಲಿನ ಕೆಲವು ಉರ್ದು ಭಾಷಿಕ ಸಮುದಾಯಗಳಲ್ಲಿ ಕಾಣುವ ಕನ್ನಡ ತಿಳುವಳಿಕೆಯ ಕೊರತೆಯ ಹೊರತಾಗಿ, ಕರ್ನಾಟಕದಲ್ಲಿ ನೆಲೆಸಿರುವ ಇತರ ಭಾಷಿಕರು ಕನ್ನಡವನ್ನು ಒಂದು ಗಂಭೀರ ಸಮಸ್ಯೆಯಾಗಿ ಎದುರಿಸಿದ ಉದಾಹರಣೆಗಳಿಲ್ಲ. ಸಮಸ್ಯೆಗಳಿದ್ದರೆ ಅವು ಮೂಲತಃ ಗಡಿಗೆ ಸಂಬಂಧಿಸಿದ ರಾಜಕೀಯ ಸ್ವರೂಪದವು(ಉದಾ: ಕನ್ನಡ–ಮರಾಠಿ ಸಂಬಂಧ). ಆದರೆ ಬಹುತೇಕ ಎಲ್ಲರೂ ತಮ್ಮ ಅಗತ್ಯಕ್ಕೆ ತಕ್ಕ ಕನ್ನಡ ಕಲಿತು, ವ್ಯವಹಾರಕ್ಕೆ ಭಾಷೆಯನ್ನು ಒಂದು ಸಮಸ್ಯೆಯನ್ನಾಗಿ ಮಾಡಿಕೊಳ್ಳದೆ ಒಟ್ಟಿಗೆ ಬಾಳುತ್ತಿದ್ದಾರೆ. ಮೇಲೆ ಪ್ರಸ್ತಾಪಿಸಿದ ಉರ್ದು ಭಾಷಿಕರ ಸಮಸ್ಯೆಗೆ ಮೂಲತಃ ಈ ಭಾಷೆ ಕನ್ನಡ

ಜಾಯಮಾನದಿಂದ ದೂರವಿದೆಯೆಂಬುದು ಕಾರಣವೋ ಅಥವಾ ಇದರ ಹಿಂದೆ ಮತೀಯ–ಸಾಂಸ್ಕೃತಿಕ ಕಾರಣವೇನಾದರೂ ಇದೆಯೋ ಎಂಬುದರ ಬಗ್ಗೆ ಇನ್ನಷ್ಟು ಅಧ್ಯಯನದ ಅಗತ್ಯವಿದೆ. ಆದರೆ ಇನ್ನು ಮುಂದಾದರೂ ಎಲ್ಲ ಉರ್ದು ಶಾಲೆಗಳಲ್ಲಿ ಕನ್ನಡ ಶಿಕ್ಷಕರನ್ನು ನಿಯಮಿತವಾಗಿ ನೇಮಿಸುವ ಮೂಲಕ ಈ ಸಮಸ್ಯೆಯನ್ನು ತಾಂತ್ರಿಕವಾಗಿಯಾದರೂ ಬಗೆಹರಿಸಿಕೊಳ್ಳಬಹುದಾಗಿದೆ. ನಿಜವಾದ ಸಮಸ್ಯೆ ಇರುವುದು ವಲಸಿಗರದ್ದು. ಆದರೆ ಎಲ್ಲಿಯವರೆಗೆ ನಾವು ಬರೀ ಬೌದ್ಧಿಕ ಪ್ರಮೇಯಗಳನ್ನು ಮಂಡಿಸಿಕೊಂಡು ಬಹುಭಾಷಾ ಸಂದರ್ಭವನ್ನು ಅನಗತ್ಯವಾಗಿ ಒತ್ತಿ ಹೇಳುತ್ತಾ ಕರ್ನಾಟಕವನ್ನು ವ್ಯಾವಹಾರಿಕ ನೆಲೆಯಲ್ಲಾದರೂ ಕನ್ನಡ ರಾಜ್ಯವನ್ನಾಗಿ ಮಾಡಲು ತೊಡರುಗಾಲು ಹಾಕುತ್ತಿರುತ್ತೇವೆಯೋ. ಅಲ್ಲಿಯವರೆಗೆ ವಲಸಿಗರು–ಅವರು ಉತ್ತರಭಾರತೀಯರಂತೆ ರಾಜಕೀಯವಾಗಿ ಮತ್ತು ಆರ್ಥಿಕವಾಗಿ ಸಬಲರಾಗಿದ್ದರಂತೂ ಮುಗಿದೇ ಹೋಯಿತು–ಭಾಷಿಕ ನೆಲೆಯಲ್ಲಿ ಒಂದು ಮುಗಿಯದ ಸಮಸ್ಯೆಯೇ.

ಹೀಗೆ ಒಟ್ಟಿನಲ್ಲಿ, ಮಾತೃ ಅಥವಾ ಪರಿಸರ ಭಾಷಾ ಪರಿಜ್ಞಾನ, ಕಲಿಕೆ ಮತ್ತು ಮಾಧ್ಯಮ ಇವುಗಳ ಪರವಾದ ಎಲ್ಲ ವಾದಗಳನ್ನೂ–ಸ್ಪಷ್ಟವಾಗಿ ವಿರೋಧಿಸದಿದ್ದರೂ–ಅವುಗಳನ್ನು ದೃಢೀಕರಿಸುವ ಪುರಾವೆಗಳಿಲ್ಲ ಎಂದು ಹೇಳುತ್ತಾ ಆಶ್ಚರ್ಯಕರ ರೀತಿಯಲ್ಲಿ ನಿರಾಕರಿಸುವ ಈ ಪುಸ್ತಕ, ತನ್ನ ಈ ನಿರಾಕರಣೆಗೆ ಬಳಸುವುದು ಅಂಕಿ–ಅಂಶಗಳನ್ನೂ ಅಲ್ಲ, ಪ್ರಯೋಗ ಫಲಿತಾಂಶಗಳನ್ನೂ ಅಲ್ಲ;ಬದಲಿಗೆ, ಸಾಮಾನ್ಯ ಪರಿಜ್ಞಾನಕ್ಕೇ ಉಲ್ಟಾ ಹೊಡೆಯುವ ಬರಿ ತರ್ಕವನ್ನು! ಈ ತರ್ಕದ ದೌರ್ಬಲ್ಯವನ್ನು ಎನ್.ಎಸ್.ರಘುನಾಥ್ ಅವರು ಭಾಷಾ ಶಾಸ್ತ್ರೀಯ ಹಿನ್ನೆಲೆಯೊಂದಿಗೆ ಸಾಕಷ್ಟು ವಿವರವಾಗಿ ವಿಷದೀಕರಿಸಿರುವುದರಿಂದ(ನೋಡಿ: 'ತಿಂಗಳು' ಮಾಸಿಕದ ಜೂನ್ ಸಂಚಿಕೆ) ನಾನಿಲ್ಲಿ ಇನ್ನು ಹೆಚ್ಚಿಗೆ ಹೇಳಲಾರೆ.

ಆದರೆ ಇಂತಹ ತೀರ್ಮಾನಗಳಿಗೆ ನಮ್ಮ ನಡುವಿನ ಗೌರವಾರ್ಹ ವಿದ್ವಾಂಸರಾದ ಕೆ.ವಿ.ಎನ್. ಅವರು ಹೇಗೆ ಮತ್ತು ಏಕೆ ಬಂದರು ಎಂಬ ಪ್ರಶ್ನೆ ನನ್ನನ್ನು ಕಾಡುತ್ತಲೇ ಇದೆ. ಇದಕ್ಕೆ ನಾನು ಕಂಡುಕೊಂಡ ಕಾರಣ ಮುಖ್ಯವಾಗಿ ಎರಡು. ಒಂದು: ನಾರಾಯಣರದು ಜನ ಸಂಬಂಧ ಕಡಿಮೆ ಎನ್ನಿಸುವ ಮತ್ತು ಅದನ್ನು ತಾತ್ವಿಕವಾಗಿ ಜನಪರ ನಿಲುವುಗಳನ್ನು ತಳೆಯುವ ಮೂಲಕ ಸರಿದೂಗಿಸಿಕೊಳ್ಳಬಯಸುವ, ಹೆಚ್ಚಾಗಿ ಬೌದ್ಧಿಕ ಪ್ರಮೇಯಗಳನ್ನೆ ಆಧರಿಸಿದ ವಿದ್ವತ್ತು. ಎರಡನೆಯದು: ಈ ಪುಸ್ತಕದ ಮೂಲ ತಾತ್ವಿಕತೆಯೇ, ಈಗಾಗಲೇ ಈ ಮೇಲೆ ಚೆನ್ನಿಯವರ ಲೇಖನದ ಮುಖ್ಯ ತೊಂದರೆ ಎಂದು ನಾನು ಪ್ರಸ್ತಾಪಿಸಿರುವ(ಬಹುಶಃ ಚೆನ್ನಿಯವರು ಇದನ್ನು ನಾರಾಯಣರ ಈ ಪುಸ್ತಕದಿಂದಲೇ ಆಮದು ಮಾಡಿಕೊಂಡಿರಲೂ ಬಹುದು!) ಕನ್ನಡವನ್ನು ಒಂದು ಚಾರಿತ್ರಿಕ ರಾಜಕೀಯ ವಿದ್ಯಮಾನ ಎಂದು ಪರಿಗಣಿಸಲು, 'ಕಲ್ಪಿತ ಚರಿತ್ರೆ'ಯೆಂಬ ಪರಿಕಲ್ಪನೆಯನ್ನು ಮುಂದೊಡ್ಡಿ ನಿರಾಕರಿಸಿರುವುದು(ಆದರೆ ಇದೇ ಆಧಾರದ ಮೇಲೆ ಇವರು ಈ ಮೂಲಕ ಕಟ್ಟುತ್ತಿರುವ ವರ್ತಮಾನವನ್ನೂ 'ಕಲ್ಪಿತ' ಎಂದೇ ಪರಿಗಣಿಸಬಾರದೇಕೆ ಎಂಬ ಪ್ರಶ್ನೆ ಇದ್ದೇ ಇದೆ!). ಹಾಗಾಗಿಯೇ ಅದು ಕನ್ನಡವೆಂಬುದು ದೇಶವಾಚಿ, ಜನವಾಚಿ ಮತ್ತು ಭಾಷಾವಾಚಿ ಎಂದು ವಿಂಗಡಿಸಿ ವಿಶ್ಲೇಷಿಸುವ ಪ್ರಯತ್ನ ಮಾಡುತ್ತದೆ. ಇವರ ಈ ಬೌದ್ಧಿಕ ವಿಭಜನೆಗೆ ಸಿಕ್ಕಿ ಅನೇಕ ಸಹಜ ಸತ್ಯಗಳು ಅನುಮಾನಾಸ್ಪದವೆನ್ನಿಸತೊಡಗುತ್ತವೆ. ಸಾರ್ವಜನಿಕ ಜೀವನದಲ್ಲಿ ಇಂಗ್ಲಿಷ್ ಎದುರು ಕನ್ನಡ ಬದುಕುಳಿಯಲು ಹರ ಸಾಹಸ ಮಾಡುತ್ತಿರುವ ಸಂದರ್ಭದಲ್ಲಿ ಬಂದಿರುವ ಈ ಪುಸ್ತಕದಲ್ಲಿ, ಕನ್ನಡವೆಂಬುದು ಎಲ್ಲಿ ಯಾವಾಗ ಒಂದು ಪಟ್ಟಭದ್ರ ಹಿತಾಸಕ್ತಿಯಾಗಿಬಿಡುವುದೋ ಎಂಬ ಜನಪ್ರಿಯ ಎಡಪಂಥೀಯ ಆತಂಕ ಪ್ರದರ್ಶನದ ಭಾಗವಾಗಿ ವಿಶ್ಲೇಷಣೆ ನಡೆದಿರುವುದು ಸೋಜಿಗದ ಸಂಗತಿಯಷ್ಟೇ ಅಲ್ಲ, ಅದರ ಆಧಾರ ಮೇಲೆ ಅದು ಪ್ರಸ್ತುತ ಪಡಿಸಿರುವ ಕೆಲವು 'ಭಾಷಾ ಶಾಸ್ತ್ರೀಯ' ಎಂದು ಹೇಳಲಾಗುವ ಸತ್ಯಗಳು ಸಾಮಾನ್ಯ ಪರಿಜ್ಞಾನವನ್ನೂ ಗಾಬರಿಗೊಳಿಸುವಂತಿರುವುದು ಸಹಜವೇ ಆಗಿದೆ.

ಟಿಪ್ಪಣಿ–೨:

ತಮ್ಮ 'ಇನ್ನು ಕನ್ನಡಿಗಳು ಸಾಕು' ಪ್ರಬಂಧ ಮಂಡನೆಯ ಸಂದರ್ಭದಲ್ಲಿ ಎದುರಾದ ಎರಡು(ರೀತಿಯ) ಪ್ರತಿಕ್ರಿಯೆಗಳನ್ನು ನಾರಾಯಣರು ಉಲ್ಲೇಖಿಸಿದ್ದಾರೆ. ಅವೆರಡೂ ಖ್ಯಾತ ವಿದ್ವಾಂಸ–ವಿಮರ್ಶಕರಿಂದ(ಡಿ.ಆರ್.ನಾಗರಾಜ ಮತ್ತು ಯು.ಆರ್.ಅನಂತಮೂರ್ತಿ) ಬಂದ ಪ್ರತಿಕ್ರಿಯೆಗಳೇ ಆಗಿವೆ ಹಾಗೂ ಅವೆರಡೂ ಪ್ರಬಂಧವನ್ನು ಕುರಿತು ಟೀಕೆಯ ರೂಪದಲ್ಲೇ ಇವೆ. ಇವನ್ನು ಬಿಟ್ಟು, ಪ್ರಬಂಧ ಮಂಡನೆಯ

ಸಂದರ್ಭದ ನಂತರವಾದರೂ ಬಂದ ಬೇರೆ ಪ್ರತಿಕ್ರಿಯೆಗಳ ಬಗ್ಗೆ ನಾರಾಯಣರು ಏನೂ ಹೇಳಿಲ್ಲ. ಆದರೆ ತಮ್ಮ ಪ್ರಬಂಧಕ್ಕೆ ಒಬ್ಬ ಪಾಮರ ವಿಮರ್ಶಕನಿಂದಲೂ ಒಂದು ಪ್ರತಿಕಿಯೆ ಬಹು ಹಿಂದೆಯೇ ದಾಖಲಾಗಿದೆ ಎಂಬುದನ್ನು ಈ ಮೂಲಕ ನಾರಾಯಣರ ಗಮನಕ್ಕೆ ತರಬಯಸುವೆ: ನಾನು ೧೯೯೦ರಲ್ಲಿ ಮೈಸೂರಿನಲ್ಲಿ ನಡೆದ ೬೦ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಗೋಷ್ಠಿಯೊಂದರಲ್ಲಿ ಮಂಡಿಸಿದ 'ನವ್ಯೋತ್ತರ ವಿಮರ್ಶೆ:ಒಂದು ತಾತ್ವಿಕ ನೋಟ' ಎಂಬ ಪ್ರಬಂಧದಲ್ಲಿ ನಾರಾಯಣರ ಈ ವಿಚಾರಗಳನ್ನು ಪ್ರಮುಖವಾಗಿ ಉಲ್ಲೇಖಿಸಿದ್ದೆ. ಇದು ತೇಜಸ್ವಿಯವರ 'ಕರ್ನಾಟಕ ಸಂಸ್ಕೃತಿ ವಿಶ್ಲೇಷಣೆ' ಎಂಬ ಹೊಸ ನೋಟದ ಮೀಮಾಂಸಾತ್ಮಕ ಲೇಖನದಲ್ಲಿನ ವಿಚಾರಗಳ ಮುಂದುವರಿಕೆಯೇ ಆಗಿದೆ ಎಂದು ಸೂಚಿಸುತ್ತಾ ಅದರ ಸಾಂಸ್ಕೃತಿಕ ಮಹತ್ವವನ್ನು ಎತ್ತಿ ಹೇಳಿದ್ದೆ. ನಾರಾಯಣರು ೨೧ ವರ್ಷಗಳ ಹಿಂದೆ ಆರಂಭಿಸಿದ್ದ ಈ ವಾದದ ಸತ್ಯತೆಯನ್ನು ಈಗ ಮರುಕಂಡುಕೊಳ್ಳುತ್ತಿರುವುದಾಗಿ ಹೇಳುತ್ತಿರುವುದರಿಂದ ಈ ಮಾಹಿತಿ. ಸದರಿ ಪ್ರಬಂಧ ನನ್ನ ಮೊದಲ ಸಾಹಿತ್ಯ ವಿಮರ್ಶೆಯ ಸಂಗ್ರಹ 'ಗಮನ'(೧೯೯೦)ದಲ್ಲಿ ಪ್ರಕಟವಾಗಿದೆ. ಇತ್ತೀಚೆಗೆ ಡಾ॥ಎಂ.ಎಸ್. ಆಶಾದೇವಿಯವರೂ ನಾರಾಯಣರ ಈ ಪ್ರಬಂದವನ್ನು ಕನ್ನಡದ ಹತ್ತು ಅತ್ಯುತ್ತಮ ವಿಮರ್ಶಾ ಲೇಖನಗಳಲ್ಲೊಂದು ಎಂದು ಗುರುತಿಸಿದ್ದಾರೆ(ನೋಡಿ: 'ಆ ಗಣರಾಜ್ಯ-ಈ ಕರ್ನಾಟಕ' ಸಂ:ಡಿ.ಎಸ್.ನಾಗಭೂಷಣ ಪ್ರ:ಲೋಹಿಯಾ ಪ್ರಕಾಶನ, ಬಳ್ಳಾರಿ)

ಟಿಪ್ಪಣಿ-೩:

ಇದಕ್ಕೆ ಇತ್ತೀಚಿನ ಒಂದು ಉದಾಹರಣೆ: ಭಾರತದ 'ಜಾತಿ ಪ್ರಥಾ'(ಜಾತಿ ಪದ್ಧತಿ) ಎಂಬುದು ಅಂತಾರಾಷ್ಟ್ರೀಯ ಅಧ್ಯಯನಕ್ಕಾಗಿ **Caste System** ಎಂದು ಇಂಗ್ಲಿಷಿಗೆ ಜಾತಿ ವ್ಯವಸ್ಥೆ ಎಂಬರ್ಥದಲ್ಲಿ ಅನುವಾದಿತವಾಗಿರುವ ಪರಿಣಾಮವಾಗಿ; ಜಾತಿ ಎಂಬುದು **System** ಎಂಬ ಇಂಗ್ಲಿಷ್ ಶಬ್ದಾರ್ಥ ಸೂಚಿಸುವಂತಹ ಒಂದು ವ್ಯವಸ್ಥೆಯಲ್ಲ ಎಂದು(ಹಾಗಾಗಿ, ಜಾತಿ ಪದ್ಧತಿ ಕುರಿತ ನಮ್ಮ ಈವರೆಗಿನ ತಿಳುವಳಿಕೆಯೇ ತಪ್ಪಾಗಿದೆ ಎಂದೂ), ಹಾಗೆ ಎಂದೂ ಭಾವಿಸದಿದ್ದ ಭಾರತೀಯರಿಗೇ ದಂಡಿ ದಂಡಿ ಮಾಹಿತಿ ಕಲೆ ಹಾಕಿ ಸಾಧಿಸಿ ತೋರಿಸಲೆತ್ನಿಸುತ್ತಿರುವ ಕೋಟ್ಯಾಂತರ ರೂಪಾಯಿಗಳ ವೆಚ್ಚದ ಒಂದು ಅಂತಾರಾಷ್ಟ್ರೀಯ ಸಂಶೋಧನಾ ಜಾಲವೇ ಇಂದು ಸೃಷ್ಟಿಯಾಗಿದೆ!

ಟಿಪ್ಪಣಿ-೪:

ಕೆ.ವಿ.ಎನ್. ಅವರು ತಮ್ಮ 'ಕನ್ನಡ ಜಗತ್ತು: ಅರ್ಧ ಶತಮಾನ' ಕೃತಿಯಲ್ಲಿ ಅಸಮಾನತೆಗೆ ಪ್ರೇರೇಪಕಗಳೆಂದು ಲೋಹಿಯಾ ಹೆಸರಿಸಿದ್ದ ಜಾತಿ, ಸಂಪತ್ತು ಮತ್ತು ಇಂಗ್ಲಿಷ್‌ಗಳೆಂಬ ತ್ರಿವಳಿಯ ಜೊತೆ ಹಿಂದಿಯನ್ನು ಎಲ್ಲಿರಿಸಬೇಕು ಎಂಬುದು ಸಮಾಜವಾದಿಗಳಿಗೆ ಅಸ್ಪಷ್ಟವಾಗಿತ್ತು ಮತ್ತು ಅವರ ಭಾಷಾ ನೀತಿಯಲ್ಲಿನ ಈ ಅಸ್ಪಷ್ಟತೆಯೇ ಕರ್ನಾಟಕದಲ್ಲಿ ಕನ್ನಡ-ಇಂಗ್ಲಿಷ್‌ಗಳ ಪೂರಕ ಸಂಬಂಧ ಸ್ಥಾಪನೆಗೆ ಕಾರಣವಾಯಿತು ಎಂದು ಸೂಚಿಸುತ್ತಿರುವಂತಿದೆ. ಆದರೆ ಲೋಹಿಯಾ ತಮ್ಮ 'ಅಂಗ್ರೇಜಿ ಹಟಾವೋ' ಚಳುವಳಿಯನ್ನು 'ಭಾರತೀಯ ಭಾಷಾ ಆಂದೋಲನ'ವೆಂದೂ ಕರೆದಿದ್ದರೆಂಬ ಸಂಗತಿಯ ಹಿನ್ನೆಲೆಯಲ್ಲಿ, ಆ ತ್ರಿವಳಿಯ ಜೊತೆ ಹಿಂದಿ ಎಲ್ಲಿಯಾದರೂ ಇರುವ ಸಾಧ್ಯತೆಯೇ ಇರಲಿಲ್ಲ-ಈ ಬಗ್ಗೆ ಚಳುವಳಿಯ ಆರಂಭದಲ್ಲಿ ಹಿಂದಿಯೇತರ ರಾಜ್ಯಗಳಲ್ಲಿ ಸ್ವಲ್ಪ ಗೊಂದಲವಿತ್ತಾದರೂ- ಎಂಬುದನ್ನು ಕೆ.ವಿ.ಎನ್.ರ ಗಮನಕ್ಕೆ ತರಬಯಸುವೆ.

(ಅರುಹು ಕುರುಹು, ಅಕ್ಟೋ.-ಡಿಸೆಂ .೨೦೦೯)

೧೯. ಇಂಗ್ಲಿಷ್ ಪಠ್ಯಕ್ರಮ: ಬರೀ ಬೌದ್ಧಿಕ ಬಡಿವಾರ!

ಕುವೆಂಪು ವಿಶ್ವವಿದ್ಯಾಲಯದ ಪದವಿ ತರಗತಿಗಳ ಇಂಗ್ಲಿಷ್ ಪಠ್ಯಕ್ರಮದ ಬಗ್ಗೆ ವಿವಾದವೆದ್ದಿದೆ. ಆಯ್ದ ಕೆಲವು ಕನ್ನಡ ಕೃತಿಗಳ ಇಂಗ್ಲಿಷ್ ಅನುವಾದಗಳನ್ನು ಮತ್ತು 'ನವೋದಿತ ಎಡಪಂಥೀಯತೆ'ಯೆಂದು ಗುರುತಿಸಬಹುದಾದ ತಾತ್ವಿಕತೆಯ ಆಶೀಶ್ ನಂದಿ, ಪಿ.ಸಾಯಿನಾಥ್‌ರಂತಹವರ ಲೇಖನಗಳನ್ನು ಮತ್ತು ಕೆಲವು ಕನ್ನಡ ಕೃತಿಗಳ ಇಂಗ್ಲಿಷ್ ಅನುವಾದಗಳನ್ನು ಪಠ್ಯವಾಗಿರಿಸುವ ಕ್ರಮವನ್ನು ಬಿಜೆಪಿವಾದಿಗಳು ಎಂದು ಹೇಳಲಾಗುವ ಕೆಲವರು ಪ್ರಶ್ನಿಸಿದ್ದಾರೆ. ಹೀಗೆ ಪ್ರಶ್ನಿಸುವುದನ್ನು ವಿರೋಧಿಸಿ ದಲಿತ ಸಂಘರ್ಷ ಸಮಿತಿ ಹಾಗೂ 'ಪ್ರಗತಿಪರ'ವೆಂದು ಹೇಳಲಾಗುವ ಒಂದೆರಡು ಸಂಘಟನೆಗಳು ಈ ಪಠ್ಯಕ್ರಮದಲ್ಲಿ ಬದಲಾವಣೆ ಮಾಡದಂತೆ ಆಗ್ರಹಿಸಿವೆ. ಈ ಸಂಬಂಧ ಎಡಪಂಥೀಯ ಚಿಂತಕರೆಂದೇ ಗುರುತಿಸಲ್ಪಟ್ಟಿರುವ ಲಿಂಗದೇವರು ಹಳೆಮನೆಯವರು ೧೯.೭.೨೦೦೯ರ 'ಪ್ರಜಾವಾಣಿ'ಯಲ್ಲಿನ ತಮ್ಮ 'ಸಾರಸ್ವತ' ಎಂಬ ಅಂಕಣದಲ್ಲಿ 'ಇಂಗ್ಲಿಷ್ ಸಾಹಿತ್ಯ, ಇಂಗ್ಲಿಷ್‌ನಲ್ಲಿ ಸಾಹಿತ್ಯ' ಎಂಬ ಶೀರ್ಷಿಕೆಯಡಿ ಲೇಖನವೊಂದನ್ನು ಬರೆದಿದ್ದಾರೆ. ಶಿವಮೊಗ್ಗದ ಯಾರೋ ಕಳಿಸಿದ 'ಪೇಪರ್ ಕಟಿಂಗ್'ವೊಂದನ್ನು ಆಧಾರವಾಗಿಟ್ಟುಕೊಂಡು ಬರೆದಿರುವುದಾಗಿ ಹೇಳಿಕೊಂಡಿರುವ ಈ ಲೇಖನದಲ್ಲಿ ಅವರು ಸಾಹಿತ್ಯ ಅಧ್ಯಯನದ ರೀತಿ ನೀತಿಗಳ ಬಗ್ಗೆ ಹಲವು ವಿಚಾರಗಳನ್ನು ಮಂಡಿಸಿದ್ದಾರೆ. ಆ ಮೂಲಕ ಈ ಪಠ್ಯಕ್ರಮ ಕುರಿತು ಎದ್ದಿರುವ ವಿವಾದದಲ್ಲಿನ ಹಲವು ಪ್ರಶ್ನೆಗಳಿಗೆ ಉತ್ತರಿಸಲು ಯತ್ನಿಸಿದ್ದಾರೆ. ಇವರ ಈ ಬರಹವನ್ನೇ ಈ ಪಠ್ಯಕ್ರಮದ ಸಮರ್ಥನೆ ಎಂದು ನಾವು ಭಾವಿಸಿದಾದಲ್ಲಿ, ಅದರ ಬಗ್ಗೆ ಈಗ ಎದ್ದಿರುವ ವಿವಾದದ ಹಿನ್ನೆಲೆಯಲ್ಲಿ ಅದನ್ನು ಪರಿಶೀಲಿಸುವುದು ನಮ್ಮ ಮಕ್ಕಳ ಶಿಕ್ಷಣದ ಬಗ್ಗೆ ಕಳಕಳಿ ಇರುವ ಎಲ್ಲರ ಕರ್ತವ್ಯವಾಗಿದೆ.

ಹಳೆಮನೆಯವರು ಈಗ ಸಾಹಿತ್ಯ ಅಧ್ಯಯನ ಎಂದರೆ ಸಂಸ್ಕೃತಿ ಅಧ್ಯಯನವೂ ಆಗಿರುವುದರಿಂದ ಮತ್ತು ಇದು ನಮ್ಮನ್ನು ನಾವೇ ಅಧ್ಯಯನ ಮಾಡಿಕೊಳ್ಳುವ ಅರಿವು ಉಂಟಾಗಿರುವ ವಸಾಹತೋತ್ತರ/ಆಧುನಿಕೋತ್ತರ ಯುಗವೂ ಆಗಿರುವುದರಿಂದ, ಈ ಪಠ್ಯಗಳು ಸಮರ್ಥನೀಯವೇ ಆಗಿವೆ ಎಂದು ವಿವರಿಸಿದ್ದಾರೆ. ಆದರೆ ನಮ್ಮ ಎಲ್ಲ ಸೃಜನಶೀಲ ಕೃತಿಗಳೂ ಒಂದು ರೀತಿಯಲ್ಲಿ ಸಂಸ್ಕೃತಿ ಅಧ್ಯಯನಗಳೇ ಮತ್ತು ಹಾಗಾಗಿ ನಮ್ಮನ್ನು ನಾವು ಅಧ್ಯಯನ ಮಾಡಿಕೊಳ್ಳುವ ಪ್ರಯತ್ನಗಳೇ ಆಗಿದ್ದವು;ನವ್ಯ ವಿಮರ್ಶೆ ಆರಂಭವಾದಾಗಿನಿಂದಷ್ಟೇ ಅವು, 'ಹೊರ'ಗಿನೆಡೆಗಳಿಂದ ನಡೆಯುವ ಮತ್ತು ನಡೆಯಬೇಕಾದ ಸಾಹಿತ್ಯ ಅಧ್ಯಯನಗಳಾಗಿ–ಕೃತಿ ನಿಷ್ಠತೆಯ ಹೆಸರಿನಲ್ಲಿ–ಮಾರ್ಪಾಡಾದವು ಎಂಬುದನ್ನು ಅವರು ಮರೆತಂತೆ ತೋರುತ್ತದೆ. ಹಾಗಾಗಿ, ಪಠ್ಯಕ್ರಮ ಕುರಿತು ಎತ್ತಲಾಗಿರುವ ಕೆಲವು ಮೂಲಭೂತ ಪ್ರಶ್ನೆಗಳು

ಹಳೆಮನೆಯವರಿಂದ ಉತ್ತರ ಪಡೆಯದೇ ಹಾಗೇ ಉಳಿದುಬಿಟ್ಟವೆ!

ಈವರೆಗೆ ಪಶ್ಚಿಮದ ಕಣ್ಣಲ್ಲಿ ನಮ್ಮನ್ನು ನೋಡುವ ಅಥವಾ ನೋಡಿಕೊಳ್ಳುವ ಪೌರ್ವಾತ್ಯವಾದವೆಂದು ಕರೆಯಲಾಗುವ ಕ್ರಮವನ್ನು ಅನುಸರಿಸುತ್ತಿದ್ದುದಾಗಿಯೂ, ಇದು ಅನೇಕ ಅಧ್ಯಯನ ದೋಷಗಳಿಗೆ ಕಾರಣವಾಗಿತ್ತು ಎಂದೂ ಹೇಳಲಾಗುತ್ತಿದೆ. ಹಾಗೇ, ಇದಕ್ಕೆ ವಿರುದ್ಧವಾಗಿ, ನಮ್ಮನ್ನು ನಾವೇ ಅಧ್ಯಯನ ಮಾಡಿಕೊಳ್ಳುವುದೆಂದು ಹೇಳಲಾಗುವ ಈ ಹೊಸ 'ಆಧುನಿಕೋತ್ತರ' ಕ್ರಮವನ್ನು ಅಳವಡಿಸಿಕೊಳ್ಳುವುದು ಅನಿವಾರ್ಯವಾಗಿದೆ ಎಂದು ಪ್ರತಿಪಾದಿಸಲಾಗುತ್ತಿದೆ. ಆದರೆ ಇದೆಲ್ಲವೂ ನಮ್ಮದಲ್ಲದ ಇಂಗ್ಲಿಷ್;ಮತ್ತು ಇಂಗ್ಲಿಷ್ 'ವ್ಯಾಸಂಗ ಕ್ರಮ'ದ ಫಲವಾಗಿಯೇ ಮತ್ತು ಮೂಲಕವೇ ಆರಂಭವಾಗಿರುವುದು ಒಂದು ಸ್ವಯಂ ವಿರೋಧವಲ್ಲವೇ? ಇದರ ಹಿಂದೆ ಪರೋಕ್ಷ ರೂಪದಲ್ಲಿ ಇರುವುದು, ಅದೇ ಹಳೆಯ ಇಂಗ್ಲಿಷ್–ಭಾಷಾ ರಾಜಕಾರಣವೇ ಅಲ್ಲವೆ? ಎಂಬ ಪ್ರಶ್ನೆಗಳನ್ನು ಈ ಪ್ರತಿಪಾದನೆ ಗಮನಿಸದೇ ಹೋಗಿದೆ. ಹೋಗಲಿ, ಇಂಗ್ಲಿಷ್ (ನಮ್ಮ ಸು'ಶಿಕ್ಷಿತರ' ಮಟ್ಟದಲ್ಲಾದರೂ)– ಅದರೆಲ್ಲ ಜಾಗತಿಕತೆಯೊಡನೆ–ನಮ್ಮ ಭಾಷೆಯೇ ಆಗಿದೆ ಎಂದಂದುಕೊಂಡರೂ, ಈ ನಮ್ಮನ್ನು ನಾವು ಅಧ್ಯಯನ ಮಾಡಿಕೊಳ್ಳುವ ಈ ಹೊಸ ಸಾಹಸ ನಿಜವಾಗಿಯೂ ಸ್ವಯಂ ಉದ್ದೀಪ್ತವೋ ಅಥವಾ ಅದು ಕೂಡಾ ಹೊರಗಿನ ಸಾಂಸ್ಕೃತಿಕ ಮತ್ತು ರಾಜಕೀಯ ಸ್ಫೂರ್ತಿಗಳಿಂದಲೇ ಆಮದಾದವೋ?

ನಮ್ಮನ್ನು ನಾವು ಅಧ್ಯಯನ ಮಾಡಿಕೊಳ್ಳುವ ಆಶಯದ್ದು ಎಂದು ಹಳೆಮನೆಯವರು ಪ್ರತಿಪಾದಿಸುತ್ತಿರುವ ಈ ಹೊಸ ಕ್ರಮವು ಪೌರ್ವಾತ್ಯವಾದ ಕಲಿಸಿದ ಅಧ್ಯಯನ ಕ್ರಮವನ್ನು ಪ್ರಶ್ನಿಸುತ್ತದೆ ಎಂಬುದರ ಹೊರತಾಗಿ, ಇನ್ನಾವ ರೀತಿಯಲ್ಲಿ ಮತ್ತು ನೆಲೆಯಲ್ಲಿ ಅದು ನಮ್ಮದೇ ಕ್ರಮ ಅನ್ನಿಸುತ್ತದೆ? ಪೌರ್ವಾತ್ಯವಾದ ಎನ್ನುವುದು ಯಾವ ಆಧುನಿಕ ವೈಚಾರಿಕತೆಯ ಮನೋಭೂಮಿಕೆಯ ಭಾಗವಾಗಿತ್ತೋ, ಅದೇ ವೈಚಾರಿಕತೆಯ ಪ್ರತಿಲೋಮ ರೂಪವಷ್ಟೇ ಆಗಿದೆಯಲ್ಲವೇ ಚಾಮ್‌ಸ್ಕಿ, ಡೆರಿಡಾ, ಫುಕೋ ಮುಂತಾದವರಿಂದ ಉದ್ದೀಪ್ತವಾಗಿರುವುದೆಂದು ಇವರು ಹೇಳುವ, ಈ ನಮ್ಮನ್ನು ನಾವೇ ಅಧ್ಯಯನ ಮಾಡಿಕೊಳ್ಳುವ ಹೊಸ ಕ್ರಮ ಕೂಡಾ? (ಆಶೀಶ್ ನಂದಿಯಂತಹವರು ಮಾತ್ರ ಅವನ್ನು ಸ್ವದೇಶೀಗೊಳಿಸುವ ಪ್ರಯತ್ನ ಮಾಡುತ್ತಿದ್ದಾರೆ). ನಮ್ಮ ಎಡಪಂಥೀಯ ಬುದ್ಧಿಜೀವಿಗಳೆನಿಸಿಕೊಂಡವರು ಬೇರೆ ಬೇರೆ ಕಾಲದಲ್ಲಿ ಬೇರೆ ಬೇರೆ ಬೌದ್ಧಿಕ ನೆಪಗಳನ್ನೊಡ್ಡಿ ಇಂತಹ ಉಪಕ್ರಮಗಳಿಗೆ ಕೈ ಹಾಕುವ ಮೂಲಕ ನಮ್ಮ ಮೂಲ ಚಿಂತನೆಯೆಂಬುದನ್ನೇ ಅವಿಶ್ವಾಸಾರ್ಹಗೊಳಿಸಿ, ಅಸಾಧ್ಯ ಮಾಡುತ್ತಿಲ್ಲವೇ? ಹೀಗಾಗಿ, ಇವರಿಗೆ ಆಧುನಿಕೋತ್ತರವಾದವೆನ್ನುವುದು ತುಕ್ಕು ಹಿಡಿದ ತಮ್ಮ ಆಧುನಿಕತಾವಾದವನ್ನು(ಆ ಮೂಲಕ ತಮ್ಮ ಎಡಪಂಥೀಯತೆಯನ್ನೂ) ಉಜ್ಜಿ ಹೊಸದಾಗಿ ಹೊಳಪುಗೊಳಿಸಿಕೊಳ್ಳಲು ಸಿಕ್ಕ ಸಾಧನವಾಗಿದೆಯಷ್ಟೇ ಎಂದು ಯಾರಿಗಾದರೂ ಅನ್ನಿಸಿದರೆ ಆಶ್ಚರ್ಯವೇನು?

ಹೀಗೆ ಆಧುನಿಕೋತ್ತರತೆಯ ಹೊಸ ಹುರುಪಿನಲ್ಲಿ(ಈ ಹಿಂದೆ ಆಧುನಿಕತಾವಾದವನ್ನು ಅಪ್ಪಿಕೊಂಡ ಹುರುಪಿನಂತೆಯೇ) ದೇಸೀ ಚಿಂತನೆಯನ್ನೂ ಆಮದು ಮಾಡಿಕೊಳ್ಳುವಂತಹ ವಿಪರ್ಯಾಸಕ್ಕೆ(ಅಥವಾ ಪ್ರತಿಭಾಹೀನತೆಗೆ) ನಮ್ಮ (ಮಾಜಿ?)ಎಡಪಂಥೀಯ ಬುದ್ಧಿಜೀವಿಗಳು

ಒಳಗಾಗಿರುವುದರಿಂದಲೋ ಏನೋ, ಹಳೆಮನೆಯವರಿಗೆ ನಮ್ಮ ಗಿರೀಶ್ ಕಾರ್ನಾಡ್, ವೈದೇಹಿ ಮುಂತಾದ ಒಂದು ನಿರ್ದಿಷ್ಟ ಗುಂಪಿನ ಲೇಖಕರನ್ನಷ್ಟೇ ಇಂಗ್ಲೀಷೀಕರಿಸಿ(ಇಂತಹ ಲೇಖಕರು ಮಾತ್ರ ಇಂಗ್ಲೀಷೀಕರಣಕ್ಕೆ ಒಗ್ಗುತ್ತಾರೇನೋ ತಿಳಿಯದು!) ಅದನ್ನು ಹೊಸ ಹೊಳಹುಗಳಿಗಾಗಿ ಅಧ್ಯಯನ ಮಾಡಲೆಳಸುವ ಉಪಕ್ರಮ 'ಪ್ರಗತಿಪರ'ವಾಗಿಯೇ ಕಂಡಿದೆ! ಕರ್ನಾಟಕದ, ವಿಶೇಷವಾಗಿ ಕುವೆಂಪು ವಿಶ್ವವಿದ್ಯಾಲಯದ ಸರಿ ಸುಮಾರು ಎಲ್ಲ ಪದವಿ ವಿದ್ಯಾರ್ಥಿಗಳೂ ಕನ್ನಡದ ಮಕ್ಕಳೇ ಆಗಿರುವುದರಿಂದ, ಈ ಕೃತಿಗಳ ಇಂಗ್ಲಿಷ್ ಅವತರಣಿಕೆಗಳನ್ನು ಅವರಿಗೆ ಪಠ್ಯ ಮಾಡುವ ಅಗತ್ಯವಾದರೂ ಏನು?(ಅಥವಾ ಹೇಗೂ ಕನ್ನಡದ ಮಕ್ಕಳು ಕನ್ನಡವನ್ನು ಕೈಬಿಡುತ್ತಿರುವಾಗ, ಕನ್ನಡದ ಕೃತಿಗಳನ್ನು ಅವರಿಗೆ ಇಂಗ್ಲೀಷಿಕರಿಸಿ ಉಣಬಡಿಸುವ, ಕನ್ನಡ ಸಂಸ್ಕೃತಿ ರಕ್ಷಣೆಯ ಉದ್ದೇಶವೇನಾದರೂ ಇದರ ಹಿಂದೆ ಇದೆಯೋ ಏನೋ ತಿಳಿಯದು!) ಮೂಲ ಕನ್ನಡ ಕೃತಿಗಳನ್ನೇ ನಮ್ಮನ್ನು ನಾವೇ ಅಧ್ಯಯನ ಮಾಡಿಕೊಳ್ಳುವ ಈ ಹೊಸ ಕ್ರಮಕ್ಕಾಗಿ ಪಠ್ಯಗಳನ್ನೇಕೆ ಮಾಡಿಕೊಳ್ಳಬಾರದು? ಕನ್ನಡ ಸಾಹಿತ್ಯದ ವಿದ್ಯಾರ್ಥಿಗಳು ತಮ್ಮ ತುಲನಾತ್ಮಕ ಅಧ್ಯಯನಗಳಿಗಾಗಿ ಇಂಗ್ಲಿಷ್ ಪಠ್ಯಗಳನ್ನೂ ಅಭ್ಯಸಿಸುವುದಿಲ್ಲವೇ, ಹಾಗೆ? ಇನ್ನು ಇಂಗ್ಲಿಷ್‌ನ್ನು ಕನ್ನಡ ಸಂದರ್ಭದಲ್ಲಿ ಕಲಿಸಲೆಂದು ಈ ಅನುವಾದಿತ ಪಠ್ಯಗಳನ್ನು ಇರಿಸಲಾಗಿದೆ ಎಂಬ ವಾದವೂ ಇದೆ. ಆ ಉದ್ದೇಶವೇ ನಿಜವಾಗಿದ್ದರೆ, ಗಿರೀಶ್ ಕಾರ್ನಾಡರ ನಾಟಕಗಳಲ್ಲಿ(ವಿಶೇಷವಾಗಿ ಈಗ ಪಠ್ಯವಾಗಿರುವ 'ತುಘಲಕ್' ನಲ್ಲಿ) ಯಾವ ಮತ್ತು ಎಂತಹ ಕನ್ನಡ ಭಾಷಾ ಅಥವಾ ಸಾಂಸ್ಕೃತಿಕ ಸಂದರ್ಭವಿದೆಯೋ ಈ ಪಠ್ಯ ಸಮರ್ಥಕರೇ ಹೇಳಬೇಕು! ಹಳೆಮನೆಯವರು ತಮ್ಮ ವಾದವನ್ನು ಇಡಿಯಾಗಿ, ಫ್ರಾನ್ಸಿನಲ್ಲಿ ಫ್ರೆಂಚ್ ಸಾಹಿತ್ಯವನ್ನು ಇಂಗ್ಲಿಷ್‌ನಲ್ಲಿ ಬೋಧಿಸುತ್ತಿರುವಾಗ ನಾವೇಕೆ ಹೀಗೆ ಮಾಡಬಾರದು ಎಂದು ಕೇಳುವ ಮೂಲಕ ಸಮರ್ಥಿಸಿಕೊಳ್ಳುವುದು ಕೂಡಾ, ಮೂಲತಃ ಅದೇ ಹಳೇ ಆಧುನಿಕವಾದದ ಮುಂದುವರಿಕೆ ಮಾತ್ರವಲ್ಲವೇ?

ಹಳೆಮನೆಯವರು ಆಶೀಸ್ ನಂದಿ ಮತ್ತು ಸಾಯಿನಾಥರ ಲೇಖನಗಳನ್ನು ಅಧ್ಯಯನ ಮಾಡುವ ಅವಶ್ಯಕತೆಯನ್ನು (ಈ ಅವಶ್ಯಕತೆಯನ್ನು ಖಂಡಿತ ನಾನು ಅಲ್ಲಗಳೆಯುತ್ತಿಲ್ಲ. ಆದರೆ ಈ ಲೇಖನಗಳು ಈಗ ಆಪಾದಿಸಲಾಗುತ್ತಿರುವಂತೆ, ತತ್ಕಾಲೀನ ರಾಜಕಾರಣ ಮತ್ತು ರಾಜಕೀಯ ಪಾತ್ರಗಳ ಬಗ್ಗೆ ತೀರ್ಪು ಕೊಡುವ ಶೈಲಿಯಲ್ಲಿದ್ದರೆ ಅವು ವಿದ್ಯಾರ್ಥಿಗಳ ಮೇಲಿನ ರಾಜಕೀಯ ಹೇರಿಕೆ ಮಾತ್ರವಾಗುತ್ತದೆ ಎಂಬುದನ್ನೂ ನಾವು ಗಮನಿಸಬೇಕು. ಅಲ್ಲದೆ, ಅದೇ ಹೊತ್ತಿನಲ್ಲಿ ಈ ಪಠ್ಯಗಳ ತಾತ್ವಿಕ ಸಂಕೀರ್ಣತೆ ನಮ್ಮ ಇಂದಿನ ಬಹುತೇಕ ಇಂಗ್ಲಿಷ್ ಮೇಷ್ಟ್ರುಗಳ ಮತ್ತು ಆ ಮೂಲಕ ನಮ್ಮ ವಿದ್ಯಾರ್ಥಿಗಳ ಗ್ರಹಿಕೆಗೆ ಸಿಗುವಂತಿದೆಯೇ ಎಂಬ ಪ್ರಶ್ನೆಯನ್ನೂ ನಾವು ಕೇಳಿಕೊಳ್ಳಬೇಕು) ಸಮರ್ಥಿಸುವ ನೆಲೆಗಳನ್ನು ಗಮನಿಸಿದಾಗ ಈ ಆಯ್ಕೆಯ ಹಿಂದೆ ಸಂಸ್ಕೃತಿ ಅಧ್ಯಯನದ ಉದ್ದೇಶಗಳಿಗಿಂತ ಹೆಚ್ಚಾಗಿ ಒಂದು ನಿರ್ದಿಷ್ಟ ರಾಜಕೀಯ ಪ್ರಣಾಳಿಕೆಯ ಹಿತಾಸಕ್ತಿಗಳು ಎದ್ದು ಕಾಣುತ್ತಿವೆ ಎಂದು ಯಾರಿಗಾದರೂ ಅನ್ನಿಸಿದ್ದರೆ ಆಶ್ಚರ್ಯವಿಲ್ಲ. ಏಕೆಂದರೆ ಇವರು ಈ ಲೇಖನಗಳ 'ವಿವಾದಿತ' ರಾಜಕೀಯ ಸಾಲುಗಳ('ಗೋಡ್ಸೆ ಮಾಡಲಾಗದ್ದನ್ನು ಅಡ್ವಾಣಿ ಮತ್ತು ಬಾಳ ಠಾಕ್ರೆ ಮಾಡಿದರು...' ಇತ್ಯಾದಿ) ಬಗ್ಗೆ ಪ್ರಸ್ತಾಪವನ್ನೇ ಮಾಡದೆ, ಇವನ್ನು ಸ್ವಾತಂತ್ರ್ಯೋತ್ತರ ಭಾರತದ ಮುಖ್ಯ ಸಂಕಥನಗಳೆಂದು ಸಾರಾ ಸಗಟಾಗಿ ಗುರುತಿಸಿ ಸಾಹಿತ್ಯದ ವಿದ್ಯಾರ್ಥಿಗಳಿಗೆ ಪಠ್ಯವಾಗಿ

ಶಿಫಾರ್ಸು ಮಾಡುತ್ತಾರೆ. ಪರಿಸ್ಥಿತಿ ಹೀಗಿರುವಾಗ, ಸಾಕಷ್ಟು ತುಕ್ಕು ಹಿಡಿದಿರುವ ಈ ರಾಜಕೀಯ ಪ್ರಣಾಳಿಕೆ ಈಗ ಕರ್ನಾಟಕದ ಜನವೂ ಸೇರಿದಂತೆ ಭಾರತದ ಗಣನೀಯ ಜನಸಂಖ್ಯೆಗೆ ಅನುಮಾನಾಸ್ಪದ ಅಥವಾ ಅಪೂರ್ಣವೆನ್ನಿಸತೊಡಗಿ ಅದನ್ನು ತಿರಸ್ಕರಿಸಲಾರಂಭಿಸಿರುವಾಗ, ಇಂತಹ ಪಠ್ಯಗಳೇ ಏಕೆ ನಮ್ಮ ಅಧ್ಯಯನ ಕ್ರಮದ ತಾತ್ವಿಕ ಯಜಮಾನಿಕೆ ವಹಿಸಿಕೊಳ್ಳುವುದನ್ನು ಮುಂದುವರೆಸಬೇಕು ಎಂಬ ಪ್ರಶ್ನೆಯನ್ನು ಬಿಜೆಪಿವಾದಿಗಳೆನಿಸಿಕೊಂಡವರು ಕೇಳುತ್ತಿರುವುದರಲ್ಲಿ ಆಶ್ಚರ್ಯವೇನು? ಹಾಗೆ ನೋಡಿದರೆ ಇದು ಹಳೆಮನೆಯುವರ ಆಧುನಿಕೋತ್ತರವಾದದ ದೃಷ್ಟಿಕೋನದಿಂದ ಕೂಡಾ 'ಪ್ರಜಾಸತ್ತಾತ್ಮಕ'ವಾಗಿಯೇ ಇದೆ ಅಲ್ಲವೆ? ನಮ್ಮ ತೀರ್ಮಾನಗಳು ನಿರಪೇಕ್ಷವಾದವುಗಳು ಮತ್ತು ಮಿಕ್ಕವರೆದ್ದಲ್ಲ ಸಾಪೇಕ್ಷವಾದವುಗಳು ಎಂದು ಹೇಳುವುದೇ 'ಆಧುನೀಕೋತ್ತರವಾದ'ವಾದಲ್ಲಿ, ಅದು ತಾತ್ವಿಕವಾಗಿಯೇ ಅಪ್ರಜಾಸತ್ತಾತ್ಮಕವಾದಿಯೂ ಆಗಿರುವುದರಲ್ಲಿ ಸಂಶಯವಿಲ್ಲ.

ಹಾಗಾಗಿ, ನಿನ್ನೆ ಮೊನ್ನೆಯವರೆಗೆ ತಮ್ಮನ್ನು ಆಧುನಿಕರೆಂದು ಕರೆದುಕೊಳ್ಳುತ್ತಿದ್ದು ಈಗ ತಮ್ಮ ಸಹ–ಆಧುನಿಕರಿಂದ ದತ್ತು ಪಡೆದ 'ನಮ್ಮನ್ನು ನಾವೇ ಅಧ್ಯಯನ ಮಾಡಿಕೊಳ್ಳುವ' ಹೊಸ ಕ್ರಮದಿಂದಾಗಿ ಇಂದು ಆಧುನಿಕೋತ್ತರವಾದಿಗಳಾಗಿ ಮಾರ್ಪಾಡಿರುವುದಾಗಿ ನಂಬಿರುವ ಇವರು;ಮೊದಲು, ಮೇಲೆ ಸೂಚಿಸಿದಂತಹ ಹಳೆಯ ಆಧುನಿಕ ರಾಜಕೀಯದ ಸಂಕುಚಿತ ದೃಷ್ಟಿಕೋನದ ಕಣ್ಣಿಯನ್ನು ಕಳಚಿಕೊಳ್ಳಬೇಕಿದೆ.(ಅದು ನಿಜವಾದ ಆಧುನಿಕೋತ್ತರತೆ ಎನಿಸಿಕೊಳ್ಳುತ್ತದೆ.) ಆ ಮೂಲಕ ಈ ದೊಡ್ಡ ರಾಜಕೀಯ ಸ್ಥಿತ್ಯಂತರ ಕಾಲದಲ್ಲಿ ಮೂಡುತ್ತಿರುವ ಎಲ್ಲ ಬಣ್ಣಗಳ ವಿಚಾರಗಳ ಹೊಸ ಅನುಸಂಧಾನದ ಭಾಗವಾಗಿ ಹೆಚ್ಚು ಜನಾವೃತವಾಗುತ್ತಾ ಹೋಗುವಂತಹ ಹೊಸ ಪರಿಭಾಷೆಯನ್ನು ರೂಢಿಸಿಕೊಂಡು ತನ್ನನ್ನು ತಾನು ಸಮರ್ಥಿಸಿಕೊಳ್ಳುವುದನ್ನು ಕಲಿಯಬೇಕಿದೆ. ಇದರಿಂದ ನಮ್ಮನ್ನು ನಾವು ಅಧ್ಯಯನ ಮಾಡಿಕೊಳ್ಳುವುದು ನಮ್ಮದೇ ಭಾಷೆಯ ಮೂಲಕವಲ್ಲದಿದ್ದರೂ, ನಮ್ಮದೇ ಪರಿಭಾಷೆಯಲ್ಲಿ(ನುಡಿಗಟ್ಟಿನಲ್ಲಿ) ಮಾತ್ರ ಸಾಧ್ಯ ಎಂಬ ಅರಿವು ಮೂಡುತ್ತದೆ. ಆಗ ಮಾತ್ರ ನಮ್ಮನ್ನು ನಾವು ಅಧ್ಯಯನ ಮಾಡಿಕೊಳ್ಳುವುದು ಎಂಬುದು, ಆಧುನಿಕತಾವಾದದಂತೆ ಕೆಲವೇ ಜನರ ಒಂದು ಹೊಸ ಮೋಹಕ ಬೌದ್ಧಿಕ ವಾದ ಮಾತ್ರವಾಗದೆ, ಜನಮುಖಿಯಾದ ವಾಸ್ತವ ಕಾರ್ಯಕ್ರಮವೂ ಆದೀತು.

(೬ ಆಗಸ್ಟ್, ೨೦೦೯, ಚಾರ್ವಾಕ)

೨೦. ಈ ಸಂಸ್ಕೃತ ವಿಶ್ವವಿದ್ಯಾಲಯ: ಏಕೆ ಬೇಡ ?

ಕರ್ನಾಟಕ ಸರ್ಕಾರ ರಾಜ್ಯದಲ್ಲಿ ಸಂಸ್ಕೃತ ವಿಶ್ವವಿದ್ಯಾಲಯವೊಂದನ್ನು ಸ್ಥಾಪಿಸಲು ಹೊರಟಿದ್ದು, ಅದಕ್ಕೀಗ ಅಲ್ಲಲ್ಲಿ ವಿರೋಧ ವ್ಯಕ್ತವಾಗತೊಡಗಿದೆ. ಈ ವಿರೋಧ ಈ ವಿಶ್ವವಿದ್ಯಾಲಯಕ್ಕೆ ಸಂಸ್ಕೃತ-ವೇದ ವಿಶ್ವವಿದ್ಯಾಲಯವೆಂದು ಹೆಸರಿಡಲು ಸರ್ಕಾರ ಯೋಚಿಸಿದೆ ಎಂಬ ಸುದ್ದಿ ಹರಡುತ್ತಿದ್ದಂತೆ ಹೆಚ್ಚು ವ್ಯಾಪಕವೂ ತೀವ್ರವೂ ಆಗುತ್ತಿದೆ.

ವಿಶ್ವವಿದ್ಯಾಲಯ ಸ್ಥಾಪನೆ ಈ ಹಿಂದಿನಂತೆ ಈಗ ಸರ್ಕಾರದ ಶೈಕ್ಷಣಿಕ ಜವಾಬ್ದಾರಿಯ ಕೆಲಸವಾಗೇನೂ ಉಳಿದಿಲ್ಲ. ಏಕೆಂದರೆ, ವಿಶ್ವವಿದ್ಯಾಲಯವೊಂದರ ಮೂಲ ಕಾಳಜಿಯಾದ ಉನ್ನತ ಶಿಕ್ಷಣವೆಂಬುದೇ ಈಗ ಹಿರಿಯ ಆಡಳಿತಗಾರರ, ಶಿಕ್ಷಣತಜ್ಞರ ಕಾರ್ಯವ್ಯಾಪ್ತಿಯನ್ನು ದಾಟಿ, ರಾಜಕೀಯ ಪುಢಾರಿಗಳ ಮತ್ತು ಶಿಕ್ಷಣ ವ್ಯಾಪಾರಿಗಳ ಕೈಸೆರೆಯಾಗಿದೆ. ಹೀಗಾಗಿ ವಿಶ್ವವಿದ್ಯಾಲಯವೊಂದರ ಸ್ಥಾಪನೆಯ ನಿರ್ಧಾರದ ವಿಷಯ ಇಂದು ರಾಜಕೀಯ ಖಯಾಲಿಯ ಮಟ್ಟಕ್ಕೆ ಇಳಿದು ಹೋಗಿದೆ. ವಿಶ್ವವಿದ್ಯಾಲಯವೊಂದರ ಸ್ಥಾಪನೆಯ ನಿರ್ಧಾರದ ಹಿಂದೆ ಇರಬೇಕಾದ ಪರಿಗಣನೆಗಳು, ಅವುಗಳ ಪರಿಶೀಲನೆ, ಅಧ್ಯಯನ, ತಜ್ಞ ಅಭಿಮತ ಇವೆಲ್ಲವೂ ಈಗ ಕಾಣೆಯಾಗಿವೆ. ರಾಜ್ಯದ ಇತ್ತೀಚಿನ ಎರಡು ವಿಶ್ವವಿದ್ಯಾಲಯಗಳಾದ ತುಮಕೂರು ಮತ್ತು ಮಹಿಳಾ ವಿಶ್ವವಿದ್ಯಾಲಯಗಳ ಇಂದಿನ ಸ್ಥಿತಿಗತಿಗಳು, ವಿಶ್ವವಿದ್ಯಾಲಯ ಸ್ಥಾಪನೆ ಎಂಬುದು ಹೇಗೆ ನಮ್ಮ ಅಗ್ಗದ ರಾಜಕೀಯ ಪುಢಾರಿಗಳ ಕೈಗೆ ಸಿಕ್ಕಿ ಹೋಗಿ ಸಾರ್ವಜನಿಕರ ಹಣದೊಡನೆ ಆಡಬಹುದಾದ ಹುಡುಗಾಟದ ಮಟ್ಟಕ್ಕೆ ಇಳಿದು ಬಿಟ್ಟಿದೆ ಎಂಬುದಕ್ಕೆ ಕೈಗನ್ನಡಿಯಾಗಿವೆ. ಇಂದು ವಿಶ್ವವಿದ್ಯಾಲಯಗಳ (ಉಪ)ಕುಲಪತಿ ಸ್ಥಾನಗಳಿಗಾಗಿ ನಡೆದಿರುವ ಜಾತಿ ಆಧಾರಿತ ಪೈಪೋಟಿ ಮತ್ತು ಅದರೊಡನೆ ನಡೆದಿರುವ ಬ್ರೀಫ್ ಕೇಸ್ ವ್ಯವಹಾರಗಳು ಯಾರನ್ನಾದರೂ ಬೆಚ್ಚಿ ಬೀಳಿಸುವಂತಿವೆ ಮತ್ತು ಬರೀ ಶಿಕ್ಷಣ ತಜ್ಞರೆನಿಸಿದ ಮರ್ಯಾದಸ್ಥರಾರೂ ಈ ಸ್ಥಾನಗಳ ಕಡೆ ಕಣ್ಣು ಹಾಯಿಸದಂತೆ ಮಾಡಿವೆ! ರಾಜ್ಯದ ಇಂತಹ ಶೈಕ್ಷಣಿಕ ಆಡಳಿತ ವಾತಾವರಣದ ಇನ್ನೊಂದು ಉದಾಹರಣೆಯಾಗಿಯಷ್ಟೇ ಈ ಸಂಸ್ಕೃತ ವಿಶ್ವದ್ಯಾಲಯ ಸ್ಥಾಪನೆಯ ನಿರ್ಧಾರವನ್ನು ನಾವು ನೋಡಬೇಕು.

ಈ ನೋಟದಲ್ಲಿ ಎರಡು ಮುಖ್ಯ ಪ್ರಶ್ನೆಗಳು ಎದುರಾಗುತ್ತವೆ: ಈ ಸಂಸ್ಕೃತ ವಿಶ್ವವಿದ್ಯಾಲಯ ಯಾಕೆ? ಮತ್ತು ಯಾರಿಗಾಗಿ? ಇವುಗಳಿಂದ ಹೊಮ್ಮುವ ಇನ್ನೊಂದು ಪ್ರಶ್ನೆ: ಯಾರಾದರೂ ಇದು ಬೇಕೆಂದು ಕೇಳಿದ್ದರಾ? ಇದರ ಅಗತ್ಯ-ಉದ್ದೇಶಗಳನ್ನು ಅಧ್ಯಯನ ಮಾಡಿದ ವರದಿ ಯಾವುದಾದರೂ ಇದೆಯಾ? ಈ ಎಲ್ಲ ಪ್ರಶ್ನೆಗಳಿಗೆ ಒಂದೇ ಉತ್ತರವಿದ್ದಂತೆ ತೋರುತ್ತದೆ: ಇದು ಸರ್ಕಾರದ ಸ್ವಯಂಪ್ರೇರಿತ ನಿರ್ಧಾರ. ಆದರೆ ಪ್ರಜಾಪ್ರಭುತ್ವವೊಂದರಲ್ಲಿ

ಸರ್ಕಾರ ಹೀಗೆ ಸ್ವಯಂಪ್ರೇರಿತ ನಿರ್ಧಾರ ತೆಗೆದುಕೊಳ್ಳಬೇಕಾದರೆ(ಜನಹಿತಕ್ಕಾಗಿ ಹಾಗೆ ಸ್ವಯಂಪ್ರೇರಿತ ನಿರ್ಧಾರ ತೆಗೆದುಕೊಳ್ಳುವ ಅಧಿಕಾರ ಪ್ರಜಾಪ್ರಭುತ್ವವಾದಿ ಸರ್ಕಾರಕ್ಕೆ ಖಂಡಿತ ಇದೆ), ಅದರ ಹಿಂದಿನ ಚಿಂತನೆಯನ್ನು ಅದು ಜನತೆಗೆ ತಿಳಿಯಪಡಿಸುವ ಕರ್ತವ್ಯವನ್ನೂ ನಿರ್ವಹಿಸಬೇಕಾಗುತ್ತದೆ. ಆದರೆ ಸಂಸ್ಕೃತ ವಿಶ್ವವಿದ್ಯಾಲಯ ಸ್ಥಾಪನೆಯ ನಿರ್ಧಾರಕ್ಕೆ ಸಂಬಂಧಪಟ್ಟಂತೆ ಸರ್ಕಾರದ ಈವರೆಗಿನ (ಶೂನ್ಯ) ಪ್ರತಿಕ್ರಿಯೆಯನ್ನು ನೋಡಿದರೆ, ಇದೊಂದು ಭಾವನಾತ್ಮಕ ನಿರ್ಧಾರ ಮಾತ್ರವಾಗಿದ್ದು, ಸಾರ್ವಜನಿಕರ ಪ್ರಶ್ನೆಗಳ ನಂತರವಷ್ಟೇ ಅದನ್ನು ಸಮರ್ಥಿಸಲು ಸಿದ್ಧತೆ ಮಾಡಿಕೊಳ್ಳುತ್ತಿರುವಂತಿದೆ. ಹಾಗಾಗಿ ಇದಕ್ಕೆ ವಿರೋಧವೂ ಭಾವನಾತ್ಮಕ ನೆಲೆಗಳಲ್ಲೇ ಹೊರಹೊಮ್ಮುತ್ತಿದೆ.

ಸಂಸ್ಕೃತವೆಂಬುದು ಮೇಲ್ಜಾತಿಗಳ, ಅವರ ಚಿಂತನಾ ಕ್ರಮದ ಮತ್ತು ಹಾಗಾಗಿ ಸಾಮಾಜಿಕ ಶೋಷಣೆಯ ಸಾಧನದ ಪ್ರತೀಕವಾಗಿದೆ ಎಂಬುದು ಒಂದು ಜನಪ್ರಿಯ ನಂಬಿಕೆ. ಈ ಕಾರಣದಿಂದಾಗಿ, ಸಂಸ್ಕೃತ ವಿಶ್ವವಿದ್ಯಾಲಯವೊಂದರ ಸ್ಥಾಪನೆಯೆಂದರೆ, ಮೇಲ್ಜಾತಿಗಳ ಮತ್ತು ಅವರ ಚಿಂತನಾ ಕ್ರಮಗಳ ಮೇಲಾಟಕ್ಕೆ ನೀಡಲಾಗುತ್ತಿರುವ ಪ್ರೋತ್ಸಾಹ ಎಂಬ ತೀರ್ಮಾನ ಇದರ ವಿರೋಧದ ಹಿಂದೆ ಇದ್ದಂತಿದೆ. ಆದರೆ, ಇದು ವಿಶ್ವವಿದ್ಯಾಲಯ ಸ್ಥಾಪನೆಯ ವಿಷಯ ಸರ್ಕಾರದ ಪಾಲಿಗೆ ಆಡಳಿತಾತ್ಮಕವಾಗಿ ಹೇಗೆ ಹುಡುಗಾಟದ ವಿಷಯವಾಗಿದೆಯೋ, ಅದರ ವಿರೋಧವೂ ವೈಚಾರಿಕ ನೆಲೆಯಲ್ಲಿ ಅಷ್ಟೇ ಹುಡುಗಾಟದ ವಿಷಯವಾಗಿದೆ ಎಂಬುದರ ದ್ಯೋತಕವಷ್ಟೆ..

ಸಂಸ್ಕೃತ ವಾಙ್ಮಯ ಎಂದರೆ ಜಗತ್ತಿನ ಶ್ರೇಷ್ಠ ವಾಙ್ಮಯಗಳಲ್ಲೊಂದು. ಅದು ಕೇವಲ ಧರ್ಮಶಾಸ್ತ್ರ ಮಾತ್ರವಲ್ಲ, ಜಗತ್ತಿನ ಅತಿ ಶ್ರೇಷ್ಠ ಸಾಹಿತ್ಯ, ರಾಜಕೀಯ ಮತ್ತು ಮಾನವಿಕಗಳೂ ಸೇರಿದಂತೆ ಅನೇಕ ಕಲಾಶಾಸ್ತ್ರಗಳನ್ನೂ ಒಳಗೊಂಡಿದೆ. ಒಂದಷ್ಟು ವಿಜ್ಞಾನಶಾಸ್ತ್ರವೂ ಇದೆ. ಇನ್ನು ಅದರ ಧರ್ಮಶಾಸ್ತ್ರದಲ್ಲಿ ವೈದಿಕ ಧರ್ಮಶಾಸ್ತ್ರ ಮಾತ್ರವಲ್ಲ, ಕಟ್ಟಾ ಅವೈದಿಕವೆಂದು ಗುರುತಿಸಲಾಗಿರುವ ಬೌದ್ಧ ಮತ್ತು ಜೈನ ಧರ್ಮಶಾಸ್ತ್ರ ಗ್ರಂಥಗಳೂ ಸೇರಿವೆ. ಒಟ್ಟಿನಲ್ಲಿ ಸಂಸ್ಕೃತ ವಾಙ್ಮಯವೆಂಬುದು ಭಾರತೀಯ ಬದುಕಿನ ಒಂದು ಕಾಲ ಘಟ್ಟದ ಸೃಜನಶೀಲ ಬೌದ್ಧಿಕ ಚಟುವಟಿಕೆಗಳ ದಾಖಲೆಯೇ ಆಗಿದೆ. ಇವನ್ನು ರಚಿಸಿದವರ ಜಾತಿ-ಧರ್ಮಗಳನ್ನು ಗುರುತಿಸುವುದು ಕಷ್ಟವೇ ಸರಿ. ಏಕೆಂದರೆ ಆ ಕಾಲ ಘಟ್ಟಕ್ಕೆ ಸಂಬಂಧಿಸಿದಂತೆ, ಈ ಕಾಲ ಘಟ್ಟದ ಜಾತಿ-ಧರ್ಮಗಳ ಪರಿಭಾಷೆಯಲ್ಲಿ ಮಾತಾಡುವುದೇ ಅಸಂಬದ್ಧವೆನಿಸುತ್ತದೆ. ಶೋಷಣಾ ಸಾಧನವಾಗಿದೆ ಅಥವಾ ಇತ್ತು ಇಂದು ಈಗ ಹೇಳಲಾಗುವ ವೈದಿಕ ಧರ್ಮಶಾಸ್ತ್ರದ ಶ್ರದ್ಧಾ ಕೇಂದ್ರವೆನಿಸಿರುವ ಕೃಷ್ಣ ಒಬ್ಬ ಗೊಲ್ಲ. ವೇದಗಳನ್ನು ಸಂಪಾದಿಸಿ ಮಹಾಭಾರತವನ್ನು ಬರೆದವನೆಂದು ಹೇಳಲಾಗುವ ವ್ಯಾಸ ಒಬ್ಬ ಬೆಸ್ತ. ಭಾರತದ ಅತ್ಯಂತ ಜನಪ್ರಿಯ ಮತ್ತು ಪವಿತ್ರ ಮಹಾಕಾವ್ಯವೆನಿಸಿದ ರಾಮಾಯಣವನ್ನು ಬರೆದ ವಾಲ್ಮೀಕಿ ಒಬ್ಬ ಬೇಡ. ಸಂಸ್ಕೃತ ಸಾಹಿತ್ಯದ ಮೇರು ಪ್ರತಿಭೆ ಎಂದು ಹೇಳಲಾಗುವ ಕಾಳಿದಾಸ ಒಬ್ಬ ಕುರುಬ. ಇನ್ನು ಮೇಲ್ಜಾತಿಗಳ ಆಧಿಪತ್ಯ ಸಾಧಿಸುವ ತಾತ್ವಿಕ ಸಾಧನವೆಂದು ನಂಬಲಾದ ವೈದಿಕ ಧರ್ಮಶಾಸ್ತ್ರಕ್ಕೆ ನಿಜವಾದ ಸವಾಲೆಸೆದವರೆಂದು ಹೇಳಲಾಗುವ ಗೌತಮ ಬುದ್ಧ ಮತ್ತು ವರ್ಧಮಾನ ಮಹಾವೀರರಿಬ್ಬರೂ ಮೇಲ್ಜಾತಿಗಳೆಂದು ಗುರುತಿಸಲಾಗುವ ಕ್ಷತ್ರಿಯರೇ!

ಆದರೂ ಇಂತಹ ಸಂಸ್ಕೃತ ಲೋಕ ಮೇಲ್ಜಾತಿಗಳ ಲೋಕವಾಗಿಯೂ, ಕೆಳಜಾತಿಗಳ ಪಾಲಿಗೆ ಸಿಡಿಮದ್ದಿನ ಕೋಠಿಯಾಗಿಯೂ ಏಕೆ ಕಾಣುತ್ತಿದೆ? ಇದನ್ನು ವಿವರವಾಗಿ ವಿಶ್ಲೇಷಿಸುವುದು ಈ ಲೇಖನದ ಸಂದರ್ಭದಲ್ಲಿ ಕಷ್ಟ. ವಿಶ್ಲೇಷಣೆಯ ಆಧಾರ–ಆಕರಗಳೇ ಪುಟಗಟ್ಟಲೆ ಆಗಬಹುದು. ಆದುದರಿಂದ ಇದನ್ನು ಒಂದೇ ವಾಕ್ಯದಲ್ಲಿ ಸೂಚ್ಯವಾಗಿ ಹೇಳುವುದಾದರೆ, ಇದು ಕರ್ಮಾಧಾರಿತ ವರ್ಣಾಶ್ರಮ ಧರ್ಮವು ಜನ್ಮಾಧಾರಿತ ಜಾತಿ ಪದ್ಧತಿಯಾಗಿ ಅವನತಿಗೊಂಡಿದ್ದರ ಭಾಗವಾಗಿ ಸಂಭವಿಸಿದ ದುರಂತ. ವರ್ಣಾಶ್ರಮ ಧರ್ಮದ ಪ್ರಕಾರ ಸಂಸ್ಕೃತಲೋಕದ ನಿರ್ಮಾತೃಗಳೆಲ್ಲ, (ಅವರು ಜನ್ಮತಃ ಏನೇ ಆಗಿದ್ದರೂ, ಕರ್ಮತಃ) 'ಬ್ರಾಹ್ಮಣ'ರೇ. ಆದರೆ ಕಾಲ ಕ್ರಮೇಣ ಈ ವರ್ಣಾಶ್ರಮ ಧರ್ಮ, ಹೊರಗಿನ ಜನಾಂಗೀಯ ಮತ್ತು ಒಳಗಿನ ತಾತ್ವಿಕ ದಾಳಿಗಳನ್ನು ಎದುರಿಸಿ ಅವನ್ನು ತನ್ನೊಳಕ್ಕೆ ಅನುಸಂಧಾನಗೊಳಿಸಿಕೊಳ್ಳುವ ಸುಲಭ ಮಾರ್ಗವಾಗಿ (ಹುಟ್ಟಿನ ಆಧಾರದ)ಜಾತಿಪದ್ಧತಿಯಾಗಿ ಮಾರ್ಪಾಡಾಯಿತು. ಈ ಸಾಮಾಜಿಕ ಪುನಾರಚನೆಯ ಪ್ರಕ್ರಿಯೆಯಲ್ಲಿ ಉದ್ಭವವಾದ ಹೊಸ 'ಬ್ರಾಹ್ಮಣ'ರು ಸಂಸ್ಕೃತಲೋಕವನ್ನು ತಮ್ಮ ವಾರಸುದಾರಿಕೆಯನ್ನಾಗಿ ಮಾಡಿಕೊಳ್ಳಲು ನಡೆಸಿದ ರಾಜಕಾರಣವೇ ಅದು ಮಡಿ–ಮೈಲಿಗೆಗಳ, ವಿಧಿ–ನಿಷೇಧಗಳ, ಅಮಾನವೀಯ ಶ್ರೇಣೀಕರಣಗಳ ಲೋಕವಾಗಿ ಪ್ರತಿಬಿಂಬಿತವಾಗಲು, ಪರಿವರ್ತಿವಾಗಲು ಕಾರಣವಾಯಿತು. ಸ್ಥೂಲವಾಗಿ ಹೇಳುವುದಾದರೆ, ಗುಣಮಟ್ಟದ(ಅಂದರೆ ಹುಟ್ಟಿನ ಪರಿಗಣನೆಯಿಲ್ಲದ ಸೃಜನಶೀಲ) 'ಬ್ರಾಹ್ಮಣ'ರು ನಿರ್ಮಿಸಿದ ಸಾಮುದಾಯಿಕ ಜ್ಞಾನವನ್ನು ಹುಟ್ಟನ್ನಷ್ಟೇ 'ಗುಣ'ವಾಗಿ ಪಡೆದ (ಜಡ)ಬ್ರಾಹ್ಮಣರು ತಮ್ಮ ವರ್ಗದ ಹಿತಕ್ಕಾಗಿ, ಮೇಲ್ಮೆಗಾಗಿ, ಅಧಿಕಾರಕ್ಕಾಗಿ 'ಆಸ್ತಿ'ಯನ್ನಾಗಿ ಸಂಘಟಿಸಿಕೊಂಡ ರಾಜಕಾರಣದ ಫಲವಿದು! ಈ ಸಂಘಟನೆ, ಸ್ಮೃತಿ–ಪುರಾಣಗಳ ರಚನೆಯ ರೂಪದಲ್ಲಿ ನಡೆಯಿತು. ಪುರೋಹಿತಶಾಹಿ ಎಂಬುದು ಆರಂಭವಾದದ್ದೇ ಹೀಗೆ.

ಸಂಸ್ಕೃತ ವಿಶ್ವವಿದ್ಯಾಲಯ ಸ್ಥಾಪನೆಯ ಕುರಿತಾದ ನಿಜವಾದ ಭಯದ ಮೂಲವಿರುವುದು ಈ ನೆಲೆಯಲ್ಲಿ. ಸಂಸ್ಕೃತ ಕುರಿತಂತಿರುವ ಈ ರಾಜಕೀಯ ಆಯಾಮದಲ್ಲಿ. ಈಗ ಸಂಸ್ಕೃತ ವಿಶ್ವವಿದ್ಯಾಲಯವನ್ನು ಸ್ಥಾಪಿಸ ಹೊರಟಿರುವವರ ರಾಜಕಾರಣವನ್ನು ಮತ್ತು ಅದನ್ನು ಸ್ಥಾಪಿಸಲು ಹೊರಟಿರುವ ರೀತಿ ನೀತಿಗಳನ್ನು ಗಮನಿಸಿದರೆ, ಪ್ರಧಾನವಾಗಿ ಜ್ಞಾನಸಾಧನವಾದ ಸಂಸ್ಕೃತವನ್ನು ಒಂದು ರಾಜಕೀಯ ಸಾಧನವನ್ನಾಗಿ ಪರಿವರ್ತಿಸಿದವರ ಕುತಂತ್ರ ರಾಜಕಾರಣಕ್ಕೆ ಮರು ಮಾನ್ಯತೆ ನೀಡಿ; ಅದನ್ನು ಮರುಸ್ಥಾಪಿಸುವ ಪ್ರಯತ್ನವಾಗಿಯೇ–ಸಂಚಾಗಿಯೇ–ಕಾಣುತ್ತದೆ. ಇನ್ನು ಯಾವುದನ್ನು ಬಹುಜನರು ಕೇಳುವುದಕ್ಕೂ ಅನರ್ಹರು ಎಂದು ಯಾವ ಜಾತಿಪದ್ಧತಿ(ಮತ್ತು ಅದರ ಬೆಂಬಲಿಗ ಸ್ಮೃತಿಗಳು) ಘೋಷಿಸಿತ್ತೋ, ಆ ವೇದಗಳ ಹೆಸರಿನಲ್ಲಿ ಈ ವಿಶ್ವವಿದ್ಯಾಲಯವನ್ನು ಸ್ಥಾಪಿಸ ಹೊರಟಿರುವುದು ಈ ಸಂಚನ್ನು ಸಾಬೀತುಪಡಿಸುವಂತಿದೆ. ಇದೆಲ್ಲವೂ ಅಮಾಯಕವಾಗೇನೂ ನಡೆಯುತ್ತಿರುವ ವಿದ್ಯಮಾನವಲ್ಲ. ಏಕೆಂದರೆ, ಇದನ್ನು ಹೀಗೆ ಸ್ಥಾಪಿಸ ಹೊರಟಿರುವ ಸರ್ಕಾರ ಮತ್ತು ಅದರ ಹಿಂದಿರುವ ಪೋಷಕರು ಜಾತಿ ಪದ್ಧತಿಯನ್ನು ಒಪ್ಪಿರುವವರಷ್ಟೇ ಅಲ್ಲ, ಅದನ್ನು ಬಲಗೊಳಿಸಲು ಬದ್ಧರಾದವರು. ಈ ಸರ್ಕಾರದ ಕಾರ್ಯವೈಖರಿಗಳು ಇದನ್ನು ಈಗಾಗಲೇ ವಿವರಣೆ ಅನಗತ್ಯವಾಗುವಷ್ಟರ ಮಟ್ಟಿಗೆ ಸ್ಪಷ್ಟಪಡಿಸಿವೆ. ಹೀಗಾಗಿ, ವರ್ಣಾಶ್ರಮ ಧರ್ಮವನ್ನು ಜಾತಿಪದ್ಧತಿಯಾಗಿ ಮಾರ್ಪಡಿಸಿದ ಜಾಣ ಪುರೋಹಿತಶಾಹಿ ಮತ್ತು ಅದನ್ನು ಪೋಷಿಸಿದ

ದಡ್ಡ ಊಳಿಗಮಾನ್ಯಶಾಹಿಗಳೆರಡೂ ಒಟ್ಟಾಗಿ ಕ್ರಿಯಾಶೀಲವಾಗಿರುವ ಈ ವ್ಯವಸ್ಥೆ, ತನ್ನ ಬೇರುಗಳನ್ನು ಮತ್ತೆ ಬಲವಾಗಿ ಊರಿಕೊಳ್ಳಲು ನಡೆಸಿರುವ ಅನೇಕ ದೀರ್ಘಕಾಲಿಕ ಯೋಜನೆಗಳಲ್ಲಿ ಈ ಸಂಸ್ಕೃತ ವಿಶ್ವವಿದ್ಯಾಲಯ ಸ್ಥಾಪನೆಯ ನಿರ್ಧಾರವೂ ಒಂದು ಎಂದು ಭಾವಿಸಲು ಸಾಧ್ಯವಿದೆ. ಇಲ್ಲದೇ ಹೋದಲ್ಲಿ, ಸರ್ಕಾರದ ಈ ನಿರ್ಧಾರಕ್ಕೆ ಬೇರೆ ಅಗತ್ಯ ಕಾರಣಗಳೇ ಕಾಣುತ್ತಿಲ್ಲ.

ಏಕೆಂದರೆ, ದೇಶಾದ್ಯಂತ ಸರ್ಕಾರದ ಅನುದಾನ ಪಡೆವ ಸಂಸ್ಕೃತ ಪಾಠಶಾಲೆಗಳಿವೆ. ಅಲ್ಲಿ ಬೇಕಾದವರಿಗೆ ವೇದ ಶಿಕ್ಷಣ ಒದಗಿಸಲಾಗುತ್ತಿದೆ. ಎಲ್ಲ ಕಾಲೇಜುಗಳಲ್ಲಿ, ಕಲಿಯ ಬಯಸುವವರಿಗೆ ಸಂಸ್ಕೃತ ವಿಭಾಗಗಳಿವೆ. ಅಲ್ಲಿ ಸಂಸ್ಕೃತ ಸಾಹಿತ್ಯದ ಬೋಧನೆ ಮತ್ತು ಸ್ನಾತಕೋತ್ತರ ಕೇಂದ್ರಗಳಲ್ಲಿ ಅಧ್ಯಯನ ಮತ್ತು ಸಂಶೋಧನೆ ನಡೆಯುತ್ತಿದೆ. ಇನ್ನು ರಾಷ್ಟ್ರಾದ್ಯಂತ ಇರುವ ೨೦ ಸಂಸ್ಕೃತ ವಿಶ್ವವಿದ್ಯಾಲಯಗಳ ಜೊತೆಗೆ ವಿಶೇಷ ಅಧ್ಯಯನಕ್ಕೆಂದೇ ಕಾಲಡಿಯಲ್ಲಿ ಕೇಂದ್ರ ಸಂಸ್ಕೃತ ವಿಶ್ವವಿದ್ಯಾಲಯವಿದೆ. ಸಹಜ ಸೃಜನ ಶಕ್ತಿ ಮತ್ತು ಜನ ಬಳಕೆಗಳೆರಡನ್ನೂ ಕಳೆದುಕೊಂಡು ಪ್ರಾಚೀನ ಭಾಷೆಯೆನಿಸಿಕೊಂಡಿರುವ ಸಂಸ್ಕೃತಕ್ಕೆ ಇನ್ನೇನು ಬೇಕು? ನಿಜ, ಸಂಸ್ಕೃತ ಅಪಾರ ಜ್ಞಾನದ ಆಗರ. ನಮ್ಮ ಪೂರ್ವಜರು ವಿಶೇಷ ಜ್ಞಾನ ಸಂಪತ್ತಿನ ಅಭಿವ್ಯಕ್ತಿ ಮತ್ತು ಸಂಗ್ರಹಕ್ಕೆಂದೇ ರೂಪಿಸಿಕೊಂಡ ಅಪೂರ್ವ ಭಾಷೆಯದು. ಅದರೆ ಬದುಕು ಬದಲಾಗುತ್ತಾ, ಸಮಾಜ ಅನೇಕ ಪುನಾರಚನೆಗಳಿಗೆ ಒಳಗಾಗುತ್ತಾ ಬಂದ ಫಲವಾಗಿ, ಅದರ ಬಹುಭಾಗ ಜ್ಞಾನ ಅಪ್ರಸ್ತುತವಾಗುತ್ತಾ ಬಂದಿದೆಯಷ್ಟೇ ಅಲ್ಲ, ಮುಂದಿನ ತಲೆಮಾರುಗಳಿಗೆ ಬೇಕಾದ ಜ್ಞಾನ, ಇದೇ ಸಂದರ್ಭದಲ್ಲಿ ರೂಪಿತವಾಗುತ್ತಾ ಬಂದ ಜನ ಭಾಷೆಗಳಿಗೆ ವರ್ಗಾವಣೆಯಾಗಿ ಬಂದಿದೆ. ಅನೇಕ ವರ್ಣಾಶ್ರಮ ಧರ್ಮಿ 'ಬ್ರಾಹ್ಮಣ'ರ ಜ್ಞಾನಪ್ರಿಯತೆ ಮತ್ತು ಶ್ರಮದಿಂದಾಗಿ ಸಂಸ್ಕೃತದ ಎಲ್ಲ ಜ್ಞಾನ ಸಂಪತ್ತೂ ಇಂದು ಜನ ಭಾಷೆಗಳಲ್ಲಿ ಲಭ್ಯವಿದೆ. ಅಷ್ಟೇ ಅಲ್ಲ, ಸಂಸ್ಕೃತವು ಕನ್ನಡದಂತಹ ಜನಭಾಷೆಗಳನ್ನು ಪೋಷಿಸಿತು, ಸಮೃದ್ಧಗೊಳಿಸಿತು ಎಂಬ ಜನಪ್ರಿಯ ನಂಬಿಕೆಗೆ ವಿರುದ್ಧವಾಗಿ, ಅದು ಆಳಿದ ಒಂದು ವರ್ಗದ ರಾಜಕೀಯ ಸಾಧನವಾಗಿ; ಆಳಿಸಿಕೊಂಡ ಜನಸ್ತೋಮದ ಭಾಷೆಗಳ ಸಾಂಸ್ಕೃತಿಕ ಮತ್ತು ರಾಜಕೀಯ ಬೆಳವಣಿಗೆಯನ್ನು ಹೇಗೆ ನಿಯಂತ್ರಿಸಿತು ಕೂಡಾ ಎಂಬುದನ್ನು ಇತ್ತೀಚಿನ ಸಂಸ್ಕೃತಿ ಸಂಶೋಧನೆಗಳು ಸೂಚಿಸುತ್ತಿವೆ. (ಉದಾ: ಇತಿಹಾಸ ಸಂಶೋಧಕ ಷ. ಶೆಟ್ಟರ್ ಅವರ ಪ್ರಬಂಧಗಳು).

ಹೀಗಿರುವಾಗ ಕರ್ನಾಟಕದಲ್ಲಿ ಸಂಸ್ಕೃತ ವಿಶ್ವವಿದ್ಯಾಲಯ ಸ್ಥಾಪನೆ ಎಂದರೆ, ಕನ್ನಡಕ್ಕೆ, ಅದರ ಸಂಸ್ಕೃತಿಗೆ ಹಾಗೂ ಅದರ (ಜನ)ರಾಜಕಾರಣಕ್ಕೆ, ಅದರ ದೀರ್ಘಕಾಲಿಕ ಪರಿಣಾಮದಲ್ಲಿ ಮಾರಕವೇ ಆಗುವ ಸಂಭವವಿದೆ. ಹಾಗಾಗಿ ಇಂದು ಸಂಸ್ಕೃತ ವಿಶ್ವವಿದ್ಯಾಲಯವನ್ನು ವಿರೋಧಿಸುವವರು, ಸಂಸ್ಕೃತವನ್ನು ಒಂದು ಭಾಷೆಯಾಗಿ, ಕುರುಡು ಕುರುಡಾಗಿ ಅದರಲ್ಲಿನ ಜ್ಞಾನ ಸಂಪತ್ತಿನ ವಿರೋಧಿಗಳಾಗಿ ಅಥವಾ ಒಂದು ನಿರ್ದಿಷ್ಟ ಜಾತಿಯ ವಿರೋಧಿಗಳಾಗಿ ವಿರೋಧಿಸದೆ; ಅದು ಇಷ್ಟು ವರ್ಷಗಳ ಕಾಲ ಅನೇಕ ತಲೆಮಾರುಗಳು ಹೋರಾಡಿ ಸಾಧಿಸಿಕೊಂಡಿರುವ ಆಧುನಿಕ ಪ್ರಜಾಪ್ರಭುತ್ವದ(ಅದರ ದೌರ್ಬಲ್ಯಗಳೇನೇ ಇದ್ದರೂ) ಬಹುಮುಖತೆಯನ್ನು, ಸರ್ವ ಸಮಾನತೆಯ ಆಶಯವನ್ನು; ಒಟ್ಟಾರೆಯಾಗಿ ಸಾಮಾಜಿಕ ನ್ಯಾಯ ಕಲ್ಪನೆಯನ್ನೇ ಬುಡಮೇಲುಗೊಳಿಸ ಬಯಸುವ ರಾಜಕೀಯ ಹುನ್ನಾರದ ಸಾಧನವೆಂದು

ಪರಿಗಣಿಸಿ ವಿರೋಧಿಸಬೇಕಿದೆ. ಆದರೆ ನಮ್ಮ ಸಾಮಾಜಿಕ ನ್ಯಾಯ ಆಂದೋಲನವೇ, ಪ್ರಜಾಪ್ರಭುತ್ವ ಪದ್ಧತಿಗೇ ಕೊಡಲಿ ಪೆಟ್ಟಾಗುತ್ತಿರುವ ಜಾತಿಪದ್ಧತಿಯನ್ನು, ಜಾತಿ ಸಮಾನತೆಯ ಹೆಸರಿನಲ್ಲಿ ಒಪ್ಪಿಕೊಳ್ಳುವ ರೀತಿಯಲ್ಲಿ ಪುನರ್ರೂಪಿತವಾಗುತ್ತಿರುವ ಇಂದಿನ ಸಂದರ್ಭದಲ್ಲಿ ಇದು ಎಷ್ಟರ ಮಟ್ಟಿಗೆ ಯಶಸ್ವಿಯಾಗುವುದೋ ಕಾದು ನೋಡಬೇಕಾಗಿದೆಯಷ್ಟೆ!

ಆದರೆ ಒಂದು ಮಾತು: ಸಂಸ್ಕೃತ ವಿಶ್ವವಿದ್ಯಾಲಯದ ಸ್ಥಾಪನೆಯ ನಿರ್ಧಾರದ ಹಿಂದೆ ನಿಜವಾಗಿಯೂ ನಮ್ಮ ಪರಂಪರೆಯನ್ನು ಕರ್ನಾಟಕದ ಸಂದರ್ಭದಲ್ಲಿ ವಿಶೇಷವಾಗಿ ಅಧ್ಯಯನ ಮಾಡುವ ಘನೋದ್ದೇಶವೇ ಇದ್ದರೆ, ಅದು ಸಂಸ್ಕೃತದ ಜೊತೆಗೆ ನಮ್ಮ ಪರಂಪರೆಯನ್ನು ಕಟ್ಟಿದ ಪಾಳಿ, ಪ್ರಾಕೃತ, ಪರ್ಷಿಯನ್ ಇತ್ಯಾದಿ ಎಲ್ಲ ಪ್ರಾಚೀನ ಭಾಷೆಗಳ ಅಧ್ಯಯನದ ಉದ್ದೇಶವಿರುವ ಪರಂಪರೆ ಅಧ್ಯಯನದ ವಿಶ್ವವಿದ್ಯಾಲಯವಾಗಿ ಸ್ಥಾಪಿತಗೊಳ್ಳಲಿ. ಆಗ ಅದು 'ವೇದ–ಸಂಸ್ಕೃತ' ವಿಶ್ವವಿದ್ಯಾಲಯವಾಗಲು ಸಾಧ್ಯವಿಲ್ಲ.

(೨೫ ಜೂನ್, ೨೦೦೯, ಚಾರ್ವಾಕ)

೨೧. ಕಲ್ಯಾಣ ಕ್ರಾಂತಿ ಎಂಬ ನೋವಿನ ಹಲ್ಲು!

ಗಿರೀಶ್ ಕಾರ್ನಾಡರು ತಮ್ಮ 'ತಲೆದಂಡ' ನಾಟಕದ ಮುನ್ನುಡಿಯಲ್ಲಿ ನೋಯುವ ಹಲ್ಲಿನ ಕಡೆ ನಾಲಗೆ ಪದೇ ಪದೇ ಹೊರಳುವಂತೆ ಕನ್ನಡ ಪ್ರಜ್ಞೆ ಪದೇ ಪದೇ ೧೨ನೇ ಶತಮಾನದ ಕಲ್ಯಾಣ ಕ್ರಾಂತಿಯ ಕಡೆ ಹೊರಳುವ ಕಡೆಗೆ ನಮ್ಮ ಗಮನ ಸೆಳೆದಿದ್ದಾರೆ. ಈ ಮಾತನ್ನು ಆನಂತರ ನಮ್ಮ ಅನೇಕ ಸಂಸ್ಕೃತಿ ಚಿಂತಕರು ಮತ್ತು ಲೇಖಕರು ತಮ್ಮ ಸಾಹಿತ್ಯ-ಸಂಸ್ಕೃತಿ ಚಿಂತನೆಗಳ ಮಧ್ಯೆ ಪ್ರಸ್ತಾಪಿಸಿದ್ದಾರೆ. ಆದರೆ ಇವರೆಲ್ಲ ಕಾರ್ನಾಡರ ಈ ಮಾತನ್ನು ಕನ್ನಡ ಸಂಸ್ಕೃತಿಯಲ್ಲಿ ಕಲ್ಯಾಣ ಕ್ರಾಂತಿಯ ಮಹತ್ವವನ್ನು ಸೂಚಿಸಲಷ್ಟೇ ಬಳಸಿರುವಂತೆ ತೋರುತ್ತದೆಯೇ ಹೊರತು, ಆ ಮಾತಿನಲ್ಲಿರುವ 'ನೋಯುವ ಹಲ್ಲು' ಎಂಬ ಪದ ಪುಂಜದ ಕಡೆ ಗಮನ ಕೊಟ್ಟಂತೆ ತೋರುವುದಿಲ್ಲ. ಅವರು ಹಾಗೆ ಗಮನ ಕೊಟ್ಟಿದ್ದರೆ 'ತಲೆದಂಡ' ನಾಟಕವೂ ಸೇರಿದಂತೆ ಕಲ್ಯಾಣ ಕ್ರಾಂತಿ ಕುರಿತು ಆಧುನಿಕ ಕನ್ನಡ ಸಾಹಿತ್ಯದಲ್ಲಿ ಮೂಡಿರುವ ಸೃಜನ ಮತ್ತು ಸೃಜನೇತರ ಕೃತಿಗಳ ಬಗ್ಗೆ ಈಗ ಬಂದಿರುವ ಕೇವಲ 'ಚಿಂತನಶೀಲ' ಬರಹಗಳ ಜೊತೆ ಜೊತೆಗೇ 'ಕ್ರಿಯಾಶೀಲ' ಬರವಣಿಗೆಯೂ ಹೊಮ್ಮಿರುತ್ತಿತ್ತೇನೋ! ಅಂದರೆ ಕನ್ನಡ ಸಮಾಜದಲ್ಲಿ ಒಂದು ನಿರ್ಣಾಯಕ ಸಾಮಾಜಿಕ ಬದಲಾವಣೆಗೆ-ತಮಿಳ್ನಾಡಿನಲ್ಲಿ ಆದಂತೆ-ಇಂಬುಕೊಡುವ ಒಂದು ಪ್ರಬುದ್ಧ ಸಾಹಿತ್ಯಕ, ಸಾಂಸ್ಕೃತಿಕ ಸಂವಾದ ಕನ್ನಡ ಸಾಹಿತ್ಯದ ಚೈತನ್ಯದ ಶಕ್ತಿಯಾಗಿರುತ್ತಿತ್ತೇನೋ...

ಇಂತಹ ಸಂವಾದ ಕನ್ನಡ ಸಾಹಿತ್ಯದಲ್ಲಿ ನಡೆದಿಲ್ಲ ಎಂದಲ್ಲ. ಆದರೆ ಅದು ಕನ್ನಡ ಸಾಹಿತ್ಯದ ಚೈತನ್ಯಶಕ್ತಿ(driving force) ಆಗಿಲ್ಲ. ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು'ವನ್ನೂ, ಭೈರಪ್ಪನವರ 'ಆವರಣ'ವನ್ನೂ ಒಟ್ಟಿಗೇ ಶ್ರೇಷ್ಠ ಕೃತಿಗಳು ಎಂದು 'ಪ್ರಾಮಾಣಿಕ'ವಾಗಿ ಗುರುತಿಸುವ, ಚರ್ಚಿಸುವ, ಸಮರ್ಥಿಸುವ ಒಂದು ದೊಡ್ಡ ಸಾಂಸ್ಕೃತಿಕ ಧಾರೆಯೇ ಇಂದು ಕನ್ನಡ ಸಾಹಿತ್ಯ ಸಂಕಥನದ ಮಧ್ಯೆ ಜೀವಂತವಿದೆ! ನಾನು ಹೇಳುತ್ತಿರುವುದು ಈ ಅಸಾಂಗತ್ಯದ ಬಗ್ಗೆ; ಇದು ಸೂಚಿಸುವ ಸಾಹಿತ್ಯದ ಲೋಕಾಭಿರಾಮೀಕರಣದ ಹಿಂದಿರುವ ಸಾಂಸ್ಕೃತಿಕ ದೃಷ್ಟಿ ಕೇಂದ್ರದ ಪ್ರಕ್ಷೇಪದ ಬಗ್ಗೆ-ಕನ್ನಡ ಸಾಹಿತ್ಯ ಕಲ್ಯಾಣ ಕ್ರಾಂತಿಯಿಂದ ಸ್ಫೂರ್ತಿ ಪಡೆದು, ಒಂದು ದೊಡ್ಡ ಸಾಮಾಜಿಕ ಕ್ರಾಂತಿಗೆ ಕಾರಣವಾಗಿರಬೇಕಿತ್ತು ಎಂದಲ್ಲ. ನಿಜ, ಕಲ್ಯಾಣ ಕ್ರಾಂತಿ ಈಗಲೂ ಕನ್ನಡ ಸಂವೇದನೆಯ ಹೃದಯ ಸ್ಥಾನದಲ್ಲಿದೆ. ಆದರೆ ಒಂದು ಒಣ ಹೆಮ್ಮೆಯ ವಿಷಯವಾಗಿ. ಕನ್ನಡ ಸಮಾಜ-ಅದರ ರಾಜಕಾರಣ, ಭಾಷೆ, ಸಂವೇದನೆ ಎಲ್ಲವೂ ಒಟ್ಟಿಗೆ ಏರಿದ್ದ ಹೊಸ ಎತ್ತರಗಳ ದ್ಯೋತಕವಾಗಿ ಅದನ್ನು ನೋಡುತ್ತೇವೆ. ಆದರೆ ಅದು ಕಾರ್ನಾಡರು ಹೇಳುವ ಹಾಗೆ 'ನೋಯುವ ಹಲ್ಲು' ಕೂಡಾ ಆಗಿದೆಯಲ್ಲವೇ?

ಅಂದರೆ ಕಲ್ಯಾಣ ಕ್ರಾಂತಿಯ ನೆನಪು, ಆ ಹೊಸ ಎತ್ತರಗಳನ್ನು ಕನ್ನಡ ಸಮಾಜ, ರಾಜಕಾರಣ, ಸಂವೇದನೆ ಮತ್ತು ಭಾಷೆಗಳು ಬೀಜರೂಪಿಯಾಗಿಯಾದರೂ ಉಳಿಸಿಕೊಳ್ಳಲಾಗದೇ ಹೋದ ವೇದನೆಯಾಗಿ ನಮ್ಮನ್ನು ಕಾಡಬೇಕಲ್ಲವೆ? ಆದರೆ ಇಂದು ಹಾಗೆ ಅದು ನಮ್ಮನ್ನು ಕಾಡುತ್ತಿದೆಯೇ!

ಈ ಪ್ರಶ್ನೆಗೆ ಉತ್ತರ ನಾವು ಕಲ್ಯಾಣ ಕ್ರಾಂತಿಯನ್ನು ಒಂದು ಪರಿಕಲ್ಪನೆಯಾಗಿ ಹೇಗೆ ಗ್ರಹಿಸುತ್ತೇವೆ ಎಂಬುದನ್ನು ಅವಲಂಬಿಸಿದೆ ಎಂದು ತೋರುತ್ತದೆ. ಇಲ್ಲಿ ಕ್ರಾಂತಿ ಎಂದರೆ ಅಲ್ಲಮಪ್ರಭುಗಳ ಪ್ರಭಾವದಲ್ಲಿ, ಬಸವಣ್ಣನ ನೇತೃತ್ವದಲ್ಲಿ ನಡೆದ ವೈಚಾರಿಕ ಕ್ರಾಂತಿಯೋ ಅಥವಾ ಇದರ ಪರಿಣಾಮವಾಗಿ ನಡೆದುವೆಂದು ಹೇಳಲಾದ ಬಿಜ್ಜಳನ ಕೊಲೆ, ಶರಣರ ಸಾಮೂಹಿಕ ಹತ್ಯೆ ಮತ್ತು ಬಸವಣ್ಣನ 'ಲಿಂಗೈಕ್ಯತೆ' ಇತ್ಯಾದಿಗಳು ಸೂಚಿಸುವ ರಕ್ತ ಕ್ರಾಂತಿಯೋ? ಇದಕ್ಕೆ ನಿಶ್ಚಿತ ಉತ್ತರ ಕಂಡುಕೊಳ್ಳಲಾಗದ ಕನ್ನಡ ಸಮಾಜ ತನ್ನೊಳಗೇ ವೀರಶೈವ ಸಮಾಜವೆಂಬುದೊಂದನ್ನು ಸೃಷ್ಟಿಸಿಕೊಂಡು, ಪಡಬಾರದ ಪಡಿಪಾಟಲನ್ನು ಪಡುತ್ತಿದೆ. ಇದರ ಪರಿಣಾಮವಾಗಿ ತನ್ನ ನಿಜವಾದ ನಾಯಕನನ್ನೇ ಕಳೆದುಕೊಂಡು ಅನಾಥವಾಗಿದೆ. ಕಿರೀಟ ಧರಿಸಿಕೊಂಡು ಕುದುರೆ ಮೇಲೆ ಕೂತ ಬಸವಣ್ಣನ ಪ್ರತಿಮೆ, ಕನ್ನಡ ಸಮಾಜದ ಈ ದುರಂತವನ್ನು ಅಣಕಿಸಿ ಹೇಳುವಂತಿದೆ. ಇದು ಬಸವಣ್ಣನನ್ನು ನಿಜವಾಗಿ ಕೊಂದವರು ಯಾರು, ಹೇಗೆ ಎಂಬುದನ್ನು ಹೆಮ್ಮೆಯಿಂದ ಹೇಳಿಕೊಳ್ಳುವ ವರ್ಗವೊಂದರ ಧಾರ್ಷ್ಟ್ಯವನ್ನು ಸೂಚಿಸುವಂತಿದೆ.

ಇದೆಲ್ಲ ನನ್ನ ಮನಸ್ಸಿನಲ್ಲಿ ಹಾದು ಹೋದದ್ದು, ಇತ್ತೀಚೆಗೆ ಕುವೆಂಪು ವಿಶ್ವವಿದ್ಯಾಲಯದ ಅಧ್ಯಾಪಕ ಗೆಳೆಯರೊಬ್ಬರು, ಇಡೀ ವಚನ ಸಾಹಿತ್ಯವನ್ನು ಹುಡುಕಿದರೂ ಜಾತಿ ವಿರೋಧಿಯಾದ ಒಂದು ವಚನವೂ ಸಿಕ್ಕಲಾರದು ಎಂದು ಹೇಳಿ ನನ್ನನ್ನು ದಂಗುಬಡಿಸಿದಾಗ! ಕಲ್ಯಾಣ ಕ್ರಾಂತಿ ಎಂದರೆ, ವಚನ ಚಳುವಳಿ ಎಂದರೆ, ಜಾತಿ ವಿರೋಧಿ ಚಳುವಳಿ ಎಂದು ಕನ್ನಡದ ಜನ ಶತ ಶತಮಾನಗಳಿಂದ ನಂಬಿ, (ಹುಸಿ)ಹೆಮ್ಮೆ ಪಡುತ್ತಾ, ಚರ್ಚಿಸುತ್ತಾ, ಮಠ–ಮಂದಿರಗಳನ್ನು ಕಟ್ಟುತ್ತಾ ಬರುತ್ತಿರುವಾಗ ಇವರೇನು ಹೀಗೆ ಹೇಳುತ್ತಿದ್ದಾರೆಂದು ವಿವರವಾಗಿ ವಿಚಾರಿಸಿದೆ. ಅವರು ತಮ್ಮ ಮಾತನ್ನು ವಿವರಿಸಿದ್ದು ಹೀಗೆ: ಜಾತಿ ವಿರುದ್ಧ ನಿಂತ ಶರಣರದೇ ಇಂದು ಒಂದು ಜಾತಿಯಾಗಿದೆ ಎಂದು ನಾವು ಸೋಜಿಗ ಅಥವಾ ವಿಷಾದಪಡುವ ಅಗತ್ಯವಿಲ್ಲ. ಏಕೆಂದರೆ ಬಸವಣ್ಣ ಮಾಡಿದ್ದು ಶರಣ ಚಳುವಳಿಯೇ ಹೊರತು, ಜಾತಿ ವಿರೋಧಿ ಚಳುವಳಿಯಲ್ಲ. ಆತ ಶರಣರಾದವರಿಗೆ ಜಾತಿ ಇಲ್ಲವೆಂದನೇ ಹೊರತು, ಜಾತಿ ವ್ಯವಸ್ಥೆಯ ತಾತ್ವಿಕತೆ ಮತ್ತು ರಾಜಕಾರಣದ ವಿರುದ್ಧ ಮಾತನಾಡಲಿಲ್ಲ.

ಇವರ ಮಾತುಗಳನ್ನು ಗಮನದಲ್ಲಿಟ್ಟುಕೊಂಡು ವಚನಗಳನ್ನು ಓದಿದರೆ, ವಚನಗಳೆಲ್ಲ ಹಾಗೇ ಕಾಣುತ್ತವೆ! ಜಾತಿ ಉಲ್ಲೇಖವಿರುವ ಎಲ್ಲ ವಚನಗಳೂ 'ಶಿವಭಕ್ತನೇ ಕುಲಜ' ಎಂಬ ನಂಬಿಕೆಯ ಆಧಾರದ ಮೇಲೆ ಕಾಯಕದ ಘನತೆ ಮತ್ತು ದಾಸೋಹದ ಮಹತ್ವಗಳನ್ನು ಹೇಳುತ್ತಾ, ಶರಣ ಸಂಕುಲವೆಂಬ ಕಾಯಕ ಜೀವಿಗಳ ಹೊಸದೊಂದು ಸಮುದಾಯದ ಶೀಲ ಮತ್ತು ಐಕ್ಯತೆಯನ್ನು ಕಟ್ಟುವ ಕಡೆಗೆ ಮುಖಮಾಡಿರುವಂತೆ ತೋರುತ್ತವೆಯೇ ಹೊರತು, ಜಾತಿ ವ್ಯವಸ್ಥೆಯನ್ನು ಇಡಿಯಾಗಿ ಮುಖಾಮುಖಿಯಾಗಿಸಿಕೊಳ್ಳುವ ಪ್ರಯತ್ನಗಳು

ಕಾಣುವುದಿಲ್ಲ. 'ಕೆಳ' ಮತ್ತು 'ಕೀಳು' ಎಂದು ಹೇಳಲಾಗುವ ಜಾತಿ ಮತ್ತು ವೃತ್ತಿಗಳ ವಚನಕಾರರೂ ತಮ್ಮ ವಚನಗಳಲ್ಲಿ ಮೇಲ್ಜಾತಿಗಳ (ವಿಶೇಷವಾಗಿ ವೈದಿಕರ) ಆಚರಣೆಗಳು ಮತ್ತು ಅವರ ವೃತ್ತಿ–ವ್ಯವಹಾರಗಳ ಬಗ್ಗೆ ಖಂಡನೆ–ವಿಡಂಬನೆ ಮಾಡುವವರಾದರೂ, ಅದು ತಮ್ಮ 'ಶರಣಕುಲ'ದ ಹಿರಿಮೆಯನ್ನು ಸ್ಥಾಪಿಸುವ ಉದ್ದೇಶವನ್ನಷ್ಟೇ ಹೊಂದಿದಂತೆ ತೋರುತ್ತದೆ. ಜಾತಿ ಕುರಿತ ಬಸವಣ್ಣನ ನಿಲುವು ಅತ್ಯಂತ ತೀವ್ರವಾಗಿ ವ್ಯಕ್ತವಾಗುವ

ಸೂಳೆಗೆ ಹುಟ್ಟಿದ ಕೂಸಿನಂತೆ
ಆರನಾದರೆಯೂ 'ಅಯ್ಯ' 'ಅಯ್ಯ' ಎನಲಾರೆನಯ್ಯ
ಚೆನ್ನಯ್ಯನೆಮ್ಮಯ್ಯನು
ಚೆನ್ನಯ್ಯನ ಮಗ ನಾನು;
ಕೂಡಲಸಂಗನ ಮಹಾಮನೆಯಲ್ಲಿ
ಧರ್ಮಸಂತಾನ ಭಂಡಾರಿ ಬಸವನು!

ಎಂಬ ವಚನದಲ್ಲೂ ಎದ್ದು ಕಾಣುವುದು ಶರಣ ಸಂಸ್ಕೃತಿಯ ಆಶಯದಂತೆ ಕೆಳ ಜಾತಿಗಳೊಂದಿಗೆ ತನ್ನನ್ನು ಗುರುತಿಸಿಕೊಳ್ಳುವ ಹಂಬಲವೇ ಹೊರತು, ಜಾತಿ ವಿರೋಧಿ ಧೋರಣೆಯಲ್ಲ ಅನ್ನಿಸುತ್ತದೆ.

ನನ್ನ ಅಧ್ಯಾಪಕ ಮಿತ್ರರ ವಾದದ ಕಣ್ಣಿನಲ್ಲಿ ಕಾಣುವಂತಹ ಇಂತಹ ನೋಟದ ಹಿಂದೆ ಒಂದು ತಾತ್ವಿಕತೆ ಇದೆ. ಅದು ಇತ್ತೀಚೆಗೆ ಕೆಲವು ಸಮಾಜ ಶಾಸ್ತ್ರಜ್ಞರು, ರಾಜಕೀಯ ಶಾಸ್ತ್ರಜ್ಞರು, ಇತಿಹಾಸಜ್ಞರು ಮತ್ತು ಸಂಸ್ಕೃತಿ ಚಿಂತಕರ ವಿಶೇಷ ಗಮನ ಸೆಳೆಯುತ್ತಿರುವ ಭಾರತೀಯ ಶಾಸ್ತ್ರಜ್ಞರಾದ (ಕನ್ನಡಿಗರೇ ಆದ)ಬೆಲ್ಜಿಯಂ ನಿವಾಸಿ ಬಾಲಗಂಗಾಧರರ ಸಾಮಾಜಿಕ ಚಿಂತನೆ. ಅವರ ಪ್ರಕಾರ, 'ಹಿಂದೂ ಧರ್ಮ'ವೆಂಬುದೇ ಒಂದು ಕೃತಕ ರಾಜಕೀಯ ರಚನೆ. ವಿಶೇಷವಾಗಿ ಪಾಶ್ಚಾತ್ಯರು ತಮ್ಮ 'ಕ್ರಿಶ್ಚಿಯನ್' ಧರ್ಮದ ಎರಕದಲ್ಲಿ ರೂಪಿಸಿದ ಹಿಂದೂ ಧರ್ಮವದು. ಹಾಗೆ ನೋಡಿದರೆ, ಹಿಂದೂ ಧರ್ಮವೆಂಬುದೇ ಇಲ್ಲ. ಅದೊಂದು ಸಂಪ್ರದಾಯಗಳ ಪರಂಪರೆ, ಅಷ್ಟೆ. ಅದಕ್ಕೆ ಕ್ರಿಶ್ಚಿಯಾನಿಟಿ ಅಥವಾ ಇಸ್ಲಾಂನಂತೆ(ಅಥವಾ ಇನ್ನಾವುದೇ ಮಧ್ಯಪ್ರಾಚ್ಯ ಮೂಲವಾದ 'ರಿಲಿಜನ್'ನಂತೆ) ಸಾಮಾನ್ಯವಾದ ಒಂದು ಅನನ್ಯ ದೈವವಾಗಲಿ, 'ದೈವದತ್ತ' ಧರ್ಮಗ್ರಂಥವಾಗಲೀ, ತಾತ್ವಿಕತೆಯಾಗಲೀ ಅಥವಾ ಧಾರ್ಮಿಕ ಸಂಸ್ಥೆಯಾಗಲೀ ಇಲ್ಲ. ಹಾಗಾಗಿ ಅದು ಅವರ 'ರಿಲಿಜನ್'ನಂತಹ ರಿಲಿಜನ್ ಅಲ್ಲ. ಹಾಗಾಗಿ ಭಾರತದ 'ಧರ್ಮ' ಎಂಬ ಸಾರ್ವತ್ರಿಕ ಶಬ್ದ ನಮ್ಮ ಆಧುನಿಕ ಚರ್ಚೆ ವ್ಯವಹಾರಗಳಲ್ಲಿ 'ರಿಲಿಜನ್' ಎಂಬ ನಿರ್ದಿಷ್ಟ ಅರ್ಥ ಪಡೆದು ತರ್ಜುಮೆಯಾದುದರಿಂದ ಅನೇಕ ಅನಾಹುತಗಳಾಗಿವೆ. ಜಾತಿ ವ್ಯವಸ್ಥೆ ಕುರಿತಂತೆ ನಾವು ಕಟ್ಟಿಕೊಂಡಿರುವ ಚರಿತ್ರೆಯೂ ಇಂತಹ ಅನಾಹುತಗಳಲ್ಲೊಂದು. ಹಾಗಾಗಿ ವಚನ ಚಳುವಳಿಯನ್ನು ಜಾತಿ ವಿರೋಧಿ ಚಳುವಳಿಯನ್ನಾಗಿ ನೋಡುವ ನಮ್ಮ ಕ್ರಮವೇ ತಪ್ಪಾಗಿದ್ದು, ಅದರ ಸಾಮಾಜಿಕ ಚಲನಶೀಲತೆಯನ್ನು ಅರ್ಥ ಮಾಡಿಕೊಳ್ಳುವುದರಲ್ಲೇ ಎಡವುತ್ತಿದ್ದೇವೆ.

ಈ ವಾದ, ಶರಣರನ್ನು ಒಂದು ಜಾತಿಯಾಗಿ (ಮತ್ತು ಅದರೊಳಗೆ ಹಲವು ಉಪಜಾತಿಗಳನ್ನಾಗಿ) ಜಡಗೊಳಿಸಿ 'ಕಾಪಾಡು'ತ್ತಿರುವ ನಮ್ಮ ಮಠಾಧೀಶರಿಗೆ ಪ್ರಿಯವಾಗಬಹುದು. ಆದರೆ ವಚನ ಚಳುವಳಿ ನಿಜವಾಗಿ ಜಾತಿ ವ್ಯವಸ್ಥೆ ವಿರುದ್ಧ

ದಂಗೆಯೇಳಲಿಲ್ಲವೇ? ಹಾಗಿಲ್ಲದಿದ್ದರೆ, ಬಿಜ್ಜಳನಿಗೇಕೆ ಕಷ್ಟವೊದಗಿ ಆತ ತನ್ನ ಪ್ರಿಯ ಮಿತ್ರನೇ ಆಗಿದ್ದ ಬಸವಣ್ಣನ ಕಾರ್ಯಾಚರಣೆಗಳ ವಿರುದ್ಧ ತಿರುಗಿ ಬೀಳುತ್ತಿದ್ದ? ಇಂತಹ ಬರೀ ಚೂಪಾದ ಪ್ರಶ್ನೆಗಳಿಗೆ ಅವಕಾಶ ಒದಗಿಬರುವುದು, ನಾವು ಬಸವಣ್ಣನ ಕ್ರಾಂತಿಯನ್ನು ಆಧುನಿಕ ಕಾಲದ ಕ್ರಾಂತಿಗಳ ಕಲ್ಪನೆಯ ಚೌಕಟ್ಟಿನಲ್ಲಿಟ್ಟು ಅರ್ಥ ಮಾಡಿಕೊಳ್ಳಲೆತ್ನಿಸುವುದರಿಂದ. ಹಾಗಾಗಿಯೇ ನಾವು (ಮತ್ತು ಹಲವು ಸಾರ್ವಜನಿಕ ಭಾಷಣಕಾರರು) ಸುಲಭವಾಗಿ ಬಸವಣ್ಣನೇ ಜಗತ್ತಿನ ಮೊದಲ ಸಮಾಜವಾದಿ, ಕಮ್ಯೂನಿಸ್ಟ್ ಎಂದೆಲ್ಲ ಹೆಮ್ಮೆಯಿಂದ ಘೋಷಿಸತೊಡಗುತ್ತೇವೆ. ಇದೆಲ್ಲ ಸಮಾಜವಾದವೆಂದರೇನು, ಕಮ್ಯೂನಿಸಂ ಎಂದರೇನು ಎಂದು ನಿಜವಾಗಿ ತಿಳಿಯದವರ ಮಾತು. ಬಸವಣ್ಣ ತನ್ನ ಕಾಲ-ದೇಶಗಳ ಕೂಸು. ಅವನಿಗೆ ಅವನದೇ ಆದ-ರೂಪಿಸಿಕೊಂಡ-ರಾಜಕೀಯ ಪರಿಭಾಷೆ ಇದೆ. ಆ ಮೂಲಕ-ಅದರ ಮಾತೃಕೆಗಳಲ್ಲಿ-ಅವನ ಕ್ರಾಂತಿ ಸಂಭವಿಸಿದೆ. ಆ ರಾಜಕೀಯ ಪರಿಭಾಷೆಯನ್ನು ಅರಿಯದ ಹೊರತು ನಾವು ಆ ಕ್ರಾಂತಿಯನ್ನು, ಅದರ ವೈಫಲ್ಯವನ್ನು, ಅದರ ಹಿಂದಿನ ಕಾರಣಗಳನ್ನು ಮತ್ತು ಅದರ ಇಂದಿನ ಅವಶೇಷ ರೂಪಗಳನ್ನು ಅರ್ಥಮಾಡಿಕೊಳ್ಳಲಾರೆವು.

ಆದರೆ ದುರದೃಷ್ಟಕರ ಸಂಗತಿಯೆಂದರೆ, ವಚನ ಸಾಹಿತ್ಯದ ಹೊರತಾಗಿ ಈ ಸಾಹಸವನ್ನರಿಯಲು ಇನ್ನಾವ ಆಕರಗಳೂ ನಮಗೆ ಸಿಗುತ್ತಿಲ್ಲ. ಲಭ್ಯ ಶಾಸನಗಳು ಹಾಗೂ ಜಾನಪದ ಐತಿಹ್ಯಗಳನ್ನು ಸಾಹಿತ್ಯದ ಜೊತೆ ಸಮನ್ವಯಿಸಿ ಹೊಸ ಆಕರ ಆಧಾರಗಳನ್ನು ನಿರ್ಮಿಸಿಕೊಳ್ಳ ಹೊರಟರೆ, ಆ ಆಧಾರಗಳು ಸೂಚಿಸುವ ತೀರ್ಮಾನಗಳು ಇಂದಿನ ಬಸವವಾದಿಗಳಿಗೆ ಪಥ್ಯವಾಗುವುದಿಲ್ಲ. ಉದಾಹರಣೆಗೆ ಇತ್ತೀಚೆಗೆ ಬಂಜಗೆರೆ ಜಯಪ್ರಕಾಶರು 'ಅನುಮಾನಿತ ಸತ್ಯ'ವೆಂದು ಪ್ರಸ್ತುತ ಪಡಿಸಿದ ಬಸವಣ್ಣನ ಜಾತಿ ಮೂಲ ಕುರಿತ ಚರ್ಚೆಯನ್ನು ಅದು ಬಸವಣ್ಣನ ತಾಯಿಯ ಶೀಲವನ್ನೇ ಪ್ರಶ್ನಿಸುವಂತಿದೆ ಎಂಬ ಅಶಿಕ್ಷಿತ ನೆಪವೊಡ್ಡಿ, ಅದಕ್ಕೆ ಅಧಿಕೃತ ಬಹಿಷ್ಕಾರವನ್ನೇ ಹಾಕಿಸಲಾಯಿತು. ಆದರೆ ಬಸವಣ್ಣನ ಹೆಸರಿನಲ್ಲೇ ಇರುವ ಮತ್ತು ಅನೇಕ ಕಟ್ಟಾ ವೀರಶೈವ ಸಂಶೋಧಕರ ಮತ್ತು ವಿದ್ವಾಂಸರ ಸಂಪಾದಕತ್ವದಲ್ಲೇ ಹಲವು ಕಡೆ ದಾಖಲಾಗಿರುವ ಈ ವಚನ ಸೂಚಿಸುವ ಶೀಲ ಸಂಸ್ಕೃತಿಯಾದರೂ ಎಂತಹುದು? ಅದು ಇಂದಿನ ಈ 'ಶೀಲವಾದಿ'ಗಳ ಶೀಲ ಕಲ್ಪನೆಯನ್ನೇ ಒಡೆದು ಹಾಕುವಂತಿದೆಯಲ್ಲಾ?:

> **... ಎನ್ನ ಸತಿ ನೀಲಲೋಚನೆ ಪೃಥ್ವಿಗಗ್ಗಳೆ ಚೆಲುವೆ**
> **ಆಕೆಯನ್ನು ಸಂಗಮದೇವಾ, ನೀ ಜಂಗಮ ರೂಪವಾಗಿ ಬಂದು**
> **ಎನ್ನ ಮುಂದೆ ಸಂಗವ ಮಾಡುತ್ತಿರಲು**
> **ಎನ್ನೊಡನಿದ್ದ ಸತಿಯೆಂದು ಮಾಯಕ್ಕೆ ಮರುಗಿನಾದರೆ**
> **ನಿಮ್ಮಾಣೆ ನಿಮ್ಮ ಪ್ರಮಥರಾಣೆ ಮನದೊಡೆಯ...**

ಹಾಗೇ, ಈ ವಚನ ಭಾಗದೊಂದಿಗೇ ಇನ್ನೊಂದಿಷ್ಟು ವಚನಗಳನ್ನು ಉದ್ಧರಿಸುತ್ತಾ ಖ್ಯಾತ ಸ್ತ್ರೀವಾದಿ ವಿಮರ್ಶಕಿ ಡಾ. ಎಂ.ಎಸ್.ಆಶಾದೇವಿ ಅವರು ಹೆಣ್ಣನ್ನು ಕುರಿತ ಬಸವಣ್ಣನ 'ಊಳಿಗಮಾನ್ಯಶಾಹಿ' ನಿಲುವನ್ನು ವಿಷದೀಕರಿಸಿದ್ದಾರಲ್ಲಾ? (ಹಾಗಾದರೆ ಬಸವಣ್ಣ ಎಂತಹ ಸಮಾಜವಾದಿ?) ಆಶಾದೇವಿಯವರು ಮುಂದುವರಿದು, ಬಸವಣ್ಣನ ಕ್ರಾಂತಿ, ಕೆಳ-ದಲಿತ ಜಾತಿಗಳ ವಿಷಯದಲ್ಲಿ ನಿಜವಾದಷ್ಟು ಹೆಣ್ಣಿನ ವಿಷಯದಲ್ಲಿ ಆಗಿಲ್ಲ ಎಂದೂ ಹೇಳುವರಲ್ಲಾ?(ಅವರ 'ಸ್ತ್ರೀಮತವನ್ನುತ್ತರಿಸಲಾಗದೆ' ಕೃತಿಯನ್ನು ನೋಡಿ)

ಬಸವಣ್ಣನ ಕ್ರಾಂತಿಯನ್ನು ನಮ್ಮ ಪ್ರಜ್ಞೆಯಾಳದ ನೋವಿನ ಹಲ್ಲಿನಂತೆ ಸಂವೇದಿಸದೆ, ನಮ್ಮೆಲ್ಲ ಆಧುನಿಕ ನಿರೀಕ್ಷೆಗಳನ್ನು ಅದರಲ್ಲಿ ಕಂಡು ನಲಿಯಲು ಅಥವಾ ನುಲಿಯಲು ಯತ್ನಿಸುವ ಪ್ರವೃತ್ತಿಯೇ ಇಷ್ಟೆಲ್ಲ ತಾತ್ವಿಕ, ಭಾವನಾತ್ಮಕ ಪಡಿಪಾಟಲುಗಳಿಗೆ ಕಾರಣವಾಗಿದೆಯೆಂದು ನನಗನ್ನಿಸುತ್ತದೆ. ವರ್ತಮಾನವನ್ನು ಚರಿತ್ರೆಯ ಮುಂದುವರಿದ ರೂಪವಾಗಿಯಷ್ಟೇ ನೋಡುವ ಸರಳ ಚಾರಿತ್ರಿಕ ದೃಷ್ಟಿಯೇ ಇದಕ್ಕೆ ಕಾರಣವಾಗಿದೆ. ಇದು ಕಲ್ಯಾಣ ಕ್ರಾಂತಿಯ ಹಿಂದೆ ಯಾವೆಲ್ಲ ಕಾಲ, ದೇಶ ವಿಶಿಷ್ಟ ಚಾರಿತ್ರಿಕ ಒತ್ತಡಗಳು ಕೆಲಸ ಮಾಡಿವೆ ಎಂಬುದರ ಕಡೆ ಗಮನವನ್ನೇ ಹರಿಸದ ನಮ್ಮ ನೋಟದಲ್ಲಿನ, ವರ್ತಮಾನ ಸ್ಥಿತವಾದ 'ತುಂಬು' ಸಾಮಾಜಿಕ–ಸಾಹಿತ್ಯಕ–ಸಾಂಸ್ಕೃತಿಕ ಸ್ಥೂಲತೆಯೇ ಆಗಿದೆ. ಕಲ್ಯಾಣ ಕ್ರಾಂತಿಗೆ ಜಾತಿ–ಧರ್ಮಗಳಲ್ಲದೇ ಆ ಕಾಲಕ್ಕೆ ವಿಶಿಷ್ಟವಾದ ರಾಜಕೀಯ ಅರ್ಥಶಾಸ್ತ್ರದ ಆಯಾಮಗಳೂ ಇರಬಹುದಲ್ಲವೇ? ಜಾತಿ ವ್ಯವಸ್ಥೆಯ 'ಬಂಧನ'ಗಳೇ ಅವುಗಳೊಳಗಿನ ಜಾತಿಗಳ 'ಬಿಡುಗಡೆ'ಯ ಶಕ್ತಿಗಳನ್ನೂ ಉತ್ಪಾದಿಸುತ್ತಿದ್ದು; ೧೨ನೇ ಶತಮಾನದ ಹೊತ್ತಿಗೆ ಜಾತಿ ವ್ಯವಸ್ಥೆಯೊಳಗಿನ ಈ ರಾಜಕಾರಣ ಯಾವ ಹಂತ ತಲುಪಿತ್ತು ಎಂಬುದನ್ನು ಪರಿಶೀಲಿಸಬೇಕಲ್ಲವೇ? ಈ ಕಾಲಾವಧಿಯಲ್ಲಿನ ಆರ್ಥಿಕ ಚಟುವಟಿಕೆಗಳು ವಿನ್ಯಾಸಗೊಳ್ಳುತ್ತಿದ್ದ ರೀತಿ, ಅವು ರೂಪಿಸುತ್ತಿದ್ದ ಹೊಸ ಹಿತಾಸಕ್ತಿಗಳು ಮತ್ತು ಆ ಮೂಲಕ ಸೃಷ್ಟಿಯಾಗುತ್ತಿದ್ದ ಸಾಮಾಜಿಕ ವೈರುಧ್ಯಗಳು ಹಾಗೂ ಅವು ಮತ್ತೆ ಧಾರ್ಮಿಕ ನೆಲೆಯಲ್ಲಿ ಉಂಟುಮಾಡುತ್ತಿದ್ದ ಪರಿಣಾಮಗಳ ಅಧ್ಯಯನವನ್ನು ನಮ್ಮ ಸಾಮಾಜಿಕ–ಸಾಂಸ್ಕೃತಿಕ–ಸಾಹಿತ್ಯಕ ಅಧ್ಯಯನದ ಜೊತೆಗೆ ಜೋಡಿಸಿ ನೋಡಬೇಕಲ್ಲವೆ?

ಬಂಜಗೆರೆ ಜಯಪ್ರಕಾಶರ 'ಕನ್ನಡ ರಾಷ್ಟ್ರೀಯತೆ' ಸಂಪ್ರಬಂಧದಲ್ಲಿ ಕಾಣುವ ಇಂತಹದೊಂದು ಬಹುಶಿಸ್ತೀಯ ಅಧ್ಯಯನದ ಪ್ರಯತ್ನದ ಹೊರತಾಗಿ ನಮ್ಮ ಇತಿಹಾಸಕಾರರಾಗಲಿ, ಸಮಾಜಶಾಸ್ತ್ರಜ್ಞರಾಗಲಿ ಈ ದಿಕ್ಕಿನಲ್ಲಿ ಯಾವುದೇ ಗಮನಾರ್ಹ ಕೆಲಸ ಮಾಡಿರುವುದು ನನ್ನ ಗಮನಕ್ಕಂತೂ ಬಂದಿಲ್ಲ. ಹಾಗಾಗಿಯೇ ಕಲ್ಯಾಣ ಕ್ರಾಂತಿ ಎಂಬುದು ಸಾಹಿತ್ಯ ವಿಮರ್ಶಕರ, ಸಂಸ್ಕೃತಿ ಚಿಂತಕರ, ರಾಜಕಾರಣಿಗಳ ಮತ್ತು ಮಠಾಧಿಪತಿಗಳ 'ಕಲ್ಪನಾಶೀಲ' ಚಟುವಟಿಕೆಗಳ ಆಡೊಂಬಲವಾಗಿದೆ! ಹನ್ನೆರಡನೇ ಶತಮಾನದ ಹೊತ್ತಿಗೆ ಕಲ್ಯಾಣ ಕರ್ನಾಟಕ ಭಾಗದಲ್ಲಿ ಆಯಗಾರ (ಶೂದ್ರ) ವರ್ಗವೇ ವ್ಯಾಪಾರೀ(ವೈಶ್ಯ) ವರ್ಗವಾಗಿ ಬೆಳೆದು, ಜಾತಿ ನೆಲೆಯ ಸಂಬಂಧಗಳನ್ನು ತಲೆಕೆಳಗು ಮಾಡತೊಡಗಿತ್ತು. ಮತ್ತು ಈ ಸಾಮಾಜಿಕ ಸ್ಥಿತ್ಯಂತರದ ಸಂದರ್ಭವನ್ನು ನಿಭಾಯಿಸುವ ಜವಾಬ್ದಾರಿ ಮಂತ್ರಿಯಾಗಿದ್ದ ಬಸವಣ್ಣನದಾಗಿತ್ತು; ಈ ನಿಭಾವಣೆಯ ಕಥೆಯೇ ಕಲ್ಯಾಣ ಕ್ರಾಂತಿಯ ಕಥೆ ಎಂದು ಬಂಜಗೆರೆಯವರು, ಆರ್.ಎನ್. ನಂದಿಯವರ ಸಂಶೋಧನೆಗಳನ್ನು–ಇದು ಬಲವಂತದ ಮಾರ್ಕ್ಸ್‌ವಾದಿ ವ್ಯಾಖ್ಯಾನ ಎಂದು ಹೇಳಲಾಗುವುದಾದರೂ–ಉಲ್ಲೇಖಿಸಿ ಆಡಿರುವ ಮಾತುಗಳಿಗೆ ಇನ್ನಷ್ಟು ಆಧಾರಗಳೂ, ಬೆಂಬಲವೂ ಬೇಕಿದೆ, ನಿಜ. ಆದರೆ ನಮ್ಮ ಹೆಮ್ಮೆಯಾಗಿರುವ ಕಲ್ಯಾಣ ಕ್ರಾಂತಿಯನ್ನು ಇಂದಿನ ಸಂದರ್ಭಕ್ಕೆ ಪ್ರಸ್ತುತಪಡಿಸಿಕೊಂಡು ಅರ್ಥಮಾಡಿಕೊಳ್ಳಬೇಕಾದರೆ, ಈ ಒಂದು 'ಲೌಕಿಕ' ದೃಷ್ಟಿಯೂ ಅವಶ್ಯಕ. ಆಗ ಬಸವಣ್ಣ, ಸ್ಥಿತ್ಯಂತರದಲ್ಲಿರುವ ವರ್ಗವೊಂದರ ಲೌಕಿಕ ನಾಯಕನಾಗಿಯೂ ಕಾಣತೊಡಗಿ, ಕಲ್ಯಾಣ ಕ್ರಾಂತಿಯ ರೋಮಾಂಚನದ ಹಲವು ಆಯಾಮಗಳು ತುಸು ಮಸುಕಾಗ ತೊಡಗುತ್ತವೆ

ಮತ್ತು ಚಾರಿತ್ರಿಕ ವಾಸ್ತವದ ನೆಲೆಗಳು ಮುನ್ನೆಲೆಗೆ ಬರತೊಡಗುತ್ತವೆ. ಮತ್ತೂ ಮುಖ್ಯವಾಗಿ, ಈ 'ಕ್ರಾಂತಿ' ಎಲ್ಲರಿಗೂ ಎಲ್ಲ ಕನಸುಗಳನ್ನೂ ಒದಗಿಸುವ ಇಕ್ಕಟ್ಟಿನಿಂದ ಪಾರಾಗುತ್ತದೆ. ಬಸವಣ್ಣ ತನ್ನ ಕಾಲ ದೇಶಗಳ ಮಿತಿಗಳೊಳಗೆ ಒಬ್ಬ ಮನುಷ್ಯ ಮಾತ್ರನಾಗಿ ಏನೆಲ್ಲ ಎತ್ತರಗಳನ್ನು ಏರಬಲ್ಲವನಾಗಿದ್ದನೋ ಅಷ್ಟು ಎತ್ತರಗಳನ್ನು ಮಾತ್ರ ಏರಿದ, ಕಟು 'ಚಾರಿತ್ರಿಕ ವಾಸ್ತವ'ದ ಚಿತ್ರ ದೊರಕುತ್ತದೆ.

ಹಾಗೇ ಈ ಕ್ರಾಂತಿ ೧೫-೧೬ನೇ ಶತಮಾನದ ಹೊತ್ತಿಗೆ ಸೃಷ್ಟಿಸಿದ್ದ ಪ್ರತಿ ಕ್ರಾಂತಿಯ ಪರಿಣಾಮಗಳ-ಹಲವು ಶೂನ್ಯ ಸಂಪಾದನೆಗಳೂ ಸೇರಿದಂತೆ, ಕಲ್ಲುಮಠದ ಪ್ರಭುದೇವರ 'ಲಿಂಗಲೀಲಾ ವಿಲಾಸ ಚಾರಿತ್ರ'ದಿಂದ ಹಿಡಿದು ವಿರೂಪಾಕ್ಷ ಪಂಡಿತನ 'ಚೆನ್ನಬಸವ ಪುರಾಣ'ದವರೆಗಿನ ವೀರಶೈವ ಧರ್ಮದ ಸಂಸ್ಥೀಕರಣ ಮತ್ತು ಸಂಸ್ಕೃತೀಕರಣದ ಪ್ರಯತ್ನಗಳು-ಒಡಲಿನಿಂದಲೇ ಏಕೆ ಮತ್ತು ಹೇಗೆ ಕರ್ನಾಟಕದ ತತ್ವಪದಗಳ ಮತ್ತು ಮಲೆಮಾದೇಶ್ವರ, ಮಂಟೇಸ್ವಾಮಿ ಇತ್ಯಾದಿ ಜನಪದ ಮಹಾಕಾವ್ಯಗಳ ವಿಶಿಷ್ಟ ಸಾಮಾಜಿಕ (ಬರೀ ಸಾಹಿತ್ಯಕವಲ್ಲ ಎನ್ನುವ ಅರ್ಥದಲ್ಲಿ) ಪ್ರತಿಭಟನೆಗಳ ಪರಂಪರೆ ಆರಂಭವಾಯಿತು ಎಂಬುದು ಗೊತ್ತಾಗುತ್ತದೆ. ಆ ಮೂಲಕವೇ ನಿಜವಾದ ಬಸವ ಪರಂಪರೆ ಎಲ್ಲಿ, ಯಾವ ನೆಲೆಯಲ್ಲಿ ಹೇಗೆ ಮುಂದುವರಿದಿದೆ ಎಂಬುದೂ ಅರಿವಿಗೆ ಬರುತ್ತದೆ. ಆಗ ಕಲ್ಯಾಣ ಕ್ರಾಂತಿ ಕನ್ನಡ ಪ್ರಜ್ಞೆಯ ಪಾಲಿಗೆ ಏಕೆ ಮತ್ತು ಹೇಗೆ ನೋವಿನ ಹಲ್ಲಾಗಿದೆ ಎಂಬುದೂ ಗೊತ್ತಾಗುತ್ತದೆ. ಜೊತೆಗೇ ಬಾಲಗಂಗಾಧರರ ಶಿಷ್ಯರಿಗೂ, ಸ್ತ್ರೀವಾದಿ ಅಥವಾ ಇನ್ನಾವುದೇ ವಾದಿಗಳಾದ ವಿಮರ್ಶಕರಿಗೂ ತಮ್ಮ ನೋಟಗಳು ಹೇಗೆ ಕೇವಲ ಶಿಕ್ಷಿತ ನೋಟಗಳಾಗಿ-ಅಧ್ಯಯನಗಳಿಂದ ತಮಗೆ ಬೇಕಾದ್ದನ್ನಷ್ಟೇ ಪಡೆಯುವ-ಆಧುನಿಕ ಅಧ್ಯಯನಗಳ 'ಸ್ವಾರ್ಥಪರತೆ'ಯ ಪ್ರತೀಕಗಳಾಗಿವೆ ಎಂಬುದೂ ತಿಳಿಯುತ್ತದೆ.

ಇನ್ನೂ ಮುಂದುವರಿದು ಹೇಳುವುದಾದರೆ, ಇದು ನಮ್ಮ ವೀರಶೈವ ಮಠಾಧಿಪತಿಗಳ ಆತ್ಮ ಸಾಕ್ಷಿಯನ್ನೂ ಕೆಣಕಿ, ಬಸವ ಪರಂಪರೆಯ ನಿಜವಾದ ವಾರಸುದಾರಿಕೆ ಎಂದರೆ, ಕಲ್ಯಾಣ ಕ್ರಾಂತಿ ಎಂಬ ನೋವಿನ ಹಲ್ಲಿಗೆ ನೋವು ನಿವಾರಕಗಳ ಚಿಕಿತ್ಸೆಗೆ ಬದಲಾಗಿ ಬೇರು ಮುಟ್ಟುವ(Root canal?) ಚಿಕಿತ್ಸೆ ನೀಡುವುದೇ ಆಗಿದೆ ಎಂಬ ಅರಿವನ್ನೂ ಹುಟ್ಟಿಸಬಹುದಾಗಿದೆ. ಅದಕ್ಕಾಗಿ ಅವರು ಬಸವ ಪರಂಪರೆಯ ನಿಜವಾದ ಬೇರು ಈಗ ಎಲ್ಲಿದೆ ಎಂಬುದರ ಕಡೆಗೆ ಗಮನ ಹರಿಸಬೇಕಾಗಿದೆ.

(ಮೇ ೨೫, ೨೦೦೮, 'ವಿಕ್ರಾಂತ ಕರ್ನಾಟಕ')

೨೨. ಎಚ್ಚರ ತಪ್ಪುತ್ತಿರುವ ಮಠಾಧೀಶರೂ, ಬೆಳೆಯುತ್ತಿರುವ ಜಾತಿ ರಾಜಕಾರಣವೂ...

ನಾನು ಬಾಲ್ಯದಿಂದ ಕಂಡ ಹಾಗೂ ತುಮಕೂರಿನ ನನ್ನ ಕೆಲವು ಸ್ನೇಹಿತರು ಏನೆಲ್ಲ ಪ್ರತಿಕೂಲ ಮಾಹಿತಿ ನೀಡಿದರೂ, ನಾನು ಗೌರವವನ್ನು ಕಳೆದುಕೊಳ್ಳದಿದ್ದಷ್ಟು ನನ್ನ ಕಣ್ಣಲ್ಲಿ ದೊಡ್ಡವರಾಗಿದ್ದ ಸಿದ್ಧಗಂಗಾ ಮಠಾಧೀಶರು, ಇತ್ತೀಚೆಗೆ ಶಿವಮೊಗ್ಗದಲ್ಲಿ ತಾಂತ್ರಿಕ ಕಾಲೇಜೊಂದನ್ನು ಉದ್ಘಾಟಿಸಲು ಬಂದು, ಸಮ್ಮಿಶ್ರ ಸರ್ಕಾರವನ್ನು ಹೊಗಳಿ ಹೋದಾಗ ತುಂಬ ಮುಜುಗರವೆನ್ನಿಸಿತು. ಉಪಮುಖ್ಯಮಂತ್ರಿ ಯಡಿಯೂರಪ್ಪನವರ ಕುಟುಂಬ ಬೇನಾಮಿಯಾಗಿ ಹಣ ಹೂಡಿ ಆರಂಭಿಸಲಾಗಿರುವುದೆಂದು ಇಲ್ಲಿ ಜನಜನಿತವಾಗಿರುವ, ತಾಂತ್ರಿಕ ಕಾಲೇಜಿನ ಉದ್ಘಾಟನಾ ಸಮಾರಂಭದಲ್ಲಿ ಸ್ವಾಮೀಜಿಯುವರಿಗೆ; ಈ ಮಾತುಗಳನ್ನಾಡುವ ಔಚಿತ್ಯದ ಕಡೆಗಷ್ಟೇ ಅಲ್ಲ, ತಾವು ಆಡಿದ ಈ ಮಾತು ಇಂದಿನ ಜಾತಿವಾದಿ ರಾಜಕೀಯ ಸಂದರ್ಭದಲ್ಲಿ ಯಾವ ಯಾವ ಅರ್ಥಗಳನ್ನು ಪಡೆಯಬಹುದು ಎಂಬುದರ ಕಡೆಗೂ ಗಮನವಿರಬೇಕಿತ್ತು ಎಂದು ನನ್ನಂತಹ ಯಾರಿಗಾದರೂ ಅನ್ನಿಸದಿರದು.

ನಾನು ನನ್ನ ಬಾಲ್ಯದಿಂದ ನೋಡಿದಂತೆ, ಸಿದ್ಧಗಂಗಾ ಮಠ ಲಿಂಗಾಯ್ತರ ಮಠವಾದರೂ, ಲಿಂಗಾಯ್ತರದೇ ಮಠ ಎಂದು ಹೇಳುವಂತಿರಲಿಲ್ಲ. ಆದಿ ಚುಂಚನಗಿರಿ ಮಠ ಸ್ಥಾಪನೆಯಾಗುವವರೆಗೂ, ಆ ಮಠವನ್ನು ಲಿಂಗಾಯ್ತರಷ್ಟೇ ಒಕ್ಕಲಿಗರೂ ಪೋಷಿಸಿದರು. ಅಷ್ಟೇ ಅಲ್ಲ, ದಕ್ಷಿಣ ಬಯಲು ಸೀಮೆಯ ಎಲ್ಲ ಜಾತಿಗಳವರೂ ಆ ಮಠಕ್ಕೆ ವಾರ್ಷಿಕವಾಗಿ ತಮ್ಮ ಕೈಲಾದಷ್ಟು ದವಸ-ಧಾನ್ಯ, ಸೌದೆ, ಹಣ ಒದಗಿಸುತ್ತಾ ಬಂದು, ಅದರ ಅಪ್ರತಿಮ ವಿದ್ಯಾ ಸೇವೆಗೆ ಕಾರಣಕರ್ತರಾದರು. ಮೊದಮೊದಲು ಮಠ ಊಟೋಪಚಾರದ ವಿಷಯಗಳಲ್ಲಿ ಜಾತಿ ಭೇದದ ಟೀಕೆಯನ್ನು ಎದುರಿಸಿತದಾರೂ, ನಂತರ ಕಾಲಕ್ಕೆ ತಕ್ಕಂತೆ ಎಲ್ಲ ಜಾತಿಗಳ ವಿದ್ಯಾರ್ಥಿಗಳಿಗೂ ಸಮಾನ ಅವಕಾಶಗಳನ್ನಲ್ಲದಿದ್ದರೂ, ಸಮಾನ ಅನುಕೂಲಗಳನ್ನೊದಗಿಸುವ ವಿದ್ಯಾಕೇಂದ್ರವಾಗಿ ಬೆಳೆಯಿತು; ಸ್ವತಃ ಸ್ವಾಮೀಜಿ ತಮ್ಮ ಸಾರ್ವಜನಿಕ ಭಾಷಣಗಳಲ್ಲಿ ಎಂದೂ ವಚನಗಳನ್ನು ಉದ್ಧರಿಸಿದ ನೆನಪು ನನಗಿಲ್ಲ. ಹೆಚ್ಚಾಗಿ ಅವರದ್ದು ಸ್ವಾಮಿ ವಿವೇಕಾನಂದರ ಉಲ್ಲೇಖಗಳು-ಅದೂ ಇಂಗ್ಲಿಷಿನಲ್ಲಿ! ನಮಗಾಗ ಸ್ವಾಮೀಜಿಯೊಬ್ಬರು ಇಂಗ್ಲಿಷ್ ಮಾತುಗಳನ್ನು ಉಲ್ಲೇಖಿಸುವುದೇ ಬೆರಗಿನ, ರೋಮಾಂಚನದ ಸಂಗತಿ.

ಬಾಲ್ಯದ ಸುಮಾರು ಮುವ್ವತ್ತು ವರ್ಷಗಳ ನಂತರ ಮತ್ತೆ ಅವರನ್ನು ನಾನು ನೋಡಿದಾಗ, ಅವರಾಗಲೇ ವೃದ್ಧಾಪ್ಯ ಪ್ರವೇಶಿಸಿ ಹಣ್ಣಾಗಿದ್ದರು. ನಮ್ಮ ಗೆಳೆಯರ ಆಹ್ವಾನದ ಮೇರೆಗೆ

ತುಮಕೂರಿನಲ್ಲಿ ಸ್ವಾಮೀಜಿಯವರ ಸಮ್ಮುಖದಲ್ಲಿ ನನ್ನ ಪತ್ನಿ ಬುದ್ಧನನ್ನು ಕುರಿತ ಪುಸ್ತಕವೊಂದನ್ನು ಬಿಡುಗಡೆ ಮಾಡಿದ ಸಮಾರಂಭದಲ್ಲಿ ನಾನು ಅವರನ್ನು ಮೊದಲ ಬಾರಿಗೆ ಹತ್ತಿರದಿಂದ ಕಂಡು ನಮಸ್ಕರಿಸಿದೆ. ಹೆಚ್ಚಾಗಿ ದಲಿತ ಗೆಳೆಯರೇ ತುಂಬಿದ್ದ ಆ ಸಮಾರಂಭದಲ್ಲಿ ಅವರು, ಅಂಗೂಲಿ ಮಾಲಾನನ್ನು ಬುದ್ಧ ಪರಿವರ್ತಿಸಿದ ರೀತಿಯನ್ನು ಎಷ್ಟು ಹೃದಯಂಗಮವಾಗಿ ವರ್ಣಿಸಿದರೆಂದರೆ, ಬುದ್ಧನ ಸಮಸ್ಥಿತಿಯನ್ನು ಒಂದರೆ ಗಳಿಗೆಯಾದರೂ ಅನುಭವಿಸದ ಮನುಷ್ಯ ಈ ರೀತಿ ಮಾತಾಡಲಾರ ಎಂದು ನನಗನ್ನಿಸಿ, ಸ್ವಾಮೀಜಿ ಕುರಿತ ನನ್ನ ಗೌರವ ಬೇರೆ ನೆಲೆಯನ್ನೇ ತಲುಪಿತು. ವಿದ್ಯಾರ್ಥಿಗಳನ್ನು ಬೆಳಗಿನ ಝಾವಕ್ಕೇ ಎಬ್ಬಿಸಿಕೊಂಡು ಕಾಡಿಗೆ ಹೋಗಿ ಸೌದೆ ತರುವ, ಬಾಲ ವಿದ್ಯಾರ್ಥಿಗಳಿಗೆ ಸ್ವತಃ ತಾವೇ ಸ್ನಾನ ಮಾಡಿಸಿ ಬಟ್ಟೆ ಹಾಕುವ, ಪಾಠ ಹೇಳುವ, ಆಲಸಿ ಹಾಗೂ ತುಂಟ ಹುಡುಗರಿಗೆ ನಿರ್ದಾಕ್ಷಿಣ್ಯವಾಗಿ ಬಡಿದು ಬುದ್ಧಿ ಕಲಿಸುವ ಗುರುವಾಗಿದ್ದ ಈ ಸ್ವಾಮೀಜಿ, ಜ್ಞಾನದಲ್ಲೂ ಉನ್ನತ ಹಂತಕ್ಕೆ ಏರಿದವರಾಗಿದ್ದರು. ಕರ್ಮಯೋಗದ ಮೂಲಕವೇ ಜ್ಞಾನಯೋಗ ಸಾಧಿಸಿದ್ದವರು ಅವರು. ಆದರೆ ಅಂಥವರಿಗೇಕೆ ಈಗ ಈ ಇಳಿವಯಸ್ಸಿನಲ್ಲಿ ರಾಜಕಾರಣಿಗಳನ್ನು ಓಲೈಸಿ ಮಾತನಾಡುವ ಒತ್ತಡ? ಕಾಲ ಧರ್ಮ ಗುರುಗಳನ್ನೂ ಬಿಡದೆ?

ಸ್ವಾಮೀಜಿಗಳು ಆಳುವವರನ್ನು ಒಳ್ಳೆಯ ಕೆಲಸ ಮಾಡಿ ಎಂದು ಆಶೀರ್ವದಿಸುವುದು ಬೇರೆ; ಒಳ್ಳೆಯ ಕೆಲಸ ಮಾಡುತ್ತಿದ್ದೀರಿ ಎಂದು, ಅದೂ ಕರೆದವರು ಏತಕ್ಕೆ ಮತ್ತು ಎಂತಹ ಕೆಲಸಕ್ಕೆ ಕರೆದಿದ್ದಾರೆ ಎಂಬುದನ್ನರಿಯದಂತೆ, ಅರ್ಹತಾ ಪತ್ರ ನೀಡುವುದು ಬೇರೆ. ಸಾಮಾನ್ಯ ಜನರಿಗೇ ಜಿಗುಪ್ಸೆ ಬರುವಷ್ಟು ವಿಕ್ಷಿಪ್ತಗೊಂಡಿರುವ ಇಂದಿನ ರಾಜಕೀಯ ಪರಿಸ್ಥಿತಿಯಲ್ಲಿ ಆಳುವವರಿಗೆ ಎಚ್ಚರಿಕೆಯ ಮಾತುಗಳಿಗೆ ಬದಲಾಗಿ ಅರ್ಹತಾ ಪತ್ರ ನೀಡುವುದು, ನನ್ನಂತಹ ಅವರ ಅಭಿಮಾನಿಗಳಿಗೆ ಮುಜುಗರವನ್ನುಂಟು ಮಾಡುವುದಷ್ಟೇ ಅಲ್ಲ; ಅವರ ಈ ವರ್ತನೆ ಹಲವರ ಕಣ್ಣಲ್ಲಿ ಅನುಮಾನಾಸ್ಪದ ಕೂಡಾ ಅನ್ನಿಸಿದರೆ ಆಶ್ಚರ್ಯವಿಲ್ಲ. ಇದಕ್ಕೆ ಪೂರಕವಾಗಿ, ಅಂದಿನ ಸಮಾರಂಭದಲ್ಲಿ ಯಡಿಯೂರಪ್ಪನವರು ಪ್ರಕಟಿಸಿದ ಸ್ವರ್ಣ ತುಲಾಭಾರಕ್ಕೆ, ಸ್ವಾಮೀಜಿ ತಲೆಯಲ್ಲಾಡಿಸಿ ಹೋಗಿದ್ದಾರೆ. ಈಗಾಗಲೇ ಈ ಕಾರ್ಯಕ್ಕಾಗಿ ತಲಾ ಒಂದು ಕೇಜಿ ಚಿನ್ನ ಕೊಡಲೊಪ್ಪಿರುವ ನೂರೊಂದು ಜನರ ಪಟ್ಟಿಯನ್ನು ನಮ್ಮ ಅರ್ಥ ಮಂತ್ರಿಯೂ ಆದ ಯಡಿಯೂರಪ್ಪನವರು ಸಿದ್ಧಪಡಿಸಿದ್ದಾರಂತೆ...ಇದು ನಿಜವಾದ ವಿಪರ್ಯಾಸ! ಈ ತುಲಾಭಾರವೇನಾದರೂ ಕಾರ್ಯಗತವಾದರೆ, ಸಿದ್ಧಗಂಗಾ ಮಠದ ಸಾಧನೆಗೆ ಮಾಡಲಾಗುವ ಇದಕ್ಕಿಂತ ದೊಡ್ಡ ಅವಮಾನ ಇನ್ನೊಂದಿರಲಾರದು. ಉಳ್ಳವರ ಸಂಪತ್ತಿನ ಈ ಅಶ್ಲೀಲ ಆಡಂಬರದ ಪ್ರದರ್ಶನಕ್ಕೆ ಈ ಶತಾಯುಷಿ ಸ್ವಾಮೀಜಿ ನಿಮಿತ್ತವಾದರೆ, ಶ್ರೀಸಾಮಾನ್ಯನ ಆಸೆ ಭರವಸೆಗಳೊಂದಿಗೆ ಅವರೆಲ್ಲರ ಬೆವರು, ಕಣ್ಣೀರು ಹಾಗೂ ಕಾಣಿಕೆಗಳ ಮೇಲೇ ಕಟ್ಟಿರುವ ಮಹಾನ್ ಸಂಸ್ಥೆಯ ಘನತೆಗೆ ಕುಂದುಂಟು ಮಾಡಿದಂತೆ. ಅವರ ಎಂಭತ್ತು ವರ್ಷಗಳ ಅಪ್ರತಿಮ ಸಾಧನೆಯನ್ನು ಯಾವುದೋ ಒಂದು ದುರ್ಬಲ ಘಳಿಗೆಯಲ್ಲಿ ಯಾರಿಗೋ ಒತ್ತೆ ಇಟ್ಟಂತೆ...

ಅಥವಾ ದೂರದ ಬೆಟ್ಟ ನುಣ್ಣಗೆಂಬಂತೆ, ಈ ಮಠದ ಬಗ್ಗೆ, ಈ ಮಠಾಧೀಶರ ಬಗ್ಗೆ ನನ್ನ ಕಲ್ಪನೆಯೇ ತಪ್ಪಾಗಿದೆಯೋ? ಹಾಗೆಂದು ಯೋಚಿಸಲೂ ನನಗೆ ಕಷ್ಟವಾಗುತ್ತಿದೆ.

ಏಕೆಂದರೆ ಈಗಾಗಲೇ ಹಳೆಯ ನೈತಿಕತೆಯ ಬೇರುಗಳು ಅಲ್ಲಾಡುತ್ತಾ ಹೊಸದೊಂದು ನೈತಿಕತೆಯ ಉದಯವಾಗುತ್ತಿರುವಂತೆ ತೋರುತ್ತಿರುವ ಈ ಹೊತ್ತಿನಲ್ಲಿ; ನಮ್ಮ ನಿಲುವುಗಳೆಲ್ಲ ಇತರರಿಗೆ ಭೋಳೆ ಎನಿಸುತ್ತಿದಯೇ ಎಂಬ ಶಂಕೆಯ ನಡುವೆಯೇ, ನನ್ನಂಥವರು ಸುತ್ತಮುತ್ತಲ ವಿದ್ಯಮಾನಗಳನ್ನು ಖಂಡನೆಯೊಂದಿಗೇ ಗಮನಿಸಬೇಕಾದ ಹಿಂಸೆಯನ್ನು ಅನುಭವಿಸುತ್ತಿರುವುದರ ಮಧ್ಯೆ ಇಂತಹ ಹಿಂಸೆಗಳು ಮತ್ತೆ ಮತ್ತೆ ಎದುರಾಗುತ್ತಿವೆ. ಮೊನ್ನೆ ಬಳ್ಳಾರಿಯಲ್ಲಿ ಸಾಮೂಹಿಕ ವಿವಾಹದ ಹೆಸರಿನಲ್ಲಿ ನಡೆದ ಗಣಿ ಹಣದ ರಾಜಕೀಯ ವಿಜೃಂಭಣೆಯ ನಡುವೆ ನಾನು ಮೆಚ್ಚಿದ ಇನ್ನೊಬ್ಬ ಸ್ವಾಮೀಜಿ- ಗದುಗಿನ ತೋಂಟದಾರ್ಯರು ಕಾಣಿಸಿಕೊಂಡಾಗ ನನಗೆ ಉಸಿರೇ ಕಟ್ಟಿದಂತಾಯಿತು. ಇವರಿಗೇನು–ದರ್ದು, ಇಂತಹ ಪರೋಕ್ಷ ರಾಜಕೀಯ ಪ್ರದರ್ಶನಗಳಲ್ಲಿ ಭಾಗವಹಿಸಿ ಆಶೀರ್ವಚನ ನೀಡಲು ಎಂಬುದು ಅರ್ಥವಾಗದ ಹಿಂಸೆಯಿದು. ಇವರೂ ಹೊಸ ನೈತಿಕತೆಯನ್ನು ಇಷ್ಟು ಸುಲಭವಾಗಿ ಒಪ್ಪಿಕೊಂಡುಬಿಟ್ಟರೆ ಎಂಬ ದಿಗ್ಭ್ರಮೆಯ ಹಿಂಸೆಯಿದು. ಬಳ್ಳಾರಿಯ ಸ್ವತಃ ಅವರ ಸಾಮಾನ್ಯ ಭಕ್ತರಿಗೇ ಅಧರ್ಮವಾಗಿ ಕಾಣುತ್ತಿರುವುದು, ಇವರಿಗೆ ಧರ್ಮವಾಗಿ ಕಾಣುತ್ತಿರುವುದರ ರಹಸ್ಯವಾದರೂ ಏನು? ಬಹುಶಃ ಭಕ್ತರಿಗೆ ಸಾಕಲು ತಮ್ಮ ಹೆಂಡತಿ ಮಕ್ಕಳಷ್ಟೇ ಇದ್ದರೆ, ಸ್ವಾಮಿಜಿಗೆ ಸಾಕಬೇಕಾದ ದೊಡ್ಡ ಸಾಮ್ರಾಜ್ಯವೇ ಇರುವುದು ಇದಕ್ಕೆ ಕಾರಣವಿರಬಹುದು!

ಸಂಸಾರ ಬಿಟ್ಟು ಬಂದ ಸ್ವಾಮೀಜಿಗಳೆನಿಸಿಕೊಂಡವರು ಇಂದು ಅತಿ ದೊಡ್ಡ ಸಂಸಾರಗಳ ಒಡೆಯರೇ ಆಗಿದ್ದಾರೆ. ಕೆಲವರಂತೂ ಎರಡೂ ರೀತಿಯ 'ಸಂಸಾರ'ಗಳನ್ನೂ 'ನೇಮ ನಿಷ್ಠೆ'ಗಳೊಂದಿಗೆ ಸರಿದೂಗಿಸಿಕೊಂಡು ಹೋಗುವಷ್ಟು 'ಸಮರ್ಥ'ರಾಗಿದ್ದಾರೆ! ಅನುಮಾನವಿದ್ದರೆ, ಉಡುಪಿಗೊಮ್ಮೆ ಹೋಗಿಬನ್ನಿ! ಇದಕ್ಕೆಲ್ಲ ತಕ್ಕಹಾಗೆ ಈ ಬಾರಿಯ ಕೃಷ್ಣ ಜನ್ಮಾಷ್ಟಮಿಯ ಆಚರಣೆಯ ಸಂದರ್ಭದಲ್ಲಿ ಅಲ್ಲಿನ ಸ್ವಾಮಿಯೊಬ್ಬರು 'ಅನಿಸುತಿದೆ ಏಕೋ ಇಂದು..' ಎಂಬ ಸಿನೆಮಾ ಪ್ರಣಯ ಗೀತೆಗೆ 'ಡ್ರಮ್ಸ್' ಬಾರಿಸಿ ಸಂತೋಷಪಟ್ಟಿದ್ದಾರೆ! ಮುಂದೆ ಇವರು ಇನ್ನೂ ಏನೇನನ್ನು ಮಾಡಿ ಸಂತೋಷ ಪಡುವ ಕಾಲ ಬರುವುದೋ ಕಾದು ನೋಡಬೇಕು! ಇದನ್ನೆಲ್ಲ ಭಕ್ತರೂ ಮನರಂಜನೆ ಎಂಬಂತೆ, ಕೀಟಲೆಯ ಜೊತೆಗೋ ಅಥವಾ ಶಾಪ ಹಾಕುತ್ತಲೋ ಜಾತ್ಯಾಭಿಮಾನದ ಒತ್ತಡದಲ್ಲಿ ಒಪ್ಪಿಕೊಳ್ಳತೊಡಗಿದ್ದಾರೆ! ಹೀಗಾಗಿ ಮಠಗಳು ಇಂದು ಸರಳತೆಯ, ಸಭ್ಯತೆಯ ಶ್ರದ್ಧಾ ಕೇಂದ್ರಗಳಾಗದೆ, ಮನರಂಜನೆ–ವ್ಯಾಪಾರ–ವ್ಯವಹಾರಗಳ ದೊಡ್ಡ ಕೇಂದ್ರಗಳೆನಿಸಿಕೊಂಡಿವೆ. ಕೆಲವರದು ದೊಡ್ಡ ವ್ಯವಹಾರ, ಕೆಲವರದು ಚಿಕ್ಕ ವ್ಯವಹಾರ. ದೊಡ್ಡ ವ್ಯವಹಾರವೆಂದರೆ, ವಿದ್ಯಾ ಪ್ರಸಾರದ ಹೆಸರಿನಲ್ಲಿ ಅಂತಾರಾಷ್ಟ್ರೀಯ ಮಟ್ಟದ ವ್ಯವಹಾರ. ಇಂದು ಕರ್ನಾಟಕದ ಅತ್ಯಂತ ಶ್ರೀಮಂತ ಸಂಸ್ಥೆಗಳ ಪಟ್ಟಿ ತಯಾರಿಸಿದರೆ, ಅದರಲ್ಲಿ ಈ ಅನೇಕ ಮಠಗಳು ಸೇರುವುದರಲ್ಲಿ ಅನುಮಾನವಿಲ್ಲ. ಒಂದು ಕಾಲದಲ್ಲಿ ಬಡಬಗ್ಗರ ಮಕ್ಕಳಿಗೆ ಊಟ ವಿದ್ಯೆ ಒದಗಿಸುವ ಆಶ್ರಯ ಧಾಮಗಳಾಗಿ, ಜ್ಞಾನ ವೈರಾಗ್ಯ ಬೋಧನೆಗಳ ತಾಣವಾಗಿ ಆರಂಭವಾದ ಮಠಗಳು ಇಂದು ಬೃಹತ್ ಉದ್ಯಮ ಸಂಸ್ಥೆಗಳಂತೆ, ಹಣವುಳ್ಳವರ, ದೊಡ್ಡ ವ್ಯಾಪಾರಿಗಳ, ದಲ್ಲಾಳಿಗಳ, ಕಂತ್ರಾಟುದಾರರ, ಭ್ರಷ್ಟ ರಾಜಕಾರಣಿಗಳ, ಜಾತಿವಾದಿ ನಿವೃತ್ತ ಅಧಿಕಾರಿಗಳ ಸಹಕಾರಿ ಸಂಘಗಳಂತಾಗಿವೆ. ಹಾಗೇ ಇವು ಉನ್ನತ ರಾಜಕಾರಣಿಗಳ ಹಾಗೂ ಅತಿ ಶ್ರೀಮಂತರ ಅಕ್ರಮ ಸಂಪತ್ತಿನ

ತಂಗುದಾಣಗಳೂ ಆಗಿವೆ ಎಂಬ ಆಪಾದನೆ ಹೊಸದೇನಲ್ಲ.

ಈಗಿನ ಬಹಳಷ್ಟು ಮಠಗಳು ತಿಂಗಳ ಬಡ್ಡಿಯ ಲೇವಾದೇವಿ ಕೇಂದ್ರಗಳಾಗಿವೆ. ಅದಕ್ಕೆ ಬೇಕಾದ ಸೂಕ್ತ 'ವ್ಯವಸ್ಥೆ'ಯನ್ನೂ ಅವು ಮಾಡಿಕೊಂಡಿವೆ! ಅಸಹಾಯಕರ, ವಿಧವೆಯರ ಸಂಪತ್ತನ್ನು ಜಾಣತನದಿಂದಲೋ, ಬೆದರಿಕೆಯಿಂದಲೋ ಲಪಟಾಯಿಸಿಕೊಂಡ ಎಷ್ಟು ಮಠಗಳಿಲ್ಲ? ಸಣ್ಣ ಮಠಗಳನ್ನು ದೊಡ್ಡ ಮಠಗಳು take over ಮಾಡಿದ ಎಷ್ಟು ಉದಾಹರಣೆಗಳಿಲ್ಲ? ಹೀಗೆ ಇವು, ಇತ್ತೀಚಿನ ಕಾರ್ಪೊರೇಟ್ ವಲಯದ ವ್ಯವಹಾರಗಳಿಗಿಂತ ಯಾವ ರೀತಿ ಕಡಿಮೆ ಇವೆ? ಹಾಗಾಗಿಯೇ ಇಂದಿನ ಮಠಾಧೀಶರಿಗೆ ನಿಜವಾಗಿಯೂ ಒಪ್ಪುವ ಅಭಿದಾನವೆಂದರೆ, ಕಂಪನಿ CEO! ಹೇಗೂ, ಅವು ಧಾರ್ಮಿಕ ಕೇಂದ್ರಗಳಾಗಿ ಎಂದೋ ತಮ್ಮ ಪ್ರಸ್ತುತತೆಯನ್ನು ಕಳೆದುಕೊಂಡಿವೆ. ಏಕೆಂದರೆ, ಅವುಗಳಿಂದ ಇತ್ತೀಚಿನ ಇತಿಹಾಸದಲ್ಲಿ ರಾಜ್ಯದ ಜನತೆಯ ಪಾರಮಾರ್ಥಿಕ ದಾಹವನ್ನು ತೀರಿಸಬಲ್ಲ, ನಿಜವಾದ ಜ್ಞಾನಿಯೆಂದು ಕರೆಯಬಹುದಾದ ಒಬ್ಬನೇ ಒಬ್ಬ ವ್ಯಕ್ತಿ ಹೊರಬಂದಿರುವ ಉದಾಹರಣೆಯಿಲ್ಲ. ಹೀಗಿರುವಾಗ ಇವನ್ನು ಧಾರ್ಮಿಕ ಸಂಸ್ಥೆಗಳೆಂದು ಕರೆಯುವುದು ಧರ್ಮಕ್ಕೇ ಮಾಡುವ ಅಪಚಾರವಾಗುತ್ತದೆ. ಜಾತಿ ಸಂಕುಚಿತತೆಯನ್ನು ಪ್ರೋತ್ಸಾಹಿಸುತ್ತಲೇ ಸಾಮಾಜಿಕ ಐಕ್ಯತೆಯನ್ನು ಸದಾ ಒಡೆದಿಟ್ಟುಕೊಂಡೇ ಬರುತ್ತಿರುವ ಈ ಮಠಗಳು, ಇಂದಿನ ಸಮಯಸಾಧಕ ಜಾತಿ ರಾಜಕಾರಣದ breeding centreಗಳಾಗಿವೆ.

ಇದೆಲ್ಲ ಗೊತ್ತಿದ್ದೂ ಜನ ಬಡ–ಶ್ರೀಮಂತರೆನ್ನದೆ, ಮಠಗಳಿಗೆ ಮುಗಿ ಬೀಳುತ್ತಿದ್ದಾರೆ. ಕೆಲವರು ತಮ್ಮ ಆಸ್ತಿ ಪಾಸ್ತಿಗಳನ್ನು ಇವುಗಳಿಗೆ ಬರೆದು ಕಣ್ಣು ಮುಚ್ಚುತ್ತಿದ್ದಾರೆ! ಇದಕ್ಕೆ ಮುಖ್ಯ ಕಾರಣ, ಜನರಿಗೆ ಬದಲಿ ಮತ್ತು ವಿಶ್ವಾಸಾರ್ಹ ಸಾಮಾಜಿಕ–ಸಾಂಸ್ಕೃತಿಕ ಸಂಘಟನೆಗಳು ಇಲ್ಲದೇ ಹೋಗಿರುವುದು. ಜೊತೆಗೆ, ಜಾತಿ ವ್ಯವಸ್ಥೆ ವಿರೋಧಿ ಆಂದೋಲನ, ಮೀಸಲಾತಿ ಆಂದೋಲನದ ಗೊಂದಲದಲ್ಲಿ ತನ್ನೆಲ್ಲ ತಾತ್ವಿಕತೆಯನ್ನು ಕಳೆದುಕೊಂಡು ಚದುರಿ ಹೋಗಿರುವುದು. ಜಾತಿಗೊಂದು ಮಠ ಮಾಡಿಕೊಟ್ಟು, ಜಾತಿ ವ್ಯವಸ್ಥೆಯ ಹೊಸದೊಂದು ಮಾದರಿಯನ್ನು ಸೃಷ್ಟಿಸುತ್ತಿರುವ ಸ್ವಾಮೀಜಿಯೊಬ್ಬರ ಪ್ರಯತ್ನವನ್ನು 'ಪ್ರಗತಿಪರ' ಎಂದು ಮಾನ್ಯ ಮಾಡುವ ಮಟ್ಟಕ್ಕೆ ನಮ್ಮ 'ಪ್ರಗತಿಪರತೆ' ಮುಟ್ಟಿರುವುದರಿಂದಲೇ, ಮಠಗಳು ರಾಜಕಾಣಿಗಳೊಂದಿಗೆ ಸೇರಿ ಸಮಾಜವನ್ನು ಜಾತಿ ಜಾತಿಗಳಾಗಿ ಒಡೆಯಲು ಈಗ ಧೈರ್ಯವಾಗಿ ನಿಂತಿರುವುದು. ಯಡಿಯೂರಪ್ಪನವರಿಗೆ ಅಧಿಕಾರ ಹಸ್ತಾಂತರಿಸದಿದ್ದರೆ, ರಾಜ್ಯಾದ್ಯಂತ ಹೋರಾಟ ಮಾಡುವುದಾಗಿ ಕೆಲವು ವೀರಶೈವ ಮಠಾಧೀಶರು ಬೆದರಿಸತೊಡಗಿರುವುದು ಸೂಚಿಸುವುದಾದರೂ ಇನ್ನೇನನ್ನು?

ರಾಜಕಾರಣಿಗಳು ಮತ್ತು ಮಠಾಧೀಶರು ಅಕ್ರಮ ಸಂಪತ್ತಿನ ಗುಡ್ಡೆಗಳ ಎಡಬಲ ನಿಂತು ಮಂದಸ್ಮಿತರಾಗಿ ಪತ್ರಿಕೆಗಳಿಗೆ ಫೋಟೊ ಪೋಸು ನೀಡುವಷ್ಟು ಪರಿಸ್ಥಿತಿ ನಿರ್ಲಜ್ಜವಾಗಿದೆ. ಕೆಲವು ಕಡೆಯಂತೂ ನಮ್ಮನ್ನಾಳುವವರು ಈ ಮಠಾಧೀಶರ ಸಿಂಹಾಸನದ ಕೆಳಗೆ ಕುರ್ಚಿ ಹಾಕಿಸಿಕೊಂಡು ಕೂತು ಹಲ್ಲು ಕಿರಿಯುವುದನ್ನು ನೋಡಿದರೆ, ನಮ್ಮ ಸಂವಿಧಾನವೇ ನಮ್ಮನ್ನು ನೋಡಿ ಹಲ್ಲು ಕಿರಿದಂತಾಗುತ್ತದೆ. ಅದರೇನು ಮಾಡುವುದು, ಇಂತಹ ಸಾಮಾಜಿಕ ಹಾಗೂ ಸಾಂವಿಧಾನಿಕ ಅವನತಿಯ ವಿರುದ್ಧದ ಪ್ರತಿಭಟನೆಗೆ ವೇದಿಕೆಗಳಾಗಬೇಕಾದ ನಮ್ಮ

ಮಾಧ್ಯಮಗಳೇ ಹೊಸ ಕಾಲದ ಮಠಗಳಾಗಿ ಪರಿವರ್ತಿತವಾಗತೊಡಗಿವೆಯಲ್ಲ? ಮೊನ್ನೆ, ರಾಜಕಾರಣಿಗಳ ಭ್ರಷ್ಟತೆಯನ್ನು ಬಯಲು ಮಾಡುವ ಬಡಾಯಿ ವರದಿಗಳನ್ನು ಪ್ರಕಟಿಸುವ ಕನ್ನಡದ 'ಪ್ರಭೆ'ಯೊಂದು, ಇಂದಿನ ಭ್ರಷ್ಟ ರಾಜಕಾರಣದ ಆಟ-ಪಾಠಗಳಿಗೆ ಅಪಾರ ಹಣ ಪೂರೈಸುತ್ತಿರುವರೆಂದು ಹೆಸರಾದ ಗಣಿ ಉದ್ಯಮದ ಶಾಸಕರೊಬ್ಬರ ಘನತರ ದಾನ-ಧರ್ಮದ ಕಾರ್ಯಗಳನ್ನು ಸ್ತುತಿಸುವ ವಿಶೇಷ ಪುರವಣಿಯನ್ನೇ ಹೊರತಂದು ಕೃತಾರ್ಥವಾಗಿದೆಯಲ್ಲ? ಅಲ್ಲಮ, ಶಬ್ದದ ಲಜ್ಜೆಯ ಬಗ್ಗೆ ಹೇಳಿದ. ಶಬ್ದದ ನಿರ್ಲಜ್ಜೆಯ ಬಗ್ಗೆ ಹೇಳಬೇಕಾದ ಕಾಲವೀಗ ಬಂದಂತಿದೆ!

(ಸೆಪ್ಟಂಬರ್ ೨೧, ೨೦೦೭, 'ವಿಕ್ರಾಂತ ಕರ್ನಾಟಕ')

೨೩. ಮಠಗಳು ಮತ್ತು ಜಾತಿವ್ಯವಸ್ಥೆ

ಕರ್ನಾಟಕದಲ್ಲಿರುವ ಮಠಾಧೀಶರಲ್ಲೆಲ್ಲ ಬಹುಶಃ ಚಿತ್ರದುರ್ಗದ ಶ್ರೀ ಶಿವಮೂರ್ತಿ ಮುರುಘರಾಜೇಂದ್ರ ಶರಣರು ವಿಶಿಷ್ಟರು. ಇವರು ಮಠದ ಸ್ವರೂಪ ಮತ್ತು ಕಾರ್ಯಶೈಲಿಯನ್ನು ಆದಷ್ಟೂ ಆಧುನೀಕರಿಸಿ, ತಮ್ಮ ಚಿಂತನೆಯಲ್ಲೂ ಸಮಕಾಲೀನತೆಯನ್ನು ರೂಢಿಸಿಕೊಂಡವರು. ಸಾಮಾಜಿಕ ಮತ್ತು ಧಾರ್ಮಿಕ ವಿವಾದಗಳೆದ್ದಾಗಲೆಲ್ಲ ಪ್ರಾಚೀನ ಶಾಸ್ತ್ರ-ಸಂಪ್ರದಾಯಗಳ ಚೌಕಟ್ಟಿನಲ್ಲಿ ಯೋಚಿಸದೆ, ಬದಲಾಗುತ್ತಿರುವ ಜನರ ಬದುಕಿನ ಆಶೋತ್ತರಗಳು ಮತ್ತು ನಂಬಿಕೆಗಳನ್ನು ಗಮನದಲ್ಲಿಟ್ಟುಕೊಂಡು ಇವರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಾ ಬಂದಿದ್ದಾರೆ. ಇದಕ್ಕಾಗಿ ಅವರು ತಮ್ಮ ಸಹ-ಮಠಾಧೀಶರ ಟೀಕೆ-ವ್ಯಂಗ್ಯ ಕಟಕಿಗಳಿಗೆ ಒಳಗಾದದ್ದೂ ಉಂಟು. ಆದರೆ ಅವುಗಳಿಂದೇನೂ ಇವರು ವಿಚಲಿತರಾಗದೆ, ಮಠ ವ್ಯವಸ್ಥೆಯನ್ನೂ, ಅದರ ಚಿಂತನಾಕ್ರಮವನ್ನೂ ಆಧುನೀಕರಿಸುವ ತಮ್ಮ ಪ್ರಯತ್ನಗಳನ್ನು ಮುಂದುವರೆಸಿಯೇ ಇದ್ದಾರೆ. ಇದರಿಂದಾಗಿ ಇತರ ಮಠ ಮತ್ತು ಮಠಾಧೀಶರ ಮೇಲೂ ಒತ್ತಡಗಳು ಉಂಟಾಗುತ್ತಿದ್ದು, ಅವರೂ ಜಾತಿ, ಧರ್ಮ, ಸಮಾಜ ಕುರಿತ ತಮ್ಮ ನಿಲುವುಗಳನ್ನು ಉದಾರಗೊಳಿಸಿಕೊಳ್ಳಲು, ಆಧುನೀಕರಿಸಿಕೊಳ್ಳಲು ಒತ್ತಡಗಳು ಉಂಟಾಗುತ್ತಿವೆ.

ಅಂದ ಮಾತ್ರಕ್ಕೆ ಇತರೆ ಮಠಾಧೀಶರಿಗೆ ಹೋಲಿಸಿದರೆ, ಇವರು ಸರ್ವಶ್ರೇಷ್ಠರು ಎಂದಲ್ಲ. ಇವರಿಗಿಂತ ವಿದ್ಯಾವಂತರಾದವರು, ಪಂಡಿತರಾದವರು, ಜನಸೇವೆಯಲ್ಲಿ ತೊಡಗಿದ ಅನೇಕ ಮಠಾಧೀಶರು ಕರ್ನಾಟಕದಲ್ಲಿ ಉಂಟು. ಉದಾಹರಣೆಗೆ ಸಿದ್ಧಗಂಗಾ ಮಠದ ಶಿವಕುಮಾರ ಸ್ವಾಮಿಗಳು ವಿದ್ಯಾ ಮತ್ತು ಪ್ರಸಾದ ಸೇವೆಯಿಂದಲೇ ಎಲ್ಲರಿಗಿಂತ ಶ್ರೇಷ್ಠರಾಗಿದ್ದಾರೆ. ಅವರ ಸಾಮಾಜಿಕ ಕಳಕಳಿ ಮತ್ತು ವಿದ್ವತ್ತುಗಳೂ ಶ್ರೇಷ್ಠವಾದುವೇ. ಆದರೆ ಸಾಮಾಜಿಕ ಬದಲಾವಣೆ ಕುರಿತ ಅವರ ತುಡಿತ ಅಷ್ಟೇನೂ ತೀವ್ರವಾದದ್ದಲ್ಲ. ಅವರ ಮಠ ಮತ್ತು ಜನಸೇವೆಯೂ ಜಾತಿ ಪದ್ಧತಿಯ ಬಂಧನದಿಂದ ಕಳಚಿಕೊಂಡಿದೆ ಎಂದೇನೂ ಹೇಳುವಂತಿಲ್ಲ. ಮುಖ್ಯವಾಗಿ, ಶಾಸ್ತ್ರ ಮತ್ತು ಧರ್ಮಗ್ರಂಥಗಳನ್ನು ಇಂದಿನ ಕಾಲದ ಅಗತ್ಯಗಳಿಗೆ ತಕ್ಕಂತೆ ಪುನರ್ವ್ಯಾಖ್ಯಾನಿಸಬೇಕಿದೆ ಎಂದು ಅವರಿಗೆ ಅನ್ನಿಸಿದ ಬಗ್ಗೆ ಯಾವ ಪುರಾವೆಗಳೂ ಇಲ್ಲ. ಅವರ ಮಠದ ನಾಲ್ಕಾರು ಜನ ವಿದ್ಯಾರ್ಥಿಗಳು ನನಗೆ ಶಾಲಾ ದಿನಗಳಲ್ಲಿ ಉಪಾಧ್ಯಾಯರಾಗಿ ದೊರೆತಿದ್ದರು. ಜಾತಿಪ್ರಜ್ಞೆಯೇ ಇಲ್ಲದೆ ಬದುಕುತ್ತಿದ್ದ ನನ್ನ ಬಾಲ್ಯದಲ್ಲಿ ಒಂದು ನೆಲೆಯಲ್ಲಿ ಜಾತಿಪ್ರಜ್ಞೆಯನ್ನು ಕೆರಳಿಸಿದವರು ಇವರೇ. ರಚನಾತ್ಮಕ ಅರ್ಥದಲ್ಲಿ ಅಲ್ಲ. ನಿರ್ದಿಷ್ಟ ಉದಾಹರಣೆಯಾಗಿ ಹೇಳುವುದಾದರೆ, ಸಂಸ್ಕೃತ ಉಪಾಧ್ಯಾಯರೂ ಆಗಿದ್ದ, ದೊಡ್ಡಕಣ್ಣ

ದೇವರು ಎಂಬ ಅಪ್ಪಟ ಕನ್ನಡ ಹೆಸರು ಪಡೆದಿದ್ದ ಒಬ್ಬ ಉಪಾಧ್ಯಾಯರಂತೂ, ನನ್ನ ದಲಿತ ಸಹಪಾಠಿಗಳನ್ನು ಎಷ್ಟು ದಾರುಣವಾಗಿ ಗೋಳು ಹೊಯ್ದುಕೊಳ್ಳುತ್ತಿದ್ದರೆಂದರೆ, ಹಲವು ಬಾರಿ ನನಗೇ ಕಣ್ಣೀರು ಬರುತ್ತಿತ್ತು. ಸಿದ್ಧಗಂಗೆ ಮಠಾಧೀಶರು ನಮ್ಮೂರಿಗೆ ಆಗಾಗ್ಗೆ ಭಿಕ್ಷಕ್ಕೆ ಬಂದು ಮಾಡುತ್ತಿದ್ದ ಸಾರ್ವಜನಿಕ ಭಾಷಣಗಳ ಎತ್ತರ ಮತ್ತು ಅಲ್ಲಿ ತಯಾರಾದ ಈ ಶಿಷ್ಯರು ಮುಟ್ಟುತ್ತಿದ್ದ ಈ ಪಾತಾಳಗಳ ಅಂತರ ಅರ್ಥವಾಗದ ನಾನು ಅನೇಕ ಸಲ ಗೊಂದಲಗಳಿಗೆ ಒಳಗಾಗುತ್ತಿದ್ದೆ.

ಇದು ಒಂದು ಮಠದ ಉದಾಹರಣೆ ಅಷ್ಟೆ. ಇನ್ನೂ ನಾಲ್ಕಾರು ಜಾತಿಗಳ ನಾಲ್ಕಾರು ಮಠಗಳಲ್ಲಿ ತಯಾರಾದ ವಿದ್ಯಾರ್ಥಿಗಳೂ ನನ್ನ ಸ್ನೇಹಿತರಾಗಿದ್ದಾರೆ. ಅವರಿಗೆ ತಮ್ಮನ್ನು 'ತಯಾರು' ಮಾಡಿದ ಈ ಮಠಗಳ ಬಗ್ಗೆ ಸಾಕಷ್ಟು ಸಿಟ್ಟಿದೆ, ವಿಷಾದವಿದೆ. ಕೆಲವರಲ್ಲಿ ಭಯ ಕೂಡಾ ಇದೆ! ಹೀಗಿರುವಾಗ ನಾನು ಚಿತ್ರದುರ್ಗ ಆಕಾಶವಾಣಿಯಲ್ಲಿ ಐದು ವರ್ಷಗಳಿದ್ದ ಅವಧಿಯಲ್ಲಿ ಮುರುಘರಾಜೇಂದ್ರ ಮಠದೊಂದಿಗೆ ಸಂಪರ್ಕವೇರ್ಪಟ್ಟು, ನನಗೆ ಮಠಗಳ ಬಗ್ಗೆ ಇದ್ದ ಕಲ್ಪನೆಯೇ ಬದಲಾಯಿತೆಂದು ಹೇಳಬೇಕು. ನನ್ನ ಚಿತ್ರದುರ್ಗ ಸೇವಾವಧಿಯ ಕೊನೆಯಲ್ಲಿ ಸ್ವಾಮೀಜಿಯವರ ವೈಯಕ್ತಿಕ ಆಹ್ವಾನವನ್ನು ತಿರಸ್ಕರಿಸಲಾಗದೆ ಮಠಕ್ಕೊಮ್ಮೆ ಹೋಗಿ ಅವರ ಪ್ರೀತಿಯ 'ಬೀಳ್ಕೊಡುಗೆ ಸತ್ಕಾರ'ವನ್ನು ಸ್ವೀಕರಿಸಿ ಬಂದಿದ್ದರ ಹೊರತಾಗಿ, ನಾನೆಂದೂ ಅವರ ಮಠದ ಆವರಣ ಪ್ರವೇಶಿಸಿದವನಲ್ಲ. ಅವರ ಯಾವ ಕಾರ್ಯಕ್ರಮಕ್ಕೂ-ಹಲವು ಬಾರಿ ಆಹ್ವಾನವಿದ್ದರೂ-ಅತಿಥಿಯಾಗಿ ಆಗಲಿ, ಸಭಿಕನಾಗಿಯಾಗಲಿ, ಹೋಗಿಬಂದವನಲ್ಲ. ಮಠ ಪ್ರತಿವರ್ಷ ಘೋಷಿಸುವ 'ಬಸವಶ್ರೀ' ಪ್ರಶಸ್ತಿಗಾಗಿ ಅರ್ಹರನ್ನು ಮತ್ತು ನಡೆಸುವ ಶರಣ ಸಂಸ್ಕೃತಿ ಉತ್ಸವದ ಅತಿಥಿಗಳನ್ನು ನಿರ್ಣಯಿಸುವಲ್ಲಿ ಹಾಗೂ ಅವರನ್ನು ಕರೆಸುವಲ್ಲಿ ಸ್ವಾಮೀಜಿಯ ಆಪ್ತ ಬಳಗದವರು ನನ್ನ ಸಲಹೆಗಳನ್ನು, ಸಹಾಯವನ್ನು ಕೇಳುತ್ತಿದ್ದುದುಂಟು. ಮತ್ತು ಹಲವು ಬಾರಿ ನನ್ನ ಸಲಹೆಗಳನ್ನು ಅವರು ಮಾನ್ಯ ಮಾಡುತ್ತಿದ್ದುದೂ ಉಂಟು. ಹೀಗೆ ಬಸವಶ್ರೀ ಪ್ರಶಸ್ತಿ ಪಡೆದ ಮೇಧಾ ಪಾಟ್ಕರ್ ಮತ್ತು ಅಣ್ಣಾ ಹಜಾರೆ ನಮ್ಮ ಮನೆಗೂ ಬಂದು ನಮ್ಮ ಆತಿಥ್ಯ ಸ್ವೀಕರಿಸಿದ ಸೌಭಾಗ್ಯವೂ ನಮ್ಮ ಪಾಲಿನದಾಗಿತ್ತು.

ಆದರೆ ಒಂದು ಬಾರಿ ಬಸವಶ್ರೀ ಪ್ರಶಸ್ತಿಗೆ ನಿಜವಾಗಿ ಅರ್ಹರಾಗಿದ್ದ ಸಮಾಜವಾದಿ ಚಿಂತಕ ಹಾಗೂ ಹೋರಾಟಗಾರ ದಿವಂಗತ ಶ್ರೀ ಕಿಷನ್ ಪಟ್ನಾಯಕ್ ಅವರಿಗೆ, ಅವರು ಅಷ್ಟು ಪ್ರಸಿದ್ಧರಲ್ಲ ಎಂಬ ಕಾರಣದ ಮೇಲೆ ನನ್ನ ಸಲಹೆಯನ್ನು (ಇದರ ಹಿಂದೆ ದೇವನೂರು ಮಹಾದೇವರ ಶಿಫಾರ್ಸೂ ಇತ್ತು) ಮಠ ತಿರಸ್ಕರಿಸಿ, ಇಂತಹ ಪ್ರಶಸ್ತಿಗಳೆಲ್ಲವನ್ನೂ ಮೀರಿ ಬೆಳೆದಿದ್ದ ದಲೈಲಾಮಾರಿಗೆ ಕೇವಲ ತಮ್ಮ ಪ್ರಸಿದ್ಧಿಗಾಗಿ ಬಸವಶ್ರೀ ಪ್ರಶಸ್ತಿ ನೀಡಿದಾಗ, ನನಗೆ ನಿಜವಾಗಿ ಜಿಗುಪ್ಸೆಯಾಯಿತು. ಇದು ನನ್ನನ್ನು ಎಷ್ಟು ಬೇಸರಗೊಳಿಸಿತೆಂದರೆ, ಒಂದು ವರ್ಷದ ಅವಧಿಯಲ್ಲಿ ನಾನೇ ನನ್ನ ಸಮಾಜವಾದಿ ಗೆಳೆಯರ ಸಹಕಾರದಿಂದ ಬಸವಶ್ರೀ ಪ್ರಶಸ್ತಿ ಮೊತ್ತವಾದ ಒಂದು ಲಕ್ಷ ರೂಪಾಯಿಗಳಿಗೂ ಮೀರಿ ಹಣ ಸಂಗ್ರಹಿಸಿ, ಶಿವಮೊಗ್ಗದಲ್ಲಿ ಕಿಷನ್ ಪಟ್ನಾಯಕ್ ಅಭಿನಂದನಾ ಸಮಾರಂಭ ಏರ್ಪಡಿಸಿ ಅವರಿಗೆ ಅರ್ಪಿಸಿದಾಗಲೇ ನನಗೆ ಸಮಾಧಾನವಾಗಿದ್ದು!

ಮುರುಘಾ ಮಠಾಧೀಶರಿಗೆ ಪ್ರಸಿದ್ಧಿಯ ಹಪಾಹಪಿ ಎನ್ನುತ್ತಾರೆ. ಆದರೆ ಇದು ಯಾವ

ಮಠಾಧೀಶರಿಗಿಲ್ಲ? ಹೋದ ಕಡೆಗೆಲ್ಲ ತಾವು ಸಾಕಿದ ಪತ್ರಿಕಾ ಛಾಯಾಗ್ರಾಹಕರನ್ನೂ, ವರದಿಗಾರರನ್ನೂ ಕರೆದುಕೊಂಡು ಹೋಗುವ ಮಠಾಧೀಶರೆಷ್ಟಿಲ್ಲ? ಮುರುಘರಾಜೇಂದ್ರ ಶರಣರಿಗೆ ಪ್ರಸಿದ್ಧಿಯ ಹಂಬಲವಿದ್ದರೆ, ಅದಿರುವುದು ತಾವು ತುಳಿಯುತ್ತಿರುವ ವಿಭಿನ್ನ ಹಾದಿಗೆ ಜನಬೆಂಬಲ ಗಳಿಸಿಕೊಳ್ಳಬೇಕೆಂಬುದೇ ಕಾರಣ ಎಂದು ನಾನು ಭಾವಿಸಿದ್ದೇನೆ. ಆದರೂ ಇದಕ್ಕಾಗಿ ಒಮ್ಮೊಮ್ಮೆ ಅವರು ದುಡುಕಿನ ಹೆಜ್ಜೆಗಳನ್ನಿಡುವುದೂ ಉಂಟು ಎಂದು ನನಗನ್ನಿಸಿದೆ. ಅವರು ತಾವು ಏರ್ಪಡಿಸುವ ಸಮಾರಂಭಗಳನ್ನು, ದೀಪ ಬೆಳಗಿಸುವುದು ವೈದಿಕ ಸಂಪ್ರದಾಯವೆಂದು ಬೇರೆ ರೂಪಗಳಲ್ಲಿ– ಉದಾ: ಗಿಡಕ್ಕೆ ನೀರೆರೆಯುವುದು– ಉದ್ಘಾಟಿಸುವ ವ್ಯವಸ್ಥೆ ಮಾಡುವುದು, ಸಾರ್ವಜನಿಕ ಸ್ಥಳಗಳಲ್ಲಿನ ಮೂರ್ತಿಗಳಿಗೆ ಚಪ್ಪಲಿ ಹಾರ ಹಾಕುವ ಇತ್ತೀಚಿನ ಕಿಡಿಗೇಡಿ ಕಾರ್ಯಗಳನ್ನು, ಚಪ್ಪಲಿ ಹಾರವೂ ಶ್ರೇಷ್ಠ ಎಂದು ವಿವರಿಸಿ ಸಮನ್ವಯಗೊಳಿಸುವ ಪ್ರಯತ್ನ ಮಾಡುವುದು ಇತ್ಯಾದಿಗಳನ್ನು ಅತಿ ವೈಚಾರಿಕತೆಯ ವ್ಯಾಖ್ಯಾನಗಳೆಂದೇ ಕರೆಯಬೇಕಾಗುತ್ತದೆ.

ಮಠ ವ್ಯವಸ್ಥೆಯ ನಿಜವಾದ ದುರಂತವೆಂದರೆ ಅವು ಹುಟ್ಟಿನಿಂದಲೇ sectarian ಆಗಿರುವುದು. ಹಾಗೇ, ತಮ್ಮ ಜಾತಿ ಅಥವಾ ಜನಾಂಗದ 'ತತ್ವಜ್ಞಾನ'ವನ್ನು ಆತ್ಯಂತಿಕ ಸತ್ಯವೆಂದು ನಂಬಿರುವ ಅವು, ತಮ್ಮ ಜಾತಿ–ಜನಾಂಗಗಳ 'ತತ್ವಜ್ಞಾನ' ಉದಯಿಸಿದ ನಂತರ ತತ್ವಜ್ಞಾನ ಅಪಾರವಾಗಿ ಹಲವು ದಿಕ್ಕುಗಳಲ್ಲಿ ಬೆಳೆದಿದೆ, ಹಲವು ಹೊಸ ಸತ್ಯಗಳನ್ನು ಆವಿಷ್ಕರಿಸಿದೆ; ಅವುಗಳ ತಿಳುವಳಿಕೆ ಪಡೆದು ತಮ್ಮ ಮಠ ಅಥವಾ ಜಾತಿಯ ತತ್ವಜ್ಞಾನವನ್ನು ಪುನರೂಪಿಸಿಕೊಳ್ಳಬೇಕಿದೆ ಅಥವಾ ಪುನರ್ವ್ಯಾಖ್ಯಾನಗಳಿಗೆ ಒಳಪಡಿಸಬೇಕಿದೆ ಎಂಬ ಅರಿವೇ ಉಂಟಾಗದಂತೆ ಮಠದ ವ್ಯವಸ್ಥೆ ಮತ್ತು ಅದರ ಸುತ್ತಲಿನ ವಾತಾವರಣವನ್ನು ಕಟ್ಟಿಕೊಂಡಿರುವುದು. ಆಧುನಿಕತೆಯ ಎಲ್ಲ ಲೌಕಿಕ ಸೌಲಭ್ಯಗಳನ್ನು–ಭದ್ರವಾದ, ಸುಂದರವಾದ, ತಾಂತ್ರಿಕವಾಗಿ ಸುಸಜ್ಜಿತವಾದ ಕಟ್ಟಡಗಳು, ಹೈಟೆಕ್ ಕಾರುಗಳು ಇತ್ಯಾದಿ– ದೊರಕಿಸಿಕೊಳ್ಳಲು ಹಿಂಜರಿಯದ ಮಠಾಧೀಶರು ತಮ್ಮ ವಿಚಾರಗಳನ್ನು ಆಧುನೀಕರಿಸಿಕೊಳ್ಳಲು ಮಾತ್ರ ಏಕೋ ಹಿಂಜರಿಯುತ್ತಾರೆ!

ಮುರುಘ ರಾಜೇಂದ್ರ ಶರಣರಲ್ಲಿ ನಾನು ಕಂಡ ಒಂದು ದೊಡ್ಡ ಕೊರತೆಯೆಂದರೆ, ವಚನ ಸಾಹಿತ್ಯದಾಚೆಗೂ ಜ್ಞಾನ ದಿಗಂತಗಳಿವೆ ಎಂದು ನಂಬಲು ನಿರಾಕರಿಸಿರುವುದು ಮತ್ತು ಇತರ ಜ್ಞಾನ ಕ್ಷೇತ್ರಗಳ ಗ್ರಂಥಗಳನ್ನು ಓದದಿರುವುದು. ಇದರ ಬಗ್ಗೆ ಒಂದೆರಡು ಬಾರಿ, ಆಕಾಶವಾಣಿ ಕಾರ್ಯಕ್ರಮಗಳನ್ನು ನೀಡಲು ಬಂದಾಗ ಅವರ ಬಳಿಯೇ ಪ್ರಸ್ತಾಪಿಸಿ, ಕೆಲವು ಪುಸ್ತಕಗಳನ್ನು ಸ್ವತಃ ನಾನೇ ಕೊಂಡು ನೀಡಿದ್ದೇನೆ. ಆದರೆ ಅವರು ಓದಿದಂತಿಲ್ಲ. ಬದಲಿಗೆ, ಇತರ ದೃಷ್ಟಿಕೋನಗಳ ಪುಸ್ತಕಗಳನ್ನು ಓದಿದರೆ ತಮ್ಮ ದೃಷ್ಟಿಕೋನ ವಿಚಲಿತವಾಗಿಬಿಡಬಹುದೆಂಬ ಆತಂಕ ವ್ಯಕ್ತಪಡಿಸಿ ನನ್ನನ್ನು ದಂಗು ಬಡಿಸಿದರು.! ಆದರೆ, ಜ್ಞಾನದ ಹಸಿವೇ ದೊಡ್ಡ ಹಸಿವು. ಆ ಹಸಿವಿನ ಭಾಗವಾಗಿಯೇ ಪರಿವರ್ತನೆಯಾಗಬೇಕು ಎಂದು ಭಾವಿಸುವ ನಾವು, ಬಹಳ ಬಾರಿ ಜ್ಞಾನದ ಹಸಿವನ್ನು ಪೂರೈಸುಕೊಳ್ಳುವ ಧಾವಂತದಲ್ಲಿ ಪರಿವರ್ತನೆಯ ಕೆಲಸವನ್ನು ಮರೆತುಬಿಟ್ಟಿರುವುದೇ ಹೆಚ್ಚು! ಹಾಗಾಗಿ ನನ್ನ ದಂಗಿನ ಹೊರತಾಗಿಯೂ ಸಾಮಾಜಿಕ ಪರಿವರ್ತನೆಯ ಕೆಲಸಕ್ಕೆ ಆದ್ಯತೆ ನೀಡಿರುವ ಶರಣರ ಬಗ್ಗೆ ನನ್ನ ಪ್ರೀತಿ–ಗೌರವ ಹಾಗೇ ಉಳಿದಿದೆ.

ಈ ಪ್ರೀತಿ ಗೌರವಗಳ ಭಾಗವಾಗಿಯೇ, ಈ ವರ್ಷದ ಅಕ್ಟೋಬರ್‌ನಲ್ಲಿ ನಡೆದ ಶರಣ ಸಂಸ್ಕೃತಿ ಉತ್ಸವದ ಭಾಗವಾಗಿ ನನ್ನನ್ನು ಮತ್ತು ನನ್ನ ಪತ್ನಿಯನ್ನು ಮುರುಘಾ ಮಠ 'ಅಂತರ್ಜಾತೀಯ ಮದುವೆಗಳು ಮತ್ತು ಸಾಮಾಜಿಕ ಪರಿವರ್ತನೆ' ಎಂಬ ಸಂವಾದ ಕಾರ್ಯಕ್ರಮಕ್ಕೆ ಆಹ್ವಾನಿಸಿದಾಗ ನಾವು ಆಹ್ವಾನವನ್ನು ನಿರಾಕರಿಸದೆ ಹೋಗಬೇಕಾಯಿತು. ಜೊತೆಗೆ ಅಂದೇ ಮಠ ಏರ್ಪಡಿಸಿದ್ದ ಸಾಮೂಹಿಕ ವಿವಾಹ ಸಮಾರಂಭದಲ್ಲಿ ಗೆಳೆಯ ದೇವನೂರ ಮಹಾದೇವ ಅವರ ಮಗಳು ಮಿತಾಳ ವಿವಾಹವೂ ಸೇರ್ಪಡೆಯಾಗಿದ್ದುದು, ನಾವು ಆಹ್ವಾನವನ್ನು ಒಪ್ಪಲು ಕಾರಣವಾಗಿದ್ದಿರಬಹುದು. ಇದು ನಾನು ಭಾಗವಹಿಸಿದ ಮೊದಲ ಶರಣ ಸಂಸ್ಕೃತಿ ಉತ್ಸವ. ನಾನು ಈವರೆಗೆ ಇದರಲ್ಲಿ ಭಾಗವಹಿಸಿದಿದ್ದುದಕ್ಕೆ ಕಾರಣ, ಇದು ಸಂತೆಯ ರೀತಿಯಲ್ಲಿ ನಡೆಯುವುದೆಂದು; ಭಕ್ತರ ಹೆಸರಲ್ಲಿ ಕಳ್ಳ ಅಧಿಕಾರಿಗಳೂ, ಸುಳ್ಳ ರಾಜಕಾರಣಿಗಳೂ ಸೇರಿದಂತೆ ಎಲ್ಲ ರೀತಿಯ ಅಂಡ-ಭಂಡರು ಇದರಲ್ಲಿ ಸೇರಿಕೊಂಡು, ಶರಣರು ವರ್ಷ ಪೂರ್ತಿ ಪ್ರತಿಪಾದಿಸುವ ಜನಪರ ವಿಚಾರ ಪ್ರಣಾಲಿಯ ರುಚಿಯನ್ನೇ ಕೆಡಿಸುವರೆಂದು. ನಾನು ಈ ಹಿಂದೆ ಸೂಚಿಸಿದ ಮಠವ್ಯವಸ್ಥೆಯ ಮೂಲದಲ್ಲೇ ಇರುವ ದುರಂತವಿದು. ಆಳುವ ಪ್ರಭುಗಳನ್ನು-ಇವರಲ್ಲಿ ಬರೀ ರಾಜಕಾರಣಗಳೇ ಅಲ್ಲದೆ, ಅಧಿಕಾರಿಗಳು, ಉದ್ಯಮಿಗಳು, ಕಂತ್ರಾಟುದಾರರು, ಧರ್ಮಾಧಿಕಾರಿಗಳು, ಸಾಹಿತ್ಯ ಪುಢಾರಿಗಳೂ ಸೇರಿರುತ್ತಾರೆ-ದೂರವಿಟ್ಟು ಮಠ ಕೆಲಸ ಮಾಡಲಾರದು! ಕನಿಷ್ಠ ಆ ಶಕ್ತಿಯನ್ನು ಚಿತ್ರದುರ್ಗದ ಮುರುಘಾಮಠ ಇನ್ನೂ ಗಳಿಸಿಕೊಂಡಿಲ್ಲವೆಂದೇ ಹೇಳಬೇಕು. ಏಕೆಂದರೆ ಆ ಶಕ್ತಿ ಗಳಿಸಿಕೊಂಡೊಡನೆ ಅದು ಮಠವಾಗಿ ಉಳಿದಿರಲಾರದು!

ನಾನು ಅಂದು ಸಾಮೂಹಿಕ ವಿವಾಹ ಸಮಾರಂಭದ ಬಳಿಗೆ ಹೋದಾಗ, ಶರಣರು ಭಾಷಣ ಮಾಡುತ್ತಿದ್ದರು. ಅವರು ತಾವು ಪ್ರತಿ ತಿಂಗಳು ಏರ್ಪಡಿಸುತ್ತಿರುವ ಇಂತಹ ಸಾಮೂಹಿಕ ವಿವಾಹ ಸಮಾರಂಭಗಳ ಮಹತ್ವ ಮತ್ತು ವೈಶಿಷ್ಟ್ಯವನ್ನು ವಿವರಿಸುತ್ತಿದ್ದರು. ಅದರ ಕೆಲವು ಅಂಶಗಳು ನನ್ನನ್ನು ಬೆರಗುಗೊಳಿಸಿದವು. ಅವರು ರಾಹುಕಾಲದಲ್ಲಿ ವಿವಾಹ ಮಾಡಿಸುವರು. ಯಾವ ಪುರೋಹಿತನ ಮಧ್ಯಸ್ಥಿಕೆ ಇಲ್ಲದೆ, ಯಾವ ಶಾಸ್ತ್ರಾಚಾರಗಳಿಲ್ಲದೆ ಅಂತರ್ಜಾತೀಯ ಮತ್ತು ವಿಧವಾ ವಿವಾಹಗಳೂ ಸೇರಿದಂತೆ ಅನೇಕ ಸಾಮಾನ್ಯ ಕುಟುಂಬಗಳ ವಿವಾಹಗಳನ್ನು ಅವರು ನಡೆಸಿದ್ದಾರೆ. ಇಂತಹ ವಿದ್ಯಮಾನಗಳು ಮಠವೊಂದರಲ್ಲಿ ನಡೆಯುವುದು ದೊಡ್ಡ ವಿಷಯವೇ ನಿಜ. ಆದರೆ ಅಂದು ನನಗೆ ಅದಕ್ಕಿಂತ ದೊಡ್ಡ ವಿಷಯವೆನಿಸಿದ್ದು, ಶರಣರ ಈ ಭಾಷಣವನ್ನು ಜನಸಾಮಾನ್ಯರಿಂದಲೇ ತುಂಬಿ ತುಳುಕುತ್ತಿದ್ದ ಆ ಸಭೆ ಪದೇಪದೇ ಚಪ್ಪಾಳೆ ತಟ್ಟಿ ಸ್ವಾಗತಿಸುತ್ತಿದ್ದುದು! ಅಂದಿನ ಸಮಾರಂಭದಲ್ಲಿ ಮಿತಾ ದಂಪತಿಗಳೂ ಸೇರಿದಂತೆ, ನಾಲ್ಕೈದು ಅಂತರ್ಜಾತಿ ಜೋಡಿಗಳಿದ್ದವು. ಶರಣರು ಅವರನ್ನೆಲ್ಲ ಎದ್ದು ನಿಲ್ಲಿಸಿ, ಈ ಜೋಡಿಗಳ ಕಡೆ ವಿಶೇಷ ಗಮನ ಸೆಳೆದರು. ಪರೋಕ್ಷವಾಗಿ, ಜಾತಿ ಮೀರಿದ ವಿವಾಹಗಳಿಗೆ ತಮ್ಮ ವಿಶೇಷ ಪ್ರೋತ್ಸಾಹ ಎಂಬುದನ್ನು ಸೂಚಿಸಿದರು. ನಮ್ಮ ಎಷ್ಟು ಜನ ಮಠಾಧಿಪತಿಗಳಿಗೆ ಸಾರ್ವಜನಿಕವಾಗಿ ಹೀಗೆ ಘೋಷಿಸುವ ನೈತಿಕ ಧೈರ್ಯವಿದೆ? ಅದೂ, ವಿಧವಾ ವಿವಾಹ ಮತ್ತು ಅಂತರ್ಜಾತಿ ವಿವಾಹಗಳಿಗೆ ಶಾಸ್ತ್ರ ಸಮ್ಮತಿ ಇಲ್ಲದಿರುವುದರಿಂದ ಅವುಗಳನ್ನು ಪ್ರೋತ್ಸಾಹಿಸಲಾರೆ ಎಂದು ಹೇಳುವಂತಹ ಮಠಾಧೀಶರೊಬ್ಬರು ಇಂದು ಮತಾಂತರದ ಹುಯ್ಲಿನಲ್ಲಿ ನಮ್ಮ ಮಠಾಧಿಪತಿಗಳ ನೇತೃತ್ವ ವಹಿಸುತ್ತಿರುವಾಗ!

ಮಧ್ಯಾಹ್ನ ನಡೆದ ಸಂವಾದ ಕಾರ್ಯಕ್ರಮದಲ್ಲಿ ಅಂತರ್ಜಾತಿ ವಿವಾಹಿತರಾದ ನಾವು ನಾಲ್ಕೈದು ಜನ ದಂಪತಿಗಳು ಭಾಗವಹಿಸಿದ್ದೆವು. ನಮ್ಮೊಂದಿಗೆ ಇಂದಿರಾ ಕೃಷ್ಣಪ್ಪ ಸೇರಿದಂತೆ,

ರವಿವರ್ಮಕುಮಾರ್, ಬಂಜಗೆರೆ ಜಯಪ್ರಕಾಶ್ ದಂಪತಿಗಳು ಮತ್ತು ಕಾರ್ಯಕ್ರಮ ನಡೆಸಿಕೊಟ್ಟ ಸ್ವಾಮಿ ಆನಂದ್ ಭಾಗವಹಿಸಿದ್ದರು. ಎಲ್ಲರೂ ಅಂತರ್ಜಾತಿ ವಿವಾಹದ ತಂತಮ್ಮ ಕಷ್ಟ ಸುಖಗಳನ್ನು ಅಲ್ಲಿ ತಂದೆ ತಾಯಿಗಳೇ ಹೆಚ್ಚಿದ್ದ ಸಭಿಕರೊಂದಿಗೆ ಹಂಚಿಕೊಂಡರು. ಎಲ್ಲರ ಮನವಿ ಒಂದೇ: ನಿಮ್ಮ ಮಕ್ಕಳನ್ನು ಜಾತಿ ವಾತಾವರಣದಿಂದ ಮುಕ್ತಗೊಳಿಸಿ ಬೆಳೆಸಿ ಹಾಗೂ ನಿಮ್ಮ ಮಕ್ಕಳು ಜಾತಿ ಮೀರಿ ಮದುವೆಯಾಗ ಬಯಸಿದರೆ, ಅವರಿಗೆ ತೊಂದರೆ ಕೊಡದೆ ನೀವೇ ನಿಂತು ಮದುವೆ ಮಾಡಿಸಿ. ಅದರಿಂದ ಸಮಾಜಕ್ಕೂ, ರಾಷ್ಟ್ರಕ್ಕೂ ಒಳಿತಿದೆ, ಸುಖವಿದೆ. ನಾನು ಹೇಳಿದ್ದು: ಜಾತಿ ಬಿಡುಗಡೆಯ ಸುಖ ಅದನ್ನು ಅನುಭವಿಸಿದವರಿಗಷ್ಟೇ ಗೊತ್ತು. ಅದು ಎಷ್ಟೊಂದು ನೆಲೆಗಳ ಬಂಧನಗಳಿಂದ ಬಿಡುಗಡೆ! ಇದು ಭಾರತದಲ್ಲಿ ಎಲ್ಲ ಬಿಡುಗಡೆಗಳಿಗಿಂತ ದೊಡ್ಡ ಬಿಡುಗಡೆ ಮತ್ತು ಎಲ್ಲ ಬಿಡುಗಡೆಗಳ ನಾಂದಿ ಬಿಡುಗಡೆ. ಅಂತರ್ಜಾತಿ ವಿವಾಹಗಳ ನಿರ್ಧಾರಗಳ ಹಿಂದೆ ಪ್ರೀತಿ ಮತ್ತು ವೈಚಾರಿಕತೆ ಎರಡೂ ಇರಬೇಕು. ಯಾವೊಂದಿಲ್ಲದಿದ್ದರೂ, ಅವು ತಮ್ಮ ಉದ್ದೇಶಗಳಲ್ಲಿ–ಸಂಪೂರ್ಣ ಸಾಮಾಜಿಕ ಬಿಡುಗಡೆಯಲ್ಲಿ–ವಿಫಲವಾಗುವ ಸಾಧ್ಯತೆ ಇದೆ. ಇಂದು ನಮ್ಮ ಸಾಮಾಜಿಕ ನ್ಯಾಯ ಚಳುವಳಿ, ಇಂತಹ ಪ್ರೀತಿ ಮತ್ತು ವೈಚಾರಿಕತೆಗಳನ್ನು ಆಧರಿಸಿದ ಅಂತರ್ಜಾತಿ ವಿವಾಹಗಳನ್ನು ತನ್ನ ಒಂದು ಭಾಗವನ್ನಾಗಿ ಮಾಡಿಕೊಳ್ಳದಿರುವುದೇ, ಅದು ಒಂದು ಜಾತೀಯ ಚಳುವಳಿಯಾಗಿ ಅವನತಿಗೊಳ್ಳಲು ಕಾರಣವಾಗಿರುವುದು.

ಈ ಹಿನ್ನೆಲೆಯಲ್ಲಿ ನನ್ನ ಅಸಮಧಾನವೊಂದನ್ನು ತೋಡಿಕೊಳ್ಳುತ್ತಾ, ಶರಣರು ಜಾತಿಗೊಂದು ಮಠ ಮತ್ತು ಮಠಾಧೀಶರನ್ನು ತಯಾರು ಮಾಡುತ್ತಿರುವುದು ವಿಷಾದನೀಯ ಎಂದೆ. ಶರಣರೇನೋ ಈ ಬಗ್ಗೆ ತಮಲ್ಲಿ ಪುನರಾಲೋಚನೆಗೆ ಅವಕಾಶವಿದೆ ಎಂಬಂತೆ ತಲೆಯಲ್ಲಾಡಿಸಿದರು. ಆದರೆ ಆದಿಜಾಂಬವರ ಮಠದ ಸ್ವಾಮೀಜಿ ಕೊನೆಯಲ್ಲಿ ಮಾತನಾಡುತ್ತಾ, ತಮ್ಮ ಅತಿ ಅಸ್ಪೃಶ್ಯ ಜಾತಿಗೆ ಮಠದ ಆವರಣದಲ್ಲಿ ಮಾನ್ಯತೆ ನೀಡಿ ತಮ್ಮನ್ನು ಸಮಾನ ಗೌರವದಿಂದ ನೋಡಿಕೊಳ್ಳುತ್ತಿರುವುದು ನಿಜವಾದ ಪ್ರಗತಿಯ ಹೆಜ್ಜೆಯೇ ಆಗಿದೆ ಎಂದು ಪ್ರತಿಪಾದಿಸಿದಾಗ, ನನಗೆ ಶರಣರು ಈ ಮೂಲಕ ಮಾಡುತ್ತಿರುವುದು ಹಿರಿದಾದ ಅರ್ಥದಲ್ಲಿ ಒಂದು ದೊಡ್ಡ ಅಂತರ್ಜಾತಿ 'ವಿವಾಹ'ವೇ ಎನ್ನಿಸದಿರಲಿಲ್ಲ. ಆದರೆ ಇಲ್ಲಿಗೇ ತೃಪ್ತಿಪಟ್ಟುಕೊಂಡು, ಇದನ್ನು ಜಾತಿನಾಶ ಕಾರ್ಯಕ್ರಮದ ನೆಲೆಯಲ್ಲಿ ವಿಸ್ತರಿಸದೇ ಹೋದರೆ ಒಂದು ದೊಡ್ಡ ಜಾತಿ ವಿಷವ್ಯೂಹವನ್ನೇ ನಿರ್ಮಿಸಿದ ಆರೋಪಕ್ಕೆ ಶರಣರು ಗುರಿಯಾಗಬೇಕಾಗುತ್ತದೆ ಎಂದೂ ಎನ್ನಿಸಿತು.

ಇದನ್ನು ಶರಣರಿಗೆ ತಿಳಿಸಿದಾಗ, ಅವರು 'ನೀವೆಲ್ಲ ನಮ್ಮ ಜೊತೆ ಇದ್ದರೆ ಎಲ್ಲ ಸರಿ ಹೋಗುತ್ತದೆ' ಎಂದರು. ಈಗ ಉತ್ತರಿಸುವ ಹೊಣೆ ನನ್ನದಾಗಿತ್ತು! ನಾನು ನಿಜವಾಗಿಯೂ ಕಷ್ಟಕ್ಕೆ ಸಿಲುಕಿದ್ದೆ...

(ಡಿಸೆಂಬರ್ ೧೯, ೨೦೦೮, 'ವಿಕ್ರಾಂತ ಕರ್ನಾಟಕ')

೨೪. ಶೂದ್ರ ರಾಜಕಾರಣದ ದುರಂತ ನಾಯಕರು...

ಕಾಗೋಡು ತಿಮ್ಮಪ್ಪನವರು ಚುನಾವಣಾ ರಾಜಕಾರಣದಿಂದ ನಿವೃತ್ತಿ ಘೋಷಿಸಿದ್ದಾರೆ. ತಾವಿನ್ನು ಕಾಂಗ್ರೆಸ್ ಪಕ್ಷದ ಸಂಘಟನೆಯಲ್ಲಿ ತೊಡಗಿಕೊಳ್ಳುವುದಾಗಿ ಹೇಳಿದ್ದಾರೆ. ಈವರೆಗೆ ಈ ಕೆಲಸದಲ್ಲಿ ಗಂಭೀರವಾಗಿ ತೊಡಗಿಕೊಳ್ಳದಿದ್ದುದರಿಂದಲೇ ಅವರು ಚುನಾವಣಾ ರಾಜಕೀಯದಿಂದ ನಿವೃತ್ತಿ ಘೋಷಿಸಕೊಳ್ಳಬೇಕಾದ ಪರಿಸ್ಥಿತಿ ಬಂದಿದೆ ಎಂದು ಪಕ್ಷದೊಳಗೇ ಇರುವ ಅವರ ರಾಜಕೀಯ ಶತ್ರುಗಳು ಹೇಳುತ್ತಿದ್ದಾರೆ! ಕಳೆದೆರಡು ಚುನಾವಣೆಗಳ ಸೋಲು ತಿಮ್ಮಪ್ಪನವರನ್ನು ಕಂಗೆಡಿಸಿದೆ. ಈ ಬಾರಿಯ ಸೋಲಂತೂ ಅವರನ್ನು ಮೌನಕ್ಕೆ ತಳ್ಳಿಬಿಟ್ಟಿದೆ. ಯಾಕೆ ಹೀಗಾಯಿತು ಎಂದು ಈವರೆಗೆ ತಮ್ಮನ್ನು ತಾವೇ ಕೇಳಿಕೊಳ್ಳುತ್ತಲೇ ಇದ್ದು, ಕೊನೆಗೂ ಉತ್ತರ ಸಿಗದೆ ಅವರು ನಿವೃತ್ತಿ ಘೋಷಿಸಿದಂತಿದೆ.

ಹಾಗೆ ನೋಡಿದರೆ, ಇಂದಿನ ರಾಜಕೀಯ ಸಂದರ್ಭದಲ್ಲಿ ತಿಮ್ಮಪ್ಪ ಸೋಲಿಸ್ಪಡಬೇಕಾದ ರಾಜಕಾರಣೀಯೇನೂ ಅಲ್ಲ. ಇವರು ಮಂತ್ರಿಯಾಗಿದ್ದಾಗ ಮಾತ್ರವಲ್ಲ, ಬರೀ ಶಾಸಕರಾಗಿದ್ದಾಗಲೂ ಕ್ಷೇತ್ರಕ್ಕೆ ಕೆಲಸ ಮಾಡಿದವರು. ಮಂತ್ರಿಯಾಗಿ ದಕ್ಷರೆನಿಸಿಕೊಂಡಿದ್ದವರು ಕೂಡ. ಭ್ರಷ್ಟತೆಯ ವಿಷಯಕ್ಕೆ ಬಂದರೆ, ಇಂದಿನ ರಾಜಕಾರಣಿಗಳಿಗೆ ಹೋಲಿಸಿದರೆ, ಅಷ್ಟೇನೂ ಹೆಸರು ಕೆಡಿಸಿಕೊಳ್ಳದ ವ್ಯಕ್ತಿ. ಆದರೂ ಅವರು ಹೀಗೆ ಸತತವಾಗಿ ಸೋತರೇಕೆ? ಈ ಹಿಂದಿನ ಸೋಲಿಗೆ, ಚುನಾವಣೆಗೆ ಮುನ್ನ ಸಾಗರದಲ್ಲಿ ಕೋಮು ಗಲಭೆ ಸಂಭವಿಸಿ ಮತ್ತು ಅದೇ ಸಂದರ್ಭದಲ್ಲಿ ಬಂಗಾರಪ್ಪ ಬಿಜೆಪಿ ಸೇರಿ ಆ ಪಕ್ಷದ ಪರ ಅಲೆ ಸೃಷ್ಟಿಯಾದದ್ದು ಕಾರಣ ಎಂದು ಹೇಳಲಾಗುತ್ತಿದ್ದರೆ, ಈ ಬಾರಿ? ಅದೂ, ಕಳೆದ ಮೂರು ವರ್ಷಗಳಲ್ಲಿ ಮೂರು ಪಕ್ಷಗಳ ಹೊಸ್ತಿಲು ತುಳಿದು ವಿಶ್ವಾಸಾರ್ಹತೆ ಕಳೆದುಕೊಂಡಿದ್ದ ತಮ್ಮೆದುರಿನ ರಾಜಕೀಯ ಬಚ್ಚಾ ಹಾಗೂ ತಮ್ಮ ಭಾವಮೈದುನನ ಎದುರು ಮತ್ತೆ ಸೋಲುವುದೆಂದರೆ?

ಇದಕ್ಕೂ ಅವರ ಅಭಿಮಾನಿಗಳು ಮತ್ತು ಶತ್ರುಗಳು ಹಲವಾರು ಕಾರಣಗಳನ್ನು ಕೊಡುತ್ತಾರೆ. ಅಭಿಮಾನಿಗಳು ಕೊಡುವ ಒಂದು ಕಾರಣವೆಂದರೆ, ಕ್ಷೇತ್ರ ಪುನಾರಚನೆಯಲ್ಲಿ ಹೊಸದಾಗಿ ಸೇರಿದ ಪ್ರದೇಶಗಳಲ್ಲಿ ಚುನಾವಣಾ ಪ್ರಚಾರ ಸರಿಯಾಗಿ ಆಗದೇ ಇದ್ದದ್ದು. ಇನ್ನೊಂದು, ಪಕ್ಕದ ಶಿಕಾರಿಪುರ ಕ್ಷೇತ್ರದಲ್ಲಿ ತಮ್ಮ ಪಾರಂಪರಿಕ ಶತ್ರು ಬಂಗಾರಪ್ಪನವರ ಸಮಾಜವಾದಿ ಪಕ್ಷದೊಂದಿಗೆ ಹೊಂದಾಣಿಕೆ ಮಾಡಿಕೊಂಡ ಫಲವಾಗಿ, ಬಂಗಾರಪ್ಪ ಮತ್ತು ಅವರ ಮಗ ಕಾಂಗ್ರೆಸ್ಸಿನವರೇ ಆದ ಕುಮಾರ್ ಬಂಗಾರಪ್ಪನವರ ನಡುವಣ ರಾಜಕೀಯ ಕದನದ ಅಡ್ಡ ಪರಿಣಾಮಗಳಿಗೆ ಇವರು ಸಿಕ್ಕಿಕೊಂಡರು ಎಂಬುದು. ಇನ್ನು ಇವರ ಶತ್ರುಗಳು ಕೊಡುವ ಕಾರಣವೆಂದರೆ, ತಿಮ್ಮಪ್ಪ ಶ್ರೀಸಾಮಾನ್ಯರ ಜೊತೆ ಬೆರೆಯದೆ ತಮ್ಮದೇ ಆಪ್ತಕೂಟವೊಂದರಲ್ಲಿ

ಸೆರೆಯಾಗಿ ಗತ್ತಿನ ರಾಜಕಾರಣ ಮಾಡುತ್ತಲೇ ಹೋದದ್ದು!

ಇವೆಲ್ಲವೂ ನಿಜವಿರಬಹುದು. ಆದರೆ ಆಳವಾಗಿ ನೋಡಿದರೆ, ತಿಮ್ಮಪ್ಪನವರ (ಚುನಾವಣಾ)ರಾಜಕೀಯ ಜೀವನದ ಇಂತಹ ಅಶೋಭಾಯಮಾನ ಅಂತ್ಯಕ್ಕೆ ಜಿಲ್ಲೆಯ ಚಾರಿತ್ರಿಕ ರಾಜಕೀಯ ಕಾರಣವೂ ಇದ್ದಂತೆ ಕಾಣುತ್ತದೆ. ತಿಮ್ಮಪ್ಪ ಸುಪ್ರಸಿದ್ದ ಕಾಗೋಡು ಸತ್ಯಾಗ್ರಹದ ಸಮಾಜವಾದಿ ಉತ್ಪನ್ನ. ಕರ್ನಾಟಕದ ಸಮಾಜವಾದಿ ಚಳುವಳಿಯ ಪಿತಾಮಹ ಶಾಂತವೇರಿ ಗೋಪಾಲಗೌಡರ ಗರಡಿಯಲ್ಲಿ ಯುವನಾಯಕನಾಗಿ ಬೆಳೆದ ರಾಜಕಾರಣಿ. ಆದರೆ ಗೋಪಾಲ ಗೌಡರು ಇವರ ಕೈಯಲ್ಲಿಟ್ಟು ಹೋದ ಸಮಾಜವಾದಿ ಆಂದೋಲನವನ್ನಾಗಲೀ, ಪಕ್ಷವನ್ನಾಗಲೀ ಕಾಗೋಡು ತಿಮ್ಮಪ್ಪ ಮತ್ತು ಅವರ ಗೆಳೆಯರಿಗೆ ಬೆಳೆಸುವುದು ಹೋಗಲಿ, ಉಳಿಸಲೂ ಸಾಧ್ಯವಾಗಲಿಲ್ಲ. ಗೌಡರು ನಿಧನರಾದ ನಂತರದಲ್ಲೇ ನಡೆದ ಚುನಾವಣೆಗಳಲ್ಲಿ ಇವರ ಪಕ್ಷ ಎಂದೂ ಗೆಲ್ಲಲಾಗದಿದ್ದಷ್ಟು ಸ್ಥಾನಗಳನ್ನು ಗೆದ್ದು, ವಿಧಾನಸಭೆಯಲ್ಲಿ ಗೌಡರಿಂದ ಕಲಿತ ಎಲ್ಲ ಶಾಸನಾತ್ಮಕ ರಾಜಕೀಯ ಪ್ರತಿಭೆಯನ್ನೂ ಪ್ರದರ್ಶಿಸುವ ಮೂಲಕ ಇಡೀ ರಾಜ್ಯದ ಜನರ ಗಮನ ಸೆಳೆಯುಂತಾಗಿದ್ದಾಗ, ಪಕ್ಷ ಒಡೆಯಿತು. ಇದಕ್ಕೆ ತಿಮ್ಮಪ್ಪ ಮತ್ತು ಬಂಗಾರಪ್ಪನವರ ನಡುವಣ ವೈಯುಕ್ತಿಕ ಜಿದ್ದಾಜಿದ್ದಿಯೇ ಕಾರಣವೆಂದು ಹೇಳಲಾಗುತ್ತದೆ. ಅಂದು ಪಕ್ಷದ ನಾಶವನ್ನು ಆರಂಭಿಸಿದ ಈ ವೈಯುಕ್ತಿಕ ಜಿದ್ದಾಜಿದ್ದಿ ಇಂದಿನವರೆಗೂ ಹಲವು ರೂಪಗಳಲ್ಲಿ ಬೆಳೆಯುತ್ತಾ ಬಂದು, ಈ ಇಬ್ಬರು ಪ್ರತಿಭಾವಂತ ಶೂದ್ರ ಜನ ನಾಯಕರ ರಾಜಕೀಯ ಜೀವನವನ್ನೇ–ಬಂಗಾರಪ್ಪನವರ ಈ ಬಾರಿಯ (ವಿಧಾನಸಭಾ ಚುನಾವಣೆಯ) ಸೋಲು 'ಸ್ವಯಂಪ್ರೇರಿತ' ಮತ್ತು 'ಪೂರ್ವ ನಿಯೋಜಿತ' ಎಂದು ಹೇಳಲಾಗುತ್ತಿದ್ದರೂ–ವಿಷಣ್ಣಮಯವಾದ ಅಂತ್ಯಕ್ಕೆ ಒಯ್ದಿದೆ.

ಲೋಹಿಯಾ, ಶೂದ್ರರು ಬೀಜವಾಗಿ; ದ್ವಿಜರು–ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯ–ಗೊಬ್ಬರವಾಗಿ, ಹೊಸ ಭಾರತದ ಬೆಳೆ ಬೆಳೆಯಬೇಕೆಂದು ಆಶಿಸಿದ್ದರು. ಹೀಗೆ ಹಿಂದುಳಿದ ವರ್ಗಗಳ ಚಳುವಳಿ ಎಲ್ಲ ಜಾತಿ–ಜನವರ್ಗಗಳ ಚಳುವಳಿಯಾಗಿ, ಸಮಾಜವಾದಿ ಸಮಾಜವನ್ನು ನಿರ್ಮಿಸುವಲ್ಲಿ ನೆರವಾಗಬೇಕೆಂದು ಬಯಸಿದ್ದರು. ಅದು ಶಿವಮೊಗ್ಗ ಜಿಲ್ಲೆಯ ಮಟ್ಟಕ್ಕೆ ನಿಜವೂ ಆಗಿತ್ತು. ಎಷ್ಟೊಂದು ಜನ ದ್ವಿಜರು ಗೋಪಾಲಗೌಡ ಮತ್ತು ಅವರ ಶೂದ್ರ ಶಿಷ್ಯರ ಮೇಲೆ ಅಭಿಮಾನ ಮತ್ತು ವಿಶ್ವಾಸಗಳನ್ನಿಟ್ಟು, ತಾವು ಹಿಂದೆ ನಿಂತು ಅವರನ್ನು ಬೆಳೆಸಿದರು... ಆದರೆ ಗೋಪಾಲಗೌಡರ ನಂತರ ಅವರ ಈ ಶಿಷ್ಯರು ಅವರು ಬಳುವಳಿಯಾಗಿ ಬಿಟ್ಟುಹೋಗಿದ್ದ ಸಮಾಜವಾದಿ ವಾತಾವರಣದಲ್ಲಿ ಸಮೃದ್ಧವಾಗಿ ಬೆಳೆದು, ಕ್ರಮೇಣ ಸಮಾಜವಾದವನ್ನೇ ಮರೆತರು! ಈ ಬೆಳವಣಿಗೆಯ ಹಿಂದೆ ಎದ್ದು ಕಾಣುವುದು, ಶೂದ್ರ ಜಾತಿಗಳು–ಅವೆಷ್ಟೇ ಕೆಳ ಸ್ತರಕ್ಕೆ ಸೇರಿ ಕಷ್ಟ ಅವಮಾನಗಳನ್ನು ಅನುಭವಿಸಿದ್ದರೂ–ಅಧಿಕಾರ ಮತ್ತು ಸಂಪತ್ತಿನ ಸಂಪರ್ಕಕ್ಕೆ ಬಂದೊಡನೆ ಎಲ್ಲ ಮರೆತು, ವೈಯುಕ್ತಿಕ ಠೇಂಕಾರದ ಊಳಿಗಮಾನ್ಯಶಾಹಿಯಾಗಿ ಪರಿವರ್ತಿತವಾಗುವ ವೈಚಿತ್ರ್ಯ! ನಮ್ಮ ಈ ಸಮಾಜವಾದಿ ನಾಯಕರೂ–ಅಖಿಲ ಭಾರತ ಮಟ್ಟದಲ್ಲಿ, ಕರ್ಪೂರಿ ಠಾಕೂರ್ ಮತು ನಿತೀಶ್ ಕುಮಾರ್ ಎಂಬೆರಡು ಅಪವಾದಗಳನ್ನು ಬಿಟ್ಟು–ಇದರಿಂದ ಹೊರತಾಗಲಿಲ್ಲ. ರಾಜ್ಯದಲ್ಲಿ ಸಮಾಜವಾದಿಗಳ ಮಧ್ಯೆ ಮುಖ್ಯಮಂತ್ರಿಯಾಗಲು ನನ್ನ ಪ್ರಕಾರ ಜೆ.ಎಚ್.ಪಟೇಲರಗಿಂತ ಹಲವು ನೆಲೆಗಳಲ್ಲಿ ಹೆಚ್ಚು

ಅರ್ಹರಾಗಿದ್ದ ಕಾಗೋಡು ತಿಮ್ಮಪ್ಪ, ಜಿಲ್ಲಾ ಮಟ್ಟದ ನಾಯಕರಾಗಿಯೇ ಉಳಿದು ಹೀಗೆ ಕರಗಿ ಹೋಗುವಂತಾಗಿರುವುದರ ಹಿಂದಿನ ಕಾರಣ, ಈ ವೈಯುಕ್ತಿಕ ಅಹಂಕಾರ ಮತ್ತು ಠೇಂಕಾರಗಳ ಶೂದ್ರ ರಾಜಕಾರಣವೇ ಆಗಿದೆ.

ಇದು ಸಮಾಜವಾದಿ ಚಳುವಳಿಯ ಜಾತಿ ನೀತಿಯ ಬಗ್ಗೆಯೇ ಇಂದು ಅನೇಕ ಪ್ರಶ್ನೆಗಳನ್ನು ಎತ್ತುತ್ತದೆ ಎಂದು ನಾನು ಭಾವಿಸಿದ್ದೇನೆ. ಏಕೆಂದರೆ, ಈ ನೀತಿಯ ವೈಫಲ್ಯದಿಂದಾಗಿಯೇ ಇಂದು ಯಾವುದನ್ನು ಸಮಾಜವಾದಿ ಚಳುವಳಿ ಹಿಂದೂ ಧರ್ಮದ ಸಂಕುಚಿತ ಧಾರೆಯೆಂದು ಕರೆದಿತ್ತೋ ಮತ್ತು ಯಾವ ಅಪಾಯದ ವಿರುದ್ಧ ಎಚ್ಚರಿಕೆಯಾಗಿ ತನ್ನ ಜಾತಿ ನೀತಿಯನ್ನು ರೂಪಿಸಿತ್ತೋ ಅದು; ದ್ವಿಜರೇ ಬೀಜವಾಗಿ, ಶೂದ್ರರನ್ನು ಗೊಬ್ಬರವಾಗಿ ಬಳಸಿಕೊಂಡು ರಾಜ್ಯದಲ್ಲಿ ಕೋಮುವಾದಿ ರಾಜಕಾರಣದ ರೂಪದಲ್ಲಿ ಉಗ್ರವಾಗಿ ತಲೆ ಎತ್ತಿದೆ. ಇದರ ಜವಾಬ್ದಾರಿಯನ್ನು ಶಿವಮೊಗ್ಗ ಜಿಲ್ಲೆಯ ಮಟ್ಟಿಗಾದರೂ ಬಂಗಾರಪ್ಪ ಮತ್ತು ತಿಮ್ಮಪ್ಪ ಹೊರಬೇಕಾಗಿದೆ. ಇವರು ರಾಜಕಾರಣಕ್ಕೇ ತಿಲಾಂಜಲಿ ನೀಡುವ ಮುನ್ನ ಈ ಬಗ್ಗೆ ಗಂಭೀರವಾಗಿ ಆಲೋಚಿಸಬೇಕಿದೆ.

(ಸೆಪ್ಟಂಬರ್ ೧೨, ೨೦೦೮, ವಿಕ್ರಾಂತ ಕರ್ನಾಟಕ)

೨೫. ನಕ್ಸಲ್ ಚಳುವಳಿ: ಸಮಾಜದ್ದೇ ಬಳುವಳಿ?

ಈ ನವೆಂಬರ್ ೧೯ರ ಬೆಳಗಿನ ಝಾವ ಮುವ್ವರು ನಕ್ಸಲರು ಪೋಲೀಸರ ಗುಂಡಿಗೆ ಬಲಿಯಾಗಿದ್ದಾರೆ. ಚಿಕ್ಕಮಗಳೂರು ಜಿಲ್ಲೆಯ ಹೊರನಾಡು ಸಮೀಪ ಮಾವಿನ ಹೊಲದ ಬಳಿ ಪೋಲೀಸರೊಂದಿಗೆ ನಡೆದ ಗುಂಡಿನ ಚಕಮಕಿಯಲ್ಲಿ ಹತರಾದ ಈ ಮುವ್ವರೂ ಮಧ್ಯ ವಯಸ್ಸನ್ನೂ ದಾಟದ ಎಳೆ ಜೀವಗಳು. ಅಭಿಷೇಕ್ ಅಲಿಯಾಸ್ ವೆಂಕಟೇಶ್ ಎಂದು ಗುರುತಿಸಲಾಗಿರುವ ತರುಣನ ವಯಸ್ಸು ಕೇವಲ ಹತ್ತೊಂಭತ್ತು ವರ್ಷಗಳು... ಈ ಸಾವುಗಳೊಂದಿಗೆ, ರಾಜ್ಯದ ಮಲೆನಾಡಿನಲ್ಲಿ ನಕ್ಸಲರಿಗೆ ಸಂಬಂಧಿಸಿದ ಹಿಂಸಾಚಾರದಲ್ಲಿ ಕಳೆದ ೫ ವರ್ಷಗಳಲ್ಲಿ ಒಟ್ಟು ೧೩ ಜನ ಬಲಿಯಾದಂತಾಗಿದೆ. ಇವರಲ್ಲಿ ಕರ್ನಾಟಕದಲ್ಲಿ ನಕ್ಸಲ್ ಚಳುವಳಿಯನ್ನು ಹುಟ್ಟು ಹಾಕಿದ ಸಾಕೇತ್ ರಾಜನ್ ಸೇರಿದಂತೆ ಏಳು ಜನ ನಕ್ಸಲರಾಗಿದ್ದರೆ, ಮುವ್ವರು ಅವರಿಗೆ ಆಶ್ರಯ ನೀಡಿದ್ದರೆಂದು ಪೋಲೀಸರಿಂದ ಸಂಶಯಕ್ಕೊಳಗಾಗಿದ್ದವರು. ಇನ್ನಿಬ್ಬರು ಪೋಲೀಸ್ ಮಾಹಿತಿದಾರರರೆಂದು ನಕ್ಸಲರಿಂದ ಸಂಶಯಕ್ಕೊಳಪಟ್ಟು ಕೊಲ್ಲಲ್ಪಟ್ಟವರು. ಇನ್ನೋರ್ವ ಮೊನ್ನೆಯ ಗುಂಡಿನ ಚಕಮಕಿಯಲ್ಲಿ ಹತನಾದ ನಕ್ಸಲ್ ನಿಗ್ರಹ ದಳದ ಪೋಲೀಸ್ ಪೇದೆ ಗುರುಪ್ರಸಾದ್.

ನಕ್ಸಲ್ ಚಳುವಳಿಯಿಂದ ಪೀಡಿತವಾಗಿರುವ ಇತರ ರಾಜ್ಯಗಳಲ್ಲಿ ಈ ಚಳುವಳಿಯಿಂದಾಗಿ ಸಂಭವಿಸುತ್ತಿರುವ ಹಿಂಸಾಚಾರಕ್ಕೆ ಹೋಲಿಸಿದರೆ, ಇವೇನೂ ಅಷ್ಟು ಆತಂಕಕಾರಿಯಾದ ಅಂಕಿ ಅಂಶಗಳಂತೆ ತೋರುವುದಿಲ್ಲ. ಆದರೆ ಈ ಚಳುವಳಿ ಕರ್ನಾಟಕದಲ್ಲಿ ಹೀಗೇ ಬೆಳೆದರೆ ಆಗಬಹುದಾದ ಅನಾಹುತ ಮಾತ್ರ ಭೀಕರವಾದುದು. ಆದನ್ನು ನಾವೀಗ ಪ.ಬಂಗಾಳ ಛತ್ತೀಸಘಡ, ಒರಿಸ್ಸಾ, ಝಾರ್ಖಂಡ್ ಮತ್ತು ಬಿಹಾರಗಳಲ್ಲಿ ನೋಡುತ್ತಿದ್ದೇವೆ. ಈಗ ಈ ರಾಜ್ಯಗಳಲ್ಲಿ ಭದ್ರವಾಗಿ ನೆಲೆಗೊಂಡಿರುವ ನಕ್ಸಲ್ ಗುಂಪುಗಳು ಈ ರಾಜ್ಯಗಳ ಅರಣ್ಯ ಪ್ರದೇಶಗಳ ಜನತೆಯನ್ನು ತಮ್ಮ ಆಡಳಿತಕ್ಕೆ ಒಳಪಡಿಸಿಕೊಂಡು, ಅಲ್ಲಿ ಬಂದೂಕಿನ ರಾಜ್ಯಗಳನ್ನು ಸ್ಥಾಪಿಸಿವೆ. ಇವರ ಮತ್ತು ಪೋಲೀಸರ ಬಂದೂಕಗಳ ನಡುವೆ ಸಿಕ್ಕ ಈ ಜನತೆ ಯಾವ ನಾಗರಿಕ ಹಕ್ಕು ಮತ್ತು ಸೌಲಭ್ಯಗಳಿಗೂ ಬಾಧ್ಯರಾಗದೆ, ಅಸಹಾಯಕ ಸ್ಥಿತಿಯಲ್ಲಿದ್ದಾರೆ. ಇನ್ನು ಈ ಗುಂಪುಗಳೊಳಗೇ ಸೈದ್ಧಾಂತಿಕ ಅಥವಾ ವಸೂಲಿ ಸಂಬಂಧಿತ ಭಿನ್ನಾಭಿಪ್ರಾಯಗಳಿಂದಾಗಿ ಸೃಷ್ಟಿಯಾಗುವ ಒಳಗುಂಪುಗಳ ನಡುವೆ ನಡೆಯುವ ಕದನಗಳ ಮಧ್ಯೆ ಸಿಕ್ಕಿ ಹತರಾಗುವ ಅಮಾಯಕರ ಸುದ್ದಿ, ನಾಗರಿಕ ಲೋಕಕ್ಕೆ ತಲುಪುವುದೇ ಇಲ್ಲ. ನಕ್ಸಲ್ ಹಿಂಸಾಚಾರಕ್ಕೆ ಅತಿ ಹೆಚ್ಚು ಬಲಿಯಾಗುತ್ತಿರುವವರು ಭ್ರಷ್ಟ ರಾಜಕಾರಣಿಗಳೂ ಅಲ್ಲ, ದುಷ್ಟ ಜಮೀನುದಾರರೂ ಅಲ್ಲ;ಬದಲಿಗೆ, ಕರ್ತವ್ಯ ನಿರತ ಬಡ ಪೋಲಿಸ್ ಸಿಬ್ಬಂದಿ.

ಇಂತಹ ಮೊದಲ ಬಲಿ, ಕರ್ನಾಟಕದ ನಕ್ಸಲರಿಂದ ಈಗ ದಾಖಲಾಗಿದೆ. ಇದು ಈ ನಕ್ಸಲರು ಈಗ ಎಷ್ಟರ ಮಟ್ಟಿಗೆ ಶಸ್ತ್ರಸಜ್ಜಿತರಾಗಿದ್ದಾರೆ ಎಂಬುದನ್ನು ತೋರಿಸುತ್ತದೆ. ಈ ಸೂಚನೆಯನ್ನು ಆಧರಿಸಿ, ನಕ್ಸಲ್ ನಿಗ್ರಹ ಪೋಲೀಸ್ ಕಾರ್ಯಾಚರಣೆ ಇನ್ನಷ್ಟು ತೀವ್ರ ಮತ್ತು ವ್ಯಾಪಕವಾದರೆ ಆಶ್ಚರ್ಯವಿಲ್ಲ. ಇದಂತೂ ಕರ್ನಾಟಕದ ಸಾರ್ವಜನಿಕ ಶಾಂತಿಯ ಹಿತದೃಷ್ಟಿಯಿಂದ ಶುಭ ಸೂಚನೆಯಲ್ಲ.

ಕರ್ನಾಟಕದ ಮಟ್ಟಿಗಂತೂ, ನಕ್ಸಲರು ಹತರಾದಾಗಲೆಲ್ಲ ಸಾಮಾನ್ಯ ಜನ ಮೊದಲ ಪ್ರತಿಕ್ರಿಯೆಯಾಗಿ ಅವರ ಬಗ್ಗೆ ಮರುಗುವುದೇ ಹೆಚ್ಚು. ಏಕೆಂದರೆ ಅವರೆಲ್ಲ ಯಾವುದೇ ವೈಯುಕ್ತಿಕ ಪ್ರತಿಫಲಾಪೇಕ್ಷೆ ಇಲ್ಲದೆ ತಮ್ಮ ಪರವಾಗಿ ಅನ್ಯಾಯಗಳ ವಿರುದ್ಧ ಪ್ರತಿಭಟಿಸುತ್ತಾ, ಸಮಗ್ರ ಸಾಮಾಜಿಕ ಬದಲಾವಣೆಗಾಗಿ ಕಾರ್ಯಾಚರಣೆ ನಡೆಸುತ್ತಾ ಪ್ರಾಣ ತೆತ್ತವರು ಎಂದವರು ಭಾವಿಸುತ್ತಾರೆ. ಅವರಲ್ಲಿ ಬಹಳಷ್ಟು ಜನ ಬಡವರ ಮಕ್ಕಳು. ಈ ಬಡತನಕ್ಕೆ ಈಗಿರುವ ರಾಜಕೀಯ ವ್ಯವಸ್ಥೆಯಿಂದ ಪರಿಹಾರ ಅಸಾಧ್ಯವೆಂದು ತೀರ್ಮಾನಿಸಿ, ಈ ವ್ಯವಸ್ಥೆಗೆ ಕಾರಣರಾಗಿರುವ ವರ್ಗ ಶತ್ರುಗಳನ್ನು ಹತ ಮಾಡುವ ಮೂಲಕ ಹೊಸ ರಾಜಕೀಯ ವ್ಯವಸ್ಥೆಯನ್ನು ಸ್ಥಾಪಿಸಬಹುದೆಂದು ನಂಬಿದ ಅರೆ-ಮುಗ್ಧರಿವರು. ಇಂದಿನ ರಾಜಕೀಯ ವ್ಯವಸ್ಥೆ ಸಾಂವಿಧಾನಿಕ ಹೋರಾಟಗಳ ಮೂಲಕ ರಿಪೇರಿಯ ಸಾಧ್ಯತೆಗಳನ್ನು ಅಲ್ಲಗೆಳೆಯುವಷ್ಟು ಅವನತಿಗೊಂಡಿದೆ, ನಿಜ. ಆದರೆ ಈ ರಾಜಕೀಯ ವ್ಯವಸ್ಥೆಯ ಜಾಗದಲ್ಲಿ ಇವರು ತರಬಯಸುವ ವ್ಯವಸ್ಥೆ ಇದಕ್ಕಿಂತ ಹೆಚ್ಚು ಘೋರವಾಗಿರುವ ಮತ್ತು ಅದರ ವಿರುದ್ಧ ದನಿ ಎತ್ತುವ ಅವಕಾಶವೇ ಇಲ್ಲದಿರುವ ವ್ಯವಸ್ಥೆಯಾಗಿರುವ ಸಾಧ್ಯತೆಗಳೇ ಹೆಚ್ಚು. ಆಲೋಚನೆ ಮತ್ತು ವಿವೇಕ ಕೊನೆಗೊಂಡಾಗ ಆರಂಭವಾಗುವುದೆಂದು ಹೇಳಲಾಗುವ ಹಿಂಸೆ ಸಾಮಾಜಿಕ ಬದಲಾವಣೆಯ ಒಂದು ಅಂಗೀಕಾರ್ಹ ಅಸ್ತ್ರ ಎಂಬ ಅವರ ನಂಬಿಕೆಯಲ್ಲೇ ಈ ಸಾಧ್ಯತೆ ಅಂತರ್ಗತವಾಗಿದೆ.

ಆದರೆ ಈ ಚಳುವಳಿಯಿಂದ ಆಕರ್ಷಿತರಾಗುವ ಯುವಜನ ತಾವು ಕಟ್ಟಬೇಕೆಂದಿರುವ ಹೊಸ ಬಗೆಯ ರಾಜಕಾರಣದ ಬಗ್ಗೆ ಇಷ್ಟು ಆಳವಾಗಿ ಯೋಚಿಸುವ ವ್ಯವಧಾನವಿಲ್ಲದವರು. ಕರ್ನಾಟಕದಲ್ಲಿ ನಕ್ಸಲ್ ಚಳುವಳಿಗೆ ಒಂದು ಸಿದ್ಧಾಂತ ಮತ್ತು ಸಂಘಟನಾ ಸ್ವರೂಪವನ್ನು ನೀಡಿದ ಸಾಕೇತ್ ರಾಜನ್, ಜಾಗತಿಕ ರಾಜಕೀಯ ಹೋರಾಟಗಗಳ ಬಗೆಗೆ ಮತ್ತು ನಿರ್ದಿಷ್ಟವಾಗಿ ಕರ್ನಾಟಕದ ರಾಜಕೀಯ ಇತಿಹಾಸದ ಬಗೆಗೆ ತನ್ನದೇ ಒಳನೋಟಗಳುಳ್ಳ ಆಳವಾದ ಪಾಂಡಿತ್ಯ ಹೊಂದಿದ್ದ ಪ್ರಚಂಡ ಬುದ್ಧಿಜೀವಿ. ಹಾಗೇ ನಕ್ಸಲ್ ವಿಚಾರಧಾರೆಯೊಂದಿಗೆ ನಾವು ಸಾಮಾನ್ಯವಾಗಿ ಗುರುತಿಸುವ ಕ್ರುದ್ಧತೆಯನ್ನು ಒಂದಿಷ್ಟೂ ಬಹಿರಂಗವಾಗಿ ತೋರಿಸಿಕೊಳ್ಳದ 'ಸಜ್ಜನ' ಈತ. ಹಾಗಾಗಿಯೇ ಕರ್ನಾಟಕದ ಅನೇಕ ಸಜ್ಜನ ಹುಡುಗ-ಹುಡುಗಿಯರು ಎಲ್ಲ ಉದಾರವಾದಿ ಜನಪರ ಚಳುವಳಿಗಳು ತಮ್ಮ ವಿಶ್ವಾಸಾರ್ಹತೆ ಕಳೆದುಕೊಂಡು ಕುಸಿದು ಬಿದ್ದಿದ್ದ ಸಂದರ್ಭದಲ್ಲಿ ಈತನ ಪ್ರಭಾವಕ್ಕೆ ಸಿಕ್ಕಿ, ತಮ್ಮ ಯೌವ್ವನದ ಆದರ್ಶಪ್ರಿಯತೆಯ ಒತ್ತಡದಲ್ಲಿ ಅವಸರದ ತೀರ್ಮಾನಗಳನ್ನು ಕೈಗೊಂಡಿದ್ದು ಸಹಜವೇ ಆಗಿತ್ತು.

ಇದಕ್ಕೆ ಇನ್ನೊಂದು ಕಾರಣವೂ ಉಂಟು. ಬಲಪಂಥೀಯ ಅತಿವಾದಿಗಳಂತೆ, ಈ ಎಡ

ಪಂಥೀಯ ಅತಿವಾದಿಗಳೂ ಒಮ್ಮೆಗೇ ನೇರ ಕಾರ್ಯಾಚರಣೆಗಳಿಗೆ ಇಳಿಯುವವರಲ್ಲ. ಇವರದೇನಿದ್ದರೂ ಗುಪ್ತ ಕಾರ್ಯಾಚರಣೆಗಳು. ಮೊದಲು ಇವರು ರಾಜ್ಯಾದ್ಯಂತ ವಿದ್ಯಾರ್ಥಿ ಸಂಘಟನೆ ಕಟ್ಟಿದರು. ನಂತರ ತಮ್ಮ ಚಟುವಟಿಕೆಗಳಿಗೆ ಸೂಕ್ತವಾದ ನೆಲೆಯನ್ನು ಗುರುತಿಸಿಕೊಂಡು, ಶಿವಮೊಗ್ಗ–ಚಿಕ್ಕಮಗಳೂರು ಆಸುಪಾಸಿನಲ್ಲಿ ಜನರ ಸಹಾನುಭೂತಿ ಗಳಿಸಿದ್ದ 'ತುಂಗಾ ಉಳಿಸಿ' ಚಳುವಳಿಯನ್ನು ಹೊಕ್ಕರು. ಸಾಕೇತ್ ರಾಜನ್‌ರಿಂದ ಕಲಿತ ಸಜ್ಜನಿಕೆ ಮತ್ತು ಮತ್ತು ಸವಿನುಡಿಗಳ ಮೂಲಕ ಸಮಾಜದ ಅನೇಕ ಗಣ್ಯರ, ಉದಾರವಾದಿ ಬುದ್ಧಿಜೀವಿಗಳ ಮನ್ನಣೆ ಗಳಿಸಿದರು. ಈ ಗಣ್ಯರೂ, ಬುದ್ಧಿಜೀವಿಗಳೂ ಕಳೆದ ಕೆಲವು ವರ್ಷಗಳಿಂದ ತುಕ್ಕು ಹಿಡಿದು ಹೋಗಿದ್ದ ತಮ್ಮ 'ಪ್ರಗತಿಪರತೆ'ಯನ್ನು ಸಾಬೀತುಗೊಳಿಸಿಕೊಳ್ಳಲು ಇವರೊಂದಿಗೆ ಗುರುತಿಸಿಕೊಂಡರು. ಇದರಿಂದಾಗಿ ಸಾಕಷ್ಟು ಸಾರ್ವಜನಿಕ ಮಾನ್ಯತೆ ಮತ್ತು ಹಣದ ಬೆಂಬಲವೂ ಇವರಿಗೆ ದೊರಕಿತು. ಇದರ ಸದುಪಯೋಗಪಡಿಸಿಕೊಂಡ ಈ ಗುಂಪು ನಂತರ 'ಕೋಮು ಸೌಹಾರ್ದ ವೇದಿಕೆ' ಎಂಬ ಹೆಸರಿನಡಿ ಇನ್ನಷ್ಟು ಅಮಾಯಕರ ಬೆಂಬಲ ಗಳಿಸಿಕೊಂಡು, 'ಕುದುರೆಮುಖ ರಾಷ್ಟ್ರೀಯ ಉದ್ಯಾನವನ'ದ ಹೋರಾಟ ಆರಂಭಿಸಿ ಕರ್ನಾಟಕದಲ್ಲಿ ತನ್ನ ರಾಜಕೀಯ ನೆಲೆ ಕಂಡುಕೊಳ್ಳುವಲ್ಲಿ ಯಶಸ್ವಿಯಾಯಿತು. ಏಳೆಂಟು ವರ್ಷಗಳ ಹಿಂದೆ ಶಿವಮೊಗ್ಗ ಮತ್ತು ಕುವೆಂಪು ವಿಶ್ವವಿದ್ಯಾಲಯದ ಆವರಣದಲ್ಲಿ ಯಾವುದೇ ವಿಚಾರ ಸಂಕಿರಣ ನಡೆದರೂ, ಇವರ ರಾಜಕೀಯ ಸಾಹಿತ್ಯ ಕೃತಿಗಳ ಮಾರಾಟವೇ ಅವುಗಳ ಮುಖ್ಯ ಉದ್ದೇಶ ಎನ್ನಿಸುವಷ್ಟರ ಮಟ್ಟಿಗೆ ಅಲ್ಲಿ ಇವರ ಹಾವಳಿ ಶುರುವಾಗಿತ್ತು.

ಇದರ ಹಿಂದೆ ಶಿವಮೊಗ್ಗಾದ ಅನೇಕ ಅಧ್ಯಾಪಕರ ಮತ್ತು ಬುದ್ಧಿಜೀವಿಗಳ 'ಕ್ರಾಂತಿಕಾರಕತೆ'ಯ ಭ್ರಾಂತಿಯೂ ಕೆಲಸ ಮಾಡಿತ್ತು. ಇವರು ದಾರಿ ತಪ್ಪಿದ ಆ ಹುಡುಗರನ್ನು ತಮ್ಮ ಈ ಭ್ರಾಂತಿಯಲ್ಲಿ ಅಮಾಯಕವಾಗಿ ಪ್ರೋತ್ಸಾಹಿಸಿದ್ದೂ ಉಂಟು. ಪೋಲೀಸ್ ಕಾರ್ಯಾಚರಣೆ ಶುರುವಾದ ಮೇಲೆ ಆ ತಪ್ಪಿಗಾಗಿ ಕೈ ಕೈ ಹಿಸುಕಿಕೊಳ್ಳತೊಡಗಿದ ಇವರು, ಆಗಲೇ ತಮ್ಮ ವಿವೇಕದಲ್ಲಿ ಆ ಹುಡುಗರ ಚಟುವಟಿಕೆಗಳನ್ನು ವಿವರಗಳಲ್ಲಿ ಗಮನಿಸಿ ಅವರಿಗೆ 'ಬುದ್ಧಿ' ಹೇಳಿದ್ದರೆ, ಅವರು ಹಿಡಿದಿರುವ ದಾರಿಯ ಅಪಾಯ ಮತ್ತು ನಿರರ್ಥಕತೆಗಳ ಬಗ್ಗೆ ಎಚ್ಚರಿಸಿ ನಿರುತ್ತೇಜಿಸಿದ್ದರೆ, ಸಾಕೇತ್ ರಾಜನ್ ತನ್ನ ವಿಪರೀತ ಓದಿನ ಒತ್ತಡದಲ್ಲಿ ಥಣ್ಣಗೆ ಹೊತ್ತಿಸಿದ್ದ ನಕ್ಸಲ್ ಬೆಂಕಿಗೆ ಅನೇಕ ಮುಗ್ಧ ಜೀವಗಳು ಆಹುತಿಯಾಗುವುದನ್ನು ತಪ್ಪಿಸಬಹುದಿತ್ತು.

ಈ ಚಳುವಳಿಯು ಕಾರ್ಯಸೂಚಿಗೆ ಅನುಗುಣವಾಗಿಯೋ, ಕೌಟುಂಬಿಕ ಕಾರಣಗಳಿಂದಾಗಿಯೋ ಅಥವಾ ಪೋಲೀಸ್ ಕಾರ್ಯಾಚರಣೆಯ ಭಯದಿಂದಾಗಿಯೋ ಕಾಡನ್ನು ಹೊಗಲಾಗದೆ ನಾಡಿನಲ್ಲೇ ಉಳಿದುಕೊಂಡು, ಈಗ ಸಾಕೇತ್ ರಾಜನ್‌ನ ಸಾವಿನ ನಂತರ ಮತ್ತು ಸಾರ್ವಜನಿಕವಾಗಿ ತಮ್ಮನ್ನು ಮಾನ್ಯ ಮಾಡಿದ್ದ ಸ್ಥಳೀಯ ಗಣ್ಯರು ಮತ್ತು ಬುದ್ಧಿಜೀವಿಗಳು ಇದ್ದಕ್ಕಿದ್ದಂತೆ ಕೈಬಿಟ್ಟ ದಿಗ್ಭ್ರಮೆಯಲ್ಲಿ ಸಣ್ಣ ಪುಟ್ಟ ಕೆಲಸಗಳನ್ನು ಮಾಡಿಕೊಂಡು ಜೀವನ ಸಾಗಿಸುತ್ತಿರುವ ಈ ಹುಡುಗ–ಹುಡುಗಿಯರನ್ನು ಕಂಡರೆ ಬೇಸರವಾಗುತ್ತದೆ. ಇನ್ನೂ ಒಳಗೆ ಬೆಂಕಿ ಇಟ್ಟುಕೊಂಡೇ ಓಡಾಡುತ್ತಿರುವ ಇವರಲ್ಲಿ ಕೆಲವರು ಒಳಗೊಳಗೇ ಉರಿದು ಕರಕಲಾಗುತ್ತಿದ್ದರೆ, ಇನ್ನು ಕೆಲವರು ಈ 'ಬೆಂಕಿ'ಯನ್ನು ತಾವು ಹಿಡಿದಿರುವ ಹೊಸ 'ಉದ್ಯೋಗ'ಗಳಲ್ಲಿ ಬಳಸಿ, ದೊಡ್ಡ ವಸೂಲಿವೀರರಾಗಿಯೋ ಅಥವಾ ತಮಗೆ ಆಶ್ರಯ

ನೀಡಿದ ಉದ್ಯಮಿಗಳ ಏಜೆಂಟರಾಗಿಯೋ ಪರಿವರ್ತಿತರಾಗಿ 'ಭಾರಿ ಕುಳ'ಗಳೆನಿಸಿದ್ದಾರೆ. ಆದರೂ ಇವರ ಕ್ರಾಂತಿಕಾರಕ ಪ್ರವಚನಗಳ 'ಬಿಸಿ'ಯೇನೂ ಕಡಿಮೆಯಾಗಿಲ್ಲ! ಕರ್ನಾಟಕದಲ್ಲಿ ನಕ್ಸಲ್ ಚಳುವಳಿ ನಿಜವಾಗಿ ಬೇರು ಬಿಡುವ ಮುನ್ನವೇ ಅದು ತನ್ನ ನಾಯಕನನ್ನು ಕಳೆದುಕೊಂಡು, ಶೀಲ ವಿಚಲಿತವಾದುದರ ಪರಿಣಾಮವಿದು.

ಇದರ ಪರಿಣಾಮವನ್ನು ಕಾಡಿನೊಳಗಿರುವ ಅದರ ಚಟುವಟಿಕೆಗಳಲ್ಲೂ ಗಮನಿಸಬಹುದು. ಎರಡು ಗುಂಪುಗಳಾಗಿ ಒಡೆದು ಹೋಗಿರುವ ಈ ಚಳುವಳಿಯ ಒಂದು ಗುಂಪು ಮಾತ್ರ ಈಗ ಕಾಡಿನೊಳಗಿದೆ ಎಂದು ಹೇಳಲಾಗುತ್ತಿದೆ. ಅದು ಕೂಡ ಒಂದು ಚಿಕ್ಕ ಗುಂಪಾಗಿದ್ದು, ನಾಡಿಗೆ ಬರಲು ಕಾತುರವಾಗಿದ್ದರೂ; ಸರ್ಕಾರದ ಮೇಲೆ, ಪೋಲೀಸರ ಮೇಲೆ ಭರವಸೆ ಇರದೆ ಕಾಡಿನೊಳಗೇ ತನ್ನ ಇರವನ್ನು ಸ್ಥಾಪಿಸಿಕೊಳ್ಳಲು ಹೆಣಗುತ್ತಿದೆ ಎಂದೂ ಹೇಳಲಾಗುತ್ತಿದೆ. ಮನೋಹರ ಎಂಬ 'ನಕ್ಸಲ'; ನಾಡಿಗೆ ಬಂದು ಪತ್ರಕರ್ತನಾಗಿ ಬಹಿರಂಗ ಬದುಕು ನಡೆಸುತ್ತಿದ್ದರೂ, ಪೋಲೀಸರ 'ಒತ್ತಡ' ತಾಳಲಾಗದೆ ಕಾಡಿಗೆ ಹಿಂತಿರುಗಿ ಇತ್ತೀಚಿನ ಪೋಲೀಸ್ ಕಾರ್ಯಾಚರಣೆಯಲ್ಲಿ ಹತನಾಗಿರುವುದು ಇದಕ್ಕೆ ಸಾಕ್ಷಿ ಎಂದು ಸ್ಥಳೀಯ ಪತ್ರಕರ್ತರು ಹೇಳುತ್ತಿದ್ದಾರೆ. ಇದು ನಿಜವಾಗಿದ್ದಲ್ಲಿ ಸದ್ಯದ ಸರ್ಕಾರದ ನೀತಿ ರಾಜಕೀಯ ಪ್ರೇರಿತವಾಗಿದೆಯೇ ಹೊರತು ಸಮಸ್ಯೆಯನ್ನು ಅದರ ಮೂಲದಲ್ಲಿ ಅರ್ಥಮಾಡಿಕೊಂಡು ಪರಿಹರಿಸಲು ನಿರಾಕರಿಸುತ್ತಿದೆ ಎಂದೇ ಹೇಳಬೇಕಾಗುತ್ತದೆ.

ಕರ್ನಾಟಕದ ನಕ್ಸಲ್ ಚಳುವಳಿ ಇತರ ರಾಜ್ಯಗಳ ನಕ್ಸಲ್ ಚಳುವಳಿಗಳಂತೆ ಹಿಂಸೆಯೊಂದೇ ಬದಲಾವಣೆಯ ಮಾರ್ಗ ಎಂದು ನಂಬಿಕೊಂಡದ್ದಲ್ಲ. ಹಾಗಾಗಿಯೇ ಅದು ಈವರೆಗೆ ತಾನಾಗಿ ಹಿಂಸಾಚಾರಕ್ಕೆ ಎಂದೂ ಇಳಿದಿಲ್ಲ. ತಾನು ಹಿಂಸೆಗೊಳಗಾದಾಗ ಮಾತ್ರ ಪ್ರತಿಹಿಂಸೆ ನಡೆಸಿದೆ ಎಂಬುದನ್ನು ಸರ್ಕಾರ ಗಮನಿಸಬೇಕು. ಹಾಗೇ ಇದು ಉಗ್ರರಿಂದ ಕೂಡಿದ ಗುಂಪಲ್ಲ. ಬದಲಿಗೆ, ವ್ಯವಸ್ಥೆಯ ಹಿಂಸೆಗೆ ನಲುಗಿ ಭಾವಾವೇಶದಲ್ಲಿ ಈ ಚಳುವಳಿಗೆ ಸೇರಿಕೊಂಡ ವಿದ್ಯಾವಂತ ಮತ್ತು ಸೂಕ್ಷ್ಮ ಮನಸ್ಸಿನ ಯುವಜನರ ಗುಂಪು ಇದು. ಹಾಗಾಗಿ ಕರ್ನಾಟಕದ ನಕ್ಸಲ್ ಸಮಸ್ಯೆಯನ್ನು ಬೇರೆ ರಾಜ್ಯಗಳ ನಕ್ಸಲ್ ಸಮಸ್ಯೆಗಿಂತ ಭಿನ್ನವಾಗಿ ನೋಡಿ ಅದನ್ನು ನಿರ್ವಹಿಸಬೇಕಿದೆ. ಹಾಗೆ ನೋಡಿದರೆ ನಕ್ಸಲ್ ಸಮಸ್ಯೆ ಎಂಬುದೇ ಇಂದಿನ ವ್ಯವಸ್ಥೆ ಸೃಷ್ಟಿಸಿರುವ ಸಮಸ್ಯೆ. ಈ ವ್ಯವಸ್ಥೆಯ ಕರಾಳತೆಯನ್ನು ಗಮನಿಸಿದ ಯಾರಿಗಾದರೂ ಒಂದು ಕ್ಷಣ, ಇದಕ್ಕೆ ಸಾಂವಿಧಾನಿಕ ಪರಿಹಾರ ಸಾಧ್ಯವೇ ಇಲ್ಲ ಎಂಬ ಆಲೋಚನೆ ಮನದ ಮುಂದೆ ಸುಳಿಯದೇ ಹೋದಲ್ಲಿ; ಆ ವ್ಯಕ್ತಿ ಅಸೂಕ್ಷ್ಮನೋ ಅಪ್ರಾಮಾಣಿಕನೋ ಆಗಿರುತ್ತಾನೆ ಎಂದೇ ಹೇಳಬೇಕು. ಪರಿಸ್ಥಿತಿಯನ್ನು ಈ ಮಟ್ಟಕ್ಕೆ ತಂದಿರುವ ನಾವು ಅದರ ಹೊಣೆಯನ್ನೂ ಹೊರಬೇಕಾಗುತ್ತದೆ.

ಹಾಗಾಗಿ ಈಗ ಕಾಡಿನಲ್ಲಿರುವ ನಕ್ಸಲರೆಂದರೆ ಸಮಾಜ ವಿರೋಧಿಗಳೆಂದೋ, ಅಪರಾಧಿಗಳೆಂದೋ ಪರಿಗಣಿಸದೆ, ಅವರ ವಿರುದ್ಧದ ಸಶಸ್ತ್ರ ಕಾರ್ಯಾಚರಣೆಯ ಅಂತ್ಯವನ್ನು ಘೋಷಿಸಿ; ಅವರು ನಾಡಿಗೆ ಬಂದು ನೆಲೆಗೊಂಡು ಸಾಂವಿಧಾನಿಕ ಹೋರಾಟಗಳ ಮೂಲಕವೇ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವಂತಹ ವಿಶ್ವಾಸದ ಪರಿಸ್ಥಿತಿಯನ್ನು ನಿರ್ಮಿಸಲು ಸರ್ಕಾರ ಮುಂದಾಗಬೇಕು. ಇದಕ್ಕಾಗಿ ಎಚ್.ಎಸ್. ದೊರೆಸ್ವಾಮಿ, ಎಚ್.ಗಣಪತಿಯಪ್ಪ,

ಯು.ಆರ್.ಅನಂತಮೂರ್ತಿ, ಎಚ್.ಜಿ. ಗೋವಿಂದೇಗೌಡ, ಕಡಿದಾಳು ಶಾಮಣ್ಣ, ದೇವನೂರು ಮಹಾದೇವರಂತಹ ವಿಶ್ವಾಸಾರ್ಹ ಗಣ್ಯರ ಮಧ್ಯಸ್ಥಿಕೆಗೆ ಯತ್ನಿಸಬೇಕು. ಮೊದಲಿಗೆ ನಮ್ಮ ಮುಖ್ಯ ಮಂತ್ರಿಗಳು ಕರ್ನಾಟಕದ ಎಲ್ಲ ಮಕ್ಕಳೂ ತಮ್ಮ ಮಕ್ಕಳೇ ಎಂದು ಭಾವಿಸಿ; ಅವರಲ್ಲಿ ಕೆಲವರು ಹಾದಿ ತಪ್ಪಿದ್ದಗೆ ಅದಕ್ಕೆ ಕಾರಣ ಹುಡುಕಿ ಅವರನ್ನು ಸರಿ ದಾರಿಗೆ ತರುವ ತಂದೆಯಂತೆ ವರ್ತಿಸಬೇಕು. ಇದಕ್ಕೆ ಸಿದ್ಧತೆಯೆಂಬಂತೆ ಚಿರಂಜೀವಿ ಸಿಂಗ್ ಸಮಿತಿಯ ಶಿಫಾರ್ಸುಗಳನ್ನು ಆದ್ಯತೆಯ ಮೇಲೆ ಪ್ರಾಮಾಣಿಕವಾಗಿ ಜಾರಿಗೆ ತರಲು ಮುಂದಾಗಬೇಕು ಮತ್ತು ಚಿಕ್ಕಮಗಳೂರು ಸುತ್ತ ಮುತ್ತ ಮರಗಳ್ಳರ ಹಾಗೂ ಮರಳುಗಳ್ಳರ ಹಣಕಾಸಿನ ಮೇಲೆ ಕಟ್ಟಲ್ಪಟ್ಟಿರುವ ದುಷ್ಟ ಮತ್ತು ಭ್ರಷ್ಟ ರಾಜಕಾರಣಕ್ಕೆ ಅಂತ್ಯ ಹಾಡುವ ದಿಟ್ಟ ನಿರ್ಧಾರ ಕೈಗೊಳ್ಳಬೇಕು. ಹಾಗೇ ಅಸಮಾನತೆ, ಅಕ್ರಮ, ಅನ್ಯಾಯ, ಶೋಷಣೆಗಳ ವಿರುದ್ಧ ದನಿ ಎತ್ತುವವರೆಲ್ಲರನ್ನೂ 'ನಕ್ಸಲರು' ಎಂದು ಹೆಸರಿಸಿ ಕಿರುಕುಳ ಕೊಡುವ 'ಪೋಲೀಸ್ ಭಯೋತ್ಪಾದನೆ'ಯನ್ನು ನಿಲ್ಲಿಸಬೇಕು. ಇಲ್ಲದೇ ಹೋದಲ್ಲಿ ಈ ನಕ್ಸಲ್ ಚಳುವಳಿ, ಸರ್ಕಾರ ಎಷ್ಟೇ ವೀರಾವೇಶ ಪ್ರಕಟಿಸಿದರೂ, ನಿರಂತರವಾಗಿ ಬೆಳೆಯುವುದು ಖಂಡಿತ. ಏಕೆಂದರೆ, ಬೆಳೆಯಲು ಅದಕ್ಕೆ ಕಾರಣಗಳನ್ನು ನಾವೇ ಒದಗಿಸಿಕೊಟ್ಟಂತಾಗುತ್ತದೆ.

(ಡಿಸೆಂಬರ್ ೫, ೨೦೦೮, 'ವಿಕ್ರಾಂತ ಕರ್ನಾಟಕ')

೨೬. ಕರ್ನಾಟಕದ ಕೇಸರೀಕರಣ: ಕವಲು ದಾರಿಯಲ್ಲಿ ರಾಜ್ಯ ರಾಜಕಾರಣ

ಮೊನ್ನೆ 'ಔಟ್ ಲುಕ್' ಪತ್ರಿಕೆಯ ಸುಗತಾ ದೂರವಾಣಿ ಕರೆ ಮಾಡಿ, 'ಕರ್ನಾಟಕದ ಕೇಸರೀಕರಣ' ಕುರಿತ ತಮ್ಮ ವಿಶೇಷ ವರದಿಗಾಗಿ; ನಿಮ್ಮ ಪ್ರಕಾರ ಕರ್ನಾಟಕದಲ್ಲಿ ಬಿಜೆಪಿ ಅಧಿಕಾರಕ್ಕೆ ಬರಲು ಕಾರಣ ಯಾರು ಎಂದು ಕೇಳಿದಾಗ, ಅದು ನನ್ನನ್ನು ಪ್ರಶ್ನೆಯಾಗಿ ಮಾತ್ರ ಕಾಡಲಿಲ್ಲ. ಅದು ತನ್ನ ವ್ಯಾಪಕತೆಯಲ್ಲಿ ಕರ್ನಾಟಕದ ಇಂದಿನ ರಾಜಕೀಯ ಸಂದರ್ಭದ ಹತ್ತಿರದ ನೋಟಕ್ಕೂ ಕಾರಣವಾಯಿತು.

ಬಿಜೆಪಿ ಕರ್ನಾಟಕದಲ್ಲಿ ಏಕಾಕಿಯಾಗಿ ಅಧಿಕಾರಕ್ಕೆ ಬಂದು ಈಗಾಗಲೇ ಆರು ತಿಂಗಳುಗಳು ಕಳೆದಿವೆ. ಈ ಅವಧಿಯಲ್ಲಿ ಕರ್ನಾಟಕದ ರಾಜಕಾರಣಕ್ಕೆ ಅದು ನೀಡಿರುವ ಕೊಡುಗೆ ಏನು ಎಂದು ಒಮ್ಮೆ ಹಿಂತಿರುಗಿ ನೋಡಿದರೆ, ಆಘಾತವೇ ಆಗುತ್ತದೆ. ಆಡಳಿತದಲ್ಲಿ ಯಾವ ವೈಶಿಷ್ಟ್ಯವನ್ನಾಗಲೀ, ವಿಶೇಷ ದಕ್ಷತೆಯನ್ನಾಗಲೀ ತೋರದ ಈ ಸರ್ಕಾರ; ಹಾವೇರಿಯಲ್ಲಿ ರೈತರ ಮೇಲಿನ ಗೋಲೀಬಾರ್‌ನಿಂದ ಹಿಡಿದು, ಇತ್ತೀಚಿನ ಸಂಪಂಗಿ ಲಂಚದ ಪ್ರಕರಣದವರೆಗೆ ರಾಜಕೀಯ ಅನಾಚಾರದ ವಿಷಯದಲ್ಲಿ ಹೊಸ ದಾಖಲೆಗಳನ್ನೇ ನಿರ್ಮಿಸಿದೆ. ಅಷ್ಟೇ ಅಲ್ಲ, ಪದ್ಮಪ್ರಿಯ ಸಾವಿನ ಪ್ರಕರಣದಿಂದ ಹಿಡಿದು ಇತ್ತೀಚಿನ ಮಂಗಳೂರು ಪಬ್ ಮೇಲಿನ ಶ್ರೀರಾಮ ಸೇನೆಯ ಗೂಂಡಾಗಿರಿ ಪ್ರಕರಣದವರೆಗೆ, ಅದು ಅಪರಾಧ ಪ್ರಕರಣಗಳ ನಿರ್ವಹಣೆಯಲ್ಲಿ ಸಂಶಯಾಸ್ಪದ ರೀತಿಯಲ್ಲೇ ವರ್ತಿಸಿದೆ. ಗಣಿ ವ್ಯವಹಾರದ ತನಿಖಾ ವರದಿ ಕುರಿತ ನಿಲುವೂ ಸೇರಿದಂತೆ ಲೋಕಾಯುಕ್ತರಿಂದ ಈ ಸರ್ಕಾರ ಇಷ್ಟು ಚಿಕ್ಕ ಅವಧಿಯಲ್ಲಿ ಎದುರಿಸಿದಷ್ಟು ಟೀಕೆ–ಖಂಡನೆ–ಅಸಮಾಧಾನಗಳನ್ನು ಇನ್ನಾವ ಸರ್ಕಾರವೂ ಎದುರಿಸಿಲ್ಲ ಎಂಬುದೂ ಗಮನಾರ್ಹ. ಅತ್ಯಂತ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿರುವ ಇಂದಿನ ಲೋಕಾಯುಕ್ತರ ಧೃತಿಗೆಡಸಲೋ ಎಂಬಂತೆ, ಅದು ತನ್ನ ಪಕ್ಷದ ಶಾಸಕನೊಬ್ಬನನ್ನು ಲಂಚ ಸ್ವೀಕರಿಸುತ್ತಿದ್ದಾಗಲೇ ಹಿಡಿದು ಹಾಕಿದ ಮರುದಿನವೇ, ತರಾತುರಿಯಲ್ಲಿ 'ಮಂತ್ರಕ್ಕಿಂತ ಉಗುಳೇ ಜಾಸ್ತಿ' ಖ್ಯಾತಿಯ ಮಾಜಿ ಲೋಕಾಯುಕ್ತ ವೆಂಕಟಾಚಲ ಅವರನ್ನು ಪಕ್ಷಕ್ಕೆ ಸೇರಿಸಿಕೊಳ್ಳುವ ಮೂಲಕ ಬಿಜೆಪಿ ಭ್ರಷ್ಟಾಚಾರ ಕುರಿತ ತನ್ನ ಬದ್ಧತೆ ಎಂತಹುದೆಂಬುದನ್ನು ಸ್ಪಷ್ಟಪಡಿಸಿದೆ. ಈ ವೆಂಕಟಾಚಲ ಬೇರೆ, ಸಂದರ್ಭದ ವಿಪರ್ಯಾಸದ ಪರಿವೆಯೇ ಇಲ್ಲದಂತೆ, ತಾನು ಭ್ರಷ್ಟಾಚಾರ ನಿರ್ಮೂಲನಕ್ಕಾಗಿ ಬಿಜೆಪಿ ಸೇರಿದ್ದೇನೆ ಎಂದು ಘೋಷಿಸುವ ಮೂಲಕ ಎಲ್ಲರ ಹುಬ್ಬೇರುವಂತೆ ಮಾಡಿದ್ದಾರೆ! ಇತರೆಲ್ಲ ರಾಜಕೀಯ ಪಕ್ಷಗಳೂ ಕಳಕಿಂತ; ತಾನು

ಈ ಇತರೆಲ್ಲರಿಗಿಂತ ಭಿನ್ನವೆಂದು ಹೇಳಿಕೊಂಡು ಜನರನ್ನು ನಂಬಿಸಿ ಅಧಿಕಾರಕ್ಕೆ ಬಂದ ಈ ಪಕ್ಷದ ಸ್ಥಿತಿ ಇಂದು ನೈತಿಕವಾಗಿ ಚಿಂತಾಜನಕವಾಗಿದೆ.

ನಾನು ಈ ಹಿಂದೆ ನನ್ನ ಕೆಲವು ಗೆಳೆಯರು ಬಿಜೆಪಿ ಅಧಿಕಾರಕ್ಕೆ ಬರದಂತೆ ತಡೆಯುವುದನ್ನೇ ತಮ್ಮ ಒಂದು ರಾಜಕೀಯ ಕಾರ್ಯಕ್ರಮವನ್ನಾಗಿ ಮಾಡಿಕೊಂಡಾಗ ಅದನ್ನು ಟೀಕಿಸಿದ್ದೆ. ಅದು ಪ್ರಜಾಪ್ರಭುತ್ವ ಪದ್ಧತಿಯ ಬಗೆಗಿನ ನಮ್ಮ ಬದ್ಧತೆಯನ್ನೇ ಪ್ರಶ್ನಾರ್ಹಗೊಳಿಸುವುದು ಮತ್ತು ಇತರ ಪಕ್ಷಗಳ ರಾಜಕೀಯ ಕಾರ್ಯಕ್ರಮಗಳ ಪ್ರಸ್ತುತತೆಯನ್ನೇ ಅಲ್ಲಗೆಳೆಯುವುದು ಎಂಬುದು ನನ್ನ ವಾದವಾಗಿತ್ತು. ಅದಕ್ಕಿಂತ ಹೆಚ್ಚಾಗಿ, ಈ ಧೋರಣೆ ರಾಜಕೀಯವಾಗಿ ತಟಸ್ಥರಾಗಿರುವ ಮತದಾರರಲ್ಲಿ ಬಿಜೆಪಿ ಬಗೆಗೆ ಅನಗತ್ಯ ಸಹಾನುಭೂತಿ ಹುಟ್ಟಿಸುವ ಮೂಲಕ ಚುನಾವಣಾ ಸಂದರ್ಭವನ್ನೇ ವಿಕೃತಗೊಳಿಸಬಹುದು ಎಂಬುದೂ ನನ್ನ ಆತಂಕವಾಗಿತ್ತು. ಅಷ್ಟೇ ಅಲ್ಲ, ಈ ಧೋರಣೆ ಬಿಜೆಪಿ ಅಧಿಕಾರಕ್ಕೆ ಬಂದಲ್ಲಿ ಅದನ್ನು ಎದುರಿಸಲಾಗದೆಂಬ ಭಯ, ಅಸಹಾಯಕತೆ ಮತ್ತು ನಮ್ಮ ಆಂತರಿಕ ರಾಜಕೀಯ ಶಕ್ತಿ ದಾರಿದ್ರ್ಯಗಳ ಪ್ರತೀಕವಾದೀತು ಎಂಬುದು ನನ್ನ ಅಭಿಪ್ರಾಯವಾಗಿತ್ತು. ಜೊತೆಗೆ ಜಾತ್ಯತೀತ ಪ್ರಜಾಪ್ರಭುತ್ವವಾದಿ ಸಂವಿಧಾನದ ಚೌಕಟ್ಟಿನಲ್ಲಿ ಅದು ತನ್ನ ಕೋಮುವಾದಿ ರಾಜಕಾರಣದ ಬಾಲ ಬಿಚ್ಚುವುದು ಅಷ್ಟು ಸುಲಭವಾಗಲಾರದು ಮತ್ತು ಅಧಿಕಾರ ನಡೆಸುವ ಹಾಗೂ ಉಳಿಸಿಕೊಳ್ಳುವ ಒತ್ತಡ–ಒತ್ತಾಯಗಳಲ್ಲಿ ಅದು ರಾಜಕೀಯವಾಗಿ 'ಮೆದು'ವಾಗುವುದು ಎಂಬುದು ನಮ್ಮಂತಹವರ ನಿರೀಕ್ಷೆಯಾಗಿತ್ತು. ಆದರೆ ಕಳೆದ ಆರು ತಿಂಗಳುಗಳ ಬಿಜೆಪಿ ಸರ್ಕಾರದ ವೈಖರಿ ಈ ನಿರೀಕ್ಷೆಯನ್ನು ಹುಸಿಗೊಳಿಸಿದೆ. ಬಿಜೆಪಿ ಕುರಿತ ಉದಾರವಾದಿ ಧೋರಣೆ ಬಗ್ಗೆ ನಮ್ಮಂತಹವರು ಮರುಚಿಂತನೆ ಮಾಡುವಂತೆ ಒತ್ತಾಯಿಸುತ್ತಿದೆ.

ಇದಕ್ಕೆ ಒಂದು ಕಾರಣ, ಬಿಜೆಪಿ ಈ ಅಲ್ಪಾವಧಿಯಲ್ಲೇ ಭ್ರಷ್ಟತೆ, ಜಾತಿವಾದ ಮತ್ತು ಕಾನೂನುಗಳನ್ನೇ ತಲೆಕೆಳಗು ಮಾಡುವ ನಿರ್ಲಜ್ಜ ಮಾರ್ಗಗಳಲ್ಲಿ ಎಲ್ಲ ಪಕ್ಷಗಳನ್ನೂ ಮೀರಿಸುವ ಮೂಲಕ ತನ್ನ ಸ್ಥಾನವನ್ನು ಭದ್ರ ಮಾಡಿಕೊಂಡು; ಈಗ ನಿಧಾನವಾಗಿ ತನ್ನ ಕೋಮುವಾದಿ ಬಾಲವನ್ನು ಬಿಚ್ಚತೊಡಗಿರುವುದು. ಇದಕ್ಕಿಂತ ಮುಖ್ಯವಾದ ಇನ್ನೊಂದು ಕಾರಣವೆಂದರೆ, ಇದನ್ನು ಗುರುತಿಸುವಲ್ಲಿ, ಅದರ ದೀರ್ಘಕಾಲಿಕ ಪರಿಣಾಮಗಳನ್ನು ಸ್ವತಃ ಅರ್ಥ ಮಾಡಿಕೊಳ್ಳುವಲ್ಲಿ ಹಾಗೂ ಅವುಗಳನ್ನು ಸಾಮಾನ್ಯ ಜನತೆಗೆ ಮನವರಿಕೆ ಮಾಡಿ ಅದನ್ನು ಎದುರಿಸುವಲ್ಲಿ ನಮ್ಮ ಅಧಿಕೃತ ವಿರೋಧ ಪಕ್ಷವೆನಿಸಿದ ಕಾಂಗ್ರೆಸ್ ಪ್ರದರ್ಶಿಸುತ್ತಿರುವ ಜೋಭದ್ರಗೇಡಿತನ!

ವಿಪರ್ಯಾಸವೆಂದರೆ, ಬಿಜೆಪಿ ವಿರುದ್ಧ ಈಗ ಅತಿ ಹೆಚ್ಚು ಶಬ್ದ ಮಾಡುತ್ತಿರುವ ಪಕ್ಷವೆಂದರೆ, ಅದು ಅಧಿಕಾರಕ್ಕೆ ಬರಲು ತನ್ನ ಸಮಯ ಸಾಧಕ ಹಾಗೂ ಅನೈತಿಕ ರಾಜಕಾರಣದ ಮೂಲಕ ಕಾರಣವಾದ ಜಾತ್ಯತೀತ ಜನತಾ ದಳ! ಈ ಪಕ್ಷ ತಾನು ಹುಟ್ಟಿದಾಗಿನಿಂದ ತನ್ನ ಹೆಸರಿನಲ್ಲಿರುವ 'ಜಾತ್ಯತೀತ' ಎಂಬ ತತ್ವವೂ ಸೇರಿದಂತೆ ಎಲ್ಲ ರಾಜಕೀಯ ತತ್ವಗಳನ್ನೂ(ಇದರ ನಾಯಕ ಕುಮಾರಸ್ವಾಮಿಯವರು ಬಿಜೆಪಿ ಜೊತೆ ಸೇರಿ ಸರ್ಕಾರ ರಚಿಸಿದಾಗ ವ್ಯಂಗ್ಯವಾಗಿ ಹೇಳಿದ್ದು: 'ನಿಘಂಟಿನಲ್ಲೆಲ್ಲಾ ಹುಡುಕಿದರೂ ಜಾತ್ಯತೀತತೆ ಎಂಬ ಶಬ್ದ ಸಿಗಲಿಲ್ಲ!') ತನ್ನ ರಾಜಕೀಯ ಉಳಿವಿನ ಹೆಸರಲ್ಲಿ ತಿಲಾಂಜಲಿ ನೀಡುತ್ತಾ

ಬಂದಿದೆ. ಹಾಗಾಗಿ ಇದರ ಯಾವುದೇ ರಾಜಕೀಯ ಹೋರಾಟದ ವಿಶ್ವಾಸಾರ್ಹತೆ ಸಂಶಯಾಸ್ಪದವಾಗಿಯೇ ಉಳಿದಿದೆ. ಅಧಿಕಾರವಿಲ್ಲದಿದ್ದಾಗ ದೊಡ್ಡ ದೊಡ್ಡ ತತ್ವ ಹೇಳಿ ಜನರ ಗಮನ ಸೆಳೆಯುವ ಈ ಪಕ್ಷ, (ಅದೆಷ್ಟು ಬಾರಿ ಕರ್ನಾಟಕದ 'ಪ್ರಗತಿಪರ'ರೆಂಬುವವರು– ಇತ್ತೀಚೆಗೆ ಯು.ಆರ್.ಅನಂತಮೂರ್ತಿಯವರು–ದೇವೇಗೌಡರ ಹೋರಾಟದ ಕೆಚ್ಚಿಗೆ ಮರುಳಾಗಿಲ್ಲ? ಆದರೆ ಆನಂತರ ಅವರ ಅಧಿಕಾರದ ಆಟ ನೋಡಿ ಪೆಚ್ಚಾಗಿಲ್ಲ?), ಅಧಿಕಾರದ ವಾಸನೆ ಹತ್ತಿದೊಡನೆ ಅಷ್ಟೇ ಸುಲಭವಾಗಿ ಈ ತತ್ವಗಳನ್ನೆಲ್ಲ ಕೈ ಬಿಡಬಲ್ಲ ತತ್ವ ನಿರ್ಲಜ್ಜ ಪಕ್ಷವಾಗಿದೆ.

ದೇವೇಗೌಡರ ಕುಟುಂಬ ರಾಜಕಾರಣದ ಸುತ್ತಲೇ ಗಿರಕಿ ಹೊಡೆಯುತ್ತಿರುವ ಈ ಪಕ್ಷ, ರಾಜ್ಯ ರಾಜಕಾರಣದ ಎಲ್ಲ ಬಿಕ್ಕಟ್ಟುಗಳ ಸಮಯದಲ್ಲೂ ಪಕ್ಷಾಂತರದ ಹಾವಳಿಗೆ ಸಿಕ್ಕಿ ತನ್ನ ಅಸ್ತಿತ್ವದ ಆತಂಕವನ್ನುದರಿಸುತ್ತದೆ. ಇದಕ್ಕೆ, ಅದು ಮೂಲತಃ ಸಮಯ ಸಾಧಕತ್ವದ ಮೂಲಕ ಅಧಿಕಾರ ಗಳಿಸುವ ತತ್ವವೊಂದನ್ನೇ ನಂಬಿ ಬೆಳೆದು ಉಳಿದಿರುವ ಪಕ್ಷವಾಗಿರುವುದೇ ಕಾರಣವಾಗಿದೆ. ಹಾಗಾಗಿ, ಈ ಪಕ್ಷ ಇದೇ ಸ್ಥಿತಿಯಲ್ಲಿರುವವರೆಗೂ ಕರ್ನಾಟಕದ ರಾಜಕಾರಣ ಸದ್ಯದ ಸಂಕಟದಿಂದ ಪಾರಾಗಲಾರದು. ಆದ್ದರಿಂದ ದೇವೇಗೌಡರು ತಮ್ಮ ರಾಜಕೀಯ ಜೀವಿತದ ಈ ಕೊನೆಯ ಘಟ್ಟದಲ್ಲಾದರೂ ಪಕ್ಷವನ್ನು ಕುಟುಂಬದ ನಿಯಂತ್ರಣದಿಂದ ಮುಕ್ತ ಮಾಡಿ, ಒಂದು ನಿಶ್ಚಿತ ರಾಜಕೀಯ ಸಿದ್ಧಾಂತದ ಮರ್ಯಾದೆಯ ಆಧಾರದ ಮೇಲೆ ಅದನ್ನು ಪುನಾರಚಿಸುವ ಪ್ರಯತ್ನ ಮಾಡಿದರೆ ಮಾತ್ರ ಕರ್ನಾಟಕದ ರಾಜಕಾರಣಕ್ಕೆ ಹೊಸತೊಂದು ತಿರುವು ದೊರೆತೀತು. ಅದನ್ನು ಅವರು ಮತ್ತು ಅವರ ಮಗ ಬಿಜೆಪಿಯೊಂದಿಗೆ ಸಮಯ ಸಾಧಕ ಸಖ್ಯ ಬೆಳೆಸಿ, ಅದೇ ಸಮಯ ಸಾಧಕತನದೊಂದಿಗೆ ಅದಕ್ಕೆ ಅಧಿಕಾರ ಹಸ್ತಾಂತರ ಮಾಡದೆ ಉಂಟು ಮಾಡಿರುವ ಅನಾಹುತಕ್ಕಾಗಿ, ಜನತೆಯ ಬಹಿರಂಗ ಕ್ಷಮೆ ಕೋರುವ ಮೂಲಕ ಆರಂಭಿಸಬಹುದಾಗಿದೆ. ಆಗ ಮಾತ್ರ ತಮ್ಮ ತಂದೆಯಂತಹುದೇ ದೈತ್ಯ ರಾಜಕೀಯ ಪರಿಶ್ರಮವನ್ನು ಪ್ರದರ್ಶಿಸುವ ಮೂಲಕ ಭರವಸೆ ಹುಟ್ಟಿಸಿರುವ ಕುಮಾರಸ್ವಾಮಿಯವರ ನಾಯಕತ್ವ ಒಂದು ನೈತಿಕತೆಯನ್ನೂ ಸ್ಥಾಪಿಸಿಕೊಂಡು, ರಾಜ್ಯಾದ್ಯಂತ ಎಲ್ಲರ ವಿಶ್ವಾಸಾರ್ಹತೆಯನ್ನೂ ಗಳಿಸಿ ಬೆಳೆಯಬಲ್ಲುದು.

ಇನ್ನು ವಿಧಾನಸಭಾ ಚುನಾವಣಾ ಫಲಿತಾಂಶಗಳಿಂದ ಕಂಗಾಲಾದಂತೆ ತೋರುವ ಕಾಂಗ್ರೆಸ್, ಇನ್ನೂ ಆ ಕೋಮಾದಿಂದ ಹೊರಬಂದಂತೆ ಕಾಣುವುದಿಲ್ಲ. ಕೋಮಾದಿಂದ ಹೊರ ತರಲು ಅದರ ಹೈಕಮಾಂಡ್ ಪ್ರಕಟಿಸಿದ ಹೊಸ ನಾಯಕತ್ವದಲ್ಲೂ ಯಾವುದೇ ಹೊಸತನವಿಲ್ಲದೆ, ಈ ಹೊಸ ನಾಯಕತ್ವದ ಎರಡು ಮುಖಗಳೂ ಸಾರ್ವಜನಿಕರ ಕಣ್ಣುಗಳಲ್ಲಿ ಭ್ರಷ್ಟತೆ ಮತ್ತು ದುಷ್ಟತನಗಳಿಗೆ ಬದಲೀ ಹೆಸರುಗಳಂತಾಗಿಬಿಟ್ಟಿವೆ! ಇದರ ಮಧ್ಯೆ, ತಮ್ಮ ಮಾನಕ್ಕೆ ತಕ್ಕ ಸ್ಥಾನವಿಲ್ಲವೆಂದು ಮುನಿಸಿಕೊಂಡಿರುವ ಸಿದ್ದರಾಮಯ್ಯ 'ಆಪರೇಷನ್ ಕಮಲ'ದ ಕಾರಣದಿಂದಾಗಿ ಸಂಭವಿಸಿದ ಉಪ ಚುನಾವಣೆಗಳಲ್ಲಿ ತಮ್ಮ ವೈಯುಕ್ತಿಕ ಅನುಯಾಯಿಗಳನ್ನು ತಮ್ಮದೇ ಪಕ್ಷದ ವಿರುದ್ಧ ಕೆಲಸ ಮಾಡಲು ಬಿಡುವ ಮೂಲಕ ಅತ್ಯಂತ ಬೇಜವಾಬ್ದಾರಿ ರಾಜಕಾರಣವನ್ನು ಪ್ರದರ್ಶಿಸಿದ್ದಾರೆ.. ಇದರಿಂದಾಗಿ ರಾಜ್ಯ ರಾಜಕಾರಣಕ್ಕೆ ಮತ್ತು ಪಕ್ಷಕ್ಕೆ ಆಗಿರುವ ಆಘಾತದ ಹೊರತಾಗಿಯೂ, ಅವರು ಆ ಪಕ್ಷದ ಆಯಕಟ್ಟಿನ ಅಧಿಕಾರ ಸ್ಥಾನಕ್ಕಾಗಿ ಪಕ್ಷದ ಹೈಕಮಾಂಡ್‌ನಿಂದ ಇನ್ನೂ ಗಂಭೀರವಾಗಿ ಪರಿಗಣಿಸಲ್ಪಡುತ್ತಿರುವ

ಸನ್ನಿವೇಶವಂತೂ, ಆ ಪಕ್ಷ ನಾಯಕತ್ವದ ವಿಷಯದಲ್ಲಿ ಯಾವ ದರಿದ್ರ ಸ್ಥಿತಿಯನ್ನು ತಲುಪಿದೆ ಎಂಬುದನ್ನು ಸೂಚಿಸುತ್ತದಷ್ಟೆ. ಮೊನ್ನೆ ಕನ್ನಡ ಟಿವಿ ವಾಹಿನಿಯೊಂದರಲ್ಲಿ, ಶ್ರೀರಾಮ ಸೇನೆಯ ಪಬ್ ದಾಳಿ ಕುರಿತ ಚರ್ಚೆಯಲ್ಲಿ ಬಿಜೆಪಿಯ ಹಿರಿಯ ಸಿದ್ಧಾಂತಿ ಹಾಗೂ ರಾಜ್ಯ ಯೋಜನಾ ಆಯೋಗದ ಉಪಾಧ್ಯಕ್ಷರೂ ಆದ ಡಿ.ಎಚ್.ಶಂಕರಮೂರ್ತಿಯವರ ಎದುರು ವಾದಿಸಲು ಈ ಪಕ್ಷದ ಮಹಿಳಾ ನಾಯಕ ಮಣಿಯೊಬ್ಬರು ಪಡುತ್ತಿದ್ದ ಫಜೀತಿ, ಈ ಪಕ್ಷ ತಲುಪಿರುವ ಬುದ್ಧಿ ದಾರಿದ್ರ್ಯಕ್ಕೆ ಸಾಕ್ಷಿಯಂತಿತ್ತು. ಅತಿಯಾದ ಆತ್ಮ ವಿಶ್ವಾಸ ಮತ್ತು ಜೋರು ಬಾಯಿಯ ಹೊರತಾಗಿ ಇನ್ನಾವ ಸಂಪನ್ಮೂಲಗಳನ್ನೂ ಹೊಂದದಂತೆ ತೋರಿದ ಈ ನಾಯಕಿ, ವಿಷಯದ ಬಗ್ಗೆ ಯವುದೇ ತಿಳುವಳಿಕೆ ಇಲ್ಲದೆ ಮಹಿಳಾ ಮಂಡಳದ ಸಭೆಗಳಲ್ಲಿನ ತಮ್ಮ ಅಸಂಬದ್ಧ ಭಾಷಣವನ್ನು ಇಲ್ಲಿಯೂ ಮುಂದುವರೆಸಿದಂತಿತ್ತು! ಇದು ಇಂದು ಪ್ರತಿಬಿಂಬಿತವಾಗುತ್ತಿರುವ ರಾಜ್ಯ ಕಾಂಗ್ರೆಸ್ಸಿನ ಸಾರ್ವಜನಿಕ ಮುಖ! ಸದ್ಯಕ್ಕೆ ಕೃಷ್ಣಭೈರೇಗೌಡರ ಹೊರತಾಗಿ ಭರವಸೆ ಹುಟ್ಟಿಸುವಂತಹ ಇನ್ನಾವ ಮುಖವೂ ಅಲ್ಲಿ ಕಾಣುತ್ತಿಲ್ಲ. ಇದು ರಾಜ್ಯ ರಾಜಕಾರಣದ ನಿಜವಾದ ದುರಂತ.

ಪರಿಸ್ಥಿತಿ ಹೀಗಿರುವಾಗ ಬಿಜೆಪಿಯ ಕೋಮುವಾದಿ ರಾಜಕಾರಣವನ್ನು ತಡೆಯುವವರಾರು? ಮಂಗಳೂರಿನ ಪಬ್‌ವೊಂದರ ಆವರಣದಲ್ಲಿ ಮಹಿಳೆಯರ ಮೇಲೆ ಶ್ರೀರಾಮ ಸೇನೆಯವರು ನಡೆಸಿದ ಗೂಂಡಾಗಿರಿಯ ಬಗ್ಗೆ ದ.ಕ. ಜಿಲ್ಲೆಯ ಉಸ್ತುವಾರಿ ಮಂತ್ರಿ ಕೃಷ್ಣ ಪಾಲೇಮಾರ್‌ರ ಪ್ರತಿಕ್ರಿಯೆ ಕೇಳಿದರೆ, ಅವರು ನಾವು ಪಬ್ ಸಂಸ್ಕೃತಿಯನ್ನು ಸಹಿಸುವುದಿಲ್ಲ ಎಂದಷ್ಟೇ ಉತ್ತರಿಸುತ್ತಾರೆ. ಈ ಬಗ್ಗೆ ಡಿ.ಎಚ್.ಶಂಕರಮೂರ್ತಿಯವರನ್ನು ಪ್ರಶ್ನಿಸಿದರೆ, ಅವರು; ಸಚಿವರು ಆ ಮೂಲಕ ಮಹಿಳೆಯರ ಮೇಲಿನ ಗೂಂಡಾಗಿರಿಯನ್ನೇನೂ ಸಮರ್ಥಿಸಿಲ್ಲವಲ್ಲ ಎಂಬ ಜಾಣ ಉತ್ತರ ನೀಡುತ್ತಾರೆ! ಇದೇ ಬಿಜೆಪಿಯ ಘಾತುಕ ಜಾಣತನ. ಅದರ ಮೂಲಕವೇ ಅದು ತನ್ನ ಕೋಮುವಾದಿ ರಾಜಕಾರಣವನ್ನು ನಡೆಸಿರುವುದು. ಇಂತಹುದೇ ಘಾತುಕ ಜಾಣತನವೇ ಮುಖ್ಯಮಂತ್ರಿ ಯಡಿಯೂರಪ್ಪನವರ 'ಯಾರೇ ಕಾನೂನನ್ನು ಕೈಗೆತ್ತಿಕೊಳ್ಳುವುದನ್ನು ನಾವು ಸಹಿಸುವುದಿಲ್ಲ. ಆದರೆ ಅದೇ ಹೊತ್ತಿನಲ್ಲಿ ಪಬ್ ಸಂಸ್ಕೃತಿಯನ್ನೂ ಸಹಿಸುವುದಿಲ್ಲ' ಎಂಬ ಹೇಳಿಕೆಯಲ್ಲಿ ಎದ್ದು ಕಾಣುವುದು. ಈ ಇಡೀ ಸಂಘ ಪರಿವಾರ 'ಭಾರತೀಯ ಸಂಸ್ಕೃತಿ'ಯ ಹೆಸರಿನಲ್ಲಿ ಆಡುತ್ತಿರುವುದು ಇಂತಹ ಎರಡೆಳೆಯ ನಾಲಿಗೆಯ ಮಾತುಗಳನ್ನೇ! ಅಲ್ಲಾ ಯಡಿಯೂರಪ್ಪನವರೇ, ಶ್ರೀರಾಮ ಸೇನೆಯವರು ಅಲ್ಲಿಗೆ ಬಂದಿದ್ದುದು ಯಾವ ಕಾನೂನನ್ನು ಜಾರಿಗೆ ಮಾಡಲು? ಪಬ್‌ಗಳು ನಡೆಯುತ್ತಿರುವುದು ಕಾನೂನಿನ ಅಡಿಯಲ್ಲೇ ಎಂಬುದು ನಿಮಗೆ ಗೊತ್ತಿಲ್ಲವೆ?

ಪಬ್ ಸಂಸ್ಕೃತಿ ನಿಮಗೆ ಸಹಿಸಲಾಗದ್ದು ಎನ್ನಿಸಿರುವುದು, ಭಾರತೀಯ ಸಂಸ್ಕೃತಿಯ ನೆನಪು ಬಂದಿರುವುದು, ಅಲ್ಲಿಗೆ ಹುಡುಗಿಯರು ಮುಕ್ತವಾಗಿ ಹೋಗಲಾರಂಭಿಸಿದ ಮೇಲಷ್ಟೇ? ಹಾಗಿದ್ದಲ್ಲಿ ಕಾನೂನಿನಲ್ಲಿ ಅವಕಾಶವಿದ್ದರೆ, ಅವರ ಪ್ರವೇಶವನ್ನು ಬಹಿಷ್ಕರಿಸಿ ಅಥವಾ ಪಬ್‌ಗಳನ್ನೇ ಮುಚ್ಚಲು ಈ ಕೂಡಲೇ ಆದೇಶಿಸಿರಿ. ಆದರೆ ಯಾವುದೇ ಕಾನೂನು ಮತ್ತು ಶಿಸ್ತಿನ ಸಮಸ್ಯೆ ಸೃಷ್ಟಿಸದೆ, ತಮ್ಮ ಹಣದಲ್ಲಿ ತಾವು ಸರಿ ಕಂಡಂತೆ ಖುಷಿ ಪಡುತ್ತಿದ್ದ ಯುವಕ-ಯುವತಿಯರ ಮೇಲೆ ಸ್ವಯಂಘೋಷಿತ ಸಂಸ್ಕೃತಿ ರಕ್ಷಕರು ನಡೆಸಿದ ಅನಾಗರಿಕ

ಹಲ್ಲೆಯನ್ನು ಖಂಡಿಸುವುದರ ಜೊತೆ ಜೊತೆಯಲ್ಲೇ ಸುಮ್ಮನೆ ಸಂಸ್ಕೃತಿ ರಕ್ಷಣೆಯ ಹುಸಿ ಮಾತುಗಳನ್ನೇಕೆ ಆಡುತ್ತೀರಿ? ಈ ಮೂಲಕ ನೀವು ಪರೋಕ್ಷವಾಗಿ ಹಲ್ಲೆಯನ್ನು ಸಮರ್ಥಿಸುತ್ತಿದ್ದೀರಿ ಅಲ್ಲವೇ? ನೀವು ಮೊದಲು ಸಂರಕ್ಷಿಸಬೇಕಾಗಿರುವುದು ನಮ್ಮ ಸಂವಿಧಾನವನ್ನು ಎಂಬುದು ನಿಮಗೆ ನೆನಪಿರಲಿ. ಜೊತೆಗೆ ನಮಗೂ ಶ್ರೀರಾಮ ಸೇನೆಗೂ ಯಾವ ಸಂಬಂಧವೂ ಇಲ್ಲ ಎಂಬ ನಿಮ್ಮ ಆತ್ಮದ್ರೋಹದ ಮಾತು ಬೇರೆ! ಈ ಹಲ್ಲೆ ರಾಷ್ಟ್ರಾದ್ಯಂತ ಸುದ್ದಿಯಾಗಿ ಎಲ್ಲಡೆಯಿಂದ ಖಂಡನೆ ವ್ಯಕ್ತವಾಗುತ್ತಿದ್ದಂತೆ ಈ ಸೇನೆಯ ನಾಯಕ ಪ್ರಮೋದ್ ಮುತಾಲಿಕ್, 'ಈ ಘಟನೆಯನ್ನು ಅತಿಯಾಗಿ ಪ್ರಚಾರ ಮಾಡಿ ರಾಜ್ಯ ಬಿಜೆಪಿ ಸರ್ಕಾರಕ್ಕೆ ಕೆಟ್ಟ ಹೆಸರು ತರುವ ಪಿತೂರಿ ನಡೆದಿದೆ' ಎಂದು ನೀಡಿರುವ ಹೇಳಿಕೆ, ನಿಮಗೂ ಅವರಿಗೂ ಇರುವ ಯಾವ ಮತ್ತು ಎಂತಹ ಸಂಬಂಧವನ್ನು ಸೂಚಿಸುತ್ತದೆ?

ನೀವು ಭಾರತೀಯ ಸಂಸ್ಕೃತಿ ರಕ್ಷಣೆಯ ಹೆಸರಲ್ಲಿ ಕಳೆದ ೨೦ ವರ್ಷಗಳಲ್ಲಿ ನಡೆಸಿಕೊಂಡು ಬರುತ್ತಿರುವ ಕೋಮುವಾದಿ ರಾಜಕಾರಣವೇ ಅನೇಕ ಇಂತಹ ತುಂಡರಸರನ್ನು ಸೃಷ್ಟಿಸಿ ಸಾರ್ವಜನಿಕ ಶಾಂತಿಭಂಗಕ್ಕೆ ಕಾರಣವಾಗಿರುವುದು. ಇವರು 'ಮನೆ ಮನೆಯಲ್ಲೂ ಬಾಂಬ್ ಹಿಡಿದಿರುವ ಪ್ರಗ್ಯಾ ಸಿಂಗ್ ಸೃಷ್ಟಿಯಾಗಲಿರುವಳು!' ಎಂದರಚುತ್ತಾ, ಕೋಮು ಹಿಂಸೆಯನ್ನು ಪ್ರಚೋದಿಸುವ ಉಗ್ರ ಭಾಷಣಗಳನ್ನು ಮಾಡುತ್ತಾ ರಾಜ್ಯಾದ್ಯಂತ ನಿರ್ಭಯವಾಗಿ ಓಡಾಡಲು ಸಾಧ್ಯವಾಗಿರುವುದು. ಇಂತಹ ಎರಡೆಳೆ ನಾಲಿಗೆಯ ನೀತಿಯಿಂದಾಗಿಯೇ ಮುತಾಲಿಕ, ಅತ್ತಾವರರಂತಹವರು ಪೋಲೀಸ್ ಬಂಧನದಲ್ಲಿದ್ದುಕೊಂಡೇ ತಾವು ಮಾಡಿದ ಕೆಲಸಕ್ಕೆ ತಾವೇ ಬೆನ್ನು ತಟ್ಟಿಕೊಳ್ಳುತ್ತಾ, 'ನಮ್ಮ ಈ ಕಾರ್ಯಕ್ರಮದ ಮೂಲಕ ಪಬ್ ಸಂಸ್ಕೃತಿಯ ಬಗ್ಗೆ ಜನತೆಯನ್ನು ಎಚ್ಚರಿಸಿದ್ದೇವೆ. ಆದ್ದರಿಂದ ನಮ್ಮ ಕೆಲಸ ಸಾರ್ಥಕವಾಗಿದೆ. ಮುಂದೆಯೂ ಇಂತಹ ಕಾರ್ಯಕ್ರಮಗಳು ಮುಂದುವರೆಯುತ್ತವೆ' ಎಂದು ಘೋಷಿಸಿಕೊಳ್ಳುವ ಧೈರ್ಯ ವಹಿಸಿರುವುದು. ನಿಮ್ಮ ಪೋಲೀಸ್ ಕಾರ್ಯಾಚರಣೆ ಇಂತಹದು! ಇದರ ಮೇಲೆ ಭಯೋತ್ಪಾದನೆಯ ವಿರುದ್ಧ ನಿಮ್ಮ ವಿದ್ಯಾರ್ಥಿ ಜಾಗೃತಿ ಆಂದೋಲನ ಬೇರೆ! ಇಂದು ಭಾರತದಲ್ಲಿ ಭಯೋತ್ಪಾದನೆ–ಶ್ರೀರಾಮ ಸೇನೆಯವರದೂ ಸೇರಿದಂತೆ–ವಿವಿಧ ರೂಪಗಳನ್ನು ತಾಳಿದೆಯೆಂದು ನಿಮಗೆ ಗೊತ್ತಿದೆಯಷ್ಟೆ? ಆದುದರಿಂದ, ಇದು ನಿಮ್ಮ ಎರಡೆಳೆ ನಾಲಿಗೆ ನೀತಿಯ ಇನ್ನೊಂದು ಅವತಾರವಷ್ಟೆ. ಇದರಲ್ಲೊಳಗೊಂಡಿರುವ ಜನ, ಈ ಸಂಬಂಧ ಕಾಲೇಜುಗಳಿಗೆ ಒದಗಿಸಿರುವ ಸಾಮಗ್ರಿಯ ವಿವರಗಳನ್ನು ನೋಡಿದರೆ, ಇದೊಂದು ಭಯೋತ್ಪಾದನಾ ವಿರೋಧಿ ಆಂದೋಲನವಲ್ಲ; ಬದಲಿಗೆ, ಸಾರ್ವಜನಿಕರ ಹಣ ಬಳಸಿಕೊಂಡು ಸರ್ಕಾರದಿಂದ ಪ್ರಾಯೋಜಿತವಾದ ವಿದ್ಯಾರ್ಥಿಗಳ ಕೋಮುವಾದೀಕರಣ ಕಾರ್ಯಕ್ರಮ ಎಂಬುದು ಸ್ಪಷ್ಟವಾಗುವಂತಿದೆ. ಈಗಾಗಲೇ, ಇದರ ನೇತೃತ್ವ ವಹಿಸಬೇಕಾದ ಅಧ್ಯಾಪಕ ವೃಂದದಲ್ಲಿ ಈ ಬಗ್ಗೆ ಅಸಮಾಧಾನದ ಹೊಗೆ ಏಳಲಾರಂಭಿಸಿದೆ.

ಇದಕ್ಕೆ ಮುಖ್ಯ ಕಾರಣ, ಸಂಘ ಪರಿವಾರಕ್ಕೆ ಧರ್ಮ ಮತ್ತು ಸಂಸ್ಕೃತಿಗಳ ಬಗ್ಗೆ ಒಂದು ಸಂಕುಚಿತ ಮತ್ತು ಸ್ಥಿರವಾದ ಕಲ್ಪನೆ ಇರುವುದು. ಉದಾಹರಣೆಗೆ ಇವರ ಸಂಸ್ಕೃತಿಯ ವಿವರಣೆಗಾಗಿ, ಪಬ್ ದಾಳಿಯನ್ನು ಸಮರ್ಥಿಸಿಕೊಳ್ಳುತ್ತಾ ಪ್ರಮೋದ್ ಮುತಾಲಿಕ್ ಉಲ್ಲೇಖಿಸಿರುವ 'ಮಾತೃ ದೇವೋ ಭವ' ಎಂಬ ಮಾತನ್ನೇ ನೋಡಿ. ಏನಿದರ ಅರ್ಥ? ಹೆಣ್ಣು ತಾಯಿಯಾಗಿ ಮಕ್ಕಳನ್ನು ಹೆರುತ್ತಾ, ಸಾಕುತ್ತಾ ಮನೆಯಲ್ಲಿ ದೇವರಂತೆ ಪೂಜೆಗೆ

ಒಳಗಾಗಿ ಕೂರಬೇಕೆಂದೆ? ಹಾಗೆ ಕೂತ ಹೆಣ್ಣು ಇಂತಹ ಮಂತ್ರ–ಶ್ಲೋಕ ಹೇಳುವವರ ನಿಯಂತ್ರಣಕ್ಕೆ ಸಿಕ್ಕಿ, ಆಧುನಿಕ ಕಾಲದ ಸಮಾಜ ಸುಧಾರಣಾ ಚಳುವಳಿ ಆರಂಭವಾಗುವ ತನಕ ಯಾವ ಯಾವ ವಿಧಿ–ನಿಷೇಧಗಳನ್ನು ಅನುಭವಿಸುತ್ತಾ, ಎಂತಹ ಸ್ಥಿತಿ ತಲುಪಿದ್ದಳು ಎಂಬುದನ್ನು ನಮ್ಮ ಇತಿಹಾಸವೇ ತಿಳಿಸುತ್ತಿದೆ. ಸಂಘ ಪರಿವಾರದವರು ಸ್ವಲ್ಪ ಸಂವೇದನಾಶೀಲರಾಗಿ ಈ ಇತಿಹಾಸವನ್ನು ಓದಿಕೊಂಡರೆ ಒಳ್ಳೆಯದು. ಇಂದು ಮಹಿಳೆ ಸ್ವತಂತ್ರಳಾಗಿ, ಸಂಪ್ರದಾಯವಾದಿ ಸಮಾಜದ ಕಟ್ಟು ಕಟ್ಟಳೆಗಳನ್ನು ದಾಟಿ ಹೋಗಿದ್ದರೆ, ಅದಕ್ಕೆ ನಾವೇ ಪ್ರೀತಿಯಿಂದ ಆಹ್ವಾನಿಸಿ ಸಾಕುತ್ತಾ ಬಂದಿರುವ ಆಧುನಿಕತೆ ನಮ್ಮ ಒಟ್ಟಾರೆ ಸಮಾಜದ ನಿರೀಕ್ಷೆಯನ್ನೂ ಮೀರಿ ಬೆಳೆದಿರುವುದೇ ಕಾರಣವಾಗಿದೆ. ಹಾಗಾಗಿ ಅದನ್ನು ಇಡಿಯಾಗಿ ನಿಯಂತ್ರಿಸದೆ, ಮಹಿಳೆಯರ ಚಲನ–ವಲನಗಳನ್ನು ಮಾತ್ರ ನಿಯಂತ್ರಿಸ ಹೋಗುವುದು ಅವಿವೇಕವಷ್ಟೇ ಅಲ್ಲ, ಅನಾಗರೀಕವೂ ಆಗುತ್ತದೆ. ಇಂತಹ ಅನಾಗರೀಕತೆ, ಅನೇಕ ನೆಲೆಗಳಲ್ಲಿ ವಿಧಿ–ನಿಷೇಧ–ದಂಡನೆಗಳ ವಶಿಷ್ಠ ಸಂಪ್ರದಾಯವಾಗಿ ಭಾರತೀಯ ಸಂಸ್ಕೃತಿಯಲ್ಲಿ ಅಂತರ್ಗತವಾಗಿ, ಬಹು ಕಾಲದಿಂದಲೂ ಬೆಳೆದು ಬಂದಿದೆ. ಅನೇಕ ರೀತಿಯ ಸಾಮಾಜಿಕ ಅನಾಹುತಗಳಿಗೆ ಮತ್ತು ಶೋಷಣೆಗಳಿಗೆ ಕಾರಣವಾಗಿದೆ. ಸಂಘ ಪರಿವಾರವು ಭಾರತೀಯ ಸಂಸ್ಕೃತಿಯ ಈ ಧಾರೆಯ ಪ್ರತಿನಿಧಿಯಾಗಿರುವುದರಿಂದಲೇ–ಭಾರತೀಯ ಸಂಸ್ಕೃತಿಯ ಉದಾರವಾದಿ ಬಹುಮುಖಿ ಧಾರೆಯನ್ನು ರಕ್ಷಿಸಿಕೊಳ್ಳುವ ದೃಷ್ಟಿಯಿಂದ–ಅದನ್ನು ಸದಾ ವಿಮರ್ಶೆಗೊಳಪಡಿಸಬೇಕಾದ, ಎದುರಿಸಬೇಕಾದ ಅನಿವಾರ್ಯತೆಯನ್ನುಂಟು ಮಾಡಿದೆ.

ಸಂಘ ಪರಿವಾರಕ್ಕೆ ನಿಜವಾಗಿ ಭಾರತೀಯ ಸಂಸ್ಕೃತಿಯಲ್ಲಿ ನಂಬಿಕೆ ಇದ್ದರೆ, ಅದರ ತಿರುಳು ಅದಕ್ಕೆ ಗೊತ್ತಿದ್ದರೆ, 'ಸರಳ ಜೀವನ, ಉನ್ನತ ಚಿಂತನ' ಎಂಬುದೇ ಈ ಸಂಸ್ಕೃತಿಯ ಧ್ಯೇಯ ವಾಕ್ಯ ಎಂದು ಅದು ಅರಿತಿರಬೇಕಿತ್ತು. ಆ ಆಧಾರದ ಮೇಲೆ ತನ್ನ ರಾಜಕಾರಣವನ್ನು ಕಟ್ಟಿಕೊಳ್ಳಬೇಕಿತ್ತು. ಆದರೆ ಜಗತ್ತಿಗೇ ಮಾರ್ಗದರ್ಶನ ಮಾಡುವ ಸಂಸ್ಕೃತಿ ಕುರಿತು ಮಾತಾಡುವ ಇವರು, ಜಾಗತೀಕರಣವಾದಿಗಳಂತೆಯೇ ಸ್ಪರ್ಧಾತ್ಮಕ ಜಗತ್ತಿನ ಹಿಂದೆ ಬಿದ್ದು; 'ಬಲಿಷ್ಠ ಭಾರತ'ವನ್ನು ಸೃಷ್ಟಿಸುವ ಧಾವಂತದಲ್ಲಿ ಈ ಧ್ಯೇಯ ವಾಕ್ಯವನ್ನೇ ಮರೆತು, ಕಣ್ಣು ಕುಕ್ಕುವ 'ಪ್ರಕಾಶಮಾನ ಭಾರತ'ವನ್ನು ಸೃಷ್ಟಿಸಿದ್ದಾಗಿ ಬೀಗಿದರು! ಈ 'ಪ್ರಕಾಶಮಾನ ಭಾರತ'ದ ವೈಶಿಷ್ಟ್ಯವೆಂದರೆ, ಕೆಲವು 'ಪುಣ್ಯವಂತ'ರ ಜೊತೆಗೆ ಕೆಲವು 'ಪುಣ್ಯವಂತೆ'ಯರಿಗೂ ಸ್ವತಂತ್ರವಾಗಿ ಸ್ವರ್ಗಸುಖವನ್ನು ಆಹ್ವಾನಿಸುವಂತಹ ಅಪಾರ ಆದಾಯದ ಅವಕಾಶ... ಅದು, ನಮ್ಮ ಸಂಸ್ಕೃತಿಯಾಗಲೀ, ಅದರಲ್ಲಿ ಮೂಡಿದ ವ್ಯಕ್ತಿತ್ವಗಳಾಗಲೀ ಜೀರ್ಣಿಸಿಕೊಳ್ಳಲಾಗದಷ್ಟು ಹಣ! ಅದನ್ನು ಅವರಾದರೂ ಏನು ಮಾಡಿಯಾರು? ಇದರ ಅನೇಕ ಪರಿಣಾಮಗಳ ಒಂದು ಸಣ್ಣ ಕಿಡಿಯಷ್ಟೇ ಪಬ್ ಸಂಸ್ಕೃತಿ!

ನಮ್ಮ ನಾಗರೀಕತೆಯಲ್ಲಿ 'ಹಣ' ಉತ್ಪತ್ತಿಯಾದದ್ದೇ 'ಸುಖ'ಕ್ಕಾಗಿ. ಈಗ ಅದು ಅತಿಯಾದ ಆಧುನಿಕತೆಗೆ ಸಿಕ್ಕಿ 'ಮಜಾ' ಆಗಿ ಪರಿವರ್ತಿತವಾಗಿದೆಯಷ್ಟೇ. ಕೆಲವರು ಈ ಹಡಬೆ ಹಣವನ್ನು ಅಧಿಕಾರ ಮತ್ತು ಪುಣ್ಯ ಸಂಪಾದನೆಗಳಿಗಾಗಿ ವೈಭವೋಪೇತ ಯಜ್ಞ–ಯಾಗ–ವಿಶೇಷ ಪೂಜೆ–ಪುನಸ್ಕಾರಗಳನ್ನು ನಡೆಸಿ 'ಮಜಾ' ಅನುಭವಿಸುತ್ತಾರೆ. ಇನ್ನು ಕೆಲವರು

ಅದನ್ನು ಪಬ್ ಜೀವನ ಶೈಲಿಗಳಲ್ಲಿ ಉಡಾಯಿಸಿ 'ಮಜಾ' ತೆಗೆದುಕೊಳ್ಳುತ್ತಾರಷ್ಟೆ. ಇದು ತಮ್ಮ ಹಣವನ್ನು ರಾಜಕೀಯ ಅನಾಚಾರ ಅಥವಾ ಇತರೆ ಸಮಾಜ ವಿರೋಧಿ ಕೃತ್ಯಗಳಲ್ಲಿ ತೊಡಗಿಸುವುದಕ್ಕಿಂತ ಎಷ್ಟೋ ಉತ್ತಮವಲ್ಲವೆ? ಇದನ್ನು ತಡೆಯಲು ನೀವು ಯಾರು? ಒಮ್ಮೆ ಹಣ ಸಂಸ್ಕೃತಿಗೆ ನೀವು Yes ಎಂದರೆಂದರೆ, ಮುಂದೆ ಯಾವುದಕ್ಕೂ No ಎನ್ನಲಾರಿರಿ! No ಹೇಳಿದರೆ ಅದು ನಿಮ್ಮ ಚಿಂತನೆಯ ವಿರೋಧಾಭಾಸವಷ್ಟೆ, ಹಣ-ಸಂಸ್ಕೃತಿಯದಲ್ಲ. ಏಕೆಂದರೆ, ಮನಸ್ಸೆಂಬುದು ನಿಮಗಿರಬಹುದು, ಆದರೆ ಹಣಕ್ಕಿರುವುದಿಲ್ಲ. ಇದು ನಿಮಗೆ ಗೊತ್ತಾಗದಿದ್ದರೆ, ಭಾರತೀಯ ಸಂಸ್ಕೃತಿಯ ಎರಡು ಮುಖ್ಯ ಕಲ್ಪನೆಗಳಾದ 'ಪ್ರೇಯ' ಮತ್ತು 'ಶ್ರೇಯ'ಗಳನ್ನು ಕುರಿತು ಉಪನಿಷತ್ತುಗಳಲ್ಲಿ ಬರುವ ಚರ್ಚೆಯ ಮೇಲೊಮ್ಮೆ ಕಣ್ಣಾಡಿಸಿ!

ಆದುದರಿಂದ ಸಂಘ ಪರಿವಾರದ ನೈತಿಕ ಪಾರುಪತ್ತೇದಾರರೇ, ನಿಮ್ಮ ಈ ಪುಣ್ಯಭೂಮಿಯಲ್ಲಿ ಭಾರತೀಯ ಸಂಸ್ಕೃತಿಯನ್ನು ನೆಲೆಗೊಳಿಸುವ ಪವಿತ್ರ ಕಾರ್ಯಕ್ಕಾಗಿ ನೀವು ಮೊದಲು, ಶ್ರೀರಾಮ ಸೇನೆಯ ನಾಯಕರದೂ ಸೇರಿದಂತೆ ನಿಮ್ಮ ನಾಯಕ ಗಣದ ಆಸ್ತಿ-ಪಾಸ್ತಿ, ಅವರು ಪೋಷಿಸುತ್ತಿರುವ ಹಣ ಸಂಸ್ಕೃತಿಯ ನೈತಿಕ ಪಾರುಪತ್ತೇದಾರಿಕೆ ನಡೆಸಿ. ಅವರ ಬದುಕಿನ ಶೈಲಿಯನ್ನೊಮ್ಮೆ ಹತ್ತಿರದಿಂದ ಅವಲೋಕಿಸಿ. ನಿಮ್ಮ ಮುಖ್ಯಮಂತ್ರಿ, ಮಂತ್ರಿಗಳ ಊರುಗಳಲ್ಲಿ ಆಸ್ತಿ-ಪಾಸ್ತಿಗಳ ಬೆಲೆ ಏಕೆ ಯದ್ವಾ ತದ್ವಾ ಏರಿದೆ ಎಂಬುದನ್ನು ಸ್ವಲ್ಪ ಪರಿಶೀಲಿಸಿ. ಸಾಧ್ಯವಾದರೆ, Simple living high thinking ಎಂಬ ಭಾರತೀಯ ಸಂಸ್ಕೃತಿಯ ಕೇಂದ್ರ ಆಶಯವನ್ನು ನಿಮ್ಮ ಪರಿವಾರದಲ್ಲಿ ಬಿತ್ತಿ, ಇತರರಿಗೆ ಉದಾಹರಣೆಯಾಗಿ. ಆಗ ನೋಡುವಿರಂತೆ, ಭಾರತೀಯ ಬದುಕಿನಲ್ಲಿನ ಸಾಂಸ್ಕೃತಿಕ ಬದಲಾವಣೆಯ ಸ್ವರೂಪವನ್ನು!

ಆದರೆ ಸಂಘ ಪರಿವಾರ ತನ್ನ ಚಿಂತನೆಯ ಅಖಂಡತೆಯನ್ನು ಎಂದೋ ಕಳೆದುಕೊಂಡಿದೆ. ಅಥವಾ ಅದು ಹುಟ್ಟಿದುದೇ ಭಾರತೀಯ ಸಂಸ್ಕೃತಿ-ಅಖಂಡತೆಯ ಸೀಳು ನೋಟದಲ್ಲೇ. ಇತ್ತೀಚೆಗೆ ವಿಶ್ವವಿದ್ಯಾಲಯವೊಂದರ ಸಂಕಿರಣವೊಂದರಲ್ಲಿ ಗೋಲ್ವಾಲ್ಕರ್ ಬಗ್ಗೆ ಮಾತನಾಡುತ್ತಿದ್ದ ಸಂಘ ಪರಿವಾರದ ವಕ್ತಾರರೊಬ್ಬರು ಭಾರತೀಯತೆ ಎಂದರೆ ಏನೆಂಬುದನ್ನು ನಿರೂಪಿಸುತ್ತಾ, ಭಾರತದ ಭವ್ಯ ಪರಂಪರೆಯನ್ನು ತಮ್ಮದೆಂದು ಒಪ್ಪಿಕೊಂಡವರೇ ನಿಜವಾದ ಭಾರತೀಯರು ಎಂದು ಹೇಳಿದಾಗ, ನಾನು ಬುದ್ಧನನ್ನು ಈ ಪರಂಪರೆಯ ಭಾಗವೆಂದು ನೀವು ಒಪ್ಪಿಕೊಳ್ಳುತ್ತೀರಾ ಎಂದು ಕೇಳಬೇಕಾಯಿತು. ಅವರೇನೋ ತಕ್ಷಣವೇ ಉದಾರವಾಗಿ ಹೌದು ಎಂದು ಉತ್ತರಿಸಿದರು. ಆದರೆ ಹಾಗಾದರೆ ಗೋಲ್ವಾಲ್ಕರ್ ಸೇರಿದಂತೆ 'ಹಿಂದುತ್ವ'ವನ್ನು ನಿರೂಪಿಸುವ ನಿಮ್ಮ ತಾತ್ವಿಕರಾರೂ ಈ ಭಾರತೀಯ ಪರಂಪರೆಯ ಭಾಗವಾಗಿ ಬುದ್ಧನ ಬಗ್ಗೆ ಒಂದು ಮಾತನ್ನೂ ಆಡಿಲ್ಲವಲ್ಲ ಏಕೆ ಎಂದು ಕೇಳಿದರೆ ಅವರಿಂದ ಉತ್ತರವಿಲ್ಲ! ಅಷ್ಟೇ ಅಲ್ಲ, ಅಂದಿನ ಸಾವರ್ಕರರಿಂದ ಹಿಡಿದು ಇಂದಿನ ಪ್ರತಾಪ ಸಿಂಹನವರೆಗೆ ಇವರ ವಕ್ತಾರರನೇಕರ ಪ್ರಕಾರ; ಜಗತ್ತಿನ ಬೆಳಕು ಎಂದು ಕರೆಯಲ್ಪಡುವ ಬುದ್ಧ, ಇವರ ಭವ್ಯ ಭಾರತದ ಅವನತಿಗೆ ಕಾರಣನಾದನಂತೆ! ಏಕೆಂದರೆ ಬುದ್ಧ ತನ್ನ ವೈಚಾರಿಕ ಅಧ್ಯಾತ್ಮಿಕತೆಯ ಮೂಲಕ ಭಾರತದ ಪುರೋಹಿತಶಾಹಿ ರಾಜಕಾರಣಕ್ಕೆ-ಅಗರ ಪಟ್ಟಭದ್ರ ಅಂಧ ಪರಂಪರೆಗೆ-ದೊಡ್ಡ ಆಘಾತವನ್ನುಂಟು ಮಾಡಿದ. ಅದರ ಪ್ರತಿಧ್ವನಿಗಳು ಇಂದೂ ಕೇಳಿಬರುತ್ತಿರುವುದು, ಬುದ್ಧನಿಲ್ಲದ ಭಾರತೀಯ ಪರಂಪರೆಯನ್ನು ಕಟ್ಟ ಹೊರಟಿರುವ ಸಂಘ ಪರಿವಾರದವರಿಗೆ

ಸಹಿಸಲಸಾಧ್ಯವಾಗಿದೆ!

ಹೀಗೆ ಇವರು ನಮ್ಮ ಆವೃತ ಮತ್ತು ಪರಸ್ಪರ ಹಾಸುಹೊಕ್ಕಾದ ಧರ್ಮ, ಸಂಸ್ಕೃತಿ, ಪರಂಪರೆಗಳ ಅರ್ಥವನ್ನು ಅದರೆಲ್ಲ ವೈಚಾರಿಕ ಮತ್ತು ಉದಾರವಾದಿ ನೆಲೆಗಳಿಂದ ಮುಕ್ತಗೊಳಿಸಿ, ಒಂದು ಕಠೋರ ಮಾದರಿಯ ಆಶಯ–ಆಲೋಚನೆ–ಆಶೋತ್ತರಗಳಿಗೆ ಸಂಕುಚಿತಗೊಳಿಸುವ ಪ್ರಯತ್ನಕ್ಕೆ ಕೈ ಹಾಕಿದ್ದಾರೆ. ಅದನ್ನು ಇತರೆಲ್ಲರ ಮೇಲೆ ಆದರ್ಶದ ರೂಪದಲ್ಲಿ ಹೇರತೊಡಗಿರುವ ಇವರ ರಾಜಕಾರಣ, ರಾಷ್ಟ್ರದ ಭಾವನಾತ್ಮಕ ಏಕತೆ ಹಾಗೂ; ಲೌಕಿಕ ಮತ್ತು ಪಾರಮಾರ್ಥಿಕ ಏಳ್ಗೆಯ ದೃಷ್ಟಿಯಿಂದ ಅಪಾಯಕಾರಿಯೇ ಆಗಿದೆ. ಆದರೆ ಇವರ ಎರಡೆಳೆ ನಾಲಗೆ, ಈ ರಾಜಕಾರಣಕ್ಕೆ ಸಾಂಸ್ಕೃತಿಕ ರಾಷ್ಟ್ರೀಯತೆಯೆಂಬ ಬೆಡಗನ್ನು ನೀಡಿಬಿಟ್ಟಿದೆ. ಇದಕ್ಕೆ ತಕ್ಕುದಾಗಿ ಜಾಗತಿಕ ಮುಸ್ಲಿಂ ಮೂಲಭೂತವಾದ ಮತ್ತು ಭಯೋತ್ಪಾದನೆ ತಲೆ ಎತ್ತಿ ಇವರ ರಾಜಕಾರಣಕ್ಕೆ ಸಾಂದರ್ಭಿಕ ಪೋಷಣೆಯನ್ನೂ ಒದಗಿಸಿಬಿಟ್ಟಿದೆ. ಇದನ್ನು ವಿವರಿಸುವವರನ್ನೂ, ಈ ಬಗ್ಗೆ ಎಚ್ಚರಿಸುವವರನ್ನೂ ಹಿಂದೂ ವಿರೋಧಿಗಳೆಂದೂ, ಬುದ್ಧಿಜೀವಿಗಳೆಂದೂ ಹೆಸರಿಸಿ ಹೀಗೆಳೆಯುವ ಪ್ರಚಾರಾಂದೋಲನವನ್ನೂ ಇವರು ಆರಂಭಿಸಿದ್ದಾರೆ. ಆದರೆ ಇಂತಹ ಆಂದೋಲನ, ಬುದ್ಧಿಗೇಡಿಗಳ ರಾಷ್ಟವನ್ನು ಮಾತ್ರ ನಿರ್ಮಿಸಬಲ್ಲುದು ಎಂದು ಇವರಿಗೆ ಹೇಳ ಬಲ್ಲವರಾದರೂ ಯಾರು?

ಭಾರತದ ರಾಜಕಾರಣ, ನಿರ್ದಿಷ್ಟವಾಗಿ ಕರ್ನಾಟಕದ ರಾಜಕಾರಣ ನಿಜವಾಗಿ ಇಂದು ಕವಲು ದಾರಿಯಲ್ಲಿದ್ದಂತಿದೆ. ಭಾಜಪದಲ್ಲಿನ ಉದಾರವಾದಿಗಳೇ, ಕಾಂಗ್ರೆಸ್ಸಿಗರೇ, ದೇವೇಗೌಡರೇ, ಇದು ರಾಷ್ಟ್ರದ ಮತ್ತು ನಿರ್ದಿಷ್ಟವಾಗಿ ರಾಜ್ಯದ ಹಿತ ದೃಷ್ಟಿಯಿಂದ ನೀವೆಲ್ಲರೂ ನಿಜವಾಗಿ ಎಚ್ಚೆತ್ತುಕೊಳ್ಳಬೇಕಾದ ಕಾಲ!

(ಫೆಬ್ರುವರಿ ೧೩, ೨೦೦೯, 'ವಿಕ್ರಾಂತ ಕರ್ನಾಟಕ')

೨೭. ಸಾಂಸ್ಕೃತಿಕ ನಾಯಕತ್ವ ಕಳೆದುಕೊಂಡಿರುವ ಕರ್ನಾಟಕ

ಅಂತೂ 'ಅನುದೇವಾ...' ಕೃತಿಯನ್ನು ಮುಟ್ಟುಗೋಲು ಹಾಕಿಕೊಳ್ಳಲು ಸರ್ಕಾರ ನಿರ್ಧರಿಸಿದೆ. ಸರ್ಕಾರ ತನ್ನ ನಿರ್ಧಾರವನ್ನು ಹೇಳಿದ ಹಿಂದಿನ ಎರಡು-ಮೂರು ದಿನಗಳ ಕಾಲ ಜಾತಿವಾದಿ ಲಿಂಗಾಯತರ ನೇತೃತ್ವದಲ್ಲಿ ನಡೆದ ಅನಾಗರಿಕ ಶೈಲಿಯ ಪ್ರತಿಭಟನೆಗಳನ್ನು(ಅವರು ಹಿಡಿದಿದ್ದ ಭಿತ್ತಿಪತ್ರಗಳ ಭಾಷೆಯನ್ನು ಗಮನಿಸಬೇಕಿತ್ತು) ಹಾಗೂ ಸರ್ಕಾರ ಮತ್ತು ಶಾಸನ ಸಭೆಗಳೊಳಗೇ ಇದ್ದ ಜಾತಿವಾದಿ ಹಾಗೂ ಅಪ್ಪಟ ರಾಜಕೀಯ ಲೆಕ್ಕಾಚಾರವನ್ನೇ ರಾಜಕಾರಣದ ಪರಮ ಗಂತವ್ಯವನ್ನಾಗಿಸಿಕೊಂಡಿರುವ ಜನಪ್ರತಿನಿಧಿಗಳ ಪ್ರತಿಕ್ರಿಯೆಗಳನ್ನು ಗಮನಿಸಿದ ಯಾರಿಗೂ ಸರ್ಕಾರ ಕೈಗೊಳ್ಳಬಹುದಾದ ನಿರ್ಧಾರದ ಬಗ್ಗೆ ಸಂಶಯವಿರಲಿಲ್ಲ. ಪುಸ್ತಕ ಕುರಿತು ವರದಿ ಸಲ್ಲಿಸಲು ತರಾತುರಿಯಲ್ಲಿ ಸಾಹಿತಿಗಳ ಸಮಿತಿಯೊಂದನ್ನು ರಚಿಸಿದ್ದೂ, ಆದರೆ ಅದರ ಸದಸ್ಯರ ವರದಿಗಳನ್ನು ಗಣನೆಗೆ ತೆಗೆದುಕೊಳ್ಳದೆ ಸರ್ಕಾರ ತನ್ನ ನಿರ್ಧಾರ ಪ್ರಕಟಿಸಿದ್ದೂ; ಕರ್ನಾಟಕದ ರಾಜಕಾರಣ ತನ್ನೆಲ್ಲಾ ಸಾಂಸ್ಕೃತಿಕ ಬಂಡವಾಳವನ್ನು ಕಳೆದುಕೊಂಡು ದಟ್ಟ ದರಿದ್ರ ಸ್ಥಿತಿ ತಲುಪಿರುವುದನ್ನಷ್ಟೇ ಸೂಚಿಸುತ್ತದೆ.

ಸರ್ಕಾರದ ನಿರ್ಧಾರವೇನೋ ನಿರೀಕ್ಷಿತವೇ. ಆದರೆ ಬಂಜಗೆರೆಯವರ ಪುಸ್ತಕ ವಾಪಸಾತಿಯ ನಿರ್ಧಾರ ಮಾತ್ರ ಸಂಪೂರ್ಣ ಅನಿರೀಕ್ಷಿತ. ಪುಸ್ತಕದ ಮುಟ್ಟುಗೋಲು ಬಹುಪಾಲು ಖಚಿತವೆನ್ನಿಸಿದ ಕೊನೇ ನಿಮಿಷದಲ್ಲಿ-ಸರ್ಕಾರದ ನಿರ್ಧಾರ ಪ್ರಕಟವಾಗುವ ಹಿಂದಿನ ರಾತ್ರಿ-ಅವರು ತಾವು ಪುಸ್ತಕವನ್ನು, ಅದೂ ತಾತ್ಕಾಲಿಕವಾಗಿ ಹಿಂದೆ ತೆಗೆದುಕೊಂಡಿರುವುದಾಗಿ ಪ್ರಕಟಿಸಿದ್ದು ನಿಜವಾಗಿಯೂ ಅರ್ಥವಾಗದ ವಿಷಯವಾಗಿದೆ. ತಮ್ಮ ಪುಸ್ತಕ ಸಾಮಾಜಿಕ ಅಶಾಂತಿಗೆ ಕಾರಣವಾಗಿದ್ದು, ಒಬ್ಬ ಲೇಖಕನ ಸಾಮಾಜಿಕ ಜವಾಬ್ದಾರಿಯ ಭಾಗವಾಗಿ ಮತ್ತು ಮುಂದಿನ ದಿನಗಳಲ್ಲಿ ಪುಸ್ತಕವನ್ನು ತಿದ್ದಿ-ಪರಿಷ್ಕರಿಸಿ ಪ್ರಕಟಿಸುವುದಕ್ಕಾಗಿ ಪುಸ್ತಕವನ್ನು ಹಿಂತೆಗೆದುಕೊಂಡಿದ್ದಾಗಿ ಅವರು ತಮ್ಮ ನಿರ್ಧಾರವನ್ನು ಸಮರ್ಥಿಸಿಕೊಂಡಿದ್ದಾರೆ. ಇದಕ್ಕೆ ಬದಲಾಗಿ ಅವರು ತಾನು ಈ ಪುಸ್ತಕವನ್ನು ಹೀಗೆ ಅವಸರದಲ್ಲಿ ಬರೆಯಬಾರದಿತ್ತು;ಬರೆದು ತಪ್ಪು ಮಾಡಿದ್ದೇನೆ ಎಂದು ಕ್ಷಮೆ ಕೇಳಿದ್ದರೆ, ಅದು ಕೆಲವರಿಗಾದರೂ ಹೆಚ್ಚು ಪ್ರಾಮಾಣಿಕ ನಿರ್ಧಾರ ಎನಿಸುತ್ತಿತ್ತೇನೋ! ಏಕೆಂದರೆ ಲೇಖಕರಿಗೆ ತಮ್ಮ ಪುಸ್ತಕದ ವಿರುದ್ಧದ ಪ್ರತಿಭಟನೆ ಸಾಮಾಜಿಕ ಅಶಾಂತಿಯಾಗಿ ಕಂಡದ್ದು, ಲೇಖಕನ ಸಾಮಾಜಿಕ ಜವಾಬ್ದಾರಿಯ ನೆನಪೂ ಆಗಿದ್ದು ಹಾಗೂ ಪುಸ್ತಕವನ್ನು ಪರಿಷ್ಕರಿಸಿ ಪ್ರಕಟಿಸುವ ಅಗತ್ಯವೂ ಮನವರಿಕೆಯಾಗಿದ್ದೂ, ಸರ್ಕಾರದ ನಿರ್ಧಾರ ಪ್ರಕಟಣೆಯ ಹಿಂದಿನ ರಾತ್ರಿಯ ವೇಳೆಗಷ್ಟೇ ಎಂದರೆ ಯಾರಾದರೂ ಹೇಗೆ ನಂಬುವುದು?

ಮುಟ್ಟುಗೋಲನ್ನು ತಪ್ಪಿಸಿಕೊಳ್ಳಬಹುದು ಎಂದೋ ಅಥವಾ ಈ ಸಂಬಂಧ ಸರ್ಕಾರದ ಪರವಾಗಿ ಯಾರಾದರೂ ನೀಡಿದ ಆಶ್ವಾಸನೆಗೆ ಪ್ರತಿಯಾಗಿಯೋ ಈ ಕೊನೇ ನಿಮಿಷದ ನಿರ್ಧಾರವನ್ನೇನಾದರೂ ಬಂಜಗೆರೆ ಪ್ರಕಟಿಸಿದ್ದರೆ, ಅವರ ಈವರೆಗಿನ ಬೌದ್ಧಿಕ ಹಾಗೂ ಹೋರಾಟದ ಜೀವನ ಅನುಮಾನಾಸ್ಪದವೇ ಆಗುತ್ತದೆ. ಅಲ್ಲಾ ಜಯಪ್ರಕಾಶ್, ಸಲ್ಲದ ಕಾರಣದ ಮೇಲೆ ಯಾರಾದರೂ ಸಾಮಾಜಿಕ ಅಶಾಂತಿ ಉಂಟು ಮಾಡಿದರೆ, ಅವರನ್ನು ನಿರ್ವಹಿಸುವ ಜವಾಬ್ದಾರಿ ಸರ್ಕಾರದ್ದು. ಅದನ್ನೇಕೆ ನೀವು ಹೊರಲು ಹೋದಿರಿ? ಅಥವಾ ನಿಮ್ಮ ನಿರ್ಧಾರದಿಂದ ಆ ಉಗ್ರ ಹೋರಾಟಗಾರರು ತಮ್ಮ ಪ್ರತಿಭಟನೆಯನ್ನು ನಿಲ್ಲಿಸಿಬಿಡುತ್ತಾರೆಂದು ನಂಬುವಷ್ಟು ನೀವು ಹುಂಬರೋ? ಹಾಗೇನೂ ಅನ್ನಿಸುವುದಿಲ್ಲವಲ್ಲವಲ್ಲ? ಪುಸ್ತಕದಲ್ಲಿ ಅಸಮ್ಮತಾರ್ಹವಾದ್ದು ಇರಬಹುದಾದರೂ, ಆಕ್ಷೇಪಾರ್ಹವಾದದ್ದು ಏನೂ ಇಲ್ಲದಿದ್ದಾಗ ತಾತ್ಕಾಲಿಕ ವಾಪಸಾತಿಯಾದರೂ ಏಕೆ? ಈ ನಿರ್ಧಾರದ ಮೂಲಕ ಜಾತಿವಾದಿ ಗುಂಪುಗಳು ನಡೆಸಿದ ಪ್ರತಿಭಟನೆಗೆ ಈಗ ನೀವೇ ಪರೋಕ್ಷ ಸಮರ್ಥನೆ ಒದಗಿಸಿದ್ದೀರಿ ಹಾಗೂ ಪುಸ್ತಕ ಓದದ ಅಪಾರ ಜನರ ಕಣ್ಣಲ್ಲಿ ಅನುಮಾನಾಸ್ಪರಾಗುವ ಅವಕಾಶವನ್ನು ನೀವೇ ಕಲ್ಪಿಸಿಕೊಂಡಿದ್ದೀರಿ. ಅಷ್ಟೇ ಅಲ್ಲ, ಮುಂದೆ ನ್ಯಾಯಾಲಯದಲ್ಲಿ ಈ ಸಂಬಂಧ ನೀವು ಹೂಡಬಹುದಾದ(ಹಾಗೆಂದು ಭಾವಿಸಿದ್ದೇನೆ) ಮೊಕದ್ದಮೆಯಲ್ಲಿ ಅನಗತ್ಯ ಕಸಿವಿಸಿಯನ್ನು ಅನುಭವಿಸುವ ಪರಿಸ್ಥಿತಿಯನ್ನು ನೀವೇ ತಂದುಕೊಂಡಿದ್ದೀರಿ.*

ಹಾಗೆ ನೋಡಿದರೆ, ಇಂದಿನ ರಾಜಕೀಯ ವಾತಾವರಣವೇ ಇಂತಹ ತಿಕ್ಕಲುತನಗಳಿಗೆ, ಆಂದೋಲನಗಳ ನಾಶಕ್ಕೆ ಪ್ರೇರಣೆ ನೀಡುವಂತಿದೆ. ಬುದ್ಧಿಜೀವಿಗಳಿಗೆ, ಹೋರಾಟಗಾರರಿಗೆ ಪ್ರಭುತ್ವದಿಂದ ಹಾಗೂ ಅದರ ದಲ್ಲಾಳಿ ಸಂಸ್ಥೆಗಳಿಂದ ಎಷ್ಟೊಂದು ಆಮಿಷಗಳು, ಆಕರ್ಷಣೆಗಳು! ಮತ್ತು ಆ ಸಂಬಂಧದ ಆತಂಕಗಳು... ಸ್ವದೇಶದ್ದೋ ವಿದೇಶದ್ದೋ ಹಣದ ಹೊಳೆ ಹರಿಸುವ ಅನೇಕ ಯೋಜನೆಗಳು, ಕಾರ್ಯಕ್ರಮಗಳು, ಸ್ವಯಂಸೇವಾ ಸಂಸ್ಥೆಗಳು, ಟ್ರಸ್ಟ್‌ಗಳು, ಅಧಿಕಾರ ಸ್ಥಾನಗಳು, ಪ್ರಶಸ್ತಿಗಳು! ಇವಕ್ಕೆ ಬಲಿಯಾಗದವರೇ ಪಾಪಿಗಳೆನಿಸಿಕೊಳ್ಳುವ ಪರಿಸ್ಥಿತಿ ಈಗ... ಇಂತಹ ನಿರಾಶದಾಯಕ ಪರಿಸ್ಥಿತಿಯಲ್ಲೂ ಜನ ಸಿನಿಕರಾಗದೆ ಸಮಾನತೆಯ ಆಶಯಗಳಿಗೆ ಅಥವಾ ಪ್ರಜಾಸತ್ತಾತ್ಮಕ ಹಕ್ಕುಗಳಿಗೆ ಧಕ್ಕೆ ಒದಗಿದಾಗಲೆಲ್ಲಾ ಧ್ವನಿ ಎತ್ತುವ ಶಕ್ತಿ ಇನ್ನೂ ಉಳಿಸಿಕೊಂಡಿದ್ದಾರೆ ಎಂದರೆ, ಬಂಜಗೆರೆಯವರಂತಹ ಹೊಸ ತಲೆಮಾರಿನ ಯುವ ಚಿಂತಕರಿಗೆ ಹಾಗೂ ಹೋರಾಟಗಾರರಿಗೆ ಎಷ್ಟೆಲ್ಲಾ ಜವಾಬ್ದಾರಿ ಇರಬೇಡ! ಇಂತಹ ಜವಾಬ್ದಾರಿ ಬಂಜಗೆರೆಯವರಿಂದ, ಅವರ ಜೊತೆ ನಿಂತವರಿಗಾಗಿ ಕನಿಷ್ಠ ಒಂದು ಪ್ರಾಮಾಣಿಕ ಹಾಗೂ ಸಮಂಜಸ ವಿವರಣೆಯನ್ನು ಬೇಡುತ್ತದೆ.

ಬಂಜಗೆರೆಯವರು ತಮ್ಮ ಈ ಅಸಂಗತ, ಅಸಮರ್ಥನೀಯ ಹಾಗೂ ಕೆಟ್ಟ ಸಂಪ್ರದಾಯದ ನಿರ್ಧಾರದಿಂದ ಯಾವ ಅಪಾಯದಿಂದ ರಕ್ಷಣೆ ಪಡೆದಿದ್ದಾರೋ ಅಥವಾ ಯಾರನ್ನು ರಕ್ಷಿಸಲು ಸಾಧ್ಯವಾಗಿದೆಯೋ ತಿಳಿಯದಾಗಿದೆ. ಆದರೆ 'ಆನುದೇವಾ...' ಪ್ರಕಟವಾದಾಗಿನಿಂದ ಪ್ರತಿಕೂಲ ವಾತಾವರಣದ ನಡುವೆಯೂ ತಾತ್ವಿಕ ಸಹಾನುಭೂತಿಯೊಂದಿಗೆ ಆ ಪುಸ್ತಕದ

---

* ಮುಟ್ಟುಗೋಲಿನ ವಿರುದ್ಧ ನ್ಯಾಯಾಲಯಕ್ಕೆ ಹೋಗುವುದಾಗಿ ಹೇಳಿದ್ದ ಅವರು ಏಕೋ ಈ ವಿಷಯ ಅಲ್ಲಿಗೇ ಕೈಬಿಟ್ಟರು!

ಆಶಯದ ಪರ ನಿಂತ ಕರ್ನಾಟಕದ ಒಂದು ದೊಡ್ಡ ಜನಪರ ಹಾಗೂ ಪ್ರಜಾಸತ್ತಾತ್ಮಕ ಶಕ್ತಿಗಳ ಗುಂಪಿಗೆ ಅವರು ಆಘಾತ ಉಂಟು ಮಾಡಿದ್ದಾರೆ. ಆ ಮೂಲಕ ದಿನೇ ದಿನೇ ಕುಂದುತ್ತಿರುವ ಜನಪರ ಹೋರಾಟಗಳ ನೈತಿಕ ಸ್ಥೈರ್ಯವನ್ನು ಮತ್ತಷ್ಟು ಕುಂದಿಸಿದ್ದಾರೆ. ಇಂದು ಸರ್ಕಾರದ ಕ್ರಮದ ವಿರುದ್ಧ ಒಂದಷ್ಟು ಜನ ಪ್ರತಿಭಟನೆ ಮಾಡುತ್ತಿದ್ದರೆ, ಅವರು ತಮ್ಮನ್ನು ಉದಾರವಾಗಿ ಕ್ಷಮಿಸಿದ್ದಾರೆ ಅಥವಾ ತಮ್ಮ ನಿರ್ಧಾರದ ಬಗ್ಗೆ ತಲೆ ಕೆಡಿಸಿಕೊಳ್ಳದ ಒಂದು ತಾತ್ವಿಕತೆಯನ್ನು ಎತ್ತಿ ಹಿಡಿಯಲು ಮುಂದಾಗಿದ್ದಾರಷ್ಟೆ ಎಂಬುದನ್ನು ಜಯಪ್ರಕಾಶ್ ತಿಳಿದರೆ ಒಳ್ಳೆಯದು. ಹಾಗೇ, ಒಮ್ಮೆ ಒಂದು ಅಧ್ಯಯನವನ್ನು ಸಾರ್ವಜನಿಕರ ಅವಗಾಹನೆಗೆ ಒಪ್ಪಿಸಿದ ಮೇಲೆ ಅದರ ಮೇಲಿನ ಹಕ್ಕು ಲೇಖಕನ ಜೊತೆಗೇ ಸಾರ್ವಜನಿಕರಿಗೂ ಸೇರುತ್ತದೆ. ಹೀಗಾಗಿ ಲೇಖಕನೇ ಏಕಪಕ್ಷೀಯವಾಗಿ ಪುಸ್ತಕವನ್ನು ವಾಪಸ್ ಪಡೆಯುವುದೆಂದರೆ, ಅದು ಸಾರ್ವಜನಿಕರ ಪಾಲಿನ ಹಕ್ಕಿಗೆ ಚ್ಯುತಿ ತಂದಂತೆ ಎಂಬುದನ್ನು ಅವರು ಅರಿಯಬೇಕಿದೆ.

ಅದೇನೇ ಇರಲಿ, ಇಷ್ಟೆಲ್ಲ ವಾದ ವಿವಾದ, ಪ್ರತಿಭಟನೆ, ಗೂಂಡಾಗಿರಿ ಹಾಗೂ ಸರ್ಕಾರದ ಅಪ್ರಜಾಸತ್ತಾತ್ಮಕ ಕ್ರಮಗಳು ಜರುಗುತ್ತಿದ್ದರೂ, ನಮ್ಮ ಬೌದ್ಧಿಕ ವಲಯದ ಒಂದು ವರ್ಗದ ಮೌನವನ್ನು ಗಮನಿಸುತ್ತೀದ್ದೀರಾ? ಪುಸ್ತಕವೊಂದನ್ನು ಮುಟ್ಟುಗೋಲು ಹಾಕಿಕೊಳ್ಳುವಂತೆ ಸರ್ಕಾರವನ್ನು ಒತ್ತಾಯಿಸಿ ಪ್ರಬಲವಾದ ಜಾತಿ ಗುಂಪೊಂದು ರಾಜ್ಯಾದ್ಯಂತ ಕಿಚ್ಚು ಹತ್ತಿಸಿ ಅಶಾಂತಿಯ ವಾತಾವರಣ ನಿರ್ಮಾಣ ಮಾಡುವ ಬೆದರಿಕೆ ಒಡ್ಡುತ್ತಿದ್ದಾಗ, ಅದನ್ನು ಸಂಘಟಿತವಾಗಿ ವಿರೋಧಿಸಿ ಸಾರಸ್ವತ ಲೋಕದ ಸ್ವಾತಂತ್ರ್ಯ ಹಾಗೂ ಸ್ವಾಯತ್ತತೆಯ ಮೇಲಿನ ಅನುಚಿತ ಹಲ್ಲೆಯನ್ನು ನಾವು ಸುಮ್ಮನೆ ನೋಡುತ್ತಾ ಕೂರುವುದಿಲ್ಲ ಎಂಬ ಸಂದೇಶವೊಂದನ್ನು ಸರ್ಕಾರಕ್ಕೆ ಮುಟ್ಟಿಸುವುದು ತಮ್ಮ ತುರ್ತು ಕರ್ತವ್ಯವೆಂದು ಈ ವರ್ಗಕ್ಕೆ ಅನ್ನಿಸಲೇ ಇಲ್ಲ! ಅಷ್ಟೇ ಅಲ್ಲ, 'ಪ್ರಜಾವಾಣಿ'ಯಂತಹ ಪತ್ರಿಕೆ ಕೂಡ ಮುಟ್ಟುಗೋಲಿನ ನಂತರವೂ ಈ ಬಗ್ಗೆ ತನ್ನ ನಿಲುವನ್ನು ಪ್ರಕಟಿಸಲು ಹಿಂಜರಿದಿದೆ! ಇದರರ್ಥ, ಇಂದು ಕರ್ನಾಟಕಕ್ಕೆ ಒಂದು ವಿಶ್ವಾಸಾರ್ಹ ಬೌದ್ಧಿಕ ಅಥವಾ ಸಾಂಸ್ಕೃತಿಕ ನಾಯಕತ್ವವೇ ಇಲ್ಲವಾಗಿದೆ. ಇದು ದುರಂತ.

ನಮ್ಮ ಕಂಬಾರರನ್ನೇ ನೋಡಿ. ಸದ್ಯಕ್ಕೆ ತಮ್ಮ ಸ್ವಜಾತಿ ಬಂಧುಗಳಿಗೆ ಪರಿಶಿಷ್ಟ ವರ್ಗದ ಮಾನ್ಯತೆ ದೊರಕಿಸಿಕೊಡಲು ವಿಧಾನ ಪರಿಷತ್ತಿನ ಮೂಲಕ ನಡೆಸಿರುವ ಹೋರಾಟದ ಏಕಾಗ್ರತೆಯಲ್ಲಿ ಅವರಿಗೆ ಮಿಕ್ಕಾವ ವಿಷಯಗಳೂ ಮುಖ್ಯವೇ ಅನಿಸಿಲ್ಲ! ಇವರು ಪರಿಷತ್ತಿನ ಸದಸ್ಯರಾಗಿರುವುದು ಕೇವಲ ಜಾತಿ ಪ್ರತಿನಿಧಿಯಾಗಿಯೋ ಅಥವಾ ವಿಶಾಲ ಸಾರಸ್ವತ ಲೋಕದ ಪ್ರತಿನಿಧಿಯಾಗಿಯೋ? ಕಂಬಾರರು, ಇಂದು ನಮ್ಮ ಲೇಖಕ-ಕಲಾವಿದ ವರ್ಗ ಸರ್ಕಾರ ಕೊಡಮಾಡುತ್ತಿರುವ ಸವಲತ್ತುಗಳ ದಾಕ್ಷಿಣ್ಯಕ್ಕೆ ಸಿಕ್ಕಿ ತಮ್ಮ ಧ್ವನಿಯನ್ನೇ ಕಳೆದುಕೊಳ್ಳುವಂತಾಗಿರುವ ದುರಂತಕ್ಕೆ ಎಂತಹ ಪ್ರತಿಭಾವಂತರೂ ಬಲಿಯಾಗಬಲ್ಲರು ಎಂಬುದಕ್ಕೆ ಸಾಕ್ಷಿಯಂತಿದ್ದಾರೆ. ಒಂದನೇ ತರಗತಿಯಿಂದ ಮಕ್ಕಳಿಗೆ ಇಂಗ್ಲಿಷ್ ಕಲಿಸುವ ಸರ್ಕಾರದ ನಿರ್ಧಾರ ಸರಿಯಲ್ಲವೆಂಬ ತಮ್ಮ ಮೂಲ ನಿಲುವಿನಲ್ಲಿ ಯಾವುದೇ ಬದಲಾವಣೆ ಇಲ್ಲವೆಂದು ಕಳೆದ ವರ್ಷದ 'ಆಳ್ವಾಸ್ ನುಡಿಸಿರಿ'ಯ ಅಧ್ಯಕ್ಷತೆ ವಹಿಸಿ ಘೋಷಿಸಿದ್ದ ಕಂಬಾರರು, ಸಂಬಂಧಪಟ್ಟ ಆಜ್ಞೆ ಹೊರಬಿದ್ದ ಮೇಲೂ ಪರಿಷತ್ತಿನಲ್ಲಿ ಈ ಬಗ್ಗೆ ಒಂದೂ ಮಾತಾಡಿದ ದಾಖಲೆಯಿಲ್ಲ! ಈಗ ಸದುದ್ದೇಶದ ವಿಚಾರಶೀಲ ಪುಸ್ತಕವೊಂದನ್ನು

ಮುಟ್ಟುಗೋಲು ಹಾಕಿಕೊಂಡಾಗಲೂ, ವಿರೋಧ ಬೇಡ; ತಮ್ಮ ವೈಯುಕ್ತಿಕ ಅನ್ನಿಸಿಕೆಯನ್ನೂ ಪ್ರಕಟಿಸದಷ್ಟು ಎಚ್ಚರಿಕೆ ವಹಿಸಿದ್ದಾರೆಂದರೆ, ಇವರನ್ನು ಸಾರಸ್ವತ ಲೋಕದ ಶಾಸಕ ಪ್ರತಿನಿಧಿಯೆಂದು ಹೇಗೆ ಮಾನ್ಯ ಮಾಡುವುದು?

ನಮ್ಮ ಈ ವಿಧಾನ ಪರಿಷತ್ತಿಗೆ ಈಗ ನೂರು ವರ್ಷಗಳ ಸಂಭ್ರಮವಂತೆ. ವಿವಿಧ ಕ್ಷೇತ್ರಗಳ ತಜ್ಞರ, ಪ್ರಾಜ್ಞರ, ಅನುಭವಿಗಳ, ಹಿರಿಯರ ಹಾಗೂ ಬುದ್ಧಿಜೀವಿಗಳ ಸಭೆಯಾಗಿ ಪರಿಕಲ್ಪಿತವಾದ ಇದು ಇಂದು ವಿವಿಧ ಕ್ಷೇತ್ರಗಳ ದಲ್ಲಾಳಿಗಳ, ಅವರ ಚೇಲಾಗಳ ಹಾಗೂ ಜನರ ವಿಶ್ವಾಸ ಕಳೆದುಕೊಂಡ ಧುರೀಣರ ರಾಜಕೀಯ ಪುನರ್ವಸತಿ ಕೇಂದ್ರವಾಗಿ ಹೋಗಿದೆ! ತಮ್ಮ ವಿಶೇಷ ಪ್ರತಿಭೆಗಳ ಕಾರಣದಿಂದಾಗಿ ಈ ಮನೆಯ ಸದಸ್ಯರು ಕೆಳ ಮನೆಯ ಸದಸ್ಯರಿಗಿಂತ ಜನರಿಗೆ ಹೆಚ್ಚು ಪರಿಚಯವಿರಬೇಕು. ಆದರೆ ವಾಸ್ತವವೆಂದರೆ ಇವರಲ್ಲಿ ಬಹುಪಾಲು ಜನರು ಸಾರ್ವಜನಿಕರಿಗೆ ಅಪರಿಚಿತರಾಗಿಯೇ ಉಳಿದಿದ್ದಾರೆ! ಮೇಲ್ಮನೆ ಎನಿಸಿಕೊಂಡಿರುವ ಈ ಮನೆಯ ಯಾವುದೇ ಚರ್ಚೆ ಕೆಳಮನೆಯಲ್ಲಿ ನಡೆಯುವ ಚರ್ಚೆಗಿಂತ ಗುಣಮಟ್ಟದಲ್ಲಿ ಭಿನ್ನವಾಗಿ ಕಂಡಿದೆಯೇ? ಕೆಳಮನೆಗೆ ಮಾರ್ಗದರ್ಶಕವಾಗಿ ಹಾಗೂ ಮಾದರಿಯಾಗಿ ಅಲ್ಲಿನ ಸದಸ್ಯರ ಗೌರವಕ್ಕೆ ಪಾತ್ರವಾಗಿರಬೇಕಾದ ಮೇಲ್ಮನೆ, ಹಲವು ಬಾರಿ ಆ ಮನೆಯಿಂದ ತನ್ನ ರದ್ದತಿಯ ಒತ್ತಾಯವನ್ನು ಎದುರಿಸಬೇಕಾದ ದುಃಸ್ಥಿತಿಗೆ ಈಡಾಗಿದೆ! ಹಾಗಾಗಿಯೇ ಮೊನ್ನೆಯ ಸಂಭ್ರಮಾಚರಣೆಯ ಸಂದರ್ಭದಲ್ಲಿ ರಾಜ್ಯಪಾಲರು ಹಾಗೂ ವಿಧಾನಸಭಾಧ್ಯಕ್ಷರು ತಮ್ಮ ಭಾಷಣಗಳಲ್ಲಿ ಈ ಸದನದ ಘನತೆಯನ್ನು ಪುನಃಸ್ಥಾಪಿಸುವ ಅಗತ್ಯವನ್ನು ಒತ್ತಿ ಹೇಳಿ ಕೆಲವು ಸಲಹೆಗಳನ್ನು ನೀಡುವಂತಾಗಿರುವುದು! ವಿವಿಧ ಕ್ಷೇತ್ರಗಳ ಬುದ್ಧಿಜೀವಿಗಳ ಸದನವಾಗಿರಬೇಕಾದ ಪರಿಷತ್ತಿನ ಇಂದಿನ ಅವನತಿ ನಮ್ಮ ಬುದ್ಧಿಜೀವಿಗಳ ಸಾರ್ವತ್ರಿಕ ಅವನತಿಯ ಪ್ರತೀಕವೂ ಆಗಿದ್ದರೆ ಆಶ್ಚರ್ಯವಿಲ್ಲ.

ಉದಾಹರಣೆಗೆ, ಮೊನ್ನೆ ಗಿರೀಶ್ ಕಾಸರವಳ್ಳಿ ನಿರ್ದೇಶಿಸಿದ್ದ ಭೈರಪ್ಪನವರ ಕಾದಂಬರಿಯನ್ನಾಧರಿಸಿದ 'ನಾಯಿ ನೆರಳು' ಸಿನೆಮಾ ನೋಡಿ ಗಾಬರಿಯಾದೆ! ಪುನರ್ಜನ್ಮದಲ್ಲಿನ ನಂಬಿಕೆ ಬಗ್ಗೆ ನಾನಿಲ್ಲಿ ಮಾತಾಡುತ್ತಿಲ್ಲ. ಅದನ್ನೊಪ್ಪಿಕೊಂಡು ನೋಡಿದರೂ, ಈ ಚಿತ್ರ ಅಸಂಬದ್ಧವಾಗಿದೆ. ತಲೆ ಬೋಳಿಸಿ ಮನೆಯಲ್ಲಿಟ್ಟುಕೊಂಡ–ಬೆಳೆದ ಮಗಳೊಬ್ಬಳ ತಾಯಿಯೂ ಆದ–ವಿಧವೆ ಸೊಸೆಯನ್ನು, ಆಕೆಯ ಗಂಡನಾಗಿದ್ದ ತನ್ನ ಮಗನೇ ಪುರ್ನಜನ್ಮ ಪಡೆದು ಬಂದವನೆಂದು ಹೇಳಲಾದ ಎಳೆವಯಸ್ಸಿನ ಯುವಕನೊಬ್ಬನ ಸಂತೋಷಕ್ಕಾಗಿ ಬಣ್ಣದ ಸೀರೆ ಹಾಗೂ ಚಿನ್ನದ ಆಭರಣಗಳನ್ನು ತೊಟ್ಟುಕೊಳ್ಳುವಂತೆ ಅತ್ತೆ ಒತ್ತಾಯಿಸುವಳು. ಈ ಒತ್ತಾಯದ ಫಲವಾಗಿ ಸೊಸೆ ಅವನೊಂದಿಗೆ ಮರು ದಾಂಪತ್ಯ ಆರಂಭಿಸಿದಾಗಷ್ಟೇ ಅವಳಿಗೆ ಅದರ ಅಶ್ಲೀಲತೆ ಕಾಣತೊಡಗುತ್ತದೆ! ಶಾಸ್ತ್ರಾಚಾರ ಸಂಪನ್ನನಾದ ಮಾವ ಇದೆಲ್ಲವನ್ನೂ ಸಹಾನುಭೂತಿಯಿಂದ ನೋಡುತ್ತಿರುತ್ತಾನೆ ಮಾತ್ರವಲ್ಲ; ಮೊಮ್ಮಗಳ ಒತ್ತಾಯಕ್ಕೆ ಮಣಿದು, 'ಪುನರ್ಜನ್ಮಿತ' ಮಗನನ್ನು ಮನೆಯಲ್ಲಿಟ್ಟುಕೊಂಡೇ ಆ ಮಗನ ಶ್ರಾದ್ಧವನ್ನೂ ಮಾಡುತ್ತಾನೆ! ಹಾಗಾದರೆ, ಶ್ರಾದ್ಧ ಮಾಡುವುದು ಆತ್ಮಕ್ಕೋ, ದೇಹಕ್ಕೋ? ಆದರೆ, ಇದಾವುದರ ಬಗೆಗೂ ತಲೆ ಕೆಡಿಸಕೊಳ್ಳದೇ ಹೋದ ಜಾತಿ ಸಮಾಜ, ಈ ಮರು ದಾಂಪತ್ಯ ಬಸುರಿಗೆ ಕಾರಣವಾದದ್ದು ಗೊತ್ತಾದೊಡನೆ, ಶಾಸ್ತ್ರದ ಚರ್ಚೆ ಶುರು ಮಾಡುತ್ತದೆ! ಇದರ ಆಧಾರದ ಮೇಲೆ ಕಟ್ಟಲ್ಪಡುವ

ಹುಡುಗಾಟವೆನ್ನಿಸುವ ನಾಟಕೀಯತೆಯೊಂದಿಗೆ ಕೋರ್ಟು–ಕಛೇರಿ ಎಂದೆಲ್ಲಾ ಅಸಂಬದ್ಧವಾಗಿ ಬೆಳೆಯುವ ಈ ಚಲನಚಿತ್ರ, ಸಹಜವಾಗಿಯೇ ಅಸಂಬದ್ಧ ಕೊನೆ ಕಾಣುತ್ತದೆ.

ಇದು ಗಿರೀಶ್ ಕಾಸರವಳ್ಳಿಯವರ ಇತ್ತೀಚಿವ ಕಲಾ ಕೌಶಲ್ಯ! ತಮ್ಮ ಘನ ಗಂಭೀರ ಹಾಗೂ ಸಂಸ್ಕೃತಿ ಸಂಪನ್ನ ನಿಧಾನ ಗತಿ ಶೈಲಿಯ ಮೂಲಕ ವಸ್ತುವೊಂದರ ತಾಂತ್ರಿಕ ಹಾಗೂ ತಾತ್ವಿಕ ಅಸಂಬದ್ಧತೆಗಳನ್ನೆಲ್ಲ ಮುಚ್ಚಿ ಹಾಕಿಬಿಡಬಹುದು ಎಂದೇನಾದರೂ ಕಾಸರವಳ್ಳಿಯವರು ನಂಬಿದ್ದರೆ, ಅದು ಕಲಾವಿದ ತನಗೆ ತಾನೇ ಮಾಡಿಕೊಳ್ಳಬಹುದಾದ ಮೋಸವಷ್ಟೆ. ಇದನ್ನು ಬಹುಶಃ ಅವರು ತಿಳಿಯದವರೇನಲ್ಲ. ಆದರೆ ಗಿರೀಶ್ ತಮ್ಮ ಮಾಧ್ಯಮ ಕೌಶಲ್ಯ ಪ್ರದರ್ಶಿಸಿಲು ಏನೋ ಒಂದು ಸರಕು ಮತ್ತು ಎಂತದೋ ಒಂದು ಹಣಕಾಸಿನ ಮೂಲ ಸಿಕ್ಕರೆ ಸಾಕು ಎನ್ನುವಂತಹ ನೈತಿಕ ದುರವಸ್ಥೆ ತಲುಪಿದ್ದರೆ, ಅದು ಅವರ ಸೃಷ್ಟಿಶೀಲತೆಯ ಸಾವಷ್ಟೆ. ಹಿಂದೆ ಇವರ 'ಘಟಶ್ರಾದ್ಧ' ನೋಡಿ ಬಹುವಾಗಿ ಮೆಚ್ಚಿದ್ದ ನಾನು, ಇತ್ತೀಚೆಗೆ ಇದೇ ಕಥೆಯನ್ನಾಧರಿಸಿದ ಹಿಂದಿ ಚಲನಚಿತ್ರ 'ದೀಕ್ಷಾ'(?) ನೋಡಿ, ನನಗೆ ನಾನೇ ಮೋಸ ಹೋದ ಪರಿ ನೆನೆಸಿಕೊಂಡು ನಾಚಿಕೆಯಾಯಿತು. ಕೂಡಲೇ, ವೈದಿಕರ ಶಾಸ್ತ್ರಾಚಾರಗಳ ಹುಸಿ ಸಾಂಕೇತಿಕತೆಯ ಬೌದ್ಧಿಕ ಉರುಳಿನ ಬಗ್ಗೆ ತೇಜಸ್ವಿ ನೀಡಿದ್ದ ಎಚ್ಚರಿಕೆಯ ಮಾತು ನೆನಪಾಗಿ, ಮೈ ಜುಮ್ಮೆಂದಿತು!

(ಆಗಸ್ಟ್ ೧೭, ೨೦೦೭, 'ವಿಕ್ರಾಂತ ಕರ್ನಾಟಕ')

೨೮. ನನ್ನ ಆ 'ಸ್ಕೂಲ್ ಮಾಸ್ಟರ್'!

ಗೆಳೆಯ ಕೆ.ಪುಟ್ಟಸ್ವಾಮಿಯವರು 'ವಿಕ್ರಾಂತ ಕರ್ನಾಟಕ'ದಲ್ಲಿ 'ಕನ್ನಡ ಚಿತ್ರರಂಗ-೭೫' ಮಾಲಿಕೆಯಲ್ಲಿ ಬರೆಯುತ್ತಿರುವ ಲೇಖನಗಳನ್ನು ಓದುತ್ತಿದ್ದಂತೆ, ನನ್ನ ಬಾಲ್ಯದ ದಟ್ಟ ನೆನಪುಗಳು ನಿಧಾನವಾಗಿ ಬಿಚ್ಚಿಕೊಳ್ಳುತ್ತಿವೆ.

ನನ್ನ ಬಾಲ್ಯದ ಎರಡು ವಿಶೇಷ ಆಕರ್ಷಣೆಗಳೆಂದರೆ ಶಾಲಾ ಪರೀಕ್ಷೆಗಳು ಮತ್ತು ಕನ್ನಡ ಚಲನ ಚಿತ್ರಗಳು! ಏಕೋ ಏನೋ, ಪರೀಕ್ಷೆಗಳು ಎಂದರೆ ನನ್ನೆಲ್ಲ ಸ್ನೇಹಿತರು ಹೆದರಿದಂತೆ ತೋರುತ್ತಿದ್ದರೆ, ನಾನು ಅವುಗಳನ್ನು-ಆಗ ವರ್ಷಕ್ಕೆರಡೇ ಪರೀಕ್ಷೆಗಳು: ಮಧ್ಯವಾರ್ಷಿಕ ಚಿಕ್ಕ ಪರೀಕ್ಷೆ ಮತ್ತು ವರ್ಷಾಂತ್ಯದ ದೊಡ್ಡ ಪರೀಕ್ಷೆ-ಆಕರ್ಷಕ ಸವಾಲುಗಳಂತೆ ಎದುರು ನೋಡುತ್ತಿದ್ದೆ! ಸಂಕ್ರಾಂತಿ ಹಬ್ಬಕ್ಕೆ ರೈತರು ತಮ್ಮ ದನಕರುಗಳನ್ನು ಸಿಂಗರಿಸುವಂತೆ, ನಾನು ವಾರದ ಮೊದಲೇ ನನ್ನ ಪರೀಕ್ಷೆ ರಟ್ಟನ್ನು ಬಣ್ಣದ ಕಾಗದದ ಚೂರುಗಳಿಂದ ಮತ್ತು ನನ್ನದೇ ಕೈಯ್ಯಿನ ಚಿತ್ತಾರಗಳಿಂದ ಸಿಂಗರಿಸುತ್ತಿದ್ದೆ. ನನ್ನ ತಂದೆ ಆಗ ನಮಗೆ ಹಾಗೂ ಮನೆಗೆ ಬರುತ್ತಿದ್ದ ನೆಂಟರಿಷ್ಟರ ಮತ್ತು ಸಹೋದ್ಯೋಗಿಗಳ ಮಕ್ಕಳಿಗೆ ವಿದ್ಯೆಯೊಂದೇ ಬಡತನಕ್ಕೆ ಉತ್ತರ ಎಂದು ಪದೇ ಪದೇ ಹೇಳುತ್ತಿದ್ದುದು, ನಾನು ವಿದ್ಯೆಯನ್ನು-ಪರೀಕ್ಷೆಗಳ ರೂಪದಲ್ಲಿಯೇ ಆದರೂ-ಸವಾಲಾಗಿ ಸ್ವೀಕರಿಸಲು ಪ್ರಚೋದಿಸಿತ್ತೆಂದು ಕಾಣುತ್ತದೆ. ಅವರನ್ನು ವಿದ್ಯೆಯೆಡೆಗೆ ಪ್ರಚೋದಿಸಿದ್ದುದು, ತಮ್ಮ ತಾರುಣ್ಯದಲ್ಲಿ ಕೇಳಿದ್ದ ಗಾಂಧಿ ಭಾಷಣವಂತೆ-ವಿಶೇಷವಾಗಿ ಹೆಣ್ಣುಮಕ್ಕಳ ವಿದ್ಯಾಭ್ಯಾಸದ ಮಹತ್ವದ ಬಗ್ಗೆ. ಅದನ್ನವರು ತಮಗೂ ಅನ್ವಯಿಸಿಕೊಂಡು ತಮ್ಮ ತಂದೆಯ ವಿರುದ್ಧ ಬಂಡೆದ್ದು, ಕುಲ ಕಸಬು ಬಿಟ್ಟು ಕೂಲಿ ನಾಲಿಯ ಮೂಲಕ ನಾಲ್ಕಕ್ಷರ ಕಲಿಯುವ ಸಾಹಸ ಮಾಡಿ, ಪ್ರಾಥಮಿಕ ಶಾಲಾ ಮಾಸ್ತರಾಗಿದ್ದರು.

ಅದಂತಿರಲಿ, ನನ್ನ ಶಾಲಾ ವಿದ್ಯಾಭ್ಯಾಸದುದ್ದಕ್ಕೂ ಎಲ್ಲ ಪರೀಕ್ಷೆಗಳಲ್ಲಿ ತರಗತಿಗೆ ಮೊದಲಿಗನಾಗಿ ತೇರ್ಗಡೆ ಹೊಂದುತ್ತಿದ್ದುದು, ನಾನು ಈ ಸವಾಲನ್ನು ಯಶಸ್ವಿಯಾಗಿ ಎದುರಿಸುತ್ತಿದ್ದೆ ಎಂಬುದನ್ನು ಸೂಚಿಸುವಂತಿತ್ತು. ಇದು ನಮ್ಮ ತಂದೆಗೆ ಅಪಾರ ತೃಪ್ತಿಯನ್ನು ತರುತ್ತಿತ್ತಲ್ಲದೆ, ನನ್ನ ಇನ್ನೊಂದು ಆಕರ್ಷಣೆಯಾಗಿದ್ದ ಸಿನಿಮಾ ವ್ಯಾಮೋಹದ ಬಗೆಗೆ ಅವರು ಮೃದುವಾಗಿರಲೂ ಕಾರಣವಾಗಿತ್ತು. ನಾಟಕದ ಮಾಸ್ತರೂ ಆಗಿದ್ದ ನಮ್ಮ ತಂದೆ ಸ್ವತಃ ಸಿನಿಮಾ ಪ್ರಿಯರೇ ಆಗಿದ್ದರೂ, ಹಣಕಾಸಿನ ಮುಗ್ಗಟ್ಟಿನ ಕಾರಣ ಅವರು ಎಲ್ಲ ಸಿನಿಮಾಗಳನ್ನೇನೂ ನೋಡುತ್ತಿರಲಿಲ್ಲ. ಏಕೆಂದರೆ ಅವರು ಹೊರಟರೆ, ಮನೆಯವರೆಲ್ಲರೂ ಹೊರಡುತ್ತಿದ್ದರಲ್ಲ! ನನಗಾದರೋ ಬಂದ ಎಲ್ಲ ಕನ್ನಡ ಸಿನೆಮಾಗಳನ್ನು ನೋಡುವ ಆಸೆ, ಆತುರ. ಬೆಂಗಳೂರಿನಲ್ಲಿ ಓದುತ್ತಿದ್ದ ನಮ್ಮಣ್ಣ ಊರಿಗೆ ಬಂದಾಗಲೆಲ್ಲ ಶಿಫಾರ್ಸು ಮಾಡುತ್ತಿದ್ದ

ಸಿನೆಮಾಗಳು ಬಂದರಂತೂ ನನಗೆ ಮೊದಲ ದಿನವೇ ನೋಡುವ ಕಾತುರ. ನಮ್ಮ ತಂದೆ ಆದಷ್ಟೂ ನನ್ನ ಆಸೆ–ಆತುರ–ಕಾತುರಗಳನ್ನು ಈಡೇರಿಸುತ್ತಿದ್ದರು.

ಅತ್ತ ಹಳ್ಳಿಯೂ ಅಲ್ಲದ. ಇತ್ತ ಪಟ್ಟಣವೂ ಅಲ್ಲದ ತ್ಯಾಮಗೊಂಡ್ಲು ಎಂಬ ಊರಿನ ಸಂತೆಮಾಳದ ಪಕ್ಕದ ಬಯಲಿನಲ್ಲಿ ವರ್ಷದ ಆರು ತಿಂಗಳು ಅಥವಾ ಅದಕ್ಕೂ ಹೆಚ್ಚು ಕಾಲ ಬೀಡು ಬಿಟ್ಟಿರುತ್ತಿದ್ದ 'ಮಾರುತಿ ಟೂರಿಂಗ್ ಟಾಕೀಸ್'ನಲ್ಲಿ ನಾನು ಅದೆಷ್ಟು ಚಿತ್ರಗಳನ್ನು ನೋಡಿ ಸಂತೋಷ–ಸಂಭ್ರಮ ಪಟ್ಟಿದ್ದೇನೋ! ಈ ವಾರ ಯಾವ ಸಿನೆಮಾ ಎಂದು ತಿಳಿಯುವ ಕುತೂಹಲದಿಂದ ಹೊಸ ಸಿನಿಮಾ ಡಬ್ಬ ಬರುವ ನಮ್ಮೂರಿನ ಕೊನೆಯ ಷಟಲ್ ಬಸ್ಸನ್ನು ಕಾಯುತ್ತಾ, ಮನೆಗೆ ಮಲಗಲು ತಡವಾಗಿ ಬಂದು ನಮ್ಮ ತಂದೆಯಿಂದ ಅದೆಷ್ಟು ಬಾರಿ ಎಷ್ಟು ಏಟು ತಿಂದಿದ್ದೇನೋ ಲೆಕ್ಕವೇ ಇಲ್ಲ! ಆದರೆ ಅದನ್ನು ಆಗಲೇ ಮರೆತು, ಮತ್ತೆ ಮಾರನೆಯ ಬೆಳ್ಳಂ–ಬೆಳಿಗ್ಗೆ ಹೊಸ ಸಿನೆಮಾದ ಪೋಸ್ಟರ್ ನೋಡಲು ಊರಿನ ಸರ್ಕಲ್ ಬಳಿ ಓಡುತ್ತಿದ್ದೆ. ಅಲ್ಲಿ ಟಾಕೀಸ್ ಕೆಲಸಕ್ಕೆ ಸಹಾಯಕರಾಗಿ ಸೇರಿರುತ್ತಿದ್ದ ಹೊಲೇರ ವೆಂಕಟ ಮತ್ತು ಅಂಜನಿ ಎಂಬ ನನ್ನ ಗೆಳೆಯರು ದೊಡ್ಡ ಪೋಸ್ಟರಿನ ನಾಲ್ಕು ಭಾಗಗಳನ್ನು, ಈಗಲೂ ತನ್ನ ಒಗರು ವಾಸನೆಯ ನೆನಪಿನೊಂದಿಗೆ ನನ್ನ ಮೂಗರಳಿಸುವ ಬಿಸಿ ಬಿಸಿ ಪೇಸ್ಟ್‌ನೊಂದಿಗೆ ಬಿದಿರಿನ ತಡಿಕೆಯಿಂದ ಮಾಡಿದ ವಿಶಾಲ ಬೋರ್ಡಿನ ಮೇಲೆ ತಮ್ಮ ಕೌಶಲ್ಯವನ್ನೆಲ್ಲ ಪ್ರದರ್ಶಿಸುತ್ತಾ ಜೋಡಿಸುತ್ತಿರುತ್ತಿದ್ದರು. ಅವರ ಆ ಕರಾಮತ್ತಿನಲ್ಲಿ ಮೂಡುವ ನನ್ನ ನೆಚ್ಚಿನ ನಟ ನಟಿಯರ ಭಾವಪೂರ್ಣ ಚಿತ್ರಗಳನ್ನೂ, ವಿಚಿತ್ರ ವಿನ್ಯಾಸಗಳಲ್ಲಿರುತ್ತಿದ್ದ ಚಿತ್ರದ ಶೀರ್ಷಿಕೆಗಳನ್ನೂ ನೋಡಿ ಸಂತೋಷಪಟ್ಟು ನಮ್ಮ ತಂದೆಯವರಿಂದ ಇನ್ನೊಂದು ಸುತ್ತಿನ ಹೊಡೆತಗಳಿಗೆ ತಯಾರಾಗಿಯೇ ನಾನು ಮನೆಗೆ ಬರುತ್ತಿದ್ದೆ. ಈ ಹೊಡೆತಗಳೆಂದೂ ನನ್ನನ್ನು ಆಗ ಸಿನೆಮಾ ವ್ಯಾಮೋಹದಿಂದ ದೂರ ಸರಿಯುವಂತೆ ಮಾಡಲಿಲ್ಲ. ಹಾಗೇ ನನ್ನ ಆ ಹವ್ಯಾಸವೂ ನಮ್ಮ ತಂದೆಯವರನ್ನು, ನನ್ನನ್ನು ಸಿನೆಮಾಗಳಿಂದ ದೂರ ಇಡುವಂತೆ ಪ್ರೇರೇಪಿಸಲಿಲ್ಲ. ಇದೆಲ್ಲವೂ ದಿನನಿತ್ಯದ ಮಾಮೂಲಿನಂತೆ ನಡೆದುಹೋಗುತ್ತಿತ್ತಷ್ಟೆ!

ಈ ವ್ಯಾಮೋಹದ ಆ ದಿನಗಳಲ್ಲಿ ನಾನು ಅನಿವಾರ್ಯ ಕಾರಣಗಳಿಂದ–ಮನೆಗೆ ನೆಂಟರು ಬಂದಿದ್ದರಿಂದಲೋ, ನಮ್ಮ ತಂದೆ ಊರಿನಲ್ಲಿರಲಿಲ್ಲದಿದ್ದರಿಂದಲೋ, ತೀರಾ ಹಣಕಾಸಿನ ಮುಗ್ಗಟ್ಟಿನಿಂದಾಗಿಯೊ– ನಾನು ಕೆಲವು ಚಿತ್ರಗಳನ್ನು ನೋಡಲಾಗದಿದ್ದ ಬೇಸರ ನನ್ನ ಬಾಲ್ಯದುದ್ದಕ್ಕೂ ನನ್ನನ್ನು ಕಾಡಿಸಿ, ಅವುಗಳ ಹೆಸರುಗಳು ಈಗಲೂ ನನ್ನ ಸ್ಮೃತಿಯಲ್ಲಿ ಉಳಿಯುವಂತೆ ಮಾಡಿವೆ! ಅವೆಂದರೆ, 'ಜಾತಕಫಲ', 'ಮೊದಲ ತೇದಿ', 'ಶಿವಶರಣೆ ನಂಬಿಯಕ್ಕ', 'ಬೆಟ್ಟದ ಕಳ್ಳ', 'ವೀರಕೇಸರಿ' ಇತ್ಯಾದಿ. ಇವುಗಳಲ್ಲಿ ಕೆಲವನ್ನಾದರೂ, ಈಚೆಗೆ ಟಿವಿಯಲ್ಲಿ ನೋಡಿದೆನಾದರೂ, ಆ 'ರುಚಿ' ಸಿಕ್ಕದೆ ನಿರಾಶನಾಗಿದ್ದೇನೆ! ಆಗ ಆ 'ರುಚಿ'ಯಲ್ಲೇ ಸಿನೆಮಾ ನೋಡಿದರೂ, ಸಿನೆಮಾ ಚೆನ್ನಾಗಿತ್ತೋ ಇಲ್ಲವೋ ಎಂಬುದನ್ನು ಮಾತ್ರ ನಮ್ಮ ತಂದೆಯವರನ್ನು ಕೇಳಿ ಖಚಿತಪಡಿಸಿಕೊಂಡಾದ ಮೇಲಷ್ಟೆ ನಾನು ನನ್ನ ಸ್ನೇಹಿತರೊಂದಿಗೆ ಅದರ ಬಗ್ಗೆ ಚರ್ಚೆ ಅಥವಾ ವಾದ ಮಾಡುತ್ತಿದ್ದೆ! ಇದನ್ನು ನೆನೆಸಿಕೊಂಡರೆ, ಸಿನೆಮಾ ಕಡೆ ಆಗ ನನ್ನನ್ನು ಅಥವಾ ನನ್ನಂತಹ ಇತರರನ್ನು ಸೆಳೆಯುತ್ತಿದ್ದ ಅಂಶಗಳು ಯಾವುವು ಎಂಬ

ಬಗ್ಗೆ ನನ್ನಲ್ಲಿ ಇನ್ನೂ ಕುತೂಹಲ ಉಳಿದೇ ಇದೆ!

ಟೆಂಟ್ ಎಂಬ ಆ ಹಲವಾರು ಕಂಭಗಳು ಮತ್ತು ಹಗ್ಗಗಳ ಸಮತೋಲನದಲ್ಲಿ ಹರಡಿ ನಿಂತಿರುತ್ತಿದ್ದ ಆ ವಿಶಾಲ ಗುಡಾರದ ಕೆಳಗೆ ಆ ಕತ್ತಲೆಯಲ್ಲಿ ಗೋಣಿ ಚೀಲ ಹಾಸಿ, ಕಡಲೆಕಾಯಿ ಮೆಲ್ಲುತ್ತಾ; ವಿಭಿನ್ನ ಚಹರೆಯ, ನಡಾವಳಿಗಳ ನೂರಾರು ಜನರೊಂದಿಗೆ ಸಮನಾಗಿ ಕೂತು(ನಮ್ಮೂರಿನ ಸಾಹುಕಾರ ಶೆಟ್ಟರ ಕುಟುಂಬದವರು ನೆಲದ ಟಿಕೆಟ್ ಪಡೆದು, ಅಲ್ಲಿ ಮನೆಯಿಂದ ತಂದ ಕುರ್ಚಿಗಳನ್ನು ಹಾಕಿಸಿಕೊಂಡು ಕೂರುತ್ತಿದ್ದರು!), ಎದುರಿನ ಎರಡು ಆಯಾಮಗಳ ತೆರೆಯ ಮೇಲೆ ಮೂರು ಆಯಾಮಗಳಲ್ಲಿರುವಂತೆ ಮೂಡುತ್ತಿದ್ದ ಚಿತ್ರಗಳು ಮನ ಮುಟ್ಟುವ ಸಾಹಿತ್ಯ ಮತ್ತು ಮುದ ಕೊಡುವ ಸಂಗೀತಗಳೊಂದಿಗೆ ಕಟ್ಟುತ್ತಿದ್ದ ಒಂದು ನಾಟಕೀಯ ಪ್ರತಿ–ಪ್ರಪಂಚದಲ್ಲಿ ಮುಳುಗಿ ಹೋಗುವ ರೋಮಾಂಚನವೆ ಅದು? ಈಗಲೂ ನನಗೆ ಆ ಹಳೆಯ–ಕಪ್ಪು ಬಿಳುಪು–ಕನ್ನಡ ಚಿತ್ರಗಳನ್ನು ನೋಡುತ್ತಿರುವಾಗ ಆ ಹಳೆಯ ರೋಮಾಂಚನ ಮರುಕಳಿಸುತ್ತದೆ! ನನಗೆ ಗೊತ್ತಿಲ್ಲದೆಯೇ, ಭಾವಾವೇಶಕ್ಕೆ ಸಿಕ್ಕಿ ಕಣ್ಣು ಮಂಜಾಗುತ್ತವೆ. ಕಷ್ಟದ ಆ ದಿನಗಳಲ್ಲಿ ತಮ್ಮ ಮೌಲ್ಯಾದರ್ಶಗಳ ಸಂದೇಶಗಳೊಂದಿಗೆ ನಮ್ಮಲ್ಲಿ ಆಸೆ–ಭರವಸೆಗಳನ್ನು ತುಂಬಿ, ನಮ್ಮನ್ನು ಸಾಂತ್ವನಗೊಳಿಸುತ್ತಿದ್ದ ಆ ಕನಸಿನ ಚೂರುಗಳನ್ನು ಮರೆಯುವುದಾದರೂ ಹೇಗೆ?

ಹಾಗೆ ನನ್ನ ಪಾಲಿಗೆ ಮರೆಯಲಾಗದ ಕೆಲವು ಕನಸಿನ ಚೂರುಗಳೆಂದರೆ, 'ಸ್ಕೂಲ್ ಮಾಸ್ಟರ್', 'ಅಣ್ಣ ತಂಗಿ', ರಣಧೀರ ಕಂಠೀರವ' ಮತ್ತು 'ಭಕ್ತ ಕನಕದಾಸ'. ಇವು ನನ್ನ ವ್ಯಕ್ತಿತ್ವಕ್ಕೆ ಅಡಿಪಾಯ ಹಾಕಿದ ಚಿತ್ರಗಳೆಂದರೂ ನಡೆಯುತ್ತದೆ. ನಾನು ಈ ಐವತ್ತು ವರ್ಷಗಳಲ್ಲಿ ವಿವಿಧ ಭಾಷೆಗಳ ಜಗತ್ತಿನ ಅತ್ಯುತ್ತಮ ಚಿತ್ರಗಳನ್ನು ನೋಡಿ ಸಂತೋಷಪಟ್ಟು, ಬಹಳಷ್ಟನ್ನು ಮರೆತಿದ್ದೇನೆ. ಆದರೆ ಈ ನಾಲ್ಕು ಚಿತ್ರಗಳು ಮೂಡಿಸಿದ ಪರಿಣಾಮ ನನ್ನ ಮನಸ್ಸಿನ ಮೇಲೆ ಈಗಲೂ ಅಚ್ಚೊತ್ತಿದಂತಿದೆ–ಒಂದೊಂದೂ, ಒಂದೊಂದು ಕಾರಣಕ್ಕೆ. ಆದರೆ ನನ್ನ ಪಾಲಿಗೆ ಇವೆಲ್ಲವುಗಳ ಸಾಮಾನ್ಯ ಆಕರ್ಷಣೆ ಎಂದರೆ, ಸ್ವಾತಂತ್ರ್ಯೋತ್ತರ ಭಾರತದ ಸ್ಫೂರ್ತಿ ಕೇಂದ್ರಗಳನ್ನು ಇವು ಬಹು ಪರಿಣಾಮಕಾರಿಯಾಗಿ ಗುರುತಿಸಿದ್ದುದು. ನನ್ನ ಬಾಳನ್ನು ಕಟ್ಟಿಕೊಳ್ಳಲು ನನ್ನ ಬಾಲ್ಯದಲ್ಲೇ ಕೆಲವು ಘನ ಮೌಲ್ಯಗಳನ್ನೂ, ಪರಿಣಾಮಕಾರಿ ಸೂಚನೆಗಳನ್ನೂ ನೀಡಿದ್ದುದು.

ಸದ್ಯಕ್ಕೆ ನಾನು 'ಸ್ಕೂಲ್ ಮಾಸ್ಟರ್' ಚಿತ್ರದ ಬಗ್ಗೆಯಷ್ಟೇ ಬರೆಯುವೆ. ಏಕೆಂದರೆ, ಇದು ನನ್ನನ್ನು ರೂಪಿಸಿದ ನನ್ನ ತಂದೆಯನ್ನು, ಅವರ ಸಂದರ್ಭವನ್ನು ಮತ್ತು ಆ ಸಂದರ್ಭವನ್ನು ಸೃಷ್ಟಿಸಿದ ರಾಷ್ಟ್ರೀಯ ಪರಿಸ್ಥಿತಿಯನ್ನೂ ಅರ್ಥ ಮಾಡಿಕೊಳ್ಳಲು ನನಗೆ ಈಗಲೂ ನೆರವಾಗುತ್ತಿರುವ ಸಿನಿಮಾ. ಈ ಚಿತ್ರವನ್ನು ಪ್ರಥಮ ಬಾರಿಗೆ ನೋಡಿ ಈಗಾಗಲೇ ೪೮ ವರ್ಷಗಳಾಗಿವೆ. ಆಗ ನೋಡಿದಾಗ ಯಾವ ಪ್ರಭಾವವನ್ನು ಬೀರಿತ್ತೋ ಅದೇ–ಅಥವಾ ಅದಕ್ಕಿಂತ ಹೆಚ್ಚು–ಪ್ರಭಾವವನ್ನು ಈಗ ಮತ್ತೆ ಮತ್ತೆ ನೋಡಿದಾಗಲೂ ನನ್ನ ಮೇಲೆ ಬೀರುತ್ತಲೇ ಇದೆ. ಕಾರಣ: ಸ್ವಾತಂತ್ರ್ಯ ಸಾಧನೆಯ ಹುರುಪು ದೇಶಾದ್ಯಂತ ಹರಡಿದ್ದ ಹೊಸ ಭರವಸೆಯ, ಹೊಸ ಬದ್ಧತೆಯ ಗಾಳಿ ಈ ಚಿತ್ರದುದ್ದಕ್ಕೂ ಬೀಸುತ್ತಾ, ಇಂದೂ–ಇಂದಿನ ಜಾಗತೀಕರಣದ ದಿನಗಳಲ್ಲಿ–ನಮ್ಮನ್ನು ಕೆಣಕುವಂತಿದೆ. ಮುಖ್ಯವೆಂದರೆ ಈ ಹೊಸ ಭರವಸೆ, ಬದ್ಧತೆಗಳು

ವ್ಯಕ್ತವಾಗುವುದು ಈ ರಾಷ್ಟ್ರದ ಸಾಮಾನ್ಯ ಪ್ರಜೆಯೆನಿಸಿದ ಒಬ್ಬ ಪ್ರಾಥಮಿಕ ಶಾಲಾ ಮಾಸ್ತರನ ಮೂಲಕ. ಈತ ತನ್ನ ಹಳ್ಳಿಯನ್ನು, ಆ ಹಳ್ಳಿಯ ಶಾಲೆಯನ್ನು ಕಟ್ಟುವುದರೊಂದಿಗೇ ತನ್ನ ಕುಟುಂಬವನ್ನೂ ಕಟ್ಟುವ ರೀತಿ ಮತ್ತು ಆ ಹಾದಿಯಲ್ಲಿ ಎದುರಾಗುವ ಬಿಕ್ಕಟ್ಟುಗಳನ್ನು ಎದುರಿಸುವಲ್ಲಿ ತೋರುವ ಛಲ, ವಿವೇಕ ಹಾಗೂ ಸಂಯಮಗಳ ಪ್ರತಿ ವಿವರಗಳಲ್ಲೂ, ಈ ಚಿತ್ರ ನವಭಾರತದ ಬೀಜಾಂಕುರದ ಸಂಭ್ರಮ ಮತ್ತು ಹೆರಿಗೆಯ ಸಂಕಟಗಳೆರಡನ್ನೂ ಸರಳ ಲಯದಲ್ಲಿ ಕಟ್ಟಿಕೊಡುತ್ತದೆ. ನಮ್ಮ ಈ ೬೦ ವರ್ಷಗಳ 'ಪ್ರಗತಿ'ಯ ಬಗ್ಗೆ ಒಂದು ಹಿನ್ನೋಟ ಬೀರಲು ಈ ಚಿತ್ರ ಒಂದು ಆಕರ ಬಿಂದುವನಂತಿದೆ ಎಂದರೆ ತಪ್ಪಾಗಲಾರದು.

ಈ ಚಿತ್ರವನ್ನು ಹಾಗೆ ಆಕರ ಬಿಂದುವಿನಂತೆ ನೋಡಿದಾಗಲೇ ನನ್ನ ಕಣ್ಣುಗಳು ಮಂಜಾಗುವುದು: ಎಲ್ಲಿಂದ ಎಲ್ಲಿಗೆ ನಾವು ಬಂದಿದ್ದೇವೆ, ಎಷ್ಟು ಬದಲಾಗಿದ್ದೇವೆ! ಆ ಚಿತ್ರದ ಸ್ಕೂಲ್ ಮಾಸ್ಟರ್ ರಂಗಣ್ಣ ನಮ್ಮ ತಂದೆಯೇ ಅಲ್ಲವೆ? ಹೊರ ರೂಪದಲ್ಲೂ–ಅದೇ ಪೇಟ, ಕೋಟು, ಕಚ್ಚೆ ಪಂಚೆ–ಮತ್ತು ಒಳರೂಪದಲ್ಲೂ–ಕೆಲಸದಲ್ಲಿನ ಅದೇ ಶ್ರದ್ಧೆ, ಕಟ್ಟುನಿಟ್ಟು ಮತ್ತು ಕುಟುಂಬದ ಬಗ್ಗೆ ಬದ್ಧತೆ--ಆ ಸಿನಿಮಾದ ರಂಗಣ್ಣನೇ ಆಗಿದ್ದ ಅವರ ಸರಳ ಅಚ್ಚುಕಟ್ಟು ಮತ್ತು ನಿಷ್ಠುರ ಆದರ್ಶಗಳ ಮೇಲೇ ನಮ್ಮ ಬದುಕನ್ನು ಕಟ್ಟಿಕೊಂಡಿದ್ದು ಅಲ್ಲವೆ? ಇದು ನಮ್ಮದೇ–ನಮ್ಮಂತಹ ಬಹು ಜನರ–ಹಾಡು ಪಾಡಿನ ಕಥೆಯೇ ಅಲ್ಲವೆ? ೧೯೫೮ರಲ್ಲಿ ನನ್ನಣ್ಣನನ್ನು ಬೆಂಗಳೂರಿನ ಕಾಲೇಜೊಂದರಲ್ಲಿ ಪಿಯುಸಿಗೆ ಸೇರಿಸಿ ಈ ಚಿತ್ರವನ್ನು ನೋಡಿ ಬಂದಿದ್ದ ನಮ್ಮ ತಂದೆಯ ಆ ಉತ್ಸಾಹ ನನಗಿನ್ನೂ ಕಣ್ಣಿಗೆ ಕಟ್ಟಿದಂತಿವೆ. ಅವರು ಅಡಿಗೆ ಮನೆಯಲ್ಲಿ ಕೂತು ಚಿತ್ರದ ಕಥೆಯನ್ನು ನಮ್ಮ ತಾಯಿಗೆ ಬಹು ಉಮೇದಿನಿಂದ ಹೇಳುತ್ತಿದ್ದರು. ಜೊತೆಗೆ ಎರಡು ಎಚ್ಚರಿಕೆಗಳನ್ನೂ ಹೇಳಿದ್ದು ನೆನಪಿದೆ. ಒಂದು: ಪಟ್ಟಣಕ್ಕೆ ಓದಲು ಹೋದ ಮಕ್ಕಳ ಬಗ್ಗೆ ಸದಾ ಜಾಗೃತರಾಗಿರಬೇಕು. ಎರಡು: ಹೆಂಗಸರೂ ಅಕ್ಷರ ಕಲಿಯಬೇಕು. ಇವು ನನಗೆ ಇಂದು ಹೊಸದಾಗಿ ಆಧುನಿಕತೆಗೆ ಕಾಲಿಡುತ್ತಿರುವ ಸಮಾಜವೊಂದು ಅಂದು ವಹಿಸಬೇಕಾಗಿದ್ದ ಎರಡು ಪ್ರಾಥಮಿಕ ಎಚ್ಚರಗಳಾಗಿ ಕಾಣುತ್ತಿವೆ. ನಮ್ಮ ತಂದೆ ಆ ಸಿನಿಮಾವನ್ನು ಎಷ್ಟು ಎಚ್ಚರಿಕೆಯಿಂದ ಗಮನಿಸಿದ್ದರು ಎಂದು ಈಗ ನನಗೆ ಆಶ್ಚರ್ಯವಾಗುತ್ತದೆ! ಅವರು ತಮ್ಮ ಬದುಕಿನಲ್ಲಿ ಈ ಎರಡು ಎಚ್ಚರಗಳನ್ನೂ ಪಾಲಿಸಿದರು. ನನ್ನಣ್ಣನನ್ನು ತಮ್ಮೆಲ್ಲ ಎಚ್ಚರದೊಂದಿಗೆ ಬೆಳೆಸಿದರು ಮತ್ತು ನನ್ನ ತಾಯಿಗೆ ಅಕ್ಷರಗಳನ್ನೂ ಕಲಿಸಿದರು. ಹಾಗಾಗಿ ರಂಗಣ್ಣನ ಕುಟುಂಬದಂತೆ ನಮ್ಮ ಕುಟುಂಬ ದುರಂತವನ್ನು ಎದುರಿಸಲಿಲ್ಲ.

ಆದರೆ ಈ ಚಿತ್ರದ ನಿರ್ದೇಶಕ ಮತ್ತು ನಾಯಕ ನಟ ಬಿ.ಆರ್. ಪಂತಲು ತಮ್ಮ ನೆಚ್ಚಿನ ಶಿಷ್ಯ ಶಿವಾಜಿ ಗಣೇಶನ್‌ರ ವಿಶೇಷ ಪಾತ್ರದ ಮೂಲಕ ಈ ಚಿತ್ರದಲ್ಲಿನ ದುರಂತವನ್ನು ಸುಖಾಂತ್ಯ ಮಾಡಿರುವ ರೀತಿ ಒಂದು ವಿಶಿಷ್ಟ melancholyಯನ್ನು ಸೃಷ್ಟಿಸುತ್ತದೆ. ಆ ಮೂಲಕ ನವಭಾರತದ ಯಶಸ್ಸಿನ ಗುಟ್ಟು, ಸಣ್ಣ ಕ್ಷಮೆಗಳಲ್ಲಿದೆ ಎಂಬ ದೊಡ್ಡ ಸತ್ಯವವನ್ನೂ ಹೇಳುತ್ತದೆನಿಸುತ್ತದೆ. ಈ ದೃಷ್ಟಿಯಿಂದಲೂ ಈ ಚಿತ್ರ ಇಂದು ಗಮನಾರ್ಹವೆನಿಸುತ್ತದೆ. ಹಾಗೆ ನೋಡಿದರೆ, ಕನ್ನಡ ಸಿನಿಮಾ ಇರುವವರೆಗೂ ಈ 'ಸ್ಕೂಲ್ ಮಾಸ್ಟರ್'; ಆ ಪಂತಲು, ಆ ರಾಜಮ್ಮ, ಆ ಬಾಲಕೃಷ್ಣ, ಆ ನರಸಿಂಹರಾಜು, ಆ ಧೀಕ್ಕಿ ಮಾಧವರಾವ್, ಆ ಶಿವಾಜಿ

ಗಣೇಶನ್ ಮತ್ತು ಆ ಬಿ.ಸರೋಜಾ ದೇವಿ ಅವರೊಂದಿಗೆ ಇದ್ದೇ ಇರುತ್ತಾರೆ. ಹಾಗೇ ಕನ್ನಡದ ಜನ 'ಭಾಮೆಯ ನೋಡಲು ತಾ ಬಂದ', 'ಸೊಂಪಾದ ಸಂಜೆ ವೇಳೆ', 'ಅತಿ ಮಧುರ ಅನುರಾಗ', 'ನಾನೂ ನೀನೂ ಜೋಡಿ ಈ ಜೀವನ ಎತ್ತಿನ ಗಾಡಿ' ಮುಂತಾದ ಸರಳ ಸುಮಧುರ ಗೀತೆಗಳನ್ನು ಗುನುಗುತ್ತಲೇ ಇರುತ್ತಾರೆ!

(೧೫ ಆಗಸ್ಟ್, ೨೦೦೮, ವಿಕ್ರಾಂತ ಕರ್ನಾಟಕ)

೨೯. ರಾಜ್‌ಕುಮಾರ್ ಎಂಬ ಪವಾಡ

ಐವತ್ತು ವರ್ಷಗಳ ಹಿಂದೆ ಕನ್ನಡ ರಾಜ್ಯೋದಯವಾದಾಗ ಕನ್ನಡಿಗರು ಕಂಡ ಕನಸುಗಳು ಹಲವಾರು. ಹರಿದು ಹಂಚಿಹೋಗಿದ್ದ ಕನ್ನಡದ ಜನ ನೂರಾರು ವರ್ಷಗಳ ನಂತರ ಮತ್ತೆ ಒಂದಾದ ಸಂದರ್ಭದಲ್ಲಿ ಕನ್ನಡದ ಹೆಸರಿನಲ್ಲಿ ಹೊಸ ಉತ್ಸಾಹ ತಾಳಿದರು. ಏಕೆಂದರೆ, ಕನ್ನಡವೆಂಬುದು ಆಗ ಕೇವಲ ಒಂದು ಭಾಷೆಯ ಹೆಸರು ಮಾತ್ರವಾಗಿರದೆ ಅದು, ಸಾವಿರಾರು ವರ್ಷಗಳ ಒಂದು ಸಾಮಾನ್ಯ ಸಂಸ್ಕೃತಿಯ ಸ್ಮೃತಿಕೋಶದ ಹಕ್ಕುದಾರಿಕೆಯುಳ್ಳ ಒಂದು ಭಾಷಾ ಸಮುದಾಯ ಮತ್ತೆ ಹೊಸ ಉತ್ಸಾಹದೊಡನೆ ಒಟ್ಟಾಗಿ, ಕನ್ನಡ ಬದುಕೆಂಬುದನ್ನು ಕಟ್ಟಿಕೊಳ್ಳುವ ಛಲದ ಪ್ರತೀಕವೂ ಆಗಿತ್ತು. ಈ ಉತ್ಸಾಹ, ಛಲಗಳಿಗೆ ಸಾಹಿತ್ಯ, ಸಂಸ್ಕೃತಿ, ರಾಜಕಾರಣ ಮುಂತಾದ ಕ್ಷೇತ್ರಗಳಿಂದ ಒತ್ತಾಸೆಯಾಗಿ ಬಂದವರು ಹಲವು ಮಹನೀಯರು. ಈ ಮಹನೀಯರ ಸಾಲಿನಲ್ಲಿ ವಿಶಿಷ್ಟವಾಗಿ ನಿಲ್ಲುವ ಒಂದು ಮಹಾನ್ ವ್ಯಕ್ತಿತ್ವ ರಾಜ್‌ಕುಮಾರ್.

ವಿಶಿಷ್ಟ ಏಕೆಂದರೆ, ರಾಜ್‌ಕುಮಾರ್ ಬೇರೆ ಮಹನೀಯರಂತೆ ಒಂದು ಸಾಂಸ್ಕೃತಿಕ ಮಹತ್ವಾಕಾಂಕ್ಷೆಯಿಂದೇನೂ ಕನ್ನಡ ಜನಮನವನ್ನು ಪ್ರವೇಶಿಸಲಿಲ್ಲ. ಒಂದು ಸಾಮಾನ್ಯ ಸಾಮಾಜಿಕ, ಕೌಟುಂಬಿಕ ಹಿನ್ನೆಲೆಯಿಂದ ಬಂದ ಮೂರನೆಯ ತರಗತಿಯವರೆಗೆ ಮಾತ್ರ ಓದಿದ ಈ ಮುತ್ತುರಾಜ್, ಕರ್ನಾಟಕ ರಾಜ್ಯೋದಯ ಸಂದರ್ಭದ ಒಬ್ಬ ಸಾಮಾನ್ಯ ಕನ್ನಡಿಗನ ಪ್ರತೀಕ ಮಾತ್ರವಾಗಿದ್ದರು. ಆದರೆ ಮುಂದಿನ ಐವ್ವತ್ತು ವರ್ಷಗಳಲ್ಲಿ ಅವರು ಮುಟ್ಟಿದ ಎತ್ತರ, ಅವರನ್ನು ಕರ್ನಾಟಕದ ಒಂದು ದೊಡ್ಡ ಸಾಂಸ್ಕೃತಿಕ ಶಕ್ತಿಯನ್ನಾಗಿ ಮಾರ್ಪಡಿಸಿತ್ತು. ಆಧುನಿಕ ಕರ್ನಾಟಕದ ಕಟ್ಟಿದವು ಮೂರು ಶಕ್ತಿಗಳು: ಕುವೆಂಪು–ಕಾರಂತ–ರಾಜ್‌ಕುಮಾರ್. ಇವರಲ್ಲಿ ಒಬ್ಬೊಬ್ಬರೂ ಕನ್ನಡದ ಮನಸ್ಸಿಗೆ ಹೊಸ ಉದ್ದ–ಅಗಲ–ಎತ್ತರಗಳನ್ನು ಒದಗಿಸಿದರು.

ರಾಜ್‌ಕುಮಾರ್ ಒಬ್ಬ ಅಸಾಮಾನ್ಯ ಕಲಾವಿದ. ಆದರೆ ಈ ರೀತಿ ಅಸಾಮಾನ್ಯ ಕಲಾವಿದರೆಲ್ಲರೂ ರಾಜ್‌ಕುಮಾರ್‌ರಂತೆ ಒಂದು ಭಾಷಾ ಸಮುದಾಯದ ಅಸ್ಮಿತೆಯ ಸಂಕೇತವಾದದ್ದು ಕಡಿಮೆ. ಇದಕ್ಕೆ ಕಾರಣ, ರಾಜ್‌ಕುಮಾರ್ ಕೇವಲ ಅಸಾಮಾನ್ಯ ಕಲಾವಿದನಾಗಿ ಮಾತ್ರವಲ್ಲ, ಅಸಾಮಾನ್ಯ ಮನುಷ್ಯನಾಗಿ ಕೂಡಾ ಜನತೆಯ ಮನದಲ್ಲಿ ಬೆಳೆದದ್ದು. ನಿಜ, ಇದಕ್ಕೆ ಅವರು ಆರಿಸಿಕೊಂಡ ಚಲನಚಿತ್ರ ಮಾಧ್ಯಮದ ಜನಪ್ರಿಯತೆಯೂ ಕಾರಣವಾಯಿತು. ಆದರೆ ಅವರಂತೆ ಕನ್ನಡಕ್ಕೆ ಅರ್ಪಿಸಿಕೊಂಡ ನಟರು ಕಡಿಮೆ. ಕನ್ನಡಕ್ಕೆ ಅರ್ಪಿಸಿಕೊಂಡದ್ದು ಎಂದರೆ ಮತ್ತೆ ಭಾಷಾನಿಷ್ಠೆ ಮಾತ್ರವಲ್ಲ. ಅವರು ಕನ್ನಡ ಸಿನಿಮಾ

ಭಾಷೆ ಮೂಲಕ ಕನ್ನಡ ಜನತೆಗೆ ಒಂದು ವಿಶಿಷ್ಟ ಅಭಿರುಚಿ ಹಾಗೂ ಮೌಲ್ಯ ಪ್ರಪಂಚವನ್ನು ಕಟ್ಟಿಕೊಟ್ಟರು. ಅವರ ಬಾಯಲ್ಲಿ ಕನ್ನಡ ಭಾಷೆ ಒಂದು ಹೊಸ ಶಕ್ತಿ ಹಾಗೂ ಶೋಭೆಯನ್ನು ಪಡೆದುಕೊಂಡಿತು. ಅರವತ್ತು–ಎಪ್ಪತ್ತರ ದಶಕದ ತಲೆಮಾರಿನ ಸಾಮಾನ್ಯ ಕನ್ನಡ ಜನತೆಗೆ ರಾಜ್‌ಕುಮಾರ್, ಕನ್ನಡ ಬದುಕಿನ ಅತ್ಯುತ್ತಮ ಮೌಲ್ಯಗಳ ಪ್ರತೀಕವಾಗಿದ್ದರು. ವಿಮರ್ಶೆಯಲ್ಲಿ ಅವುಗಳ ಮಿತಿ ಏನೇ ಇರಲಿ, ತಂದೆ–ಮಗ, ಗಂಡ–ಹೆಂಡತಿ, ಅಣ್ಣ–ತಮ್ಮ, ಅಣ್ಣ–ತಂಗಿ ಮುಂತಾದ ಕೌಟುಂಬಿಕ ಸಂಬಂಧಗಳಿಗೆ ಮತ್ತು ಸ್ನೇಹ, ದುಡಿಮೆ, ಮಾತು ಮುಂತಾದ ಸಾಮಾಜಿಕ ಮೌಲ್ಯಗಳಿಗೆ ತಮ್ಮ ಚಿತ್ರಗಳ ಮೂಲಕ ಒಂದು ಘನತೆ ತಂದುಕೊಟ್ಟರು. ರಾಜ್‌ಕುಮಾರ್ ಚಿತ್ರಗಳ ಮೌಲ್ಯಗಳೊಂದಿಗೆ, ಆದರ್ಶಗಳೊಂದಿಗೆ ಎರಡು–ಮೂರು ಕನ್ನಡದ ತಲೆಮಾರುಗಳು ಬೆಳೆದವು. ಹಾಗೇ ರಾಜ್‌ಕುಮಾರ್ ಕೂಡಾ ಕನ್ನಡದ ವಿವೇಕ, ವಿನಯ, ಪ್ರತಿಭೆ ಹಾಗೂ ಸ್ವಾಭಿಮಾನದ ಸಂಕೇತವಾಗಿ ಬೆಳೆದರು.

ಭಕ್ತಿ ಪ್ರಧಾನವಾದ ಬೇಡರ ಕಣ್ಣಪ್ಪ, ಭಕ್ತ ಕನಕದಾಸ, ಸಂತ ತುಕಾರಾಂ ಅಥವಾ ಮಂತ್ರಾಲಯ ಮಹಾತ್ಮೆ ಇರಲಿ, ಪುರಾಣ, ಇತಿಹಾಸ ಪ್ರಧಾನವಾದ ರಣಧೀರ ಕಂಠೀರವ, ಸತ್ಯ ಹರಿಶ್ಚಂದ್ರ, ಕಿತ್ತೂರು ಚೆನ್ನಮ್ಮ ಅಥವಾ ಶ್ರೀಕೃಷ್ಣದೇವರಾಯ ಇರಲಿ; ಸಾಮಾಜಿಕವಾದ ಅಣ್ಣ–ತಂಗಿ, ಕರುಣೆಯೇ ಕುಟುಂಬದ ಕಣ್ಣು, ಕಣ್ತೆರೆದು ನೋಡು, ನಾಂದಿ, ಮಣ್ಣಿನ ಮಗ, ಕಸ್ತೂರಿ ನಿವಾಸ, ಸಾಕ್ಷಾತ್ಕಾರ, ಅಥವಾ ಭಾಗ್ಯವಂತರುದಂತಹ ಚಿತ್ರಗಳಿರಲಿ; ಮನರಂಜನಾ ಪ್ರಧಾನವಾದ ಜೇಡರ ಬಲೆ, ಶಂಕರ್ ಗುರು, ಭಾಗ್ಯದ ಲಕ್ಷ್ಮಿ ಬಾರಮ್ಮದಂತಹ ಚಿತ್ರಗಳಿರಲಿ, ಅವರು ತಮ್ಮ ಕಲಾ ಪ್ರೌಢಿಮೆಯ ಜೊತೆಗೆ ಸಾಂಸ್ಕೃತಿಕ ಎಚ್ಚರವನ್ನು ಮೆರೆದರು. ಕುವೆಂಪು–ಕಾರಂತರಿಲ್ಲದೆ ಕನ್ನಡ– ಕನ್ನಡ ಜನತೆ ಹೇಗೆ ಹೀಗಿರಲಾಗುತ್ತಿರಲಿಲ್ಲವೋ ಹಾಗೆ, ರಾಜ್‌ಕುಮಾರ್ ಇಲ್ಲದೆಯೇ ಕನ್ನಡ–ಕನ್ನಡ ಜನತೆ ಹೀಗಿದ್ದಂತೆ ಇರುತ್ತಿರಲಿಲ್ಲ. ಹಾಗಾಗಿ ರಾಜ್‌ಕುಮಾರ್ ಕರ್ನಾಟಕದ ಮಟ್ಟಿಗೆ ಇಪ್ಪತ್ತನೇ ಶತಮಾನದ ಉತ್ತರಾರ್ಧದ ಇತಿಹಾಸದ ಉಜ್ವಲ ತಾರೆಗಳಲ್ಲೊಬ್ಬರು.

ಆಧುನಿಕ ಕರ್ನಾಟಕದ ಇತಿಹಾಸದಲ್ಲಿ ಪವಾಡವೇನಾದರೂ ಸಂಭವಿಸಿದ್ದರೆ, ಆ ಪವಾಡ ರಾಜಕುಮಾರರೇ. ಏಕೆಂದರೆ ಅವರು ಬಂದ ಸಾಮಾಜಿಕ ಹಿನ್ನೆಲೆ; ಹಾಗೂ ಪ್ರತಿಭೆ ಮತ್ತು ಜನಮನ್ನಣೆ– ಈ ಎರಡೂ ವಿಷಯಗಳಲ್ಲಿ ಅವರು ಮುಟ್ಟಿದ ಎತ್ತರ, ಯಾರನ್ನಾದರೂ ಬೆಕ್ಕಸ ಬೆರಗಾಗಿಸುವಂತಹುದು. ಹಾಗೆ ನೋಡಿದರೆ ಇದು ಪ್ರಜಾಪ್ರಭುತ್ವದ ವಿಜಯ; ಕನ್ನಡ ರಾಜ್ಯೋದಯದ ಯಶಸ್ಸಿನ ಸಂಕೇತವೂ ಹೌದು. ಇಂತಹ ರಾಜ್‌ಕುಮಾರ್ ಇನ್ನಿಲ್ಲ ಎಂದರೆ ನಂಬುವುದು ಕಷ್ಟ. ಅವರು ಕನ್ನಡದ ಸ್ಮೃತಿಕೋಶದ ಅವಿಭಾಜ್ಯ ಅಂಗ. ಹಾಗಾಗಿ ಅವರಿಗೆ ಸಾವಿಲ್ಲ.

(ಆಕಾಶವಾಣಿ ಭದ್ರಾವತಿಯಲ್ಲಿ ಶ್ರದ್ಧಾಂಜಲಿ, ಏಪ್ರಿಲ್ ೧೨, ೨೦೦೬)

೩೦. ನನ್ನ ನೋಟದ ಕುವೆಂಪು

ಕನ್ನಡ ಎನೆ ಕುಣಿದಾಡುವುದೆನ್ನೆದೆ
ಕನ್ನಡ ಎನೆ ಕಿವಿ ನಿಮಿರುವುದು!
ಕಾಮನಬಿಲ್ಲನು ಕಾಣುವ ಕವಿಯೊಲು
ತೆಕ್ಕನೆ ಮನ ಮೈಮರೆಯುವುದು

– ಕುವೆಂಪು

ಕೆಲವು ತಿಂಗಳುಗಳ ಹಿಂದೆ ಚಿತ್ರದುರ್ಗದಲ್ಲಿ 'ಕವಿರಾಜಮಾರ್ಗ' ಕುರಿತ ವಿಚಾರ ಸಂಕಿರಣವೊಂದರಲ್ಲಿ, ಶಿಕ್ಷಣದಲ್ಲಿ ಕನ್ನಡ ಕುರಿತಂತೆ ಕುವೆಂಪು ಅವರ ನಿಲುವು ಏನಾಗಿತ್ತು ಎಂಬುದು ಆನುಷಂಗಿಕವಾಗಿ ಚರ್ಚೆಗೆ ಬಂತು. ಅದು ಚರ್ಚೆಗೆ ಒಳಪಡುವಷ್ಟು ಅಸಂದಿಗ್ಧವಾಗಿದ್ದರೂ, ಇತ್ತೀಚೆಗೆ ಅದನ್ನು ಚರ್ಚೆಗೆ ಎಳೆದು ವ್ಯಾಖ್ಯಾನ ಮಾಡುವವರ ಸಂಖ್ಯೆ ಹೆಚ್ಚುತ್ತಿದೆ. ವಿಶೇಷವಾಗಿ, ಸರ್ಕಾರಿ ಶಾಲೆಗಳಲ್ಲಿ ಒಂದನೇ ತರಗತಿಯಿಂದಲೇ ಇಂಗ್ಲಿಷ್ ಕಲಿಸಬೇಕೆನ್ನುವ ಬೆಂಗಳೂರು ಮೂಲದ ಆಂದೋಲನ ಆರಂಭವಾದ ಮೇಲೆ. ಭಾಷಾಶಾಸ್ತ್ರಜ್ಞ ಡಾ.ಕೆ.ವಿ ನಾರಾಯಣ ಅವರು, ಇಂದಿನ ಸಂದರ್ಭದಲ್ಲಿ ಕುವೆಂಪು ಅವರ ನಿಲುವನ್ನು ಆತ್ಯಂತಿಕವಾಗಿ, ಅವರು ಕಾಲಾನುಕಾಲಕ್ಕೆ ನೀಡಿದ ಹೇಳಿಕೆ, ಸ್ಪಷ್ಟೀಕರಣಗಳನ್ನು ಆಧರಿಸಿ ನಿರ್ಧರಿಸಬೇಕಾಗುತ್ತದೆ ಎಂದು ಸೂಚಿಸಿದರು. ಮುಂದುವರೆದ ಅವರು, ಕುವೆಂಪು ತಮ್ಮ ಜೀವನದ ಕೊನೆಯ ದಿನಗಳಲ್ಲಿ ನೀಡಿದ ಸಂದರ್ಶನವೊಂದರಲ್ಲಿ ಆಡಿದ 'ನಾನು ಇಂಗ್ಲಿಷ್ ಕಲಿಯದೆ ಹೋಗಿದ್ದರೆ, ಕುಪ್ಪಳಿಯಲ್ಲಿ ಸಗಣಿ ಹೊತ್ಕೊಂಡು ಯಾರಾದ್ರೂ ಒಬ್ಬ ಹಾರುವನ ಜಮೀನಿನಲ್ಲಿ ಕೆಲಸ ಮಾಡ್ಕೊಂಡು ಇರುತ್ತಿದ್ದೆ' ಎಂಬ ಮಾತನ್ನು, ಇಂಗ್ಲಿಷ್ ಕುರಿತು ಅವರ ಬದಲಾದ ನಿಲುವಿಗೆ ಉದಾಹರಣೆ ಎಂಬಂತೆ, ಅದನ್ನು ತಮ್ಮ ವಾದವನ್ನು ಸಮರ್ಥಿಸಿಕೊಳ್ಳಲು ಬಳಸಿದರು. ಚರ್ಚೆ ಅಂದಿನ ಆ ಗೋಷ್ಠಿಯ ಅಧ್ಯಕ್ಷರ ಆಣತಿಯಂತೆ ಅಲ್ಲಿಗೇ ಕೊನೆಗೊಂಡಿತು. ನಾನು ಮನೆಗೆ ಬಂದು ಕುವೆಂಪು ಅವರ ಆ ಸಂದರ್ಶನವನ್ನು ಹುಡುಕಿದೆ.

ಅದು ಕೆ.ಎಸ್. ಭಗವಾನ್ ನಡೆಸಿರುವ ಸಂದರ್ಶನ. ಅದರಲ್ಲಿ ಭಗವಾನ್, ಡಾ. ಪ್ರಭುಶಂಕರರು ಆಗ (೧೯೮೪) ಜಿಲ್ಲಾ ಸಾಹಿತ್ಯ ಸಮ್ಮೇಳನವೊಂದರಲ್ಲಿ 'ಇಂಗ್ಲಿಷನ್ನು ಕಡೆಗಣಿಸಬೇಡಿ' ಎಂದು ನೀಡಿದ ಕರೆಯನ್ನು ಪ್ರಸ್ತಾಪಿಸುತ್ತಾ ಕೇಳಿದ ಪ್ರಶ್ನೆಗೆ, ಕುವೆಂಪು ತಮ್ಮ ಆ ಶಿಷ್ಯನನ್ನು ಸಮರ್ಥಿಸುತ್ತಾ ನೀಡಿದ ವಿವರಣೆಯಲ್ಲಿ ಆ ಮಾತು ಬರುತ್ತದೆ. ಆ

ವಿವರಣೆಯಲ್ಲೇ ಅವರು ತಮ್ಮ 'ನಮಗೆ ಬೇಕಾಗಿರುವ ಇಂಗ್ಲಿಷ್' ಲೇಖನದ ಪ್ರಸ್ತಾಪ ಮಾಡಿ, ಶಿಕ್ಷಣದಲ್ಲಿ ಕನ್ನಡ ಮತ್ತು ಇಂಗ್ಲಿಷ್‌ಗಿರಬೇಕಾದ ಸ್ಥಾನಮಾನಗಳನ್ನು ಕುರಿತ ತಮ್ಮ ನಿಲುವು ಬದಲಾಗದಿರುವುದನ್ನು ಸೂಚಿಸುತ್ತಾರೆ. ಹಾಗೇ ಪ್ರಭುಶಂಕರ ಹೇಳಿರುವುದೂ ಅದನ್ನೇ ಎಂದು ವಿವರಿಸುತ್ತಾರೆ. ಕುವೆಂಪು ಅವರ ಆ ಲೇಖನದ ಬೀಜ ಮಾತುಗಳೆಂದರೆ, 'ಇಂಗ್ಲಿಷನ್ನು ಬಿಡುವಂತಿಲ್ಲ; ಆದರೆ ಅದಕ್ಕೆ ಹಿಂದಿದ್ದ ಸ್ಥಾನವನ್ನು ಕೊಡುವಂತೆಯೂ ಇಲ್ಲ. ಇನ್ನು ಮುಂದೆ ಇಂಗ್ಲಿಷ್ ಹಲವರು ಕಲಿಯುವ ಭಾಷೆಯಲ್ಲ. ಕೆಲವರು ಕಲಿಯುವ ಭಾಷೆ.' ಆದರೆ ಕೆ.ವಿ ನಾರಾಯಣರಂತಹ ಗೌರವಾನ್ವಿತ ಬುದ್ಧಿಜೀವಿ ಹಾಗೂ ಭಾಷಾಶಾಸ್ತ್ರಜ್ಞರು ಈ ಉಲ್ಲೇಖವನ್ನು ಸಂದರ್ಭದಿಂದ ಕಿತ್ತು, ತಾವು ಸದ್ಯದ ಪರಿಸ್ಥಿತಿಯಲ್ಲಿ ತಮಗಷ್ಟೇ ಗೊತ್ತಿರುವ ಕಾರಣಗಳಿಗಾಗಿ ಅನುಮೋದಿಸುವ ಭಾಷಾನೀತಿಗೆ ಬೆಂಬಲವಾಗಿ ಬಳಸಿಕೊಳ್ಳುವ ಪ್ರಯತ್ನದ ಬಗ್ಗೆ ನನಗೆ, ಆಶ್ಚರ್ಯವೂ, ವಿಷಾದವೂ ಒಟ್ಟಿಗೂ ಉಂಟಾಯಿತು.

ಜಾಗತೀಕರಣ ತನ್ನ ಬೆನ್ನಿಗಂಟಿಕೊಂಡು ಬಂದಿರುವ ಆರ್ಥಿಕ ನೀತಿಗಳಿಂದಾಗಿ ಜನರಲ್ಲಿ ಇಂದು ಲೌಕಿಕ 'ಅಭಿವೃದ್ಧಿ' ಕುರಿತ ಹಪಾಹಪಿ ಯಾವ ಹಂತ ತಲುಪಿದೆ ಎಂದರೆ, ತಮ್ಮ ವೈಚಾರಿಕ ಒಳನೋಟಗಳ ಮೂಲಕ ಜನರಲ್ಲಿ ಈ ಸಂಬಂಧ ಜಿಜ್ಞಾಸೆಯನ್ನು ಹುಟ್ಟುಹಾಕಬೇಕಾದ ಬುದ್ಧಿಜೀವಿಗಳೇ ಸ್ವತಃ ತಳಮಳಿಸಿ, ಜನರ ಸದ್ಯದ ಮಾನಸಿಕತೆಗೆ ಒಗ್ಗುವಂತಹ 'ವಿವರಣೆ'ಗಳನ್ನು ರಚಿಸಿಕೊಡುವ ಮೂಲಕ ತಮ್ಮ 'ಬುದ್ಧಿಜೀವಿತ್ವ'ದ ಪ್ರಸ್ತುತತೆಯನ್ನು ಕಾಪಾಡಿಕೊಳ್ಳಬೇಕಾದ ಪರಿಸ್ಥಿತಿ ಬಂದಿದೆ! ಇಲ್ಲದಿದ್ದರೆ, ಇದ್ದಕ್ಕಿದ್ದಂತೆ ಬೆಂಗಳೂರಿನ ಕೆಲವು ಬುದ್ಧಿಜೀವಿಗಳ ನೇತೃತ್ವದಲ್ಲಿ 'ಒಂದನೇ ತರಗತಿಯಿಂದಲೇ ಇಂಗ್ಲಿಷ್ ಕಲಿಸಿ' ಆಂದೋಲನ ಅವರ ಜೀವನ್ಮರಣದ ಪ್ರಶ್ನೆಯೆಂಬಂತೆ ಅಷ್ಟು ಹಠ ಹಾಗೂ ರಭಸದೊಂದಿಗೆ ಏಕೆ ಆರಂಭವಾಗಬೇಕಿತ್ತು? ಹಾಗೇ ಈ ಆಂದೋಲನ ಆರಂಭವಾಗಲೆಂದೇ ಕಾಯುತ್ತಿದ್ದಂತೆ ಸರ್ಕಾರ ಇವರ ಬೇಡಿಕೆಯನ್ನು ಮನ್ನಿಸಿ ಆ ಸಂಬಂಧ ಅಧಿಕೃತ ಆಜ್ಞೆಯನ್ನು ಹೊರಡಿಸುವವರೆಗೆ, ಇವರ ಈ ಕ್ಷಿಪ್ರ ಕಾರ್ಯಾಚರಣೆ ಏಕೆ ಅಷ್ಟು ಬದ್ಧತೆಯಿಂದ ಮುಂದುವರಿಯಬೇಕಿತ್ತು? ಆದರೆ ಸುಪ್ರೀಂ ಕೋರ್ಟಿನ ತೀರ್ಪಿನ ಪ್ರಕಾರವೇ ಕರ್ನಾಟಕದ ಪ್ರಾಥಮಿಕ ಶಾಲೆಗಳಲ್ಲಿ ಕನ್ನಡವನ್ನು ಶಿಕ್ಷಣ ಮಾಧ್ಯಮವಾಗಿ ಮಾಡಲು ಯತ್ನಿಸಿದ ಸರ್ಕಾರದ ಕ್ರಮದ ವಿರುದ್ಧ ಖಾಸಗಿ ಶಾಲೆಗಳ ಅಧಿಪತಿಗಳು ೧೩ ವರ್ಷಗಳ ಹಿಂದೆ ರಾಜ್ಯ ಹೈಕೋರ್ಟಿನಲ್ಲಿ ಪಡೆದಿದ್ದ ತಡೆಯಾಜ್ಞೆಯನ್ನು ತೆರವುಗೊಳಿಸಲು ಯಾವ ಆಂದೋಲನವೂ ಆಗಲಿಲ್ಲ. ಇದು ಕುವೆಂಪು ಕರ್ನಾಟಕದ ಇಂದಿನ ಕಥೆ!

ಇಂತಹ ಸಂಕಟದ ಸಂದರ್ಭದಲ್ಲಿ 'ಕುವೆಂಪು ಕರ್ನಾಟಕ' ಎಂಬ ಹೆಸರಿನ ಸಂಪುಟಕ್ಕೆ ಲೇಖನ ಬರೆಯಹೊರಡುವುದು ನಿಜವಾಗಿಯೂ ಕಷ್ಟದ; ಸುಸ್ತು ಮಾಡುವ ಕೆಲಸ. ಏಕೆಂದರೆ ಕುವೆಂಪು ಒಬ್ಬ ಸಂಸ್ಕೃತಿ ವಕ್ತಾರರಾಗಿ ಮುನ್ನೋಡಿದ ಕರ್ನಾಟಕದ ಕೇಂದ್ರಶಕ್ತಿ ಕನ್ನಡವೇ ಆಗಿತ್ತು. ಕುವೆಂಪು ಕನ್ನಡದ ಇತರೆಲ್ಲ ಸಾಹಿತಿಗಳಿಗಿಂತ ಭಿನ್ನವಾದ ಹಾಗೂ ವಿಶಿಷ್ಟವಾದ ಸ್ಥಾನಮಾನವನ್ನು ಕನ್ನಡಿಗರ ಮನಸ್ಸಿನಲ್ಲಿ ಗಳಿಸಿಕೊಂಡಿದ್ದರೆ, ಅದಕ್ಕೆ ಮುಖ್ಯ ಕಾರಣ ಅವರು ಬಾರಿಸಿದ ಕನ್ನಡ ಡಿಂಡಿಮ. ಅವರಿಗೆ ಕನ್ನಡವೆಂಬುದು ಒಂದು ಭಾಷೆ ಮಾತ್ರವಾಗಿರಲಿಲ್ಲ. ಹಾಗೇ ಡಿಂಡಿಮವೆಂಬುದು ಒಂದು ಬರೀ ಶಬ್ದಘೋಷವಾಗದೆ, ಅವರ

'ಕನ್ನಡ ಡಿಂಡಿಮ' ಪದ್ಯದ ಪ್ರತಿ ಸಾಲೂ ಪ್ರತಿಧ್ವನಿಸುವಂತೆ, ಕರ್ನಾಟಕವನ್ನು ಕಟ್ಟುವ ಒಂದು ಸಾಂಸ್ಕೃತಿಕ ಪ್ರಣಾಳಿಕೆಯೇ ಆಗಿತ್ತು. ಕನ್ನಡವೆಂದರೆ ಅವರಿಗೆ ಒಂದು ಸಂಸ್ಕೃತಿಯ ಸ್ಮೃತಿಕೋಶವೂ, ಆ ಮೂಲಕ ಭವಿಷ್ಯದ ಪ್ರಗತಿಯ ಮಾತೃಕೋಶವೂ ಆಗಿತ್ತು. ಈ ಪ್ರಗತಿ ಎಂಬುದು ಅವರಿಗೆ ಬರೀ ಲೌಕಿಕ ನೆಲೆಯ ವಿದ್ಯಮಾನವಾಗಿರಲಿಲ್ಲ. ಅದಕ್ಕೆ ಪಾರಮಾರ್ಥಿಕ ನೆಲೆಯೂ ಅಗತ್ಯವಾಗಿತ್ತು. 'ಕನ್ನಡವೇ ಸತ್ಯ' ಎಂಬ ಅವರ ಮಹೋದ್ಗಾರ ಸೂಚಿಸುವುದು ಕೂಡ ಇದನ್ನೇ. ಹಾಗಾಗಿ ಕನ್ನಡ ಅವರಿಗೆ ಬದುಕಿನ 'ಮುಕ್ತಿ'ಯ ಸಾಧನವೂ ಆಗಿತ್ತು. ಕುವೆಂಪು ತಮ್ಮನ್ನು ತಾವು ಲೇಖಕನಿಗಿಂತ ಹೆಚ್ಚಾಗಿ ದಾರ್ಶನಿಕ ಎಂದು ಕರೆದುಕೊಳ್ಳಲು ಇಚ್ಛಿಸಿದ್ದು ಈ ನೆಲೆಯಲ್ಲಿಯೇ. ಆದರೆ ಕನ್ನಡಿಗರಿಗಿಂದು ಕುವೆಂಪುಗಿಂತ ಇನ್ಫೋಸಿಸ್‌ನ ನಾರಾಯಣಮೂರ್ತಿಯವರೇ ಆದರ್ಶ ನಾಯಕರಾಗಿ ಪರಿಣಮಿಸಿದ್ದಾರೆ ಎಂದರೆ?

ಎರಡು-ಮೂರು ವರ್ಷಗಳ ಹಿಂದೆ ವಿಶ್ವವಿದ್ಯಾಲಯವೊಂದರಲ್ಲಿ ಏರ್ಪಡಿಸಲಾಗಿದ್ದ ವಿಚಾರ ಸಂಕಿರಣದಲ್ಲಿ ನಾನು, ಕರ್ನಾಟಕದ ಸಾಂಸ್ಕೃತಿಕ ನಾಯಕರಾಗಬೇಕಿದ್ದ ಕುವೆಂಪು ಆಗದೇ ಹೋದದ್ದು ಕರ್ನಾಟಕದ ದುರಂತ ಎಂದಾಗ, ಅಲ್ಲಿದ್ದ ಬಹುತೇಕ ಅಧ್ಯಾಪಕ ಬುದ್ಧಿಜೀವಿಗಳು ದೊಡ್ಡ ಹುಯಿಲೆಬ್ಬಿಸಿದರು. ಅವರ ಪ್ರಕಾರ ಕುವೆಂಪು ಕರ್ನಾಟಕದ ಸಾಂಸ್ಕೃತಿಕ ನಾಯಕರೇ ಆಗಿದ್ದಾರೆ! ಆದರೆ ಇವರಿಗೆ ಕರ್ನಾಟಕದಲ್ಲಿ ಕನ್ನಡ ಶಾಲೆಗಳಿಗೆ ಬಂದಿರುವ ದುರ್ಗತಿ ಕಾಣದೇ ಹೋಗಿದೆ. ಏಕೆಂದರೆ ಅವರೇ ತಮ್ಮ ಮಕ್ಕಳನ್ನು ಖಾಸಗಿ ಇಂಗ್ಲಿಷ್ ಶಾಲೆಗಳಿಗೆ ಕಳಿಸಿ ಈ ದುರ್ಗತಿಗೆ ಕಾರಣರಾಗಿದ್ದಾರೆ. ಈ ಪ್ರವೃತ್ತಿಯ ಪರಿಣಾಮವಾಗಿ ಅನೇಕ ರಂಗಗಳಲ್ಲಿ ಕನ್ನಡ ಕ್ರಮೇಣ ಕಣ್ಮರೆಯಾಗುತ್ತಿರುವುದೂ ಅವರಿಗೆ ಆತಂಕದ ವಿಷಯವಾಗಿಲ್ಲ. ತಮ್ಮ ಅಥವಾ ತಮ್ಮ ಮನೆಯ ಮದುವೆಗಳನ್ನು ಸರಳವಾಗಿ 'ಮಂತ್ರಮಾಂಗಲ್ಯ'ದ ರೂಪದಲ್ಲಿ ನಡೆಸಲು ಸಾಧ್ಯವಾಗುವಂತಹ ಸಾಮಾಜಿಕ ವಾತಾವರಣ ಮರೆಯಾಗುತ್ತಿರುವುದೂ ಅವರ ಗಮನಕ್ಕೆ ಬಾರದೇ ಹೋಗಿದೆ. ಏಕೆಂದರೆ ಸ್ವತಃ ಅವರೇ ತಮ್ಮ ಮಕ್ಕಳಿಗೆ ಲಕ್ಷಾಂತರ ರೂಪಾಯಿ ವರದಕ್ಷಿಣೆ ಕೊಡುತ್ತಲೋ, ತೆಗೆದುಕೊಳ್ಳುತ್ತಲೋ ಮದುವೆ ಮಾರುಕಟ್ಟೆಯ ಗ್ರಾಹಕರಾಗಿದ್ದಾರೆ! ಕುವೆಂಪು ಮನ್ನೋಡಿದ್ದು ಕೇವಲ ಭೌತಿಕ ಕರ್ನಾಟಕವನ್ನಲ್ಲ; ಸಾಂಸ್ಕೃತಿಕ ಕರ್ನಾಟಕದ ವಿಕಾಸವನ್ನು ಎಂಬುದು ಇವರಿಗೆ ಗೊತ್ತಿದ್ದಂತಿಲ್ಲ. ಹಾಗೆಂದೇ ಅವರ 'ಭೌಗೋಳಿಕವಾಗಿ ಕರ್ನಾಟಕ ರಾಜ್ಯ ಸ್ಥಾಪನೆಯಾಯಿತೆಂದು ನಾವು ಸಡಿಲ ಬಾಳಿಕರಾಗಿ ಸುಮ್ಮನಾದರೆ ರಾಜ್ಯ ಸ್ಥಾಪನೆಯ ಮೂಲೋದ್ಧೇಶವೇ ವಿಫಲವಾಗುತ್ತದೆ' ಎಂಬ ಬೀಜ ಮಾತು ಇವರಿಗೆ ಮರೆತುಹೋಗಿದೆ. ಆದರೂ ಇವರಿಗೆ ಕುವೆಂಪು ಕರ್ನಾಟಕದ ಸಾಂಸ್ಕೃತಿಕ ನಾಯಕ! ಎಂತಹ ಮರುಳು!! ಅಥವಾ ಆತ್ಮದ್ರೋಹ?

ಬರಿಯ ಚದರ ಮೈಲಿಗಳಲ್ತು ಕರ್ಣಾಟಕ ದೇಶವಿಸ್ತೀರ್ಣಮಂ
ನೆನೆ ನೆನೆ ಮನೋಮಯದ ಸಂಸ್ಕೃತಿಯ ಕೋಶ ವಿಸ್ತೀರ್ಣಮಂ
ಮರೆಯದಿರು ಚದರ ಸಂವತ್ಸರ ಶತಮಾನಗಳ ಕಾಲ ವಿಸ್ತೀರ್ಣಮಂ
ಪ್ರಾಣಮಯ, ಭಾವಮಯ ವಿಸ್ತೀರ್ಣಮಂ, ಚಿದಾಕಾಶ ವಿಜ್ಞಾನ ವಿಸ್ತೀರ್ಣಮಂ.

ಹೀಗೆ ಬಹು ಆಯಾಮಗಳಲ್ಲಿ ಸಂಸ್ಕೃತಿ ಕರ್ನಾಟಕವನ್ನು ಕಾಲ ದೇಶಗಳ ಹಾಸುಹೊಕ್ಕಿನಲ್ಲಿ ಕಲ್ಪಿಸಿಕೊಂಡಿದ್ದ ಕುವೆಂಪು, ಅದನ್ನು ಕನ್ನಡಿಗನ ವ್ಯಕ್ತಿತ್ವದಲ್ಲಿ ಅಂತರ್ಗತಗೊಳಿಸಲು ನಡೆಸಿದ ಪ್ರಯತ್ನಗಳೇ ಅವರ ಸಾಂಸ್ಕೃತಿಕ ಬದುಕಿನ ಸಮಗ್ರತೆಯನ್ನೂ, ಶೀಲವನ್ನೂ ಕಟ್ಟಿಕೊಟ್ಟದ್ದು. ಅವರ ಸೃಜನಶೀಲ ಸಾಹಿತ್ಯ ಸೃಷ್ಟಿಯಾಗಿರಬಹುದು, ಸೃಜನೇತರ ಭಾಷಣ-ಬರಹಗಳಾಗಿರಬಹುದು, ಅಧ್ಯಾಪಕನಾಗಿ ಮತ್ತು ಕುಲಪತಿಯಾಗಿ ಮಾಡಿದ ಅಧ್ಯಾಪನ ಹಾಗೂ ಆಡಳಿತಾತ್ಮಕ ಕೆಲಸಗಳಿರಬಹುದು, ಅವುಗಳೆಲ್ಲದರ ದೃಷ್ಟಿಕೇಂದ್ರ ಕನ್ನಡದ ಮೂಲಕ ಕರ್ನಾಟಕವನ್ನು ಕಟ್ಟುವ ಕಡೆಗೇ ಏಕಾಗ್ರವಾಗಿದ್ದುದನ್ನು ನಾವು ಗಮನಿಸಬೇಕು. ಇಲ್ಲಿ ಕನ್ನಡವೆಂದರೆ ಕೇವಲ ಒಂದು ತತ್ಕಾಲೀನ ಉದ್ದೇಶದ ವ್ಯಾವಹಾರಿಕ ಸಂಪರ್ಕ ಮಾಧ್ಯಮವಾಗಿರದೆ, ಒಂದು ಸಂಸ್ಕೃತಿಯ ಬೀಜವೆಂಬಂತೆ; ಅದರೊಳಗಿಂದಲೇ ನಮ್ಮ ಆರ್ಥಿಕ, ಸಾಮಾಜಿಕ, ಸಾಹಿತ್ಯಿಕ ಹಾಗೂ ಪಾರಮಾರ್ಥಿಕ ಬದುಕುಗಳು ಚಿಗುರೊಡೆದು, ಕನ್ನಡ ಸಮಾಜ ಒಂದು ಶ್ರೀ ಸಾಮಾನ್ಯ ಸಾಂಸ್ಕೃತಿಕ ಆವೇಗದೊಂದಿಗೆ ಆಧುನಿಕತೆಯೆಡೆಗೆ ಚಲಿಸಬೇಕೆಂಬ ಅವರ ಆಶಯದ ಜೀವಂತ ಸಾಧನವೂ ಆಗಿತ್ತು. ಇಂಗ್ಲಿಷ್ ಮುಂಬಾಗಿಲಿನಲ್ಲಿ ಆಧುನಿಕತೆಯ ಹರಿಕಾರನಾಗಿ ಬಂದು ಕೆಲಸ ಮುಗಿಸಿ, ಹಿಂಬಾಗಿಲಿನಿಂದ ನವ ಸಾಮ್ರಾಜ್ಯಶಾಹಿಯ ಏಜೆಂಟನಾಗಿ ಹೋಗಬಹುದೆಂಬ ಎಚ್ಚರವಿದ್ದುದರಿಂದಲೇ ಅವರು ಶಿಕ್ಷಣ ಮತ್ತು ಆಡಳಿತ ಕನ್ನಡದಲ್ಲಿದ್ದು, ಇಂಗ್ಲಿಷನ್ನು ಒಂದು ಭಾಷೆಯಾಗಿ ಮಾತ್ರ ಹದ್ದುಬಸ್ತಿನಲ್ಲಿಟ್ಟುಕೊಂಡು ಕಲಿಸಬಹುದಾಗಿದೆ ಎಂದು ಸೂಚಿಸಿದ್ದರು.

ಕುವೆಂಪು ಆಧುನಿಕ ಕನ್ನಡ ಸಮಾಜ ಕಂಡ ಮೊದಲ (ಪ್ರಧಾನ ಧಾರೆಯ) ಶೂದ್ರ ಲೇಖಕ. ಆದರೆ ಈ ಮೊದಲ ಶೂದ್ರ ಲೇಖಕನ ಆತ್ಮವಿಶ್ವಾಸ ಎಷ್ಟು ಸಮೃದ್ಧವಾಗಿತ್ತೆಂದರೆ; ಆ ಕಾಲದ ಸಮಾಜದ ಸಾಂಸ್ಕೃತಿಕ ಲೋಕಕ್ಕೆ ಸಂಸ್ಕೃತ ಅಥವಾ ಇಂಗ್ಲಿಷ್ ಭಾಷೆಗಳ ವಿದ್ವತ್ತು ಮಾತ್ರ ರಹದಾರಿ ಎಂಬ ಪರಿಸ್ಥಿತಿ ಇದ್ದಾಗ, ಜೆ.ಎಚ್. ಕಸಿನ್ಸ್ ಎಂಬ ಸಾಮಾನ್ಯ ಇಂಗ್ಲಿಷ್ ಕವಿಯೊಬ್ಬನ ಸೂಚನೆಯೇ ಸಾಕಾಯಿತು, ಇವರಿಗೆ ಕನ್ನಡವನ್ನು ಸಾರಸರ್ವಸ್ವವೆಂದು ಭಾವಿಸಲು! ಮುಂದೆ ಅವರು 'ಕನ್ನಡಕ್ಕಾಗಿ ಕೈಯೆತ್ತು; ನಿನ್ನ ಕೈ ಕಲ್ಪವೃಕ್ಷವಾಗುತ್ತದೆ' ಎಂದು ಕೊಟ್ಟ ಕರೆ, ವಿವೇಕಾನಂದರ 'ಏಳಿ, ಎದ್ದೇಳಿ, ಜಾಗೃತರಾಗಿ........' ಎಂಬ ಕರೆಯನ್ನು ಹೋಲುತ್ತಿದ್ದರೆ ಅದಕ್ಕೆ ಕಾರಣ; ವಿವೇಕಾನಂದರಿಗೆ ಸನಾತನ ಹಿಂದೂ ಧರ್ಮ ಏನಾಗಿತ್ತೋ, ಕುವೆಂಪುಗೆ ಕನ್ನಡ ಧರ್ಮ ಆದಾಗಿತ್ತು ಎಂಬುದೇ ಆಗಿದೆ. ಹಿಂದೂ ಸಮಾಜವನ್ನು ವಿವೇಕಾನಂದರು ಯಾವ ಚಿಕಿತ್ಸಕ ದೃಷ್ಟಿಯಿಂದ ವಿಮರ್ಶಿಸಿ ಅದಕ್ಕೆ ಹೊಸ ದೃಷ್ಟಿ ಪ್ರದಾನ ಮಾಡಲು ಯತ್ನಿಸಿದರೋ, ಅದೇ ಚಿಕಿತ್ಸಕ ದೃಷ್ಟಿಯಿಂದ ಕುವೆಂಪು ಕನ್ನಡ ಸಮಾಜವನ್ನು ವಿಮರ್ಶಿಸಿ ಅದಕ್ಕೊಂದು ಹೊಸ ದೃಷ್ಟಿ ಪ್ರದಾನ ಮಾಡುವ ಪ್ರಯತ್ನ ಮಾಡಿದರು. ಇಲ್ಲಿ ಕನ್ನಡ ಸಮಾಜವೆಂದರೆ, ಕನ್ನಡ ಭಾಷೆಯ ಮೂಲಕ ವಿವಿಧ ನೆಲೆಗಳಲ್ಲಿ ಪರಸ್ಪರ ಸಂವಹನ ಸಾಧಿಸಿಕೊಳ್ಳುತ್ತ ಬಾಳನ್ನು ಕಂಡು-ಕಟ್ಟಿಕೊಳ್ಳುತ್ತಿರುವ ಒಂದು ಸಂಸ್ಕೃತಿ ವಿಶಿಷ್ಟ ಸಮಾಜ. ಈ ಸಂಸ್ಕೃತಿ ವಿಶಿಷ್ಟತೆ ಸಂಕುಚಿತ ಪ್ರತ್ಯೇಕತೆಯಾಗದೆ, ಹೇಗೆ ಒಂದು ಪ್ರಗತಿಪರ ಸಾರ್ವತ್ರಿಕ ಬದುಕಿನ ಅವಿಭಾಜ್ಯ ಹಾಗೂ ಅರ್ಥಪೂರ್ಣ ಅಂಗವೂ ಆಗಿರಬಲ್ಲುದು ಎಂಬುದು ಅವರ ಸಾಮಾನ್ಯ ಎನ್ನಿಸುವ ನಾಡಗೀತೆಯಿಂದ ಹಿಡಿದು ಅಸಾಮಾನ್ಯ ಎನ್ನಿಸುವ ಅವರ 'ಮಲೆಗಳಲ್ಲಿ ಮದುಮಗಳು' ಮಹಾಕಾದಂಬರಿವರೆಗಿನ ಸಾಹಿತ್ಯ ಸೃಷ್ಟಿಯನ್ನು ಸೂಕ್ಷ್ಮವಾಗಿ

ಪರಿಶೀಲಿಸುತ್ತ ಹೋದರೆ ಸ್ಪಷ್ಟವಾಗುತ್ತ ಹೋಗುತ್ತದೆ.

ಕುವೆಂಪು ಸಾಹಿತ್ಯದ ಈ ವಿಶಾಲ ನೋಟದಲ್ಲಿ ನಾವು ಕಾಣುವುದು ಕನ್ನಡ ಸಂಸ್ಕೃತಿ ವಿಶಿಷ್ಟತೆಯ ಸಂಕೀರ್ಣ ಅನಾವರಣವನ್ನು. ಭಾರತ ಜನನಿಯ ತನುಜಾತೆಯಾದ ಕರ್ನಾಟಕ ಮಾತೆ ಸುಂದರ ನದಿ ವನಗಳ ನಾಡೂ, ರಸಋಷಿಗಳ ಬೀಡೂ ಆಗಿದೆ ಎಂಬ 'ರಮ್ಯ' ವರ್ಣನೆಯು 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ 'ನಿಜವಾಸ್ತವ'ವಾಗುವ ಸಂಕೀರ್ಣ ಬಗೆ, ಕುವೆಂಪು ಅವರ ಕನ್ನಡ (ಸಂಸ್ಕೃತಿ)ತನದ ಕಲ್ಪನೆಯ ವಿರಾಟ್‌ದರ್ಶನ ಮಾಡಿಸುತ್ತದೆ: ರುದ್ರಮನೋಹರವಾದ ಸಹ್ಯಾದ್ರಿ ಕಣಿವೆಗಳಲ್ಲಿ ನೆಲೆಗೊಂಡ ಹಲವು ಸ್ಥಳಿಯ ಸಂಸ್ಕೃತಿಗಳ ಕಿರುತೊರೆಗಳ ಸಂಗಮದಲ್ಲಿ ಕಟ್ಟಿಕೊಳ್ಳುವ ಈ ಕಾದಂಬರಿಯ ಬದುಕು, ಅಮೆರಿಕಾದ ಸಹಸ್ರ ದ್ವೀಪೋದ್ಯಾನದ ಕುಟೀರವೊಂದರಲ್ಲಿ ವಿವೇಕಾನಂದರು ಕಾಣುವ ಕಾಣ್ಕೆ ಹಾಗೂ ಕಲ್ಕತ್ತಾದ ಕಾಳಿಮಂದಿರದಲ್ಲಿ ಪರಮಹಂಸರ ಶಿಷ್ಯ ಸನ್ಯಾಸಿಗಳು ಧ್ಯಾನದಲ್ಲಿ ಕಾಣುವ ದರ್ಶನಗಳೊಂದಿಗೆ ವಿಶ್ವಪ್ರಜ್ಞೆಯ ಭಾಗವಾಗಿ ಹೋಗಿ; ತನ್ನ ಕ್ರಿಯಾಶೀಲತೆಯ ಗುಟ್ಟುಗಳನ್ನು ನಮ್ಮ ಮಲೆನಾಡ ಮೂಲೆಯ ಹಳೆಮನೆ, ಕೋಣೂರು, ಹೂವಳ್ಳಿ, ಬೆಟ್ಟಳ್ಳಿ, ಕಲ್ಲೂರು, ಸಿಂಭಾವಿ ಮುಂತಾದ ಕುಗ್ರಾಮಗಳ ಕನ್ನಡ ಬದುಕಿನಲ್ಲಿ ಬಿಟ್ಟುಕೊಡುತ್ತದೆ. ಇದು ಕನ್ನಡ ಬದುಕು ಏಕೆಂದರೆ, ಈ ಬದುಕು ಅರಳುವುದೇ, ಕನ್ನಡ ಭಾಷೆಯ ಮೂಲಕ; ತನ್ನ ಸ್ಮೃತಿಕೋಶಕ್ಕೆ ಈ ಭಾಷೆಯಲ್ಲಿ ಅಂತರ್ಗತವಾಗಿರುವ ವಿವಿಧ ಕಲಾ ಕೌಶಲ್ಯಗಳೊಂದಿಗೆ ವಿವಿಧ ಸ್ತರಗಳಲ್ಲಿ ಅಭಿವ್ಯಕ್ತಿ ನೀಡುತ್ತಾ, ಹೊಸ ಜಾಗೃತಿಯೆಡೆಗೆ ಮುಖಮಾಡುವ ಯುಗಪ್ರವರ್ತಕತೆಯೊಡನೆ. ಕನ್ನಡ ಭಾಷೆ ಹಾಗೂ ಆ ಭಾಷೆಯನ್ನಾಡುವ ಜನರ ಆಂತರಿಕ ಶಕ್ತಿಯ ಸಾಧ್ಯತೆಗಳನ್ನು ಹೊಸ ಕಾಲವೊಂದರ ಹೊಸ್ತಿಲಲ್ಲಿ ನಿಂತು ಅನ್ವೇಷಿಸುವ ಈ ಕೃತಿ ನನ್ನ ಪ್ರಕಾರ, ನಾನು ಈ ಹಿಂದೊಮ್ಮೆ ಸೂಚಿಸಿದಂತೆ ಆಧುನಿಕ ಕನ್ನಡ ಸಂಸ್ಕೃತಿಯ ಮಹಾಕಾವ್ಯ.

ಈ ಕೃತಿಯಲ್ಲಿ ಸಾಬರನ್ನೋ, ಕ್ರಿಶ್ಚಿಯನ್ನರನ್ನೋ ಅಥವಾ ಮತ್ತೊಂದು ಧರ್ಮದವರನ್ನೋ ಅನುಚಿತವಾಗಿಯೋ ಅಪ್ರಮಾಣಿತವಾಗಿಯೋ ಅಥವಾ ಕೆಟ್ಟದಗಿಯೋ ಚಿತ್ರಿಸಲಾಗಿದೆ ಎಂದು ಅಸಮಧಾನವನ್ನೋ ಪಡುವವರು, ಈ ಕೃತಿಯನ್ನು ಕಾಲಕ್ಕೆ ಕಟ್ಟಿ ಹಾಕಿ ನೋಡುವ ತಪ್ಪನ್ನು ಮಾಡುತ್ತಾರೆ. ಇದು ಈ ಕೃತಿಯ ಅಪಮೌಲ್ಯೀಕರಣ ಕೂಡಾ. ಅಲ್ಲಿ ಈ ಪಾತ್ರಗಳು ಒಳ್ಳೆಯತನ ಅಥವಾ ಕೆಟ್ಟತನಗಳೆಂಬ ವಿಂಗಡಣೆಗಿನ್ನೂ ತೆರೆದುಕೊಳ್ಳದಂತಹ ಬೀಜರೂಪದಲ್ಲಿರುವವು ಎಂಬುದನ್ನು ಇವರು ಮರೆಯುತ್ತಾರೆ. 'ಮಲೆಗಳಲ್ಲಿ ಮದುಮಗಳು'ವಿನ ಪಾತ್ರಗಳನ್ನು– ಅದರೊಳಗಿನ ಹಿಂದೂ ಧರ್ಮಕ್ಕೆ ಸೇರಿದ ಪಾತ್ರಗಳೂ ಸೇರಿದಂತೆ– ಹೀಗೆ ಮತೀಯ ಚೌಕಟ್ಟಿನಿಂದ ನೋಡುವುದು ನಾವು ಆಧುನಿಕ ಮೌಲ್ಯವೆಂದು ಆರಾಧಿಸುವ 'ಸೆಕ್ಯುಲರ್' ಎಂಬ ಆವಾಹಿತ ಸಂಸ್ಕೃತಿಯಿಂದ ಪಡೆದುಕೊಂಡಿರುವ ಒಂದು ರೋಗದ ಫಲವೇ ಆಗಿದೆ. ಕುವೆಂಪು ಅವರೇ ಈ 'ಸೆಕ್ಯುಲರಿಸ' ತತ್ವವನ್ನು ಭಾರತೀಯ ಸಂದರ್ಭಕ್ಕನುಗುಣವಾಗಿ, ಧರ್ಮನಿರಪೇಕ್ಷತೆ ಎಂಬುದರ ಬದಲಾಗಿ ಧರ್ಮಸಮನ್ವಯ ಎಂದು ಅರ್ಥೈಸಿಕೊಳ್ಳಬೇಕೆಂದು ಸೂಚಿಸಿದ್ದರು. ಇದು ಮತ್ತೆ, ಆಧುನಿಕತೆಯನ್ನು ಸ್ವಾಗತಿಸುತ್ತಲೇ ಅದನ್ನು ದೇಶೀಯಗೊಳಿಸಿಕೊಳ್ಳುವ ಕುವೆಂಪು ಅವರ ಪ್ರಯತ್ನ. ಅವರ ಇಡೀ ಸಾಹಿತ್ಯದ

ತುಂಬ ನಾವು ಕಾಣುವುದು ಇಂತಹ ಪ್ರಯತ್ನವನ್ನೇ. ಆಧುನಿಕತೆಯನ್ನು ದೇಶೀಯ ವಿವೇಕದಿಂದ ಬರಮಾಡಿಕೊಳ್ಳುವ, ಸಂಸ್ಕೃತಿಯ ಆಧುನೀಕರಣವೆಂದು ಕರೆಯಬಹುದಾದ ಪ್ರಯತ್ನವನ್ನೇ. ಅವರೇ ವಿವರಿಸಿದಂತೆ, ಹಿರಿಯರು ಕೊಟ್ಟು ಹೋದ ಆಭರಣಗಳನ್ನು ಹಳೆಯ ಕಾಲದವೆಂದು ಬಿಸಾಡದೆ ಅವನ್ನು ಹೊಸಕಾಲದ ಹೊಸ ಶೈಲಿಗೆ ಪುನರ್ ವಿನ್ಯಾಸಗೊಳಿಸಿಕೊಳ್ಳುವ ವಿವೇಕವದು.

ಇದು ಕುವೆಂಪುಗೆ ಸಾಧ್ಯವಾಗಿರುವುದು, ತಮ್ಮ ಶೂದ್ರತ್ವದ ಬಗ್ಗೆ ಕಿಂಚಿತ್ತೂ ಕೀಳರಿಮೆ ಇಲ್ಲದೆ ಮತ್ತು ವೈದಿಕರು ಕಟ್ಟಿರುವ ಚರಿತ್ರೆಯ ಮಾಯೆಗೆ ಸಿಕ್ಕದೆ, ಸಂಸ್ಕೃತ ಪರಂಪರೆ ಅನ್ಯವಲ್ಲ; ಅದಕ್ಕೆ ನಾವು ಕೂಡಾ ನಿಜ ವಾರಸುದಾರರು ಎಂಬ ಚರಿತ್ರೆಯ ಸ್ಪಷ್ಟ ಅರಿವಿನಲ್ಲಿ ಆ ಪರಂಪರೆಯನ್ನು ವಿಮರ್ಶಿಸುವ ನೈತಿಕ ಅಧಿಕಾರವನ್ನು ಅವರು ಪಡೆದುಕೊಂಡಿರುವುದರಿಂದಾಗಿ. ಹಾಗಾಗಿಯೇ ಅವರಿಗೆ ತಮ್ಮ ವಿದ್ಯಾರ್ಥಿ ದೆಸೆಯ ಹೊತ್ತಿಗೇ ವೇದೋಪನಿಷತ್ತುಗಳಲ್ಲೂ ಮೂಢಭಾವನೆ ಮತ್ತು ತಪ್ಪು ಕಲ್ಪನೆಗಳು ಇಲ್ಲದಿಲ್ಲ ಎಂದು ಹೇಳಲು ಸಾಧ್ಯವಾಯಿತು. ಹಾಗೇ ಮುಂದೆ ದೇವುಡು, ಡಿವಿಜಿ ಮತ್ತು ಮಾಸ್ತಿಯವರಂತಹ ಸಂಪ್ರದಾಯವಾದಿ ಘಟಾನುಘಟಿಗಳು ಆಳುತ್ತಿದ್ದ ಸಾಹಿತ್ಯ ಲೋಕದ ಮಧ್ಯೆ ಇದ್ದೂ, 'ರಾಮಾಯಣದರ್ಶನಂ'ನಲ್ಲಿ ರಾಮ–ರಾವಣರಿಂದ ಹಿಡಿದು ಮಂಥರೆ–ಊರ್ಮಿಳೆಯರವರೆಗೆ ಪೌರಾಣಿಕ ಪಾತ್ರಗಳನ್ನು ಆಧುನೀಕರಿಸಲು ಮತ್ತು 'ಶ್ಮಶಾನ ಕುರುಕ್ಷೇತ್ರಂ', 'ಶೂದ್ರತಪಸ್ವಿ', 'ಜಲಗಾರ' ಹಾಗೂ 'ಬೆರಳ್‌ಗೆ ಕೊರಳ್'ನಂತಹ ನಾಟಕಗಳನ್ನು ರಚಿಸಲು ಸಾಧ್ಯವಾದದ್ದು. ಇನ್ನೂ ಮುಂದೆ, ಕುರ್ತಕೋಟಿ, ಅಡಿಗ, ಎಂ.ಜಿ. ಕೃಷ್ಣಮೂರ್ತಿ, ಅನಂತಮೂರ್ತಿ ಮತ್ತು ಲಂಕೇಶ್‌ರಂತಹ 'ಆಧುನಿಕ'ರ ಅನೇಕ ರೀತಿಯ ಟೀಕೆ–ಟಿಪ್ಪಣಿಗಳಿಗೆ ಸಿಕ್ಕಿಯೂ ತಮ್ಮ ಸಾಹಿತ್ಯಿಕ ಪ್ರಭೆ ಮತ್ತು ಪ್ರಸ್ತುತತೆಗಳನ್ನು ಉಳಿಸಿಕೊಳ್ಳಲು ಸಾಧ್ಯವಾದದ್ದೂ, ಈ ಎಲ್ಲ ಸಾಧ್ಯತೆಗಳನ್ನು ಯಶಸ್ವಿಯಾಗಿ ದಕ್ಕಿಸಿಕೊಂಡ ದೈತ್ಯಪ್ರತಿಭೆಯಿಂದಾಗಿ. ಆದರೂ–

> ೧೮೯೩ನೆಯ ಇಸವಿಯ ಸೆಪ್ಟಂಬರ್ ೧೧ನೇ ತೇದಿ ಸೋಮವಾರ ತೀರ್ಥಹಳ್ಳಿಯ ಪಾದ್ರಿ ಅಥವಾ ಉಪದೇಶಿ ಜೀವರತ್ನಯ್ಯ ಕಾಡು ದಾಟಿ ಆಗತಾನೆ ಕಳೆ ಕಿತ್ತು ತವರು ಕುಯ್ಲಾಗಿದ್ದ ಗದ್ದೆ ಕೋಗಿನ ಅಂಚುಗಳನ್ನು ಎಚ್ಚರಿಕೆಯಿಂದ ಏರಿ ಇಳಿದು, ಅಡಿಕೆ ಮರದ ಸಾರದ ಮೇಲೆ ಅಡೆಹಳ್ಳವನ್ನು ಉತ್ತರಿಸಿ, ಮನೆಯೆಡೆಯ ಕಣದ ಬೇಲಿಯೊಡ್ಡಿಗೆ ಹಾಕಿದ್ದ ಉಣುಗೋಲನ್ನು ಸರಿಸಿ, ಸಿಂಧುವಳ್ಳಿಗೆ ಮನೆಗೆ ಪ್ರವೇಶಿಸಿದಂದು ತಾನು ಎಂತಹ ಲೋಕಪ್ರಸಿದ್ಧವಾಗಲಿರುವ ಜಗದ್‌ಭವ್ಯ ಮಹದ್ ಘಟನೆಯೊಂದರೊಡನೆ ಪ್ರತಿಸ್ಪರ್ಧಿಯಾಗಿದ್ದೇನೆ ಎಂಬುದನ್ನು ಅರಿತಿರಲಿಲ್ಲ. ಆ ದಿನವೇ ಕ್ರೈಸ್ತಮತ ಶ್ರದ್ಧೆಯ ಮತ್ತು ಮಿಷನರಿಯ ಮತಾಂಧತೆಯ ಶಕ್ತಿ ಕೇಂದ್ರವಾಗಿದ್ದ ಅಮೆರಿಕಾ ದೇಶದ ಚಿಕಾಗೋ ನಗರದಲ್ಲಿ ನೆರೆದಿದ್ದ ಸರ್ವಧರ್ಮ ಸಮ್ಮೇಳನದಲ್ಲಿ ಸ್ವಾಮಿ ವಿವೇಕನಂದರು ಹಿಂದೂಧರ್ಮದ ಮತ್ತು ವೇದಾಂತ ದರ್ಶನದ ಮಹೋನ್ನತಿಯನ್ನೂ ವಿಶ್ವವೈಶಾಲ್ಯವನ್ನೂ ತಮ್ಮ ಸಿಂಹ ಕಂಠದಿಂದ ಘೋಷಿಸಿದ್ದರು! ಅದನ್ನು ಆಲಿಸಿದ್ದ ಅನ್ಯಧರ್ಮೀಯ ವಿದ್ವಜ್ಜನ ಸಮೂಹವು ಆನಂದಾತ್ಮವಾಗಿ ಜಯಘೋಷ ಮಾಡಿತ್ತು! ಹಿಂದೂ ಧರ್ಮ ಮತ್ತು

ವೇದಾಂತ ದರ್ಶನದ ದಿಗ್ವಿಜಯ ಧ್ವಜ ಗಗನಚುಂಬಿಯಾಗಿ ಏರಿ ಹಾರಿ ಲೋಕಾಲೋಚನೆಗಳನ್ನೇ ಬೆರಗುಗೊಳಿಸಿತ್ತು! ವಿಂಧ್ಯ ಹಿಮಾಚಲ ಸಹ್ಯಾದ್ರಿಗಳಲ್ಲಿಯೂ ಆ ದಿವ್ಯ ಧ್ವನಿ ಅನುರಣಿತವಾಗಿತ್ತು.

–ಎಂಬ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಅಧ್ಯಾಯವೊಂದರ ಪೀಠಿಕೆಯನ್ನು, ಅದರ ಧ್ವನಿಪೂರ್ಣ ವಿವರಗಳ ಮತ್ತು ಅದು ಮುಂದೆ ಕಟ್ಟಿಕೊಡುವ ಸಾಂಸ್ಕೃತಿಕ ಬಿಕ್ಕಟ್ಟಿನ ಬದುಕಿನ ಚಿತ್ರದ ಹಿನ್ನೆಲೆಯಲ್ಲಿ, ಇಂದು ನಾವು ದಿಗ್ಮೂಢರಾಗಿ ಎದುರಿಸುತ್ತಿರುವ ಜಾಗತೀಕರಣದ ಬೀಜಾಂಕರದ ಸೂಚನೆ ಎಂದು ಪರಿಗ್ರಹಿಸಿದೆ; ಅದನ್ನು ಹಿಂದೂ ಪುನರುತ್ಥಾನವಾದಿ ನಿರೂಪಣೆ ಎಂದು ಅರ್ಥೈಸಿಕೊಂಡು ವ್ಯಾಖ್ಯಾನ ಮಾಡುವವರೂ ಇದ್ದಾರೆ. ಇವರನ್ನು ಸೆಕ್ಯುಲರ್ ಮೂಲಭೂತವಾದಿಗಳೂ ಎಂದು ಕರೆಯಬಹುದು! ಡೆರಿಡಾನನ್ನೋ, ಗೂಗಿಯನ್ನೋ ಓದಿಕೊಂಡು ಜಗತ್ತಿನ ಎಲ್ಲ ವಿದ್ಯಮಾನಗಳೂ ಮುಖ್ಯಾಮುಖ್ಯ ಭೇಧವಿಲ್ಲದೆ ಪರಸ್ಪರ ಸಂಬಂಧಿತವಾಗಿದ್ದು, ಆ ಸಂಬಂಧಗಳ ನೆಲೆಯಲ್ಲೇ ಅವು ತಮ್ಮ ಸಂಪೂರ್ಣ ಅರ್ಥವನ್ನು ಬಿಚ್ಚಿಕೊಳ್ಳಬಲ್ಲವು ಎಂಬ ಸಂಪುರ್ಣ ಹೊಸದೇನಲ್ಲದ ಸತ್ಯವನ್ನು ಅರಿತಿದ್ದರೂ; ನೆಹರೂ ಸಂಪ್ರದಾಯದ ಆಧುನಿಕತೆ ನಿರೂಪಿಸಿದ ಸೆಕ್ಯುಲರಿಸಂನ ಅರ್ಥದಲ್ಲಿ ಬಂಧಿಯಾಗಿರುವುದೇ ಇವರ ಈ ಮೂಲಭೂತವಾದಕ್ಕೆ ಕಾರಣವಾಗಿರುವಂತೆ ತೋರುತ್ತದೆ.

ಈ ಆಧುನಿಕತೆಯೆಂಬುದೇ, ಯುರೋಪಿನ ಪುನರುಜ್ಜೀವನ ಯುಗದೊಂದಿಗೆ ಜಗತ್ತಿನಲ್ಲಿ ಕಾಣಿಸಿಕೊಂಡ ವಸಹತುಶಾಹಿಯ ಪಾಪದ ಫಲವಾಗಿದೆ; ಅಂದರೆ ವಸಾಹತುಗಳಿಂದ ಸಂಚಯವಾದ ಬಂಡವಾಳವೇ ಈ ಆಧುನಿಕ ನಾಗರಿಕತೆಗೆ ಚಾಲನೆ ನೀಡಿದ್ದು. ಅದನ್ನು ಮಾಜಿ ವಸಾಹತು ದೇಶಗಳು ದೇಶೀಯ ವಿವೇಕವಿಲ್ಲದೆ ಸಾರಾಸಗಟಾಗಿ ಅಳವಡಿಸಿಕೊಳ್ಳುವ ಅಪಾಯದ ವಿರುದ್ಧ ಬಹು ಹಿಂದೆಯೇ ಗಾಂಧಿ– ಲೋಹಿಯಾರಂತಹ ಆಧುನಿಕ ಭಾರತೀಯ ಚಿಂತಕರು ಎಚ್ಚರಿಸಿ, ಈ ಪಶ್ಚಿಮದ ಆಧುನಿಕತೆ ಕುರಿತಂತೆ ಒಂದು ದೊಡ್ಡ ಸಂಕಥನವನ್ನೇ ನಮ್ಮ ಮುಂದಿಟ್ಟಿದ್ದಾರೆ. ಆದರೆ ಅವುಗಳನ್ನು ತಮ್ಮ ಕಾಲದ ದ್ವಂದ್ವ–ಸವಾಲುಗಳ ಹಿನ್ನೆಲೆಯಲ್ಲಿ ಬೆಳೆಸಲಾಗದ ನಮ್ಮ ಸ್ಥಳೀಯ ವಿದ್ವಾಂಸರು (ಇದಕ್ಕೆ ಧರ್ಮಪಾಲ್, ರಜನಿ ಕೊಠಾರಿ, ಪ್ರೀತೀಶ್ ನಂದಿಯಂತಹವರು ಸ್ವಲ್ಪಮಟ್ಟಿಗೆ ಅಪವಾದಗಳು), ಅದೇ ಕೆಲಸವನ್ನು ತಂತಮ್ಮ ದೇಶೀಯ ಅನುಭವಗಳ ಹಿನ್ನೆಲೆಯಲ್ಲಿ ಮಾಡಿರುವ ಡೆರಿಡಾ, ಗೂಗಿಗಳಂತಹವರ ಅಧ್ಯಯನ–ವಿಶ್ಲೇಷಣೆಗಳನ್ನು ಚಪ್ಪರಿಸುವಂತಹ ಅನುಕರಣ ವಿದ್ವತ್ತಿನ ಗುಲಾಮಿ ಪದ್ಧತಿಗೆ ಸಿಲುಕಿಕೊಂಡಿದ್ದಾರೆ. ಬಹುಶಃ ಇದೇ 'ಮಲೆಗಳಲ್ಲಿ ಮದುಮಗಳು'ವಿನಲ್ಲಿನ ಸಾಂಸ್ಕೃತಿಕ–ಸಾಮಾಜಿಕ ಮುಖಾಮುಖಿಯನ್ನು ಮತಧರ್ಮಗಳ ಪರಿಭಾಷೆಯಲ್ಲಿ ವಿಶ್ಲೇಷಿಸ ಹೊರಡುವ; ಮತ್ತು ಇಂಗ್ಲಿಷ್ ಕುರಿತ ಕುವೆಂಪು ನಿಲುವನ್ನು ಅದರ ಅರ್ಥ ಪರಿಧಿಯಾಚೆಯ ವ್ಯಾಖ್ಯಾನಗಳೆಡೆಗೆ ಒಯ್ಯುವ; ಇಂದು ನಮ್ಮ ಮಧ್ಯೆ ಹೊಸ ಪ್ರಗತಿಯ ಹೆಸರಿನಲ್ಲಿ ನಡೆಯುತ್ತಿರುವ ನವ ಸಾಮ್ರಾಜ್ಯಶಾಹಿ ಬೌದ್ಧಿಕ ಜಾಲ ವಿಸ್ತರಣೆಗೆ ಕಾರಣವಾಗಿರಬಹುದು.

ಹಾಗಾಗಿಯೇ ನಾವೀಗ ಈ ಕಾದಂಬರಿಯಲ್ಲಿ ಬರುವ ಗಡ್ಡದಯ್ಯ ಆಡುವ 'ಸ್ಥಳೀಯ ದೇವತಾಶಕ್ತಿಯನ್ನು ಜಾಗೃತಗೊಳಿಸುವ' ಮಾತನ್ನು 'ವಿಸ್ಮೃತಿ'ಯಲ್ಲಿರುವ ದೇಶೀಪ್ರಜ್ಞೆಯನ್ನು ಜಾಗೃತಗೊಳಿಸುವ ಅರ್ಥದ ನೆಲೆಯಲ್ಲಿ ಗ್ರಹಿಸದೆ; ಮತೀಯ ನೆಲೆಯಲ್ಲಷ್ಟೇ ಅರ್ಥ

ಮಾಡಿಕೊಳ್ಳುವ ಮಿತಿಗೆ ಸಿಕ್ಕಿ, ಕಾದಂಬರಿ ಕಟ್ಟಿಕೊಡುವ ದಾರ್ಶನಿಕತೆಗೇ ಧಕ್ಕೆ ತಂದೊಡ್ಡಿಕೊಳ್ಳುತ್ತಿದ್ದೇವೆ. ಇದರಿಂದಾಗಿ ವಿವಿಧ ಜಾತಿ–ಮತಗಳ ವಿವಿಧ ನೆಲೆಗಳ ತಾಕಲಾಟದಲ್ಲಿ ಸೃಷ್ಟಿಯಾಗುವ ಈ ನಾಟಕದ ಶಿಖರವಿರುವುದು, ಈ 'ವಿಸ್ಮೃತಿ' ಉಂಟುಮಾಡಿರುವ 'ಅವಿದ್ಯೆ'ಯನ್ನು ದಾಟಬಲ್ಲ 'ವಿದ್ಯೆ'ಗೆ ಅನುವು ಮಾಡಿಕೊಡುವ ಎಲ್ಲ ಜಾತಿ–ಮತಗಳ ಮಕ್ಕಳಿಗೂ ಪ್ರವೇಶವಿರುವಂತಹ ಸಾರ್ವಜನಿಕ ಶಾಲೆಯೊಂದರ ಆರಂಭದ ಸೂಚನೆಯಲ್ಲಿ ಎಂಬುದೇ ನಮ್ಮ ಗಮನಕ್ಕೆ ಬಾರದೇ ಹೋಗುತ್ತದೆ. ಹಾಗೇ ಕುವೆಂಪು ಅವರ ಸಂಸ್ಕೃತಿ ಆಧುನೀಕರಣದ ಸಂಕಥನವನ್ನು ನಾವು ಕಟ್ಟಿಕೊಳ್ಳಲಾರಂಭಿಸಬೇಕಾದ್ದು ನಿಜವಾಗಿ ಇಲ್ಲಿಂದಲೇ, ಈ ಸೂಚನೆಯಿಂದಲೇ ಎಂಬ ಕುವೆಂಪು ಸಾಹಿತ್ಯ ವಿಮರ್ಶೆಯ ಮೂಲ ನೆಲೆಗಳೇ ದಿಕ್ಕು ತಪ್ಪತೊಡಗುತ್ತದೆ.

ಹಾಗೆ ನೋಡಿದರೆ 'ಮಲೆಗಳಲ್ಲಿ ಮದುಮಗಳು' ಕುವೆಂಪು ಸಾಹಿತ್ಯದ ಶಿಖರ ರೂಪವಾಗಿದ್ದು, ಅವರ ಇಡೀ ಸಾಹಿತ್ಯದ ಅವಲೋಕನಕ್ಕೊಂದು ಸಾಂಸ್ಕೃತಿಕ ಸಂದರ್ಭದ ಚೌಕಟ್ಟನ್ನು ಒದಗಿಸಿಕೊಡುತ್ತದೆ. 'ಕಾನೂರು ಹೆಗ್ಗಡತಿ'ಯ ಹೂವಯ್ಯನ 'ಬಂಡಾಯ'ದ ಏದುಸಿರುಗಳನ್ನು, ಈ ಹಿಂದೆ ಪ್ರಸ್ತಾಪಿಸಿದ 'ಶ್ರೀರಾಮಾಯಣದರ್ಶನಂ' ಮತ್ತು ಅವರ ನಾಟಕಗಳಲ್ಲಿ ಕಾಣುವ ಸಾಂಸ್ಕೃತಿಕ ಪುನಾರಚನೆಯ 'ದುಸ್ಸಾಹಸ'ಗಳನ್ನು ಮತ್ತು ಎಲ್ಲಕ್ಕಿಂತ ಮುಖ್ಯವಾಗಿ ಅವರ ಕಾವ್ಯವು ಕಾವ್ಯಾತ್ಮಕತೆಯ ಮೂಲಮಾನಗಳನ್ನೇ ಧಿಕ್ಕರಿಸಿ ಹಲವು ನೆಲೆಗಳಲ್ಲಿ ಪ್ರಕಟಿಸುವ ಸಾಮಾಜಿಕ 'ಪ್ರತಿಭಟನೆ'ಯನ್ನು ನಾವು ಈ ಚೌಕಟ್ಟಿನಲ್ಲಿಟ್ಟು ಪರಿಶೀಲಿಸಿದಾಗ; ಪಶ್ಚಿಮದ ಆಧುನಿಕತೆಯ ಪರಿಣಾಮಗಳೆದುರು ವೈದಿಕ ಲೇಖಕನೊಬ್ಬ ಎದುರಿಸುವ ಇಕ್ಕಟ್ಟು ಬಿಕ್ಕಟ್ಟುಗಳಿಗೂ ಕುವೆಂಪುರಂತಹ ಶೂದ್ರ ಲೇಖಕನೊಬ್ಬ ಎದುರಿಸಿದ ಇಕ್ಕಟ್ಟು ಬಿಕ್ಕಟ್ಟುಗಳಿಗೂ ಇರುವ ವ್ಯತ್ಯಾಸಗಳು ಗೊತ್ತಾಗತೊಡಗುತ್ತವೆ. ರೈತ, ಗೊಬ್ಬರ, ಹೀರೇ ಹೂವುಗಳಂತಹವನ್ನೂ ತನ್ನ ಕಾವ್ಯಾಭಿವ್ಯಕ್ತಿಗೆ ವಸ್ತುಗಳಾಗಿ ಆರಿಸಿಕೊಳ್ಳಬೇಕಾದ ಸಾಮೂಹಿಕ ಒತ್ತಡದಲ್ಲಿರುವ ಕವಿಯ ಇಕ್ಕಟ್ಟು ಬಿಕ್ಕಟ್ಟುಗಳಿವು. ಕುವೆಂಪು ವಿಧಿ ನಿಷೇಧಗಳ ವೈದಿಕ ವಾತಾವರಣವನ್ನಲ್ಲದೆ, ಆಧುನಿಕತೆ ತೆರೆದಿಟ್ಟಿದ್ದ ಹೊಸ ಧೈರ್ಯ ಹಾಗೂ ಅವಕಾಶಗಳ ವೇದಿಕೆಯ ಹಸಿ ಆಕರ್ಷಣೆಗಳನ್ನು ಮೆಟ್ಟಿನಿಂತು, ಈ ಗೊಂದಲದಲ್ಲಿ ತಾನು ಕಳೆದುಹೋಗದಂತೆ; ತನ್ನತನವನ್ನು ಜತನದಿಂದ ಕಾಪಾಡಿಕೊಂಡು ಆ ಸ್ಥಿತ್ಯಂತರ ಸಂದರ್ಭದಲ್ಲಿ ಅದನ್ನು ಸ್ಥಾಪಿಸಿಕೊಳ್ಳಲು ನೆರವಾದ ಅವರ ಆತ್ಮಪ್ರತ್ಯಯ ಪ್ರಜ್ಞೆಯೇ ಅವರನ್ನು ಸಮಕಾಲೀನ ಪ್ರಧಾನ ಧಾರೆಯ ಲೇಖಕರ ಮಧ್ಯೆ ಅನನ್ಯರನ್ನಾಗಿ ಮಾಡಿರುವುದು.

ಇಡಿಯಾಗಿ ನೋಡಿದಾಗ ಕನ್ನಡದ ಚಂಪೂ ಸಂಪ್ರದಾಯದ ಮುಂದುವರಿಕೆಯಾಗಿ ತೋರುವ ಕುವೆಂಪು, ಆಧುನಿಕ ಕಾಲದ ಗದ್ಯ–ಪದ್ಯಗಳ ವಿಂಗಡಣೆಯ ಗೆರೆಯ ಪರಿವೆಯೇ ಇಲ್ಲದಂತೆ, ಪದ್ಯವನ್ನು ಗದ್ಯದ ಸಂದರ್ಭಾನುಸಾರ ಮುಂದುವರಿಕೆ ಮಾತ್ರವೆಂಬತೆ ಬರೆದಿದ್ದಾರೆ. ಇದನ್ನು, ಕಾವ್ಯದ ಆಧುನಿಕ ಮಾನದಂಡಗಳನ್ನು ಬಳಸಿ ಹೀಗಳೆಯುವವರ ಸಂಖ್ಯೆ ನಮ್ಮಲ್ಲೇನೂ ಕಡಿಮೆಯಿಲ್ಲ. ವ್ಯಕ್ತಿತಃ ಪೂರ್ಣದೃಷ್ಟಿಯ ಸಾಧಕರಾಗಿದ್ದ ಕುವೆಂಪುಗೆ ಕಾವ್ಯ, ಅನುಭವ ಶೋಧನೆಯ ಮಾರ್ಗವಾಗದೆ ನಿರೂಪಣೆಯ ಸಾಧನ ಮಾತ್ರವಾಗಿದ್ದಲ್ಲಿ ಆಶ್ಚರ್ಯವೇನಿಲ್ಲ. ಹಾಗಾಗಿ ತಾವು ಈಗಾಗಲೇ ಬದುಕಿನಲ್ಲಿ ಮತ್ತು ಪ್ರಕೃತಿಯಲ್ಲಿ 'ಕಂಡುಕೊಂಡಿರು'ವುದನ್ನು

ಆ ಕಾಲದ ಸಾಮಾಜಿಕ ಕರ್ತವ್ಯದ ಭಾಗವಾಗಿ ಹೇಳಲೇಬೇಕಾಗಿದೆ ಎನ್ನಿಸಿದ್ದನ್ನು 'ಭವ್ಯ'ವಾಗಿ-ಪರಿಣಾಮಕಾರಿಯಾಗಿ-ಹೇಳಲು ಚಂಪೂ ಸಂಪ್ರದಾಯದಲ್ಲಿ ಕಾವ್ಯರೂಪವನ್ನು ಬಳಸಿಕೊಂಡಿದ್ದಾರಷ್ಟೆ. ಕುವೆಂಪು ಅವರ ನಿಜವಾದ ಕಾವ್ಯವಾಗಿರುವ ಅವರ ಭಾವಗೀತೆಗಳ ಹೊರತಾಗಿ ಅವರ ಮಿಕ್ಕ ಕಾವ್ಯದ ಬಹುಭಾಗ ಕಥನ ಕ್ರಮದಲ್ಲಿರುವುದನ್ನು ನಾವು ಇಲ್ಲಿ ಗಮನಿಸಬೇಕು. ಕಾವ್ಯ ಕುರಿತಂತೆ, ಮಹಾಕವಿಯೂ ಎನಿಸಿರುವ ಕುವೆಂಪು ಅವರ ಈ ನಿಲುವು ಅವರ ಸಾಹಿತ್ಯ ವ್ಯಕ್ತಿತ್ವದ ಘನತೆಗಾಗಲಿ, ಅರ್ಥಪೂರ್ಣತೆಗಾಗಲೀ ಕಿಂಚಿತ್ತೂ ಚ್ಯುತಿ ತಂದಿಲ್ಲದಿರುವುದಕ್ಕೆ, ಅವರು ಕನ್ನಡಕ್ಕೇ ವಿಶಿಷ್ಟ ಎನ್ನಿಸಿರುವ ಚಂಪೂ ಸಂಪ್ರದಾಯವನ್ನು ನಮ್ಮ ಇಡೀ ಸಾಹಿತ್ಯಾಭಿವ್ಯಕ್ತಿಯ ನೆಲೆಯಲ್ಲಿ ಹೀಗೆ ಸಂದರ್ಭಾನುಸಾರ ಮತ್ತು ಔಚಿತ್ಯಪೂರ್ಣವಾಗಿ ಪ್ರಯೋಗಿಸಿ ಯಶಸ್ವಿಯಾಗಿರುವುದೇ ಕಾರಣವೆನಿಸುತ್ತದೆ. ತೇಜಸ್ವಿ, ಆಧುನಿಕ (ಅಂದರೆ ನವ್ಯ) ವಿಮರ್ಶಕರೇಕೆ ಕುವೆಂಪು ಅವರ ಗದ್ಯ ಕೃತಿಗಳನ್ನು ಲೆಕ್ಕಕ್ಕೇ ತೆಗೆದುಕೊಳ್ಳದೆ, ಅವರ ಕಾವ್ಯವನ್ನೇ ಎತ್ತಿಕೊಂಡು ಟೀಕೆ ಮಾಡುತ್ತಾರೆ ಎಂದು ಕೇಳುವ ಪ್ರಶ್ನೆಯ ಹಿಂದೆ; ಕುವೆಂಪು ಆಧುನಿಕತಾವಾದ ಪ್ರದಾನ ಮಾಡಿದ-ಎಲ್ಲವನ್ನೂ ವಿಂಗಡಿಸಿ ನೋಡುವ-ವಿಶ್ಲೇಷಣಾತ್ಮಕ ಕ್ರಮವನ್ನು ಮಿತಿಗಳನ್ನರಿತು ಪೂರ್ಣದೃಷ್ಟಿಯ ಸಾಕ್ಷಿಪ್ರಜ್ಞೆಯಲ್ಲಿ ನೋಡುವ ಸಂಶ್ಲೇಷಣಾತ್ಮಕ ಕ್ರಮವನ್ನು ಸಾಧಿಸಿಕೊಂಡಿದ್ದ ದ್ರಷ್ಟಾರತೆಯನ್ನು ಒಪ್ಪಿಕೊಳ್ಳದ ಆಧುನಿಕ ವಿಮರ್ಶಾಕ್ರಮದ (ಅಪ್ರಜ್ಞಾಪೂರ್ವಕ ಜಾತಿ ರಾಜಕಾರಣದ) ತಾತ್ವಿಕ ಮಿತಿಗಳ ಸೂಚನೆಯೂ ಆಗಿದೆ.

ಕುವೆಂಪು ಕುರಿತ ಕನ್ನಡ ವಿಮರ್ಶೆಯ ದುರಂತವೆಂದರೆ, ಅವರನ್ನು ಯಾವ ತಾತ್ವಿಕತೆಯಲ್ಲಿ ಗ್ರಹಿಸಿದರೆ ಮಾತ್ರ ಅವರು ತಮ್ಮ ಪೂರ್ಣಾರ್ಥದಲ್ಲಿ ದಕ್ಕುತ್ತಾರೆ ಎಂಬುದನ್ನು ಕೊನೆಗೆ ಅವರ ಮಗನಾದ ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರೇ ವಿವರಿಸಿ ಹೇಳುವ ಮೂಲಕ ಕುವೆಂಪು ಸಂಪ್ರದಯದ ನಿಜ ವಾರಸುದಾರರೆನ್ನಿಸಿಕೊಳ್ಳಬೇಕಾದುದು! ತೇಜಸ್ವಿ, ಸಾಹಿತ್ಯ-ಸಂಸ್ಕೃತಿಗಳ ಆಳವಾದ ಮತ್ತು ಬಹುಶಾಸ್ತ್ರೀಯ ಅಧ್ಯಯನ ಮಾಡಿದ ಸ್ವಯಂಪ್ರತಿಭಾಶಾಲಿ ಮೀಮಾಂಸಕಾರೂ ಆಗಿದ್ದುದರಿಂದ ಯಾವುದೇ ಮುಜುಗರಗಳಿಲ್ಲದೆ, ಇಡೀ ಕನ್ನಡ ಸಾಹಿತ್ಯ-ಸಂಸ್ಕೃತಿಗಳ ಚರಿತ್ರೆಯ ಭಿತ್ತಿಯ ಹಿನ್ನೆಲೆಯಲ್ಲಿ ಕುವೆಂಪು ಅವರನ್ನು ಅರ್ಥಮಾಡಿಕೊಳ್ಳುವ ಬಗೆಯ ಬಗ್ಗೆ ಆಳವಾದ ಸೂಚನೆಗಳನ್ನು ನೀಡಿದ್ದಾರೆ:

"ಕನ್ನಡ ಸಾಹಿತ್ಯ ಎಂದರೆ, ಸಂಸ್ಕೃತಿ ಚರಿತ್ರೆ ಎಂದರೆ ಇನ್ನೇನೂ ಆಗಿರದೆ, ಇಡೀ ಶೂದ್ರ ಸಮುದಾಯದ ಮೂಕ ಅನುಭವಗಳು ನಿಧಾನವಾಗಿ ಪ್ರಜ್ಞಾಗಮ್ಯವಾಗುತ್ತ ಅಭಿವ್ಯಕ್ತಿಯನ್ನು ಸಾಧಿಸಿಕೊಳ್ಳುತ್ತ ಬಂದುದರಿಂದ ಚರಿತ್ರೆ ಎಂಬುದು."

"ಕುವೆಂಪು ಹಿಂದೂ ಧರ್ಮವನ್ನು, ಜಾತಿಪದ್ಧತಿಯನ್ನು, ಸಂಪ್ರದಾಯಗಳನ್ನು ತಿರಸ್ಕರಿಸುವ ಸಂದರ್ಭದಲ್ಲೇ ನಾವು ನೋಡಿದರೆ, ಅವರು ಪದಾರ್ಪಣ ಮಾಡಿದ ಕನ್ನಡ ಸಾಹಿತ್ಯದ ಪರಂಪರೆಯೊಂದು ನಮಗೆ ಹೊಳೆಯುತ್ತದೆ. ಅದೇ ಆರ್ಯ ಮತ್ತು ವೈದಿಕ ಸಂಸ್ಕೃತಿಯೊಂದರ ವಿರುದ್ಧ ಪ್ರತಿಭಟನೆ. ಪಂಪ, ರನ್ನ, ವೃತ್ತವಿಲಾಸ, ವಚನಕಾರರು, ಹರಿಹರ, ರಾಘವಾಂಕ-ಇವರೆಲ್ಲರ ಹಿಂದೆ ಸಾಹಿತ್ಯ ರಚನೆಗೆ ಕೆಲಸ ಮಾಡಿದ ವರ್ಣಸಂಘರ್ಷವೇ ಮತ್ತೆ ಚೈತನ್ಯಶಕ್ತಿಯಾಗಿ ಸಮಕಾಲೀನ ಸಾಹಿತ್ಯದಲ್ಲೂ ಕೆಲಸ ಮಾಡಿರುವುದನ್ನು ಕಾಣಬಹುದು.

ಕನ್ನಡ ಸಾಹಿತ್ಯ ಚರಿತ್ರೆ ಎಂದರೆ ಅದೊಂದು ಮರುಕಳಿಸುವ ಬಂಡಾಯದ ಚರಿತ್ರೆಯೇ ಆಗಿದೆ."

ಆದರೆ ಇಂದು ಇಂಗ್ಲಿಷನ್ನು ಒಂದು ಸೆಕ್ಯುಲರ್ ಭಾಷೆ, ನ್ಯೂಟ್ರಲ್ ಭಾಷೆ, ನಮ್ಮ ಕುಲದೇವತೆ, ಸಿಂಹಿಣಿಯ ಹಾಲು ಎಂದೆಲ್ಲ ಕರೆಯುತ್ತಾ ಮಾರುಕಟ್ಟೆಯಲ್ಲಿ ಅದರ ಪ್ಯಾಕೆಟ್‌ಗಳಿಗೆ ಮುಗಿಬೀಳುತ್ತಿರುವ; ದಲಿತರೂ ಸೇರಿದಂತೆ ನಮ್ಮ ಶೂದ್ರ ಸಮುದಾಯದ ಒಂದು ವರ್ಗ ಕನ್ನಡವನ್ನು ಹಿಂದುಳಿದಿರುವಿಕೆಯ ಭಾಷೆ ಎಂದು ಗುರುತಿಸುವ ಮೂಲಕ ಕನ್ನಡದ ವಿರುದ್ಧವೇ ಹೂಡಿರುವ ಬಂಡಾಯದ ಈ ಮರುಕಳಿಕೆಯನ್ನು ಹೇಗೆ ಅರ್ಥ ಮಾಡಿಕೊಳ್ಳುವುದು?

ಸ್ಥಳೀಯ ದೇವತಾ ಶಕ್ತಿಯನ್ನು ಜಾಗೃತಗೊಳಿಸಲು ಮತ್ತೊಬ್ಬ ಗಡ್ಡದಯ್ಯ ಬರಬೇಕೇನೋ!

(ಮೈಸೂರು ವಿಶ್ವವಿದ್ಯಾಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಪ್ರಕಟಿಸಿರುವ 'ಕುವೆಂಪು ಕರ್ನಾಟಕ'ಕ್ಕಾಗಿ ಬರೆದದ್ದು–೨೦೦೭)

ಇದೇ ಲೇಖಕರ ಇತರ ಕೃತಿಗಳು

ಗಮನ (ಸಾಹಿತ್ಯ ವಿಮರ್ಶೆ)

ಅನೇಕ (ಸಾಹಿತ್ಯ ವಿಮರ್ಶೆ)

ಈ ಭೂಮಿಯಿಂದ ಆ ಆಕಾಶದವರೆಗೆ (ಸಾಹಿತ್ಯ ವಿಮರ್ಶೆ)

ಕುವೆಂಪು ಸಾಹಿತ್ಯ ದರ್ಶನ (ಕುವೆಂಪು ಸಾಹಿತ್ಯ ವಿಮರ್ಶೆ)

ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ (ವ್ಯಕ್ತಿ ಹಾಗೂ ಸಾಹಿತ್ಯ ಪರಿಚಯ)

ಒಂದನೇ ತರಗತಿಯಿಂದ ಇಂಗ್ಲಿಷ್: ಏಕೆ ಬೇಡ (ಭಾಷಾ ನೀತಿ ಜಿಜ್ಞಾಸೆ)

ಲೋಹಿಯಾ ಸಮಾಜವಾದ ದರ್ಶನ (ಸಮಾಜವಾದ ಪರಿಚಯ, ವಿಶ್ಲೇಷಣೆ)

ಜಯಪ್ರಕಾಶ್ ನಾರಾಯಣ: ಒಂದು ಅಪೂರ್ಣ ಕ್ರಾಂತಿಯ ಕಥೆ
(ಜೆ.ಪಿ. ಬದುಕು ಮತ್ತು ಹೋರಾಟ)

ಮರಳಿ ಬರಲಿದೆ ಸಮಾಜವಾದ (ಸಮಕಾಲೀನ ಸಮಾಜವಾದಿ ಚಿಂತನೆಗಳು)

ಬೇರು ಬಿಳಲು (ಸಮಾಜವಾದಿ ಸಂಕಥನಗಳು–1)

ಇದು ಭಾರತ! ಇದು ಭಾರತ!! (ಸಮಾಜವಾದಿ ಸಂಕಥನಗಳು–2)

ವಸಿಷ್ಠರು ಮತ್ತು ವಾಲ್ಮೀಕಿಯರು (ಸಮಾಜವಾದಿ ಸಂಕಥನಗಳು–3)

ರೈತಭಾರತ:ಅವಸಾನದ ಅಂಚಿನಲ್ಲಿ (ರೈತರ ಆತ್ಮಹತ್ಯೆ ಕುರಿತ ಕಿರು ಅಧ್ಯಯನ)

ಸಂಪಾದನೆ

ಕುವೆಂಪು: ಒಂದು ಪುನರನ್ವೇಷಣೆ (ಶತಮಾನೋತ್ಸವ ಸಂಪುಟ)

ಆ ಗಣರಾಜ್ಯ–ಈ ಕರ್ನಾಟಕ (ಸುವರ್ಣ ಕರ್ನಾಟಕದ ಸುವರ್ಣ ಪುಟಗಳು)

ಒಲವು (ಅಂತರ್ಜಾತಿ ವಿವಾಹಿತರ ಮೊದಲ ಸಮಾವೇಶದ ಸ್ಮರಣ ಸಂಪುಟ)

ಮಾನವ (ಸಮಾಜವಾದಿ ಚಿಂತನೆಯ ಮಾಸಿಕ)

ಸಹ ಸಂಪಾದನೆ

ಕಾಡಿನ ಹುಡುಗ ಕೃಷ್ಣ (ಶ್ರೀಕೃಷ್ಣ ಆಲನಹಳ್ಳಿ ನೆನಪಿನ ಸಂಪುಟ)

ಮಾಸ್ತಿ ಸಾಹಿತ್ಯ: ಸಮಗ್ರ ದರ್ಶನ (ಶತಮಾನೋತ್ಸವ ಸಂಪುಟ)

ಹಣತೆ (ಡಾ. ಜಿ. ಎಸ್ ಶಿವರುದ್ರಪ್ಪ ಅಭಿನಂದನ ಗ್ರಂಥ)

ಸಾಹಿತ್ಯ ಸಂವಾದ (ಸಾಹಿತ್ಯ ದ್ವೈಮಾಸಿಕ)

ಅನುವಾದ

ಜೆಪಿ ಸೆರೆಮನೆ ದಿನಚರಿ (ಅನುವಾದ)

ವಿಸ್ಮಯ ಪ್ರಕಾಶನ

'ಮೌನ' ೩೬೬, ನವಿಲು ರಸ್ತೆ, ಕುವೆಂಪುನಗರ, ಮೈಸೂರು–೨೩,
ಸಂಪರ್ಕ: ೯೦೦೮೭೮೪೮೦೬

ನಮ್ಮ ಪ್ರಕಟಣೆಗಳು

೦೧. ಮಹಿಳಾ ಚಳವಳಿ ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆ	ಡಾ. ಹಾಲತಿ ಸೋಮಶೇಖರ್	೨೫೦–೦೦
೦೨. ಕುರುಹು ತೋರಿದ ಗುರು	ಪ್ರೊ. ಎಚ್.ಎಸ್. ಉಮೇಶ	೧೨೫–೦೦
೦೩. ಸ್ತ್ರೀಪರ	ಡಾ. ಹಾಲತಿ ಸೋಮಶೇಖರ್	೧೫೦–೦೦
೦೪. ಮಾನವ್ಯದೊಡನಾಟ	ಡಾ. ಎಚ್.ಎನ್. ಮಂಜುರಾಜ್	೦೮೦–೦೦
೦೫. ಓದುವ ಸುಖ	ಡಾ. ಹಾಲತಿ ಸೋಮಶೇಖರ್	೧೨೦–೦೦
೦೬. ಬಯಲ ಬೆಳೆ	ಪ್ರೊ. ಶಿವರಾಮು ಕಾಡನಕುಪ್ಪೆ	೧೫೦–೦೦
೦೭. ಶೈಕ್ಷಣಿಕ ಮನೋವಿಜ್ಞಾನ	ಪ್ರೊ. ಎಚ್.ಎಸ್. ಉಮೇಶ	೨೫೦–೦೦
೦೮. ಅಕ್ಷಯ ದ್ರವ್ಯ	ಡಾ.ಸಿ. ನಾಗಣ್ಣ	೧೦೦–೦೦
೦೯. ನೀನಾಗು	ಹೊರೆಯಾಲ ದೊರೆಸ್ವಾಮಿ	೦೯೦–೦೦
೧೦. ಮೈಸೂರು ಅರಮನೆಯಲ್ಲಿ ಧ್ವನಿ ಮತ್ತು ಬೆಳಕು	ಲಿಂಗದೇವರು ಹಳೆಮನೆ	೦೭೫–೦೦
೧೧. ಬಾಣಲೆಯಿಂದ ಬೆಂಕಿಗೆ	ಎ.ಪಿ. ಚಂದ್ರಶೇಖರ	೦೭೫–೦೦
೧೨. ರಂಗವಲ್ಲಿ	ಮಂಡ್ಯ ರಮೇಶ್	೦೭೫–೦೦
೧೩. ಕನ್ನಡಿ	ಪ್ರೇಮಶೇಖರ	೧೦೦–೦೦
೧೪. ಹಳೆಮನೆಯವರ ಕಿರು ನಾಟಕಗಳು	ಲಿಂಗದೇವರು ಹಳೆಮನೆ	೦೬೫–೦೦
೧೫. ಕಂಡಷ್ಟೇ ಸತ್ಯವಲ್ಲ!	ಪ್ರೊ. ಜಿ. ಚಂದ್ರಶೇಖರ್	೧೦೦–೦೦
೧೬. ಪ್ರೀತಿ ಮತ್ತು ಪ್ರೀತಿ ಮಾತ್ರ	ಜ್ಯೋತಿ ಗುರುಪ್ರಸಾದ್	೧೨೦–೦೦
೧೭. ವಿಕಾಸವಾದದ ಪ್ರವಾದಿ ಚಾರ್ಲ್ಸ್ ಡಾರ್ವಿನ್	ಡಾ. ಎಸ್.ಎನ್. ಹೆಗಡೆ	೧೧೦–೦೦
೧೮. ಪ್ರಸಾದ ಚಿಂತನ	ಡಾ. ತಿಪ್ಪೇಸ್ವಾಮಿ	೦೫೦–೦೦
೧೯. ಹಲಗಲಿಯ ಬೇಡರು	ಕ್ಯಾತನಹಳ್ಳಿ ರಾಮಣ್ಣ	೦೫೦–೦೦
೨೦. ಧೀರ ಟೀಪುವಿನ ಲಾವಣಿಗಳು	ಲಿಂಗದೇವರು ಹಳೆಮನೆ	೦೫೦–೦೦
೨೧. ಸಾವಿರದ ಸೂಕ್ತಿಗಳು	ಪ್ರೊ.ಎಚ್.ಎಸ್. ಉಮೇಶ	೧೦೦–೦೦
೨೨. ವಿಜ್ಞಾನ ಬೋಧನಾ ವಿಧಾನ	ಪ್ರೊ.ಎಚ್.ಎಸ್. ಮಲ್ಲಿಕಾರ್ಜುನ ಶಾಸ್ತ್ರಿ	೨೫೦–೦೦
೨೩. ಸೋಲುವ ಭಯವೇಕೆ?	ಅಣ್ಣೇಗೌಡ	೦೭೫–೦೦
೨೪. ರಾಣಿ ನಾಗಫಣಿ	ಡಾ. ತಿಪ್ಪೇಸ್ವಾಮಿ	೦೭೫–೦೦
೨೫. ಕನ್ನಡ ಕರ್ನಾಟಕ ಸಂಕಥನಗಳು	ಡಿ.ಎಸ್. ನಾಗಭೂಷಣ	೧೬೦–೦೦



ಕನ್ನಡ-ಕರ್ನಾಟಕ ಕುರಿತ ಈ ಸಂಕಥನಗಳು ಪ್ರಸ್ತುತ ಕರ್ನಾಟಕ ಎದುರಿಸುತ್ತಿರುವ ಕರಾಳ ಸತ್ಯಗಳನ್ನು ತಾತ್ವಿಕ ಹಿನ್ನೆಲೆಯೊಂದಿಗೆ ಸಮರ್ಥ ವಾಗಿ ನಿರೂಪಿಸುತ್ತವೆ. ಜಾಗತೀಕರಣದ ಅಬ್ಬರದಲ್ಲಿ ಕನ್ನಡದ ಅಸ್ಮಿತೆ ಕ್ರಮೇಣ ಮಾಯವಾಗುತ್ತಿರುವ ರೀತಿ ಗಾಬರಿ ಹುಟ್ಟಿಸುವಂತಿದೆ. ಆದರೆ ಇದರ ಬಗೆಗೆ ಕನ್ನಡ ವಿದ್ವತ್ ಲೋಕದ ಕೆಲವರು ಪ್ರತಿಕ್ರಿಯಿಸುತ್ತಿರುವ ತಣ್ಣನೆಯ ರೀತಿ ನೀತಿಗಳು ಸಹಜವಾಗಿಯೇ ಲೇಖಕರ ತಳಮಳಕ್ಕೆ ಕಾರಣವಾಗಿದೆ. ಈ ಹಿನ್ನೆಲೆಯಲ್ಲಿ ಸಾಂದರ್ಭಿಕವಾಗಿ, ಹಲವು ನೆಲೆಗಳಲ್ಲಿ ಪ್ರತಿಕ್ರಿಯಿಸಿದ/ಬರೆದ ಲೇಖನಗಳ ಸಂಕಲನವಿದು. ಗಾಂಧಿ ಹಾಗೂ ಲೋಹಿಯಾ ತತ್ವಗಳ ಆಳವಾದ ಅಧ್ಯಯನ ಮಾಡಿರುವ ಲೇಖಕರು, ಭಾಷೆ-ಸಂಸ್ಕೃತಿಗಳ ಬಗೆಗೆ ಇಲ್ಲಿ ತಳೆದಿರುವ ನಿಲುವುಗಳು ಆರೋಗ್ಯಕರವೂ, ಸಮಯೋಚಿತವೂ ಆಗಿವೆ.

ಭಾಷಾವಾರು ಪ್ರಾಂತ್ಯಗಳ ರಚನೆಯ ಹಿನ್ನೆಲೆಯಲ್ಲಿ ಅಡಗಿದ್ದ ಅಭ್ಯುದಯದ ಆಶಯಗಳನ್ನು ಮರೆತ ಇಂದಿನ ಜೀವನ ದೃಷ್ಟಿಯಿಂದ ನಮ್ಮ ಬದುಕು ಸಾಂಸ್ಕೃತಿಕ ಬೇರುಗಳನ್ನು ಕಳೆದುಕೊಳ್ಳುತ್ತಿರುವುದು ಎಲ್ಲರಿಗೂ ಆತಂಕ ಹುಟ್ಟಿಸುವ ವಿಷಯವೇ ಆಗಿದೆ. ಪ್ರಸ್ತುತ ಕರ್ನಾಟಕದ ರಾಜಕಾರಣದಲ್ಲಿ ಸಾಂಸ್ಕೃತಿಕ ಹೊಣೆಗಾರಿಕೆ ಶೂನ್ಯವಾಗಿ ಕರ್ನಾಟಕದ ವಿಕಾಸವೆಂಬುದೇ ದೊಡ್ಡ ವ್ಯಂಗ್ಯವಾಗುತ್ತಿದೆ.

ಈ ಹಿನ್ನೆಲೆಯಲ್ಲಿ ಕನ್ನಡ ಬದುಕನ್ನು ಕಟ್ಟಬೇಕಾದ ಪ್ರಸ್ತುತ ಕನ್ನಡ ಚಳುವಳಿಗೆ ಆಲೂರರ ಶಿಷ್ಟ ಮಾದರಿಯಾಗಲೀ, ಬಿ.ಎಂ.ಶ್ರೀ.ಯವರ ಇಂಗ್ಲಿಷ್-ಕನ್ನಡ ಸಮನ್ವಯ ಮಾದರಿಯಾಗಲೀ, ಕುವೆಂಪುರವರ ಭಾವನಾತ್ಮಕ ಮಾದರಿಯಾಗಲೀ ಆದರ್ಶವಾಗಲಾರದು. ಇಂದಿನ ಜಾಗತೀಕರಣದ ಸವಾಲುಗಳೆದುರು ಈ ಮಾದರಿಗಳು ನಿಲ್ಲಲಾರವು ಎಂಬ ತೀರ್ಮಾನಕ್ಕೆ ಬರುವ ಲೇಖಕರು, ಇವೆಲ್ಲಕ್ಕೆ ಪರ್ಯಾಯವಾಗಿ 'ಬಸವಣ್ಣನ ಮಾದರಿ'ಯನ್ನು ಸೂಚಿಸುತ್ತಾರೆ. ಈ ಮಾದರಿಯನ್ನು ಕಾರ್ಯಶೀಲಗೊಳಿಸುವಂತಹ ಪರಿಸರವನ್ನು ನಾವೆಲ್ಲರೂ ಸೇರಿ ನಿರ್ಮಾಣ ಮಾಡಬೇಕೆಂಬುದು ಡಿ.ಎಸ್. ನಾಗಭೂಷಣ ಅವರ ಆಶಯ. ಇದು ಆಶಯ ಮಾತ್ರವಲ್ಲ, ತುರ್ತಾಗಿ ಆಗಬೇಕಾದ ಕೆಲಸವೂ ಆಗಿದೆ.

–ಪ್ರೊ॥ ಬಿ.ಪಿ.ವೀರೇಂದ್ರ ಕುಮಾರ್

ವಿಸ್ಮಯ ಪ್ರಕಾಶನ
'ಮೌನ', ೩೬೬, ನವಿಲು ರಸ್ತೆ,
ಕುವೆಂಪುನಗರ, ಮೈಸೂರು-೨೩